ಕೆ.ವಿ.ಎನ್. ಈವರೆಗಿನ ಬರೆಹಗಳು

ಕಂತೆ ಹತ್ತು

ತೊಂಡು ಮೇವು



ಡಾ. ಕೆ.ವಿ. ನಾರಾಯಣ

ಹುಟ್ಟಿದ್ದು 1948ರಲ್ಲಿ. ಮೈಸೂರು ಜಿಲ್ಲೆ, ಪಿರಿಯಾಪಟ್ಟಣ ತಾಲ್ಲೂಕು ಕಂಪಲಾಪುರದಲ್ಲಿ. ಅಮ್ಮ-ಅಪ್ಪನ ಕೆಂಚಮ್ಮ ಮತ್ತು ವೀರಣ್ಣ. ಮೊದಲ ಹಂತದ ಓದು ಹುಟ್ಟೂರು ಮತ್ತು ತಾಲೂಕು ಕೇಂದ್ರ ಪಿರಿಯಾಪಟ್ಟಣದಲ್ಲಿ. ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ವಿಜ್ಞಾನವನ್ನು ತೆಗೆದುಕೊಂಡು ಪಿ.ಯು.ಸಿ. ಓದಿದರು. ಇಂಜಿನಿಯರಿಂಗ್ ಮಾಡಲು ಅವಕಾಶವಿದ್ದರೂ ಇಂಜಿನಿಯರ್ ಆಗಕೂಡದೆಂದು ತೀರ್ಮಾನಿಸಿದ ಕೆ.ವಿ.ಎನ್ ಮತ್ತೆ ಮೈಸೂರಿನ ಯುವರಾಜಾಸ್ ಕಾಲೇಜಿನಲ್ಲಿ ವಿಜ್ಞಾನದ ಅಭ್ಯಾಸವನ್ನು ಮುಗಿಸಿದರು. ಆನಂತರದಲ್ಲಿ ಬಿಎಡ್ ಮುಗಿಸಿ ಆರಂಭಿಸಿದ್ದು ಹೈಸ್ಕೂಲಿನಲ್ಲಿ ಅಧ್ಯಾಪನ. ಮುಂದಿನ ಓದಿಗಾಗಿ ಮತ್ತೆ ಬೆಂಗಳೂರಿನತ್ತ ಪಯಣ. ಆ ಹೊತ್ತಿಗೇನೆ ಸಾಹಿತ್ಯದ ಓದಿಗೂ ಬಿದ್ದು, ಬರವಣಿಗೆಯಲ್ಲೂ ತೊಡಗಿಸಿಕೊಂಡಿದ್ದ ಕೆ.ವಿ.ಎನ್ ಮುಂದಿನ ಓದಿಗೆ ಆರಿಸಿಕೊಂಡಿದ್ದು ಸಾಹಿತ್ಯವನ್ನು. ಬೆಂಗಳೂರು ವಿಶ್ವವಿದ್ಯಾಲಯದ ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡ ಎಂ.ಎ. ತಮ್ಮ ಜೊತೆ ಓದುಗರಾಗಿದ್ದ, ಕನ್ನಡದಲ್ಲಿ ಮಹತ್ವದ ಸ್ತ್ರೀವಾದಿ ಚಿಂತಕಿಯಾಗಿರುವ ಶ್ರೀಮತಿಯವರೊಡನೆ ಒಲುಮೆ ಸಂಭವಿಸಿದ್ದು ಇಲ್ಲೆ. ಗೆಳೆಯರ ಸಮ್ಮುಖದಲ್ಲಿ ಮದುವೆ. ಅಧ್ಯಾಪನ ಕೆಲಸ ಆರಂಭಿಸಿದ್ದು ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ. ಬೆಂಗಳೂರು ವಿಶ್ವವಿದ್ಯಾಲಯದ ಜಿ.ಎಸ್.ಎಸ್ ನೇತೃತ್ತ್ವದಲ್ಲಿದ್ದ ಕನ್ನಡ ಅಧ್ಯಯನ ಕೇಂದ್ರಕ್ಕೆ ಆಗಮನ. ಜಿ.ಎಸ್.ಎಸ್ ಮಾರ್ಗದರ್ಶನದಲ್ಲಿ ಆನಂದವರ್ಧನನ 'ಧ್ವನ್ಯಾಲೋಕ'ವನ್ನು ಅಧ್ಯಯನ ಮಾಡಿ ಪಿಎಚ್‌ಡಿ ಪದವಿ ಪಡೆದರು. ಬೋಧಿಸಿದ್ದು ಸಾಹಿತ್ಯ, ಸಾಹಿತ್ಯ ಮೀಮಾಂಸೆ ಮತ್ತು ಭಾಷಾವಿಜ್ಞಾನವನ್ನು. ವಿಜ್ಞಾನದ ತಾತ್ವಿಕತೆಯನ್ನಿರಿಸಿಕೊಂಡೇ ಕೆ.ವಿ.ಎನ್ ಬೆಳೆದದ್ದು ಸಾಹಿತ್ಯ ವಿಮರ್ಶಕರಾಗಿ, ಭಾಷಾವಿಜ್ಞಾನಿಯಾಗಿ, ಕನ್ನಡ ಸಂಸ್ಕೃತಿ ಚಿಂತಕರಾಗಿ.

ತಿಳುವಳಿಕೆ ಮತ್ತು ನಡುವಳಿಕೆ ಎರಡರಲ್ಲೂ ಸರಳವಾಗಿರುವ ಕೆ.ವಿ.ಎನ್ 1993ರಲ್ಲಿ, ಕನ್ನಡಿಗರ ಕನಸಿನ ಸಂಸ್ಥೆಯಾಗಿದ್ದ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಬಂದ ಶುರುವಿನಲ್ಲೇ ರಿಜಿಸ್ಟ್ರಾರ್ ಆಗಿ ಅಲ್ಲಿನ ಆಡಳಿತ ನಿರ್ವಹಣೆಯೊಳಗೂ ಪ್ರವೇಶ ಪಡೆದರು. ಅಲ್ಲಿಂದ ನಿವೃತ್ತಿಯಾಗಿ ಹೊರಗೆ ಬರುವವರೆಗೆ ಹಲವುಜನ ಕುಲಪತಿಗಳ ಅವಧಿಯಲ್ಲಿ ಆಡಳಿತ ಮತ್ತು ಅಧ್ಯಯನಗಳ ಮೂಲಕ ಕನ್ನಡ ವಿಶ್ವವಿದ್ಯಾಲಯವನ್ನು ಕಟ್ಟುವಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸಿದರು. ಬೆಂಗಳೂರು ವಿಶ್ವವಿದ್ಯಾಲಯದ ತಮ್ಮ ಅಧ್ಯಾಪನ ಸಂದರ್ಭದಲ್ಲೇ ಶುರುಮಾಡಿದ್ದ ಕನ್ನಡಭಾಷೆ ಮತ್ತು ಕನ್ನಡಸಂಸ್ಕೃತಿಯ ಚಿಂತನೆಗಳನ್ನು ಕನ್ನಡಸಮಾಜದ ಬೇರುಗಳ ಮೂಲಕ ಅರಸುವ ಕೆಲಸವನ್ನು ಮತ್ತಷ್ಟು ಸ್ಪಷ್ಟವಾಗಿ ಮಂಡಿಸುತ್ತಾ ಬಂದರು. ಈಗಲೂ, ಭಾಷೆ, ಸಾಹಿತ್ಯ, ಶಿಕ್ಷಣ ಮತ್ತು ವಿಜ್ಞಾನ ಮೊದಲಾಗಿ ಕನ್ನಡಸಮಾಜಕ್ಕೆ ಸಂಬಂಧಿಸಿದ ಯಾವುದರಲ್ಲೂ ಜರೂರಾಗಿ ನಡೆಯಬೇಕಿರುವ ಕೆಲಸ ಇದೇ ಎಂದು ತೊಡಗಿಸಿಕೊಂಡು ಈ ಕಾಲದ ಕನ್ನಡದ ಮಹತ್ವದ ಚಿಂತಕರಾಗಿದ್ದಾರೆ.

ಪ್ರಗತಿ ಪುಸ್ತಕ ಮಾಲೆ–184

ಕೆ.ವಿ.ಎನ್ ಈವರೆಗಿನ ಬರೆಹಗಳು

ತೊಂಡುಮೇವು

ಕಂತೆ ಹತ್ತು

ಕೆ.ವಿ. ನಾರಾಯಣ

ಪ್ರಗತಿ ಗ್ರಾಫಿಕ್ಸ್ ಬೆಂಗಳೂರು

Tondumevu Kante 10 by **Dr. K.V. Narayana** 329, `Gouri', Duo Marvel Colony, Ananthapura Road, Yelahanka, Bangalore-560064

e-mail:narayana48@gmail.com

Publisher: **M. Byregowda** for **Pragati Graphics**, Bangalore, 119, 3rd cross, 8th main, Hampinagara, Bengaluru-560104, Ph: 080-2340 9512.

email: byregowda.m1@gmail.com

ISBN :	978-93-81441-96-1
pages :	24 + 326
First Impression :	2017
paper :	NS Maplitho 70 GSM
price :	**Rs.300/-**
size :	1/8 Demy

ಪುಟಗಳು :	24 + 326
ಮೊದಲ ಆವೃತ್ತಿ:	2017
ಕಾಗದ :	ಎನ್.ಎಸ್. ಮ್ಯಾಪ್ಲಿಥೊ 70 ಜಿಎಸ್ಎಂ
ಬೆಲೆ :	ರೂ **300/-**
© :	**ಡಾ. ಕೆ.ವಿ. ನಾರಾಯಣ**
ಸೈಜ್ :	**1/8 ಡೆಮಿ**
ಪ್ರತಿಗಳು :	**1000**
ರಕ್ಷಾಪುಟ ವಿನ್ಯಾಸ:	**ಅಜಿತ್ ಕೌಂಡಿನ್ಯ ಶಿಡ್ಲಘಟ್ಟ**
ಪ್ರಕಾಶಕರು :	**ಎಂ. ಬೈರೇಗೌಡ, ಪ್ರಗತಿ ಗ್ರಾಫಿಕ್ಸ್** ನಂ. 119, 3ನೇ ತಿರುವು, 8ನೇ ಮುಖ್ಯ ರಸ್ತೆ, ಹಂಪಿನಗರ ಬೆಂಗಳೂರು–104

ಅರ್ಪಣೆ

ಹಲವು ಹತ್ತು ಮನಸ್ಸುಗಳೊಡನೆ
ಮಾತುಕತೆಗೆ ಅನುವು ಮಾಡಿಕೊಟ್ಟ
ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ

ಮನ್ನಿಸಲು ಕೋರುತ್ತ ಈ ಹಿನ್ನೋಟದ ಮಾತುಗಳು

ಬರೆಯುವುದೇಕೇ? ಇನ್ನೊಬ್ಬರೊಡನೆ ಮಾತನಾಡುವ ಒಂದು ದಾರಿಯಾಗಿ ಬರಹವನ್ನು ಹುಡುಕಿಕೊಳ್ಳುತ್ತೇವೆಂದು ತೋರುತ್ತದೆ. ಆದರೆ ಅದು ನಮ್ಮನ್ನೇ ನಮಗೆ ತೋರಿಸುವ ದಾರಿಯೂ ಆಗಿರುತ್ತದೆ ಎಂಬುದು ಗೊತ್ತಾಗಬೇಕು. ದೀಪವೆಂದರೆ ಬೆಳಕೂ ಹೌದು ದಾರಿಯೂ ಹೌದು ಅಲ್ಲವೇ? ಹೀಗೆ ಬರೆದದ್ದೆಲ್ಲಾ ಬರೆದವರ ಅಪರಾಧ ಖಾತೆಗಳಲ್ಲಿ ಜಮೆಯಾಗತೊಡಗುತ್ತದೆ ಎನ್ನುವುದು ನನಗೆ ಗೊತ್ತಾದದ್ದು ತೀರಾ ಈಚೆಗೆ. ಬರೆದದ್ದನ್ನೆಲ್ಲಾ ಒಂದು ಕಡೆ ಕೂಡಿಸಿ ಅಚ್ಚು ಮಾಡುವ ಇರಾದೆಯನ್ನು ನನ್ನೆದುರಿಗಿಟ್ಟು ನನ್ನ ಒಪ್ಪಿಗೆಯನ್ನು ಗೆಳೆಯರು ಪಡೆದುಕೊಂಡಮೇಲೆ ಈ ದಿಟ ನನಗೆ ತಿಳಿಯಿತು. ಬರೆದಾದ ಮೇಲೆ ಬರಹದ ಮೇಲೆ ನನ್ನ ಹಕ್ಕುಗಳು ಇಲ್ಲ ಎಂದು ತಿಳಿದ ನನಗೆ ಈ ಬರಹಗಳನ್ನು ಒಗ್ಗೂಡಿಸಿ ಅಚ್ಚುಮಾಡಿಸುವ ಕೆಲಸಕ್ಕೆ ಅಡ್ಡಿತರಲು ಯಾವ ಹಕ್ಕುಗಳೂ ಇರಲಿಲ್ಲ. ಆದರೆ ಒಂದೊಂದಾಗಿ ಹಳೆಯ ಬರಹಗಳನ್ನು ಒಗ್ಗೂಡಿಸುತ್ತಿರುವಾಗ ಅನಿಸಿದ್ದೇ ಬೇರೆ.

ಬರೆಯುವುದು ಒಂದು ಅಪರಾಧವಿರಬೇಕು. ಬರೆದು ಮೊದಲು ಅಚ್ಚು ಮಾಡಿಸಿದ ಮೇಲೆ ಆ ಅಪರಾಧಕ್ಕೆ ಬಿ ರಿಪೋರ್ಟ್ ಸಿಕ್ಕಿಬಿಟ್ಟಿರುತ್ತದೆ. ಎಷ್ಟೋ ವರುಷಗಳಾದ ಮೇಲೆ ಅದೇ ಬರಹವನ್ನು ಮರಳಿ ಅಚ್ಚು ಮಾಡಲು ನೋಡಿದರೆ ಯಾರೋ ಹಳೆಯ ಕೇಸಿಗೆ ನೀಡಿದ್ದ ಬಿ ರಿಪೋರ್ಟ್‌ನ್ನು ಹಿಂದಕ್ಕೆ ಪಡೆದು ಕೇಸನ್ನು ಮರಳಿ ತೆರೆದು ಕೂರಿಸಿದಂತೆ ತೋರುತ್ತದೆ. ನನಗಂತೂ ಹಾಗೇ ಅನ್ನಿಸಿದೆ. ಆದರೂ ಇದೊಂದು ತಪ್ಪೊಪ್ಪಿಗೆಯ ಗಳಿಗೆ. ಬರೆದು ಏನು ಮಾಡಿದ್ದೇನೋ ಗೊತ್ತಿಲ್ಲ. ಹೀಗೆ ಬರೆಯುವುದು ಅಗತ್ಯವಾಗಿತ್ತೇ? ಅದೂ ಗೊತ್ತಿಲ್ಲ. ಬರೆಯುವುದು ಕಷ್ಟವಲ್ಲ; ಬರೆಯದಿರುವುದೇ ಕಷ್ಟ ಎಂಬ ಮಾತನ್ನು ನಂಬಿ ಈ ಹಾದಿ ಹಿಡಿದಿದ್ದರೂ ಅಚ್ಚರಿಯಿಲ್ಲ.

ಇದೆಲ್ಲ ಹೇಗೆ ಮೊದಲಾಯಿತು? ಆಗ ಬರೆಯುವುದು ಒಂದು ಹೊಸ ಹೊಣೆ ಎಂಬ ನಂಬಿಕೆ ಗಟ್ಟಿಯಾಗಿತ್ತು. ಅದನ್ನು ಹೊರುವವರಿಗೆ ಹೆಚ್ಚಿನ ಸಿದ್ಧತೆ ಬೇಕೆಂದು ನಂಬಿದ್ದೆವು. ಹಾಗೆಯೇ ಸುಮ್ಮನೆ ಬೇಕಾದ್ದಕ್ಕಿಂತ ಹೆಚ್ಚನ್ನು ಬರೆಯುವ ಬಗೆಯನ್ನೂ ನಗೆಗೀಡು ಮಾಡುತ್ತಿದ್ದೆವು. ನನ್ನ ಎಷ್ಟೋ ಒಡನಾಡಿಗಳು ಇದಕ್ಕಿಂತ ಹೆಚ್ಚು ಬರೆಯಬಹುದಾಗಿದ್ದರೂ ಹಾಗೆ ಬರೆಯದೇ ಈಗಲೂ ನನ್ನಂತಹವರನ್ನು ನೋಡಿ ನಗುತ್ತಿದ್ದಾರೆ. ಇದು ನನಗೂ ಗೊತ್ತಿದೆ.

ಮೊದಮೊದಲು ಮಾತಿನ ಮುಂದುವರಿಕೆಯಾಗಿ ಈ ಬರಹಗಳು ಮೈತಳೆದವೆಂದು ತೋರುತ್ತದೆ. ಮಾತಿನ ಹರಹನ್ನು ಕಡಿಮೆ ಮಾಡಿಕೊಂಡು, ನುಡಿದದ್ದಕ್ಕೆ ಹೊಣೆಗಾರರಾಗುವ ಬಯಕೆಯಿಂದಾಗಿ ಈ ಬರಹಗಳು ಹುಟ್ಟಿಕೊಂಡವು. ಅಂದಂದಿನ ದಂದುಗಕ್ಕೆ ಹೆಣೆದ, ಹೊಸೆದ ಬರಹಗಳೆಂದು ತೋರಿದರೂ ಎಲ್ಲರೊಡನೆ ಆಡುತ್ತಿದ್ದ ಮಾತುಗಳ ಜಾಲದಲ್ಲಿ ಇದ್ದ ನಂಟು ಈ ಬರಹಗಳಲ್ಲೂ ಸೇರಿಕೊಂಡಿದೆ. ಇದು ಸ್ಪಷ್ಟತೆಯೂ ಆಗಿರಬಹುದು; ಕೆಲವೊಮ್ಮೆ ಗೊಂದಲವೂ ಆಗಿದ್ದಿರಬಹುದು. ಆದರೆ ಸುಳ್ಳು ಆಗಿಲಾರದು. ಸಾಹಿತ್ಯದ ಓದುಗರೂ ಮೇಸ್ಟ್ರೂ ಆಗಿದ್ದ ನನ್ನಂತಹವರಿಗೆ ಏಳು ಎಂಟನೆಯ ದಶಕಗಳು ಹೊಸ ಸವಾಲನ್ನು ಎಸೆದಿದ್ದವು. ಸರ್ವರ ಸಮ್ಮತಿಯ ಸಂತೆಯ ದಾರಿಯನ್ನು ಹಿಡಿಯಬಾರದೆಂಬ ಹಟವಿದ್ದರೂ ಆ ಸಮ್ಮತಿಯ ದಾರಿಗೆ ಇದ್ದ ಮನ್ನಣೆಯ ಸೆಳೆತದಿಂದ ತಪ್ಪಿಸಿಕೊಳ್ಳುವುದು ಕಡುಕಷ್ಟವಾಗಿತ್ತು. ಇದು ಎಲ್ಲದರಲ್ಲೂ ಸ್ವಂತಿಕೆ ಇರಬೇಕೆಂಬ ಅಹಂಕಾರದ ಮಾತಲ್ಲ. ಆದರೆ ನಮ್ಮ ಹುಡುಕಾಟದಿಂದ ಹೊಸ ದಾರಿ ಸಿಗಬೇಕು. ಕೊನೆಯ ಪಕ್ಷ ನಮ್ಮ ದಾರಿಯನ್ನು ನಾವೇ ಕಂಡುಕೊಂಡೆವೆಂಬ ಸಂತಸವಾದರೂ ಸಿಗಬೇಕಿತ್ತು. ಆವರೆಗೆ ಕೈಹಿಡಿದು ನಡೆಸುತ್ತಿದ್ದ ಮಾದರಿಗಳು ದಾರಿ ತಪ್ಪಿಸುತ್ತಿರಲಿಲ್ಲವಾದರೂ ಕರೆದುಕೊಂಡು ಹೋಗುತ್ತಿದ್ದ ಹಾದಿಯಲ್ಲಿ ನಮ್ಮತನಕ್ಕೆ ಎರವಾಗಬೇಕೆಂಬ ಅನಿಸಿಕೆ ಮಾತ್ರ ಗಟ್ಟಿಗೊಳ್ಳುತ್ತಿತ್ತು. ಈಗಲೂ ಅದು ಹುಚ್ಚಾಟವಾಗಿರಲಿಲ್ಲ ಎನ್ನುವ ನಂಬಿಕೆ ಇದೆ.

ನೆನಪಿದೆ. 1971ರಲ್ಲಿ ನಡೆದ ಹೊಸಗನ್ನಡ ಕಾವ್ಯದ ಎರಡು ಮಾರ್ಗಗಳು ಎಂಬ ವಿಷಯದ ವಿಚಾರ ಸಂಕಿರಣವೊಂದರಲ್ಲಿ ಬೇಂದ್ರೆ, ಶಂಕರ ಮೊಕಾಶಿ ಪುಣೇಕರ್ ಮತ್ತು ಲಂಕೇಶ್ ಅವರ ನಡುವೆ ನಡೆದ ಮಾತಿನ ಮಾರಾಮಾರಿಯನ್ನು ಕಂಡು, ಕೇಳಿ ನಾವೆಲ್ಲ ಹುಡುಗರು ದಿಕ್ಕುತಪ್ಪಿದಂತಾಗಿದ್ದ ಗಳಿಗೆ ಈಗಲೂ ನೆನಪಿದೆ. ದಿಕ್ಕುತಪ್ಪಿದಂತೆ ಅನಿಸಿದ್ದಕ್ಕೆ ಆ ಜಗಳ ಮತ್ತು ಅದರ ತಿರುಳು ಮಾತ್ರ ಕಾರಣವಾಗಿರಲಿಲ್ಲ. ಮೊದಲ ಬಾರಿಗೆ ನಾವು ಕಟ್ಟಿಕೊಂಡಿದ್ದ ಗೌರವದ ವಿಗ್ರಹಗಳು ಪುಡಿಪುಡಿಯಾಗುತ್ತಿದ್ದನ್ನು ಕಾಣುತ್ತಿದ್ದ ಅನುಭವವೂ ಕಾರಣವಾಗಿದ್ದಿರಬೇಕು. ಮಾತಿಗೆ ಇರುವ ಬಲವನ್ನು ನಂಬಿದ್ದವರು ಬೇಂದ್ರೆ. ವಾಕ್ ಸ್ವಾತಂತ್ರ್ಯದ ಹೆಚ್ಚಳವನ್ನು ಜವಾಹರ್ ಲಾಲ್ ನೆಹರೂ ಅವರಿಗೆ ತಾವು ಮನವರಿಕೆ ಮಾಡಿಕೊಟ್ಟದ್ದನ್ನು ಹೇಳುತ್ತಿದ್ದರು. ಆದರೆ ನಾಡಿನ ಚರಿತ್ರೆಯ ಆ ಹಂತವನ್ನು ಬಲ್ಲವರಿಗೆ ಅಂದಿನ ಪರಿಸ್ಥಿತಿಯ ಅರಿವಿತ್ತು. ಎಲ್ಲರಿಗೂ ಮಾತಾಡಲು ಅವಕಾಶವಿದ್ದರೂ ಆ ಮಾತನ್ನು ಕೇಳಿಸಿಕೊಳ್ಳುವವರೇ ಇಲ್ಲದಂತಾದರೆ ಆಗ ಮಾತಿಗೇನು ಬಲವೆಂಬುದು ಲಂಕೇಶರ ಪ್ರಶ್ನೆಯಾಗಿತ್ತು. ಇದೆಲ್ಲ ಮುಂದಿನ ನಾಲ್ಕೈದು ವರ್ಷಗಳಲ್ಲಿ ಹರಳುಗಟ್ಟುತ್ತ ನಾಡಿನಲ್ಲಿ ಅನುಶಾಸನ ಪರ್ವ ಮೊದಲಾದಾಗ ಲಂಕೇಶ್ ಹೇಳಿದ್ದರ ತಿರುಳು ಮನವರಿಕೆಯಾಗತೊಡಗಿತ್ತು. ಮಾತುಗಳನ್ನು ಗೋಡೆಯ ಎದುರು ಆಡಬೇಕಾಗಿ ಬಂದರೆ ಏನಾಗುವುದೆಂಬ ಅಂಜಿಕೆಯೇ ಬರಹಕ್ಕೆ ಕೋಡು ಮೂಡಿಸಿದ್ದಿರಲೂಬಹುದು. ಬರಹಕ್ಕೆ ಈಗ ಮತ್ತು ಇಲ್ಲಿ ಎಂಬ ಕಟ್ಟು ಇರುವುದಿಲ್ಲ. ಹಾಗಾಗಿ ಎಲ್ಲಿಯೋ ಯಾರೋ ಅದನ್ನು ಓದಬಹುದಾಗಿದೆ. ಹಾಗಾಗಿ ಬರಹಕ್ಕೆ ಬಲ ಉಳಿದೇ ತೀರುತ್ತದೆ ಎನ್ನುವ ಒತ್ತಾಸೆ ಆಗ ಬಲಗೊಂಡಿದ್ದಿರಬಹುದು. ಮುಂದಿನ ದಶಕಗಳಲ್ಲಿ ಅಕ್ಷರ

ಕಲಿತವರಲ್ಲಿ ಹಲವರು ಏಕೆ ಬರಹದ ಮೊರೆ ಹೊಕ್ಕರು ಎಂಬುದಕ್ಕೆ ಇಲ್ಲಿ ಸೂಚನೆಗಳು ಸಿಕ್ಕಿಯಾವು.

ಹೊಸ ದಾರಿಯನ್ನು, ಇಲ್ಲವೇ ದಾರಿಯನ್ನು ಹೊಸದಾಗಿ ಕಂಡುಕೊಳ್ಳುವ ಮಾತನ್ನು ಮೇಲೆ ಆಡಿದ್ದೇನೆ. ಸಾಹಿತ್ಯವನ್ನು ಅರಿಯಲು ನಮಗೆ ಒದಗಿಸಿಕೊಟ್ಟದ್ದ ಮಾದರಿಗಳು ನಮ್ಮ ಕೃತಿಗಳನ್ನು ಹೊರಗಿನಿಂದ ನೋಡಲು ಒತ್ತಾಯಿಸುತ್ತಿವೆ ಎಂಬ ಅನಿಸಿಕೆ ಮೂಡಿತ್ತು. ನಾವು ತೆರೆದುಕೊಂಡ ಹಾಗಾಗಿಯೇ ಬಳಸುತ್ತಿದ್ದ ಸಾಹಿತ್ಯತತ್ತ್ವ ಮತ್ತು ಪರಿಕರಗಳು ಕನ್ನಡದ ಪರಂಪರೆಯಿಂದ ಹುಟ್ಟಿಕೊಂಡಿರಲಿಲ್ಲ. ಇದಕ್ಕೆ ಚರಿತ್ರೆಯಲ್ಲಿ ಕಾರಣಗಳೇನೇ ಇರಲಿ. ಆದರೆ ಅದೇ ದಾರಿಯನ್ನು ಹಿಡಿದು ನಡೆಯಬೇಕೆಂಬ ಒತ್ತಾಯಕ್ಕೆ ಮಾತ್ರ ಕಾರಣಗಳಿರಲಿಲ್ಲ. ಅರಿಯುವುದು ಮತ್ತು ಬೆಲೆಕಟ್ಟುವುದು ಈ ಎರಡೂ ಕೆಲಸಗಳಲ್ಲಿ ಎರಡನೆಯದಕ್ಕೆ ಮನ್ನಣೆ ಹೆಚ್ಚಾದಾಗ ಕೃತಿಗಳಲ್ಲಿ, ಕೃತಿಕಾರರಲ್ಲಿ ಆಯ್ಕೆಗಳನ್ನು ಮಾಡಿಕೊಳ್ಳುವ ಹಾಗೂ ನಿರಾಕರಣೆ ಮಾಡುವ ನೆಲೆಗಳು ಬೇರೂರತೊಡಗುತ್ತವೆ. ನಮ್ಮ ಸಾಹಿತ್ಯ ಚರಿತ್ರೆಯೆಂಬ ಬರೆವಣಿಗೆಯಲ್ಲಿ ಇದೇ ಕೆಲಸವನ್ನು ಮಾಡಿದ್ದೇವೆ ತಾನೆ. ಇದರಿಂದ ಕೃತಿಗಳ ಲೋಕವನ್ನು ಒಳಹೊಗುವ ದಾರಿಗಳೇ ಮುಚ್ಚಿಹೋಗುತ್ತವೆ. ಹಾಗಿದ್ದರೆ ಬೆಲೆ ಕಟ್ಟುವುದಕ್ಕಿಂತ ಅರಿಯುವ ನೆಲೆಗೆ ಮನ್ನಣೆ ಸಿಗಬೇಕೆಂಬ ಇರಾದೆ ಮುಂಚೂಣಿಗೆ ಬಂತು. ಇದರಿಂದ ನಾನು ಬರೆದದ್ದನ್ನು ಓದಿದವರು ನನ್ನನ್ನು ಸತ್ಯಣಾಭ್ಯವಹಾರಿ ಎಂದು ಬೆರಳುಮಾಡಿ ತೋರಿಸತೊಡಗಿದರು. ಅಂದರೆ ಸಾಹಿತ್ಯಕ ಅಭಿರುಚಿ ಇಲ್ಲದ , ಏನೂ ಸಿಕ್ಕರೂ ಅದೆಲ್ಲವನ್ನೂ ಮೇಯುವವನು ಎಂದಾಯಿತು. ಈ ಬಿರುದಿನಿಂದ ನನಗೇನೂ ಬೇಸರವಾಗಿಲ್ಲ. ಆದರೆ ಹಲವು ಒತ್ತಡಗಳಿಗೆ ಒಳಗಾಗಿ ತನ್ನ ಚಹರೆಗಳಿಗೆ ಎರವಾಗಬೇಕಾಗಿ ಬಂದಿರುವ ಕನ್ನಡ ಬರೆವಣಿಗೆಯನ್ನು ನೋಡಲು ನಮಗೆ ಬೇರೆ ಯಾವುದಾದರೂ ದಾರಿಗಳಿದ್ದವೋ ಇಲ್ಲವೋ ನನಗೆ ತಿಳಿಯದು.

ನಮ್ಮ ಕೃತಿಗಳ ಒಡಲಿನಿಂದಲೇ ನಮಗೆ ಬೇಕಾದ ಅರಿಯುವ ಮಾಪುಗೋಲುಗಳನ್ನು, ಪರಿಕರಗಳನ್ನು ಹುಡುಕಿಕೊಳ್ಳಬೇಕೆಂದು ಹೇಳಿದಾಗ ಎರಡು ಬಗೆಯಲ್ಲಿ ಬದಲುಗಳು ಬಂದವು. ಒಂದು ನೆಲೆಯಲ್ಲಿ ನಿಂತವರು ಹೀಗೆ ನಮ್ಮದೇ ಮಾಪುಗೋಲು ಮತ್ತು ಪರಿಕರಗಳನ್ನು ಹುಡುಕುವುದೆಂದರೆ ಹಳೆಯದಕ್ಕೆ ಮರಳುವ, ಮರುಗಳಿಕೆಯ ದಾರಿಯಾಗಿದೆ.ಇದು ಹಳಹಳಿಕೆಯ ದಾರಿ. ಹಾಗಾಗಿಯೇ ಇದು ಮುನ್ನೋಟಕ್ಕೆ ಎರವಾಗುವ ದಾರಿ ಎಂದರು. ಮತ್ತೆ ಕೆಲವರು ಹೀಗೆ 'ಬೇರೆ' ಎಂದು 'ಹೊರಗಿನದು' ಎಂದು ತಿಳಿಯಲಾದ ಪರಿಕರಗಳನ್ನು ತೊರೆದರೆ ನಾವೇ ಬಡವಾಗಿಬಿಡುತ್ತೇವೆ; ಆಗ ನಮಗೆ ದಿಕ್ಕೇ ತೋಚದಂತೆ ಆಗಿಬಿಡಬಹುದು ಎಂದರು. ಆದರೆ ಈ ಎರಡೂ ಬದಲುಗಳ ಬೇರುಗಳು ಗಟ್ಟಿಯಾಗಿರಲಿಲ್ಲ. ಏಕೆಂದು ನೋಡೋಣ.

ಬರೆವಣಿಗೆ ಇಲ್ಲವೇ ಜನರ ನೆನಪಿನಲ್ಲಿರುವ ರಚನೆಗಳನ್ನು ಅರಿಯುವ ಪರಿಕರಗಳು ಒಳಗಿನಿಂದಲೇ ಬರಬೇಕು ಎನ್ನುವ ಮಾತನ್ನು ಸರಿಯಾಗಿ ತಿಳಿದರೆ ಅದು ಕೃತಿಗಳ ಒಡಲು ಮತ್ತು ಪರಿಸರ ಇವೆರಡಕ್ಕೂ ಸಂಬಂಧಿಸಿದ ಸಂಗತಿ ಎನ್ನುವುದು

ಗೊತ್ತಾಗುತ್ತದೆ. ಒಂದು ಉದಾಹರಣೆಯನ್ನು ನೋಡೋಣ. ಇಪ್ಪತ್ತನೆಯ ಶತಮಾನದ ಮೊದಮೊದಲ ಮೂರ್‍ನಾಲ್ಕು ದಶಕಗಳಲ್ಲಿ ನಡೆದ ಸಂಗತಿ ಇದು. ಜನರಲ್ಲಿ ಬಾಯ್ದೆರೆಯಾಗಿ ಇದ್ದ ಜನಪದ ಸಾಹಿತ್ಯವನ್ನು ಆಗ ಕೂಡಿಹಾಕಲು ಹೊರಟವರು ತಳೆದ ನಿಲುವನ್ನು ನೋಡಿ. ಎಲ್ಲ ಬರೆವಣಿಗೆಗೂ ತಾಯಿಬೇರು ಈ ಜನಪದಸಾಹಿತ್ಯ ಎನ್ನುವ ನಿಲುವನ್ನು ತಳೆದರಷ್ಟೆ. ಹಲಸಂಗಿಯ ಗೆಳೆಯರು ಕೂಡಿ ಹಾಕಿದ ಇಂತಹ ಬರೆವಣಿಗೆಯನ್ನು ಅವರು ನೋಡಿದ ಬಗೆಯನ್ನು ನೋಡಿ. ಹಾಗೆಯೇ ತೆಂಕಣಸೀಮೆಯಲ್ಲಿ ಮಾಸ್ತಿಯವರೇ ಮೊದಲಾಗಿ ಬಿಎಂಶ್ರೀ,ಗೊರೂರು ಮುಂತಾದವರು ಜನಪದಗೀತೆಗಳನ್ನು ಇಂದಿನ ಬರೆವಣಿಗೆಯ ಬೇರು ಎಂತಲೇ ತಿಳಿದಿದ್ದರು. (ಹಲಸಂಗಿಯ ಗೆಳೆಯರು ಕೊಂಚ ಮುಂದೆ ಹೋಗಿ ತಮ್ಮವೇ ಕೆಲವು ರಚನೆಗಳನ್ನು 'ಗರತಿಯ ಹಾಡು' ಕೃತಿಯಲ್ಲಿ ಜನರ ಹೆಸರಿನಲ್ಲಿ ಬಳಕೆ ತಂದಿದ್ದಾರೆಂದು ನನಗೆ ತೋರುತ್ತದೆ. ಇದು ಆಪಾದನೆಯಲ್ಲ. ಜನರ ನೆನಪಿನ ರಚನೆ ಮತ್ತು ನಮ್ಮ ಇಂದಿನ ರಚನೆಗಳ ನಡುವೆ ಇರುವ ಕರುಳುಬಳ್ಳಿಯ ನಂಟನ್ನು ತಿಳಿಸಿ ಹೇಳುವ ಬಗೆಯೂ ಇದಾಗಿತ್ತು.) ಚರಿತ್ರೆ ಮತ್ತು ಸಂವೇದನೆಗಳು ಕಡಿದುಹೋಗದೆ ಮುಂದುವರೆದುಕೊಂಡು ಬಂದಿವೆ ಎಂಬುದನ್ನು ತೋರಿಸುವುದು ಅಂದಿನ ಪರಿಸರದ ಒತ್ತಾಯವಾಗಿತ್ತಷ್ಟೆ ಹೀಗಾಗಿ ಜನಪದ ರಚನೆಗಳನ್ನು ನೊಡುವ ಈ ಬಗೆಯ ಪರಿಕರ ಹುಟ್ಟಿ ಕೊಂಡದ್ದು ಸರಿಯಾಗಿಯೇ ಇದೆ. ಕೆಲವರು ಇದರ ಹಿನ್ನೆಲೆಯಲ್ಲಿ ಐರ್‍ಲೆಂಡ್ ನಾಡು ಬಿಡುಗಡೆಗಾಗಿ ಹೋರಾಡುತ್ತಿರುವಾಗ ಅಲ್ಲಿನ ಸಾಂಸ್ಕೃತಿಕ ನಾಯಕರು ಅಲ್ಲಿನ ಜನಪದರಚನೆಗಳನ್ನು ನೋಡಿದ ಬಗೆಯ ಪ್ರಭಾವವಿದೆ ಎನ್ನಬಹುದು. ಆದರೆ ಇದನ್ನು ಗಟ್ಟಿಯಾಗಿ ಹೇಳಲು ಆಗುತ್ತಿಲ್ಲ. ಏಕೆಂದರೆ ಬೇಂದ್ರೆಯವರನ್ನು ಐರ್‍ಲೆಂಡಿನ ಏಈ ಕವಿಯ ಹಾಗೆ ಉಳಿದವರು-ಅಂದರೆ ಡಬ್ಲ್ಯೂ.ಬಿ. ಯೇಟ್ಸ್, ಲೇಡಿ ಗ್ರೆಗೊರಿ, ನಾಟಕಕಾರ ಜೆ.ಎಂ. ಸಿಂಜ್(ಅಥವಾ ಸಿಂಗ್?) ಸೆಳೆದಂತೆ ತೋರುತ್ತಿಲ್ಲ. ತೆಂಕಣನಾಡಿನಲ್ಲಿ ಕುವೆಂಪು ಅವರಿಗೆ ಕನ್ನಡದಲ್ಲಿ ಬರೆಯಲು ಹೇಳಿದ ಜೆ.ಎಚ್.ಕಸಿನ್ಸ್ ಆ ನಾಡಿನವನೇ ಆಗಿದ್ದರೂ ಇಲ್ಲಿಯ ಬರಹಗಾರರ ಮೇಲೆ ಐರಿಶ್ ಕವಿಗಳ ನೆರಳೂ ಬಿದ್ದಂತೆ ತೋರುತ್ತಿಲ್ಲ. ಹಾಗಾಗಿ ಜನಪದರಚನೆಗಳನ್ನು ನೋಡಲು ಆಯ್ದುಕೊಂಡ ಮಾದರಿ ನಮ್ಮ ಒಳಗಿನ ಒತ್ತಡದಿಂದಲೇ ಹುಟ್ಟಿದ್ದೆಂದು ತೋರುತ್ತದೆ.

ಆದರೆ ಮುಂದೆ ಕನ್ನಡದ ಗುರುತುಗಳನ್ನು ಹುಡುಕಿಕೊಳ್ಳುವ ಕೆಲಸ ಮೊದಲಾದಾಗ ನಾವು ಹಿಡಿದ ದಾರಿಯೇ ಬೇರೆಯಾಯಿತು. ಕನ್ನಡವನ್ನು ದ್ರಾವಿಡ ಸಂಸ್ಕೃತಿಯ ನೆಲೆಯಲ್ಲಿ ನೋಡುವ ಬಗೆ ನೆಲೆಯೂರಿತಷ್ಟೆ. ಆಗ ಜನಪದಸಾಹಿತ್ಯ ನಮಗೆ ಶಿಷ್ಟಸಾಹಿತ್ಯಕ್ಕೆ ವಿರುದ್ಧವಾದ ನೆಲೆಯಲ್ಲಿ ಕಾಣತೊಡಗಿತು. ಶಿಷ್ಟವೆಂದು ನಾವು ಗುರುತಿಸಿಕೊಂಡ ಸಾಹಿತ್ಯವು ವೈದಿಕ ಮತ್ತು ಧಾರ್ಮಿಕ ನೆಲೆಗಳಿಂದ ಒತ್ತಾಸೆ ಪಡೆದುಕೊಂಡಿದ್ದರೆ ಜನಪದಸಾಹಿತ್ಯವನ್ನು ಅವೈದಿಕ ನೆಲೆಯಲ್ಲಿ ಇರಿಸಿ ನೋಡತೊಡಗಿದೆವು. ಇದೂ ಕೂಡ ಅಂದಿನ ನಮ್ಮ ಕನ್ನಡ ಗುರುತುಗಳ ಹುಡುಕಾಟದ ಕಾರಣದಿಂದ ಹುಟ್ಟಿಕೊಂಡ ಚಿಂತನೆ. ಒಂದೆರಡು ದಶಕಗಳು ಕಳೆದಮೇಲೆ ನಾವು ಜನಪದಸಾಹಿತ್ಯಕ್ಕೆ ಕೊಟ್ಟುಕೊಂಡಿದ್ದ ಕೃಷಿ ಮೂಲವನ್ನು

ಬಿಟ್ಟುಕೊಟ್ಟು ದಲಿತ ನೆಲೆಗಳನ್ನು ಕಂಡುಕೊಳ್ಳಬೇಕಾದ ಅಗತ್ಯ ಉಂಟಾಯಿತು. ಆವರೆಗೆ ಕಡೆಗಣನೆಗೆ ಒಳಗಾಗಿದ್ದ ಹತ್ತಾರು ಒಳಹೊಳೆಗಳು ಈಗ ಮೈದುಂಬಿಕೊಂಡಂತೆ ತೋರತೊಡಗಿದವು. ಇದೆಲ್ಲವನ್ನೂ ಹೇಳಿದ್ದರ ಉದ್ದೇಶವಿಷ್ಟೆ ನಮ್ಮ ಸಾಹಿತ್ಯವನ್ನು ಅರಿಯುವ ಮಾಪುಗೋಲುಗಳನ್ನು ಪರಿಕರಗಳನ್ನು ನಮ್ಮ ಬೇಕು ಬೇಡಗಳಿಗೆ ತಕ್ಕಂತೆ ಹುಡುಕಿಕೊಳ್ಳಬೇಕು ಎನ್ನುವುದು ಅಷ್ಟೇನೂ ಗಾಬರಿ ಹುಟ್ಟಿಸಬೇಕಾದ ಸಂಗತಿಯಲ್ಲ ಎನ್ನುವುದನ್ನು ಇಲ್ಲಿ ಹೇಳಬೇಕಾಗಿದೆ. ನಮಗೇ ಗೊತ್ತಿಲ್ಲದಂತೆ ನಾವು ಆ ಮಾದರಿಯನ್ನು ನಂಬಿಯೇ ಹೆಜ್ಜೆ ಇಡುತ್ತಿದ್ದೇವೆ. ನಾವು ಹುಡುಕಿಕೊಂಡ ದಾರಿ ಸರಿಯೋ ತಪ್ಪೋ ಎನ್ನುವುದನ್ನು ನೋಡಿಕೊಳ್ಳುವ ಅವಕಾಶವನ್ನು ನಾವು ಕಾಯ್ದುಕೊಂಡಿದ್ದೇವೆಯಷ್ಟೆ

ಸಾಹಿತ್ಯ ಕೃತಿಯ ದಿಟವಾದ ಇರವು ಎಲ್ಲಿದೆ ಎನ್ನುವುದು ನಮ್ಮನ್ನೆಲ್ಲ ಕಾಡಿಸುತ್ತಿದ್ದ ಇನ್ನೊಂದು ಪ್ರಶ್ನೆ. ಭಾಷೆಯೇ ಅದರ ಮೈ ಆಗಿದ್ದರಿಂದ ಅದರ ಭಾಷಿಕ ಶರೀರವನ್ನೇ ನೆಮ್ಮಿ ಅದನ್ನು ಅರಿಯಲು ಮುಂದಾಗಬೇಕೆಂಬುದು ಆಗ ಹೊಳೆದ ದಾರಿ. ಆ ಭಾಷಿಕ ಮೈಯನ್ನು ಬಿಟ್ಟು ನಾವು ಕಟ್ಟಿಕೊಟ್ಟ ಯಾವ ಹೊರ ಪ್ರಭಾವಳಿಯೂ ಕೂಡ ಕೃತಿಯನ್ನು ಅರಿಯಲು ನೇರವಾಗಿ ನೆರವಾಗಲಾರದು ಮತ್ತು ಅಂತಹ ನೆರವನ್ನು ಪಡೆದರೆ ದಾರಿ ತಪ್ಪುವುದಂತೂ ದಿಟ ಎನ್ನುವುದು ಆಗ ಅನಿಸಿತ್ತು. ಹಾಗಾಗಿಯೇ ಕೃತಿಗಳಿಗೆ ನಿನ್ನೆಗಳಿಲ್ಲ ಎಂದು ನಂಬಬೇಕಾಯಿತು. ಅದನ್ನೇ ಪಾಠಗಳನ್ನು ಕೇಳುತ್ತಿದ್ದ ವಿದ್ಯಾರ್ಥಿಗಳಿಗೂ ಹೇಳಬೇಕಾಯ್ತು. ವಿಕ್ರಮಾರ್ಜುನ ವಿಜಯವಿರಲಿ, ಕುಮಾರವ್ಯಾಸ ಭಾರತವಿರಲಿ, ಬಸವರಾಜದೇವರ ರಗಳೆಯಿರಲಿ, ಮಲೆಗಳಲ್ಲಿ ಮದುಮಗಳು ಇರಲಿ, ಜೋಗಿಯಿರಲಿ ಈ ಎಲ್ಲವೂ ಒಂದೇ ಸಾಲಿನಲ್ಲಿ ನಿಂತಂತೆ ತೋರತೊಡಗಿದವು. ಯಾವುದೂ ಒಂದಾದ ಮೇಲೊಂದರಂತೆ ಹುಟ್ಟಿಕೊಂಡಂತೆ ತೋರಲೇ ಇಲ್ಲ. ದಿಟ. ಒಂದು ಹತ್ತನೆಯ ಶತಮಾನದ್ದು, ಇನ್ನಾವುದೋ ಹದಿನೈದರದ್ದು, ಮತ್ತೊಂದು ನಿನ್ನೆ ಮೊನ್ನೆ ಹುಟ್ಟಿದ್ದು ಸರಿ. ಆದರೆ ಓದುವವರಿಗೆ ಅವೆಲ್ಲವೂ ಈಗ ಮತ್ತು ಇಲ್ಲಿ ಮಾತ್ರ ದಿಟ.

ಈ ನೆಲೆಯನ್ನು ಒಪ್ಪಿದಾಗ ಕೃತಿಯೊಳಗೇ ಇರುವ ಅದು ಹುಟ್ಟಿದಕಾಲದ ನೆನಪನ್ನು ಕೈಬಿಡುವುದು ತಪ್ಪಲ್ಲವೇ ಎಂದು ಕೇಳುವುದುಂಟು. ಅದು ಸರಿಯೇ. ಇಲ್ಲಿಯೂ ಯಾವ ನೆನಪೇ ಆದರೂ ಕೂಡ ಅದು ನಮ್ಮ ಕಾಲದೊಡನೆ ನಂಟನ್ನು ಬೆಳೆಸಿಕೊಳ್ಳದಿದ್ದರೆ ಅದು ಕೆಲಸಕ್ಕೆ ಬಾರದಂತೆಯೇ ಸರಿ ಎನ್ನುವುದು ನನ್ನ ತಿಳುವಳಿಕೆ. ನಾವು ನಮಗೆ ಬೇಡದ ನೆನಪುಗಳನ್ನು ಹೊತ್ತು ನಡೆಯುತ್ತಿರುವವರಲ್ಲ. ಹಾಗೆ ಹೊತ್ತು ನಡೆಯಬೇಕೆಂಬ ಒತ್ತಾಯಗಳನ್ನು ನಿರಾಕರಿಸುವವರು. ಹಾಗಾಗಿ ಕೃತಿಯಲ್ಲಿ ಅದು ಹುಟ್ಟಿದಕಾಲಕ್ಕೆ ಮಾತ್ರ ಸಲ್ಲುವ ನೆನಪಿನ ನಂಟುಗಳಿರುತ್ತವೆ ಎನ್ನುವುದನ್ನು ಒಪ್ಪಿ ಅದರಿಂದಾಗಿ ಅದನ್ನು ಅರಿಯುವ ಬಗೆಯಲ್ಲೇ ಬದಲಾವಣೆಯನ್ನು ಮಾಡಿಕೊಳ್ಳಬೇಕು ಎನ್ನುವುದನ್ನು ನಾನು ಒಪ್ಪಲಾರೆ.

ನಾನು ಮತ್ತು ನನ್ನ ಸರೀಕ ಕನ್ನಡ ಮೇಸ್ಟ್ರುಗಳು ಇನ್ನೊಂದು ಇಕ್ಕಟ್ಟನ್ನು ಎದುರಿಸುತ್ತಿದ್ದೇವೆಂದು ತೋರುತ್ತದೆ. ಪಶ್ಚಿಮದ ಸಾಹಿತ್ಯ ಮತ್ತು ಸಾಹಿತ್ಯತತ್ವಗಳ

ಚೌಕಟ್ಟನ್ನು ಪರಾಮರ್ಶನ ಬಿಂದುವನ್ನಾಗಿ ಮಾಡಿಕೊಳ್ಳಬೇಕೆಂಬ ಒತ್ತಾಯವನ್ನು ಹೂಡುತ್ತಿದ್ದ ವಿಮರ್ಶಕರ ಒತ್ತಡಗಳಿಗೆ ಹೇಗೆ ಪ್ರತಿಕ್ರಿಯಿಸುವುದು ಎನ್ನುವುದೇ ಆ ಇಕ್ಕಟ್ಟು. ಶರಣಾಗತಿಯ ಹಾದಿಯೊಂದು ತೆರೆದೇ ಇತ್ತು. ಈ ಹಾದಿಯಲ್ಲಿ ಹೋಲಿಕೆಗಳಿಗೆ ಒತ್ತು ತುಂಬಾ ಇತ್ತು. ಆದರೆ ಹೋಲಿಕೆಗಳು ಯಾವಾಗಲೂ ಒಂದು ನಿಟ್ಟಿನಲ್ಲೇ ಸಾಗುತ್ತಿದ್ದವು. ಬೀಜಚಿಂತನೆಗಳು ಯಾವಾಗಲೂ ಪಶ್ಚಿಮದ ಕಡೆಯಿಂದಲೇ ಹರಿದು ಬಂದಿವೆ ಎನ್ನುವುದನ್ನು ಒಪ್ಪಿಕೊಳ್ಳಲೇಬೇಕಿತ್ತು. ಹಾಗಲ್ಲದೆ ಕನ್ನಡದ್ದೇ ಆದ ಸಾಧನೆಗಳಿದ್ದರೂ ಅವುಗಳನ್ನು ವಿನಾಯತಿಗಳಂತೆ ಆಕಸ್ಮಿಕಗಳಂತೆ ನೋಡಬೇಕಿತ್ತು. ಇಂದಿಗೂ ವಚನಗಳನ್ನು ಹೇಗೆ ಚರ್ಚಿಸಬೇಕು, ಚರ್ಚಿಸುವುದಿರಲಿ ಹೇಗೆ ಓದಬೇಕು ಎಂಬ ಬಗ್ಗೆ ಗೊಂದಲವಿರುವುದು ಇದೇ ಕಾರಣದಿಂದಾಗಿ ಎಂದುಕೊಂಡಿದ್ದೇನೆ. ಈ ದಾರಿಯನ್ನು ಬಿಟ್ಟು ಹೊರಳಲು, ಇಲ್ಲವೇ ನಮ್ಮದೇ ಹಾದಿಗಳನ್ನು ಕಟ್ಟಿಕೊಳ್ಳಲು ಅವಕಾಶಗಳಿದ್ದರೂ ಅದಕ್ಕೆ ಬೇಕಾದ ಕಸುವನ್ನು ಕಟ್ಟಿಕೊಳ್ಳುವುದು ಒಂದು ಸವಾಲಾಗಿಯೇ ಕಾಣುತ್ತಿತ್ತು. ನನ್ನ ಕೆಲವು ಜೊತೆಗಾರರರಾದರೂ ಈ ನಿಟ್ಟಿನಲ್ಲಿ ದಿಟ್ಟ ಹೆಜ್ಜೆಗಳನ್ನು ಇಟ್ಟು ಸಾಗಿದವರಾಗಿದ್ದಾರೆ. ಈಗಲೂ ಕನ್ನಡದ ಮೇಸ್ಟ್ರುಗಳನ್ನು ಈ ದೆವ್ವ ಕಾಡುವುದನ್ನು ನಿಲ್ಲಿಸಿಲ್ಲ.

ಭಾಷೆಯ ಮೈಯನ್ನು, ಕೃತಿಯನ್ನು ತಿಳಿಯುವ ಮೊದಲ ಮತ್ತು ಕೊನೆಯ ಪರಿಕರವನ್ನಾಗಿ ಬಳಸುವ ಹಾದಿಯಲ್ಲಿ ಸಾಗಿದ ಮೇಲೆ ಭಾಷೆಯೇ ಇಲ್ಲಿನ ಬರಹಗಳ ಮುಖ್ಯ ಭಿತ್ತಿಯಾಗುವುದನ್ನು ಕಾಣಬಹುದು. ಇಲ್ಲಿಂದ ಬರಹಗಳ ಮುಖ್ಯ ನೆಲೆ ಕೇವಲ ಭಾಷೆಯೇ ಆಗಿಬಿಟ್ಟಿವೆ. ಇದಕ್ಕೆ ನಾನು ಕೆಲಸ ಮಾಡತೊಡಗಿದ್ದ ಕನ್ನಡ ವಿಶ್ವವಿದ್ಯಾಲಯದ ವಾತಾವರಣ, ಹೊಣೆ ಮತ್ತು ಅಲ್ಲಿನ ಬೇಡಿಕೆಗಳೂ ಕಾರಣವಾಗಿರಬಹುದು. ಜೊತೆಗೆ ಕಳೆದ ಶತಮಾನದ ಕೊನೆಯ ದಶಕದಿಂದ ಮೊದಲಾಗಿ ಕನ್ನಡ ಭಾಷೆಯನ್ನು ಆತಂಕದಲ್ಲಿರುವ ನುಡಿಯೆಂದು ತಿಳಿದು ಚಿಂತಿಸುವ ಬಗೆ ಬಲವಾಗಿ ಬೇರೂರಿತು. ಅದನ್ನು ಹೀಗೆ ಹೇಳೋಣ. ಕನ್ನಡದಂತಹ ನುಡಿಗಳು ಮತ್ತು ಅದನ್ನು ಅವಲಂಬಿಸಿದ ಸಂಸ್ಕೃತಿಗಳು ಜಾಗತೀಕರಣದ ಉರುಬಿನಲ್ಲಿ ಎದುರಿಸುತ್ತಿರುವ ಬಿಕ್ಕಟ್ಟುಗಳು ಎಲ್ಲರ ಎದುರು ಸವಾಲಾಗಿ ನಿಂತಿವೆ. ಇವು ಕಲ್ಪಿಸಿಕೊಂಡ ಹೋರಾಟದ ನೆಲೆಗಳಲ್ಲ. ದಿಟವಾಗಿಯೂ ಎದುರಿಸುತ್ತಿರುವ ಬಿಕ್ಕಟ್ಟುಗಳು. ಈ ಬಿಕ್ಕಟ್ಟುಗಳಿಗೆ ಚಾರಿತ್ರಿಕ ಒತ್ತಡಗಳಿರುವಂತೆ ಜಾಗತಿಕವಾದ ಒತ್ತಡಗಳೂ ಕಾರಣವಾಗಿವೆ. ಇವೆಲ್ಲವನ್ನೂ ಅರಿಯುವುದು , ಅರಿಯಲು ಬೇಕಾದ ಪರಿಕರಗಳನ್ನು ಹುಡುಕಿಕೊಳ್ಳುವುದು ಇಂದಿನ ಅಗತ್ಯವಾಗಿದೆ.

ಎಲ್ಲಕ್ಕಿಂತ ಮೊದಲು ಅರಿಯಬೇಕಾದ ಸಂಗತಿಯೆಂದರೆ ದೂರದಿಂದ ಬಿರುಕುಗಳಿಲ್ಲದಂತೆ ಕಾಣುತ್ತಿದ್ದ ನೆಲೆಗಳು ಹತ್ತಿರ ಹತ್ತಿರ ಹೋಗುತ್ತಿದ್ದಂತೆ ಹಲವಾರು ಬಿರುಕುಗಳಿರುವ ರಚನೆಗಳೆಂದು ತೋರತೊಡಗಿದ್ದು. ಇದನ್ನು ಇಡೀ ಕನ್ನಡ ಸಂಸ್ಕೃತಿಗೆ ಹೊಂದಿಸಿಕೊಂಡು ನೋಡಬೇಕಾಗಿದೆ. ನಾವು ಹಕ್ಕುದಾರರೂ ಹೊಣೆಗಾರರೂ ಆಗಿರುವ ಚರಿತ್ರೆ ಮತ್ತು ಸಂಸ್ಕೃತಿಗಳು ವಾಸ್ತವವಾಗಿ ನಮ್ಮೆಲ್ಲರದ್ದೂ ಆಗಿರದೆ ಕೆಲವರ ಹೊಣೆ ಮತ್ತು ಹೊರೆಗಳನ್ನು ಎಲ್ಲರೂ ತಮ್ಮದೆಂದು ಹೊರುತ್ತಿರುವ

ಬಗೆ ಥಾಳಾಗಿ ಕಾಣತೊಡಗಿತು. ಇದೆಲ್ಲವೂ ಮೊದಲಾದದ್ದು ಸಚಿವ ಬಿ.ಬಸವಲಿಂಗಪ್ಪನವರು ರಾಜ್ಯದಲ್ಲಿ ಮಲಹೊರುವ ಪದ್ಧತಿಯನ್ನು ಕಾನೂನಿನ ಮೂಲಕ ಬಹಿಷ್ಕರಿಸುವ ಯೋಜನೆಯನ್ನು ಕೈಗೊಂಡಾಗ. ಹಾಗೆ ಮಲಹೊರುವ ಪದ್ಧತಿಯನ್ನು ಮುಂದುವರೆಸುವುದು ಅಪರಾಧವೆಂದು ಹೇಳುವ ಕಾನೂನು ಜಾರಿಗೆ ಬಂತಷ್ಟೆ ಈ ಕಾನೂನಿನ ಪರಿಣಾಮವಾಗಿ ಸಾಮಾಜಿಕ ಪಲ್ಲಟಗಳು ಮೊದಲಾದವು. ಈ ಪಲ್ಲಟಗಳು ನೇರವಾಗಿ ಈ ಕಾನೂನಿನ ಗುರಿಯಾಗಿದ್ದ ಅನಿಷ್ಟ ಪದ್ಧತಿಯೊಂದಕ್ಕೆ ಮಾತ್ರ ತಳುಕು ಹಾಕಿಕೊಂಡಿರಲಿಲ್ಲ. ದಲಿತರು ಹೊರುತ್ತಿದ್ದುದು ಸಮಾಜದ ತ್ಯಾಜ್ಯವನ್ನು. ಈ ಕಾನೂನು ಬದಲು ದಾರಿಯಿಂದ ಹೇಳಿದ್ದೇನು? ದಲಿತರು ತಮ್ಮದಲ್ಲದ ಹಾಗೂ ಇತರರು ತ್ಯಾಜ್ಯವೆಂದು ತಿಳಿದ ಪಾರಂಪರಿಕ ನೆಲೆಗಳಿಗೆ, ಹೊರೆಗಳಿಗೆ ಹಕ್ಕುದಾರರೂ ಅಲ್ಲ; ಹೊಣೆಗಾರರೂ ಅಲ್ಲವೆಂದು ಹೇಳಿದಂತಾಯ್ತು. ಅಲ್ಲವೆ? ಇದರ ಪರಿಣಾಮದಿಂದಾಗಿ ಕನ್ನಡ ಸಮಾಜದಲ್ಲಿ ಉಂಟಾದ ತಿಕ್ಕಾಟಗಳನ್ನು ನೋಡಿ. ಈ ಕಾನೂನು ಜಾರಿಯಾಗಿದ್ದು ಒಂದು ಸಂದರ್ಭವನ್ನು ಹುಟ್ಟುಹಾಕಿತು. ಆದರೆ ಒಳಗಿದ್ದ ಒಡಕುಗಳು ಆಗಲೇ ಹೇಳಿದಂತೆ ಹೊರಗೆ ಕಾಣತೊಡಗಿದ್ದರಿಂದ ತಿಕ್ಕಾಟಗಳು ಮೊದಲಾದವು. ಸಾಮಾಜಿಕವಾಗಿ ನಾವು ಕಲ್ಪಿಸಿಕೊಂಡಿದ್ದ ನಂಟಿನ ಜಾಲ ಹುಸಿಯಾಗಿತ್ತು. ಒಳಗಿನ ಹುನ್ನಾರಗಳು ಎದ್ದು ಕಾಣತೊಡಗಿದವು. ಕೆರೆ ಮೈದೆರೆದಾಗ ಏನೆಲ್ಲ ಕಾಣುವುದೋ ಅದು ಮೊದಲೇ ಅಲ್ಲಿ ಇದ್ದುದು ತಾನೆ. ಈ ಮಾತು ನಮಗಿಲ್ಲಿ ಮುಖ್ಯ. ಏಕೆಂದರೆ ಕನ್ನಡ ನುಡಿಯೂ ಕೂಡ ನಾವು ಆವರೆಗೆ ತಿಳಿದಂತೆ ಎಲ್ಲರ ಕನ್ನಡವಾಗಿರುವ ಬದಲು ಕೆಲವರ ಕನ್ನಡವೇ ಎಲ್ಲರ ಕನ್ನಡವೆಂದು ಸೋಗು ತೊಟ್ಟಿತ್ತೆಂಬುದು ಈಗ ಕಣ್ಣಿಗೆ ರಾಚತೊಡಗಿತ್ತು. ಇದೆಲ್ಲದರ ಹಿಂದಿನ ಸಾಂಸ್ಕೃತಿಕ ರಾಜಕಾರಣವನ್ನು ಸರಿಯಾದ ನಿಟ್ಟಿನಲ್ಲಿ ಅರಿಯುವುದು ಇಂದಿನ ಅಗತ್ಯವಾಗಿದೆ. ಕಳೆದ ಇಪ್ಪತ್ತು ವರುಷಗಳಿಂದ ಬರೆದದ್ದರಲ್ಲಿ ನಾನು ಈ ನೆಲೆಯಲ್ಲಿ ಹೆಜ್ಜೆಗಳನ್ನು ಇಡಲು ಬಯಸಿದ್ದೇನೆಂದು ತೋರುತ್ತಿದೆ.

ಕನ್ನಡ ಬದುಕು ವ್ಯಕ್ತಿಗಳನ್ನು ಅತಿಯಾಗಿ ಹಚ್ಚಿಕೊಳ್ಳುತ್ತದೆ. ಏನನ್ನೇ ಆಗಲಿ ಅದನ್ನು ಯಾರು ಹೇಳಿದರು ಎಂಬುದು ಮುಖ್ಯವಾಗುತ್ತದೆಯೇ ಹೊರತು ಹೇಳಿದ್ದು ಏನು ಎಂಬುದು ಹಿಂದಕ್ಕೆ ಸರಿಯುತ್ತದೆ. ಇದನ್ನು ಕರ್ತೃವನ್ನು ಕಟ್ಟಿಕೊಳ್ಳುವುದು ಎಂದು ಬೇರೆಲ್ಲೋ ಕರೆದಿದ್ದೇನೆ. ಮಾಡಿದ ಕೆಲಸಗಳು ಹಿಂದಕ್ಕೆ ಸರಿದು, ಅದನ್ನು ಮಾಡಿದವರು ಕರ್ತೃಗಳಾಗಿ ಬಿಡುತ್ತಾರೆ. ಇದರಲ್ಲಿ ತಪ್ಪೇನೂ ಇಲ್ಲವಾದರೂ ಕೆಲವೊಮ್ಮೆ ಹೀಗೆ ಕರ್ತೃತ್ವ ದೊರಕಿದ ಮೇಲೆ ವ್ಯಕ್ತಿಗಳ ಎಲ್ಲ ಕೆಲಸಗಳಿಗೂ ಕನ್ನಡ ಬದುಕು ಹೆಚ್ಚಿನ ಮನ್ನಣೆಯನ್ನು ನೀಡ ತೊಡಗುತ್ತದೆ. ಇದೊಂದು ಅಪಾಯಕಾರಿ ಸ್ಥಿತಿ ಎಂದೇ ನನ್ನ ತಿಳುವಳಿಕೆ. ಈ ಅಪಾಯಗಳಿಗೆ ತುತ್ತಾದ ಜೀವನಕ್ರಮಗಳು ಎದುರಿಸುತ್ತಿರುವ ಬಿಕ್ಕಟ್ಟುಗಳನ್ನು ನಾವು ಕಂಡಿದ್ದೇವೆ. ಪ್ರಜಾಪ್ರಭುತ್ವವನ್ನು ಒಪ್ಪಿ ಆಚರಿಸಹೊರಡುವವರು ಇದರಿಂದ ಕಲಿಯಬೇಕಾದ ಪಾಠ ಇದೆ. ಈ ಮಾತನ್ನು ಇಲ್ಲಿ ಹೇಳಿದ್ದಕ್ಕೆ ಕಾರಣಗಳಿವೆ. ಏಕೆಂದರೆ ಈಗ ನಮ್ಮ ತಿಳಿವಿನ ಬದುಕು ಒಂದು ಬಿಕ್ಕಟ್ಟಿನಲ್ಲಿದೆ. ಕರ್ತೃತ್ವ ಪಡೆದವರು–ಅವರು ಸಾಹಿತಿಗಳಾಗಿರಲಿ, ರಾಜಕಾರಣಿಗಳಾಗಿರಲಿ, ಸಂಸ್ಕೃತಿ ಚಿಂತಕರಾಗಿರಲಿ,

ಉದ್ಯಮಿಗಳಾಗಿರಲಿ, ದರೋಡೆಕೋರರಿರಲಿ, ಮಾಫಿಯಾ ದೊರೆಗಳಿರಲಿ ಮತ್ತೇನೋ ಆಗಿರಲಿ ಅವರು ನುಡಿದದ್ದು ಮತ್ತು ಬರೆದದ್ದು ಮನ್ನಣೆಯನ್ನು ಪಡೆದುಬಿಡುತ್ತದೆ. ಆದರೆ ಅಪಾಯದ ಮೊಳಗು ಬೇರೆಲ್ಲೋ ಇದೆ. ಏಕೆಂದರೆ ಈಗ ಮಾತಾಡುವವರ ಎದುರು ಜನರಿಲ್ಲ; ಕನ್ನಡಿಗಳಿವೆ. ಬರೆಯುವವರು ಈಗ ಏಕಾಂತ ಮತ್ತು ಮೌನದ ಸಾಹಚರ್ಯವನ್ನು ಪಡೆದಿಲ್ಲ; ಅವರ ಕಣ್ಣು ಕಿವಿಗಳಿಗೆ ಜನರ ಸಂದಣಿ ಮತ್ತು ಮೊಳಗುಗಳು ಕೇಳುತ್ತಿವೆ. ಇದನ್ನೇ ನಾನು ಅಪಾಯ**ಕಾ**ರಿ ಅವಸ್ಥೆ ಎಂದು ನಾನು ತಿಳಿದಿರುವೆ. ಈಗ ನುಡಿದದ್ದು ಬರೆದದ್ದು **ಚಲಾವ**ಣೆಯ ನಾಣ್ಯಗಳಾಗದೆ ತಿಜೋರಿಯಲ್ಲಿ ಭದ್ರವಾಗ ತೊಡಗುತ್ತವೆ. ಕನ್ನಡ ಬದುಕು ಎದುರಿಸುತ್ತಿರುವ ಈ ಬಿಕ್ಕಟ್ಟನ್ನು ಚಿಕ್ಕವರು ತಿಳಿಯತೊಡಗಿದ್ದಾರೆ. ಹೊರಬರಲು ದಾರಿಗಳಿಗಾಗಿ ತಡಕಾಡುತ್ತಿದ್ದಾರೆ. ಇಂತಹ ಹೊತ್ತಿನಲ್ಲಿ ಈ ಬರಹಗಳು ಮತ್ತೊಮ್ಮೆ ಒಗ್ಗೂಡಿ ಅಚ್ಚಾಗುತ್ತಿವೆ. ಇವು ಚಲಾವಣೆಗೆ ಬರುತ್ತವೋ ಇಲ್ಲವೇ ತಿಜೋರಿಯಲ್ಲಿ ಕೊಳೆಯುತ್ತವೋ ಕಾಯ್ದು ನೋಡಬೇಕು.

ಈ ಬರಹಗಳು ಸುಮಾರು ನಲವತ್ತು ವರುಷಗಳ ಹರಹಿನಲ್ಲಿ ಮೈತಳೆದಿವೆ. ಇದೇ ಕಾರಣವಾಗಿ ಬರಹಗಳ ಮಂಡನೆಯ ಬಗೆಯಲ್ಲಿ ಹಲವು ದಾರಿಗಳು ಕಾಣುವುದು ಸಹಜವೇ ಆಗಿದೆ. ಕೆಲವೊಮ್ಮೆ ಯಾವುದೋ ಪೂರ್ವಪಕ್ಷವನ್ನು ಊಹಿಸಿಕೊಂಡು ಉತ್ತರಕೊಡುವ ನೆಲೆ ಕಂಡು ಬಂದರೆ, ಮತ್ತೆ ಕೆಲವೊಮ್ಮೆ ಹೊಸದನ್ನು ಹೇಳಲೇಬೇಕೆಂಬ ಹಂಬಲವೇ ಮೆರೆಯುತ್ತಿರುವಂತೆ ತೋರಬಹುದು. ಮತ್ತೆ ಕೆಲವು ಬರಹಗಳು ಒಮ್ಮೆ ಹೇಳಿದ್ದನ್ನೆ ಬೇರೆ ಮಾತುಗಳಲ್ಲಿ ಮತ್ತೊಮ್ಮೆ ಹೇಳುವಂತೆಯೂ ಇವೆ. ಬಳಸುವ ಭಾಷೆಯೂ ಕೂಡ ಹೀಗೆ ಏರುಪೇರಿನಿಂದ ಕೂಡಿದೆ. ಎಷ್ಟು ಬೇಕೋ ಅಷ್ಟು ಮಾತ್ರ (ಕೆಲವೊಮ್ಮೆ ಬೇಕಾದ್ದಕ್ಕಿಂತಲೂ ಕಡಿಮೆ) ಹೇಳುವ ನೆಲೆ ಕಂಡು ಬಂದರೆ ಮತ್ತೆ ಕೆಲವೊಮ್ಮೆ ಒಪ್ಪಿಸುವ ಹಠದಿಂದ ಹರಡಿಕೊಂಡ ಬಗೆಯ ಮಂಡನೆ ಕಾಣುವುದೂ ಉಂಟು. ಅಲ್ಲಲ್ಲಿ ಪ್ರವಾದಿತನದ ಸೋಗು ಕೂಡ ನುಸುಳಿದ್ದರೆ ಅಚ್ಚರಿಯಿಲ್ಲ. ಅಲ್ಲದೆ ಈ ಬರಹಗಳನ್ನು ಅವುಗಳನ್ನು ಬರೆದ ಕಾಲಕ್ಕೆ ಅನುಗುಣವಾಗಿ ಜೋಡಿಸಿಲ್ಲ. ಇದರಿಂದಲೂ ಇವುಗಳ ನಂಟು ಮತ್ತಷ್ಟು ಜಟಿಲವಾಗಿರಲೂಬಹುದು. ಹೀಗೆ ಮಾಡುವುದಲ್ಲದೆ ನನಗೆ ಬೇರೆ ದಾರಿ ಇರಲಿಲ್ಲ. ಬೇರೆಯವರು ಬರೆದ ಕೆಲವು ಬರಹಗಳನ್ನು ಕನ್ನಡದ ಸಂದರ್ಭದಲ್ಲಿ ಓದುವುದು ಅಗತ್ಯ ಎಂದು ತಿಳಿದದ್ದರಿಂದ ಅಂತಹ ಮೂರ್‍ನಾಲ್ಕರ ಅನುವಾದ ರೂಪಗಳನ್ನು ಇಲ್ಲಿ ಉಳಿಸಿಕೊಂಡಿದ್ದೇನೆ

ಇನ್ನು ಈ ಒಗ್ಗೂಡಿಸಿದ ಹೊತ್ತಗೆಗಳಿಗೆ 'ತೊಂಡುಮೇವು' ಎಂದು ಹೆಸರಿಟ್ಟುದೇಕೆ? ಹೆಸರಿಸುವಾಗ ಹುಬ್ಬುಗಂಟಿಕ್ಕುವಂತೆ ಇರಬಾರದು ಎಂಬುದು ಮೊದಲ ಮಾತು. ಅಲ್ಲದೆ ನಿಡುಗಾಲದಿಂದ ಬೇಂದ್ರೆಯವರ ಕವಿತೆಯ ಸಾಲೊಂದು ನನ್ನ ಬೆನ್ನೇರಿದೆ. ಅವರ ನಭೋವಾಣಿ ಸಂಕಲನದ 'ನವ ವಿಸರ್ಗ' ಕವಿತೆಯ ಸಾಲುಗಳಿವು. **'ನಕ್ಷೆಯನು ಹಿಡಿದು ತಡಕಾಡಬೇಡ ನಕ್ಷತ್ರ ಮಾರ್ಗವನ್ನು/ ತೊಂಡುಮೇವರಿಗೆ ಹಾದಿ ಕೇಳದಿರು, ಹತ್ತು ದುರ್ಗವನ್ನು'**. ಈ ಸಾಲುಗಳಲ್ಲಿದ್ದ ತೊಂಡುಮೇ(ಯು)

ಎಂಬ ಕೆಲಸಪದ ನನ್ನನ್ನು ಕಾಡುತ್ತಿದೆ. ಇದರ ತಿರುಳೇನಾದರೂ ಇರಲಿ. ತೊಂಡುಮೇ(ಯು) ಎಂಬ ಈ ಕೆಲಸಪದವನ್ನು ಹೆಸರುಪದವನ್ನಾಗಿ ಇಲ್ಲಿ ಬದಲಿಸಿಕೊಂಡು ತೊಂಡುಮೇವು ಎಂದು ಮಾಡಿಕೊಂಡದ್ದಕ್ಕೂ ಕಾರಣಗಳಿವೆ. ಬೇಂದ್ರೆಯವರು ದುರ್ಗ ಹತ್ತುವವರಿಗೆ ಅವರ ಹಾದಿಯನ್ನು ಅವರೇ ಕಂಡುಕೊಳ್ಳಬೇಕೆಂದೂ, ಅಲ್ಲಲ್ಲಿ ತೊಂಡುಮೇವರು ಇದ್ದರೂ ಅಂತಹವರಲ್ಲಿ ಹಾದಿ ಕೇಳುವುದು ಬೇಡವೆಂದೂ ಹೇಳಿದ್ದಾರೆ. ಮೊದಲ ಸಾಲಿನಲ್ಲಿ ನಕ್ಷತ್ರ ಮಾರ್ಗ ಮತ್ತು ನಕ್ಷೆಗಳಿಗೆ ಇರುವ ನಂಟನ್ನು ಹೇಳಿದ್ದಾರಷ್ಟೆ. ಕವಿ ನೀಡುವ ಎಚ್ಚರಿಕೆಯೇ ನಮ್ಮ ಬದುಕಿನ ಒಂದು ವಿಪರ್ಯಾಸವನ್ನು ಹೇಳುವಂತಿದೆ. ನೀವು ನಕ್ಷೆಯನ್ನೂ ತೊರೆಯಲಾರಿರಿ; ತೊಂಡುಮೇವರನ್ನೂ ಕಡೆಗಣಿಸಲಾರಿರಿ. ಅವು ನಮ್ಮೊಡನೆ ಇರುವಂತಹವೇ ಆಗಿವೆ. ನಮ್ಮೆಲ್ಲರ ಬರೆಹಗಳು ಹೀಗೆ ನಕ್ಷೆಗಳೋ ತೊಂಡುಮೇವರು ತೋರಿಸುವ ಪರಿಚಿತ ಒಳದಾರಿಗಳೋ ಆಗಿದ್ದರಬಹುದು. ಅಲ್ಲವೇ? ಹಾಗಾಗಿ ಈ ಬರಹಗಳನ್ನು ತೊಂಡುಮೇವು ಎಂದು ಕರೆಯಲು ಮುಂದಾದೆ.

ಇದೂ ಅಲ್ಲದೆ ನನ್ನ ಹಾಗೆ ನನ್ನ ಹಲವು ಸರೀಕರ ಹುಡುಕಾಟವೂ ಒಂದು ಗೊತ್ತಾದ ಕಣ್ಣುಕಟ್ಟಿದ ಹಾದಿಯಲ್ಲಿ ಸಾಗಿಲ್ಲ. ಹೀಗೆ ಸಿಕ್ಕಿದಕಡೆಗೆ ನುಗ್ಗಿ ಸಿಕ್ಕಿದ್ದನ್ನು ತಿಂದು, ಸಿಕ್ಕಿಬಿದ್ದರೆ ಒದೆ ತಿಂದು ಸಾಗಿ ಬಂದಿದ್ದೇವೆ. ಇದು ನಮ್ಮ ಆಯ್ಕೆಯಾಗಿತ್ತೋ ಅಥವಾ ಇದನ್ನು ನಮ್ಮ ಆಯ್ಕೆಯನ್ನಾಗಿ ಮಾಡಿಕೊಳ್ಳುವ ಒತ್ತಾಯವಿತ್ತೋ ಎಂಬುದನ್ನು ಕಡ್ಡಿ ಮುರಿದಂತೆ ಹೇಳಲಾರೆ. ಆದರೆ ಈ ಹಾದಿಯ ಏರುಪೇರುಗಳೇನೇ ಇರಲಿ, ಸಾಗಿಬಂದಾಗ ದೊರಕಿದ ಉಲ್ಲಾಸವನ್ನು ನಿರಾಕರಿಸುವುದು ಆಗದ ಮಾತು. ಈ ಕಾರಣದಿಂದಲೂ ಈ ಎಲ್ಲ ಬರಹಗಳ ಕಟ್ಟಿಗೆ **ತೊಂಡುಮೇವು** ಎಂದು ಹೆಸರಿಸಲು ಹಿಂಜರಿಕೆ ಉಂಟಾಗಿಲ್ಲ.

ಕೈಮುಗಿವೆ

ಎಷ್ಟುಜನರಿಗೆ ಕೈಮುಗಿಯುವುದು? ಯಾರನ್ನು ಬಿಟ್ಟರೂ ಈ ಬೈರೇಗೌಡರನ್ನು ಮಾತ್ರ ಬಿಡುವಂತಿಲ್ಲ. ಇವರು ಅದು ಹೇಗೆ ನನಗೆ ಬಲ್ಲವರಾದರೋ ತಿಳಿಯದು. ಮುಗಿಬಿದ್ದು ಮೈದುಂಬಿದಂತೆ ಈ ಕೆಲಸ ಮಾಡಿದ್ದಾರೆ. ಈ ಬರಹಗಳನ್ನು ನಾನು ಒಗ್ಗೂಡಿಸಿ ಕೊಡಲಿಲ್ಲ. ಎಲ್ಲೆಲ್ಲಿಂದಲೋ, ಯಾರು ಯಾರಿಂದಲೋ ತಾವೇ ಹುಡುಕಿ ಜೋಡಿಸಿಕೊಂಡಿದ್ದಾರೆ. ಕೆಲವನ್ನು ಕಸದ ಬುಟ್ಟಿಯಿಂದಲೂ ತೆಗೆದಿರಬೇಕು.(ಅಂತಹವು ಅಲ್ಲೇ ಇರಬೇಕಿತ್ತು ಎಂದು ಓದುವ ನಿಮ್ಮಲ್ಲಿ ಕೆಲವರಿಗಾದರೂ ಅನ್ನಿಸೀತು) ಈ ಒತ್ತಾಸೆ ಯಾರಿಗೆ ದೊರಕುತ್ತದೆ? ಅವರಿಗೆ ಶರಣು ಎಂದು ಕೈಮುಗಿಯುತ್ತೇನೆ. ಇನ್ನು ತಂಪು ಹೊತ್ತಿನಲ್ಲಿ ನೆನೆಯಬೇಕಾದವರ ಪಟ್ಟಿ ಬಲು ದೊಡ್ಡದು. ಅವರನ್ನು ಹೆಸರಿಸಿದರೆ ಕೆಲವರಿಗೆ ಮುಜುಗರ, ಕೆಲವರಿಗೆ ಕೋಪ, ಕೆಲವರಿಗೆ ನಗು ಮತ್ತು ಕೆಲವರು ನನ್ನೊಡನೆ ಮಾತು ಬಿಟ್ಟರೂ ಬಿಟ್ಟರೆ. ಹೀಗೆ ಬಗೆಬಗೆಯಲ್ಲಿ ಅವರು ಪ್ರತಿಕ್ರಿಯೆ ತೋರುತ್ತಾರೆ. ಅವರೆಲ್ಲರೂ ನನ್ನೊಳಗೆ ಇದ್ದಾರಾಗಿ ಬೇರೆಯಾಗಿ ಅವರನ್ನು ಹೆಸರಿಸುವುದನ್ನೇ ಕೈಬಿಟ್ಟಿದ್ದೇನೆ.

ಆದರೆ ಎರಡು ಸಂಸ್ಥೆಗಳನ್ನು ಹೆಸರಿಸಲೇ ಬೇಕು. ನಾನು ಬರೆಯಲು ಕಾರಣವಾದದ್ದು ಬೆಂಗಳೂರು ವಿಶ್ವವಿದ್ಯಾಲಯದ ಅಧ್ಯಯನ ಕೇಂದ್ರ ಮತ್ತು ಕನ್ನಡ ವಿಶ್ವವಿದ್ಯಾಲಯ. ಇವೆರಡೂ ಸಂಸ್ಥೆಗಳು ಬರೆಯಲು ಒತ್ತಾಸೆ ನೀಡಿದ್ದು ಮಾತ್ರವಲ್ಲದೆ ಬರಹಕ್ಕೆ ಯಾವ ಕಡಿವಾಣವನ್ನೂ ಹಾಕಲಿಲ್ಲ ಎಂಬುದನ್ನು ನೆನೆದುಕೊಳ್ಳಬೇಕು. ಪ್ರಜಾವಾಣಿ, ಉದಯವಾಣಿ, ವಿಜಯ ಕರ್ನಾಟಕ, ಸುಧಾ, ತರಂಗ, ವಿಕ್ರಾಂತ ಕರ್ನಾಟಕ, ಮಯೂರ, ಸಾಕ್ಷಿ, ಅಂಕಣ, ಸಂಚಯ, ಶೂದ್ರ, (ಈ ಪತ್ರಿಕೆಯ ಸಂಪಾದಕರಾದ ಹೆಸರಾಂತ ಗೆಳೆಯ ಶ್ರೀನಿವಾಸ್ ಅವರನ್ನು ಹೆಚ್ಚಾಗಿ ನೆನೆಯಬೇಕು. ಕುತ್ತಿಗೆಯ ಮೇಲೆ ಕುಳಿತು ಬರೆಸಿದ್ದು ಮಾತ್ರವಲ್ಲದೆ ಅವುಗಳನ್ನು ತಮ್ಮದೇ ಆದ ಬಗೆಯಲ್ಲಿ ಅಚ್ಚು ಮಾಡಿ ಹಲವು ಬಾರಿ ನನಗೇ ಗಾಬರಿಯಾಗುವಂತೆ ಮಾಡಿದ್ದಾರೆ. ಆ ಪುರಾಣ ಬೇರೊಮ್ಮೆ ಹೇಳುವೆ.) ರುಜುವಾತು, ಸಮುದಾಯ ವಾರ್ತಾಪತ್ರ, ಮುಕ್ತ ಹೀಗೆ ಹಲವು ಪತ್ರಿಕೆಗಳ ಗೆಳೆಯರು ಇಲ್ಲಿನ ಹಲವು ಬರಹಗಳಿಗೆ ಮತ್ತು ಅವು ಬೆಳಕು ಕಾಣುವುದಕ್ಕೆ ಕಾರಣರಾಗಿದ್ದಾರೆ.

ಬಿ ರಿಪೋರ್ಟ್‌ ಹಿಂದಕ್ಕೆ ಪಡೆದ ಈ ಹಳೆಯ ಕೇಸುಗಳನ್ನು ನೀವೀಗ ಮರುಪರಿಶೀಲನೆಗೆ ಗುರಿಪಡಿಸಿರಿ. ಈ ಬರಹಗಳಲ್ಲಿ ಕೆಲವಾದರೂ ಚಿಕ್ಕವರಲ್ಲಿ ಚರ್ಚೆಗೆ ಕಾರಣವಾದರೆ ಅದಕ್ಕಿಂತ ಸಂತಸ ನನಗೆ ಬೇರೊಂದಿಲ್ಲ. ಮೆಚ್ಚುಗೆ, ಹೊಗಳಿಕೆ ನಾನು ಅಷ್ಟು ಪಡುವುದಿಲ್ಲ. ಯಾರೋ ಎಲ್ಲೋ ಹೇಳಿದ ಮಾತನ್ನು ನೆನೆಯುವುದಾದರೆ ಹೊಗಳಿಕೆ ಪೂಸಿಕೊಳ್ಳುವ ಡಿಯೋಡರೆಂಟ್ ಇದ್ದಹಾಗೆ. ಈ ಪೂಸಿಕೊಂಡದ್ದು ದಿಟವನ್ನು ಮರೆ ಮಾಡಿಹುಸಿಯನ್ನು ಮುಂಚೂಣಿಗೆ ತಂದು ಬಿಡುತ್ತದೆ ಅಲ್ಲವೇ? ಇನ್ನು ಎಲ್ಲವೂ ನಿಮಗೆ ಸೇರಿದ್ದು.

ಕೆ.ವಿ. ನಾರಾಯಣ

ಪರಿಷ್ಕೃತ ಮುದ್ರಣ ಕುರಿತು

ತೊಂಡು ಮೇವು ಎಂಬ ಹೆಸರಿನಲ್ಲಿ ಬರಹಗಳ ಒಂಬತ್ತು ಸಂಪುಟಗಳನ್ನು 2010 ರಲ್ಲಿ ಹೊರತರಲಾಗಿತ್ತು. ಈಗ ಹತ್ತನೆಯ ಸಂಪುಟವನ್ನು ನಿಮ್ಮ ಮುಂದೆ ಇಡಲಾಗುತ್ತಿದೆ. ಜೊತೆಗೆ ಹಿಂದಿನ ಒಂಬತ್ತು ಸಂಪುಟಗಳನ್ನು ಕೊಂಚ ಬದಲಾವಣೆಗಳೊಂದಿಗೆ ಮತ್ತೆ ಅಚ್ಚು ಮಾಡಿ ಪ್ರಕಟಿಸಲಾಗುತ್ತಿದೆ. ಈ ಏಳು ವರುಶಗಳಲ್ಲಿ ಆಗಿರುವ ಬದಲಾವಣೆಯೊಂದಿದೆ. ಆಗ ಅಲ್ಲಿಯವರೆಗೆ ಬರೆದಿದ್ದರ ಬಗೆಗೆ ನಂಬಿಕೆ ಕಡಿಮೆಯಾಗಿತ್ತು. ಈಗ ಬರೆಯುವುದರ ಬಗೆಗೇ ನಂಬಿಕೆ ಕಡಿಮೆಯಾಗಿದೆ. ಇದು ಸಿನಿಕತನವೆಂದು ಅನಿಸಲೂಬಹುದು. ಆದರೆ ನನಗೆ ಹಾಗನ್ನಿಸುತ್ತಿಲ್ಲ. ಬರವಣಿಗೆಯನ್ನು ಅದರ ತಾಳಿಕೆಯ ಗುಣಕ್ಕಾಗಿಯೇ ಒಪ್ಪಿಕೊಳ್ಳುವ ಕಾಲವೊಂದಿತ್ತು. ಈಗ ಹಾಗಿಲ್ಲ. ಬರೆದದ್ದು ಮಾತಿನಂತೆಯೇ ಹುಟ್ಟಿದ ಕೂಡಲೇ ಸಾಯುತ್ತಿದೆ. ಎಷ್ಟೋ ವೇಳೆಯಲ್ಲಿ ಯಾರಿಗಾಗಿ ಬರೆದದ್ದೋ ಅವರಿಗೆ ತಲುಪುವ ಹೊತ್ತಿಗೆ ಅದರ ಚಹರೆಗಳು ಬದಲಾಗಿಬಿಡುತ್ತಿವೆ. ಇದೆಲ್ಲವನ್ನೂ ಕಂಡರೆ ಬರೆವಣಿಗೆಗೆ ಒಂದು ಹೆಚ್ಚಿನ ಮನ್ನಣೇ ಇದೆಯೆಂದು ಈಗ ನನಗೆ ತೋರುತ್ತಿಲ್ಲ.

ಅಲ್ಲದೆ ಬರೆಯುವುದರ ಗುರಿಯೇ ಮಾತಿಗೆಳೆಯುವುದು; ಸಂವಾದವನ್ನು ಹುಟ್ಟಿ ಹಾಕುವುದು. ಈ ನಂಬಿಕೆ ಕೂಡ ಈಗ ಇಲ್ಲವಾಗುತ್ತಿದೆ. ಎದುರು ನಿಲುವುಗಳಿಗೆ ಮಾತುಕತೆಗಳಲ್ಲಿ ಜಾಗವಿರುತ್ತದೆ. ಅವು ಒಪ್ಪದಿರುವ, ಮೆಚ್ಚದ ಮಾತುಗಳನ್ನೂ ಕೇಳಲು ಹಿಂಜರಿಯುವುದಿಲ್ಲ. ಹಾಗೆಯೇ ಎಲ್ಲರೂ ಒಪ್ಪುವ ಇಲ್ಲವೇ ಮೆಚ್ಚುಮಾತುಗಳನ್ನೇ ಆಡಬೇಕೆಂಬ ಹಪಾಹಪಿ ಇರುವುದಿಲ್ಲ. ಈಗ ಹಾಗಿದೆ ಎಂದು ನನಗೆ ಅನ್ನಿಸುತಿಲ್ಲ. ಎಲ್ಲರೂ ಒಪ್ಪುವುದನ್ನೇ, ಮೆಚ್ಚುವುದನ್ನೆ ಬರೆಯುವ ತವಕವಿದೆ. ಹಾಗೆಯೇ ಓದುವವರೂ ತಮಗೆ ಒಪ್ಪಿಗೆ ಆಗುವುದನ್ನೇ ಓದಲು ಮುಂದಾಗುತ್ತಿದ್ದಾರೆ. ನನ್ನ ಈ ಮಾತುಗಳಿಗೆ ಬುಡವಿಲ್ಲವೆಂದು ಕೆಲವರಿಗೆ ಅನ್ನಿಸಲೂಬಹುದು. ಸರಿಯೇ ಸರಿ. ಆದರೆ ಈ ಬಿಕ್ಕಟ್ಟು ನನ್ನ ತಿಳಿವಿನ ನೆಲೆಗೆ ಬಂದಿದ್ದರಲ್ಲಿ ಸಟೆಯಿಲ್ಲ.

ಇಂತಹ ಹೊತ್ತಿನಲ್ಲಿ ತೊಂಡುಮೇವು ಬರಹಗಳು ಮತ್ತೆ ಅಚ್ಚಾಗುತ್ತಿರುವುದು, ಏಳುವರುಶಗಳಿಂದ ಈಚೆಗೆ ಬರೆದದ್ದು ಇನ್ನೊಂದು ಕಂತೆಯಾಗಿ ಮೈದಳೆಯುತ್ತಿರುವುದು ಮುಜುಗರದ ಸಂಗತಿಯೇ ಸರಿ. ಆದರೆ ಗೆಳೆಯ ಡಾ. ಬೈರೇಗೌಡರು ಈ ಕೆಲಸಕ್ಕೆ ಮುಂದಾಗಿದ್ದಾರೆ. ಅವರಿಗೆ ಒಳಿತಾಗಲಿ ಎಂದು ಕೋರುವುದಷ್ಟೇ ನನ್ನ ಕೆಲಸ.

ಕೆ.ವಿ. ನಾರಾಯಣ

ತೊಂಡುಮೇವು ಹೊರೆಹೊತ್ತು...

ಮೂರು ವರ್ಷಗಳ ಹಿಂದಿನ ಮಾತು. ಕೆ.ವಿ.ಎನ್. ಮೇಷ್ಟ್ರು ಮೈಸೂರಿನಲ್ಲಿದ್ದರು. ಸಕಲ ಪುರಾತನರೆಂದು ನಾವೆಲ್ಲ ಪ್ರೀತಿಯಿಂದ ಕರೆಯುವ ಪ್ರೊ. ಶಿವರಾಮಯ್ಯ, ಯಂಗ್ ರುದ್ರ ಎಂದೇ ಖ್ಯಾತಿ ಪಡೆದ ಕೆ.ವೈ.ಎನ್. ಮತ್ತು ನಾನು ಮೂವರೂ ಕೂಡಿ ಡಾ. ಎಲ್. ಬಸವರಾಜು ಅವರನ್ನು ಪಂಪನ ಆದಿಪುರಾಣ ಪುಸ್ತಕ ಬಿಡುಗಡೆಗೆ ಆಮಂತ್ರಿಸಲು ಹೋಗಿದ್ದಾಗ ಕೆ.ವಿ.ಎನ್. ಮೇಷ್ಟ್ರ ಮನೆಗೂ ಭೇಟಿ ನೀಡಿದೆವು. ಕೆ.ವಿ.ಎನ್. ಬರವಣಿಗೆಯನ್ನು ಒಂದು ಕಡೆ ತಂದರೆ! ಬಯಕೆಯನ್ನು ಹತ್ತಿಕ್ಕಲಾರದೆ ಕೇಳಿಯೇಬಿಟ್ಟೆ. ನೋಡುವ ಎಂದಷ್ಟೇ ಕೆ.ವಿ.ಎನ್. ಹೇಳಿದರು. ಮೈಸೂರಿಗೆ ಹೋದಾಗಲೆಲ್ಲ ಸಿ.ಐ.ಐ.ಎಲ್.ನಲ್ಲಿ ಮೇಷ್ಟ್ರನ್ನ ಭೇಟಿಯಾಗುತ್ತಿದ್ದೆ. ಅಲ್ಲಿಯೂ ಪ್ರಕಟಣೆಯ ವಿಷಯ ಮಾತನಾಡಲು ಸಾಧ್ಯವಾಗಲೇ ಇಲ್ಲ. ಮತ್ತೊಮ್ಮೆ ಮೇಷ್ಟ್ರ ಮನೆಗೆ ಡಾ. ಶಿವಪ್ಪ ಅವರೊಡನೆ ಹೋದಾಗ ಪಟ್ಟುಬಿಡದೆ, ಸರ್ ನಿಮ್ಮೆಲ್ಲ ಬರವಣಿಗೆಯನ್ನು ಒಂದೆಡೆ ಕಲೆಹಾಕಿ ತರೋಣ, ಒಪ್ಪಿಗೆ ಕೊಡಿ ಎಂದು ದುಂಬಾಲು ಬಿದ್ದೆ. ಹಸಿರು ನಿಶಾನೆ ತೋರಿದರು. ಈ ಕಾರ್ಯಕ್ಕೆ ಒತ್ತಾಸೆಯಾಗಿ ನಿಂತವರು ಶ್ರೀಮತಿ ಮೇಡಂ. ಕೆ.ವಿ.ಎನ್. ಮೇಷ್ಟ್ರು, ಶ್ರೀಮತಿ ಮೇಡಂ ಇಬ್ಬರಿಗೂ ಅನಂತಾನಂತ ನಮನಗಳು.

ಡಾ. ಕೆ.ವೈ.ಎನ್., ಪ್ರೊ. ಶಿವಪ್ಪ ಮುಂತಾದವರು ಸೇರಿ ವಿವೇಕ ಬಳಗದ ಮೂಲಕ ಪ್ರಕಟಿಸಿದ್ದ ಬೇರು ಕಾಂಡ ಚಿಗುರು ಪುಸ್ತಕದ ಅಕ್ಷರ ಜೋಡಣೆಯಾಯ್ತು. ಸಂಚಯದ ಡಿ.ವಿ. ಪ್ರಹ್ಲಾದ್, ಪುಸ್ತಕ ಮನೆ ಖ್ಯಾತಿಯ ಚಿಂತಕ ಹರಿಹರಪ್ರಿಯ, ಶೂದ್ರ ಪತ್ರಿಕೆಯ ಶ್ರೀನಿವಾಸ್, ಅನ್ವೇಷಣ ಪತ್ರಿಕೆಯ ಆರ್.ಜಿ. ಹಳ್ಳಿ ನಾಗರಾಜ್ ಅವರ ಮನೆಗಳಲ್ಲಿದ್ದ ಅಂಕಣ, ಶೂದ್ರ, ಸಂಚಯ, ಮುಕ್ತ, ಸಮುದಾಯ ವಾರ್ತಾಪತ್ರ ಹೀಗೆ ಹಲವು ಮೂಲಗಳಿಂದ ಕೆ.ವಿ.ಎನ್. ಬರೆಹಗಳನ್ನು ಕಲೆಹಾಕಿದ್ದಾಯ್ತು. ಮೇಲೆ ಹೆಸರಿಸಿರುವ ಎಲ್ಲ ಮಹನೀಯರಿಗೂ ನಮಸ್ಕಾರಗಳು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಡಾ. ಅಶೋಕ ಕುಮಾರ್ ರಂಜೆರೆ, ಡಾ. ಪಿ. ಮಹಾದೇವಯ್ಯ, ಡಾ. ಸುಜ್ಞಾನಮೂರ್ತಿ, ರವೀಂದ್ರ, ರಾಜಶೇಖರ್, ಶಿವಮೊಗ್ಗದ ಡಿ.ಎಸ್. ನಾಗಭೂಷಣ, ಬೆಂಗಳೂರಿನ

ಡಾ. ಬಸವರಾಜ ಕಲ್ಗುಡಿ, ಎಂ.ಎಸ್. ಆಶಾದೇವಿ, –ಹೀಗೆ ತೊಂಡುಮೇವು ಸಂಪುಟಗಳು ರೂಪಗೊಳ್ಳುವಲ್ಲಿ ನೆರವಾದವರು ಅನೇಕರು. ಅಭಿನವ ರವಿಕುಮಾರ್ ಧ್ವನ್ಯಾಲೋಕ ಮತ್ತು ಅಂಕೆ ತಪ್ಪಿದ ಆರ್ಥರೋ ಊಯಿ ಕೃತಿಗಳ ಸಾಫ್ಟ್ ಮತ್ತು ಹಾರ್ಡ್ ಕಾಪಿ ನೀಡಿ ಸಹಕರಿಸಿದರು. ಎಲ್ಲರನ್ನೂ ಗೌರವದಿಂದ ಸ್ಮರಿಸುವೆ.

ಡಾ. ಸಿ.ಪಿ. ನಾಗರಾಜ್, ಡಾ. ರಾಮಲಿಂಗಪ್ಪ ಟಿ. ಬೇಗೂರು, ಡಾ. ರಂಗನಾಥ ಕಂಟನಕುಂಟೆ, ಶ್ರೀ ಜಯಶಂಕರ್, ಪ್ರದೀಪ್ ಮಾಲ್ಗುಡಿ, ಬ್ರಹ್ಮಾನಂದ್ ಇವರೆಲ್ಲರೂ ಕರಡು ತಿದ್ದುವಲ್ಲಿ ನೆರವಾಗಿದ್ದಾರೆ. ಅವರ ಸೇವೆಯನ್ನು ಕೃತಜ್ಞತಾಪೂರ್ವಕ ಸ್ಮರಿಸುತ್ತೇನೆ.

ಕಳೆದ ಎರಡು ತಿಂಗಳುಗಳಿಂದ ಬೇರೆಲ್ಲಾ ಕೆಲಸಗಳನ್ನೂ ಬದಿಗಿಟ್ಟು ಒಂದು ವ್ರತದಂತೆ ನನ್ನೊಡನೆ ತೊಡಗಿಸಿಕೊಂಡಿರುವ ಡಾ. ಆರ್. ಚಲಪತಿ ಅವರಿಗೆ ಹೇಗೆ ಕೃತಜ್ಞತೆ ಸಲ್ಲಿಸಲಿ?

ಕೆ.ವಿ.ಎನ್. ಅವರ ತೊಂಡುಮೇವು ಸರಣಿಗೆ ಮುಖಪುಟ ಬರೆದ ಸುಧಾಕರ ದರ್ಬೆ, ಡಿ.ಟಿ.ಪಿ. ಮಾಡಿದ ಬಿ.ಕೆ. ಶೋಭಾರಾಣಿ, ಮಂಗಲಾ ಗಣೇಶ್, ಸವಿತಾ, ಜೋಸ್ಪಿನ್, ಸಿಸಿಲಿಯಾ ಎಲ್ಲರನ್ನು ನೆನೆವೆ. ಮುದ್ರಣ ಕಾರ್ಯದ ಜವಾಬ್ದಾರಿ ಹೊತ್ತ ವಿಶ್ವಾಸ್ ಪ್ರಿಂಟ್ಸ್ ಮತ್ತು ಸ್ನೇಹ ಪ್ರಿಂಟ್ಸ್ ಮಾಲೀಕರಾದ ಟಿ.ಎಲ್. ವೆಂಕಟೇಶ ಮತ್ತು ಮಂಜುನಾಥ್, ಡಿ.ಟಿ.ಪಿ. ವಿಭಾಗದ ಪೂರ್ಣಿಮಾ, ವಿ. ರಾಜ್ ಇವರುಗಳ ಸಹಕಾರವನ್ನು ಸ್ಮರಿಸದಿರಲಾರೆ.

ಕೆ.ವಿ.ಎನ್. ಅವರ ಈ ವರೆಗಿನ ಬರೆಹಗಳನ್ನು ಒಂದೆಡೆ ಕಲೆಹಾಕಿ ತೊಂಡುಮೇವು ಹೆಸರಿನಲ್ಲಿ ಒಂಬತ್ತು ಕಂತೆಗಳನ್ನು ಕಟ್ಟಿಕೊಟ್ಟಿದ್ದೇನೆಂಬ ಹೆಮ್ಮೆ ನನ್ನದು. ನನ್ನ ಸಂತೋಷಕ್ಕೆ ಕಾರಣರಾದ ಎಲ್ಲರಿಗೂ ಕೃತಜ್ಞನಾಗಿದ್ದೇನೆ.

(ಈ ಹಿಂದೆ ಪ್ರಕಟವಾಗಿದ್ದ ಒಂಬತ್ತು ಸಂಪುಟಗಳಿಗೆ ಬರೆದದ್ದು)

ಇದು ತೊಂಡುಮೇವಿನ ಕಂತೆಯ ಹತ್ತನೇ ಸಂಪುಟ... ಏನ ಬರೆಯಲಿ, ಮತ್ತೊಂದು ಸಂಪುಟದ ಜೊತೆಗೆ ಕೆ.ವಿ.ಎನ್. ಅವರ ಹತ್ತೂ ಸಂಪುಟಗಳನ್ನು ಓದುಗರ ಕೈಲಿಡಲು ಸಂತೋಷಿಸುತ್ತೇನೆ.

ಎಂ. ಬೈರೇಗೌಡ

ತೊಂಡುಮೇವು 10

ಪರಿವಿಡಿ

ಭಾಗ– 1

ಭಾಗ–2

ಎಲ್ಲರಿಗೂ ಇರುವ ಹಕ್ಕುಗಳು

ಜನರಾಳ್ವಿಕೆಯಲ್ಲಿ ತನಗೆ ಸರಿ ಎನಿಸಿದ್ದನ್ನು ಹೇಳುವ, ಬರೆಯುವ, ತೋರಿಸುವ ಹಕ್ಕು ಎಲ್ಲರಿಗೂ ಇರುತ್ತದೆ ಎಂಬ ನಂಬಿಕೆಯಿದೆ. ಹಾಗೆಂದು ನಮಗೆ ಕಲಿಸಿಕೊಡಲಾಗಿದೆ. 'ನೀನು ಹೇಳುವುದನ್ನು ನಾನು ಒಪ್ಪುವುದಿಲ್ಲ; ಆದರೆ ನಿನಗೆ ಇರುವ ಹೇಳುವ ಹಕ್ಕನ್ನು ಉಳಿಸಿಕೊಡಲು ನಾನು ನನ್ನ ಉಸಿರನ್ನೇ ಮುಡಿಪಿಡುವೆ' ಎಂದು ಹಿರಿಯ ಚಿಂತಕರೊಬ್ಬರು ಹೇಳಿದ ಮಾತನ್ನು ಮತ್ತೆಮತ್ತೆ ನೆನಪಿಗೆ ತಂದು ಕೊಡಲಾಗುತ್ತಿದೆ. ಇಂಡಿಯಾದಲ್ಲಿ ದಿನದಿನವೂ ಜನರ ಈ ಹಕ್ಕು ಅಡೆತಡೆಗಳನ್ನು ಎದುರಿಸುತ್ತಲೇ ಇದೆಯೆಂಬ ದುಗುಡ ದುಮ್ಮಾನಗಳ ಮಾತುಗಳು ಕೇಳಿಬರುತ್ತಿವೆ. ಇದರ ಮುಂದುವರಿಕೆಯಾಗಿ ಕೆಲವೊಮ್ಮೆ ದಿಗಿಲುಗಳು ಕಾಣಿಸಿಕೊಳ್ಳುತ್ತಿವೆ. ಈಚಿನ ವಾರಗಳಲ್ಲಿ ಈ ನಿಟ್ಟಿನಲ್ಲಿ ಮಾತುಗಳ ಮಳೆ ಸುರಿದಿದೆ. ಪುಟಗಟ್ಟಲೆ ಬರಹ ಮೈತಳೆದಿದೆ. ಬಲ್ಲವರು ಹೇಳುತ್ತಿರುವ ಮಾತುಗಳ ತಿರುಳು ಹೀಗಿದೆ: 'ನಾಡಿನಲ್ಲಿ ಸಹಿಸಿಕೊಳ್ಳುವ ನೆಲೆ ಹಿಂದೆ ಸರಿದಿದೆ. ತನಗೆ ಒಪ್ಪಿಗೆ ಆಗದುದನ್ನು ಹತ್ತಿಕ್ಕುವ ಬಗೆ ಮುನ್ನೆಲೆಗೆ ಬಂದಿದೆ. ಇದರಿಂದ ಎಲ್ಲೆಲ್ಲೂ ದಿಗಿಲು ತುಂಬಿದೆ. ಬಲ್ಲವರು ಬಾಯಿಮುಚ್ಚಿಕೊಂಡಿರುವಂತೆ ಒತ್ತಾಯಿಸಲಾಗುತ್ತಿದೆ.' ಬುದ್ಧಿಜೀವಿಗಳು, ಕಲಾವಿದರು ಹಕ್ಕು ಕಳೆದುಕೊಂಡ, ಹಕ್ಕನ್ನು ಬಳಸಲಾಗದ ನೆಲೆಯಲ್ಲಿ ಇದ್ದಾರೆ ಇಲ್ಲವೇ ಅವರನ್ನು ಅಂತಹ ತುದಿಗೆ ಈಗ ದಾಟಿಸಲಾಗುತ್ತಿದೆ ಎಂಬ ಮಾತುಗಳು ಈಗ ಕೇಳಿಬರುತ್ತಿವೆ.

ಹಕ್ಕು ಮೊಟಕುಗೊಂಡಂತೆ ತೋರುವ ಎಲ್ಲ ನಿರೂಪಣೆಗಳನ್ನು ಒಂದೇ ಚೀಲದಲ್ಲಿ ಇರಿಸಿ ನೋಡುವ ಬಗೆಯೊಂದು ಈಗ ಚಾಲ್ತಿಗೆ ಬಂದಿದೆ. ದಿನದಿನವೂ ಒಂದಲ್ಲ ಒಂದು ಇಂತಹ ನಿರೂಪಣೆಗಳು ಮುಂಚೂಣಿಯಲ್ಲಿ ಕಾಣಿಸಿಕೊಳ್ಳುವುದರಿಂದ ಈ ಕುರಿತ ಎಲ್ಲ ಮಾತುಕತೆಗಳೂ ಒಂದೇ ಚೌಕಟ್ಟಿನಲ್ಲಿ ಸಾಗುತ್ತಿರುವುದನ್ನು ನೋಡುತ್ತೇವೆ. ಎಲ್ಲ ಕಡೆಯೂ ಕೇಳಿಸುತ್ತಿರುವ ದನಿಯೊಂದೇ: 'ನಮ್ಮ ಸಮಾಜದಲ್ಲಿ ಸಹಿಸಿಕೊಳ್ಳುವ, ತಾಳ್ಮೆಯ ನೆಲೆಗಳು ಕುಸಿದು ಹೋಗಿವೆ. ಸರಿತಪ್ಪುಗಳನ್ನು ತೂಗಿ ನೋಡದ, ತಮಗೆ ಒಪ್ಪಿಗೆಯಾಗದ ಮಾತನ್ನು ಹೇಳಿದವರ ಬಾಯಿಕಟ್ಟಿಸುವ ಹುನ್ನಾರಗಳು ಹೆಚ್ಚಾಗುತ್ತಿವೆ. ಹಾಗಾಗಿ ಜನರಾಳ್ವಿಕೆಯಲ್ಲಿ ದೊರಕಬೇಕಾದ ಕಾಪು ಎಲ್ಲರಿಗೂ ದೊರಕುತ್ತಿಲ್ಲ.'

ಇದೆಲ್ಲವನ್ನು ಕೇಳಿದಾಗ ಸಮಾಜದಲ್ಲಿ ತಾಳ್ಮೆಯ ನೆಲೆಗಳು, ಸಹಿಸಿಕೊಳ್ಳುವ ನೆಲೆಗಳು ಹಿಂದೆ ಗಟ್ಟಿಯಾಗಿದ್ದವೆಂದು ಈಗ ಅವು ಸಡಿಲಗೊಂಡಿರುವಂತೆ ತಿಳಿಯಬೇಕಾಗುತ್ತದೆ. ಆದರೆ ನಮಗೆ ಗೊತ್ತಿರುವ ಚರಿತ್ರೆಯ ಹಾಳೆಗಳನ್ನು ಓದಿದರೆ

ಹೀಗೆ ತಾಳಿಕೊಳ್ಳದ, ಸಹಿಸಿಕೊಳ್ಳದ ನೆಲೆಗಳು ಎಂದಿನಿಂದಲೂ ಇದ್ದವೆಂಬುದು ಗೊತ್ತಾಗುವಂತಿದೆ. ನಮಗೆ ಒಪ್ಪಿಗೆ ಆಗದುದನ್ನು ಹಾಳುಗೆಡಹುವ, ಅದರ ದನಿಯನ್ನು ಉಡುಗಿಸುವ, ಹುಟ್ಟಡಗಿಸುವ ಕೆಲಸಗಳು ಎಲ್ಲ ಕಾಲದಲ್ಲೂ ಇದ್ದದ್ದೇ. ಅಂದರೆ ಈ ಸಮಾಜದ ಕಟ್ಟೋಣದಲ್ಲೇ ಅದರ ಬೇರುಗುಣವಾಗಿ ತಾಳ್ಮೆ, ಸಹನೆಗಳು ಇರಲೇ ಇಲ್ಲ. ಅವನ್ನು ಇಲ್ಲಿ ಬದುಕುವ ಜನರು, ಆಳುವವರು ಎಚ್ಚರಿಕೆಯಿಂದ ಕಲಿತು ಬಳಸಬೇಕಾದ ಗುಣಗಳಾಗಿವೆ. ಅಂದರೆ ಅಸಹನೆಯೇ ಈ ಸಮಾಜದ ಬೇರುಗುಣವಾಗಿದೆ. ಈ ಅಸಹನೆಯನ್ನು ಮೀರುವ ತಾಳ್ಮೆ ಸಹನೆಗಳನ್ನು ಮರೆಯದೆ ಬೆಳೆಸಬೇಕಾದ ಹೊಣೆ ಈ ಸಮಾಜದ ಒಳಿತನ್ನು ಬಯಸುವವರ ಮೇಲಿದೆ.

ಆದರೆ ನಾವು ಈ ಹೊಣೆಯನ್ನು ಹೊತ್ತಿದ್ದೇವೆಯೇ? ಒಂದೆಡೆ ಜನರಲ್ಲಿ ಸಹನೆ, ತಾಳ್ಮೆಗಳು, ಜೊತೆಯವರನ್ನು ಸಹಿಸುವಿಕೆ ಮುಂತಾದವು ಬೆಳೆಯಬೇಕಾಗಿದೆ. ಆದರೆ ಆ ಕಡೆಗೆ ಒಂದು ದಿಟ್ಟ ಹೆಜ್ಜೆಯನ್ನು ನಾವು ಇಟ್ಟಂತಿಲ್ಲ. ಇನ್ನೊಂದೆಡೆ ಅಸಹನೆ ಬೆಳೆಯಲು ಒತ್ತಾಸೆಯಾಗುವ ನೆಲೆಗಳನ್ನು ಗಟ್ಟಿಗೊಳಿಸುತ್ತಿದ್ದೇವೆ. ಕಲಿಕೆ, ಆಡಳಿತ, ನ್ಯಾಯವಿತರಣೆ, ಬದುಕುವ ಅವಕಾಶ ಇವೇ ಮುಂತಾದ ವಲಯಗಳಲ್ಲಿ ಕೆಲವರಿಗೆ ಒತ್ತಾಸೆ ಹೆಚ್ಚಾಗಿ ದೊರಕಿದರೆ ಹೆಚ್ಚು ಜನರಿಗೆ ಇವೆಲ್ಲವೂ ಕೈಗೆಟುಕದೆ ಉಳಿದುಬಿಟ್ಟಿವೆ. ಅದರಿಂದ ಜನರಲ್ಲಿ ಪಡೆದುಕೊಂಡದ್ದಕ್ಕಿಂತ ಕಳೆದುಕೊಂಡ ಅನಿಸಿಕೆಯೇ ಬಲವಾಗ ತೊಡಗಿದೆ. ವರುಶಗಳು ಕಳೆದಂತೆ, ತಲೆಮಾರುಗಳು ಕಳೆದಂತೆ ಈ ಅನಿಸಿಕೆ ಕಡಿಮೆಯಾಗುವಂತೆ ತೋರುತ್ತಿಲ್ಲ. ಇದರಿಂದ ಹಲವು ಪರಿಣಾಮಗಳು ಆದಂತೆ ತೋರುತ್ತಿದೆ. ಒಂದೆಡೆ ತಮ್ಮ ದನಿ ಕೇಳುವವರೇ ಇಲ್ಲವೆಂಬ ಅನಿಸಿಕೆ ಯಾರಲ್ಲಿ ಬಲಗೊಳ್ಳುತ್ತಿದೆಯೋ ಅವರಲ್ಲಿ ಒಂದೋ ಹತಾಶೆ ಇಲ್ಲವೇ ಒಡಲ ಕುದಿತ ಒಡಮೂಡುತ್ತಿದೆ. ಇನ್ನೊಂದೆಡೆ ಯಾರ ದನಿಗೆ ಹೆಚ್ಚಿನ ಬಲ, ಕಸುವುಗಳು ಒದಗಿ ಬರುತ್ತಿದೆಯೋ ಅವರು ತಮಗಿರುವ ಅವಕಾಶ ಮತ್ತು ಸವಲತ್ತುಗಳನ್ನು ತಮ್ಮ ಕೈಹಿಡಿಯಲ್ಲಿ ಬಿಡದಂತೆ ಇರಿಸಿಕೊಳ್ಳುವ ದಾರಿಗಳನ್ನು ಹುಡುಕುತ್ತಿದ್ದಾರೆ; ಅಂತಹ ದಾರಿಗಳನ್ನು ಕಂಡುಕೊಳ್ಳುತ್ತಿದ್ದಾರೆ. ಅಲ್ಲದೆ ತಮ್ಮದೇ ಸರಿಯಾದ ದಾರಿ; ತಮ್ಮ ಮೂಗಿನ ನೇರಕ್ಕೇ ಎಲ್ಲವೂ ಇರಬೇಕೆಂಬ ಹಟವನ್ನು ಬೆಳೆಸಿಕೊಳ್ಳುತ್ತಿದ್ದಾರೆ.

ಇಂತಹ ಬಿಕ್ಕಟ್ಟುಗಳಿರುವ ಸಮಾಜದಲ್ಲಿ ಸರಿಯಾದುದನ್ನು ನುಡಿಯಲು, ಬರೆಯಲು, ತೋರಿಸಲು ಇರುವ ಹಕ್ಕಿಗೆ ಅಡ್ಡಿಗಳಾಗುತ್ತಿವೆ ಎಂಬ ಮಾತಿಗೆ ಹಲವು ತಿರುಳುಗಳು ಇರುತ್ತವೆ. ಮೇಲುಕೀಳು ಮತ್ತು 'ನಾವು' ಮತ್ತು 'ಅವರು' ಎಂಬ ನೆಲೆಗಳಲ್ಲಿ ಬೆಳೆಯುತ್ತಿರುವ ಸಮಾಜದಲ್ಲಿ ಇಂತಹ ಹಕ್ಕುಗಳಿಗೆ ಅಡ್ಡಿಯುಂಟಾಗುತ್ತದೆ ಎಂಬ ಮಾತು ಮುಂಚೂಣಿಯಲ್ಲಿ ಕೇಳಿದರೆ ಅಂತಹ ಮಾತನ್ನು ಹೇಳುವವರ ದನಿ ಗಟ್ಟಿಯಾದುದೇ ಆಗಿರುತ್ತದೆ. ಆದರೆ ಅವರ ನೆರೆಹೊರೆಯಲ್ಲೇ ತಮಗೆ ಸರಿ ಎನಿಸಿದ್ದನ್ನು ಹೇಳಲು, ತಮಗೆ ಬೇಕಾದುದನ್ನು ಗಟ್ಟಿಯಾಗಿ ಕೇಳಲು ದನಿಯೇ ಇಲ್ಲದವರು ಇರುತ್ತಾರೆ. ಅವರಿಗೆ ತಮ್ಮ ಹಕ್ಕುಗಳನ್ನು ಕಸಿದುಕೊಂಡಿದ್ದಾರೆ ಎಂಬ ಅನಿಸಿಕೆ ಕೂಡ ಮೂಡುವುದಿಲ್ಲ. ಇದಲ್ಲದೆ ಇನ್ನೂ ಒಂದು ಬಗೆಯಲ್ಲಿ ಜನರಲ್ಲಿ ಈ ಹಕ್ಕುಗಳು ಕೆಲಸಕ್ಕೆ ಬಾರದಂತಾಗುವುದುಂಟು. ನೀವು ನಿಮಗೆ ಸರಿ ಎನಿಸಿದ್ದನ್ನು ಹೇಳಿದಾಗ

ಅದನ್ನು ಕೇಳಿಸಿಕೊಳ್ಳುವವರು ಕಿವುಡರಾದರೆ ಇಲ್ಲವೇ ಕಿವುಡರಂತೆ ನಟಿಸಿದರೆ ಏನು ಮಾಡುವಿರಿ? ಆಗ ಹೇಳಲು, ಬರೆಯಲು ಅಡ್ಡಿಗಳಿರುವುದಿಲ್ಲವಾದರೂ ಹೇಳಿದ್ದು, ಬರೆದದ್ದು ಕೆಲಸಕ್ಕೆ ಬಾರದಂತಾಗಿರುತ್ತದೆ. ಸಮಾಜ ಈ ಬಗೆಯಲ್ಲೂ ಈ ಹಕ್ಕನ್ನು ಬಳಸಲು ಅನುವು ಮಾಡಿಕೊಟ್ಟರೂ ಅದು ಕೆಲಸಕ್ಕೆ ಬಾರದಂತೆ ಮಾಡುವ ಹುನ್ನಾರವನ್ನೂ ನಡೆಸುತ್ತಿರುತ್ತದೆ.

ಇನ್ನೂ ಒಂದು ದಿಕ್ಕಿನಿಂದ ನೋಡೋಣ. ಈಗಿರುವ ಕೂಗು ಏನು? ಈ ಸಮಾಜದಲ್ಲಿ ಅಸಹನೆ ಹೆಚ್ಚುತ್ತಿದೆ; ತಮಗೆ ಸರಿ ಎನಿಸದೇ ಇರುವುದನ್ನು, ತಾವು ಒಪ್ಪದೆ ಇರುವುದನ್ನು ಹತ್ತಿಕ್ಕಲು ಮುನ್ನುಗುವವರು ಹೆಚ್ಚುತ್ತಿದ್ದಾರೆ; ಇದರಿಂದ ಸಮಾಜದ ಒಳಿತನ್ನು ಬಯಸುವವರ ದನಿ ಉಡುಗುತ್ತಿದೆ ಎಂದು ತಾನೆ? ಸರಿ ಇದನ್ನು ದಿಟ ಎಂದು ಒಪ್ಪೋಣ. ತಮಗೆ ಒಪ್ಪಿತವಲ್ಲದ ಮಾತಿಗೆ ಬರಹಕ್ಕೆ ಅಡ್ಡಿಯಾಗುವ ಎಲ್ಲ ಪ್ರಸಂಗಗಳನ್ನೂ ಒಂದೇ ಚೀಲದಲ್ಲಿ ಇರಿಸಿ ನೋಡುವುದು ಸರಿಯಲ್ಲ. ಕೆಲವೊಮ್ಮೆ ಹೀಗೆ ತಿರುಗಿ ಬೀಳುವವರು ದನಿ ಕಳೆದುಕೊಂಡವರಾದರೆ ಮತ್ತೆ ಕೆಲವೊಮ್ಮೆ ಯಾರ ಮಾತಿಗೆ ಚಲಾವಣೆ, ಬೆಲೆ ಇರುತ್ತದೋ, ಯಾರ ಮಾತು ನಡೆಯುತ್ತದೋ ಅವರೇ ಈ ಹತ್ತಿಕ್ಕುವ ಕೆಲಸದಲ್ಲಿ ತೊಡಗಿರುತ್ತಾರೆ. ಇಂತಹ ಎಡೆಗಳಲ್ಲಿ ಯಾವಾಗ ಆಳುವ ಸರಕಾರ, ಕಾನೂನು ಪಾಲಕರು, ನ್ಯಾಯನೀಡುವವರು ಯಾರ ಪರವಾಗಿ ನಿಲ್ಲುತ್ತಾರೆ ಎಂದು ನಿಕ್ಕಿಯಾಗಿ ಹೇಳಲು ಆಗುವುದಿಲ್ಲ. ಈ ಇಬ್ಬಂದಿ ನಡೆಗೆ ನೂರಾರು ಉದಾಹರಣೆಗಳನ್ನು ಎತ್ತಿ ಹೇಳಬಹುದು. ಹಾಗಾಗಿ ಹೇಳುವ, ಬರೆಯುವ, ತೋರಿಸುವ ಹಕ್ಕುಗಳಿಗೆ ಅಡ್ಡಿಯುಂಟಾದ ನಿರೂಪಣೆಗಳನ್ನೆಲ್ಲ ಒಂದೇ ಬಗೆಯಲ್ಲಿ ನೋಡುವುದಾಗಲೀ, ಅಲ್ಲೆಲ್ಲಾ ಒಂದೇ ಮಾದರಿಯ ನಡೆಗಳು ಇರುತ್ತವೆ ಎಂದು ವಾದಿಸುವುದಾಗಲೀ ಸರಿಯಲ್ಲವೆಂದೇ ತೋರುತ್ತದೆ.

ಈ ಅಡ್ಡಿಯುಂಟುಮಾಡುವ ಕಡೆಯಲ್ಲಿ ಇನ್ನೂ ಒಂದು ಸಂಗತಿ ಅಡಗಿರುತ್ತದೆ. ಯಾರೋ ಏನೋ ಹೇಳಿದರು, ಬರೆದರು ಎಂದುಕೊಳ್ಳಿ. ಅದು ತಮಗೆ ಒಪ್ಪಿತವಲ್ಲ; ಅದು 'ನಮ್ಮ' ಮನಸ್ಸಿಗೆ ನೋವುಂಟು ಮಾಡಿದೆ ಎಂದು ಹೇಳಿ ಅದನ್ನು 'ಅಳಿಸಲು', ಹಾಗೆ ಹೇಳಿದವರಿಗೆ ತಕ್ಕ ಶಾಸ್ತಿ ಮಾಡಲು ಬೀದಿ ಜಗಳಕ್ಕೆ ಇಳಿಯುತ್ತಾರೆ ಎಂದುಕೊಳ್ಳಿ.ಅವರೆಲ್ಲ ತಾವು ಕೇಳಿಸಿಕೊಂಡದ್ದನ್ನು ಓದಿದ್ದನ್ನು ಒಪ್ಪದಿರುವ ಕಾರಣಕ್ಕೆ ಎದುರು ಬಿದ್ದಿರುತ್ತಾರೆ ಎನ್ನಲಾಗದು. ಅದು ಅವರಿಗೆ ಬೇಕಾಗಿರುವುದಿಲ್ಲ. ಬದಲಿಗೆ ತಮಗಿರುವ ಎದುರುಬೀಳುವ ಹಕ್ಕನ್ನು ಕಾಯ್ದುಕೊಳ್ಳಲೆಂದೇ ಎದುರು ಬೀಳುತ್ತಿರುತ್ತಾರೆ. ಇದು ಅಸಮಾನತೆಯ ನೆಲೆಯಲ್ಲಿ ಇರುವ ಸಮಾಜದಲ್ಲಿ ದನಿ ಇಲ್ಲದವರು, ಹಾಗೂ ದನಿ ಇರುವವರು ಇಬ್ಬರೂ ಬಳಸುವ ತಂತ್ರವಾಗಿರುತ್ತದೆ.

ಒಂದು ಉದಾಹರಣೆಯನ್ನು ನೋಡೋಣ. ಒಂದು ಸಿನಿಮಾದಲ್ಲಿ ಬರುವ ಪಾತ್ರವೊಂದು ತಮ್ಮ ಕೋಮಿಗೆ ಅವಮಾನ ಮಾಡುವಂತೆ ಇದೆ ಎಂದು ಆ ಕೋಮಿನ ಜನ ಎದುರುಬೀಳುತ್ತಾರೆ ಎನ್ನೋಣ. ಅವರ ನಿಲುವು ಏನು? ಆ ಸಿನಿಮಾದಲ್ಲಿ ತೋರಿಸಲಾದ ಪಾತ್ರವನ್ನು ಹೋಲುವ, ಅದರಂತೆ ನಡೆಯುವ ಒಬ್ಬ ತಮ್ಮ ಕೋಮಿನಲ್ಲಿ ಇರುವುದಿಲ್ಲ ಎಂದು ವಾದಿಸುವುದೇನು? ಅಲ್ಲ. ದಿಟವಾಗಿ

ಅವರು ಈ ಪ್ರಸಂಗದಲ್ಲಿ ಸಮಾಜದಲ್ಲಿ ತಮ್ಮ ಗುರುತುಗಳನ್ನು ಕಾಯ್ದುಕೊಳ್ಳಲು ಬಯಸಿರುತ್ತಾರೆ. ಹಾಗಾಗಿ ಇದು ಮಾತಿನ, ಬರಹದ ತಿರುಳನ್ನು ಕುರಿತು ನಡೆಯುವ ಎದುರು ಬೀಳುವಿಕೆಯಾಗಿರದೆ, ಸಮಾಜದಲ್ಲಿ ಇರುವ ಬೇರೆ ಬೇರೆ ಸಮುದಾಯಗಳು, ಗುಂಪುಗಳು ತಂತಮ್ಮ ಚಹರೆಗಳನ್ನು ಕಾಯ್ದುಕೊಳ್ಳಲು ನಡೆಸುವ 'ಹೋರಾಟ'ವಾಗಿರುತ್ತದೆ. (ಹೋರಾಟ ಎಂಬ ಮಾತನ್ನು ಕೇವಲ ವಿವರಣೆಯ ನೆಲೆಯಲ್ಲಿ ಮಾತ್ರ ಬಳಸಿದ್ದೇನೆ)

ದಿಟ ಹೀಗಿರುವಾಗ ಇಂತಹ ಪ್ರಸಂಗಗಳಲ್ಲಿ ಹೇಳಿದ್ದು ಇಲ್ಲವೇ ಬರೆದದ್ದು ಸರಿಯೋ ತಪ್ಪೋ ಹಾಗೂ ಹೇಳಿದವರು ಬರೆದವರು ದಿಟವಾಗಿಯೂ ಜನರ ಮನಸ್ಸಿಗೆ ನೋವುಂಟು ಮಾಡಲು ಹೇಳಿದ್ದಾರೆಯೇ ಎಂಬೆಲ್ಲ ಮಾತುಕತೆಗಳಿಗೆ ಬೆಲೆಯೇ ಇಲ್ಲವಾಗುತ್ತದೆ. ಹೀಗಿದ್ದರೂ ನಮ್ಮ ಹಲವು ಚರ್ಚೆಗಳು ಈ ದಿಕ್ಕಿನಲ್ಲೇ ನಡೆಯುತ್ತಿರುತ್ತವೆ. ಈಚೆಗೆ ಜಯಪುರದಲ್ಲಿ ನಡೆದ ಸಾಹಿತ್ಯದ ಹಬ್ಬದಲ್ಲಿ ಆಶೀಶ್ ನಂದಿಯವರು ಆಡಿದ ಮಾತಿನ ಉದಾಹರಣೆಯನ್ನು ನೋಡೋಣ. ಅವರ ಮಾತಿಗೆ ಎದುರು ಹೇಳಿದವರು ನಂದಿಯವರು ದಲಿತರು ಮತ್ತು ಹಿಂದುಳಿದ ಜಾತಿಗಳ ಹಿತವನ್ನು ಬಯಸುವವರಲ್ಲ; ಅವರನ್ನು ಹೀಗಳೆಯುವವರು ಎಂದರು. ಕೂಡಲೇ ನಂದಿಯವರ ಕಾವಲಿಗೆ ಮುನ್ನುಗ್ಗಿದವರಲ್ಲಿ ಹಲವರು ನಂದಿಯವರು ಎಂದೆಂದೂ ಹೀಗಿದ್ದವರಲ್ಲ; ಹಾಗಾಗಿ ಈಗಲೂ ಅವರು ಇಂತಹ ತಿರುಳಿನ ಮಾತನ್ನು ಆಡಿರಲಾರರು; ಅವರು ಯಾವಾಗಲೂ ಕೆಳಜಾತಿ ಮತ್ತು ಹಿಂದುಳಿದವರ ಹಿತವನ್ನು ಬಯಸುವವರೇ ಆಗಿದ್ದಾರೆ ಎಂದು ಹೇಳಿದರು. ನಂದಿಯವರನ್ನು ಎತ್ತಿ ಹಿಡಿಯಲು ಇಂತಹ ವಾದವನ್ನು ಹೂಡುವವರು ಸಮಾಜದ ಯಾವ ಚಲನೆ ನೆಲೆಗಳಲ್ಲಿ ಇಂತಹ ನಿರೂಪಣೆಗಳು ಮುಂಚೂಣಿಗೆ ಬರುತ್ತವೆ ಎಂಬ ಮಾತನ್ನು ಮರೆಮಾಚುತ್ತಿರುತ್ತಾರೆ. ನಂದಿಯವರು ಯಾವಾಗಲೂ ದಲಿತರ, ಹಿಂದುಳಿದವರ ಹಿತವನ್ನು ಬಯಸುವವರೇ ಆಗಿರುವುದರಿಂದ ಅವರ ಮಾತುಗಳು ಯಾವಾಗಲೂ ದಲಿತರಿಗೆ ಹಿಂದುಳಿದವರಿಗೆ ನೋವುಂಟು ಮಾಡುವ ಇಲ್ಲವೇ ಅವರನ್ನು ಕೀಳುಗಳೆಯುವ ನೆಲೆಯಲ್ಲಿ ಇರಲಾರವು ಎಂಬ ವಾದದಲ್ಲಿ ಹುರುಳಿಲ್ಲ. ಹೀಗೆ ವಾದಿಸುವವರು ನಂದಿಯವರು ಜಯಪುರದಲ್ಲಿ ಆಡಿದ ಮಾತುಗಳನ್ನು ಸರಿಯಾದ ಚೌಕಟ್ಟಿನಲ್ಲಿ ಇರಿಸಿ ನೋಡುವ ಮಾತುಕತೆಗಳಿಗೆ ಅಡ್ಡಿಯನ್ನುಂಟು ಮಾಡಿದ್ದಾರೆ. ಹಾಗೆ ನೋಡಿದರೆ 'ನಂದಿಯವರ ಹಕ್ಕನ್ನು ಕಸಿಯಲಾಗಿದೆ; ಅವರು ಹೇಳಿದ್ದನ್ನು ಒಪ್ಪದವರು ಅವರಿಗಿರುವ ಹಕ್ಕಿನ ಚಲಾವಣೆ ಅಡ್ಡಿಪಡಿಸಿದ್ದಾರೆ' ಎಂದು ವಾದಿಸಿದವರು ದಿಟವಾಗಿ ನಂದಿಯವರ ಮಾತನ್ನು ನೆಪವಾಗಿರಿಸಿಕೊಂಡು ನಡೆಯ ಬೇಕಾದ ಮಾತುಕತೆಗೆ ಅಡ್ಡಿಯನ್ನುಂಟು ಮಾಡಿದ್ದಾರೆ. ತಾವು ಬಯಸದಿದ್ದರೂ ಇಂತಹವರು ದಲಿತರು,ಹಿಂದುಳಿದವರು ಹೊಂದಿರುವ ಹಕ್ಕಿಗೆ ಅಡ್ಡಿಯನ್ನು ಉಂಟು ಮಾಡಿದ್ದಾರೆ.

ಹಾಗಿದ್ದರೆ ನಮ್ಮ ಸುತ್ತಮುತ್ತ ದಿನದಿನವೂ ನುಡಿಯುವ, ಬರೆಯುವ ಹಕ್ಕನ್ನು ಕಸಿದುಕೊಳ್ಳುವ ಪ್ರಸಂಗಗಳು ಹೆಚ್ಚುಹೆಚ್ಚು ನಡೆಯುತ್ತಿಲ್ಲವೇ? ಹಾಗಿದ್ದರೆ ಇವೆಲ್ಲವೂ ಹೇಗೆ ತಡೆಯುವುದು ಎಂದು ಕೇಳಬಹುದು. ಸಮಾಜದಲ್ಲಿ ನಡೆಯುವ ಸಂಗತಿಗಳಿಗೆ ಕಾರಣಗಳೇನು ಎಂದು ಹುಡುಕುವಾಗ ಎಚ್ಚರದಿಂದ ಇರಬೇಕಾಗುತ್ತದೆ. ಕೆಲವೊಮ್ಮೆ

ನಾವು ಹುಡುಕುವ ಕಾರಣಗಳು ಅಂತಹ ನಡಾವಳಿಗಳನ್ನು ಸರಿಯಾದ ಚೌಕಟ್ಟಿನಲ್ಲಿ ಅರಿಯಲು ನೆರವಾಗದಂತೆ ಇರುತ್ತವೆ. ಅಲ್ಲದೆ ಹಾಗೆ ಹುಡುಕಿ ತೆಗೆದ ಕಾರಣಗಳು ಕೇವಲ ವಿವರಣೆಗಳಾಗಿರುತ್ತವೆಯೇ ಹೊರತು ಪರಿಹಾರಗಳನ್ನು ಕಂಡುಕೊಳ್ಳಲು ದಾರಿಯನ್ನು ತೋರುವಂತಿರುವುದಿಲ್ಲ. ಈ ಮಾತನ್ನು ಸರಿಯಾಗಿ ಅರಿತುಕೊಳ್ಳಬೇಕಾಗಿದೆ. ಅದಕ್ಕಾಗಿ ಮತ್ತೆ ನಂದಿಯವರ ಮಾತಿಗೇ ಬರೋಣ. 'ದಲಿತರು, ಹಿಂದುಳಿದವರು ಅವಕಾಶ ದೊರೆತಾಗ ಮೇಲ್ಜಾತಿಯವರಿಗಿಂತ ಹೆಚ್ಚು 'ಭ್ರಷ್ಟ'ರಾಗುತ್ತಾರೆ; ಹೀಗೆ 'ಭ್ರಷ್ಟ'ರಾಗುವುದು ಕೂಡ ಸಮಾಜದಲ್ಲಿ ಇರುವ ಅಸಮಾನತೆಯನ್ನು ಅಳಿಸಲು ಇರುವ ಒಂದು ತಂತ್ರವೇ ಆಗಿದೆ.' ಇದು ಅವರ ಮತ್ತು ಅವರಿಗಿಂತ ಮೊದಲು ಮಾತನಾಡಿದ ತರುಣ್ ತೇಜ್‌ಪಾಲ್ ಅವರ ವಾದದ ಸರಳ ತಿರುಳು. ಹಾಗಾಗಿ 'ಭ್ರಷ್ಟತೆ' ಎನ್ನುವುದು ನೀತಿಯ ನೆಲೆಯಲ್ಲಿ ಚರ್ಚೆಗೆ ಒಳಗಾದರೆ ಸಾಲದು; ಅದನ್ನು ಸಾಮಾಜಿಕ ನೆಲೆಯಲ್ಲಿ, ಅದರೊಳಗೆ ನಡೆಯುವ ಚಲನೆಯ ನೆಲೆಯಲ್ಲಿ ನೋಡಬೇಕಾಗುತ್ತದೆ ಎಂಬುದು ಅವರ ವಾದದ ಹಿಂದಿನ ತರ್ಕ. ಇದನ್ನು ಒಂದು ವಿವರಣೆ ಎಂದು ಮಾತ್ರ ತಿಳಿಯಬೇಕಲ್ಲವೇ? ಅಂದರೆ ಹೀಗೆ ತಿಳಿಯುವ ಮೂಲಕ, ಇಲ್ಲವೇ ಈ ವಾದವನ್ನು ಒಪ್ಪುವ ಮೂಲಕ ಏನನ್ನು ಮಾಡಿದಂತಾಯಿತು. ದಲಿತರ, ಹಿಂದುಳಿದವರ 'ಭ್ರಷ್ಟತೆ'ಯು ಸಮಾಜದಲ್ಲಿ ಅವರ ಮೇಲ್ಮುಖ ಚಲನೆಯನ್ನು ಹೇಳುತ್ತದೆ ಎಂದು ವಾದಿಸಬೇಕೇ? ಇಲ್ಲವೇ 'ಭ್ರಷ್ಟತೆ' ಇಲ್ಲದ ಸಮಾಜದ ಕನಸನ್ನು ನನಸು ಮಾಡಲು ದಲಿತರನ್ನು ಮತ್ತು ಹಿಂದುಳಿದವರನ್ನು ಹಾಗೆ 'ಭ್ರಷ್ಟ'ರಾಗಲು ಇರುವ ಅವಕಾಶಗಳಿಂದ ದೂರವಿಡಬೇಕೆಂದು ವಾದಿಸಬೇಕೇ? ಅಂದರೆ ಈ ವಾದ ನಮಗೆ ಪರಿಹಾರದ ದಾರಿಯನ್ನು ತೋರುತ್ತಿಲ್ಲ; ಬದಲಿಗೆ ತಪ್ಪು ದಾರಿಯನ್ನು ಹಿಡಿಯಲು ಒತ್ತಾಯವನ್ನು ಮಾಡುತ್ತಿರುವಂತಿದೆ.

ಇನ್ನೊಂದು ಪ್ರಸಂಗದಲ್ಲಿ ವಿಶ್ವರೂಪಂ ಎಂಬ ಸಿನಿಮಾ ಇಸ್ಲಾಂ ಧರ್ಮದ ಅನುಯಾಯಿಗಳ ಮನಸ್ಸಿಗೆ ನೋವುಂಟು ಮಾಡುವಂತಿದೆ ಎಂದು ಹೇಳಿ ಅದನ್ನು ಸಿನಿಮಾ ಮಂದಿರಗಳಲ್ಲಿ ತೋರಿಸಲು ಅಡ್ಡಿಯುಂಟು ಮಾಡಲಾಯಿತು. ಇಂತಹ ಹತ್ತಾರು ಪ್ರಸಂಗಗಳು ಈಗಾಗಲೇ ನಡೆದು ಹೋಗಿವೆ. ಜನ ಅವೆಲ್ಲವನ್ನೂ ಮರೆತೂ ಬಿಟ್ಟಿದ್ದಾರೆ.ಯಾವುದು ಯಾವ ಮತದವರ, ಯಾವ ಕೋಮಿನವರ, ಯಾವ ಸಮುದಾಯದ ಹಿತಕ್ಕೆ ಅಡ್ಡಿಯುಂಟು ಮಾಡುವಂತಿದೆ ಎಂದು ಯಾರೂ ಗೆರೆ ಎಳೆದು ತೋರಿಸಲಾರರು. ಆಯಾ ಹೊತ್ತಿನಲ್ಲಿ ಆಯಾ ಗುಂಪುಗಳು ಒಂದು ವಾದವನ್ನು ಮುಂದಿಡುತ್ತವೆ. ಅದಕ್ಕೆ ತಕ್ಕಂತೆ ಹೊಂದಾಣಿಕೆಯನ್ನು ಮಾಡಿಕೊಂಡು ಎಲ್ಲವೂ ತಹಬಂದಿಗೆ ಬರುವಂತೆ ಮಾಡಲಾಗುತ್ತದೆ. ಇದೆಲ್ಲವೂ ಸಮಸ್ಯೆಯ ಬೇರನ್ನು ಹುಡುಕುವ ಕೆಲಸವಾಗಿರುವುದಿಲ್ಲ. ಅಲ್ಲದೆ ಯಾರ ಹಕ್ಕನ್ನೂ ಕಿತ್ತುಕೊಳ್ಳುವ ನಡೆಯಾಗಿ ತೋರುವುದಿಲ್ಲ. ಹಿಂದೆ ಹೇಳಿದಂತೆ ಸಮಾಜದ ಬೇರೆ ಬೇರೆ ಗುಂಪುಗಳು ತಮ್ಮ ಗುರುತನ್ನು ನೆಲೆಗೊಳಿಸಲು, ಕೆಲವೊಮ್ಮೆ ತಮ್ಮ ಹಿಡಿತವನ್ನು ಬಿಗಿಗೊಳಿಸಿಕೊಳ್ಳಲು ನಡೆಸುವ ನಡಾವಳಿಗಳಾಗಿರುತ್ತವೆ. ಇಂತಹ ಪ್ರಸಂಗಳಲ್ಲಿ ತಮ್ಮ ಹಕ್ಕುಗಳಿಗೆ ಅಡ್ಡಿಯುಂಟಾಯಿತೆಂದು ಹಲುಬುವವರು ದಿಟವಾಗಿ ಸಮಾಜವನ್ನು ಕಟ್ಟುತ್ತಿರುವ, ಕಟ್ಟಿರುವ ನೆಲೆಯಲ್ಲಿ ಇರುವ ಬಿರುಕುಗಳನ್ನು, ಸೀಳುಗಳನ್ನು, ಸಿಡಿಯುವ ಪದರುಗಳನ್ನು ಕಂಡಿರುವುದೇ ಇಲ್ಲ.

ಇಂತಹ ಕಲಾವಿದರು 'ನೆಲದಲ್ಲಿ ಬೇರು ಬಿಡುವ ಮೊದಲೇ ಆಕಾಶದಲ್ಲಿ ಟೊಂಗೆಗಳನ್ನು ಹರಡುವವರು' ತಮ್ಮ ಕನಸುಗಳು ಒಡೆದಾಗ ತಮ್ಮ ಹಕ್ಕುಗಳಿಗೆ ಅಡ್ಡಿಯಾಯಿತೆಂದು ಹಲಬುತ್ತಾರೆ. ಹಕ್ಕುಗಳೆ ಇಲ್ಲವಾಗಿರುವ, ಇದ್ದರೂ ಚಲಾಯಿಸಲಾರದ, ಚಲಾಯಿಸಿದರೂ ಅದು ಕಿವುಡುಗಿವಿಗಳೆದುರು ಬರಡಾಗುವುದನ್ನು ಕಾಣುತ್ತಿರುವ ಜನರನ್ನು ಇವರು ಕಂಡವರೇ ಅಲ್ಲ.

ಕಲಾವಿದರ ಇನ್ನೊಂದು ತರ್ಕ ಹೀಗಿರುತ್ತದೆ. ನಾವು ಎದುರಿಗಿಡುತ್ತಿರುವುದು ಒಂದು ಕಲ್ಪನೆ ಮಾತ್ರ. ಕಲಾಕೃತಿ ಎಂಬುದು ತನ್ನದೇ ಆದ ಬಿಡಿ ಬದುಕನ್ನು ಹೊಂದಿರುತ್ತದೆ. ಅದು ದಿಟವನ್ನು ಇರುವಂತೆ ಬಿಂಬಿಸುವುದಿಲ್ಲ. (ಇಂತಹ ಹೇಳಿಕೆಗಳು ಸಿನಿಮಾಗಳ ಮೊದಲಲ್ಲಿ ಬರುವುದು ಈಗ ವಾಡಿಕೆಯಾಗಿಬಿಟ್ಟಿದೆ) ಇದು ಒಂದು ತಿಳುವಳಿಕೆ. ಆದರೆ ಯಾರು ಆ ಸಿನಿಮಾದಲ್ಲಿ, ಚಿತ್ರದಲ್ಲಿ ತಮ್ಮ ಮನಸ್ಸಿಗೆ ಗಾಸಿಯುಂಟು ಮಾಡುವ ಮಾತುಗಳೋ, ಪಾತ್ರಗಳೋ, ನೋಟಗಳೋ ಇವೆಯೆಂದು ತಕರಾರು ಎತ್ತುತ್ತಾರೋ ಅವರು ಸಿನಿಮಾದ, ಚಿತ್ರದ ಹಿಂದಿನ ಈ ತರ್ಕವನ್ನು ನಂಬಿ ಅದನ್ನು ನೋಡಬೇಕೆಂಬ ಒತ್ತಾಯಕ್ಕೆ ಮಣಿಯುವುದಿಲ್ಲ. ಹಾಗೆ ಮಣಿಯಬೇಕೆಂಬ ಬಯಕೆಯೂ ಒಟ್ಟಾರೆಯಾಗಿ ಸಮಾಜದಲ್ಲಿ ಇದ್ದಂತಿಲ್ಲ. ಇಂತಹ ಬಿಕ್ಕಟ್ಟಿನಲ್ಲಿ ಕೆಲವೊಮ್ಮೆ ನೋಡುಗರ ಲೋಕದಲ್ಲಿರುವ ಅಸಹನೆಯ ನೆಲೆಗಳು ಸಿಡಿಯಲು ತಕ್ಕ ಅವಕಾಶಗಳು ಸಿನಿಮಾದಲ್ಲಿ ಇದ್ದೇ ಇರುತ್ತವೆ. ಆಗ ಮೊದಲಲ್ಲಿ ಹೇಳಿದಂತೆ ತನ್ನ ಚಹರೆಯನ್ನು ಕಾಯ್ದುಕೊಳ್ಳಲೆಂದು ಸಮುದಾಯಗಳು ಇಲ್ಲವೇ ಆ ಸಮುದಾಯದ ದನಿ ತಾವು ಎಂದು ತಿಳಿದವರು ತಮ್ಮ ಹುಕುಮಿನ ಎಲೆಯನ್ನು ಎಸೆಯುತ್ತಾರೆ. ಆಗ ಆಟ ಬದಲಾಗುತ್ತದೆ. ನಾವು ಮತ್ತೆಮತ್ತೆ ನೋಡುತ್ತಿರುವಂತೆ ಎಲ್ಲವೂ ಒಂದು ಒಪ್ಪಂದದಲ್ಲಿ ತಹಬಂದಿಗೆ ಬಂದಂತೆ ತೋರುತ್ತದೆ. ಆದರೆ ಸಮಾಜದಲ್ಲಿ ಇರುವ ಕುದಿತದ ನೆಲೆಗಳು ಹಾಗೆಯೇ ಉಳಿದುಬಿಡುತ್ತವೆ. ಮತ್ತೆ ತಲೆ ಎತ್ತುವ ಹೊತ್ತಿಗಾಗಿ ನಾಯಕರು ಕಾಯುತ್ತಿರುತ್ತಾರೆ.

ಹೀಗಿರುವಾಗ ಸರಕಾರ, ಆಳ್ವಿಕೆಯ ಚೌಕಟ್ಟು ಇದೆಲ್ಲವನ್ನೂ ಹೇಗೆ ನೋಡುತ್ತದೆ ಎಂಬುದನ್ನೂ ನೋಡಬೇಕು. ಸರಕಾರ ತಾನು ಜನರಿಂದ ಬಂದದ್ದು, ಜನರ ಪರವಾಗಿ ಇರುವಂತದ್ದು ಎಂದು ಹೇಳಿದರೂ ಅದು ಕಟ್ಟುವ ಕಾನೂನುಗಳು, ಆ ಕಾನೂನುಗಳನ್ನು ಜಾರಿಗೆ ಕೊಡುವ ಬಗೆಗಳು ಹೆಚ್ಚಾಗಿ ಆ ಜನತೆಯ ಹಿತಗಳನ್ನು ಕಾಯುವಂತೆ ಇರುವುದಿಲ್ಲ. ಇನ್ನೂ ಒಳಹೊಕ್ಕು ನೋಡಿದರೆ ಸರಕಾರದ ತಿಳುವಳಿಕೆಯಲ್ಲಿ 'ಜನ' ಎಂಬ ಮಾತಿನ ತಿರುಳೇ ಬೇರೆ ಇರುತ್ತದೆ. ಹಾಗಾಗಿ ಜನರಿಗಿರುವ ಹೇಳುವ, ಬರೆಯುವ ಹಕ್ಕನ್ನು ನಾವೆಲ್ಲರೂ ನಮಗೆ 'ಕೊಟ್ಟಿಕೊಂಡ' ಸಂವಿಧಾನದಲ್ಲಿ ಕೊಡಮಾಡಲಾಗಿದೆ. ಆದರೂ ದಿಟದಲ್ಲಿ ಅಂತಹ ಹಕ್ಕು ಚಲಾವಣೆಗೆ ಬಾರದಂತೆ ಮಾಡುವ ಹುನ್ನಾರಗಳನ್ನು ಸರಕಾರವೂ ಕಟ್ಟುತ್ತದೆ. ಅಲ್ಲದೆ ಇಡೀ ಸಮಾಜದಲ್ಲಿ ಇರುವ ಅಸಮಾನತೆಯ ನೆಲೆಗಟ್ಟನ್ನು ಸಡಿಲಗೊಳಿಸುವ ಕೆಲಸ ತೋರಿಕೆಗಾಗಿ ನಡೆಯುತ್ತಿವೆ. ಆದರೆ ದಿನಗಳೆದಂತೆ ಸಮಾಜದ ಈ ಬಿರುಕುಗಳು ಗಟ್ಟಿಯಾಗುತ್ತಲೇ ಹೋಗುತ್ತಿವೆ. ಸರಕಾರವೂ ಕೂಡ ಹಕ್ಕುಗಳಿಗೆ ಅಡ್ಡಿತರುವ ಕೆಲಸದಲ್ಲಿ ತೊಡಗುವುದು ನಿಚ್ಚಳವಾಗಿದೆ. ಅಂತಹ ಪ್ರಸಂಗಗಳು ಕಳೆದ ಒಂದೆರಡು ತಿಂಗಳಲ್ಲಿ ನಡೆದಿರುವುದನ್ನು ನೆನಪಿಗೆ ತಂದುಕೊಳ್ಳಬಹುದು.

ಅದಕ್ಕಿಂತ ಹೆಚ್ಚಾಗಿ ಸರಕಾರ ಹಕ್ಕುಗಳನ್ನು ಕಾಯ್ದುಕೊಳ್ಳಲು ಜನರಿಗೆ ನೆರವಾಗಬೇಕು ಎಂದು ವಾದಿಸುವಾಗ ಅಂತಹ ಹಕ್ಕುಗಳನ್ನು ಬಳಸಲು ಅವಕಾಶಗಳೇ ಇಲ್ಲವಾದವರಿಗೆ, ಬಳಸಿದರೂ ಅದು ಲೆಕ್ಕಕ್ಕೆ ಬರದಂತೆ ಆಗಿರುವುದನ್ನು ನೋಡುತ್ತಿರುವವರಿಗೆ ನೆರವಾಗಬೇಕೆಂದು ಹೇಳುವವರೇ ಇಲ್ಲವಾಗಿದ್ದಾರೆ. ಅದು ಸರಕಾರದ ಕೆಲಸವೇ ಅಲ್ಲ ಎಂಬಂತಿದೆ. ಈ ಜಾಣಕುರುಡುತನ ಆಡಳಿತದ ಚೌಕಟ್ಟಿನಲ್ಲಿ ಬಲವಾಗಿ ಬೇರೂರಿದೆ.

ಇಂಗ್ಲಿಶ್ ನುಡಿಯಲ್ಲಿ ಕಟ್ಟಿದ 'ಕಲ್ಚರ್ ಆಫ್ ಇನ್ಟಾಲರೆನ್ಸ್', 'ಕಲ್ಚರಲ್ ಟೆರರಿಸಮ್' ಇವೇ ಮುಂತಾದ ಮಾತುಗಳು ಇಡೀ ಚರ್ಚೆಯನ್ನು ದಿಕ್ಕು ತಪ್ಪಿಸುತ್ತಿವೆ. ಆ ಮಾತುಗಳು ಏನು ಹೇಳುತ್ತವೆ ಮತ್ತು ಪ್ರಸಂಗಗಳನ್ನು ಯಾವ ಚೌಕಟ್ಟಿನಲ್ಲಿ ಇರಿಸುತ್ತಿವೆ ಎಂಬುದನ್ನು ನೋಡುವ ಅವಕಾಶವೇ ಈಗ ಇಲ್ಲವಾಗಿದೆ. ಇಂತಹ ನಿರೂಪಣೆಗಳಿಂದಾಗಿ ಯಾರೋ ಬೇಟೆಯಾಡುತ್ತಿದ್ದಾರೆ ಮತ್ತಾರೋ ಬಲಿಯಾಗುತ್ತಿದ್ದಾರೆ ಎಂಬ ಚಿತ್ರ ನಮ್ಮ ಕಣ್ಣೆದುರು ಮೂಡುವಂತಾಗಿದೆ. 'ಬುದ್ಧಿಜೀವಿ'ಗಳು ದುಗುಡ ದುಮ್ಮಾನಗಳನ್ನು ತೋಡಿಕೊಳ್ಳುತ್ತಿದ್ದಾರೆ. ಸಮಾಜಕ್ಕೆ ಸಹನೆಯನ್ನು, ತಾಳಿಕೊಳ್ಳುವುದನ್ನು ಕಲಿಸಬೇಕೆಂದು ವಾದಿಸುವವರನ್ನೂ ಕಾಣುತ್ತೇವೆ. ದಿಟ; ಅಸಹನೆಯ ಚೌಕಟ್ಟಿನ ಮೇಲೆ ನಿಂತಿರುವ ಸಮಾಜದಲ್ಲಿ ಸಹನೆಯು ಒಂದು ಗುಣವಾಗಿ ಮೈಗೂಡಬೇಕಿದೆ. ಆದರೆ ಅಸಹನೆಯು ತಲೆದೋರಲು ಇರುವ ಕಾರಣಗಳನ್ನು ಇಲ್ಲವಾಗಿಸಿದ ಹೊರತು ಕೇವಲ ಸಹನೆಯಿಂದ ಇರಲು ಹೇಳುವ ಮಾತುಗಳಿಗೆ ಬೆಲೆಯೇ ಇಲ್ಲವಾಗುತ್ತದೆಯಲ್ಲವೇ?

ಕೊನೆಗೊಂದು ಮಾತು. ನಾವು ನಮಗೆ 'ಕೊಟ್ಟುಕೊಂಡ' ಸಂವಿಧಾನ ಹಕ್ಕುಗಳನ್ನು ನೀಡಿದೆ; ಜತೆಗೆ ಎಲ್ಲರೂ ಸಮಾನರು ಎಂಬ ನೆಲೆಯನ್ನು ಕೂಡ ಒಪ್ಪಿದೆ. ಹಕ್ಕುಗಳನ್ನು ಅಸಮಾನತೆಯ ನೆಲೆಯಲ್ಲಿ ಬೆಳೆಸಲು ಬರುವುದಿಲ್ಲ. ಸಮಾನತೆ ನಮ್ಮ ಮೊದಲ ಗುರಿಯಾದರೆ ಆಗ ನಮ್ಮ ಹಕ್ಕುಗಳಿಗೆ ತಕ್ಕ ಚೌಕಟ್ಟನ್ನು ಕಟ್ಟಿಕೊಳ್ಳಬೇಕಾಗುತ್ತದೆ. ಸಮಾನತೆಯನ್ನು ಹಿಂದೆ ಸರಿಸಿ ಹಕ್ಕುಗಳ ಚಲಾವಣೆಗೇ ಮುಂದಾದರೆ ಆಗ ಈಗಿರುವ ಬಿಕ್ಕಟ್ಟುಗಳು ಇನ್ನೂ ಬಿಗಡಾಯಿಸುತ್ತವೆ. ಹಾಗಾಗಿ ಹಕ್ಕುಗಳು ಮೊಟಕುಗೊಳ್ಳುತ್ತಿವೆ ಎಂಬ ಕೂಗನ್ನು ಸರಿಯಾದ ಹಿನ್ನೆಲೆಯಲ್ಲಿ ನೋಡಬೇಕು ಹಾಗೂ ಅದರಿಂದ ದೊರೆತ ತಿಳುವಳಿಕೆಯನ್ನು ಬಳಸಬೇಕು. ಇದೇ ಜನರಾಳ್ವಿಕೆಯನ್ನು ಬೆಳೆಸಲು ಉಳಿಸಲು ಇರುವ ಸರಿಯಾದ ದಾರಿಯಾಗಿದೆ.

***

ಪದಗಳ ತಿರುಳು ಮತ್ತು ಚಹರೆ

ಪದಗಳಿಗೆ ತಿರುಳು ಇರುವಂತೆ ಒಂದು ಚಹರೆಯೂ ಇರುತ್ತದೆ. ಕೆಲವೊಮ್ಮೆ ನಾವು ಪದಗಳನ್ನು ಅವುಗಳ ತಿರುಳನ್ನು ತಿಳಿಯದೆ ಬಳಸುತ್ತಿರುತ್ತೇವೆ. ಹಾಗೆಯೇ ಅವುಗಳ ಚಹರೆಯನ್ನೂ ತಿಳಿಯುವ ಗೋಜಿಗೆ ಹೋಗುವುದಿಲ್ಲ. ಅಂತಹ ಒಂದೆರಡೂ ನಿರೂಪಣೆಗಳನ್ನು ನಮ್ಮ ಮುಂದೆ ಇರಿಸುತ್ತೇನೆ.

ಒಂದು ಹಳೆಯ ಕತೆಯೊಂದಿಗೆ ಮೊದಲು ಮಾಡುತ್ತೇನೆ. (ಕತೆಯಲ್ಲ; ದಿಟವಾಗಿ ನಡೆದದ್ದು. ಆದರೆ ಹೇಳುವ ರೀತಿಯಲ್ಲಿ ಇದು ಕತೆಯ ಹಾಗೆ ಇದೆ) ಸುಮಾರು ಎರಡೂವರೆ ದಶಕಗಳ ಹಿಂದೆ ಕನ್ನಡದ ಹಿರಿಯ ಬರಹಗಾರ ಮಾಸ್ತಿಯವರೊಡನೆ ಮಾತಾಡುತ್ತಿದ್ದಾಗ ಇದು ನಡೆದದ್ದು. ಮಾಸ್ತಿಯವರು ಜೀವನ ಪತ್ರಿಕೆಯ ಸಂಪಾದಕರಾಗಿ ಬರೆಯುತ್ತಿದ್ದ ಟಿಪ್ಪಣಿಗಳ ಹಿಂದಿದ್ದ ರಾಜಕೀಯ ನಿಲುವುಗಳ ಬಗೆಗೆ ಮಾತು ಬಂತು. ನಾನು 'ನಿಮ್ಮದು ಲಿಬರಲ್ ನಿಲುವು ಆಗಿತ್ತಲ್ಲವೆ' ಎಂದು ಕೇಳಿದೆ. ಆಗವರು 'ಲಿಬರಲ್ ಎಂದರೇನು' ಎಂದು ಕೇಳಿದರು. ನಾನು 'ಉದಾರವಾದಿ ನಿಲುವು' ಎಂದು ಹೇಳಿದೆ. ಅದಕ್ಕವರು 'ಉದಾರವಾದಿ ಎಂದರೇನು' ಎಂದು ನನ್ನನ್ನೇ ಕೇಳಿದರು. ಗೊತ್ತಿದ್ದೂ ಗೊತ್ತಿದ್ದೂ ನನ್ನನ್ನು ಈ ಹಿರಿಯರು ಪೇಚಿಗೆ ಸಿಲುಕಿಸುತ್ತಿದ್ದಾರೆಂದು ತಿಳಿದು ನಾನು 'ಉದಾರವಾದಿ ಎಂದರೆ ಲಿಬರಲ್ ಎಂಬ ಪದಕ್ಕೆ ಸಾಟಿಯಾಗಿ ಬಳಕೆಯಲ್ಲಿದೆಯಲ್ಲವೇ' ಎಂದು ಕೇಳಿದೆ. 'ಅದು ಸರಿ. ನೀವು ಆ ಪದವನ್ನು ಬಳಸುತ್ತಿದ್ದೀರಿ ಎಂದರೆ ಅದರ ತಿರುಳು ನಿಮಗೆ ಗೊತ್ತಿರಬೇಕಲ್ಲವೇ? ಹಾಗಾಗಿ ಉದಾರವಾದಿ ಎಂದರೇನು ಎಂಬುದನ್ನು ನನಗೆ ತಿಳಿಯುವಂತೆ ಹೇಳಿ' ಎಂದರು. ನಾನು ಮಾತಾಡದೆ ಕುಳಿತದ್ದನ್ನು ಕಂಡು. 'ಇಂಗ್ಲಿಶಿನವನು ಬಳಸಿದ ಅಂತ ತಿಳಿದು ನೀವು ಒಂದು ಪದ ಕಟ್ಟಿ ಬಳಸಲು ಮೊದಲು ಮಾಡುತ್ತೀರಿ. ಅದರ ತಿರುಳು ನಿಮ್ಮ ತಿಳಿವಿಗೆ ಬಾರದಿದ್ದರೂ ಪದದ ಹಿಂದೆ ಅವಿತು ಅದನ್ನು ಬಳಸುತ್ತೀರಿ ಅಲ್ಲವೇ?' ಎಂದು ಕೆಣಕಿದರು. ನಾನು ಮಾಸ್ತಿಯವರನ್ನು ಉದಾರವಾದಿ ಎಂದು ಬಣ್ಣಿಸಿದಾಗ ಅದು ಕೇವಲ ವಿವರಣೆಯ ಮಾತು ಮಾತ್ರ ಆಗಿರಲಿಲ್ಲ. ಆ ಹೊತ್ತಿಗೆ ಉದಾರವಾದಿಯಾಗಿರುವುದು ಎಂದರೆ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವವರ ನಿಲುವು ಎಂಬ ನನ್ನ (ಹಾಗೆಯೇ ನನ್ನಂತೆ ಹಲವರ) ತಿಳುವಳಿಕೆಯೂ ಅಲ್ಲಿ ನೆಲೆಯೂರಿತ್ತು. ಮಾಸ್ತಿಯವರು ನನ್ನ ಆ ತಿಳುವಳಿಕೆಯನ್ನು ಕೆದಕಲು ಈ ಹಾದಿಯನ್ನು ಹಿಡಿದಿದ್ದರು.

ಈ ಮಾತುಕತೆಯ ಬಳಿಕವೂ ನಾನು ಇಂಗ್ಲಿಶ್ ಪದವೊಂದಕ್ಕೆ ಕನ್ನಡದಲ್ಲಿ (ಸಂಸ್ಕೃತದ) ಪದವೊಂದನ್ನು ಸುಮ್ಮನೆ ಬಳಸುವುದಲ್ಲಿ ತಪ್ಪಿದೆಯೆಂಬ ತಿಳುವಳಿಕೆಯನ್ನು ಪಡೆಯಲಿಲ್ಲ. ಆದರೆ ಪದಕ್ಕೆ ಪದವನ್ನು ಸಾಟಿ ಮಾಡಿಕೊಳ್ಳುವಾಗ ಒಂದು ಕೇವಲ ಪದವನ್ನು ಮಾತ್ರ ಕಟ್ಟಿಕೊಳ್ಳುತ್ತಿರುವುದಿಲ್ಲ; ಅದರೊಡನೆ ಆ ಪದದ ತಿರುಳಿನ ಬಗೆಗೆ ಒಂದು ನಿಲುವನ್ನೂ ಪಡೆದುಕೊಂಡಿರುತ್ತೇವೆ ಎನ್ನುವುದನ್ನು ಅರಿತುಕೊಳ್ಳಲು ಬಹಳ ವರುಶಗಳೇ ಹಿಡಿದವು. ಅಲ್ಲದೆ. ಇಂಗ್ಲಿಶಿನ ಪದಕ್ಕೆ (ಹಾಗೆ ನೋಡಿದರೆ ಯಾವುದೇ ನುಡಿಯ ಪದಕ್ಕೆ) ಒಂದು ಚರಿತ್ರೆ ಇರುತ್ತದೆ. ಆ ಚರಿತ್ರೆಯೆ ಅದರ ಚಹರೆ. ಆ ಚಹರೆಯನ್ನು ಬಿಟ್ಟುಕೊಟ್ಟು ಸುಮ್ಮನೆ ಒಂದು ಹೊಸ ಪದವನ್ನು ಕನ್ನಡದಲ್ಲಿ ಜಾರಿಗೆ ತಂದರೆ ಅದರಿಂದ ನಿಮ್ಮ ಚಿಂತನೆ ಮತ್ತು ಅದನ್ನು ಅನುಸರಿಸಿದ ಮಾತುಕತೆಗಳು ಹಳ್ಳಹಿಡಿಯುತ್ತವೆ ಎಂದು ಅರಿಯಬೇಕಾಗಿದೆ.

ಇಂತಹದೇ ಇನ್ನೊಂದು ಈಚಿನ ಪ್ರಸಂಗವನ್ನು ನೋಡೋಣ. ಕೆಲದಿನಗಳ ಹಿಂದೆ ಅನಾರ್ಕಿ, ಅನಾರ್ಕಿಸ್ಟ್, ಅನಾರ್ಕಿಸಿಮ್ ಎಂಬ ಪದಗಳು ಮತ್ತೆ ಮತ್ತೆ ಕೇಳಿಬಂದವು; ಹಾಗೆಯೇ ಬರಹಗಳಲ್ಲೂ ಕಂಡುಬಂದವು. ಅರವಿಂದ ಕೇಜ್ರಿವಾಲರು ತಮ್ಮ ಗೆಳೆಯರೊಡನೆ ಹಕ್ಕೊತ್ತಾಯ ಮಾಡಲು ದೆಹಲಿಯ ಬೀದಿಯಲ್ಲಿ ಕುಳಿತಾಗ ಅವರ ನಡೆಯನ್ನು ಒಪ್ಪದವರು ಅವರನ್ನು ಅನಾರ್ಕಿಸ್ಟ್ ಎಂದರು; ಕೇಜ್ರಿವಾಲರೇ ತಮ್ಮನ್ನು ತಾವು ಹಾಗೆಂದು ಬಣ್ಣಿಸಿಕೊಂಡದ್ದೂ ಉಂಟು. ಆಡಳಿತದ ಚುಕ್ಕಾಣಿ ಹಿಡಿದವರೇ ಹೀಗೆ ಹಕ್ಕೊತ್ತಾಯ ಮಾಡುತ್ತಾ ಕುಳಿತದ್ದು ಎಲ್ಲರಿಗೂ ಒಪ್ಪಿಗೆಯಾಗಲಿಲ್ಲ. ಸಂಸತ್ತಿನಲ್ಲಿ, ರಾಜ್ಯಗಳ ಮೇಲ್ಮನೆಗಳಲ್ಲಿ ಸದಸ್ಯರು ಕೂಗಾಡುವುದು, ಇತರರು ಮಾತಾಡುವಾಗ ಅಡ್ಡಿ ಮಾಡುವುದು, ಮೈಕು ಕಿತ್ತುಕೊಳ್ಳುವುದು, ಗುದ್ದುವುದು, ಬಟ್ಟೆ ಹರಿದುಕೊಳ್ಳುವುದು ಇವೆಲ್ಲವನ್ನೂ ಮಾಡಿದಾಗ ಅಂತಹ ನಡವಳಿಕೆಯನ್ನು ಬಣ್ಣಿಸುವ ವರದಿಗಾರರು 'ಅರಾಜಕತೆ' ಎಂಬ ಪದವನ್ನು ಬಿಡುಬೀಸಾಗಿ ಬಳಸಿದ್ದಾರೆ. ಕನ್ನಡದ ಸುದ್ದಿ ಹಾಳೆಗಳು, ಟಿವಿ ವರದಿಗಳು ಈ ಪದವನ್ನು ಬಳಸಿದ್ದನ್ನು ಓದಿದ್ದೇವೆ; ಕೇಳಿದ್ದೇವೆ. ಹೀಗೆ ನಡೆದುಕೊಳ್ಳುವ ಕಾಲ ಬಂತಲ್ಲ, ಇನ್ನು ಎಲ್ಲ ಮುಗಿದ ಹಾಗೆಯೇ ಎಂಬ ಸಿನಿಕತನವನ್ನೂ ನಮ್ಮಲ್ಲಿ ಹಲವರು ಬೆಳೆಸಿಕೊಳ್ಳುತ್ತಿದ್ದಾರೆ.

ಅನಾರ್ಕಿಸಂ ಎಂಬುದಕ್ಕೆ ಸಾಟಿಯಾಗಿ ಕನ್ನಡದಲ್ಲಿ ಸಂಸ್ಕೃತದ ಅರಾಜಕತೆ ಎಂಬ ಪದವನ್ನು ಬಳಸುವುದನ್ನು ಒಪ್ಪಿಕೊಂಡು ಬಿಟ್ಟಿದ್ದೇವೆ. ಇದು ಕೇವಲ ಒಂದು ಸಾಟಿ ಪದವಾಗಿ ಮಾತ್ರ ಉಳಿದಿಲ್ಲ. ಈ ಪದವನ್ನು ಬಳಸುವಾಗ ಅದು ಕೇವಲ ಒಂದು ವರ್ತನೆಯ ಬಣ್ಣನೆ ಎಂದು ತಿಳಿಯುವ ಹಾಗಿಲ್ಲ. ಏಕೆಂದರೆ ಅಂತಹ ವರ್ತನೆಯನ್ನು ಅರಾಜಕ ಎಂದು ಬಣ್ಣಿಸುವವರು ಹಾಗೆ ವರ್ತಿಸುವುದನ್ನು ತಾವು ಒಪ್ಪುವುದಿಲ್ಲ ಎಂಬುದನ್ನೂ ಹೇಳುತ್ತಿರುತ್ತಾರೆ. ಅಂದರೆ ಅರಾಜಕತೆ ಎನ್ನುವುದು ನಾವು ಬಯಸುವ ನಡವಳಿಕೆಯಲ್ಲ ಎಂಬುದು ಬಹುಮಟ್ಟಿಗೆ ಹಲವರ ತಿಳುವಳಿಕೆಯಾಗಿರುತ್ತದೆ.

ರಾಜ, ರಾಜಕ, ಅರಾಜಕ, ಅರಾಜಕತೆ ಇವು ಬಳಕೆಯಲ್ಲಿರುವ ಪದಗಳು (ಅರಾಜ ಎಂಬ ಪದ ಇರಬಹುದಾದರೂ ಕನ್ನಡದಲ್ಲಿ ಅದರ ಬಳಕೆಯನ್ನು ನಾನು ಕಂಡಿಲ್ಲ.) ಅರಾಜಕ ಎಂಬ ಪದದಲ್ಲಿ ರಾಜ ಎಂಬ ಪದ ಇದ್ದರೂ ನೇರವಾಗಿ ಆ

ಪದಕ್ಕೂ ಅರಾಜಕತೆಗೂ ನಂಟು ಇಲ್ಲ. ಅನಾರ್ಕಿ ಎಂಬ ಪದಕ್ಕೆ ಸಾಟಿಯಾಗಿ ಅರಾಜಕ ಪದವನ್ನು ಆಯ್ದುಕೊಂಡು ಬಳಸುವಾಗ ನಾವು ಕೇವಲ ಒಂದು ಪದವನ್ನು ಮಾತ್ರ ಆಯ್ದುಕೊಳ್ಳದೇ ಅದರ ಜತೆಗೆ ಒಂದು ನಿಲುವನ್ನೂ ಆಯ್ದುಕೊಂಡು ಬಿಟ್ಟಿದ್ದೇವೆ. ಅರಾಜಕತೆ ಎನ್ನುವುದನ್ನು ನಾವು ಬಯಸುವುದೂ ಇಲ್ಲ; ಅದನ್ನು ಒಪ್ಪುವುದೂ ಇಲ್ಲ ಎನ್ನುವುದೇ ಆ ನಿಲುವು. ನಮ್ಮ ಸುತ್ತ ಮಾತುಗಳ ಲೋಕವನ್ನೇ ಕಟ್ಟುವ ಜನರೂ ಕೂಡ ಈ ನಿಲುವನ್ನೇ ಗಟ್ಟಿಮಾಡುವವರಾಗಿದ್ದಾರೆ.

ದಿಟಕ್ಕೂ ಅನಾರ್ಕಿ ಎಂದರೇನು? ಯಾರು ಅನಾರ್ಕಿಸ್ಟರು? ಯಜಮಾನಿಕೆ ನಡೆಸುವವರು ಅಧಿಕಾರ ಹೊಂದಿರುವವರು ತಮ್ಮ ಯಜಮಾನಿಕೆಗೆ, ಅಧಿಕಾರಕ್ಕೆ ಇರುವ ತಳಹದಿಗಳೇನು ಎಂಬುದನ್ನು ಸಾಬೀತು ಮಾಡಬೇಕು. ಅದು ಅವರ ಹೊಣೆ. ಅದು ತಮಗೆ ತನ್ನಿಂದ ತಾನೇ ಒದಗಿ ಬಂದಿದೆ ಎಂದೋ ಯಾರೂ ತಮ್ಮನ್ನು ಪ್ರಶ್ನಿಸುವಂತಿಲ್ಲ ಎಂದು ವಾದಿಸಿದರೆ ಆಗ ಅದನ್ನು ನಿರಾಕರಿಸುವ ನಡೆ ಬೇಕಾಗುತ್ತದೆ. ಹೀಗೆ ಯಜಮಾನಿಕೆ ಮಾಡುವವರನ್ನು, ಅಧಿಕಾರ ನಡೆಸುವವರನ್ನು ನಿಮಗೆ ಈ ಹಕ್ಕನ್ನು ಯಾರು ಕೊಟ್ಟರು ಎಂದು ಕೇಳುವುದು; ನಿಮ್ಮ ಯಜಮಾನಿಕೆಯನ್ನು ನಾವು ಒಪ್ಪುವುದಿಲ್ಲ ಎಂದು ಹೇಳುವುದೇ ಅನಾರ್ಕಿಸಂ. ಯಜಮಾನಿಕೆ ನಡೆಸುವರು ಹಕ್ಕುಗಳನ್ನು ಕಿತ್ತುಕೊಂಡಾಗ, ಏರುಪೇರನ್ನು ಹುಟ್ಟಿದಾಗ ಹಾಗೆ ಮಾಡಲು ಅವರಿಗೆ ಯಾರು ಅನುಮತಿ ಕೊಟ್ಟವರು ಎಂದು ಕೇಳುವವರೇ ಅನಾರ್ಕಿಸ್ಟರು. ಅಂದರೆ ಎಲ್ಲೆಲ್ಲಿ ಹಿಡಿತವಿಲ್ಲದ ಯಜಮಾನಿಕೆ ಇರುವುದೋ, ಎಲ್ಲಿ ಯಜಮಾನಿಕೆ ನಡೆಸುವವರೋ ತಮ್ಮನ್ನು ಕೇಳುವವರು ಯಾರೂ ಇಲ್ಲ ಎಂದು ಮೆರೆಯುತ್ತಾರೋ ಅಲ್ಲೆಲ್ಲಾ ಅನಾರ್ಕಿಸ್ಟರು ಇದ್ದೇ ಇರುತ್ತಾರೆ.

ಕೊಂಚ ಹಳೆಯ ಕತೆಯನ್ನು ನೋಡಿ. ವೈದಿಕತೆ, ಆಚರಣೆಗಳು ಎದುರಾಳಿಗಳಿಲ್ಲವೆಂದು ಮೆರೆದಾಗ, ರಾಜತ್ವಕ್ಕೆ ಲಗಾಮುಗಳಿಲ್ಲದೇ ಹೋದಾಗ ಈ ಎರಡೂ ಬಗೆಯ ಯಜಮಾನಿಕೆಗಳ ಎದುರು ನಿಂತವರು ಅನಾರ್ಕಿಸ್ಟರೇ ಅಲ್ಲವೇ. ಅವರು ನಿಯಮಗಳನ್ನು ಮೀರಿದರು; ಅಚ್ಚುಕಟ್ಟಾಗಿರುವುದನ್ನು ತಲೆಕೆಳಗು ಮಾಡಿದರು. ಯಜಮಾನಿಕೆಗೆ ಸವಾಲು ಎಸೆದರು. ಹಾಗೆ ನೋಡಿದರೆ ಎಲ್ಲಕಾಲಗಳಲ್ಲೂ ಒಂದಲ್ಲ ಒಂದು ಬಗೆಯ ಅನಾರ್ಕಿಸಂ ಇದ್ದದ್ದೇ. ಎಲ್ಲ ಕಾಲಗಳಲ್ಲೂ ಅನಾರ್ಕಿಸಂ ಎಂಬುದು ಯಜಮಾನಿಕೆಯನ್ನು ಮುರಿಯುವುದರಲ್ಲಿ ಗೆಲುವು ಕಂಡಿತೋ ಇಲ್ಲವೋ ಎಂಬುದನ್ನು ನಿಕ್ಕಿಯಾಗಿ ಹೀಗೇ ಎಂದು ಹೇಳಲು ಬರುವುದಿಲ್ಲ. ಆದರೆ ಅದು ಎಲ್ಲ ಕಾಲಗಳಲ್ಲೂ ತಾನು ಇದ್ದೇನೆಂದು ತೋರಿಸಿಕೊಂಡಿರುವುದಂತೂ ದಿಟ.

ಅನಾರ್ಕಿಸಂ ದಾರಿಯೋ ಇಲ್ಲವೇ ಗುರಿಯೋ? ಅಂದರೆ ಯಜಮಾನಿಕೆಯನ್ನು ಮುರಿದು ಅದರ ಬದಲಾಗಿ ಅದರ ಜಾಗದಲ್ಲಿ ತಲೆ ಎತ್ತಬೇಕಾದ ನೆಲೆಗಳನ್ನು ಅನಾರ್ಕಿಸಂ ತನ್ನ ಗುರಿಯನ್ನಾಗಿ ಇರಿಸಿಕೊಂಡಿರುತ್ತದೋ ಇಲ್ಲವೇ ಯಜಮಾನಿಕೆಗೆ ಸವಾಲು ಹಾಕಲು ಬೇಕಾದ ಒಳ ಮತ್ತು ಹೊರದಾರಿಗಳನ್ನು ಮಾತ್ರ ಹುಡುಕುತ್ತಿರುತ್ತದೋ? ಚರಿತ್ರೆಯುದ್ದಕ್ಕೂ ಅನಾರ್ಕಿಸಂ ಈ ಎರಡೂ ನೆಲೆಗಳಲ್ಲಿ ಕಂಡುಬಂದಿದೆ. ಅನಾರ್ಕಿಸಂ ಎಂಬುದು ಬದಲೀ ನೆಲೆಯಾಗಿದ್ದರೆ ಅಂದರೆ ಅದೊಂದು ಗುರಿ ಎಂದು ಕೊಂಡರೆ ನಮ್ಮ ಚರಿತ್ರೆಯಲ್ಲಿ ಅದೊಂದು ಈಡೇರದ ಬಯಕೆಯಾಗಿಯೇ

ಕಂಡುಬರುತ್ತದೆ. ಬಿಡುಗಡೆ ಮತ್ತು ಕಟ್ಟುಪಾಡುಗಳೆರಡೂ ಇದ್ದು ಹೊರಗಿನ ಯಾವ ಒತ್ತಾಯವಾಗಲೀ ಇರದ ಮತ್ತು ಒತ್ತಾಯವನ್ನು ಹೇರುವ ಯಜಮಾನಿಕೆಯಾಗಲೀ ಇಲ್ಲದಿರುವ ನೆಲೆಯನ್ನು ಅನಾರ್ಕಿಸಂ ಬಯಸುತ್ತದೆ. ಒಂದು ವೇಳೆ ಅನಾರ್ಕಿಸಂ ಒಂದು ದಾರಿ ಎನ್ನುವುದಾದರೆ ಅದು ಯಜಮಾನಿಕೆಯ ನೆಲೆಗಳಿಗೆ ಎಚ್ಚರಿಕೆಯನ್ನು ನೀಡುವ, ಅದು ಹದ್ದು ಮೀರದಂತೆ ನೋಡಿಕೊಳ್ಳುವ ಕೆಲಸವನ್ನು ಮಾಡುತ್ತಿರುತ್ತದೆ ಎಂದುಕೊಳ್ಳಬೇಕಾಗುತ್ತದೆ.

ಇದೆಲ್ಲವನ್ನೂ ನೋಡಿದಾಗ ಯಾರಾದರೂ ಅನಾರ್ಕಿಸ್ಟ್ ಆಗಿದ್ದರೆ ಇಲ್ಲವೇ ಹಾಗೆಂದು ತಮ್ಮನ್ನು ತಾವು ಕರೆದುಕೊಂಡರೆ ನಾವು ಅವರನ್ನು ಬುಡಮೇಲುಕಾರರೆಂದು, ಅಚ್ಚುಕಟ್ಟಾಗಿರುವ ಜೋಡಣೆಯನ್ನು ಹಾಳುಗೆಡಹುವವರೆಂದು, ನಿಯಮಗಳ ಪಾಲನೆಗೆ ಸೊಪ್ಪು ಹಾಕದವರೆಂದು ತಿಳಿಯಬೇಕಾಗಿಲ್ಲ ಎನ್ನುವುದು ಗೊತ್ತಾಗುತ್ತದೆ. ಅನಾರ್ಕಿ ಇಲ್ಲವೇ ನಾವು ಬಣ್ಣಿಸುವಂತೆ ಅರಾಜಕತೆ ಎನ್ನುವುದು ಗೊಂದಲ, ಗೋಜಲುಗಳಿಗೆ ಸಾಟಿಯಾದ ಪದವಲ್ಲ. ಗೊಂದಲ ಹುಟ್ಟಿಸುವವರಿಗೆ, ದೊಂಬಿ ಮಾಡುವವರಿಗೆ ಗುರಿಗಳಿರುವುದಿಲ್ಲ. ಆದರೆ ಆನಾರ್ಕಿಸಂ ಎನ್ನುವುದು ಒಂದು ರಾಜಕೀಯ ಚೌಕಟ್ಟು, ಕೇವಲ ದೊಂಬಿ ಮಾತ್ರ ಅದರ ಗುರಿಯಾಗಲಾರದು.

ಮಂದಿಯಾಳ್ವಿಕೆಯ ಏರ್ಪಾಟಿನಲ್ಲಿ, ಅಂದರೆ ಪ್ರಜಾಪ್ರಭುತ್ವದಲ್ಲಿ ನಾವು ಒಪ್ಪದ ನಿಲುವನ್ನು ಮುಂದಿಡಲು ಚರ್ಚೆ, ಮಾತುಕತೆ ಇವೇ ಮುಂತಾದ ದಾರಿಗಳಿವೆ; ಅದಕ್ಕಾಗಿಯೇ ಏರ್ಪಾಟಾದ ಸದನಗಳಿವೆ ಎಂದು ಹೇಳುವುದುಂಟು. ಇವರು ಅನಾರ್ಕಿಯನ್ನು ಒಪ್ಪದವರು. ದಿಟ. ಮಾತಾಡುವ ಹಕ್ಕು ಎಲ್ಲರಿಗೂ ಇದೆ. ಆದರೆ ಬೇರೆಯವರ ಮಾತು ಕೇಳಿಸಿಕೊಳ್ಳುವ ಹೊಣೆ ಎಲ್ಲರಿಗೂ ಇಲ್ಲವಲ್ಲ. ಮಾತುಕತೆ, ಚರ್ಚೆಗಳ ಗುರಿ, ಸದನಗಳ ನಡಾವಳಿಗಳು ಸಹಮತವನ್ನು ಬಲಪಡಿಸುವುಕ್ಕಾಗಿ ಇರಬೇಕು. ಆದರೆ ಅಲ್ಲೆಲ್ಲಾ ಅಂತಹ ಸಹಮತ ಉಂಟಾಗುವುದನ್ನು ತಪ್ಪಿಸುವುದೇ ಗುರಿಯಾದರೆ ಏನು ಮಾಡುವುದು. ಯುದ್ಧ ತಪ್ಪಿಸಲು ಸಂಧಿಗಾಗಿ ಬಂದ ಕೃಷ್ಣ ಬರುವ ಮೊದಲೇ 'ಕಾಳಗವನ್ನು ಬಲಿದು ಬಹೆನು' ಎಂದು ಮಾತು ಕೊಟ್ಟು ಬಂದಿದ್ದರೆ ಸಂಧಿ ನಡೆಯುವುದು ಎಲ್ಲಿಂದ? ಅಂದರೆ ಕಾಲಕಾಲಕ್ಕೆ ಮಂದಿಯಾಳ್ವಿಕೆಯ ಏರ್ಪಾಟು ಹುಟ್ಟಿಹಾಕುವ ಅಧಿಕಾರ ಕೇಂದ್ರಗಳ ಹಿಂದಿನ ಅತಾರ್ಕಿಕತೆಗಳನ್ನು ಬಯಲು ಮಾಡಬೇಕಾಗುತ್ತದೆ. ಅವುಗಳಿಗೆ ಆ ಅಧಿಕಾರ ಬಂದುದೆಲ್ಲಿಂದ ಎಂದು ಕೇಳಬೇಕಾಗುತ್ತದೆ. ಅದಕ್ಕಾಗಿಯೇ ಅನಾರ್ಕಿಸಂನ ದಾರಿಗಳು ತೆರೆದುಕೊಳ್ಳುತ್ತವೆ.

ಹಾಗಿದ್ದರೆ ಈ ಬರಹದ ಗುರಿ ಏನು? ಇದೆಲ್ಲವನ್ನೂ ಹೇಳಿದ್ದು ಅನಾರ್ಕಿಸಂನ ಬಗೆಗೆ ವಕಾಲತ್ತು ಮಾಡುವುದಕ್ಕಾಗಿ ಅಲ್ಲ. ಒಂದು ಪದವನ್ನು ಬಳಸುವಾಗ ಅದು ನಮ್ಮ ಬದುಕಿನಲ್ಲಿ ಯಾಕೆ ನೆಲೆಗೊಂಡಿದೆ ಎಂಬುದನ್ನು ತಿಳಿಯದೇ ಬಳಸುವುದು ಸರಿಯಲ್ಲ ಎಂದು ಹೇಳುವುದು. ಅಲ್ಲದೆ ಪದಗಳ ಮೊರೆಹೊಕ್ಕು ಅವುಗಳ ಹಿಂದೆ ಅವಿತುಕೊಂಡು ನಮ್ಮ ತಿಳಿವನ್ನು, ತಿಳಿವಿನ ದಾರಿಗಳನ್ನು ಮುಚ್ಚಿಕೊಳ್ಳುವುದು ಸರಿಯಲ್ಲ ಎಂದು ಅರಿತುಕೊಳ್ಳುವುದು ಈ ಬರಹದ ಗುರಿ.

***

ಜಾಗತೀಕರಣ, ಸ್ಥಳೀಕರಣ: ಕನ್ನಡದ ನೆಲೆಗಳು

ಪ್ರಸ್ತುತ ಈ ವಿಶಯವನ್ನು ಕುರಿತು ಎಲ್ಲಿಂದ ಮಾತಾಡಬೇಕು ಎನ್ನುವ ಸಂದೇಹ ನನಗಿದೆ. ಸ್ಥಳೀಕರಣ ಎನ್ನುವ ಪಾರಿಭಾಷಿಕ ಪದದ ವಿಸ್ತಾರವೇನು ಎನ್ನುವ ಗೊಂದಲವಿದೆ. ಅಂದರೆ, ಲೋಕಲೈಸೇಶನ್ ಎಂದರೆ ಏನು ಎಂಬುದನ್ನು ಮುಂದುವರಿದ ಹಂತದಲ್ಲಿ ಮಾತಾಡುವವನಿದ್ದೇನೆ. ಒಂದು ಸಣ್ಣ ಪ್ರಸಂಗವನ್ನು ಉಲ್ಲೇಖಿಸಿ ನನ್ನ ಉಪನ್ಯಾಸವನ್ನು ಶುರು ಮಾಡುತ್ತೇನಿ. ನನ್ನ ಊರಿಗೆ ಸಂಬಂಧಪಟ್ಟ ಪ್ರಸಂಗವಿದು. ನನ್ನ ಊರು ಕಂಪ್ಲಾಪುರ. ಮೈಸೂರು ಜಿಲ್ಲೆಯ ಕೊಡಗಿನ ಭಾಗದ ಕಡೆಗೆ ಇದೆ. ಪಶ್ಚಿಮ ಘಟ್ಟದ ಕೊನೆಕೊನೆಯ ಬೆಟ್ಟಗಳು ನಮ್ಮೂರಿನಿಂದ ಕಾಣಿಸುತ್ತವೆ. ಅಂತಹ ಒಂದು ಬೆಟ್ಟವನ್ನು ನಾವು ಚಿಕ್ಕಂದಿನಿಂದ ನೋಡಿಕೊಂಡು ಬಂದಿದ್ದೇವೆ. ಆ ಬೆಟ್ಟದ ಹೆಸರು ಮಾಕಾಳಯ್ಯನ ಬೆಟ್ಟ. ನಮ್ಮ ಮನೆಯ ಹೊರಗೆ ನಿಂತುಕೊಂಡು ಪಶ್ಚಿಮಕ್ಕೆ ನೋಡಿದರೆ ಆ ಬೆಟ್ಟ ಕಾಣಿಸುತ್ತದೆ. ಆದರೆ ಬೆಟ್ಟದ ಬಗೆಗಿನ ನೆನಪು ನಮಗೆ ವರ್ಷದಿಂದ ವರ್ಷಕ್ಕೆ ಮುಂಚೂಣಿಗೆ ಬರುತ್ತಿತ್ತು. ಏಕೆಂದರೆ, ಊರಿನಲ್ಲಿ ಮಳೆ ಇಲ್ಲ ಅಂದ್ರೆ ನಮ್ಮೂರಿನ ಎಲ್ಲಾ ಜನರೂ ಅಲ್ಲಿಗೆ ಹೋಗುತ್ತಿದ್ದರು. ಬೆಟ್ಟದ ಮೇಲೆ ಒಂದು ಚೋಳರ ಕಾಲದ ದೇವಾಲಯವಿದೆ. ಆ ದೇವಾಲಯದಲ್ಲಿ ಪೂಜೆ ಮಾಡಿ ಬಂದರೆ, ಮಳೆ ಬರುತ್ತದೆ ಎಂಬುದು ನಮ್ಮೂರಿನ ಜನರ ಒಂದು ನಂಬಿಕೆ. ಪ್ರತಿ ವರ್ಷವೂ ಇದು ನಡಕೊಂಡು ಬರುತ್ತಿತ್ತು. ಇಪ್ಪತ್ತು ಇಪ್ಪತ್ತೈದು ವರ್ಷಗಳ ಹಿಂದೆ ಒಮ್ಮೆ ನಾನೂ ಕೂಡ ಬೆಟ್ಟವನ್ನು ಹತ್ತಿಕೊಂಡು ಮೇಲಕ್ಕೆ ಹೋಗಿದ್ದೆ. ಅಲ್ಲೊಂದು ದೇವಸ್ಥಾನವಿರುವುದು ನಿಜ. ಅದು ಈಶ್ವರನ ದೇವಸ್ಥಾನ. ಚೋಳರು ಕಟ್ಟಿರುವ ಶಿವಾಲಯಗಳ ಮಾದರಿಯಲ್ಲೇ ಇದೆ. ಅಲ್ಲಿ ಒಂದು ಶಿಲ್ಪವಿದೆ. ಸ್ಥಳೀಯರು ಅದನ್ನು ದಶರಥನ ಬೊಂಬೆ, ದಶರಥನ ಶಿಲ್ಪ ಎಂದು ಹೇಳುತ್ತಾರೆ. ದಶರಥನ ಶಿಲ್ಪ ಇಲ್ಲಿಗೆ ಹೇಗೆ ಬಂತು ಎಂದು ಕೇಳಿದರೆ ಅವರ ಹತ್ತಿರ ಒಂದು ಕತೆ ಇದೆ. ಅಲ್ಲೊಂದು ಚಿಕ್ಕ ದೊಣೆ ಇದೆ. ದೊಣೆ ಎಂದರೆ ನೀರಿನ ಒಂದು ಸಂಗ್ರಹದ ಜಾಗ. ಅದನ್ನು ಸೀತೆಯ ದೊಣೆ ಎಂದು ಕರೆಯುತ್ತಾರೆ. ಮರದ ಪೊಟರೆಯಿಂದ ನೀರು ಈಚೆಗೆ ಬರುತ್ತದೆ. ಆ ನೀರು ಬಹಳ ತಣ್ಣಗಿರುತ್ತದೆ. ಎಲ್ಲಾ ಹಳ್ಳಿಗಳಲ್ಲಿ ಇರುವ ಕತೆಯ ಪ್ರಕಾರ ಅಲ್ಲಿ ಕೂಡ ಸೀತೆ ಸ್ನಾನ ಮಾಡುತ್ತಿದ್ದಳು ಎಂಬುದು ಪ್ರತೀತಿ. ಸೀತೆ ಸ್ನಾನ ಮಾಡುತ್ತಿರುವಾಗ ಅವಳ ಮಾವ ದಶರಥ ಅದನ್ನ ನೋಡಿಬಿಟ್ಟನಂತೆ. ಅವನು ನೋಡಿದ್ದರಿಂದ ಸೀತೆಗೆ ಕೋಪ ಬಂದು, ದಶರಥನಿಗೆ ಶಾಪ ಕೊಡುತ್ತಾಳೆ. ಮಾವ ಕಲ್ಲಾಗಿದ್ದು ಮಾವ ಕಲ್ಲಯ್ಯನ ಬೆಟ್ಟ ಎಂದು ಹೆಸರಾಯಿತು. ಅದಕ್ಕೋಸ್ಕರ ಆ ದೇವಸ್ಥಾನದಲ್ಲಿ ದಶರಥನ ಶಿಲ್ಪವನ್ನು ಕೆತ್ತಲಾಗಿದೆ. ಮಾವು ಕಲ್ಲಯ್ಯನ ಬೆಟ್ಟಾನೆ ಮಾಕಳಯ್ಯನ ಬೆಟ್ಟ ಆಯಿತು ಎಂದು ಜನ ಕತೆ ಹೇಳುತ್ತಾರೆ.

ಎರಡು ಬಗೆಯ ಇಂಟರ್‌ಪ್ರಿಟೇಶನ್ನುಗಳು ನಮ್ಮ ಎದುರಿಗಿವೆ. ಮಾಕಾಳಯ್ಯನ ಬೆಟ್ಟ, ಮಹಾಕಾಳೇಶ್ವರನ ದೇವಸ್ಥಾನ ಅಲ್ಲಿರುವುದರಿಂದ ಮಹಾಕಾಳ ಅನ್ನೋದು ಮಾಕಾಳ ಆಗಿದೆಯೋ, ಅಥವಾ ಮಾವ ಕಲ್ಲಯ್ಯ ಅನ್ನೋದು ಮಾಕಾಳಯ್ಯ ಆಗಿದೆಯೋ. ನಮ್ಮ ಅಕೆಡೆಮಿಕ್ ಡಿಸಿಪ್ಲೀನ್ ಯಾವಾಗಲೂ ಏನು ಹೇಳುತ್ತದೆ ಎಂದರೆ, ಮಹಾಕಾಳ ಮಾಕಾಳ ಆಗಿದೆ ಅನ್ನೋದು ಅಧಿಕೃತ, ಇನ್ನೊಂದು ಫೋಕ್ ಇಂಟರ್‌ಪ್ರಿಟೇಶನ್–ಜನಪದ ವ್ಯಾಖ್ಯಾನ ಅಂತಾ. ಹೀಗೆ ಮಾಡಿಕೊಂಡಿರುವುದು ಜನರ ಒಂದು ಅಭ್ಯಾಸ. ಊರೂರಿಗೆ ಒಂದೊಂದು ಕತೆಗಳನ್ನ ಕಟ್ಟಿಕೊಂಡಿರುತ್ತಾರೆ. ಇಲ್ಲಿ ಸೀತೆ ಸ್ನಾನ ಮಾಡಿದಳು, ಅಲ್ಲಿ ಲಕ್ಷ್ಮಣ ಬಂದಿದ್ದ, ಇಲ್ಲಿ ಭೀಮ ಅಡಿಗೆ ಮಾಡಿದ್ದ, ಪಾಂಡವರ ಹೆಜ್ಜೆಗಳಿವೆ ಇಲ್ಲಿ, ಮಹಾಭಾರತ–ರಾಮಾಯಣ ಇವುಗಳೆಲ್ಲದರ ಕತೆಗಳು ಸಿಗುತ್ತವೆ.

ಇವುಗಳಲ್ಲಿ ಒಂದನ್ನು ಪ್ರಧಾನ ಎಂತಲೂ, ಅರ್ಥಾತ್ ಮುಖ್ಯಧಾರೆಯ ಚಿಂತನೆಗಳೇನಿವೆಯಲ್ಲ ಅವುಗಳನ್ನು ಪ್ರಧಾನ ಅಂತಲೂ, ಜನರು ಹೇಳುತ್ತಿರುವಂತಹ ಮಾತುಗಳನ್ನು ಅಧೀನ ಅಂತಾಲೂ ತಿಳಿದುಕೊಳ್ಳುವ ಒಂದು ಅಕೆಡೆಮಿಕ್ ಡಿಸಿಪ್ಲೀನ್ ನಮ್ಮಲ್ಲಿದೆ. ನಾನೀಗ ಅದನ್ನು ಪ್ರಶ್ನಿಸಲು ಹೊರಡುತ್ತಿದ್ದೇನೆ. ಒಂದು ಇಂಟರ್‌ಪ್ರಿಟೇಶನ್‌ನ ಯಜಮಾನ ನೆಲೆ, ಅಥವಾ ಅಧಿಕೃತ ನೆಲೆ–ಪ್ರಧಾನ ನೆಲೆ ಎಂದು ಇರುತ್ತದೆ. ಉಳಿದೆಲ್ಲವೂ ಕೂಡ ಅದಕ್ಕೆ ಅಧೀನವಾದದ್ದು ಎಂದು ನಾವು ಸಾಮಾನ್ಯವಾಗಿ ಹೇಳುತ್ತೇವೆ. ಅಂದರೆ, ನಿಜವಾದದ್ದು, ಅಧಿಕೃತವಾದ್ದು ಯಾವುದೋ ಅದನ್ನು ಪ್ರಧಾನವಾದದ್ದು ಎಂದು ನಂಬಿಸಲಾಗುತ್ತದೆ. ಅದಕ್ಕೆ ಯಾವುದೇ ಬಗೆಯ ವ್ಯಾಖ್ಯಾನಗಳು ಬಂದಿದ್ದರೆ ಅದು ಮೈನರ್ ಟ್ರೆಡಿಶನ್ ಎಂದು ಹೇಳಿಬಿಡುತ್ತೇವೆ. ಅದು ಪ್ರಧಾನವಲ್ಲ, ಅಧೀನವಾದದ್ದು ಎಂದು ತಿಳಿಯುವ ಪದ್ಧತಿ ನಮ್ಮ ಶೈಕ್ಷಣಿಕ ಕ್ರಮದಲ್ಲಿ ಗಾಢವಾಗಿ ಬೇರು ಬಿಟ್ಟಿದೆ. ಉದಾಹರಣೆಗೆ, ವಚನಗಳನ್ನು ಇಂಗ್ಲಿಶಿಗೆ ಅನುವಾದ ಮಾಡಿದ ರಾಮಾನುಜನ್ ಅವರ ಸ್ಪೀಕಿಂಗ್ ಆಫ್ ಶಿವ ಪುಸ್ತಕದಲ್ಲಿರುವ ಮೊದಲ ಮಾತುಗಳಲ್ಲಿ ಎರಡು ಪದಗಳನ್ನು ಬಳಸಿದ್ದಾರೆ. ಗ್ರೇಟ್ ಟ್ರೆಡಿಶನ್ ಅಂಡ್ ಲಿಟಲ್ ಟ್ರೆಡಿಶನ್ ಅಂತಾ. ಭಾರತದಾದ್ಯಂತ ಒಂದು ಗ್ರೇಟ್ ಟ್ರೆಡಿಶನ್ ಇದೆ. ಸ್ಥಳೀಯವಾದದ್ದು ಲಿಟಲ್ ಟ್ರೆಡಿಶನ್ ಅಂತಾ. ಈ ಗ್ರೇಟ್ ಮತ್ತು ಲಿಟಲ್ ಎನ್ನುವ ಎರಡು ಪದಗಳು ಕೇವಲ ವರ್ಣನಾತ್ಮಕವಾದ ಪದಗಳಲ್ಲ. ಡಿಸ್ಕ್ರೈಬ್ ಮಾಡುತ್ತಿಲ್ಲ ಅವರು, ಒಂದು ರೀತಿ ಡಿನೋಟ್ ಕೂಡ ಮಾಡುತ್ತಿದ್ದಾರೆ. ಅಂದರೆ, ಒಂದು ಪ್ರಧಾನವಾದದ್ದು, ಇನ್ನೊಂದು ಅದಕ್ಕೆ ಹೋಗಿ ಸೇರುವ ಲಿಟಲ್ ಟ್ರೆಡಿಶನ್. ಅದು ಅಪ್ರಧಾನವಾದದ್ದು, ಅಧೀನವಾದದ್ದು ಎಂದು ಹೇಳಲಾಗುತ್ತಿದೆ. ಇವನ್ನ ನಾವು ಒಂದರಿಂದ ಒಂದು ಹುಟ್ಟಿದ್ದು–ಮೂಲ ಒಂದಿರ್ತದೆ, ಅಂತಾ ತಿಳಿಯುವ ಪ್ರವೃತ್ತಿ ಇದೆಯಲ್ಲ ಇದನ್ನ ನಾವು ಬದಲಾಯಿಸಿಕೊಳ್ಳಬೇಕು ಅಂತಾ ನನಗನ್ನಿಸ್ತದೆ.ಅಂದ್ರೆ, ಸ್ಥಳೀಯವಾದದ್ದು ಅಂತೇನಿರ್ತದೆ, ಅದನ್ನ ನಾವು ಯಾವುದರಿಂದಲೋ ಹುಟ್ಟಿರ್ತಕ್ಕಂತದ್ದು, ಮೂಲವನ್ನ ಅಧಿಕೃತ ಅಂತಾ ತಿಳಿದು ಅದರಿಂದ ಜನ್ಯವಾಗಿರತ್ತಕ್ಕಂತದ್ದು ಅಂತಾ ನಾವು ಅಕೆಡೆಮಿಕ್ಕಾಗಿ ಶೈಕ್ಷಣಿಕವಾಗಿ ಒಪ್ಕೊಂಡಿದ್ದೀವಲ್ಲ, ಇದನ್ನ ನಾವು ಈಗ ಪ್ರಶ್ನಿಸಬೇಕಾಗಿದೆ ಅಂತಾ ನಾನು ಹೇಳ್ತಿರೋದು.ಇದು ಇವತ್ತಿನ ನನ್ನ ಒಟ್ಟಾರೆ ಉಪನ್ಯಾಸದ ಥೀಸಿಸ್ ಇದು.

ಏಕೆಂದರೆ, ಕನ್ನಡ ಪರಂಪರೆಯೇ ಪುರಾಣ ಮತ್ತು ಚರಿತ್ರೆ ಇವೆರಡರ ಸಂಬಂಧವನ್ನು ಮರುವ್ಯಾಖ್ಯಾನ ಮಾಡುತ್ತಿದೆ. ಚರಿತ್ರೆ ಎನ್ನುವುದು ಯಾವಾಗಲೂ ಕಾಲ ಮತ್ತು ದೇಶಕ್ಕೆ ಬದ್ಧವಾಗಿರುವಂತಹದ್ದು. ಯುಗ ಮತ್ತು ಜಗ; ಯುಗ ಅನ್ನೋದು ಟೈಮಿಗೆ ಸೇರಿರುವಂತಹದ್ದು, ಜಗ ಎನ್ನುವುದು ಸ್ಪೇಸ್‌ಗೆ ಸಂಬಂಧಪಟ್ಟಿರುವಂತಹದ್ದು. ಬೇಂದ್ರೆಯವರು ಕುವೆಂಪು ಬಗೆಗೆ ಬರೆದ ಕವಿತೆಯಲ್ಲಿ ಅವರನ್ನ ಯುಗದ ಕವಿ ಜಗದ ಕವಿ ಎಂದು ಕರೆದಾಗ ಅವರ ಮನಸ್ಸಿನಲ್ಲಿ ಇದ್ದದ್ದು-ಇತ್ತೋ ಇಲ್ಲವೋ ಗೊತ್ತಿಲ್ಲ, ನಾವೀಗ ಅರ್ಥ ಮಾಡಿಕೊಳ್ಳಬೇಕಾಗಿರುವುದು ಟೈಮ್ ಮತ್ತು ಸ್ಪೇಸ್. 'ದ' ಅನ್ನೋದನ್ನ ಕನ್ನಡದ ಷಷ್ಠಿ ವಿಭಕ್ತಿಯಲ್ಲಾದರೂ ತಗೊಳ್ಳಿ ನೀವು ಅಥವಾ ಯುಗ ಕೊಟ್ಟ ಜಗ ಕೊಟ್ಟ ಕವಿ ಅಂತಾ ಬೇಕಾದರೂ ಅರ್ಥ ಮಾಡ್ಕೊಳ್ಳಿ.

ಲೋಕದ ದೃಷ್ಟಿ ಯುಗ ಮತ್ತು ಜಗಗಳನ್ನ ಸಪರೇಟ್ ಮಾಡುವುದಿಲ್ಲ. ಕಾಲ ಮತ್ತು ದೇಶಗಳನ್ನು ಸಪರೇಟ್ ಮಾಡುವುದಿಲ್ಲ. ಬಹಳ ಸರಳವಾಗಿ ಹೇಳುವುದಾದರೆ, ಕನ್ನಡ ನುಡಿಯಲ್ಲಿ ಕೆಲವು ಪದಗಳಿವೆ. ಅವು ಟೈಮನ್ನೂ ಹೇಳುತ್ತವೆ, ಸ್ಪೇಸನ್ನೂ ಹೇಳುತ್ತವೆ. ನಾವು ದಿನನಿತ್ಯ ಬಳಸುವ 'ತನಕ' ಅನ್ನುವ ಪದ ಅಥವಾ 'ವರೆಗೆ' ಅನ್ನುವ ಪದ 'ವರೆಗೆ': **ನಾನು ಬರೋವರೆಗೆ ಅಲ್ಲೇ ಕುಳಿತಿರು**. ಅಂದರೆ ಏನಿದರ ಅರ್ಥ? ನಮ್ಮ 'ಟೈಮ್' ಅದು. **ನನ್ನನ್ನ ಬೀದಿ ಕೊನೆವರೆಗೆ ಕರೆದುಕೊಂಡು ಹೋಗು**. ಈ ವಾಕ್ಯದಲ್ಲಿ 'ವರೆಗೆ' ಅಂದ್ರೆ ಅಲ್ಲೇನು ಅರ್ಥ ಬರುತ್ತದೆ-ಸ್ಪೇಸ್, ಡಿಸ್ಟೆನ್ಸ್ ಅನ್ನೋ ಅರ್ಥ ಬರುತ್ತದೆ. ಕನ್ನಡದ ಒಳನುಡಿಗಳಲ್ಲಿ ಈ ತರಹದ ಹತ್ತಾರು ಪದಗಳಿವೆ. ಟೈಮ್ ಅಂಡ್ ಸ್ಪೇಸ್ ಅನ್ನು ಒಂದೇ ಪದದ ಮೂಲಕ ಹೇಳುವ ಪದಗಳು. ಇದು ಕನ್ನಡದ ನುಡಿಯೊಳಗಿರುವ ಒಂದು ಲೋಕದೃಷ್ಟಿ. ಅಂದರೆ, ಕಾಲ ಮತ್ತು ದೇಶಗಳು ಬೇರೆ ಬೇರೆಯಲ್ಲ. ಅವೆರಡೂ ಒಂದೇನೆ. ಯುಗ ಮತ್ತು ಜಗಗಳು ಬೇರ್ಪಟ್ಟಿರುವುದಿಲ್ಲ. ಪುರಾಣಕ್ಕೆ ಕಾಲ ದೇಶಗಳ ಹಂಗಿಲ್ಲ. ಏಕೆಂದರೆ, ಯಾವ ಕಾಲದಲ್ಲಿ ನಡೆಯಿತು, ಯಾವ ಪ್ರದೇಶದಲ್ಲಿ ನಡೆಯಿತು ಎಂಬುದನ್ನು ಗುರುತು ಮಾಡಲಿಕ್ಕೆ ಆಗುವುದಿಲ್ಲ. ಚರಿತ್ರೆಗೆ ಹಾಗಲ್ಲ. ಯಾವುದೋ ಒಂದು ಕಾಲದಲ್ಲಿ ಒಂದು ಘಟನೆ ನಡೆದಿರುತ್ತದೆ, ಮತ್ತೆ ಅದು ಒಂದು ಪ್ರದೇಶದಲ್ಲಿ ನಡೆದಿರುತ್ತದೆ. ಕಾಲ ದೇಶ ಎರಡೂ ಕೂಡ ಅದಕ್ಕೆ ಇರುತ್ತದೆ.

ಕಾಲ ದೇಶಗಳ ಹಂಗು ಇಲ್ಲದೇ ಇರುವ ಪುರಾಣ, ಕಾಲ ದೇಶಗಳ ಹಂಗಿಗೆ ಕಟ್ಟು ಬಿದ್ದಿರುವ ಚರಿತ್ರೆ, ಇವೆರಡನ್ನೂ ಕೂಡ ಒಟ್ಟಿಗೆ ತಗೆದುಕೊಂಡು ಬಂದು ನಿರಂತರವಾಗಿ ಮರುವ್ಯಾಖ್ಯಾನ ಮಾಡುತ್ತಿರುವುದು ಕನ್ನಡ ಪರಂಪರೆಯ ಒಂದು ಮುಖ್ಯ ಗುರುತು. ಅಂದರೆ, ನಮ್ಮ ಕವಿಗಳು ಇದನ್ನು ಹೇಗೆ ಮಾಡಿಕೊಂಡು ಬಂದಿದ್ದಾರೆ ನೋಡೋಣ. ಉದಾಹರಣೆಗೆ; ಕಾಲ ದೇಶಗಳ ನಡುವಣ ಸಂಬಂಧವನ್ನ ಕನ್ನಡ ಗ್ರಹಿಸುವ ಕ್ರಮದಲ್ಲೇ ಪುರಾಣ ಮತ್ತು ಚರಿತ್ರೆಗಳ ನಂಟನ್ನು ಮರು ವ್ಯಾಖ್ಯಾನ ಮಾಡುತ್ತಿರುತ್ತಾರೆ. ಕನ್ನಡ ಕವಿಗಳ ಒಂದು ನಿದರ್ಶನವನ್ನ ನೋಡೋಣ; ಪಂಪನನ್ನೇ ತೆಗೆದುಕೊಳ್ಳೋಣ. ವಿಕ್ರಮಾರ್ಜುನ ವಿಜಯದ ಮೊದಲನೇ ಪದ್ಯ ಬಹಳ ಪ್ರಖ್ಯಾತವಾದದ್ದು;

ಶ್ರೀಯನರಾತಿ ಸಾಧನ ಪಯೋನಿಧಿಯೊಳ್ ಪಡೆದುಂ
ಧರಿತ್ರಿಯುಂ ಜೀಯೆನೆ ಬೇಡಿಕೊಳ್ಳದೆ
ವಿರೋಧಿ ನರೇಂದ್ರರುಂ ಒತ್ತಿಕೊಂಡುಂ
ಆಶ್ರೀಯ ಸುಪುಷ್ಪ ವೃಷ್ಟಿಯಂ
ಒಡಂಬಡೆ ತಾಳ್ದಿಯುಂ
ಇಂತು ಉದಾತ್ತ ನಾರಾಯಣನಾದ ದೇವನುಂ
ಎಮಗೆ ಈಗೆ ಅರಿಕೇಸರಿ ಸೌಖ್ಯಕೋಟಿಯಂ

ಇಬ್ಬರನ್ನ ಹೋಲಿಸ್ತಾ ಇದಾನೆ ಪಂಪ ಇಲ್ಲಿ. ಒಬ್ಬ ಅರಿಕೇಸರಿ, ಇನ್ನೊಬ್ಬ ವಿಷ್ಣು. ಅವರಿಬ್ಬರಿಗೂನು ಕೆಲವು ಸಂಬಂಧಗಳಿವೆ. ಒಬ್ಬ ಚರಿತ್ರೆಯ ವ್ಯಕ್ತಿ(ಅರಿಕೇಸರಿ), ಇನ್ನೊಬ್ಬ ಪುರಾಣದ ವ್ಯಕ್ತಿ(ನಾರಾಯಣ). ಇವರಿಬ್ಬರನ್ನೂ ಕೂಡ ಒಟ್ಟಿಗೆ ತಗೊಂಬಂದು ಅವನ ಕತೆಗಳನ್ನ ಇವನ ಕತೆಗಳನ್ನ ಕಂಪೇರ್ ಮಾಡ್ತಾ ಇದಾನೆ. ವಿಷ್ಣು ಕೂಡ ಲಕ್ಷ್ಮಿಯನ್ನ ಯಾವುದೋ ಸಮುದ್ರದ ಮಂಥನದಲ್ಲಿ ಪಡೆದ.ಅರಿಕೇಸರಿ ಕೂಡ ಶತ್ರು ಎನ್ನುವ ಸಾಗರವನ್ನು ಕಡೆದು ಲಕ್ಷ್ಮಿಯನ್ನು ಪಡೆದವನು. ಎರಡನೇದು ಬಹಳ ಇಂಪಾರ್ಟೆಂಟು. **ಧರಿತ್ರಿಯುಂ ಜೀಯೆನೆ ಬೇಡಿಕೊಳ್ಳದೆ**; ಧರಿತ್ರಿಯನ್ನ 'ಅಪ್ಪಾ ಕೊಡು' ಅಂತಾ ಬೇಡಿಕೊಳ್ಳದೆ ಪಡೆದನಂತೆ. ಹಾಗೆ ಬೇಡಿಕೊಂಡೋನು ಯಾರು? ವಿಷ್ಣು. ವಾಮನ ಬಲಿಯ ಹತ್ತಿರ ಬಂದು ನನಗೆ ಮೂರು ಹೆಜ್ಜೆ ಭೂಮಿಯನ್ನು ಕೊಡು ಅಂತಾ ಕೇಳಿದ; ಬೇಡಿಕೊಂಡ. ಆದರೆ, ಅರಿಕೇಸರಿ ಹಾಗಲ್ಲ, **ವಿರೋಧಿ ನರೇಂದ್ರರಂ ಒತ್ತಿಕೊಂಡು**–ಶತ್ರುಗಳನ್ನ ತನ್ನ ಅಧೀನಕ್ಕೆ ತಗೊಂಡು ನೆಲವನ್ನು ತನ್ನದನ್ನಾಗಿ ಮಾಡಿಕೊಂಡ. ಅಂದಾಗ ವಿಷ್ಣು ಬಲಿಚಕ್ರವರ್ತಿ ತಲೆ ಮೇಲೆ ಕಾಲಿಟ್ಟದ್ದು ನಿಮಗೆ ನೆನಪಿಗೆ ಬರಬಹುದು. ಎಲ್ಲಕ್ಕಿಂತ ಹೆಚ್ಚಾಗಿ ಅಲ್ಲಿ ಬಳಸುವ ಒಂದು ಪದ ಇದೆಯಲ್ಲ ಅದು ಬಹಳ ಇಂಪಾರ್ಟೆಂಟು– **ಜೀಯೆನೆ ಬೇಡಿಕೊಳ್ಳದೆ**–ಅನ್ನೋದು. ಪಂಪ ಇಲ್ಲಿ ಇನ್ನೊಂದು ಕೆಲಸವನ್ನೂ ಮಾಡ್ತಾ ಇದಾನೆ. ಅದು ನಾಟಕೀಯವಾದ ಒಂದು ವಿಧಾನ. ಸಂಸ್ಕೃತ ಕಾವ್ಯಗಳಲ್ಲಿ ಎಲ್ಲೂ ಇಂತಹ ಒಂದು ಮಾತಿನ ನಿದರ್ಶನ ಸಿಗೋದಿಲ್ಲ. ಪಂಪ ಸೃಷ್ಟಿಸಿದ ಕಾವ್ಯಭಾಷೆಯೊಳಗಡೆ ನಿರೂಪಣೆಯ ಭಾಷೆ ಮತ್ತು ನಾಟಕೀಯವಾದ ಭಾಷೆ ಹೇಗೆ ಬೆರೆತುಕೊಳ್ತವೆ, ಅದು ಹೇಗೆ ಮುಂದಿನ ಕವಿಗಳೆಲ್ಲ ಮಾಡ್ತಾರೆ ಅನ್ನೋದು ಬಹಳ ಇಂಟರೆಸ್ಟಿಂಗ್ ಆದ ಒಂದು ಸ್ಟಡಿ ಆಗ್ತದೆ. ಅವನು ಬರೀ ನಾರಾಯಣನಾದರೆ ಇವನು ಉದಾತ್ತ ನಾರಾಯಣನಾಗ್ತಾನೆ ಅರಿಕೇಸರಿ. ಇವನು ನಾರಾಯಣನಿಗಿಂತ ಮಿಗಿಲಾದವನು. ಅವನು ಸೌಖ್ಯಕೋಟಿಯನ್ನು ಕೊಡಲಿ ಅಂತಾ ಕೇಳಿಕೊಳ್ತಾ ಇದಾನೆ. ಪ್ರಾರ್ಥನೆಯಲ್ಲಿ ತನ್ನ ರಾಜನ ಜೊತೆಗೆ ದೈವವನ್ನ ನೆನೆಯುವ ಪದ್ದತಿಗೆ ಈ ಮೊದಲ ಮಾದರಿ ಇದೆಯಲ್ಲಾ ಇದು ಬಹಳ ಇಂಪಾರ್ಟೆಂಟಾದ ಮಾದರಿ ಇದು ಕನ್ನಡಕ್ಕೆ. ಯಾಕೆಂತಂದ್ರೆ, ಇಲ್ಲಿ ಕಾಣುತ್ತೆ ನಿಮಗೆ ಪುರಾಣ ಮತ್ತು ಚರಿತ್ರೆಗಳನ್ನು ಹೇಗೆ ಒಟ್ಟಿಗೆ ತಗೊಂಡು ಬರ್ತಾ ಇದಾರೆ ಅಂತ ಅನ್ನೋದು. ಕನ್ನಡ ದೃಷ್ಟಿ ಪುರಾಣ ಮತ್ತು ಚರಿತ್ರೆಗಳನ್ನ ಹೇಗೆ ಒಟ್ಟಿಗೆ ಬೆರೆಸ್ತದೆ ಅನ್ನೋದು. ಬೆರೆಸಿ ಅದನ್ನ ಮರು ವ್ಯಾಖ್ಯಾನವನ್ನ ಮಾಡೋಕೆ ಹೋಗ್ತಾ ಇರ್ತದೆ. ಈ ಮರುವ್ಯಾಖ್ಯಾನ ಎಲ್ಲಾ ಕವಿಗಳಲ್ಲೂ ಒಂದೇ ರೀತಿ ಇರುತ್ತೆ ಅಂತಲ್ಲ. ಬೇರೆಬೇರೆ ಕವಿಗಳಲ್ಲಿ ಬೇರೆಬೇರೆ ತರಹ ಇರ್ತದೆ. ಆದ್ದರಿಂದಾಗಿ, ಕನ್ನಡ ಕವಿಗಳಲ್ಲಿ, ಕನ್ನಡ ಕಾವ್ಯ ಪರಂಪರೆಯಲ್ಲಿ ಈ ರೀತಿಯಾಗಿ ಪುರಾಣ ಮತ್ತು ಚರಿತ್ರೆಗಳನ್ನ

ಮರುವ್ಯಾಖ್ಯಾನ ಮಾಡುವ ವಿಧಾನ ಇದೆಯಲ್ಲ, ಇದು ತನ್ನದೇ ಆದ ಒಂದು ವೈಶಿಷ್ಟ್ಯವನ್ನ ಹೊಂದಿರತಕ್ಕಂತದ್ದು.

ಸಾಮಾನ್ಯವಾಗಿ ಕನ್ನಡ ಕಾವ್ಯಗಳನ್ನ ಅಧ್ಯಯನ ಮಾಡಿರೋರು ಏನು ಹೇಳ್ತಾರೆ ಅಂತಂದ್ರೆ–ನೂರು ವರುಶಗಳಿಂದ ಹೇಳ್ಕೊಂಡು ಬಂದಿರೋದು–ಮೂಲ ಸಂಸ್ಕೃತ ಭಾರತ ಅದು ಪ್ರಧಾನವಾದದ್ದು, ಇದು ಕನ್ನಡದ, ತಮಿಳಿನ, ಅಥವಾ ಒಡಿಯ, ಬಂಗಾಳಿ ಭಾಷೆಯ ಮಹಾಭಾರತ ಪರಂಪರೆಗಳು ಅಧೀನವಾಗಿರತಕ್ಕಂತವು. ಅದನ್ನ ಅನುಸರಿಸಿ–ಅನುಕರಿಸಿ ಸೃಷ್ಟಿಸಿರುವ ಪರಂಪರೆಗಳು, ಸ್ಥಳೀಕರಣಗೊಂಡಾಗ ಅನುಕರಿಸಿ ಸೃಷ್ಟಿಯಾಗ್ತಾ ಇರ್ತವೆ ಅಂತಾ ಹೇಳ್ತಾ ಇದಾರೆ. ಹಾಗಲ್ಲ ಇದು.ಇವು ಮೂಲವನ್ನೇ ಬೇರೊಂದು ರೀತಿ ನೋಡುವ ಹಾಗೆ ನಮ್ಮನ್ನ ಪ್ರೇರೇಪಿಸ್ತವೆ. ಆ ಪ್ರಕ್ರಿಯೆಯನ್ನ ಕನ್ನಡ ಕವಿಗಳು ಹೇಗೆ ಸಾಧಿಸ್ತಾರೆ ಅನ್ನೋದು ಬಹಳ ಕುತೂಹಲಕಾರಿಯಾದ ಸಂಗತಿ.ಮತ್ತಷ್ಟು ಎಕ್ಸಾಂಪಲ್ಲುಗಳನ್ನ ಮುಂದೆ ಇಟ್ಟು ನಿಮಗೆ ಹೇಳೋಕೆ ಪ್ರಯತ್ನ ಪಡ್ತೀನಿ.ಅರಿಕೇಸರಿಯ ಉದಾಹರಣೆಗೆ ಮತ್ತೆ ಬರ್ತೀನಿ ನಾನು; ಈಗ ಸ್ಥಳೀಕರಣ ಅನ್ನೋದು 21ನೇ ಶತಮಾನದಲ್ಲಿ–ಗ್ಲೋಬಲ್ ಕಾಂಟೆಕ್ಸ್ಟ್‌ಲ್ಲಿ ಯಾಕೆ ಮುಖ್ಯವಾಗ್ತದೆ? ಯಾಕೆ ಒಂದು ಚರ್ಚೆಯನ್ನಾಗಿ ಎತ್ತಿಕೊಳ್ತಾ ಇದೇವೆ ಅನ್ನೋದನ್ನ ಗಮನಿಸೋಣ. ಸ್ಥಳೀಕರಣ ಅನ್ನೋದು ಕಾರ್ಪೋರೇಟ್ ವಲಯದ ಭಾಷೆ. ಯಾಕಂತಂದ್ರೆ, ಕಾರ್ಪೋರೇಟ್ ವಲಯದಲ್ಲಿ ಒಂದು ವಸ್ತು ಸೃಷ್ಟಿಯಾದ್ರೆ ಅಥವಾ ಒಂದು ವಸ್ತುವನ್ನ ಬ್ರಾಂಡ್ ಮಾಡಿದ್ರೆ ಅದು ಗ್ಲೋಬಲ್ ಮಾರ್ಕೆಟ್ಟಿಗೋಸ್ಕರ ಸಿದ್ದವಾಗಿರ್ತದೆ. ಅದನ್ನ ಬೇರೆಬೇರೆ ದೇಶಗಳ ಮಾರುಕಟ್ಟೆಗೆ ಬಿಡುಗಡೆ ಮಾಡಬೇಕಾದ್ರೆ, ಸ್ಥಳೀಯತೆಗೆ ಬೇಕಾದ ಹಾಗೆ ಅದರ ಚಹರೆಗಳನ್ನ ಬದಲಾಯಿಸ್ತಾ ಇರ್ತಾರೆ–ಲೋಕಲೈಸ್ ಮಾಡ್ತಾ ಇರ್ತಾರೆ.ನೀವು ಯಾರಾದರೂ ಸಾಫ್ಟ್‌ವೇರ್ ಇಂಜಿನಿಯರುಗಳನ್ನ ಕೇಳಿದ್ರೆ ಗೊತ್ತಾಗ್ತದೆ. ಒಂದು ಸಾಫ್ಟ್‌ವೇರ್ ಜಾಗತಿಕ ಅನುಕೂಲಗಳಿಗೆ ಅಗತ್ಯವಾಗಿರುವಂತೆ ರೂಪುಗೊಂಡಿರ್ತದೆ. ಆದರೆ ಅದನ್ನ ಸ್ಥಳೀಯ ಅಗತ್ಯಗಳಿಗೆ ಹೊಂದಿಸೋದು, ಅದನ್ನ ಲೋಕಲೈಸೇಶನ್ ಅಂತಾ ಕರೀತಾರೆ. ಈ ಕಾನ್ಸೆಪ್ಟು ನಮ್ಮ ಚರ್ಚೆಗೆ ನಿರುಪಯುಕ್ತವಾದದ್ದು. ಕಾರ್ಪೋರೇಟ್ ಸಂಸ್ಕೃತಿಯ ವ್ಯಾಖ್ಯಾನ ಏನು ಹೇಳುತ್ತೆ ಅಂತಂದ್ರೆ, ಮೂಲದ ಚಹರೆಯನ್ನ, ಅದರ ಸಾರವನ್ನ ಹಾಗೇ ಉಳಿಸಿಕೊಂಡು ಸ್ವಲ್ಪಮಟ್ಟಿನ ಬದಲಾವಣೆಗಳನ್ನ ಮಾಡ್ಕೋಬಹುದು ಅಂತಾ.ಅಂದರೆ, ಮೂಲದ ಚಹರೆ ಹಾಗೇ ಉಳಿದಿರ್ತದೆ.

ಕನ್ನಡ ಸಂಸ್ಕೃತಿಯ ಪ್ರಕ್ರಿಯೆ ಮೂಲವನ್ನೇ ಪಲ್ಲಟಗೊಳಿಸುವಂತದ್ದು. ಮೂಲವನ್ನೇ ಮರುವ್ಯಾಖ್ಯಾನ ಮಾಡುವ ರೀತಿಯದ್ದು. ಮೂಲವನ್ನೇ ಬೇರೊಂದು ರೀತಿಯಲ್ಲಿ ನೋಡುವ ಹಾಗೆ ನಮ್ಮನ್ನು ಪ್ರೇರೇಪಿಸುವಂತದ್ದು. ಅದರಲ್ಲಿ ಸ್ಥಳೀಕರಣ ಅನ್ನೋವಂತದ್ದು ಆ ರೀತಿಯ ಹೊಂದಾಣಿಕೆಯ ಪ್ರಕ್ರಿಯೆಯಿಂದ ಹುಟ್ಟಿದ್ದಲ್ಲ. ತನ್ನದೇ ಆದ ಜೀವನದೃಷ್ಟಿಯನ್ನ ನಮ್ಮೆದುರಿಗೆ ಮಂಡಿಸೋಕೆ ಹುಟ್ಟಿರುವಂತದ್ದು. ಇವತ್ತು ಲೋಕಲೈಸೇಶನ್ ಅನ್ನೋದನ್ನ ಕಾರ್ಪೋರೇಟ್ ಸಂಸ್ಕೃತಿ ನಮ್ಮಲ್ಲಿ ಹೇಗೆ ಬೆಳೆಸ್ತಾ ಇದೆ ಅಂದ್ರೆ, ಅದನ್ನ ನಾವು ನಮ್ಮ ಕಾಂಟೆಕ್ಸ್ಟ್‌ಲ್ಲಿ ನೋಡಬೇಕಾದ್ರೆ ಅದರ ಅನನ್ಯತೆಯನ್ನ ಹುಡುಕಿ ತೆಗೀಬೇಕಾಗ್ತದೆಯೇ ಹೊರತು, ಗ್ಲೋಬಲ್ಲಾಗಿರೋದಕ್ಕೆ ಹೇಗೆ ಹೊಂದಿಕೊಳ್ತದೆ, ಅದರ ಚೌಕಟ್ಟಿಗೆ ಸಿಗ್ತದೆ ಅಂತಾ ಅನ್ನೋದಲ್ಲ. ಈ ರೀತಿ ಹುಡುಕುವ ಪ್ರಕ್ರಿಯೆ ಕೂಡ

ನಮ್ಮ ವಿಮರ್ಶೆಯಲ್ಲಿ ನಡೀತಾ ಇರ್ತದೆ. ನಾನು ಅದನ್ನ ಪ್ರಶ್ನಿಸೋದಕ್ಕೆ ಪ್ರಯತ್ನ ಪಡ್ತಿದ್ದೀನಿ.ಅದು ಹಾಗಲ್ಲ. ಯಾಕೆಂದ್ರೆ, ಗ್ಲೋಬಲ್ಲಾಗಿರತಕ್ಕಂತದ್ದು ಏನಿರ್ತದೆ ಅದು ತನ್ನ ಚಹರೆಯನ್ನ ಬಿಟ್ಟು ಕೊಡ್ದೇನೇನೆ, ಸ್ಥಳೀಯವಾದ ಲಕ್ಷಣಗಳನ್ನ ಮೈಗೂಡಿಸಿಕೊಳ್ಳದೇನೆ ಅದು ನಿಜವಾಗಿಯೂ ಸ್ಥಳೀಯವಾಗಿ ಜೀವ ಪಡೆಯೋದಿಲ್ಲ. ಅಂದ್ರೆ, ಸ್ಥಳೀಯತೆ ಅನ್ನೋದು ಕನ್ನಡ ಜಗತ್ತಿನ ಒಂದು ಬಹುಮುಖ್ಯವಾದ ಲಕ್ಷಣ ಅಂತಾ ಹೇಳೋದಕ್ಕೆ ಪ್ರಯತ್ನ ಪಡ್ತಾ ಇದ್ದೀನಿ. ಉದಾಹರಣೆಗೆ ಇನ್ನೊಬ್ಬ ಕವಿ ಹರಿಹರನ್ನ ತಗೋಳೋಣ; ಹರಿಹರನಲ್ಲಿ ಎಲ್ಲಾ ಶಿವಭಕ್ತರ ಕತೆ ಕೂಡ ಪ್ರಾರಂಭವಾಗೋದು ಕೈಲಾಸದಲ್ಲಿ.ಅಲ್ಲಿ ಶಿವಗಣಗಳಿರ್ತವೆ. ಅಲ್ಲಿ ಏನೋ ಒಂದು ಅವಗಡ ನಡೆಯುತ್ತೆ.ಯಾವುದೋ ಒಂದು ತಪ್ಪನ್ನ ಮಾಡ್ದಾಗ, ಏ ನೀನು ಭೂ ಲೋಕಕ್ಕೆ ಹೋಗಿ ಹುಟ್ಟಿ ಮತ್ತೆ ನೀನು ಇಲ್ಲಿಗೆ ವಾಪಸ್ಸು ಬಾ ಅನ್ನೋದು ಎಲ್ಲಾ ಕತೆಗಳ ಶುರುವಿನಲ್ಲಿ ಇದೆ.ಶಪಿತರಾಗಿ ಇಲ್ಲಿಗೆ ಬರ್ತಾರೆ.ಇಲ್ಲಿಗೆ ಬರೋಂತವರೆಲ್ಲ ಉದ್ಧಾರ ಮಾಡೋದಿಕ್ಕೆ ಬರೋದಿಲ್ಲ. ತಮ್ಮ ಶಾಪವನ್ನ ಕಳಕೊಳ್ಳೋಕೆ ಕೂಡ ಬರ್ತಾರೆ ಇಲ್ಲಿಗೆ.ಆದರೆ, ಇಲ್ಲಿ ಭೂಲೋಕದಲ್ಲಿ ಮನುಷ್ಯರಾಗೋದರ ಮುಖಾಂತರವೇ–ಇಲ್ಲಿ ಲೋಕಲೈಸ್ ಆಗೋದರ ಮುಖಾಂತರವೇ ಬಿಡುಗಡೆಯನ್ನ ಪಡೀತಾರೆ.ಮನುಷ್ಯರ ಚಹರೆಯನ್ನ–ಸ್ಥಳೀಯವಾದ ಚಹರೆಗಳನ್ನ ಪಡೆದುಕೊಳ್ಳೋದರ ಮುಖಾಂತರ ತಮ್ಮ ಶಾಪದಿಂದ ಅವರು ಬಿಡುಗಡೆಯನ್ನ ಪಡೀತಾರೆ.ಅವರು ನಿಜವಾಗೋದು–ಅವರ ಸತ್ವ ಪ್ರಕಟವಾಗೋದು ಎಲ್ಲಿ ಅಂದ್ರೆ ಅವರು ಮನುಷ್ಯರಾದಾಗ ಮಾತ್ರ, ಮನುಷ್ಯರ ವರ್ತನೆಗಳಲ್ಲಿ ತೊಡಗಿಸಿಕೊಂಡಾಗ ಮಾತ್ರ ನಿಜ ಆಗ್ತಾರೆ. ಮತ್ತೆ ಅವರು ಗಣಗಳಾಗಿ ವಾಪಸ್ಸು ಹೋಗ್ತಾರೆ ಅವರು, ಚಕ್ರೀಯವಾದ ಒಂದು ಪ್ರಕ್ರಿಯೆ ಮುಗಿದು ಹೋಗ್ತದೆ.ನಿಜ ಎಲ್ಲಿದೆ ಅಂದ್ರೆ ಮನುಷ್ಯರ ದೇಹದ ಆಕಾರ ಪಡೆದಾಗ ಮಾತ್ರ ಅವರು ತಮ್ಮತನವನ್ನು ಮರಳಿ ಪಡೆದುಕೊಳ್ಳೋಕೆ ಸಾಧ್ಯ ಅನ್ನೋದು ನಮಗೆ ಇಲ್ಲಿ ಮುಖ್ಯ.

ಅವತಾರದ ಕಲ್ಪನೆಯಲ್ಲೂ ಇದೇ ಇದೆ.ಉದಾಹರಣೆಗೆ ಕುಮಾರವ್ಯಾಸನಲ್ಲಿ ನೋಡಿ; ಕುಮಾರವ್ಯಾಸನ ಕೃಷ್ಣ ಅವನೊಬ್ಬ ಅವತಾರ ಪುರುಷ. ಯಾಕೇಂದ್ರೆ, ವಿಷ್ಣುವಿನ ಒಂದು ಅವತಾರ.ಭೂಲೋಕದಲ್ಲಿ ಇರುವ ಏರುಪೇರುಗಳನ್ನ, ಅನ್ಯಾಯಗಳನ್ನ ಸರಿಪಡಿಸೋಕೆ ಹುಟ್ಟಿರೋಂತದ್ದು. ಅದು ಟ್ರೆಡಿಶನ್ ಹೇಳಿರೋವಂತ ಒಂದು ಕಲ್ಪನೆ. ಇಲ್ಲಿರುವ ಕೃಷ್ಣ ಇದಾನಲ್ಲ, ಅವನು ದೈವವಾಗಿದ್ದರೂ ಕೂಡ ಅವನ ಎಲ್ಲಾ ಚಹರೆಗಳೂ ಕೂಡ ಮನುಷ್ಯನ ತರಹವೇ ಇರ್ಬೇಕು. ದೈವತ್ವವನ್ನ ಅವನು ನೂರಕ್ಕೆ ನೂರು ಪ್ರಕಟಿಸೋದಕ್ಕೆ ಸಾಧ್ಯವಿಲ್ಲ. ಅವನು, ಮನುಷ್ಯನ ಚಹರೆಗಳನ್ನ ಹೊಂದಲೇಬೇಕು. ಒಂದು ಉಲ್ಲೇಖ ಬರೋದು ಉದ್ಯೋಗ ಪರ್ವದಲ್ಲಿ; ಸಂಧಿ ಮಾಡೋದಕ್ಕೋಸ್ಕರ ಕೃಷ್ಣ ದುರ್ಯೋಧನ ಇರುವ ಊರಿಗೆ ಬಂದಿರ್ತಾನೆ. ವಿದುರನ ಮನೆಗೆ ಮೊದಲು ಹೋಗ್ತಾನೆ, ಆಮೇಲೆ ದುರ್ಯೋಧನನ ಮನೆಗೆ ಬರ್ತಾನೆ. ವಿದುರನ ಮನೆಗೆ ಒಂದು ರಥದ ಮೇಲೆ ಬರ್ತಾ ಇರ್ತಾನೆ ಅವನು. ರಥದ ಮೇಲೆ ವೇಗವಾಗಿ ಬಂದದ್ದರಿಂದ, ರಥದ ಚಕ್ರಗಳು ವೇಗವಾಗಿ ತಿರುಗಿದ್ದರಿಂದ ದಾರಿಯಲ್ಲಿ ಉದ್ದಕ್ಕೂ ದೂಳು ಎದ್ದಿತ್ತು ಮತ್ತು ಬಿಸಿಲಿತ್ತು. ಬಿಸಿಲಿನಲ್ಲಿ ಬಂದ ಕೃಷ್ಣ ಹೇಗೆ ಕಂಡ ಅನ್ನೋದಕ್ಕೆ ಕುಮಾರವ್ಯಾಸ ಎರಡು ವರ್ಣನೆಗಳನ್ನ ಕೊಡ್ತಾನೆ. ಒಂದು; ಅವನ ತುಳಸಿಯ ಮಾಲೆ ಬಾಡಿತ್ತು.

ಎರಡನೆಯದು; ಎದ್ದ ಕೆಂಧೂಳಿ ಇತ್ತಲ್ಲ ಅದು ಅವನ ಮೀಸೆಯ ಮೇಲೆ ಬಂದು ಕುಳಿತಿತ್ತು. ಅದು ವರ್ಣನೆಯ ಸೊಬಗು ಮಾತ್ರ ಅಲ್ಲ ಅದು. ಮನುಷ್ಯನಿಗೆ ಏನೆಲ್ಲಾ ಆಗುತ್ತದೋ ಅದು ಆಗಲೇಬೇಕು ಅವನಿಗೆ.ಸ್ಥಳೀಕರಣ ಅನ್ನೋದು ಕೃಷ್ಣನಿಗೆ ಕೇವಲ ಒಂದು ಆಡುಂಬೊಲ ಮಾತ್ರ ಅಲ್ಲ. ಮನುಷ್ಯನಿಗಿರುವ ಎಲ್ಲಾ ಲಕ್ಷಣಗಳನ್ನು ಅವನು ಪಡಕೊಳ್ಳಲೇಬೇಕಾಗ್ತದೆ.ದೇವರ ಕೊರಳಲ್ಲಿರೋ ತುಳಸೀಮಾಲೆ ಬಾಡೋಕೆ ಸಾಧ್ಯ ಇಲ್ಲ ತಾನೆ? ಬಾಡಬಾರದಲ್ಲ? ಅದರೆ ಇವನ ತುಳಸಿಮಾಲೆ ಬಾಡುತ್ತೆ. ಅಂದ್ರೆ ಇವನು ಮನುಷ್ಯನೇ ಈಗ.ಇವನ ಮೀಸೆ ಮೇಲೆ ದೂಳು ಬಂದು ಕೂತಿತ್ತು ಅನ್ನೋದು ಅವನೊಬ್ಬ ಜಸ್ಟ್ ಎ ಹ್ಯೂಮನ್ ಬಿಯಿಂಗ್–ಸಾಮಾನ್ಯ ಮನುಷ್ಯ ಅನ್ನೋ ರೀತಿಯಲ್ಲಿ ತೋರಿಸ್ತಾ ಇದಾನೆ.

ಇನ್ನೊಂದು ಉದಾಹರಣೆ ನೋಡಿ. ಹರಿಹರನ ರಗಳೆಗಳ ನಾಯಕರೆಲ್ಲ ಕೈಲಾಸದಲ್ಲಿ ಗಣಗಳಾಗಿದ್ದವರು. ಯಾವುದೋ ಒಂದು ತಪ್ಪು ಮಾಡಿ ಶಪಿತರಾಗಿ ಈ ನೆಲದಲ್ಲಿ ಹುಟ್ಟುತ್ತಾರೆ. ಮನುಷ್ಯರಾಗಿ ಬದುಕಿ ಕೊನೆಗೆ ಕೈಲಾಸಕ್ಕೆ ಮರಳುತ್ತಾರೆ. ಇಲ್ಲೆಲ್ಲ ಭಕ್ತರು ತಮಗೆ ತಾವೇ ಹಿರಿಮೆ ಪಡೆದವರಲ್ಲ. ಅವರು ಈ ಲೋಕದಲ್ಲಿ ಹುಟ್ಟಿ ಇಲ್ಲಿ ಪಡಿಪಾಟಲುಗಳನ್ನು ಉಂಡು ಕೊನೆಗೆ ಇನ್ನೊಂದು ತುದಿಗೆ ಮುಟ್ಟುವವರು. ಎಲ್ಲಿಂದ ಬಂದರೋ ಅಲ್ಲಿಗೇ ಹೋಗಿ ಮುಟ್ಟುತ್ತಾರೆ ಅನ್ನೋದು ದಿಟ. ಆದರೆ ಅದರ ನಡುವೆ ಈ ಲೋಕದಲ್ಲಿ ಇರಬೇಕಾಗುತ್ತದೆ. ನಮ್ಮ ಕಾಲದೇಶಗಳ ನಿಯಮಗಳಿಗೆ ತಕ್ಕಂತೆ ಬದುಕ ಬೇಕಾಗುತ್ತದೆ. ಇಲ್ಲೆಲ್ಲಾ ಇರುವಿಕೆಗಿಂತ ಆಗುವಿಕೆಗೆ ಹೆಚ್ಚಳ ದೊರೆತದ್ದನ್ನು ನೋಡುತ್ತೇವೆ. ಭಕ್ತರಾಗಿ. ಕೈಲಾಸದಲ್ಲಿ ಶಿವನ ಬಳಿ ಇರುವ ಮೂಲಕ ಅವರ ವೈಶ್ವಿಕ ನೆಲೆಗಳು ಪ್ರಕಟವಾದರೂ ಅವೆಲ್ಲವೂ ಈ ನೆಲದಲ್ಲಿ ಪರೀಕ್ಷೆಗೆ ಒಳಗಾಗಬೇಕೆಂಬ ನಿಲುವು ನಮಗೆ ಮುಖ್ಯ. ವೈಶ್ವಿಕವಾದದ್ದು ಸ್ಥಳೀಕರಣವಾದ ಹೊರತು ದಿಟವಾಗುವುದಿಲ್ಲ.

ಈ ನಾಡಿನ ಜನಪದರಲ್ಲಿ ಇರುವ ನಂಬಿಕೆಯೊಂದನ್ನು ನೋಡೋಣ. ಎ.ಕೆ.ರಾಮಾನುಜನ್ ಇದರ ಬಗೆಗೆ ಬರೆದಿದಾರೆ.ಜನಪದ ನಿರೂಪಣೆಗಳು ಕರ್ಮ ವನ್ನು ಪ್ರತಿಪಾದಿಸೋದಿಲ್ಲ; ಹಣೆಬರಹವನ್ನು ನಂಬುತ್ತವೆ. ಕರ್ಮ ಅನ್ನೋದು ಸಂಚಯ. ನಿನ್ನೆ,ಇಂದು ಮತ್ತು ನಾಳೆಗಳ ಸರಣಿಯಲ್ಲಿ ಹೆಚ್ಚುತ್ತಾ ಕಡಿಮೆ ಆಗುತ್ತ ನಡೆಯುವಂತದ್ದು. ಈ ಬದುಕಿನ ಹೊಣೆಗಾರಿಕೆ ಅದರಲ್ಲಿ ಕಡಿಮೆ. ಆದರೆ ಹಣೆಬರಹ ಹಾಗಲ್ಲ. ಅದು ಈ ನೆಲದಲ್ಲಿ ಹುಟ್ಟಿದಾಗ 'ಇದಿಯಮ್ಮ'ನೋ ಯಾರೋ ಬಂದು ಬರೆದು ಹೋಗುವಂತದು. ಅದಕ್ಕೆ ತಕ್ಕಂತೆ ನಮ್ಮ ಬದುಕು ನಡೆಯುತ್ತದೆ ಎನ್ನೋದು ಜನಪದ ನಿರೂಪಣೆಗಳ ಜಗತ್ತಿನ ನಂಬಿಕೆ. ಹಣೆಬರಹ ಅನ್ನೋದು ದಿಟವೋ ಸಟೆಯೋ ಅನ್ನುವುದನ್ನು ಬದಿಗಿಡಿ. ಈ ಬದುಕಿಗೆ ಈ ಬದುಕಷ್ಟೇ ಹೊಣೆ ಎನ್ನುವ ನೆಲಗಟ್ಟು ಇಲ್ಲಿ ಮುಂಚೂಣಿಗೆ ಬರುವುದನ್ನು ನೊಡುತ್ತೇವೆ. ಕರ್ಮ ಅನ್ನೋದು ಕಾಲದೇಶಗಳ ಮಿತಿಯ ಆಚೆಗೆ ವರ್ತಿಸಿದರೆ, ಹಣೆಬರಹ ಅನ್ನೋದು ಈ ಕಾಲ ಮತ್ತು ಈ ದೇಶಗಳ ಮಿತಿಯಲ್ಲೇ ಇರುವಂತದು.

ಈ ಎಲ್ಲ ಉದಾಹರಣೆಗಳನ್ನು ಏಕೆ ಕೊಟ್ಟಿದ್ದು? ಸ್ಥಳೀಕರಣ ಎಂಬ ಪ್ರಕ್ರಿಯೆಯನ್ನು ನಾವು ಕನ್ನಡ ಮನಸ್ಸಿನ ನೆಲೆಯಲ್ಲಿ ಗ್ರಹಿಸ ಬೇಕಾದ ಬಗೆಯನ್ನು ಅರಿಯುವುದಕ್ಕೆ ಈ

ನಿದರ್ಶನಗಳು ನೆರವಿಗೆ ಬರುತ್ತವೆ. ಜಾಗತಿಕವಾದದ್ದು. ವೈಶ್ವಿಕವಾದ್ದು ಏನಿರುತ್ತದೆ ಅದನ್ನು ನಮಗೆ ತಕ್ಕಂತೆ ಹೊಂದಿಸಿಕೊಳ್ಳುವದನ್ನು ಸ್ಥಳೀಕರಣ ಎಂದು ತಿಳಿಯುವ ನೆಲೆಯನ್ನು ಈ ನಿದರ್ಶನಗಳು ನಿರಾಕರಿಸುತ್ತವೆ. ಸ್ಥಳೀಯವಾದದ್ದು ಮಾತ್ರ ದಿಟ.ಅದು ಹೊಂದಿಸುವ ಕೆಲಸವಲ್ಲ. ನಮ್ಮನ್ನು ನಾವು ನೋಡಿಕೊಳ್ಳುವ ಬಗೆ. **ಈಗ ಮತ್ತು ಇಲ್ಲಿ ಎನ್ನುವುದೇ ದಿಟ**. ಕನ್ನಡ ಮನಸ್ಸು ಲಾಗಾಯ್ತಿನಿಂದ ಯೋಚಿಸಿಕೊಂಡು ಬಂದಿರುವ ಬಗೆಯೇ ಹೀಗಿದೆ. ಕಾರ್ಪೋರೇಟ್ ವಲಯದ ವ್ಯಾಖ್ಯೆ ಇಲ್ಲಿ ಸಲ್ಲುವುದಿಲ್ಲ.

ಇನ್ನೊಂದು ಉದಾಹರಣೆಯನ್ನು ನೀಡಿ ನನ್ನ ಮಾತು ಮುಗಿಸುತ್ತೇನೆ. ಸ್ವಂತದ ಉದಾಹರಣೆಯಿಂದ ಆರಂಭಿಸಿದೆ.ಸ್ವಂತದ್ದೇ ಉದಾಹರಣೆಯಿಂದ ಮುಗಿಸುತ್ತೇನೆ. ಕೆಲವು ವರ್ಷಗಳ ಹಿಂದ ನನ್ನ ತಾಯಿ ತೀರಿಕೊಂಡರು. ನಂಟರು ಬರಬೇಕಾಗಿತ್ತು. ಅದಕ್ಕಾಗಿ ರಾತ್ರಿ ಇಡೀ ಕಾಯುವುದಿತ್ತು. ನಮ್ಮ ಊರಿನಲ್ಲಿ ಇಂತಹ ವೇಳೆ ಮಂಟೆಸ್ವಾಮಿ ಕಾವ್ಯವನ್ನು ಹಾಡಿಸುತ್ತಾರೆ. ಆ ಹೊತ್ತೂ ಇಡೀ ರಾತ್ರಿ ಊರಿನ ಗಾಯಕರು ಹಾಡಿದರು. ಬೆಳಕು ಹರಿಯುವ ಹೊತ್ತಿಗೆ ಕಥೆಯ ಕೊನೆಕೊನೆಗೆ ಬಂದಿದ್ದರು. ಮುಗಿಸುವ ಹೊತ್ತಿನಲ್ಲಿ ಒಂದೆರಡು ತ್ರಿಪದಿಗಳನ್ನು ಹಾಡುತ್ತಾರೆ. ಒಂದು ತ್ರಿಪದಿ ಹಾಡುವ ಮೊದಲು ನನ್ನ ತಾಯಿಯ ಹೆಸರು ಕೇಳಿದರು; ಹೇಳಿದೆ. ಮುಂದೆ ಅವರು ಹಾಡಿದ ತ್ರಿಪದಿ ತಿರುಳು ಹೀಗಿತ್ತು. ನನ್ನ ತಾಯಿ(ಹೆಸರು ಸೇರಿಸಿದ್ದರು) ಸ್ವರ್ಗದ ಬಾಗಿಲೊಳಗೆ ಹೋಗುವ ಮೊದಲು ಇಲ್ಲಿರುವ ನಮ್ಮನ್ನು ಹರಸುತ್ತಿದ್ದಾಳಂತೆ. ನನಗೆ ಆ ಕ್ಷಣ ಹೊಳೆದದ್ದು ಇಷ್ಟು, ಯಾವ ದಿಟವೇ ಇರಲಿ ಅದು ಈಗ ಮತ್ತು ಇಲ್ಲಿ ನೆಲೆಯಗದಿದ್ದರೆ ಅದಕ್ಕೆ ಬೆಲೆಯೇ ಇಲ್ಲ. ಮಂಟೇಸ್ವಾಮಿ ಕಾವ್ಯದ ಹರಿವಿನಲ್ಲಿ ನನ್ನ ತಾಯಿಯ ಹಾರೈಕೆಯನ್ನು ಸೇರಿಸಿದ ಆ ಗಾಯಕರು ನನಗೆ ಅಂದು ತೋರಿಸಿದ ಸತ್ಯ ಇದು. ನಮಸ್ಕಾರ.

ಕಲಿಕೆಯ ಭಾಷೆ : ಹೊಸ ಬಿಕ್ಕಟ್ಟು

ರಾಜ್ಯ ಸರಕಾರಕ್ಕೆ ಭಾಷಾನೀತಿಯನ್ನು ನಿಗದಿ ಪಡಿಸುವ ಅಧಿಕಾರವಿಲ್ಲ ಎಂಬುದಾಗಿ ಇಂದಿನ ಪತ್ರಿಕಾವರದಿಗಳು ತಿಳಿಸುತ್ತವೆ. ಹಾಗೆ ಮುಖ್ಯ ಮಂತ್ರಿಗಳು ಹೇಳಿದರೋ ಇಲ್ಲವೇ ಅವರ ಮಾತನ್ನು ಹೀಗೆ ವರದಿ ಮಾಡಲಾಗಿದೆಯೋ ತಿಳಿಯದು. ಕರ್ನಾಟಕ ರಾಜ್ಯ ವಿಧಾನ ಮಂಡಲವು 1983ರಲ್ಲಿ ಅಂಗೀಕರಿಸಿದ 'ಕರ್ನಾಟಕ ರಾಜ್ಯ ಶಿಕ್ಷಣ ಕಾಯ್ದೆ'ಗೆ ಹನ್ನೆರಡು ವರುಶಗಳ ಬಳಿಕ 1995ರಲ್ಲಿ ರಾಷ್ಟಪತಿಗಳು ಅಂಕಿತ ಹಾಕಿದ್ದಾರೆ. ಈ ಹನ್ನೆರಡು ವರುಶಗಳ ಅವಧಿಯಲ್ಲಿ ಹಲವು ತಕರಾರುಗಳನ್ನು ಎತ್ತಲಾಗಿದ್ದು ಅವೆಲ್ಲವನ್ನೂ 1995ರಿಂದ ಜಾರಿಗೆ ಬಂದಿರುವ ಕಾಯ್ದೆಯಲ್ಲಿ ಅಳವಡಿಸಲಾಗಿದೆ. ಈ ಕಾಯ್ದೆಯ ಮೊದಲ ಅಧ್ಯಾಯದ 7(ಸಿ)ಯಲ್ಲಿ ರಾಜ್ಯ ಸರಕಾರವು ತನ್ನ ವ್ಯಾಪ್ತಿಯಲ್ಲಿ ಬರುವ ಶಿಕ್ಷಣ ಸಂಸ್ಥೆಗಳಲ್ಲಿ ಯಾವುದು ಕಲಿಕೆಯ ಮಾಧ್ಯಮವಾಗಿರಬೇಕು ಎಂಬುದನ್ನು ನಿಗದಿಪಡಿಸುವ ಅಧಿಕಾರವನ್ನು ಪಡೆದಿದೆ ಎಂದು ತಿಳಿಸಲಾಗಿದೆ. ಇಂಥದೇ ಭಾಷೆ ಎಂಬುದು ಈ ಕಾಯ್ದೆಯಲ್ಲಿ ನಮೂದಿತವಾಗಿಲ್ಲವಾದರೂ ಆ ಭಾಷಾ ಮಾಧ್ಯಮ ಯಾವುದಿರಬೇಕು ಎಂಬ ನಿರ್ದೇಶನವನ್ನು ಶಾಲೆಗಳಿಗೆ ನೀಡುವ ಅಧಿಕಾರವನ್ನು ರಾಜ್ಯ ಸರಕಾರ ಹೊಂದಿದೆ ಎಂಬುದು ಈ ಕಾಯ್ದೆಯನ್ನು ಓದಿದವರಿಗೆ ತಿಳಿಯುವ ಸಂಗತಿಯಾಗಿದೆ. ನನಗೆ ತಿಳಿದಂತೆ 1983ರ ಈ ಕಾಯ್ದೆಯ ಈ ಭಾಗವನ್ನು ತಿದ್ದುಪಡಿ ಮಾಡಲಾಗಿಲ್ಲ ಮತ್ತು ಇದನ್ನು ಈವರೆಗೆ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿಲ್ಲ.

ಈಗ ಸುಪ್ರೀಂಕೋರ್ಟ್ ನೀಡಿರುವ ತೀರ್ಪು ಈ ಕಾಯ್ದೆ ಜಾರಿಗೆ ಬರುವ ಮುನ್ನ ಅಂದರೆ 1994 ರಲ್ಲಿ ರಾಜ್ಯ ಸರಕಾರ ಹೊರಡಿಸಿದ ಆದೇಶವನ್ನು ಕುರಿತಾಗಿದೆ. ಇಪ್ಪತ್ತು ವರುಶಗಳ ಕಾಲ ವಿವಿಧ ನ್ಯಾಯಾಲಯಗಳಲ್ಲಿ ಸರಕಾರದ ಈ ಆದೇಶವನ್ನು ಮಾತ್ರ ಪ್ರಶ್ನಿಸಲಾಗಿದೆ. ಸರಕಾರವೂ ಕೂಡ ತನ್ನ ಆದೇಶವು ಸರಿಯಾಗಿದೆಎಂದು ವಾದಿಸುತ್ತಾ ಬಂದಿದೆ. ಸುಪ್ರೀಂಕೋರ್ಟ್ ತನ್ನ ಈಚಿನ ತೀರ್ಪನ್ನು ನೀಡುವ ಸಂದರ್ಭದಲ್ಲಿ ಎತ್ತಿದ ಐದು ಪ್ರಶ್ನೆಗಳಲ್ಲಿ ತಾಯ್ನುಡಿಯಲ್ಲೇ ಕಲಿಯಬೇಕೆಂದು ಅಲ್ಪಸಂಖ್ಯಾತರಿಗೆ ಒತ್ತಾಯ ಮಾಡುವ ಅಧಿಕಾರ ರಾಜ್ಯ ಸರಕಾರಕ್ಕೆ ಇದೆಯೇ ಎಂದು ಕೇಳಿಕೊಂಡಿದೆ. ತನ್ನ ತೀರ್ಪಿನಲ್ಲಿ ರಾಜ್ಯ ಸರಕಾರದ ಅಧಿಕಾರವನ್ನು ಮುಂಚೂಣಿಗೆ ತಂದಿದೆ ಎಂದು ನನಗೆ ಅನ್ನಿಸುತ್ತಿಲ್ಲ. ಬದಲಿಗೆ ತಮ್ಮ ಮಗುವಿನ ಕಲಿಕೆ ಯಾವ ಭಾಷೆಯ ಮೂಲಕ ಆಗಬೇಕು ಎಂಬುದನ್ನು ನಿರ್ಧರಿಸುವ ಹಕ್ಕು ಆ ಮಗುವಿನ ಪಾಲಕರಿಗೆ ಇರಬೇಕೆಂದು ಹೇಳಿದೆ. ಈ ಹಕ್ಕು ಪಾಲಕರಿಗೆ ಇರುವುದು ದಿಟವಾದರೆ ಅದನ್ನು ಮುಂದುವರೆಸಿ

ಕಲಿಕೆಯಲ್ಲಿ ಇಂತಹದೇ ವಿಷಯಗಳನ್ನು ನಿಗದಿ ಪಡಿಸಿ ಅದನ್ನೇ ಓದಬೇಕೆಂದು ನಿಗದಿ ಪಡಿಸುವ ಅಧಿಕಾರವೂ ಸರಕಾರಕ್ಕೆ ಇಲ್ಲವೆಂದು ಹೇಳಲೂಬಹುದು.

ಮೇಲೆ ಹೇಳಿದ ರಾಜ್ಯ ಸರಕಾರದ 1983ರ ಕಾಯ್ದೆಯ ಒಂದನೇ ಅಧ್ಯಾಯದ 7(ಅ)ದಲ್ಲಿ ಕಲಿಕೆಯ ಪಠ್ಯಕ್ರಮ, ಪಠ್ಯವಿಷಯ, ಪಠ್ಯಪುಸ್ತಕ ಇವೆಲ್ಲವನ್ನೂ ನಿಗದಿ ಪಡಿಸುವ ಅಧಿಕಾರ ಸರಕಾರಕ್ಕೆ ಇದೆ. ಮುಂದೆ ಈ ಅಧಿಕಾರವೂ ಸರಕಾರಕ್ಕೆ ಇಲ್ಲವೆಂದು ವಾದಿಸುವುದಕ್ಕೆ ಮುಂದಾಗುವ ಸಾಧ್ಯತೆ ಇದೆ. ಅದಿರಲಿ. ಸುಪ್ರೀಂಕೋರ್ಟ್‌ನ ಎದುರು ಮಂಡಿತವಾದ ದಾವೆಯಲ್ಲಾಗಲೀ, ಅದರ ಮುಂದೆ ನಡೆದ ವಾದಗಳಲ್ಲಿ ಆಗಲೀ, ತೀರ್ಪಿನಲ್ಲಾಗಲೀ ಎಲ್ಲೂ ಕರ್ನಾಟಕ ಸರಕಾರದ ಶಿಕ್ಷಣ ಕಾಯ್ದೆಯ ಉಲ್ಲೇಖವೇ ಇಲ್ಲದಿರುವುದನ್ನು ಗಮನಿಸಬಹುದು. ಈ ಕಾಯ್ದೆಯು ಸರಕಾರಕ್ಕೆ ನೀಡಿರುವ ಅಧಿಕಾರವನ್ನು ಈವರೆಗೆ ಎಲ್ಲಿಯೂ ತಳ್ಳಿಹಾಕಿಲ್ಲವಾದ್ದರಿಂದ ಕಲಿಕೆಯು ಯಾವ ಭಾಷೆಯ ಮೂಲಕ ಆಗಬೇಕೆಂಬುದನ್ನು ನಿಗದಿ ಪಡಿಸುವ ಅಧಿಕಾರ ಸರಕಾರಕ್ಕೆ ಇದೆಯೆಂದೇ ತಿಳಿಯಬೇಕಲ್ಲವೇ?

1994ರ ತನ್ನ ಆದೇಶವನ್ನು ಹೊರಡಿಸುವ ಹೊತ್ತಿನಲ್ಲಿ ಶಿಕ್ಷಣ ಕಾಯ್ದೆಯ ರಾಷ್ಟ್ರಪತಿಗಳ ಅಂಗೀಕಾರವನ್ನು ಪಡೆದಿದರಲಿಲ್ಲವಾದ್ದರಿಂದ ಆ ಆದೇಶದಲ್ಲಿ ತನಗಿರುವ ಅಧಿಕಾರವನ್ನು ರಾಜ್ಯ ಸರಕಾರ ಎತ್ತಿ ಹೇಳುವಂತಿರಲಿಲ್ಲ. ಆದರೆ ಈಗ ಆ ಕಾಯ್ದೆ ಜಾರಿಗೆ ಬಂದು ಹತ್ತೊಂಬತ್ತು ವರುಶಗಳ ಬಳಿಕವೂ ತನಗೆ ಆ ಅಧಿಕಾರ ಇಲ್ಲವೆಂದು ಸರಕಾರವೇ ತಿಳಿಯುವಂತಾಗಿರುವದು ಸರಿಯೇ? ಇಲ್ಲವೇಇದರಲ್ಲಿ ಏನಾದರೂ ಕಾನೂನಿನ ತೊಡಕುಗಳಿವೆಯೇ ಎಂಬುದನ್ನು ಬಲ್ಲವರು ತಿಳಿಸಬೇಕು. ಜನರಿಗೆ ಅದು ಗೊತ್ತಾಗಬೇಕಾಗಿದೆ.

ಶಿಕ್ಷಣವನ್ನು ಮಗುವಿನ ಹಕ್ಕು ಎಂದು ತಿಳಿಸುವ ಕಾಯ್ದೆಯನ್ನು ಕೇಂದ್ರ ಸರಕಾರ ಅಂಗೀಕರಿಸಿದೆ; ರಾಜ್ಯ ಸರಕಾರವೂ ತನ್ನದೇ ಕಾಯ್ದೆಯ ಮೂಲಕ ಅದನ್ನು ಅನುಮೋದಿಸಿದೆ. ಈ ಕಾಯ್ದೆಯು ತರಬಹುದಾದ ಬಿಕ್ಕಟ್ಟುಗಳಿಗೆ ತುದಿಮೊದಲಿಲ್ಲ. ಈಗ ಉಂಟಾಗಿರುವ ಗೊಂದಲ ಕೂಡ ಈ ಹೊಸ ಪರಿಸ್ಥಿತಿಯಲ್ಲಿ ಬೇರೆಯೇ ನೆಲೆಗಳನ್ನು ತಲುಪಬಹುದೆಂದು ತೋರುತ್ತಿದೆ. ಸಂವಿಧಾನ ರಚನೆಯ ಸಭೆಯು ಶಿಕ್ಷಣವನ್ನು ಹಕ್ಕು ಎಂದು ಪಡಿಗಣಿಸುವ ಪ್ರಸ್ತಾವವನ್ನು ತುಂಬ ವಿವರವಾಗಿ ಪರಿಶೀಲಿಸಿದೆ. ಆಗ ನಡೆದಿರುವ ಚರ್ಚೆಗಳಲ್ಲಿ ಮಂಡಿತವಾಗಿರುವ ಸೂಕ್ಷ್ಮ ಸಂಗತಿಗಳನ್ನು ಗಮನಿಸಿದರೆ ಸಂವಿಧಾನ ರಚಿಸಿದವರ ಮುಂಗಾಣ್ಕೆಯನ್ನು ಮನಗಾಣಬಹುದು. ಆ ಸಭೆಯು ಕಲಿಕೆಯನ್ನು ಮಗುವಿನ ಮೂಲಭೂತ ಹಕ್ಕು ಎಂದು ಪರಿಗಣಿಸಲಿಲ್ಲ. ಬದಲಿಗೆ ಕಲಿಕೆ ಅವಕಾಶಗಳನ್ನು ಒದಗಿಸುವ ಹೊಣೆ ರಾಜ್ಯ ಸರಕಾರಗಳದ್ದು ಎಂದು ಹೇಳಿತು. ಅದನ್ನೇ ಸಂವಿಧಾನದಲ್ಲಿ ಅಳವಡಿಸಿತು. ಈಗ ಸಂವಿಧಾನದ ತಿದ್ದುಪಡಿಯ ಮೂಲಕ ಇದೆಲ್ಲವನ್ನೂ ತಲೆಕೆಳಗು ಮಾಡಲಾಗಿದೆ. ಏನೇ ಇರಲಿ. ರಾಜ್ಯ ಸರಕಾರ ತಾನೇ ಒಪ್ಪಿರುವ 1983 ಕಾಯ್ದೆಯ ಅಡಿಯಲ್ಲಿ ತನಗಿರುವ ಅಧಿಕಾರವನ್ನು ಬಳಸಲು ಏನು ತೊಂದರೆಗಳಿವೆ ಎಂಬುದನ್ನು ಚರ್ಚಿಸಬೇಕು.

1994ರ ಆದೇಶದಲ್ಲಿ ಕಲಿಕೆಯ ಮಾಧ್ಯಮವು (ಒಂದರಿಂದ ನಾಲ್ಕನೆಯ ತರಗತಿ ವರೆಗೆ) ಕನ್ನಡ ಇಲ್ಲವೇ ತಾಯ್ನುಡಿಯಲ್ಲಿರಬೇಕು ಎಂದು ಹೇಳಲಾಗಿದೆ. ತಾಯ್ನುಡಿ ಎಂಬ ಮಾತನ್ನು ವಿವಿಧ ಆಧಾರಗಳ ಹಿನ್ನೆಲೆಯಲ್ಲಿ ಪರಿಶೀಲಿಸಿದ ಸುಪ್ರೀಂಕೋರ್ಟ್ ಅದನ್ನು 'ಅಲ್ಪ ಸಂಖ್ಯಾತರ ಭಾಷೆ' ಎಂದು ವ್ಯಾಖ್ಯಾನಿಸಿದೆ. ಈ ವ್ಯಾಖ್ಯಾನವು ಸರಿಯೋ ಅಲ್ಲವೋ ಎಂಬುದನ್ನು ಬದಿಗಿರಿಸೋಣ. ಈಗ ರಾಜ್ಯ ಸರಕಾರವು ತನಗಿರುವ ಅಧಿಕಾರವನ್ನು ಮಂಡಿಸುವ ಹೊತ್ತಿನಲ್ಲಿ ತಾಯ್ನುಡಿ ಎಂಬ ಪದವನ್ನು ಬಳಸದೆ 'ಕನ್ನಡ ಇಲ್ಲವೇ ರಾಜ್ಯದ ಜನಸಮುದಾಯಗಳಾಡುವ ಭಾಷೆ' ಎಂದು ತಿಳಿಸುವುದು ಸರಿಯಾದ ದಾರಿ ಎಂದು ತೋರುತ್ತದೆ. ಜೊತೆಗೆ ಕಲಿಕೆಯ ಮಾಧ್ಯಮಗಳಾಗಿ ಬಳಕೆಯಾಗುವ ಜನ ಸಮುದಾಯದ ಭಾಷೆಗಳ ಪಟ್ಟಿಯೊಂದನ್ನೂ ಕೂಡ ನಿಗದಿಪಡಿಸಬೇಕಾಗುತ್ತದೆ. ಈ ದಾರಿಯು ಸರಿಯೋ ಅಲ್ಲವೋ ಎಂಬುದನ್ನು ಬಲ್ಲವರು ತಿಳಿಸಬೇಕು.

ಕನ್ನಡ ಅಳಿವು-ಉಳಿವು

ಕನ್ನಡ ಮುಂದಿನ ದಿನಮಾನಗಳಲ್ಲಿ ಉಳಿಯುವುದೇ; ಉಳಿದರೂ ಈಗಿರುವ ಅದರ ಚಹರೆಗಳನ್ನು ಕಾಯ್ದುಕೊಳ್ಳುವುದೇ ಎಂಬ ಕಾತಾಳದಲ್ಲಿ ಹೂವಿನ ಪಕಳೆಗಳನ್ನು ಒಂದೊಂದಾಗಿ ಕೀಳುತ್ತ ಕುಳಿತಿರುವವರನ್ನು ನೀವು ಎಲ್ಲ ಕಡೆಗಳಲ್ಲೂ ಕಂಡಿರುತ್ತೀರಿ. ಇವರಲ್ಲಿ ಹಲವು ಬಗೆಯವರಿದ್ದಾರೆ. ಕೆಲವರು ಕನ್ನಡಕ್ಕೆ ಒದಗಿರುವ ಬಿಕ್ಕಟ್ಟುಗಳಿಂದ ಅದನ್ನು ಪಾರು ಮಾಡಲು ಏನು ಮಾಡಬೇಕೆಂಬ ಹಾದಿಗಳನ್ನು ಹುಡುಕುತ್ತಿರುವವರು ಕೆಲವರು. ಮತ್ತೆ ಕೆಲವರು ಆಗುವುದೆಲ್ಲ ಒಳ್ಳೆಯದಕ್ಕೆ ಅಲ್ಲವೇ ಎಂದು ಕೈಚೆಲ್ಲಿ ಕುಳಿತವರು. ಕನ್ನಡದ ಒಳಿತನ್ನು ಕಾಯ್ದುಕೊಳ್ಳ ಬೇಕೆಂದವರಲ್ಲಿ ಕೆಲವರು ಕನ್ನಡ ತನ್ನ ಮಡಿತನವನ್ನು ಬಿಟ್ಟುಕೊಡಬಾರದೆಂದೂ ಈಗಿರುವಂತೆ ಸಂಸ್ಕೃತದ ಸವಾರಿಗೆ ಹೆಗಲನ್ನು ಒಡ್ಡಿಕೊಂಡಿರಬೇಕೆಂದು ವಾದಿಸುವವರಿದ್ದಾರೆ. ಹಾಗೆ ನೋಡಿದರೆ ಕಲಿತವರು ಮತ್ತು ಬಲ್ಲವರಲ್ಲಿ ಹೆಚ್ಚು ಮಂದಿ ಇದೇ ಹಾದಿಯಲ್ಲಿ ಸಾಗುವುದೇ ಲೇಸು ಎನ್ನುತ್ತಾರೆ. ಆದರೆ ಇದು ಕನ್ನಡ ತನ್ನನ್ನು ತಾನು ಕೊಂದು ಕೊಳ್ಳುವ ಇರುಕಲಿನ ಹಾದಿಯೆಂಬುದನ್ನು ಅವರು ಅರಿತಂತಿಲ್ಲ. ಮಡಿಗನ್ನಡ ಕೆಲವರ ಕನ್ನಡ ಆಗಿ ಉಳಿದರೆ ಅದು ಎಂದಿಗೂ ಎಲ್ಲರ ಕನ್ನಡ ಆಗುವುದಿಲ್ಲ. ಒಳಗೊಳ್ಳುವ ಬಗೆಯನ್ನು ಒಪ್ಪಿಕೊಳ್ಳದೆ, ನುಡಿಯನ್ನು ದಿನದಿನವೂ ಬಳಸುವವರನ್ನು ಹೊರಗಿಟ್ಟರೆ ಆಗ ಕನ್ನಡದ ಏಳಿಗೆ ಎನ್ನುವುದು ಕನ್ನಡಿಯ ಗಂಟಾಗಿ ಬಿಡುತ್ತದೆ.

ಕನ್ನಡದ ಮುನ್ನಡೆಗೆ ಏನು ಅಡ್ಡಿಗಳಿವೆ ಎನ್ನುವುದನ್ನು ಅರಿಯೋಣ. ಮೊದಲಿಗೆ ಆಳುವವರಿಗೆ ಮತ್ತು ಉಳ್ಳವರಿಗೆ ಕನ್ನಡ ಬೇಕಾಗಿಲ್ಲ. ಆದರೆ ಸರಕು ಮಾರಾಟಗಾರರಿಗೆ ಕನ್ನಡ ಬೇಕಿದೆ. ಹಾಗಾಗಿಯೇ ಆಡಳಿತ ನಡೆಸುವವರು ಕನ್ನಡವನ್ನು ಕಡೆಗಣಿಸಿದರೂ ಅಲೆಯುಲಿ ಸೆಟ್ ಗಳನ್ನು ಮಾರುವ ಕಂಪನಿಗಳವರು ಕನ್ನಡವನ್ನು ಬಳಸಲು ನೆರವಾಗುವ ಸೆಲ್ ಫೋನ್ ಗಳನ್ನು ತಯಾರಿಸಿ ಮಾರುಕಟ್ಟೆಗೆ ತಂದಿಡುತ್ತಿದ್ದಾರೆ. ಹಾಲಿವುಡ್‌ನ ಹೆಚ್ಚು ಹಣಹೂಡಿಕೆಯ ಸಿನಿಮಾಗಳು ಕನ್ನಡದ ದನಿಯೊದನೆ ನುಗ್ಗಿ ಬರುವ ದಿನಗಳು ಹತ್ತಿರವಾಗುತ್ತಿವೆ. ಇದೆಲ್ಲವನ್ನು ನೋಡಿದಾಗ ಒಂದೆಡೆ ಕನ್ನಡ ಕೆಲವರಿಗೆ ಬೇಡದ ಹೊರೆ; ಅದು ತೇಲಲೀಯದ ಗುಂಡು. ಮತ್ತೆ ಕೆಲವರಿಗೆ ಹೇಗಾದರೂ ಮಾಡಿ ಜನರನ್ನು ತಮ್ಮ ಬುಟ್ಟಿಗೆ ಹಾಕಿಕೊಳ್ಳಲು ಇರುವ ದಾರಿಯಾಗಿದೆ. ಇವೆರಡೂ ಒಂದೊಂದು ಬಗೆಯಲ್ಲಿ ಕನ್ನಡದ ಏಳಿಗೆಗೆ ತಡೆಗಳನ್ನು ತರುತ್ತಿವೆ.

ಆಡಳಿತ ನಡೆಸುವವರು ತಾವು ಜನರಿಗೆ ಹೊಣೆಗಾರರಲ್ಲ ಎಂದು ತಿಳಿದಿರುವುದರಿಂದ ಜನರ ನುಡಿಯನ್ನು ಕಡೆಗಣಿಸಿ ಇಂಗ್ಲಿಶಿಗೆ ಮೊರೆಹೋಗುತ್ತಿದ್ದಾರೆ.

ಇದಕ್ಕೆ ಉಳ್ಳವರ ಒತ್ತಾಸೆಯೂ ಇದೆ. ಅವರ ಆಸೆಗಳನ್ನು ಪೂರೈಸಲು ಇಂಗ್ಲಿಶ್ ಎಲ್ಲರಿಗೂ ಬೇಕೆಂಬ ನಂಬಿಕೆಯನ್ನು ಈ ನೆಲದಲ್ಲಿ ಬೇರೂರಿಸಲಾಗುತ್ತಿದೆ. ಏನೇ ಮಾಡಿದರೂ ಇಂಗ್ಲಿಶ್ ಎಲ್ಲ ಕನ್ನಡಿಗರ ಮೊದಲ ನುಡಿಯಾಗುವ ಕಾಲ ಎಂದೆಂದು ಬರುವುದಿಲ್ಲ. ಅದು ಕೆಲವರ ಕೈಯಲ್ಲಿರುವ ಜಾದೂ ಕಡ್ಡಿ. ಎಲ್ಲರಿಗೂ ದೊರಕುವುದೆಂಬ ಆಸೆಯನ್ನು ಹುಟ್ಟಿಸಿ ಸವಾರಿ ಮಾಡಲು ಉಳ್ಳವರು ಸೊಂಟಕಟ್ಟಿ ನಿಂತಿದ್ದಾರೆ.ಇದರ ಜೊತೆಗೆ ಕಲಿಕೆಯ ಹಂತದಲ್ಲಿ ಮಡಿಗನ್ನಡಕ್ಕೆ ಮೊದಲ ಮಣೆಯನ್ನು ಹಾಕಿ ನುಡಿಯಲು ಅರಿಯಲು ತಿಳಿದಿರುವ ಕನ್ನಡದ ಮಕ್ಕಳು ಕನ್ನಡವನ್ನು ಓದಲು ಮತ್ತು ಬರೆಯಲು ಆಗದಂತೆ ಮಾಡುವ ಹಾದಿಯನ್ನು ಹಿಡಿಯಲಾಗಿದೆ. ಮಡಿಗನ್ನಡವೆಂದಾಗ ಅದು **ಮೈಲಿಗೆಯನ್ನು ತಾಳಿಕೊಳ್ಳದ ಕನ್ನಡ** ಎನ್ನುವ ತಿರುಳಿರುವಂತೆ ಅದು **ಮಡಿಯಲು ಮುನ್ನುಗ್ಗುತ್ತಿರುವ ಕನ್ನಡ**ವೆಂಬ ತಿರುಳೂ ಇದೆ ಎನ್ನುವುದನ್ನು ನೆನಪಿನಲ್ಲಿಡಬೇಕು. ಈ ಎರಡೂ ಬಗೆಗಳು ಕನ್ನಡದ ಏಳಿಗೆಗೆ ತಡೆಗಳನ್ನು ಒಡ್ಡುತ್ತಿವೆ.

ಇನ್ನು ಸರಕುಗಳನ್ನು ತಂದು ನಮ್ಮ ಮುಂದೆ ಹರಡುತ್ತಿರುವರಲ್ಲಿ ಕಾಣುತ್ತಿರುವ ಕನ್ನಡದ ಒಲವು ನಮ್ಮನ್ನು ಒಮ್ಮೆಗೆ ಮರುಳು ಮಾಡುವಂತಿದ್ದರೂ ಈ ಹಾದಿಯೂ ಕನ್ನಡವನ್ನು ಒಂದು ಹತ್ಯಾರವನ್ನಾಗಿ ಕಾಣುವುದೇ ಹೊರತು ಕನ್ನಡಿಗರ ಹಕ್ಕನ್ನಾಗಿ ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ಈ ಸರಕುದಾರರು ಬಳಸುವ ನುಡಿಯಲ್ಲಿ ಕನ್ನಡದ್ದೇ ಆದ ಬದುಕಿನ ನೋಟಗಳು ಕಣದಂತಾಗಿರುತ್ತವೆ. ಅಲ್ಲಿನ ಕನ್ನಡ ಮಾರುವವರು ಬಳಸುವ ದಂದುಗದ ಕನ್ನಡ. ಅದಕ್ಕೆ ನಾಳೆಗಳೂ ಇಲ್ಲ; ನಿನ್ನೆಗಳಂತು ಇರುವುದೇ ಇಲ್ಲ. ಈವರ ಈ ಬಗೆಯ ನುಡಿಯ ಬಳಕೆಯನ್ನು ತಡೆಯುವುದು ನಮ್ಮ ಅಳವನ್ನು ಮೀರಿದ್ದು. ಆದರೆ ಅದೇ ಕನ್ನಡದ ಏಳಿಗೆ ಎಂದು ಮೈ ಮರೆತು ಕೂರುವಂತಿಲ್ಲ.

ಹಾಗಿದ್ದಲ್ಲಿ ನಮಗಿರುವ ದಾರಿಗಳೇನು? ಮೊದಲನೆಯದಾಗಿ ನಮ್ಮ ಕನ್ನಡವೆಂದರೆ ಅದು ಎಲ್ಲರ ಕನ್ನಡವಾಗಬೇಕು ಎಂಬ ನಂಬಿಕೆಯನ್ನು ಬೆಳೆಸಿಕೊಳ್ಳ ಬೇಕು. ಕೆಲವರು ಮಾತ್ರ ಓದಿ ಅರಿತುಕೊಳ್ಳಬಲ್ಲ, ಕೆಲವರು ತಂತಮ್ಮಲ್ಲೇ ಮಾತಾಡಿಕೊಳ್ಳಬಲ್ಲ ಕನ್ನಡದ ಮಾದರಿಗೆ ಮನ್ನಣೆ ನೀಡುವುದನ್ನು ನಿಲ್ಲಿಸಬೇಕು. ಈಗ ನುಡಿಯುವುದು ಇಲ್ಲವೇ ಬರೆಯುವುದು ಎಂದರೆ ಅದು ಕೆಲವರು ಕೆಲವರೊಡನೆ ನಡೆಸುವ ಮಾತುಕತೆ ಎಂಬಂತಾಗಿದೆ. ಅಂದರೆ ಎಲ್ಲರೂ ಆ ಮಾತುಕತೆಯೊಳಗೆ ತಮ್ಮ ದನಿಯನ್ನು ಸೇರಿಸಲು ಮುಂದಾದರೆ ಅವರನ್ನು ಒಳಗೊಳ್ಳುವ ಬಗೆಯ ಕನ್ನಡವನ್ನು ಮೈಲಿಗೆಯ ಕನ್ನಡವೆಂದು ದೂರವಿರಿಸಲಾಗುತ್ತಿದೆ. ಅಲ್ಲದೆ ಮಾತಾಡಲಿ ಇಲ್ಲವೇ ಬರೆಯಲಿ ಅಲ್ಲೆಲ್ಲ ಕನ್ನಡ ಎನ್ನುವುದು ಜನರ ಗುರುತು ಎನ್ನುವುದನ್ನು ಈಗ ಮರೆತಿರುವಂತಿದೆ. ಅದು ಮಾತಾಡುವವರ ಇಲ್ಲವೇ ಬರೆಯುವವರ ಗುರುತು ಎಂದ ಮಾತ್ರ ತಿಳಿದು ಅದಕ್ಕೆ ತಕ್ಕ ನುಡಿಗಟ್ಟುಗಳನ್ನು ಕಟ್ಟಿಕೊಂಡು ಮುನ್ನಡೆಯಲಾಗುತ್ತಿದೆ. ಇದು ತಪ್ಪಬೇಕು.

ಹೀಗಾಗಲು ಏನು ಮಾಡಬೇಕು? ಮೊದಲನೆಯದಾಗಿ ಎಲ್ಲರ ಕನ್ನಡದಲ್ಲಿ ಕನ್ನಡದ ಬದುಕಿನ ನೋಟಗಳು ಕಾಣುವಂತಾಗಬೇಕು.ನಾವೀಗ ಏನು ಮಾಡುತ್ತಿದ್ದೇವೆ ಗೊತ್ತೇನು? ಲೋಕವನ್ನೆಲ್ಲ ಒಳಗೊಳ್ಳುವ ಇರಾದೆಯಲ್ಲಿ ಇಂಗ್ಲಿಶಿನ ನೋಟಗಳನ್ನು ಸಂಸ್ಕೃತದ ಪದಗಳಲ್ಲಿ ಇರಿಸಿ 'ಇಗೋ ಇದೇ ನಮ್ಮ ಕನ್ನಡ' ಎಂದು ನಂಬಿಸಿದ್ದೇವೆ.

ಕನ್ನಡದ ಪದಗಳನ್ನು ಅಯ್ದುಕೊಂಡು ಅ ಪದಗಳಲ್ಲಿ ನಮ್ಮ ನಿಲುವುಗಳನ್ನು ಕಟ್ಟಿಕೊಡಲು ಹೊರಟರೆ ಆಗ ನಾವು ಈವರೆಗೆ ಹಿಡಿದಿರುವ ಹಾದಿ ಮನ್ನುಗ್ಗುವ ಹಾದಿಯು ಹೊಸ ಮಾದರಿಯ ಕಾರುಗಳ ನಡೆಗೆ ಹೇಳಿ ಮಾಡಿಸಿದ ಹೆದ್ದಾರಿಯಂತಿದ್ದರೂ ಅಲ್ಲಿ ಹಸುಗಳನ್ನು ತರುಬಿಕೊಂಡು ನಡೆದು ಬರುವ ಕನ್ನಡಿಗನಿಗೆ ಜಾಗವಿಲ್ಲ ಎನ್ನುವುದು ಗೊತ್ತಾಗ ತೊಡಗುತ್ತದೆ. ಹೀಗೆಲ್ಲ ಮಾಡಿದರೆ ಕನ್ನಡ ನಲುಗಿ.ಬಡವಾಗಿ ಮೂಳೆ ಬಿಟ್ಟುಕೊಳ್ಳುತ್ತದೆ ಎಂದು ಕೆಲವರು ಹಲಬುತ್ತಿದ್ದಾರೆ. ಬೇಡದ ಕೊಬ್ಬನ್ನು ತುಂಬಿಕೊಂಡು ಮೆರೆಯುವುದಕ್ಕಿಂತ (ಹಾಗೆ ಕೊಬ್ಬಿದವರು ಕಣ್ಮನ ಸೆಳೆಯುವಂತಿದ್ದರೂ) ಮೂಳೆ ಬಿಟ್ಟುಕೊಂಡು ಬದುಕು ನಿಬಾಯಿಸುವುದೇ ಲೇಸು ಎನ್ನುವುದನ್ನು ಒಪ್ಪಬೇಕು. ಮತ್ತೆ ಕೆಲವರು ಹೀಗೆ ಮಾಡಿದರೆ ಕನ್ನಡದ ಚೆಲುವೆಲ್ಲ ಸೋರಿ ಹೋಗಿಬಿಡುವುದೆಂದು ಹಪಹಪಿಸುತ್ತಿದ್ದಾರೆ. ಅಂತಹವರು ತಮ್ಮ ಬತ್ತಳಿಕೆಯಲ್ಲಿ ಎಂದೂ ಬಳಸದ ಹತ್ಯಾರುಗಳನ್ನಾಗಿ ಸಂಸ್ಕೃತದ ಪದಗಳೆಂಬ ಬಾಣಬಿರುಸುಗಳನ್ನು ಇಟ್ಟುಕೊಂಡಿರಲಿ. ಕನ್ನಡಿಗರಿಗೆ ಗಿಡ ಮುರಿದು ಹಿಡಿದ ಕೋಲು ಸಾಕು. ಈ ಆಯ್ಕೆಯನ್ನು ಮಾಡಿಕೊಂಡರೆ ಆಗ ಈಗಿರುವ ಅಡೆತಡೆಗಳನ್ನು ಮಟ್ಟಿನಿಂತು ಕನ್ನಡ ಮನ್ನಡೆಯ ಬಲ್ಲುದು ಎನ್ನುವುದು ನನ್ನ ನಂಬಿಕೆ.

ಕನ್ನಡ ಕೊಡುವ ನುಡಿಯಾಗಬೇಕು

ಕನ್ನಡವನ್ನು ಪಡೆಯುವ ಹೀರಿಕೊಳ್ಳುವ ನುಡಿಯನ್ನಾಗಿ ಬೆಳೆಸಿದ್ದೇವೆ. ಹಿಂದೆ ಸಂಸ್ಕೃತದಿಂದ ಈಗ ಇಂಗ್ಲಿಶಿನಿಂದ ಏನೆಲ್ಲಬೇಕೋ ಅದೆಲ್ಲವನ್ನೂ ಪಡೆದುಕೊಂಡು ಕನ್ನಡದ ಸಂದರ್ಭಕ್ಕೆ ಹೊಂದಿಸಿಕೊಳ್ಳುವ ಹಾದಿಯನ್ನು ನಂಬಿ ಎಷ್ಟು ಮುಂದೆ ಬಂದಿದ್ದೇವೆಂದರೆ ಮರಳುವ ಚಿಂತೆಯನ್ನೇ ಕೈಬಿಟ್ಟಿದ್ದೇವೆ.ಅಲ್ಲದೆ ಹೀಗೆ ಹೀರಿಕೊಳ್ಳದೆ, ಪಡೆದುಕೊಳ್ಳದೆ ಬದುಕುವುದು ಸಾಧ್ಯವೇ ಇಲ್ಲ ಎಂದು ನಂಬಿಬಿಟ್ಟಿದ್ದೇವೆ. ಹೀಗೆ ನಂಬಿರುವುದರಿಂದ ನಮಗೆ ಬೇಕಾದ್ದನ್ನು ನಾವೇ ಕಂಡುಕೊಂಡುಕೊಳ್ಳುವ, ಹುಡುಕಿಕೊಳ್ಳುವ ಬಗೆಯಲ್ಲಿ ನಮಗೀಗ ನಂಬಿಕೆಯಿಲ್ಲ. ಈ ಮಾತು ಒಂದು ಅತಿಯಲ್ಲಿ ನಿಂತು ಆಡಿದಂತೆ ತೋರಿದರೂ ದಿಟವಾಗಿ ಈಗ ನಡೆಯುತ್ತಿರುವುದೇನು ಎಂಬುದನ್ನು ಎಚ್ಚರದಿಂದ ಗಮನಿಸಿದರೆ ಇರುವುದನ್ನೇ ಹೇಳಿರುವುದು ಗೊತ್ತಾಗುವಂತಿದೆ. ಹೆಚ್ಚಿನ ಕಲಿಕೆಯಲ್ಲಿ ತೊಡಗುವ ನಮ್ಮ ಎಲ್ಲ ಮಕ್ಕಳೂ ತಮ್ಮ ತಿಳುವಳಿಕೆಯನ್ನು ಪಡೆದುಕೊಳ್ಳುವುದು ಇಂಗ್ಲಿಶಿನ ಹೊತ್ತಗೆಗಳ ಮೂಲಕ. ಯಾವ ಸಂಶೋಧನಾ ನಿಬಂಧವನ್ನಾದರೂ ತೆಗೆದುನೋಡಿ. ಅದರ ಪರಾಮರ್ಶನ ಗ್ರಂಥ ಸೂಚಿಯಲ್ಲಿ ಇಂಗ್ಲಿಶ್ ಹೊತ್ತಗೆಗಳ ದೊಡ್ಡ ಪಟ್ಟಿಯೇ ಇರುತ್ತದೆ. ಮಾಧ್ಯಮಗಳು ನಾಡಿನ ಆಚೆಗಿನ ಸುದ್ದಿಗಳಿಗೆ ಇಂಗ್ಲಿಶ್ ಕಾಪಿಯನ್ನೇ ನಂಬಿಕೊಂಡಿವೆ. ತಮಿಳು ನಾಡಿನ ಸುದ್ದಿ ಕೂಡ ಕನ್ನಡಿಗರಿಗೆ ಇಂಗ್ಲಿಶ್ ಬರೆಹದ ಅನುವಾದವಾಗಿಯೇ ದೊರಕಬೇಕಿದೆ. ಇದರಲ್ಲಿ ಹಲವರಿಗೆ ಅಚ್ಚರಿಯಾಗಲೀ, ಅಸಹಜವಾದುದಾಗಲೀ ಕಾಣುವುದಿಲ್ಲ. ಇರುವುದೇ ಹೀಗೆ ಎಂದೇ ಹೇಳುವವರೇ ಹೆಚ್ಚು.

ಆದರೆ ಇದೆಲ್ಲವೂ ನಾವು ತಿಳಿದಷ್ಟು ಸರಳವಾಗಿಲ್ಲ. ಏಕೆಂದರೆ ಇದರಿಂದಾಗಿ ನಮ್ಮ ಚಿಂತನೆಯ ನೆಲೆಗಳಿಗೆ ಎರವಾಗಿದ್ದೇವೆ. ಇಂಗ್ಲಿಶ್ ಒಂದು ನುಡಿಯಾಗಿ ಮಾತ್ರವಲ್ಲದೆ ನಾವು ಚಿಂತಿಸುವ, ಲೋಕವನ್ನು ನೋಡುವ ಚೌಕಟ್ಟನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿದೆ. ನಾವು ಇಂಗ್ಲಿಶಿನ ಕಣ್ಣಿನ ಮೂಲಕ ಎಲ್ಲವನ್ನೂ ಅರಿತುಕೊಳ್ಳುತ್ತಿದ್ದೇವೆ. ನಮ್ಮ ತಿಳುವಳಿಕೆಗಳೆಲ್ಲ ಕನ್ನಡದಲ್ಲಿ ದೊರಕುವಂತೆ ತೋರುತ್ತಿದ್ದರೂ ಅದೆಲ್ಲವೂ ಕನ್ನಡದಲ್ಲ;ಕನ್ನಡಕ್ಕೆ ಇಂಗ್ಲಿಶಿನಿಂದ ಬಂದಿರುವುದಾಗಿದೆ.

ಚಿಂತನೆಯ ಚೌಕಟ್ಟು ಇಲ್ಲವೇ ಲೋಕ ದೃಷ್ಟಿಗಳು ಯಾವುದೇ ನುಡಿಗೆ ಕಟ್ಟು ಬಿದ್ದಿರುವುದಿಲ್ಲ; ಇಗೋ ಇದು ಇಂಗ್ಲಿಶಿನದ್ದು, ಅಗೋ ಇದು ಕನ್ನಡದ್ದು ಎಂದು ಬೇರೆ ಮಾಡಿ ಹೇಳುವಂತಿರುವುದಿಲ್ಲ ಎಂದು ವಾದಿಸುವವರಿದ್ದಾರೆ. ಹಾಗಿದ್ದಲ್ಲಿ ನಾವು

ಪಡೆದುಕೊಳ್ಳುತ್ತಿರುವ ತಿಳುವಳಿಎಗಳು ಏಕೆ ನಮ್ಮ ಜನರ ತಿಳುವಳಿಕೆಗಳಾಗಿ ಬದಲಾಗುತ್ತಿಲ್ಲ? ಅಂತಹ ತಿಳುವಳಿಕೆಗಳಿಗೂ ಜನ ಬದುಕುತ್ತಿರುವ ಬಗೆಗೂ ಯಾವು ನಂಟೂ ಇಲ್ಲವೇನೋ ಎಂಬಂತಾಗಿರುವುದೇಕೆ? ಇನ್ನೂ ಮುಂದುವರೆದು ಹೇಳುವುದಾದರೆ ಎಲ್ಲ ತಿಳುವಳಿಕೆಗಳೂ, ಹೊಸ ಅರಿವುಗಳೂ ಈಗ ಕಲಿಕೆಯ ಮೂಲಕ ದೊರಕುತ್ತವೆ ಎಂದು ನಾವು ನಂಬಿದ್ದೇವೆ; ಅದಕ್ಕಾಗಿ ಕಲಿಕೆಯನ್ನು ಸಜ್ಜುಗೊಳಿಸಿದ್ದೇವೆ. ಆದರೆ ಇಂತಹ ಕಲಿಕೆಯನ್ನು ಪಡೆದವರು ಒಟ್ಟು ಸಮುದಾಯದ ಇಕ್ಕಟ್ಟು ಬಿಕ್ಕಟ್ಟುಗಳನ್ನು ಅರಿಯಲಾಗದೆ ಹೋಗುತ್ತಿರುವುದೇಕೆ? ಅಂದರೆ ನಾವು ಪಡೆಯುತ್ತಿರುವ ತಿಳುವಳಿಕೆಗಳು ಈ ನೆಲದ ನಂಟನ್ನು ಪಡೆಯದಿರುವುದೇ ಇದಕ್ಕೆ ಕಾರಣವಾಗಿರಬಹುದಲ್ಲವೇ?

ಮೇಲೇ ಹೇಳಿದ ಬಗೆಯಲ್ಲಿ ನೋಡುತ್ತ ಹೋದರೆ ಒಂದೆರಡು ಕೇಳ್ವಿಗಳಿಗೆ ಬದಲನ್ನು ನೀಡಬೇಕಾಗುತ್ತದೆ. 1. ಹಾಗಿದ್ದಲ್ಲಿ ಒಂದೊಂದು ನುಡಿಗೂ, ನುಡಿಯನ್ನು ಬಳಸುವ ಸಮುದಾಯಕ್ಕೂ ಅದರದ್ದೇ ಆದ ಲೋಕ ಗ್ರಹಿಕೆಯ ಬಗೆಗಳು ಇವೆ ಎಂದಾದರೆ ಮಾನವರೆಲ್ಲರಿಗೂ ಒಂದೇ ಎನಿಸುವ ಚಿಂತನೆಯ ಚೌಕಟ್ಟುಗಳು ಇರುವುದಿಲ್ಲ ಎಂದು ಒಪ್ಪ ಬೇಕಾಗುವುದಲ್ಲವೇ? 2. ಒಂದೊಮ್ಮೆ ಕನ್ನಡದ್ದೇ ಆದ ಚಿಂತನೆಯ ಬಗೆಯೊಂದು ಇದ್ದಿತೆಂದಾದರೆ ಅದೀಗ ಇಲ್ಲವಾಗಿದೆಯೇ ಅಥವಾ ಅದಿರುವುದನ್ನು ನಾವು ಕಾಣಲು ಹಿಂಜರಿಯುತ್ತಿದ್ದೇವೆಯೇ ಅಥವಾ ಮರೆತು ಹೋಗಿದ್ದೇವೆಯೇ?

ಮೊದಲ ಕೇಳ್ವಿಯನ್ನು ನೋಡೋಣ.ಚಿಂತನೆಯ ಹಾದಿಗಳಲ್ಲಿ ಎರಡು ಅಂಶಗಳಿರುತ್ತವೆ. ಒಂದು: ಇರುವ ಎಲ್ಲ ಚಿಂತನೆಯ ಹಾದಿಗಳಿಗೂ ಒಂದೇ ಎನಿಸುವ ನಿಯಮಗಳು. ಇವು ಎಲ್ಲ ಚಿಂತನೆಯ ಹಾದಿಗಳಿಗೂ ಸಮಾನವಾಗಿರುವಂತಹವು. ಎರಡು: ಒಂದೊಂದು ಚಿಂತನೆಯ ಹಾದಿಗಳಿಗೂ ಬೇರೆಬೇರೆಯಾಗಿರುವ ಪರ್ಯಾಯಗಳು. ಇವು ಎಲ್ಲ ಕಡೆಯೂ ಸಲ್ಲುವುದಿಲ್ಲ. ಒಂದು ಉದಾಹರಣೆಯನ್ನು ನೋಡೋಣ. ಜಗತ್ತಿನ ಯಾವ ಭಾಷೆಯನ್ನು ನೋಡಿದರೂ ಎಲ್ಲದರಲ್ಲೂ ಧ್ವನಿಗಳು ಸ್ವರ ಮತ್ತು ವ್ಯಂಜನಗಳೆಂದು ಎರಡು ಗುಂಪುಗಳಿರುತ್ತವೆ ಎನ್ನುವುದು ಎಲ್ಲ ಭಾಷೆಗೂ ಸಮಾನವಾದ ನಿಯಮ. ಆದರೆ ಯಾವ ಭಾಷೆಯಲ್ಲಿ ಯಾವ ಸ್ವರಗಳು ಇರುತ್ತವೆ ಮತ್ತು ಯಾವ ವ್ಯಂಜನಗಳಿರುತ್ತವೆ ಎನ್ನುವುದು ಆಯಾ ಭಾಷೆಗೆ ಮಾತ್ರ ಸಲ್ಲುವ ಪರ್ಯಾಯ. **ಕ್** ಎನ್ನುವ ಧ್ವನಿ ಕನ್ನಡಲ್ಲೂ ಇದೆ; ಇಂಗ್ಲಿಶಿನಲ್ಲೂ ಇದೆ ಎಂದು ಸಾರ ಸಗಟಾಗಿ ಹೇಳ ಬರುವುದಿಲ್ಲ. ಏಕೆಂದರೆ ಕನ್ನಡದಲ್ಲಿ ಆ ವ್ಯಂಜನ ಧ್ವನಿ ಕನ್ನಡದಲ್ಲೇ ಇರುವ ಉಳಿದ ಧ್ವನಿಗಳ ಜೊತೆ ರಚಿಸಿಕೊಂಡಿರುವ ನಂಟು. ಇಂಗ್ಲಿಶಿನಲ್ಲಿ ಆ **ಕ್** ಧ್ವನಿ ಅದೇ ನುಡಿಯಲ್ಲಿ ಇರುವ ಇತರ ಧ್ವನಿಗಳೊಡನೆ ರಚಿಸಿಕೊಂಡಿರುವ ನಂಟು ಬೇರೆಬೇರೆ. ಈ ಉದಾಹರಣೆಯನ್ನು ನೋಡಿದಾಗ ಬೇರೆ ಬೇರೆ ಚಿಂತನೆಯ ಹಾದಿಗಳಿರುತ್ತವೆ ಎಂದ ಮಾತ್ರಕ್ಕೆ ಎಲ್ಲ ಚಿಂತನೆಯ ಹಾದಿಗಳಿಗೂ ಸಮಾನವಾದ ಮತ್ತು ಮಾನವರೆಲ್ಲರಿಗೂ ಸಲ್ಲುವ ಅಂಶಗಳು ಇರುವುದಿಲ್ಲ ಎಂದು ಹೇಳಿದಂತೆ ಆಗುವುದಿಲ್ಲ.

ಇನ್ನು ಎರಡನೆಯ ಕೇಳ್ವಿಯನ್ನು ನೋಡೋಣ. ಕನ್ನಡದ್ದೇ ಆದ ಚಿಂತನೆಯ ಹಾದಿ,ಲೋಕವನ್ನು ಅರಿಯುವ ಬಗೆ ಇದೆಯೆಂದಾದರೆ ಅದು ನಮಗೇಕೆ ಗೊತ್ತಿಲ್ಲ ಎಂದು ಕೇಳಬಹುದು. ಆಗ ಅದಕ್ಕೆ ಹಲವು ನೆಲೆಗಳಲ್ಲಿ ಬದಲನ್ನು ನೀಡ ಬೇಕಾಗುತ್ತದೆ.

ನಮಗೆ ಗೊತ್ತಿಲ್ಲವೆಂದರೆ ಅದು ಇಲ್ಲ ಎಂದಾಗುವುದಿಲ್ಲ. ನಮಗೆ ಗೊತ್ತಿಲ್ಲ ಎಂದರೆ ಅದು ಯಾರಿಗೂ ಗೊತ್ತಿಲ್ಲ ಎಂದು ವಾದಿಸಲು ಬರುವುದಿಲ್ಲ. ಅಂತಹುದೊಂದು ಲೋಕವನ್ನು ತಿಳಿಯುವ ಬಗೆ ಇದೆಯೆಂದಾದರೆ ಅದು ಈಗ ಮರೆತು ಹೋಗಿದೆ ಮತ್ತು ಹಾಗೆ ಮರೆತು ಹೋಗಿರುವುದು ಸಹಜವೇ ಆಗಿದೆ ಎಂದು ವಾದಿಸುವವರುಂಟು. ಯಾವುದು ಕೆಲಸಕ್ಕೆ ಬಾರದುದೋ ಅದು ಬಳಕೆಯಿಂದ ಜಾರಿ ಹೋಗುತ್ತದೆ. ಹೊಸ ಜಗತ್ತಿನ ಬೇಕು ಬೇಡಗಳಿಗೆ ಹಳೆಯ ಲೋಕ ಗ್ರಹಿಕೆಯ ನೆಲೆಗಳು ಬೇಕಾಗಿಲ್ಲ ಇಲ್ಲವೇ ಅವು ಸಲ್ಲುತ್ತಿಲ್ಲ. ಆದ್ದರಿಂದಲೇ ಅವುಗಳನ್ನು ಮರೆತು ಹೊಸ ಮಾದರಿಗಳನ್ನು ಆಯ್ದುಕೊಳ್ಳಬೇಕೆಂದು ಹೇಳುವವರೂ ಇದ್ದಾರೆ. ಇದು ದಿಟವಾಗಿದ್ದರೆ ಎರಡು ಕೇಳ್ವಿಗಳು ಎದುರಾಗುತ್ತದೆ. ಒಂದು: ಒಂದೊಮ್ಮೆ ಇದು ದಿಟವಾಗಿದ್ದರೆ ಹೊಸದಾಗಿ ಆಯ್ದುಕೊಂಡ ಲೋಕ ಗ್ರಹಿಕೆಯ ಮಾದರಿಗಳು ಏಕೆ ನಮ್ಮ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಸೋತಿವೆ? ಎರಡು: ಕನ್ನಡದ್ದೇ ಆದ ಚಿಂತನೆಯ ಹಾದಿಗಳು ಮತ್ತು ಲೋಕವನ್ನು ಅರಿಯುವ ಬಗೆಗಳು ಸೋತಿವೆ ಎನ್ನುದನ್ನು ಸಾರಾಸಗಟಾಗಿ ಒಪ್ಪಲು ಏನಾದರೂ ಪುರಾವೆಗಳಿವೆಯೇ? ಜನ ಸಮುದಾಯಗಳು ಮತ್ತು ಆಧುನಿಕ ಎಂದು ಹೇಳುವ ಜೀವನ ಕ್ರಮಕ್ಕೆ ತೆರೆದುಕೊಳ್ಳದ ಜನರು ಈಗ ಹೇಗೆ ಲೋಕವನ್ನು ಗ್ರಹಿಸುತ್ತಿದ್ದಾರೆ? ಅವರು ಶೂನ್ಯದಲ್ಲಿದ್ದಾರೆಯೇ? ಒಂದು ಉದಾಹರಣೆಯನ್ನು ನೋಡೋಣ. ಈಗ ಎಲ್ಲರೂ ನಂಬುತ್ತಿರುವ ಒಂದು ಚಿಂತನೆಯೆಂದರೆ ಓದಿ ಬರೆಯುವ ಕೌಶಲಗಳು ದೊರಕಿದ ಹೊರತು ಜನರು ಹೊಸ ಬದುಕಿನ ಹಾದಿಗಳಿಗೆ ಹೊರಳಿಕೊಳ್ಳಲಾರರು ಎಂಬುದು ತಾನೆ. ಅದಕ್ಕಾಗಿ ಕಲಿಕೆಗೆ ಹೆಚ್ಚಿನ ಮನ್ನಣೆಯನ್ನು ಈಗ ನೀಡಲಾಗುತ್ತಿದೆ. ಆದರೆ ಓದಿ ಬರೆಯುವ ಕೌಶಲಗಳನ್ನು ಪಡೆಯದವರು ಬದುಕಿನ ಕೌಶಲಗಳಿಂದ ವಂಚಿತರಾಗಿದ್ದಾರೆ ಎಂದು ಸಾಧಿಸಿ ತೋರಿಸುವುದು ಹೇಗೆ? ಹಾಗೆಯೇ ಅಂತಹ ಕೌಶಲಗಳನ್ನು ಪಡೆದವರು ಬದುಕಿನ ಕೌಶಲಗಳನ್ನು ಪಡೆದೇ ತೀರುತ್ತಾರೆ ಎಂದು ನಂಬುದಾದರೂ ಹೇಗೆ? ಇದೆಲ್ಲವೂ ಏನ್ನು ಹೇಳುತ್ತಿದೆಯೆಂದರೆ ನಾವು ನಂಬಿದ ಬದಲೀ ತಿಳುವಳಿಕೆಯ ಹಾದಿಗಳು ನಮ್ಮನ್ನು ಬಿಡುಗಡೆಗೊಳಿಸಿಲ್ಲ ಎಂದು ತಾನೇ?

ಕನ್ನಡದ್ದೇ ಆದ ಲೋಕ ಅರಿಯುವ ಬಗೆ (ಹೀಗೆನ್ನುವಾಗ ಕನ್ನಡ ನಾಡಿನ ಜನ ಸಮುದಾಯವನ್ನು ಒಳಗೊಂಡಂತಿರುವ ನೆಲೆಯನ್ನು ಲೆಕ್ಕಕ್ಕೆ ಹಿಡಿಯಬೇಕು) ಇದೆಯೆನ್ನುವುದಾದರೆ ಅದನ್ನು ತಿಳಿಯಲು ಇರುವ ದಾರಿಗಳು ಯಾವುವು? ಬಾಯ್ದೆರೆಯ ಇಲ್ಲವೆ ಬರೆವಣಿಗೆಯ ರೂಪದಲ್ಲಿರುವ ಸಾಹಿತ್ಯ ಕೃತಿಗಳನ್ನು ನೆಮ್ಮಿಕೊಂಡು ಈ ಹಾದಿಯನ್ನು ಹಿಡಿಯುವವರುಂಟು. ಇದು ತಪ್ಪು ದಾರಿಯಲ್ಲವಾದರೂ ಅಲ್ಲಿನ ಪಯಣ ನಮಗೆ ದಿಟವನ್ನು ಇಡಿಯಾಗಿ ತೋರಿಸಲಾರದು. ಜನರಲ್ಲಿರುವ ತಿಳುವಳಿಕೆಯ ಊಟೆಗಳು ಎಲ್ಲೆಲ್ಲಿ ಇವೆಯೆಂಬುದನ್ನು ಹುಡುಕಿ ತೆಗೆಯಲು ಇನ್ನೂ ಕಡಿದಾದ ದಾರಿಗಳನ್ನು ಹಿಡಿಯಬೇಕು. ಹಲವಾರು ಶತಮಾನಗಳಿಂದ ಜನ ಬಳಸುತ್ತಿರುವ ಬದುಕಿನ ಕೌಶಲಗಳನ್ನು ಮೊದಲು ಅರಿಯಬೇಕಿದೆ. ಆ ಬದುಕಿನ ಕೌಶಲಗಳು ಕೇವಲ ಪರಿಕರಗಳು ಮಾತ್ರ. ಅವುಗಳ ಹಿಂದಿನ ತಾತ್ತ್ವಿಕ ನೆಲೆಗಳನ್ನು ಹುಡುಕುವುದು ಇನ್ನೂ ಆಗ ಬೇಕಾಗಿರುವ ಕೆಲಸ. ದೇಸಿ ನೆಲೆಗಳನ್ನು ಹುಡುಕಿ ತೆಗೆಯುವ, ಮರೆಯಾಗಿರುವ ಇಲ್ಲವೇ ಕಡೆಗಣನೆಗೆ ಒಳಗಾಗಿರುವ, ಬದುಕಿನ ಹೊಸ ಬಗೆಗಳಿಂದಾಗಿ

ಅಳಿಸಿ ಹೋಗುತ್ತಿರುವ ಬದುಕಿನ ನಡೆಗಳನ್ನು ಕೂಡಿ ಹಾಕುವುದರಿಂದ ನಮ್ಮ ಕೆಲಸ ಮುಗಿಯುವುದಿಲ್ಲ.ಇಂತಹ ಕೆಲಸಗಳನ್ನು ನಮ್ಮ ವಿಶ್ವವಿದ್ಯಾಲಯಗಳ ಸಂಶೋಧಕರು ಹೆಚ್ಚಿನ ಪ್ರಮಾಣದಲ್ಲಿ ಮಾಡುತ್ತಲೇ ಇದ್ದಾರೆ.

ಅಲ್ಲದೆ ಇನ್ನೂ ಒಂದು ಎಚ್ಚರಿಕೆಯ ಮಾತನ್ನೂ ಗಮನಿಸಬೇಕು. ನಮಗೆ ಇಂದು,ಈಗ ಬೆಲೆಯುಳ್ಳ ಬದುಕಿನ ಕೌಶಲವೆಂದು ತೋರುವ ಎಷ್ಟೋ ಸಂಗತಿಗಳ ಒಡಲಿನಲ್ಲಿ ಜನರ ಒಳಿತಿಗೆ ಅಡ್ಡಿಯಾಗುವ ಹಲವು ನೆಲೆಗಳು ಇರಬಹುದು. ಇಂತಹ ಅಪಾಯದ ಹತ್ಯಾರುಗಳನ್ನು ಮರಳಿ ಬೆಳಕಿಗೆ ತಂದು ನೆಲೆಗೊಳಿಸುವ ಮೊದಲು ಎರಡು ಬಾರಿ ಯೋಚಿಸ ಬೇಕಾಗುತ್ತದೆ. ಏಕೆಂದರೆ ಅಂತಹ ಆಚರಣೆಗಳ ತಾತ್ತ್ವಿಕತೆಯೇ ಎಲ್ಲ ಜನರ ಒಳಿತನ್ನು ಬಯಸುವಂತೆ ಇರುವುದಿಲ್ಲ. ಹಾಗಾಗಿ ನಮ್ಮ ಹುಡುಕಾಟದಲ್ಲಿ ಆಯ್ಕೆ ಮತ್ತು ನಿರಾಕರಣೆಗಳನ್ನು ಬಳಸಲೇ ಬೇಕಾಗುತ್ತದೆ.

ನಾವೀಗ ಎರಡು ಹೊಣೆಗಳನ್ನು ಹೊರಬೇಕಿದೆ. ಒಂದು: ಎಲ್ಲ ತಿಳುವಳಿಕೆಗಳಿಗೂ ಇಂಗ್ಲಿಶ್ (ಮಾತನ್ನಾಡುವಾಗ ಅದು ಕೇವಲ ಭಾಷೆಗೆ ಸಂಬಂಧಿಸಿದ ಮಾತಾಗಿ ಉಳಿಯುವುದಿಲ್ಲ; ಬದಲಿಗೆ ಬದುಕನ್ನು ಅರಿಯುವ ಬಗೆಯನ್ನು ಹೇಳುತ್ತಿರುತ್ತದೆ) ಆಕರವಾಗುತ್ತಿರುವ ಬಲೆಯಿಂದ ಹೊರ ಬರಬೇಕಿದೆ ಎನ್ನುವುದನ್ನು ಅರಿಯಬೇಕು. ಈ ಹಾದಿಯಲ್ಲೇ ಮುಂದೆ ಸಾಗುತ್ತಿದ್ದರೆ ಆಗುವ ತೊಂದರೆಗಳೇನು ಎಂಬುದನ್ನು ತಿಳಿಯಬೇಕು. ಎರಡು: ಇದರ ಬದಲಿಗೆ ಕನ್ನಡದ್ದೇ ಆದ ಲೋಕವನ್ನು ಅರಿಯುವ ನೆಲೆಗಳು ಮತ್ತು ಕೌಶಲಗಳ ತಾತ್ತ್ವಿಕತೆಯನ್ನು ಕಟ್ಟಿಕೊಳ್ಳುವತ್ತ ಸಾಗಬೇಕು. ಇದು ಎಲ್ಲರ ಮುಂದಿರುವ ಸವಾಲಾಗಿದೆ. ಇದನ್ನು ಬಿಡಿಸಿಕೊಂಡರೆ ಕನ್ನಡ ಈಗಿರುವಂತೆ ಪಡೆದುಕೊಳ್ಳುವ ನುಡಿಯಾಗಿ ಉಳಿಯದೆ ಕೊಡುವ ನುಡಿಯಾಗಿಯೂ ನೆಲೆಗೊಳ್ಳಬಹುದಾಗಿದೆ.

ಇಂದಿನ ಕನ್ನಡ: ತೊಡಕುಗಳು

ಕನ್ನಡ ನುಡಿ ಮತ್ತು ಅದನ್ನು ಆಡುವ ಜನರು ಈ ಎರಡೂ ನೆಲೆಗಳನ್ನು ಬೇರೆ ಬೇರೆಯಾಗಿರಿಸಲು ಬರುವುದಿಲ್ಲ. ಕನ್ನಡ ನುಡಿಗೆ ಇಳಿಗಾಲ ಬಂದಿದೆ ಎನ್ನುವುದಾದರೆ ಆ ನುಡಿಯನ್ನಾಡುವ ಜನರಿಗೂ ಇಳಿಗಾಲ ಬಂದಿದೆ ಎಂದೇ ತಿಳಿಯಬೇಕು. ಅಂದರೆ ಅವರು ತಮ್ಮ ಗುರುತನ್ನು ಕಳೆದುಕೊಳ್ಳುವ ನೆಲೆಗೆ ಸರಿಯುತ್ತಿದ್ದಾರೆ ಎನ್ನಬೇಕಾಗುತ್ತದೆ. ಹೀಗಾಗುತ್ತಿರುವುದು ದಿಟವೇ ಎಂಬ ಕೇಳ್ವಿಯನ್ನು ಬಿಡಿಸುವ ಮೊದಲಿಗೆ ಈಗ ನುಡಿಗೂ ಜನರಿಗೂ ಇರುವ ನಂಟನ್ನು ನಾವು ಈಗ ನೋಡುತ್ತಿದ್ದೇವೆ ಎಂಬುದನ್ನು ತಿಳಿಯಬೇಕಾಗಿದೆ. ಈಗ ಹೆಚ್ಚು ಜನರು ನುಡಿ ಎಂಬುದು ಜನರ ನಡುವೆ ಸೇತುವೆಯೊಂದನ್ನು ಕಟ್ಟಲೆಂದು ಇರುವ ಹತ್ಯಾರು ಎಂದೇ ತಿಳಿಯುತ್ತಿದ್ದಾರೆ. ನುಡಿ ಹೀಗೆ ಹತ್ಯಾರು ಎಂಬಂತೆ ಬಳಕೆಯಾಗುವುದು ದಿಟವೇ ಆದರೂ ಅದೇ ಕೊನೆಯ ಮಾತಲ್ಲ. ಏಕೆಂದರೆ ಕನ್ನಡ ನುಡಿ ಎನ್ನುವುದು ಅದನ್ನು ಆಡುವವರ ಒಳಗೆ ಕನ್ನಡ ಜಗತ್ತು ಎನ್ನುವುದೊಂದನ್ನು ಕಟ್ಟಿರುತ್ತದೆ ಎಂಬುದನ್ನು ಮರೆಯುತ್ತಿದ್ದೇವೆ. ಈಗ ನುಡಿಯನ್ನು ಕಲಿಸುವ ಅದನ್ನು ಬಳಸುವ ಬಗೆಗಳನ್ನು ಕಂಡಾಗ ಈಗ ಜನರು ತಮ್ಮ ಒಳಗಿನ ಲೋಕವೊಂದನ್ನು ಕಟ್ಟಿಕೊಳ್ಳಲು ಕನ್ನಡ ನುಡಿಯನ್ನು ಬಳಸಲು ನೆರವಾಗುವ ನೆಲೆಗಳೇ ಇಲ್ಲವಾಗಿರುವುದು ಕಣ್ಣಿಗೆ ರಾಚುವಂತಿದೆ.

ಈಗ ಜನರ ನಡುವೆ ಬಳಕೆಯಾಗುತ್ತಿರುವ ಕನ್ನಡವನ್ನು ಎಚ್ಚರದಿಂದ ನೋಡಿ. ಆ ನುಡಿ ಅವರ ಒಳಗಿನ ಲೋಕವನ್ನು ತೋರಿಸುವ ಬದಲು ಆಯಾ ಹೊತ್ತಿಗೆ ಯಾವುದು ಎಲ್ಲರಿಗೂ ಮೆಚ್ಚುಗೆಯಾಗುವುದೋ ಆ ನೆಲೆಯಲ್ಲಿರುತ್ತದೆ. ಅಂದರೆ ಜನ ಮುಚ್ಚುಮರೆ ಮಾಡುತ್ತಿದ್ದಾರೆ ಎಂದಲ್ಲ. ತಮ್ಮೊಳಗೆ ಇರುವುದನ್ನು ಬಿಟ್ಟು ಎಲ್ಲರನ್ನು ಮೆಚ್ಚಿಸಲು ಮಾತಾಡುತ್ತಿದ್ದಾರೆ ಎಂದಲ್ಲ. ಒಳಗಿನ ಲೊಕವನ್ನು ನುಡಿಯಲ್ಲಿ ಹಿಡಿದಿಡಲು ಬೇಕಾದ ತಿಳಿವಳಿಕೆಯೇ ಜನರಲ್ಲಿ ಇಲ್ಲವಾಗಿದೆ. ಅಂದರೆ ಅವರಲ್ಲಿರುವ ಕನ್ನಡ ಹಾಗೆ ಅವರೊಳಗೊಂದು ಲೋಕವನ್ನು ಕಟ್ಟುವಲ್ಲಿ ಸೋತಿದೆ.

ಎತ್ತುಗೆಗಾಗಿ ನಾವು ನಮ್ಮ ಸುತ್ತಲಿನ ಆಗುಹೋಗುಗಳನ್ನು ಹೇಳಲು ಬಳಸುವ ಮಾತುಗಳು ನಮ್ಮ ತಿಳಿವಳಿಕೆಯಿಂದ ಹುಟ್ಟಿದವುಗಳಲ್ಲ. ಅವು ಎಲ್ಲರೂ ಬಳಸುತ್ತಿರುವ ಮಾತುಗಳಾಗಿರುವುದರಿಂದ ನಾವು ಬಳಸುತ್ತಿದ್ದೇವೆ. ಹೋಲಿಕೆಗಾಗಿ ಈ ಎತ್ತುಗೆಯನ್ನು ನೋಡೋಣ. ನನ್ನ ಬಳಿ ಹತ್ತು ರೂಪಾಯಿಯ ನೋಟು ಒಂದಿದೆ ಎಂದುಕೊಳ್ಳಿ. ಅದು ನಾನು ದುಡಿದು ಪಡೆದ್ದಾದರೆ ಅದನ್ನು ಬಳಸುವಾಗ ಅದರ ದಿಟವಾದ ಬೆಲೆ

ಏನೆಂಬುದು ನನಗೆ ಗೊತ್ತಿರುತ್ತದೆ. ಬಳಸುವಾಗ ಅದನ್ನು ಎಚ್ಚರದಿಂದ ಬಳಸುತ್ತೇನೆ. ಬದಲಿಗೆ ಅದು ನನಗೆ ಯಾರೋ ಕೊಟ್ಟದ್ದು ಎಂದುಕೊಳ್ಳಿ. ಆಗ ನಾನು ಅದನ್ನು ಬೇಕಾಬಿಟ್ಟಿಯಾಗಿ ಬಳಸಲು ಮುಂದಾಗುತ್ತೇನಲ್ಲವೆ? ನುಡಿಯಲ್ಲೂ ಈ ಮಾತು ದಿಟ. ನನಗಾಗಿ ಕಟ್ಟಿಕೊಟ್ಟ ಲೋಕದಲ್ಲಿ ನಾನು ಇದ್ದುಕೊಂಡು ಅದನ್ನು ನನ್ನ ಮಾತುಗಳಲ್ಲಿ ಹೊರ ಹಾಕುವುದೆಂದರೆ ಅದು ಹೀಗೆ ಎರಡನೆಯ ಬಗೆಯೇ ಸರಿ. ಆದರೆ ನಾನೇ ನಮ್ಮ ನುಡಿಯಲ್ಲಿ ಕಟ್ಟಿಕೊಂಡ ಲೋಕವನ್ನು ನನ್ನ ನುಡಿಯಲ್ಲಿ ಮಂಡಿಸುವುದೆಂದರೆ ಅದು ಮೊದಲನೆಯ ಬಗೆಯದ್ದು.

ಏಕೆ ಹೀಗಾಗುತ್ತಿದೆ? ನಾವು ಕನ್ನಡ ನುಡಿ ಮತ್ತು ಕನ್ನಡ ಜನರನ್ನು ಬೆಸೆಯುವ ಎಳೆಗಳ ಕಸುವನ್ನು ಹುಸಿ ಮಾಡತೊಡಗಿದ್ದೇವೆ. ಯಾವ ನುಡಿಯಾದರೂ ದಿನದಿನದ ಬದುಕಿಗೆ ಸಾಕು; ಇಂಗ್ಲಿಶ್ ಆ ನುಡಿಯೇ ಆದರೆ ಆಗ ನಮ್ಮ ಬದುಕು ತುಂಬ ಹಸನಾಗುವುದೆಂದು ತಿಳಿದಿದ್ದೇವೆ. ಇಂಗ್ಲಿಶನ್ನು ತಿಳಿವಿನ ನುಡಿಯನ್ನಾಗಿ ಬಳಸುವುದಕ್ಕೆ ಹಿಂಜರಿಯಬಾರದೆಂದು ಎಲ್ಲರೂ ಹೇಳತೊಡಗಿದ್ದಾರೆ; ಅದನ್ನು ನಂಬದವರೇ ಇಲ್ಲ. ಆದರೆ ಒಂದು ನುಡಿ ತಿಳಿವಿನ ನುಡಿ ಆಗುವುದು ಎಂದರೇನು ಎಂಬ ನೆಲೆಯನ್ನು ನಾವು ಸರಿಯಾಗಿ ಅರಿತುಕೊಂಡಿಲ್ಲ. ಮಾಹಿತಿಯನ್ನು ಒದಗಿಸುವ ನುಡಿಯನ್ನು ತಿಳಿವಿನ ನುಡಿ ಎಂದು ತಿಳಿದು ಕೈಕಟ್ಟಿ ಕೂತುಬಿಟ್ಟಿದ್ದೇವೆ. ಆದರೆ ಇಂಗ್ಲಿಶ್ ಹೀಗೆ ಕೇವಲ ಇದಿಷ್ಟೇ ಕೆಲಸವನ್ನು ಮಾಡುತ್ತಿದೆಯೇ? ಒಂದು ವೇಳೆ ಅದೇ ದಿಟ ಎಂದುಕೊಳ್ಳೋಣ. ಆದರೆ ಕನ್ನಡ ತಿಳಿವಿನ ನುಡಿಯಾಗಲಾರದು ಎಂದು ಅದನ್ನು ಹಿಂದೆ ಸರಿಸುತ್ತಿರುವ ನಾವು ಅದನ್ನು ನಮ್ಮ ಒಳಗಿನ ಲೋಕವನ್ನು ಬರಿದು ಮಾಡಿಕೊಳ್ಳುತ್ತಿಲ್ಲವೇ? ಅಲ್ಲಿ ಅತ್ತ ಕನ್ನಡವೂ ಇಲ್ಲ; ಇಲ್ಲಿ ಇತ್ತ ಇಂಗ್ಲಿಶೂ ಇಲ್ಲ. ಒಳಗಿನ ಲೋಕವೆಂಬುದು ಟೊಳ್ಳಾಗಿಹೋಗಿದೆ.

ಒಂದು ನುಡಿ ಇತರರೊಡನೆ ನಂಟನ್ನು ಕಟ್ಟಿಕೊಳ್ಳಲು ಇರುವ ಹತ್ಯಾರು ಎಂದು ತಿಳಿದಾಗ ನಾವು ಪಡೆದುಕೊಳ್ಳುವದಕ್ಕಿಂತ ಕಳೆದುಕೊಳ್ಳುವುದೇ ಹೆಚ್ಚು. ಏಕೆಂದರೆ ಮಾತುಕತೆಯ ಲೋಕ ಸವೆದ ಹಾದಿಯಲ್ಲಿ ಸರಿಯುತ್ತಿರುತ್ತದೆ. ನಾವು ಅದರೊಳಗೆ ತೊಡಗಿಕೊಳ್ಳುವ ಒತ್ತಾಯವೇ ಇರುವುದಿಲ್ಲ. ದಿನದಿನವೂ ನಮ್ಮ ಸುತ್ತ ನಡೆಯುವ ಚರ್ಚೆಗಳನ್ನು, ವರದಿಗಳನ್ನು, 'ಬಲ್ಲವರ' ಮಾತುಗಳನ್ನು ಕೇಳಿದರೆ ಓದಿದರೆ ಅಲ್ಲಿನ ನುಡಿಲೋಕ ನಮ್ಮನ್ನು ಇರುವಲ್ಲಿಯೇ ಗಿರಕಿ ಹೊಡೆಸುತ್ತದೆಯೇ ಹೊರತು ಅದರಿಂದ ಹೊರತರಲಾರದೆಂಬುದು ಗೊತ್ತಾಗುತ್ತದೆ. ಇದೆಲ್ಲದರ ಬೇರು ನಾವು ನಮ್ಮ ನುಡಿಯ ದಿಟವಾದ ಕುಡಿಯು ನಮ್ಮೊಳಗೆ ಬೆಳೆಯಲು ಬಿಟ್ಟಿರುವುದರಲ್ಲಿದೆ. ಇದು ನಮ್ಮ ಅರಿವಿಗೆ ಬಾರದೇ ಹೋದರೆ ಆಗ ಕನ್ನಡ ಮತ್ತು ಕನ್ನಡ ಜನರ ಗುರುತುಗಳು ಮರಳಿ ಪಡೆಯಲಾಗದ ನೆಲೆಗೆ ಜಾರಿಬಿಡಬಹುದು.

ತಾಯ್ನುಡಿಯಲ್ಲಿ ಕಲಿಕೆ: ಅಡ್ಡಿ ಆತಂಕಗಳು

ತಾಯ್ನುಡಿಯಲ್ಲಿ ಕಲಿಕೆ ನಡೆಯುವುದಕ್ಕೆ ಈಗ ಮೊದಲಿಗಿಂತ ಹಲವಾರು ಅಡೆತಡೆಗಳು ಹೆಚ್ಚಾಗಿ ಉಂಟಾಗಿವೆ. ಅದರಲ್ಲೂ 2014ರಲ್ಲಿ ನಾಡಿನ ಉನ್ನತ ನ್ಯಾಯಾಲಯ ನೀಡಿದ ತೀರ್ಪನ್ನು ಗಮನಿಸಿ ಈಗ ಕೈಚೆಲ್ಲಿ ಕೂರುವವರು ಹೆಚ್ಚಾಗಿದ್ದಾರೆ. ಇನ್ನೂ ಕೆಲವರು ಮುಂದುವರೆದು ನಾಡಿನ ಸಂವಿಧಾನಕ್ಕೆ ತಿದ್ದುಪಡಿಯನ್ನು ತಂದು ಕಲಿಕೆಯು ತಾಯ್ನುಡಿಯಲ್ಲೇ ನಡೆಸುವಂತೆ ಮಾಡಬೇಕೆಂಬ ಉಮೇದಿನಲ್ಲಿದ್ದಾರೆ.ಇದು ಕನ್ನಡಕ್ಕೆ ಮಾತ್ರ ಬಂದ ಕುತ್ತು ಅಲ್ಲ. ಎಲ್ಲ ದೇಶಭಾಷೆಗಳು ಈ ಬಿಕ್ಕಟ್ಟನ್ನು ಎದುರಿಸುತ್ತಿರುವುದರಿಂದ ಸಂವಿಧಾನಕ್ಕೆ ತಿದ್ದುಪಡಿ ತರುವುದೊಂದೇ ಈಗ ನಮ್ಮ ಮುಂದೆ ಇರುವ ದಾರಿ ಎಂದು ವಾದಿಸಲಾಗುತ್ತಿದೆ. ಇದೆಲ್ಲವೂ ಎಲ್ಲಿ ಹೋಗಿ ಮುಟ್ಟುವುದೋ ಎಂಬುದನ್ನು ಕಾದು ನೋಡಬೇಕಿದೆ.

ತಾಯ್ನುಡಿಯಲ್ಲಿ ಕಲಿಕೆ ನಡೆಯಬೇಕು; ಅದರಲ್ಲೂ ಕಲಿಕೆಯ ಮೊದಲ ಹಂತದಲ್ಲಿ ಇದು ಬೇಕೇ ಬೇಕು ಎನ್ನುವವರ ವಿಚಾರವೇನೆಂದು ನೋಡೋಣ. ತಾಯ್ನುಡಿಯಲ್ಲಿ ಕಲಿಕೆ ನಡೆದರೆ ಮಗುವಿಗೆ ಹೆಚ್ಚು ಸುಲಭವಾಗುತ್ತದೆ; ಹಾಗಿಲ್ಲದೆ ತನಗೆ ಗೊತ್ತಿಲ್ಲದ ನುಡಿಯೊಂದರ ಮೂಲಕ ಕಲಿತರೆ ಅದರ ಕಲಿಕೆ ಊನವಾಗುತ್ತದೆ ಎಂಬುದು ಇವರ ಚಿಂತನೆಯ ಒಂದು ನೆಲೆ. ಇನ್ನೊಂದು ನೆಲೆಯಲ್ಲಿ ಕಲಿಕೆಯ ಹಂತದಲ್ಲಿ ಮಗು ತಾಯ್ನುಡಿಯಿಂದ ದೂರಾಗ ತೊಡಗಿದರೆ ಅದು ಬೆಳೆದ ಮೇಲೆ ತನ್ನ ಪರಿಸರದೊಡನೆ ಇರುವ ನಂಟನ್ನು ಕಳೆದು ಕೊಳ್ಳುತ್ತದೆ; ಇದರಿಂದ ಮುಂದಿನ ಜನಾಂಗವು ತನ್ನ ಪರಂಪರೆಯಲ್ಲಿ ನಿರಾಸಕ್ತವಾಗುತ್ತದೆ; ಇದು ಒಟ್ಟಾರೆ ಕನ್ನಡ ಸಂಸ್ಕೃತಿಯ ಅಳಿವಿಗೆ ನಾಂದಿಯಾಗುತ್ತದೆ ಎಂದು ವಾದಿಸಲಾಗುತ್ತಿದೆ. ಇವುಗಳಲ್ಲಿ ಮೊದಲನೆಯ ನಿಲುವು ಕಲಿಯುತ್ತಿರುವ ಮಗುವನ್ನು ಕೇಂದ್ರದಲ್ಲಿ ಇರಿಸಿಕೊಂಡಿದೆ.ಅದು ಕನ್ನಡದ ಬಗೆಗಿನ ಕಾಳಜಿಗಿಂತ ಹೆಚ್ಚಾಗಿ ಮಗು ಚೆನ್ನಾಗಿ ಕಲಿಯಲಾಗುತ್ತಿಲ್ಲ ಎಂಬ ಆತಂಕದಿಂದ ಹುಟ್ಟಿದೆ.ಎರಡನೆಯ ನಿಲುವು ಕನ್ನಡದ ಉಳಿವಿನ ಕಾಳಜಿಯಿಂದ ಹುಟ್ಟಿಕೊಂಡಿದೆ.

ತನ್ನದಲ್ಲದ ನುಡಿಯ ಮೂಲಕ ಕಲಿಯುವುದರಿಂದ ಮಗುವಿನ ಕಲಿಕೆಯಲ್ಲಿ ಊನವಾಗುತ್ತದೆ ಎಂದು ಸಾರಿ ಸಾರಿ ಹೇಳಿದರೂ ಪಾಲಕರು ಏಕೆ ತಮ್ಮ ಮಕ್ಕಳನ್ನು ಇಂಗ್ಲಿಶ್ ಮೂಲಕ ಕಲಿಸುವ ಶಾಲೆಗಳಿಗೆ ಕಳಿಸಲು ಸಾಲುಗಟ್ಟುತ್ತಿದ್ದಾರೆ? ಇದಕ್ಕೆ ಹಲವಾರು ಕಾರಣಗಳನ್ನು ಕೊಡಲಾಗುತ್ತದೆ.ಇಂಗ್ಲಿಶ್ ಅವಕಾಶಗಳನ್ನು ಹುಟ್ಟಿಹಾಕುತ್ತದೆ;

ಕನ್ನಡ ಅನ್ನ ಕೊಡುವ ನುಡಿಯಲ್ಲ; ಮುಂದಿನ ಹಂತದ ಕಲಿಕೆಗೆ ಇಂಗ್ಲಿಶ್ ಬೇಕೆ ಬೇಕು.ಹೀಗೆ ಹಲವು ವಾದಗಳನ್ನು ಮುಂದಿಡಲಾಗುತ್ತಿದೆ.ದಿಟದಲ್ಲಿ ಇವೆಲ್ಲಕ್ಕಿಂತ ಮುಂಚೂಣಿಯಲ್ಲಿ ಇರುವ ಕಾರಣವೊಂದಿದೆ.ಅದೆಂದರೆ ಈ ನಾಡಿನಲ್ಲಿ ಕಲಿಕೆ ಎಂಬುದು ಸಮಾಜದಲ್ಲಿ ಈಗ ಇರುವ ಅಸಮಾನತೆಯನ್ನು ಕಾಯ್ದುಕೊಳ್ಳುವ ವ್ಯವಸ್ಥೆಯೇ ಆಗಿದೆ.ಸಮಾನತೆಯ ಸಾಧನೆಯೇ ಕಲಿಕೆಯ ಗುರಿ ಎಂಬುದು ಅದರ ಮೇಲ್ಪದರದ ಹೇಳಿಕೆಯಾಗಿ ಕಂಡರೂ ದಿಟದಲ್ಲಿ ಅದು ಅಸಮಾನತೆಯನ್ನೇ ಕಾಯ್ದುಕೊಳ್ಳುತ್ತಿರುತ್ತದೆ.ಸಮಾಜದಲ್ಲಿ ತಮಗಿರುವ ಇಕ್ಕಟ್ಟುಗಳಿಂದ ಬಿಡುಗಡೆ ಪಡೆದು ಹೆಚ್ಚಿನ ಅವಕಾಶಗಳನ್ನು ಪಡೆದುಕೊಳ್ಳಬೇಕು ಎಂಬುದನ್ನು ಬಯಸುವ ಜನರು ಸಹಜವಾಗಿಯೇ ಮೇಲ್ಮುಖ ಚಲನೆಗಾಗಿ ಹಂಬಲಿಸುತ್ತಿರುತ್ತಾರೆ.ಕಲಿಕೆಯ ಮೂಲಕ ಅದನ್ನು ಸಾಧಿಸಲು ಆಗಬಹುದೇನೋ ಎಂಬ ನಂಬುಗೆಯಿಂದ ಇಂಗ್ಲಿಶಿಗೆ ಮೊರೆ ಹೋಗುತ್ತಿರುತ್ತಾರೆ. ಹಾಗಾಗಿ ಅವರಿಗೆ ಇಂಗ್ಲಿಶ್ ತೇಲಲು ನೆರವಾಗುವ ಬೆಂಡಿನಂತೆಯೂ ಕನ್ನಡ ಇಲ್ಲವೇ ತಾಯ್ನುಡಿಯು ಮುಳುಗಿಸುವ ಗುಂಡಿನಂತೆಯೂ ತೋರಿದರೆ ಅಚ್ಚರಿಯೇನಿಲ್ಲ. ನಮ್ಮ ಕಲಿಕೆಯ ವ್ಯವಸ್ಥೆಯಲ್ಲಿ ಬೇರೂರಿರುವ ಅಸಮಾನತೆಯನ್ನು ಕಾಯ್ದುಕೊಳ್ಳುವ ಚಹರೆ ಕಳೆದುಹೋಗುವ ತನಕ ಈ ಇಂಗ್ಲಿಶ್ ಬಯಕೆ ಇಂಗುವುದಿಲ್ಲ.

ಇನ್ನು ಎರಡನೆಯ ನಿಲುವನ್ನು ನೋಡೋಣ.ಕನ್ನಡದ ನಾಳೆಗಳು ಮಸುಕಾಗಲಿವೆ ಎಂಬ ಕಾಳಜಿಯಿಂದ ಇಂದಿನಿಂದಲೇ ಮಕ್ಕಳಿಗೆ ಕನ್ನಡದ ಮೂಲಕ ಲೋಕವನ್ನು ಗ್ರಹಿಸುವ, ಗ್ರಹಿಸಿದ್ದನ್ನು ಹೇಳುವ ಕೌಶಲಗಳನ್ನು ಕಲಿಸಬೇಕು ಎಂಬ ನಿಲುವು ಇದು.ಈಗಿರುವಂತೆ ಇಂಗ್ಲಿಶ್ ಬಲೆಗೆ ಬಿದ್ದು ಮಕ್ಕಳು ಕನ್ನಡವನ್ನು ತಾತ್ಸಾರ ಮಾಡತೊಡಗಿದರೆ ನಾಳೆ ಅವರು ನಮ್ಮ ಪರಿಸರದ ಅಂಗವಾಗಿ ಉಳಿಯಲಾರರು; ಸಾವಿರಾರು ವರುಶಗಳ ನಮ್ಮ ಬದುಕಿನ ಕ್ರಮಗಳಿಂದ ಅವರು ದೂರಾಗಿ ಬಿಡುತ್ತಾರೆ ಎಂಬುದು ಇಲ್ಲಿನ ಆತಂಕ. ಈ ಆತಂಕವನ್ನು ಸರಿಯಾದ ಚೌಕಟ್ಟಿನಲ್ಲಿ ನಾವು ಅರಿಯಬೇಕಾಗಿದೆ. ಇಂಗ್ಲಿಷ್ ಮೂಲಕ ಕಲಿತವರು ತಾವು ಯಾವ ನುಡಿ ಸಂಸ್ಕೃತಿಗೆ ಸೇರಿದವರೋ ಅದಕ್ಕೆ ಎರವಾಗುವಂತೆ ಬೆಳೆಯುತ್ತಾರೆ ಎಂದು ತಿಳಿಯಲು ಬಲವಾದ ಪುರಾವೆಗಳಿಲ್ಲ. ಹಾಗಗೇನಾದರೂ ಅವರು ದೂರ ಸರಿಯುತ್ತಿದ್ದರೆ ಅದಕ್ಕೆ ಬೇರೆ ಬೇರೆ ಕಾರಣಗಳಿರಲು ಸಾಧ್ಯ. ಕನ್ನಡ ಇಲ್ಲವೇ ತಾಯ್ನುಡಿಯ ಮೂಲಕ ಕಲಿತವರು ತಮ್ಮ ಸಂಸ್ಕೃತಿಗೆ ಹತ್ತಿರವಾಗುವಂತೆ ಬೆಳೆಯುತ್ತಾರೆ ಮತ್ತು ಬೇರೆ ನುಡಿಯ ಮೂಲಕ ಕಲಿತವರು ತಮ್ಮ ಸಂಸ್ಕೃತಿಗೆ ದೂರವಾಗಿ ಬೆಳೆಯುತ್ತಾರೆ ಎಂಬ ತೀರ್ಮಾನಕ್ಕೆ ಬರುವುದು ಹೇಗೆ? ಅಲ್ಲದೆ ಸಂಸ್ಕೃತಿಗೆ ಹತ್ತಿರವಾಗುವುದು; ಅದಕ್ಕೆ ಹಕ್ಕುದಾರರಾಗುವುದು ಎಂದರೇನು? ಸಂಸ್ಕೃತಿ ಎಂದು ನಾವು ವ್ಯವಹರಿಸುತ್ತಿರುವ ನೆಲೆಗಳೆಲ್ಲವೂ ಸಾಮಾಜಿಕ ಅಸಮಾನತೆಯನ್ನು, ಅಸಂಗತ ಮೌಲ್ಯಗಳನ್ನು ಪ್ರತಿಪಾದಿಸುತ್ತಿದ್ದರೆ ಆಗ ಸಹಜವಾಗಿಯೇ ಅಂತಹ ನೆಲೆಗಳಿಗೆ ಹಕ್ಕುದಾರರಾಗಲು ಬೆಳೆಯುವವರು ಒಪ್ಪದಿರಬಹುದಲ್ಲವೇ? ಅಂದರೆ ಹೊಸ ತಲೆಮಾರು ಸಂಸ್ಕೃತಿಗೆ ಎರವಾಗುತ್ತಿರುವುದಕ್ಕೆ ಒಂದು ನಾವು ಹೊತ್ತು ಮೆರೆಯುತ್ತಿರುವ ಸಂಸ್ಕೃತಿಯ ಒಳಗೇ ಇರುವ ಸಮಸ್ಯೆಗಳು ಕಾರಣವಾಗಿರಬೇಕೇ ಹೊರತು ಆ ತಲೆಮಾರಿನವರು ಯಾವ ನುಡಿಯ ಮೂಲಕ ಕಲಿತಿದ್ದಾರೆ ಎಂಬುದು ಮುಖ್ಯ ಕಾರಣವಾಗಿರಲಿಕ್ಕಿಲ್ಲ.

ಈಗ ಈ ಸಮಸ್ಯೆಯ ಇನ್ನೊಂದು ಮುಖವನ್ನು ನೋಡೋಣ. ಕಲಿಕೆ ಯಾವ ನುಡಿಯ ಮೂಲಕ ನಡೆಯುತ್ತದೆ ಎಂಬುದು, ಹಾಗಿದ್ದಲ್ಲಿ, ಒಂದು ಚರ್ಚೆಯ ವಿಷಯವೇ ಅಲ್ಲವೇ? ಈ ಪ್ರಶ್ನೆಗೆ ಉತ್ತರ ನೀಡುವ ಮೊದಲು ಕಲಿಕೆಯ ಸ್ವರೂಪವನ್ನು ಅರಿಯಬೇಕಾಗುತ್ತದೆ. ಕಲಿಕೆಯು ಯಾವುದಾದರೊಂದು ಕೌಶಲವನ್ನು ನಮ್ಮಲ್ಲಿ ಬೆಳೆಸುವ ಗುರಿಯನ್ನು ಹೊಂದಿರಲು ಸಾಧ್ಯ. ಇಲ್ಲವೇ ಕಲಿಕೆಯು ಕೆಲವೊಮ್ಮೆ ನಮ್ಮಲ್ಲಿ ಮಾಹಿತಿಗಳ ಮೊತ್ತವನ್ನು ಹೆಚ್ಚಿಸುವ ಗುರಿಯನ್ನು ಮಾತ್ರವೇ ಹೊಂದಿರಬಹುದು. ಇನ್ನೂ ಕೆಲವೊಮ್ಮೆ ಕಲಿಕೆಯು ನಮಗೆ ಕಲಿಯುವ,ಅರಿಯುವ ಬಗೆಯನ್ನು ಹೇಳಿಕೊಡುತ್ತಿರಬಹುದು. ಹೀಗೆ ಕಲಿಕೆಯಲ್ಲಿ ಹಲವು ಬಗೆಗಳಿರುತ್ತವೆಯಷ್ಟೆ. ನಮ್ಮ ಸದ್ಯದ ಶಾಲಾ ಕಲಿಕೆ ಎರಡನೆಯ ಬಗೆಯದ್ದು. ಅಲ್ಲಿ ನಮಗೆ ಗೊತ್ತಿರದ ಮಾಹಿತಿಯನ್ನು ಕಲಿಸುವ ಕೆಲಸ ನಡೆಯುತ್ತಿರುತ್ತದೆ. ಕಲಿತದ್ದು ಮಾಹಿತಿಯಾಗಿ ಮಾತ್ರ ನೆನಪಿನಲ್ಲಿ ಉಳಿಯಬೇಕೆಂದು ಬಯಸುವ ಗುರಿ ಈ ಬಗೆಯ ಕಲಿಕೆಗೆ ಇದೆ. ಹಾಗಾಗಿ ಕಲಿಕೆಯ ಫಲವಾಗಿ ಮಕ್ಕಳಲ್ಲಿ ಸ್ವತಂತ್ರವಾಗಿ ವಿವೇಚಿಸುವ,ವಿಶ್ಲೇಷಿಸುವ ಕೌಶಲಗಳು ಬೆಳೆಯಬೇಕೆಂಬ ಗುರಿ ಇರುವುದಿಲ್ಲ. ಒಂದು ವೇಳೆ ಇಂತಹ ಗುರಿಯನ್ನು ಹೊಂದಿದ್ದರೆ ಆಗ ಯಾವ ನುಡಿಯ ಮೂಲಕ ಕಲಿಸಲಾಗುತ್ತದೆ ಮತ್ತು ಕಲಿಯಲಾಗುತ್ತಿದೆ ಎಂಬುದಕ್ಕೆ ಹೆಚ್ಚಿನ ಮಹತ್ವ ಬರುತ್ತದೆಂದು ತೋರುತ್ತದೆ.

ಹಾಗಿದ್ದರೆ ಕಲಿಕೆಯಲ್ಲಿ ತಾಯ್ನುಡಿಗೆ ಯಾವ ಮಹತ್ವವೂ ಇಲ್ಲವೇ ಎಂಬ ಪ್ರಶ್ನೆ ಈಗ ಎದುರಾಗುತ್ತದೆ. ಈ ಪ್ರಶ್ನೆಯನ್ನು ನಾವು ಯಾವ ಸಂದರ್ಭದಲ್ಲಿ ಕೇಳುತ್ತಿದ್ದೇವೆ ಎಂಬುದನ್ನು ಮೊದಲು ಗಮನಿಸಬೇಕು. ತಾಯ್ನುಡಿಯ ಕೆಲವು ಕೌಶಲಗಳನ್ನು ಶಾಲೆಯಲ್ಲಿ ಮಕ್ಕಳಿಗೆ ಕಲಿಸಬೇಕಾದ ಅಗತ್ಯ ಇದೆ. ಓದುವ ಮತ್ತು ಬರೆಯುವ ಕೌಶಲಗಳಂತೂ ಸರಿಯೇ ಸರಿ. ಇದಲ್ಲದೆ ಮಾತಾಡುವ ಮತ್ತು ಆಲಿಸಿ ಅರಿಯುವ ಕೌಶಲಗಳೂ ಶಾಲೆಯಲ್ಲಿ ಹೆಚ್ಚು ಪರಿಷ್ಕಾರಗೊಳ್ಳಬೇಕಾಗುತ್ತದೆ. ಒಂದು ಗುಂಪಿನಲ್ಲಿ ಮಾತಾಡುವುದು; ಬೇರೆ ಬೇರೆ ಸನ್ನಿವೇಶಗಳಲ್ಲಿ ಬೇರೆ ಬೇರೆ ಉದ್ದೇಶದಿಂದ ಮಾತಾಡುವುದು ಶಾಲೆಯಲ್ಲಿ ಕಲಿಯ ಬೇಕಾದ ಕೌಶಲಗಳು. ಈ ನಿಟ್ಟಿನಲ್ಲಿ ನುಡಿಯನ್ನು ನಾವು ಶಾಲೆಯಲ್ಲಿ ಕಲಿಸುತ್ತಿರುವ ರೀತಿ ತುಂಬಾ ತಪ್ಪು ದಾರಿ ಹಿಡಿದಿದೆ.. ಗೊತ್ತಿಲ್ಲದಿರುವುದನ್ನು ಕಲಿಸುವ ಬಗೆಯನ್ನೇ ನುಡಿಯ ಕಲಿಕೆಯಲ್ಲೂ ಬಳಸಲಾಗುತ್ತಿದೆ, ಗಣಿತದ ಕಲಿಕೆಗೂ ನುಡಿಯ ಕಲಿಕೆಗೂ ಇರುವ ವ್ಯತ್ಯಾಸಗಳನ್ನು ನಾವು ಗಮನಕ್ಕೆ ತಂದು ಕೊಂಡಿಲ್ಲ. ಈ ಕಾರಣದಿಂದಾಗಿಯೇ ಹಲವು ವರುಶಗಳ ಶಾಲಾ ಕಲಿಕೆಯ ಬಳಿಕವೂ ಮಕ್ಕಳಲ್ಲಿ ನುಡಿ ಬಳಕೆಯ ಕೌಶಲಗಳು ಬೆಳೆಯದೇ ಹೋಗುತ್ತಿವೆ.ಕಲಿಕೆಯ ಬಗೆಯನ್ನು ಕುರಿತು ಯೋಜನೆಗಳನ್ನು ರೂಪಿಸುತ್ತಿರುವವರು ಇದನ್ನೊಂದು ಸಮಸ್ಯೆಯೆಂದೇ ಪರಿಗಣಿಸುತ್ತಿಲ್ಲ.ಈಗಲೂ ವ್ಯಾಕರಣದ ನಿಯಮಗಳನ್ನು ಹೇಳಿಕೊಡುವ ಮತ್ತು ಅದನ್ನೇ ನುಡಿ ಕಲಿಕೆಯ ಪರಮ ಗುರಿ ಎಂದು ಸಾಧಿಸುವ ಬಗೆ ಮುಂದುವರೆದಿದೆ. ತಾಯ್ನುಡಿಯ ವ್ಯಾಕರಣ ಎಂಬುದು ಶಾಲೆಗೆ ಬರುವ ಹೊತ್ತಿಗೇ ಮಕ್ಕಳಲ್ಲಿ ನೆಲೆಗೊಂಡಿರುತ್ತದೆ. ಅದನ್ನು ಬೇರೆಯಾಗಿ ಹೇಳಿಕೊಡುವ ಅಗತ್ಯ ಇರುವುದಿಲ್ಲ. ಹಾಗಿದ್ದಲ್ಲಿ ಮಕ್ಕಳು ಬರೆಯುವಾಗ ಮತ್ತು ಮಾತಾಡುವಾಗ ಮಾಡುವ 'ತಪ್ಪು'ಗಳಿಗೆ ಬೇರೆಯದೇ ಕಾರಣಗಳಿರುತ್ತವೆ. ತಪ್ಪುಗಳನ್ನು ತಿದ್ದುತ್ತೇವೆಯೇ ಹೊರತು

ಮೂಲಕಾರಣವನ್ನು ಕಂಡುಕೊಂಡು ಅದನ್ನು ಸರಿಪಡಿಸುವ ಕೆಲಸ ಈಗ ನಮ್ಮ ಶಾಲೆಗಳಲ್ಲಿ ನಡೆಯುತ್ತಿಲ್ಲ.

ಕಲಿಕೆಯು ತಾಯ್ನುಡಿಯ ಮೂಲಕ ಆಗಬೇಕು ಎಂಬುದನ್ನು ಜಾರಿಗೆ ಕೊಡಲು ಸರಕಾರ ಕಟ್ಟಲೆಗಳನ್ನು ರೂಪಿಸಿದರೂ ಅದನ್ನು ಜಾರಿಗೆ ಕೊಡಲು ಉಂಟಾಗಿರುವ ಕಾನೂನಿನ ಅಡೆತಡೆಗಳನ್ನು ಕುರಿತು ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ. ಭಾಷಿಕ ಅಲ್ಪ ಸಂಖ್ಯಾತರು ಎಂಬ ಹಣೆಪಟ್ಟಿಯು ಹುಟ್ಟಿಕೊಂಡದ್ದರ ಚಾರಿತ್ರಿಕ ಹಿನ್ನೆಲೆಗಳನ್ನು ಚರ್ಚಿಸಲು ಇಲ್ಲಿ ಅವಕಾಶವಿಲ್ಲ. ಈಚಿನ ಉನ್ನತ ನ್ಯಾಯಾಲಯದ ತೀರ್ಪು ಭಾಷಿಕ ಅಲ್ಪಸಂಖ್ಯಾತರ ಹಕ್ಕುಗಳನ್ನು ಅದರಲ್ಲೂ ಆ ಗುಂಪಿನವರೆಂದು ತಿಳಿಯಬಹುದಾದ ಪಾಲಕರ ಹಕ್ಕುಗಳ ಪರವಾಗಿ ನಿಂತಿದೆ. ತಮ್ಮ ಮಕ್ಕಳು ಯಾವ ನುಡಿಯ ಮೂಲಕ ಕಲಿಯಬೇಕೆಂಬುದನ್ನು ಗೊತ್ತುಮಾಡುವ ಹಕ್ಕು ಮತ್ತು ಅವಕಾಶ ಪಾಲಕರಿಗೆ ಇರಬೇಕೆಂದು ಹೇಳಲಾಗಿದೆಯಷ್ಟೆ. ಈ ಆಯ್ಕೆಯ ವ್ಯಾಪ್ತಿಯನ್ನು ಹೆಚ್ಚಿಸಿದರೆ ನಾಳೆ ಪಾಲಕರು ತಮ್ಮ ಮಕ್ಕಳು ಚರಿತ್ರೆಯನ್ನು ಓದಬೇಕೆ ಬೇಡವೇ ಎಂಬುದನ್ನು ನಿರ್ಧರಿಸುವ ಹಕ್ಕು ತಮಗಿದೆ ಎಂದು ವಾದಿಸಲೂ ಬಹುದು. ಅದು ಒತ್ತಟ್ಟಿಗಿರಲಿ. ಈ ಆಯ್ಕೆಯ ಸ್ವರೂಪವನ್ನು ಇನ್ನೂ ಒಂದು ರೀತಿಯಲ್ಲಿ ನೋಡಬಹುದು. ಲಂಬಾಣಿ ಮಾತನಾಡುವ ಕುಟುಂಬದಿಂದ ಬಂದ ಮಗುವಿನ ಪಾಲಕರು ತಮ್ಮ ಮಗುವಿಗೆ ಅದರ ತಾಯ್ನುಡಿಯಾದ ಲಂಬಾಣಿ ನುಡಿಯ ಮೂಲಕವೇ ಕಲಿಯುವ ಅವಕಾಶ ಇರಬೇಕೆಂದು ಕೋರುತ್ತಾರೋ ಇಲ್ಲವೇ ಆ ಮಗು ಇಂಗ್ಲಿಶಿನ ಮೂಲಕವೇ ಕಲಿಯು ಅವಕಾಶ ಇರಬೇಕೆಂದು ಹೇಳುತ್ತಾರೋ? ಇಂಗ್ಲಿಶ್ ಮೂಲಕ ಕಲಿಸುವ ಮತ್ತು ಅನುದಾನ ಪಡೆಯದ ಶಾಲೆಗಳನ್ನು ನಡೆಸುತ್ತಿರುವವರು ತಮ್ಮ ಆಯ್ಕೆಯೇ ಪಾಲಕರ ಆಯ್ಕೆ ಎಂದು ತೀರ್ಮಾನಿಸಿ ಬಿಟ್ಟಿದ್ದಾರೆ. ಸರಕಾರದ ಏನೂ ಮಾಡಲಾಗದ ಹಂತವನ್ನು ತಲುಪಿದೆ ಎಂದು ಈಗ ನಂಬಬೇಕಾಗಿ ಬಿಟ್ಟಿದೆ. ಸಂವಿಧಾನಕ್ಕೆ ತಿದ್ದುಪಡಿ ತರುವ ಮೂಲಕ ಈ ಇಕ್ಕಟ್ಟಿನಿಂದ ಪಾರಾಗಬಹುದೆಂದು ವಾದಿಸುವವರು ಯಾವ ಬಗೆಯ ತಿದ್ದುಪಡಿಯನ್ನು ತರಬೇಕೆಂದು ಹೇಳುತ್ತಿಲ್ಲ. ಸಂವಿಧಾನದ ಯಾವ ಕಲಮನ್ನು ಬದಲಿಸಿದರೆ, ಇಲ್ಲವೇ ಅದರಲ್ಲಿ ತಿದ್ದುಪಾಟುಗಳನ್ನು ಮಾಡಿದರೆ ಈಗ ತಾಯ್ನುಡಿಗಳಿಗೆ ಇಲ್ಲದಿರುವ ಹಕ್ಕುಗಳು ದೊರಕುತ್ತವೆ ಎಂದು ಹೇಳುವುದು ಕಷ್ಟ. ಏಕೆಂದರೆ ಮೂಲ ಹಕ್ಕುಗಳಿಗೆ ಮತ್ತು ಭಾಷಿಕ ಅಲ್ಪ ಸಂಖ್ಯಾತರಿಗೆ ಹಕ್ಕುಗಳನ್ನು ಒದಗಿಸುವ ಕಲಮುಗಳನ್ನು ಬದಲಿಸುವುದು ಮತ್ತು ತಿದ್ದುಪಾಟುಗಳನ್ನು ತರುವುದು ಸುಲಭವೆಂದು ತೋರುತ್ತಿಲ್ಲ. ಇದಕ್ಕೆ ಬೇಕಾದ ರಾಜಕೀಯ ಒತ್ತಡಗಳನ್ನು ಇಡೀ ನಾಡಿನಲ್ಲಿ ಒಟ್ಟಾಗಿ ಮೂಡಲು ಬೇರೆ ಬೇರೆ ಅಡಡೆತಡೆಗಳಿವೆ.

ಹಾಗಿದ್ದಲ್ಲಿ ಈಗ ಏನು ಮಾಡಬೇಕು? ಕರ್ನಾಟಕ ಸರಕಾರದ ಶಿಕ್ಷಣ ಕಾಯಿದೆ 1983(1995)ರಲ್ಲಿ ಸರಕಾರಕ್ಕೆ ವಿಶೇಷ ಅಧಿಕಾರವನ್ನು ಒದಗಿಸಲಾಗಿದೆ. ಈ ಕಾಯಿದೆಗೆ ರಾಷ್ಟ್ರಪತಿಗಳು ಅಂಕಿತ ಹಾಕಲು ಹನ್ನೆರಡು ವರುಶಗಳು ಬೇಕಾದವು. 1995ರಲ್ಲಿ ಅದಕ್ಕೆ ಸಮ್ಮತಿ ದೊರೆಯುವುದಕ್ಕೆ ಮೊದಲು ಕರ್ನಾಟಕ ಸರಕಾರ ಹೊರಡಿಸಿದ 1994ರ ಆದೇಶವೇ ಈಗ ಹಲವು ನ್ಯಾಯಾಲಯಗಳಲ್ಲಿ ಪ್ರಶ್ನಿತವಾಗಿರುವುದು.ಆ

ಆದೇಶವನ್ನು ಹೊರಡಿಸಲು ಸರಕಾರಕ್ಕೆ ಆಗ 1994ರಲ್ಲಿ ಯಾವ ಕಾಯಿದೆಯ ಬೆಂಬಲವೂ ಇರಲಿಲ್ಲ. ಕರ್ನಾಟಕ ಸರಕಾರದ ಶಿಕ್ಷಣ ಕಾಯಿದೆ 1983(1995)ರ ಕಲಮುಗಳನ್ನು ಈವರೆಗೆ ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ. ಈವರೆಗಿನ ದಾವೆಗಳ ವಾದಗಳಲ್ಲಿ ಅದು ಉಲ್ಲೇಖವೂ ಆಗಿಲ್ಲ. ಅಂದರೆ ಸರಕಾರಕ್ಕೆ ಮಕ್ಕಳು ಯಾವ ನುಡಿಯ ಮೂಲಕ ಕಲಿಯಬೇಕೆಂಬುದನ್ನು ಗೊತ್ತು ಮಾಡುವ ಅಧಿಕಾರವನ್ನು ಈ ಕಾಯಿದೆ ಕೊಡುತ್ತದೆ. ಆದರೆ ಈ ನಿರ್ಧಾರವನ್ನು ಜಾರಿಗೊಳಿಸುವಂತೆ ಸರಕಾರದ ಅನುದಾನ ಪಡೆಯದಿರುವ ಶಾಲೆಗಳ ಮೇಲೆ ಒತ್ತಾಯ ಹೇರುವಂತಿಲ್ಲ ಎಂದು ನ್ಯಾಯಾಲಯಗಳು ಹೇಳಬಹುದು. ಆಗ ಸರಕಾರಕ್ಕೆ ಉಳಿದಿರುವ ದಾರಿಯೆಂದರೆ ನಾಡಿನಲ್ಲಿ ಇರುವ ಶಾಲೆಗಳೂ ಸರಕಾರದ ಅನುದಾನವನ್ನು ಪಡೆಯಲೇ ಬೇಕೆಂದು ಹೇಳುವುದು. ಇದು ಯಾರ ಹಕ್ಕನ್ನೂ ಮೊಟಕು ಮಾಡಿದಂತೆ ಆಗುವುದಿಲ್ಲ. ಈಗಿನ ಲೆಕ್ಕದಂತೆ ಇದರಿಂದ ಸರಕಾರಕ್ಕೆ ಆಗುವ ಹಣಕಾಸಿನ ಹೊರೆ ಹೆಚ್ಚೇನೂ ಅಲ್ಲ. ಹಾಗೆ ನೋಡಿದರೆ 1986 ರ ಬಳಿಕ 1994 ರವರೆಗೆ ಕರ್ನಾಟಕ ಸರಕಾರವು ಅನುದಾನ ಪಡೆಯದೆ ಶಾಲೆಗಳನ್ನು ನಡೆಸಬಹುದೆಂದು ತೀರ್ಮಾನಿಸಿ ಅನುಮತಿಯನ್ನು ನೀಡಿದ್ದರಿಂದಲೇ ಈ ಸಮಸ್ಯೆಗಳು ಉಂಟಾಗಿರುವುದು. 1983ರ ಸರಕಾರದ ಕಾಯಿದೆಯಲ್ಲಿ ಅನುದಾನ ಪಡೆಯದ ಶಾಲೆಗಳ ಸೂಚನೆಯೂ ಇಲ್ಲ. ಈ ಕಾಯಿದೆ ಸರಕಾರ ಒಪ್ಪಿಗೆ ನೀಡಿದ ಬಳಿಕ ಈ ಬಗೆಯ ಶಾಲೆಗಳು ತಲೆ ಎತ್ತಿವೆ. ಈಗ ಇವನ್ನು ಅನುದಾನ ಪಡೆಯುವ ಶಾಲೆಗಳನ್ನಾಗಿ ಮಾಡಬೇಕಾಗಿದೆ.

ಇದಲ್ಲದೆ ಇನ್ನೂ ಒಂದು ದಾರಿ ಇದೆಯೆಂದು ಬಲ್ಲವರು ಹೇಳುತ್ತಿದ್ದಾರೆ. ಅದೆಂದರೆ ಯಾವ ಶಾಲೆಯೂ ಕೂಡ ತಾನು ಇಂತಹುದೇ ನುಡಿಯ ಮೂಲಕ ಕಲಿಸುವುದೆಂದು ಹೇಳದಿರುವ ಶರತ್ತು ಹಾಕುವುದು. ಒಂದಕ್ಕಿಂತ ಹೆಚ್ಚು ನುಡಿಗಳನ್ನು ಬಳಸಿ ಕಲಿಸುವ ಬಗೆಯನ್ನು ಜಾರಿಗೆ ಕೊಡುವುದು. ಈಗ ಈ ವಿಧಾನವನ್ನು ಜಾಗತಿಕವಾಗಿ ಬಳಸಲಾಗುತ್ತಿದೆ. **ಕನ್ನಡ ಇಲ್ಲವೇ ಇಂಗ್ಲಿಶ್ ಎಂಬ ಒಡೆದ ಹಾದಿಯನ್ನು ಬಿಟ್ಟು ಕನ್ನಡದ ಜೊತೆಗೆ ಇಂಗ್ಲಿಶ್ ಎಂಬ ಕೂಡುಹಾದಿಯನ್ನು ಅನುಸರಿಸುವುದು ಸರಿ.** ಹಾಗೆ ನೋಡಿದರೆ ಈಗ ಇಂಗ್ಲಿಶ್ ನುಡಿಯ ಮೂಲಕ ಕಲಿಸುತ್ತಿರುವುದಾಗಿ ಹೇಳಿಕೊಳ್ಳುತ್ತಿರುವ ನೂರಾರು ಶಾಲೆಗಳಲ್ಲಿ ಇಂಗ್ಲಿಶ್ ಜೊತೆಗೆ ಕನ್ನಡ ಇಲ್ಲವೇ ತಾಯ್ನುಡಿಗಳನ್ನು ಪಾಠ ಹೇಳಿಕೊಡುವಾಗ ಬಳಸುತ್ತಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿಯೇ ಆಗಿದೆ. ಮಕ್ಕಳೂ ಕಲಿತು ಬರೆಯುವ ಉತ್ತರಗಳು ಮಾತ್ರ ಇಂಗ್ಲಿಶಿನಲ್ಲಿ ಇರುತ್ತವೆ. ಆದರೆ ಕಲಿಯುವಾಗ ಎರಡೂ ನುಡಿಗಳ ನೆರವು ದೊರಕುತ್ತಿರುತ್ತದೆ. ಎರಡು ನುಡಿಗಳನ್ನು ಬಳಸಿಯೇ ಕಲಿಸುವ ದಾರಿಗೆ ಮನ್ನಣೆಯನ್ನು ನೀಡುವುದು ಈಗ ಇರುವ ಆಯ್ಕೆಗಳಲ್ಲಿ ಒಂದೆಂದು ತೋರುತ್ತದೆ.

ಕನ್ನಡ ಭಾಷಾಧ್ಯಯನ ಈವರೆಗೆ ಮತ್ತು ಮುಂದೆ

ಕನ್ನಡ ಭಾಷೆಯ ರಚನೆಯನ್ನು ಅರಿಯುವ ಕೆಲಸ ಮೊದಲಾಗಿ ಸಾವಿರದಿನ್ನೂರು ವರುಶಗಳೇ ಸಂದಿವೆ. ಈ ನುಡಿಯಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಗಮನಿಸಿ ಮತ್ತೆ ಮತ್ತೆ ನುಡಿಯ ಕಟ್ಟೋಣವನ್ನು ತಿಳಿಯುವ ಕೆಲಸವನ್ನು ಮಾಡುತ್ತಲೇ ಬರಲಾಗಿದೆ. ಸುಮಾರು ಅರವತ್ತು ವರುಷಗಳ ಹಿಂದೆ ಅರಿಮೆಯ ವಲಯಕ್ಕೆ ಭಾಷಾಶಾಸ್ತ್ರ ಬರತೊಡಗಿತು. ಇಲ್ಲಿನ ಕೆಲವು ನುಡಿಯರಿಗರು ಅಮೆರಿಕಾ ಇಂಗ್ಲೆಂಡ್ ಮುಂತಾದ ದೇಶಗಳಿಗೆ ಹೋಗಿ ಅಲ್ಲಿ ತಾವು ಕಲಿತ ಹೊಸ ತಿಳುವಳಿಕೆಯನ್ನು ಕನ್ನಡದಲ್ಲಿ ಹೇಳತೊಡಗಿದರು. ವಿಶ್ವವಿದ್ಯಾಲಯಗಳಲ್ಲಿ ಕಲಿಸುತ್ತಿದ್ದ ಹಲವರು ಭಾಷಾಶಾಸ್ತ್ರದ ಬೇಸಿಗೆ ಶಿಬಿರಗಳಿಗೆ ಹೋಗಿ ಹಲವು ತಿಳುವಳಿಕೆಯನ್ನು ಪಡೆಯ ತೊಡಗಿದರು. ಇದರಿಂದೇನಾಯಿತು? ಕನ್ನಡ ನುಡಿಯ ರಚನೆಯನ್ನು ಅರಿಯಲು ಈ ಹೊಸ ತಿಳುವಳಿಕೆಯ ನೆರವನ್ನು ಪಡೆಯಬೇಕು ಎಂಬುವವರೊಂದು ಕಡೆಯಾದರೆ ಅಂತಹ ತಿಳಿವಿನ ನೆರವಿಲ್ಲದೆಯೂ ನಮ್ಮ ನುಡಿಯ ಬಗೆಯನ್ನು ಅರಿಯುವುದೇ ಸರಿ ಎಂದು ನಂಬಿದವರು ಇನ್ನೊಂದು ಕಡೆ ನಿಂತರು. ಈ ಎರಡೂ ಗುಂಪುಗಳ ನಡುವೆ ಈ ಐವತ್ತು ವರುಶಗಳಲ್ಲಿ ಹಲವಾರು ಮುಕಾಬಿಲೆಗಳಾಗಿವೆ. ಯಾರು ಗೆದ್ದರು ಎನ್ನುವುದಕ್ಕಿಂತ ಇದರಿಂದ ಭಾಷಾಧ್ಯಯನ ಎಂಬುದು ಕನ್ನಡದಲ್ಲಿ ಹೊಸ ಹಾದಿಯಲ್ಲಿ ಸಾಗುವುದಕ್ಕೆ ಇದರಿಂದ ಅಡ್ಡಿಗಳಾದವು ಎನ್ನುವುದು ನೋವಿನ ಸಂಗತಿಯಾಗಿದೆ. ತಮಿಳು, ತೆಲುಗು ಮತ್ತು ಮಲೆಯಾಳಂ ನುಡಿಗಳಲ್ಲಿ ಕೂಡ ಇಂತಹ ಹಾದಿಗಳು ನಡೆದಿವೆಯಾದರೂ ಅಲೆಲ್ಲಾ ಹೊಸ ದಿಕ್ಕಿನಲ್ಲಿ ಸಾಗಿರುವುದನ್ನು ನೋಡುತ್ತಿದ್ದೇವೆ. ಆದರೆ ಕನ್ನಡದಲ್ಲಿ ಹಾಗಾಗಲಿಲ್ಲ.

ಅಂದರೆ ಕನ್ನಡ ನುಡಿಯ ಓದು, ಭಾಷಾ ಶಾಸ್ತ್ರ ತೋರಿದ ಹೊಸ ದಾರಿಗಳಲ್ಲಿ ಸಾಗಿಲ್ಲ ಎಂದಲ್ಲ. ಆದರೆ ಅಂತಹ ಹೆಚ್ಚಿನ ಓದುಗಳಲ್ಲಿ ತೊಡಗಿಸಿಕೊಂಡವರು ಕನ್ನಡವನ್ನು ಚೆನ್ನಾಗಿ ಬಲ್ಲ ಈ ನಾಡಿನ ನುಡಿಯರಿಗರು ಮತ್ತು ಬೇರೆ ನಾಡುಗಳಲ್ಲಿದ್ದುಕೊಂಡು ಕನ್ನಡವನ್ನು ಹೊಸ ಬಗೆಯಲ್ಲಿ ಅರಿಯಲು ತೊಡಗಿದವರು ಸೇರಿದ್ದಾರೆ. ಮೊದಲ ಗುಂಪಿನಲ್ಲಿ ಎ.ಕೆ. ರಾಮನುಜನ್, ತಿರುಮಲೇಶ್.ಕೆ.ವಿ. ಅಮೃತವಲ್ಲಿ, ಶ್ರೀಧರ್.ಎಸ್.ಎನ್ ಮುಂತಾದವರು ಇದ್ದರೆ, ಎರಡನೆಯ ಗುಂಪಿನಲ್ಲಿ ವಿಲಿಯಂ ಬ್ರೈಟ್, ಜಾನ್ ಗುಂಫರ್ಜ್, ಮಾರ್ಕ್ ಅರನಾಫ಼ಥ್ ಮುಂತಾದವರಿದ್ದಾರೆ. ಇವರೆಲ್ಲರೂ ತಮ್ಮ ಓದುಗಳನ್ನು ಮಂಡಿಸಿರುವುದು ಇಂಗ್ಲಿಷಿನಲ್ಲಿ. ಅವರ ಬರೆಹಗಳು ಕನ್ನಡ ನಾಡಿನ ಎಳೆಯ ತಲೆಮಾರಿಗೆ ದೂರವೇ ಉಳಿದಿವೆ. ಅವುಗಳಿಂದ ಪಡೆದುಕೊಂಡದ್ದನ್ನು

ತಮ್ಮ ಓದಿಗೆ ಬಳಸಿದ್ದು ಇಲ್ಲವೆನ್ನುವಷ್ಟು ಕಡಿಮೆ. ಇದೆಲ್ಲದರಿಂದ ಏನಾಯಿತು ಎಂಬುದನ್ನು ನೋಡೋಣ.

ಇದರ ಜೊತೆಗೆ ಎಲ್ಲಿ ಭಾಷಾ ಶಾಸ್ತ್ರವನ್ನು ಹೆಚ್ಚಿನ ಓದಿಗಾಗಿ ತೆರೆದಿಡಲಾಯಿತೋ ಅಂತಹ ಕಡೆಗಳಲ್ಲಿ ಏನನ್ನು ಓದಬೇಕು ಮತ್ತು ಯಾವ ನುಡಿಯಲ್ಲಿ ಕಲಿಯ ಬೇಕು ಎಂಬ ಮಾತು ಬಂದಾಗ ಮುಂಗಾಣ್ಕೆಯಿಲ್ಲದೆ ನಡೆದುಕೊಂಡಿರುವುದನ್ನು ಕಾಣುತ್ತೇವೆ. ಭಾಷಾ ಶಾಸ್ತ್ರ ವಿಷಯವನ್ನು ಇಂಗ್ಲಿಷಿನಲ್ಲಿ ಕಲಿಸುವ ಹಾದಿಯನ್ನು ಈಗಲೂ ಹಿಡಿಯಲಾಗುತ್ತಿದೆ. ಕಲಿಯುವವರು ತಮ್ಮದೇ ಬಗೆಯಲ್ಲಿ ಕನ್ನಡವನ್ನು ಬಳಸುತ್ತಿದ್ದಾರಾದರೂ ಇಂಗ್ಲಿಶಿನ ನೆರಳು ಈಗಲೂ ಕಾಡುತ್ತಿದೆ. ಜೊತೆಗೆ ಕನ್ನಡ ನುಡಿಯ ಓದನ್ನು ಈ ವಿಷಯವನ್ನು ಕಲಿಸುವ ಕಡೆಗಳಲ್ಲಿ ದೂರವಿರಿಸಲಾಗಿದೆ. ಭಾಷಾ ಶಾಸ್ತ್ರದಲ್ಲಿ ಎಂಎ ಪದವಿ ಪಡೆದ ಈ ನಾಡಿನ ಹುಡುಗರು ಕನ್ನಡ ನುಡಿ ರಚನೆಯನ್ನು ವಿವರಿಸಲಾರದಾಗಿರುತ್ತಾರೆ. ಭಾಷಾ ಶಾಸ್ತ್ರದ ಹೊಸ ತಿಳಿವುಗಳು ಕನ್ನಡ ಓದಿನ ನೆಲೆಗಳಲ್ಲಿ ಬಳಕೆಯಾಗದಂತೆ ತಡೆಯುವಲ್ಲಿ ಇವೆಲ್ಲವೂ ಕಾರಣಗಳಾಗಿವೆ.

ಸೊಲ್ಲರಿಮೆಗಳು ಒಂದು ನುಡಿಯ ಕಟ್ಟುಗಳನ್ನು ವಿವರಿಸಬಲ್ಲವು. ದಿಟ, ಹಾಗೆ ಮಾಡುವಾಗ ದೊರೆವ ಚೌಕಟ್ಟುಗಳನ್ನು ಆ ನುಡಿಯನ್ನು ಅರಿಯಲು ತೊಡಗಿರುವ ನುಡಿಯರಿಗರು ಬಳಸುತ್ತಾರೆ ಎಂಬುದನ್ನು ನೋಡಬೇಕು. ಕನ್ನಡದ ಮಟ್ಟಿಗಂತೂ ಮೊದಮೊದಲ ನುಡಿಯರಿಗರು, ಅಂದರೆ ಶ್ರೀವಿಜಯನೇ ಮೊದಲಾಗಿ ಮುಂದೆ ಹತ್ತೊಂಬತ್ತನೆಯ ಶತಮಾನದವರೆಗೆ ಸಂಸ್ಕೃತದ ಚೌಕಟ್ಟನ್ನು ಬಳಸಿ ಕನ್ನಡವನ್ನು ನೋಡುವ ಬಗೆ ಒಪ್ಪಿಗೆಯನ್ನು ಪಡೆದಿತ್ತು. ಆ ಬಳಿಕ ಕ್ರೈಸ್ತ ಮಿಶನರಿಗಳು ಲ್ಯಾಟಿನ್ನು ನುಡಿಯ ಚೌಕಟ್ಟನ್ನು ಬಳಸಿ ಕನ್ನಡವನ್ನು ವಿವರಿಸ ತೊಡಗಿದರು. ಸಂಸ್ಕೃತ ಮತ್ತು ಲ್ಯಾಟಿನ್ ಅ ಹೊತ್ತಿಗಾಗಲೇ ಅಚ್ಚುಕಟ್ಟಾದ ಸೊಲ್ಲರಿಮೆಯ ಚೌಕಟ್ಟುಗಳನ್ನು ಹೊಂದಿದ್ದವು. ಆ ನುಡಿಗಳು ಜನರ ನುಡಿಗಳಾಗಿ ಉಳಿದಿರಲಿಲ್ಲ. ಆದ್ದರಿಂದ ಆ ನುಡಿಗಳ ಸೊಲ್ಲರಿಮೆಯ ಚೌಕಟ್ಟುಗಳಲ್ಲಿ ಬದಲಾವಣೆಗಳಾಗುವಂತಿರಲಿಲ್ಲ. ಬದಲಾವಣೆ ಇಲ್ಲದಿರುವುದನ್ನೇ ಎಲ್ಲ ನುಡಿಗಳಿಗೂ ಸಲ್ಲುವ ಗುರುತೆಂದು ತಿಳಿದು ನುಡಿಯರಿಗರು ಆ ಚೌಕಟ್ಟುಗಳನ್ನು ಎಲ್ಲ ನುಡಿಗಳನ್ನು ಅರಿಯಲು ಬಳಸ ತೊಡಗಿದರು. ಕನ್ನಡದ ಮಟ್ಟಿಗೂ ಇದೇ ಹಾದಿಯನ್ನು ಹಿಡಿಯಲಾಗಿದೆ.

ಭಾಷಾ ಶಾಸ್ತ್ರದ ತಿಳುವಳಿಕೆಗಳು ಲೋಕದ ನೂರಾರು ನುಡಿಗಳ ಸೊಲ್ಲರಿಮೆಗಳಲ್ಲಿ ಇರುವ ಬಗೆಗಳನ್ನು ಹೊರತಂದು ತೋರಿಸುತ್ತಿದ್ದಾವಾದರೂ ಅವೆಲ್ಲವನ್ನು ಅರಿತು ಕನ್ನಡದ ಓದಿಗೆ ಬಳಸುವ ತಾಳ್ಮೆಯನ್ನು ಮತ್ತು ಮುಂಗಾಣ್ಕೆಯನ್ನು ನಮ್ಮ ನುಡಿಯರಿಗರು ಪಡೆಯಲೇ ಇಲ್ಲ. ಇದರಿಂದಾಗಿ ಯಾರಾದರೂ ಪೂರ್ವದ ಹಳಗನ್ನಡ ಎನ್ನುತ್ತೇವಲ್ಲ ಅದರ ಚಹರೆಗಳೇನು ಎಂದು ಕೇಳಿದರೆ ಎಂಬತ್ತು ವರುಶಗಳ ಹಿಂದೆ ಏನನ್ನು ಹೇಳುತ್ತಿದ್ದೇವೋ ಅದನ್ನೇ ಮರಳಿ ಮರಳಿ ಗಿಳಿಗಳಂತೆ ಉಲಿಯುತ್ತಿದ್ದೇವೆ. ಅವೇ ನಾಲ್ಕೈದು ಉದಾಹರಣೆಗಳನ್ನು ಕೊಟ್ಟು ಕೈ ತೊಳೆದುಕೊಳ್ಳುತ್ತಿದ್ದೇವೆ.

ಕನ್ನಡ ನುಡಿಯನ್ನು ಅರಿಯಲು ತೊಡಗಿರುವ ನಾಡಿನ ಮತ್ತು ಹೊರನಾಡಿನ ನುಡಿಯರಿಗರು ಎರಡು ಮಾದರಿಗಳನ್ನು ಹೊಂದಿದ್ದಾರೆ. ಒಂದು ಮಾದರಿಯವರು

ಭಾಷೆಯ ಸಾಮಾನ್ಯ ಗುರುತುಗಳೊಂದಿಗೆ ಕನ್ನಡ ಹೇಗೆ ಹೊಂದಿಕೊಳ್ಳುತ್ತದೆ ಎಂಬುದನ್ನು ತೋರಿಸಲು ಮುಂದಾಗಿರುವವರು. ಅಂದರೆ ತಾವು ಒಪ್ಪಿರುವ ಮತ್ತು ಬಳಸುತ್ತಿರುವ ಭಾಷಾಶಾಸ್ತ್ರದ ಚೌಕಟ್ಟಿಗೆ ಕನ್ನಡ ಹೊಂದಿಕೊಳ್ಳುವ ಬಗೆಯನ್ನು ತೋರಿಸುತ್ತಿರುತ್ತಾರೆ. ಇಂತಹವರು ಹೆಚ್ಚಾಗಿದ್ದಾರೆ. ಹಾಗೆ ನೋಡಿದರೆ ವಿಶ್ವವಿದ್ಯಾಲಯಗಳಲ್ಲಿ ಈವರೆಗೆ ಕನ್ನಡ ನುಡಿಯನ್ನು ಅವಲಂಬಿಸಿ ನಡೆದಿರುವ ನೂರಾರು ಪಿಎಚ್.ಡಿ ನಿಬಂಧಗಳು ಇದೇ ಮಾದರಿಯಲ್ಲಿವೆ. ಎರಡನೆಯ ಗುಂಪಿನವರ ಮಾದರಿ ಬೇರೆ. ಅವರು ಈಗ ಒಪ್ಪಿತವಾಗಿರುವ ಭಾಷಾ ಶಾಸ್ತ್ರದ ಚೌಕಟ್ಟಿಗೆ ಹೊಂದಿಕೆಯಾಗುವ ಉದಾಹರಣೆಗಳು ಕನ್ನಡದಲ್ಲಿ ಇವೆಯೇ ಎಂದು ಹುಡುಕುತ್ತಿರುವವರು. ಅವರಿಗೆ ಭಾಷಾ ಶಾಸ್ತ್ರದ ಸಮ್ಮತಿ ಪಡೆದ ಚೌಕಟ್ಟುಗಳನ್ನು ಬದಲಿಸುವ ಮತ್ತು ಹೊಸ ಚೌಕಟ್ಟುಗಳನ್ನು ಹುಡುಕುವ ಬಯಕೆ ಇರುತ್ತದೆ. ಅದಕ್ಕಾಗಿ ಅವರು ಕನ್ನಡವನ್ನು ಉದಾಹರಣೆಯನ್ನಾಗಿ ಆಯ್ದುಕೊಂಡಿರುತ್ತಾರೆ. ಈ ಎರಡೂ ಗುಂಪಿನ ಕನ್ನಡ ಓದುಗಳ ನೆರವನ್ನು ಪಡೆದುಕೊಳ್ಳುವಲ್ಲಿ ನಾವು ಸೋತಿದ್ದೇವೆ.

ಸರಿ. ಈಗೇನು ಮಾಡುವುದು? ಸೊಲ್ಲರಿಮೆಗಾರರು ಭಾಷಾ ಶಾಸ್ತ್ರದೊಡನೆ ತೆಗೆದಿರುವ ತಗಾದೆಗೆ ಬುಡವಿಲ್ಲ. ಇನ್ನಾದರೂ ತಪ್ಪು ತಿಳುವಳಿಕೆಗಳು ಅಳಿಯಬೇಕು. ಅದಕ್ಕಾಗಿ ನಾವೀಗ ಭಾಷಾಶಾಸ್ತ್ರವನ್ನು ಕಲಿಸುವ ಬಗೆಯನ್ನು ಬದಲಾಯಿಸಬೇಕಾಗಿದೆ. ಶಾಲೆಗಳಿಂದ ಕೊಡಲಾಗಿ ಈ ಬದಲಾವಣೆಯನ್ನು ತರಬೇಕು. ನಮ್ಮ ಶಾಲಾ ವ್ಯಾಕರಣಗಳನ್ನು ಹೊಸ ತಿಳಿವಿನ ಬೆಳಕಿನಲ್ಲಿ ಬರೆಯಬೇಕು. ಈಗ ಮಕ್ಕಳಿಗೆ ಕಲಿಸುತ್ತಿರುವವರಿಗೆ ಈ ಹೊಸ ಮಾದರಿಯ ಪರಿಕರಗಳನ್ನು ತಿಳಿಸುವ ಕೆಲಸವನ್ನು ಮೊದಲು ಮಾಡಬೇಕು. ಅದಕ್ಕಾಗಿ ಶಿಕ್ಷಕರ ತರಬೇತಿಯ ಪಠ್ಯಕ್ರಮದಲ್ಲಿ ಭಾಷೆಯ ಕಲಿಕೆಯ ಮಾದರಿಗಳನ್ನು ಬದಲಿಸಬೇಕು. ಅಂದರೆ ಹೊಸ ತಿಳಿವಿನ ಮಾದರಿಯನ್ನು ಆ ತರಬೇತಿಯಲ್ಲಿ ಅಳವಡಿಸಿದರೆ ಆಗ ಅವನ್ನು ಕಲಿತ ಉಪಾಧ್ಯಾಯರು ಮುಂದೆ ತರಗತಿಗಳಲ್ಲಿ ತಕ್ಕ ಹಾದಿಯನ್ನು ಹಿಡಿಯುತ್ತಾರೆ.

ಕನ್ನಡವನ್ನು ವಿಶೇಷ ವಿಷಯವನ್ನಾಗಿ ಪದವಿ ತರಗತಿಗಳಲ್ಲಿ ಓದುವವರು ಕನ್ನಡ ಭಾಷೆಯ ರಚನೆಯನ್ನು ಅರಿಯಲು ಹಳಗನ್ನಡವನ್ನು ವಿವರಿಸುವ ಸಂಸ್ಕೃತದ ಚೌಕಟ್ಟಿನ ಸೊಲ್ಲರಿಮೆಗಳನ್ನು ಅವಲಂಬಿಸುವ ಬಗೆಯನ್ನು ಕೈ ಬಿಡಬೇಕು. ಹೊಸ ಸೊಲ್ಲರಿಮೆಯ ಮಾದರಿಯಲ್ಲಿ ಕನ್ನಡದ ರಚನೆಯನ್ನು ತಿಳಿಸಿ ಹೇಳಬೇಕು. ಕನ್ನಡ ಈಗಲೂ ಜನ ಬಳಸುತ್ತಿರುವ ನುಡಿ. ಅದರಲ್ಲಿ ದಿನದಿನವೂ ಬದಲಾವಣೆಗಳಾಗುತ್ತಿರುತ್ತವೆ. ಅದರಲ್ಲಿ ಹಲವು ಒಳನುಡಿಗಳಿವೆ. ಬಳಕೆಯ ಕಟ್ಟುಗಳಿವೆ. ಕನ್ನಡ ಬೇರೆ ಬೇರೆ ವಲಯಗಳಲ್ಲಿ ಒಗ್ಗಿಕೊಳ್ಳುತ್ತಿರುವ ನುಡಿಯಾಗಿದೆ. ಕನ್ನಡ ಮಾತು ಮತ್ತು ಬರೆಹಗಳ ನಂಟು ಈಗ ಮೊದಲಿನಂತಿಲ್ಲ. ಇವೆಲ್ಲವನ್ನೂ ತಿಳಿಸಿಕೊಡುವ ಸೊಲ್ಲರಿಮೆ ಎಲ್ಲ ಕಲಿಯುವವರಿಗೆ ಸಿಗುವಂತಾಗಬೇಕು. ಅದಕ್ಕೆ ತಕ್ಕ ಪಠ್ಯಕ್ರಮ ಮತ್ತು ಓದಲು ನೆರವಾಗುವ ಹೊತ್ತಗೆಗಳನ್ನು ರಚಿಸಬೇಕು.

ಇದೇ ಮಾದರಿಯನ್ನು ಬೇರೆ ಬೇರೆ ಹುದ್ದೆಗಳಿಗಾಗಿ ನಡೆಸುವ ಪರೀಕ್ಷೆಗಳ ಪಠ್ಯಕ್ರಮದಲ್ಲೂ ಅಳವಡಿಸಬೇಕು. ಈಗ ಕರ್ನಾಟಕ ಲೋಕ ಸೇವಾ ಆಯೋಗ.

ಕೇಂದ್ರ ಲೋಕ ಸೇವಾ ಆಯೋಗಗಳು ನಡೆಸುತ್ತಿರುವ ಪರೀಕ್ಷೆಗಳಲ್ಲಿ ಕನ್ನಡ ನುಡಿಯ ತಿಳಿವನ್ನು ಕಂಡುಕೊಳ್ಳಲು ನೀಡುವ ಕೇಳ್ವಿಗಳನ್ನು ಓದಿಗಾಗಿ ನಗಬೇಕೋ ಅಳಬೇಕೋ ಎಂಬುದೇ ಗೊತ್ತಾಗುತ್ತಿಲ್ಲ. ಹೊಸ ಬಗೆಯಲ್ಲಿ ನಡೆಯಲು ಮುಂದಾಗುವ ಅಧ್ಯಾಪಕರೂ ಕೂಡ ಇಂತಹ ಪರೀಕ್ಷೆಗಳಲ್ಲಿ ತಮ್ಮ ವಿದ್ಯಾರ್ಥಿಗಳಿಗೆ ಎಲ್ಲಿ ತೊಂದರೆಯಾದೀತೋ ಎಂದು ಹಿಂಜರಿಯ ಹಳೆಯ ಹಾದಿಯನ್ನೇ ಸವೆಸುತ್ತಿದ್ದಾರೆ. ಇದು ಬದಲಾಗಬೇಕು.

ಮೂವತ್ತು ನಲವತ್ತು ವರುಶಗಳ ಹಿಂದೆ ಭಾಷಾ ಶಾಸ್ತ್ರದ ತಿಳುವಳಿಕೆಯನ್ನು ನೀಡಲು ಮತ್ತು ಆ ಶಾಸ್ತ್ರದಲ್ಲಿ ಹೊಸ ವಿಚಾರಗಳನ್ನು ಮಂಡಿಸುವವರೊಡನೆ ಮಾತುಕತೆಯಾಡಲು ನೆರವಾಗುವ ಬೇಸಿಗೆ ಶಿಬಿರಗಳು ನಡೆಯುತ್ತಿದ್ದವು. ನಲವತ್ತು ದಿನಗಳ ಈ ಶಿಬಿರಗಳು ಹೊಸ ಅರಿವಿನ ಲೋಕದ ಬಾಗಿಲುಗಳನ್ನು ತೆರೆಯುತ್ತಿದ್ದವು. ಆದರೆ ಈಗ ಅಂತಹ ಬೇಸಿಗೆ ಶಿಬಿರಗಳು ನಡೆಯುತ್ತಿಲ್ಲ. ಇನ್ನಾದರೂ ಯಾವುದಾದರೂ ಒಂದು ಸಂಸ್ಥೆ ಈ ಹೊಣೆಯನ್ನು ತೆಗೆದುಕೊಳ್ಳಬೇಕು. ಹೊಸ ತಲೆಮಾರಿನವರಿಗೆ ಭಾಷಾ ಶಾಸ್ತ್ರದ ತಿಳಿವನ್ನು ಆ ತಿಳಿವಿನ ಬೆಳಕಲ್ಲಿ ಕನ್ನಡವನ್ನು ವಿವರಿಸುವುದನ್ನು ಕಲಿಸಬೇಕು. ಇದು ಕನ್ನಡದ ಮೂಲಕ ದೊರೆಯಬೇಕು ಎನ್ನುವುದನ್ನು ಮರೆಯಬಾರದು. ಈ ಬೇಸಿಗೆ ಶಿಬಿರಗಳು ಮುಂದಿನ ಹತ್ತು ವರುಶಗಳಾದರೂ ಬಿಡದೆ ನಡೆದರೆ ಆಗ ಬದಲಾವಣೆಗಳು ಕಾಣತೊಡಗುತ್ತವೆ.

ಭಾಷಾ ಶಾಸ್ತ್ರವನ್ನು ಒಂದು ಆಯ್ದ ವಿಷಯವನ್ನಾಗಿ ಪದವಿ ತರಗತಿಗಳಲ್ಲಿ ಕಲಿಸುವುದೇನೋ ಸರಿ. ಆದರೆ ಅದನ್ನು ಕನ್ನಡದ ನೆಲೆಯಲ್ಲಿ ಮತ್ತು ಕನ್ನಡದ ಮೂಲ ಕಲಿಸುವ ಕೆಲಸ ಮೊದಲಾಗಬೇಕು. ಇಂಗ್ಲಿಶಿನ ಮೂಲಕ ಕಲಿತು ಹೊರ ನಾಡಿನಲ್ಲಿ ಭಾಷಾ ಶಾಸ್ತ್ರದ ಬೆಳವಣಿಗೆಗೆ ಮುಂದಾಗುವವರಿಗೆ ಇದರಿಂದ ಹಿನ್ನಡೆಯಾಗುವುದಿಲ್ಲವೇ ಎಂಬ ಹಳೆಯ ಸವೆದ ಕೇಳ್ವಿಯನ್ನು ಬದಿಗಿಡೋಣ. ಅಂತಹವರಿಗೆ ದಾರಿಗಳು ಹಲವಾರಿವೆ ಅವುಗಳನ್ನು ಅವರು ಹುಡುಕಿಕೊಳ್ಳಬಲ್ಲರು. ನಮಗೀಗ ತುರ್ತಾಗಿ ಕನ್ನಡದ ತಿಳಿವಳಿಕೆಯನ್ನು ಪಡೆದುಕೊಂಡು ಅದನ್ನು ತಮ್ಮ ಓದಿಗೆ ತಳಹದಿಯನ್ನಾಗಿ ಮಾಡಿಕೊಳ್ಳಬಲ್ಲವರು ಬೇಕಾಗಿದ್ದಾರೆ. ಹಾಗಾಗಿ ನಾವೀಗ ಇಂಗ್ಲಿಶ್ ಬೆನ್ನು ಹತ್ತಿರುವ ನಮ್ಮ ಹಾದಿಯನ್ನು ಬದಲಿಸಿಕೊಳ್ಳಬೇಕಿದೆ.

ಸಾಹಿತ್ಯ ಮತ್ತು ಬೇರೆ ಬೇರೆ ಓದುಗಳಲ್ಲಿ ತೊಡಗಿರುವ ಹೆಚ್ಚಿನ ಓದಿನ ವಿದ್ಯಾರ್ಥಿಗಳ ಭಾಷಾಶಾಸ್ತ್ರದ ತಿಳುವಳಿಕೆ ನೀಡುವ ನಿಟ್ಟಿನಲ್ಲಿ ಹೆಜ್ಜೆಗಳನ್ನು ಇರಿಸಬೇಕು. ಸಮಾಜ ಶಾಸ್ತ್ರ, ಚರಿತ್ರೆ, ಮನೋವಿಜ್ಞಾನ, ತತ್ವಶಾಸ್ತ್ರ, ಮಾನವಶಾಸ್ತ್ರಗಳ ಮಟ್ಟಿಗಾದರೂ ಕೆಲಸ ಈಗ ಮೊದಲಾಗಬೇಕು. ಭಾಷಾಶಾಸ್ತ್ರ ಈ ಎಲ್ಲ ವಲಯಗಳಲ್ಲಿ ತನ್ನ ತಿಳುವಳಿಕೆ ಜಾಲವನ್ನು ಹರಡಿದೆ. ಆದರೆ ಅಲ್ಲಿ ಓದನ್ನು ಮುಂದುವರೆಸುವ ಹೊಣೆ ಭಾಷಾ ಶಾಸ್ತ್ರದ ಅರಿಗರ ಕೆಲಸ ಆಗಿದೆಯೇ ಹೊರತು ಉಳಿದ ಆಯಾ ವಲಯದ ಬಲ್ಲವರ ಭಾಷಾಶಾಸ್ತ್ರದ ತಿಳುವಳಿಕೆಯನ್ನು ಲೆಕ್ಕಿಸುತ್ತಿಲ್ಲ. ಸಾಮಾಜಿಕ ಭಾಷಾ ಶಾಸ್ತ್ರ ಎನ್ನುವುದು ಭಾಷಾಶಾಸ್ತ್ರದ ಆಸಕ್ತಿಯಾಗಿದೆಯೇ ಹೊರತು ಸಮಾಜ ಶಾಸ್ತ್ರದವರಲ್ಲಿ ಆ ಕುರಿತು ಯಾವ ಆಸಕ್ತಿಯೂ ಇಲ್ಲ. ಇದು ಬದಲಾಗಬೇಕು.

ಇವೆಲ್ಲವೂ ಶಿಕ್ಷಣದ ನೆಲೆಯಲ್ಲಿ ಕೈಗೊಳ್ಳ ಬೇಕಾಗಿರುವ ಯೋಜನೆಗಳು. ಇದಲ್ಲದೆ ಕನ್ನಡದ ಓದು ಯಾವ ದಿಕ್ಕಿನಲ್ಲಿ ಹರಿಯಬೇಕು ಮತ್ತು ಅದಕ್ಕಾಗಿ ಕೈಗೊಳ್ಳ ಬೇಕಾದ

ಕೆಲಸಗಳೇನು ಎಂದು ಯೋಚಿಸುವ ಮತ್ತು ಜಾರಿಗೊಳಿಸುವ ಹೆಚ್ಚಿನ ಓದಿನ ಸಂಸ್ಥೆಯೊಂದನ್ನು ಕಟ್ಟಬೇಕಿದೆ. ಇದು ಹೊಸ ಸಂಸ್ಥೆಯೇ ಆಗಬೇಕೆಂದಿಲ್ಲ. ಆಗಿರುವ ಸಂಸ್ಥೆಗಳ ಹೊಣೆಯಾಗಿ ಇದನ್ನು ಅಳವಡಿಸಬಹುದು. ಅದಕ್ಕೆ ಬೇಕಾದ ನೆರವನ್ನು ಎಲ್ಲ ನಿಟ್ಟಿನಲ್ಲೂ ಪೂರೈಸುವ ಕೆಲಸ ಮೊದಲಾಗಬೇಕು.

ಕನ್ನಡ ಮೂಲ ದ್ರಾವಿಡ ನುಡಿಯಿಂದ ಏಕೆ ಮತ್ತು ಯಾವಾಗ ಬೇರೆಯಾಯಿತು, ಅದು ಒಂದೇ ಕಡೆ ಒಮ್ಮೆಗೇ ಬೇರೆಯಾಯಿತೇ ಇಲ್ಲವೇ ಬೇರೆ ಬೇರೆ ಕಡೆಗಳಲ್ಲಿ ಬೇರೆ ಬೇರೆ ಸಮಯದಲ್ಲಿ ಬೇರೆ ಬೇರೆಯಾಯಿತೇ ಎಂಬ ಕೇಳ್ವಿಗಳನ್ನು ಮುಂದಿರಿಸಿಕೊಂಡು ಓದನ್ನು ಬೆಳೆಸುವ ಕೆಲಸ ಈಗ ಮೊದಲಾಗಬೇಕು. ಆಗ ನಾವು ಒಪ್ಪಿಕೊಂಡು ಬಂದಿರುವ ಹಲವಾರು ನಿಲುವುಗಳನ್ನು ಬದಲಿಸಬೇಕಾಗಿ ಬರಬಹುದು. ಅಂದರೆ ಕನ್ನಡ ನುಡಿಯ ಚರಿತ್ರೆಯನ್ನು ಕಟ್ಟುವ ಕೆಲಸವನ್ನು ದೊಡ್ಡ ತಳಹದಿಯ ಮೇಲೆ ಮೊದಲು ಮಾಡಬೇಕಿದೆ.

ಕನ್ನಡ ದಿನವೂ ಬದಲಾಗುತ್ತಿರುವ ನುಡಿಯಾದ್ದರಿಂದ ಅದರ ಓದಿಗೆ ನಾವು ಕಟ್ಟಿಕೊಂಡಿರುವ ಪರಿಕರಗಳನ್ನು ಒಂದೇ ಸಮನೆ ಬದಲಿಸುತ್ತಲೇ ಇರಬೇಕಾಗುತ್ತದೆ. ಕನ್ನಡ ಪದನೆರಿಕೆಗೆ ಈಗ ನಾವು ಬರಹದ ಆಕರಗಳನ್ನು ಬಳಸುತ್ತಿದ್ದೇವೆ. ಮಾತಿನಲ್ಲಿ ದೊರಕುವ ಸಾವಿರಾರು ಪದಗಳನ್ನು ಅವುಗಳ ರೂಪಗಳನ್ನು ತಿರುಳುಗಳನ್ನು ನಾವು ನೋಡುತ್ತಲೇ ಇಲ್ಲ. ಇದು ಬೆಳೆಯುತ್ತಿರುವ ನುಡಿಯನ್ನು ಅರಿಯಲು ತಕ್ಕ ಹಾದಿಯಾಗದು. ಅದ್ದರಿಂದ ಅದಕ್ಕೆ ತಕ್ಕ ಪದನೆರಿಕೆಯೊಂದನ್ನು ಕಟ್ಟಬೇಕು ಮತ್ತು ಅದನ್ನು ಒಂದೇ ಸಮನೆ ಬೆಳೆಸುತ್ತಲೇ ಇರಬೇಕು. ಈ ನಿಟ್ಟಿನಲ್ಲಿ ತಕ್ಕ ಯೋಜನೆಗಳು ಜಾರಿಯಾಗಬೇಕು.

ಹೊಸ ತಂತ್ರಜ್ಞಾನದ ನೆರವನ್ನು ಪಡೆದು ಅದಕ್ಕೆ ತಕ್ಕಂತೆ ನುಡಿಯನ್ನು ಹೊಂದಿಸಬೇಕಾಗಿದೆ. ಈ ದಿಕ್ಕಿನಲ್ಲಿ ಕನ್ನಡ ನುಡಿಯ ಹೆಜ್ಜೆಗಳು ದಿಕ್ಕಾಪಾಲಾಗಿವೆ. ಒಂದು ಕಡೆ, ಎಲ್ಲರಿಗೂ ನೆರವಾಗುವ ಮಾದರಿಗಳನ್ನು ಕಟ್ಟುವುದು ಆಗಿಲ್ಲ. ಹೊಸ ಕಾಲದ ಬೇಕುಗಳೇನು, ಅದಕ್ಕೆ ಕನ್ನಡ ನುಡಿಯನ್ನು ಅಳವಡಿಸಲು ಯಾವೆಲ್ಲ ಹೆಜ್ಜೆಗಳನ್ನು ಇಡಬೇಕು ಮತ್ತು ಅದಕ್ಕೆ ತಂತ್ರಜ್ಞಾನದ ನೆರವನ್ನು ಪಡೆದುಕೊಳ್ಳಬೇಕು ಎಂಬ ಬಗೆಗೆ ತಕ್ಕ ಕೆಲಸಗಳನ್ನು ಹಮ್ಮಿಕೊಳ್ಳಬೇಕಾಗಿದೆ.

ಇವೆಲ್ಲವೂ ಕೆಲವು ಸೂಚನೆಗಳು ಮಾತ್ರ. ಬೇಡದ ಹಿಂಜರಿಕೆಯಿಂದ ಕನ್ನಡ ಈಗಾಗಲೇ ಹೊಸ ಹಾದಿಯ ನಡಿಗೆಯಲ್ಲಿ ಹಿಂದುಳಿದಿದೆ. ಅದಕ್ಕೆ ಎಲ್ಲವನ್ನೂ ತುಂಬಿಕೊಂಡು ಎಲ್ಲಾ ನುಡಿಗಳೊಡನೆ ಸರಿಸಮನಾಗಿ ಹೆಜ್ಜೆ ಹಾಕಲು ಬೇಕಾಗಿರುವ ಕೆಲಸಗಳು ಇನ್ನೂ ಆಗಬೇಕಾಗಿದೆ. ಅವೆಲ್ಲವನ್ನೂ ಇಲ್ಲಿ ಪಟ್ಟಿ ಮಾಡಲು ಆಗುವುದಿಲ್ಲ. ಆದರೆ ಈವರೆಗೆ ಆಗಿರುವ ಅಡ್ಡಿಗಳನ್ನು ಅರಿತು ಒಪ್ಪಿಕೊಂಡು ಅಲ್ಲಿಂದ ಹೊರಬಂದು ದಿಟ್ಟ ಹೆಜ್ಜೆಗಳನ್ನು ಇರುವ ಮನಸ್ಸು ಈಗ ಬೇಕಾಗಿದೆ.

ಬರವಣಿಗೆಯಲ್ಲಿ ತಪ್ಪುಗಳು

ಇಂದು ಕಲಿತ ಹಲವರಿಗೆ ಕನ್ನಡವನ್ನು ಸರಿಯಾಗಿತಪ್ಪಿಲ್ಲದಂತೆ ಬರೆಯಲು ಮತ್ತುಓದಲು ಬರುವುದಿಲ್ಲ ಎನ್ನುವ ಮಾತನ್ನು ಮೇಲಿಂದ ಮೇಲೆ ಕೇಳುತ್ತಿರುತ್ತೇವೆ. ಹೀಗಾಗಲು ಹಲವು ಕಾರಣಗಳನ್ನು ಪಟ್ಟಿ ಮಾಡುವುದೂ ಉಂಟು. ಕಲಿಸುವಾಗ ಸರಿಯಾಗಿ ಕಲಿಸದಿರುವುದು, ಕಲಿಕೆಯಲ್ಲಿ ನುಡಿಯ ಬರವಣಿಗೆ ಮತ್ತುಓದುವಿಕೆಗೆ ತಕ್ಕ ಜಾಗ ದೊರಕದಿರುವುದು, ಕಲಿಸುವವರು ಮತ್ತು ಕಲಿಯುತ್ತಿರುವವರು ಹಿಂದುಳಿದ ಇಲ್ಲವೇ ಕೆಳ ಜಾತಿಗಳಿಗೆ ಸೇರಿರುವುದು, ಕಲಿಯುತ್ತಿರುವವರು ಕನ್ನಡವಲ್ಲದೆ ಬೇರೊಂದು ನುಡಿಯುನ್ನು ಮನೆಮಾತನ್ನಾಗಿ ಪಡೆದಿರುವುದು, ಇಂಗ್ಲಿಶ್ ಕಲಿಕೆಗೆ ಒತ್ತು ನೀಡುತ್ತಿರುವುದರಿಂದ ಕನ್ನಡಕಲಿಕೆಯನ್ನು ಕಡೆಗಣಿಸುತ್ತಿರುವುದು, ಕಲಿಯುತ್ತಿರುವವರ ಮನೆಯಲ್ಲಿ ಹಿರಿಯರು ಕಲಿತವರಾಗಿಲ್ಲದಿರುವುದು. ಮಕ್ಕಳ ಬುದ್ಧಿಯ ಕಸುವಿನಲ್ಲಿ ಹೆಚ್ಚು ಕಡಿಮೆಇರುವುದು ಹೀಗೆ ಹಲವು ಹತ್ತು ಕಾರಣಗಳನ್ನು ಬೆರಳಿಟ್ಟು ತೋರಿಸಲಾಗುತ್ತಿದೆ.

ಸರಿಯೇ ಸರಿ. ಆದರೆ ಈವರೆಗೆ ಬರೆಯುವಾಗ ಯಾವ ಬಗೆಯ ತಪ್ಪುಗಳನ್ನು ಹೆಚ್ಚು ಜನರು ಮತ್ತೆ ಮತ್ತೆ ಮಾಡುತ್ತಿದ್ದಾರೆ ಎಂಬುದನ್ನು ಅರಿಯಲು ನಾವು ಮುಂದಾಗಿಲ್ಲ. **ಕೆಲವರು ಬರೆಯುವಾಗ ಆಗಾಗ ಮಾಡುವ ತಪ್ಪುಗಳನ್ನು** ಮತ್ತುಹಲವರು **ಮತ್ತೆ ಮತ್ತೆ ಮಾಡುವ ತಪ್ಪುಗಳನ್ನು**ಗೆರೆ ಎಳೆದು ಬೇರೆ ಬೇರೆ ಮಾಡಿಕೊಳ್ಳುವುದು ಒಳ್ಳೆಯದು. ಮೊದಲ ಬಗೆಯ ತಪ್ಪುಗಳನ್ನು ತಿದ್ದಲು ಇರುವ ದಾರಿಗಳು ಬೇರೆ.ಆ ತಪ್ಪುಗಳು ಉಂಟಾಗುತ್ತಿರುವುದಕ್ಕೂ ಕಾರಣಗಳು ಬೇರೆ.ನಾವಿಲ್ಲಿ ಎರಡನೆಯ ಬಗೆಯ ತಪ್ಪುಗಳನ್ನು, ಅವು ಉಂಟಾಗುವುದಕ್ಕೆ ಇರುವ ಕಾರಣಗಳನ್ನು ಮತ್ತು ಅವುಗಳನ್ನು ಬಗೆಹರಿಸಲು ಇರುವ ದಾರಿಗಳನ್ನು ಹುಡುಕಬೇಕಿದೆ.

ಮೊದಲಿಗೆ ಎರಡು ಮಾತುಗಳನ್ನು ನೆನಪಿನಲ್ಲಿ ಇರಿಸಿಕೊಳ್ಳೋಣ. ಇಂದಿನ ಕಲಿಕೆಯ ನೆಲೆಯಲ್ಲಿ ಚೆನ್ನಾಗಿ ಬರೆಯುವುದು. ಸರಿಯಾಗಿ ಬರೆಯುವುದು ಜಾಣತನದ ಕುರುಹೆಂದು ತಿಳಿಯಲಾಗುತ್ತಿದೆ. ಸರಿಯಾಗಿ ಬರೆಯಲಾರದವರು ದಡ್ಡರೆನಿಸಿ ಕೊಳ್ಳುತ್ತಿದ್ದಾರೆ. ಅವರಿಗೆ ಎಲ್ಲವೂ ತಿಳಿದಿದ್ದರೂ ಅದನ್ನು ಬರಹದಲ್ಲಿ ತೋರಿಸಲಾಗದಿದ್ದರೆ ಮತ್ತು ಬರೆದದ್ದು ಬರೆದದ್ದನ್ನು ಓದಲಾಗದಿದ್ದರೆ ಅವರು ಜಾಣರೆನಿಸಿಕೊಳ್ಳಲಾರರು. ಇದು ತಪ್ಪು ತಿಳುವಳಿಕೆ ಕಲಿಯುವವರಿಗೆ ಏನು ತಿಳಿದಿದೆ ಎನ್ನುವುದನ್ನು ಗೊತ್ತು ಮಾಡಲು ಬರಹ ಒಂದೇ ದಾರಿಯಲ್ಲ ಎನ್ನುವುದನ್ನು ಮೊದಲು ತಿಳಿದುಕೊಳ್ಳಬೇಕು. ನಮ್ಮ ಕಲಿಕೆಯ ಬಗೆಯಲ್ಲಿ ಈ ತಿಳುವಳಿಕೆ ಇನ್ನೂ ಮೈದೋರಿಲ್ಲ. ಬರಹವನ್ನೇ ಕಲಿಯದಿದ್ದರೂ ಜಾಣರಾಗಿರುವವರನ್ನು ನಾವು ನಮ್ಮ ಸುತ್ತಮುತ್ತಲೇ ನೋಡುತ್ತಿದ್ದೇವೆ.

ಅಲ್ಲದೆ ಎಷ್ಟೋ ನುಡಿಗಳನ್ನಾಡುವ ಜನರು ಬರೆಯಲಾರರು. ಏಕೆಂದರೆ ಅವರ ನುಡಿಗೆ ಬರಹದ ನೆರವೇ ಇಲ್ಲ. ಅದು ಕೇವಲ ಆಡುನುಡಿಯೇ ಆಗಿರುತ್ತವೆ. ಅಂದ ಮಾತ್ರಕ್ಕೆ ಆ ನುಡಿಯನ್ನಾಡುವವರೆಲ್ಲ ದಡ್ಡರೆಂದು ತಿಳಿಯಲಾದೀತೆ?

ಎರಡನೆಯ ಮಾತು. ಬರಹ ಎಂಬುದು ಕಲಿತಿರುವ ಎಲ್ಲರಿಗೂ ಗೊತ್ತಿರಲೇ ಬೇಕಾದ ಚಳಕವೆಂಬ ತಿಳುವಳಿಕೆ ಕೂಡ ಈಚಿನದು. ಮಾತಾಡುವುದು, ಕೇಳಿದ್ದನ್ನು ಅರಿತುಕೊಳ್ಳುವುದು ಎಲ್ಲರಿಗೂ ಗೊತ್ತಿರಬೇಕಾದ ಚಳಕಗಳು. ಹೆಚ್ಚೆಂದರೆ ಬರೆದ್ದನ್ನು ಓದಿ ಅರಿಯುವ ಚಳಕವನ್ನು ಹೆಚ್ಚು ಜನ ಕಲಿತಾರು. ಆದರೆ ನುಡಿಯನ್ನು ಕಲಿತವರಿಗೆಲ್ಲ ಬರಹವೆಂಬ ಚಳಕ ಕೈಗೂಡಲೇಬೇಕೆಂದು ಒತ್ತಾಯ ಮಾಡಲಾಗದು. ಯಾವ ನುಡಿ ಸಮುದಾಯಗಳಲ್ಲೂ ಇದು ಎಂದೂ ನನಸಾಗದ ಕನಸು. ಅಲ್ಲದೆ ಹೊಸ ಬಗೆಯ ಬರಹದ ದಾರಿಗಳು ಈಗ ಕೈಸೇರುತ್ತಿವೆ. ಹಲಗೆ ಬಳಪದ ಹಂತದಿಂದ ಈಗ ನಾವು ಮಾತನಾಡಿದ್ದನ್ನು ಬರಹವನ್ನು ಬದಲಿಸಬಲ್ಲ ಯಂತ್ರಗಳು ದಿಟವಾಗುತ್ತಿವೆ. ಅಂದರೆ ದಿನಕಳೆದಂತೆ ಬರಹವೆಂಬುದು, ಬೆರಳುಗಳನ್ನು ಬಳಸಿ ಲಿಪಿಗಳನ್ನು ತಿದ್ದುವ ಚಳಕ ಕಣ್ಮರೆಯಾದರೆ ಅಚ್ಚರಿ ಪಡಬೇಕಿಲ್ಲ. (ಹೊಸ ಪರಿಕರಗಳು ದೊರೆತಾಗ ಆವರೆಗೆ ಇರುತ್ತಿದ್ದ ಚಳಕಗಳು ಮರೆಯಾಗುತ್ತವೆ. ಮೊದಲು ಬಾಯಿಲೆಕ್ಕ ಮಾಡುವುದು ವಾಡಿಕೆಯಾಗಿತ್ತು. ಇಂದು ಅಂಗಡಿಗೆ ಹೋದರೆ ಚಿಕ್ಕ ಚಿಕ್ಕ ಕೂಡುವ ಲೆಕ್ಕಕ್ಕೂ ಕ್ಯಾಲುಕ್ಯುಲೇಟರ್‌ಗಳನ್ನು ಬಳಸುವುದನ್ನು ಕಾಣುತ್ತೇವೆ. ಮಗ್ಗಿ ಕಲಿಯದಿರುವುದು ಇಂದು ಕೊರತೆಯಾಗಿ ಕಾಣುತ್ತಿಲ್ಲ. ಈ ಎತ್ತುಗೆಯ ನೆಲೆಯಲ್ಲಿ ಬರಹದ ಮಾತನ್ನೂ ನೋಡಿದರೆ ಬರಲಿರುವ ದಿನಗಳಲ್ಲಿ ಬರೆಯದಿರುವುದು ಕೊರತೆಯೆಂದು ಅನಿಸದೆಯೂ ಹೋಗಬಹುದಲ್ಲವೇ?)

ಈ ಮಾತುಗಳನ್ನು ನೆನಪಿನಲ್ಲಿಟ್ಟುಕೊಂಡು ಬರೆಯುವವರಲ್ಲಿ ಹಲವರು ಮತ್ತೆ ಮತ್ತೆ ಮಾಡುವ ತಪ್ಪುಗಳನ್ನು ಮಾತಿಗೆ ಬರೋಣ. ಬರಹದ ಅಂದಚಂದಗಳನ್ನು ಬದಿಗಿಡಿ. ಅದು ಒಬ್ಬೊಬ್ಬರಿಗೂ ಬೇರೆಬೇರೆ. ಮುದ್ದಾಗಿ ಬರೆದರೆ ಅದು ಸರಿಯಾದ ಬರಹವೇ ಆಗಿರಬೇಕಿಲ್ಲ. ಅಲ್ಲದೆ ತಪ್ಪಿಲ್ಲದೆ ಬರೆದರೂ ಅದು ಸರಿಯಾದ ಬರಹವಾಗದೆಯೂ ಹೋಗಬಹುದು. ಏಕೆಂದರೆ ಬೇಕಾದ್ದನ್ನು ಹೇಳದೆ ಬೇಡದ್ದನ್ನೇ ಹೇಳುತ್ತಿರುವ ಆದರೆ ಯಾವ ತಪ್ಪುಗಳೂ ಇಲ್ಲದ ಬರಹಗಳು ಕೂಡ ಇರುತ್ತವೆ ತಾನೆ? ಅಂದರೆ ಯಾವುದು ಸರಿಯಾದ ಬರಹ? ಅದರಲ್ಲಿ ನುಡಿಯ ಕಟ್ಟುಗಳನ್ನು ಪಾಲಿಸಿರಬೇಕು ಮತ್ತು ಅದರಲ್ಲಿ ಹೇಳಬೇಕಾದ್ದನ್ನೆಲ್ಲ ಮತ್ತು ಹೇಳಬೇಕಾದ್ದನ್ನಷ್ಟೆ ಹೇಳುವ ಚಳಕವಿರಬೇಕು. ಆದರೆ ಸರಿಯಾಗಿ ಬರೆಯುವ ಚಳಕ ಇಂದಿನ ಮಕ್ಕಳಲ್ಲಿ ಮರೆಯಾಗುತ್ತಿದೆ ಎಂದು ಗೊಣಗುವವರು ಹೆಚ್ಚಾಗಿ ನುಡಿಯ ಕಟ್ಟುಗಳನ್ನು ಬರಹದಲ್ಲಿ ಅಳವಡಿಸಿಕೊಳ್ಳದಿರುವುದನ್ನೆ ಗುರುತಿಟ್ಟು ಮಾತನಾಡುತ್ತಿರುತ್ತಾರೆ.

ಇದರಲ್ಲೂ ಎರಡು ಬಗೆಯ ತಪ್ಪುಗಳಿರುತ್ತವೆಂದು ಗುರುತಿಸಲಾಗುತ್ತದೆ.

1. ಇದನ್ನು ಕಾಗುಣಿತ ತಪ್ಪುಗಳು ಎನ್ನೋಣ. ಅಂದರೆ ಬರೆಯಬೇಕಾದ ಪದದ ಉಲಿಗಳ ಗುರುತುಗಳನ್ನು ಸರಿಯಾಗಿ ಬರೆಯದಿರುವುದು. ಇದರಲ್ಲಿ ತೆರೆದ ಉಲಿಗಳ ನೆಲೆಯ ತಪ್ಪುಗಳಿರುತ್ತವೆ. ಅಂದರೆ ಉದ್ದ ತೆರೆದ ಉಲಿಗಳನ್ನು ಬರೆಯಬೇಕಾದ ಕಡೆ ಗಿಡ್ಡ ತೆರೆದ ಉಲಿಯ ಗುರುತನ್ನು ಬರೆಯುವುದು

ಬೇಕು, ನೂರು, ತೋರು ಮುಂತಾದವನ್ನು ಬರೆಯುವಾಗ **ಬೆಕು, ನುರು, ತೊರು** ಎಂದು ಬರೆಯುವುದು. ಇದಲ್ಲದೆ ತಡೆಯುಲಿಗಳನ್ನು ಬರೆಯುವಾಗಲೂ ಸರಿಯಲ್ಲದ ಕಾಗುಣಿತವನ್ನು ಬರಹದಲ್ಲಿ ಇರಿಸುವುದನ್ನು ತಪ್ಪುಗಳೆಂದು ಗುರುತಿಸಲಾಗುತ್ತದೆ.

2. ಇನ್ನೊಂದು ಬಗೆಯ ತಪ್ಪುಗಳನ್ನು ಮಾಡುವವರು ಸೊಲ್ಲರಿಮೆಯ ಕಟ್ಟುಗಳನ್ನು ಫಾಲಿಸುತ್ತಿರುವುದಿಲ್ಲ. ಎತ್ತುಗೆಗಾಗಿ ಹೇಳುವುದಾದರೆ ಕನ್ನಡದಲ್ಲಿ ಸೊಲಿನ(=ವಾಕ್ಯದ) ಕೊನೆಯಲ್ಲಿ ಬರುವ ಕೆಲಸ ಪದದಲ್ಲಿ ಕೆಲಸವನ್ನು ಮಾಡಿದವರು ಗಂಡಸರೇ ಇಲ್ಲವೇ ಹೆಂಗಸರೇ, ಕೆಲಸ ಮಾಡಿದ್ದು ಯಾವಾಗ ಮತ್ತು ಎಷ್ಟು ಜನ ಕೆಲಸ ಮಾಡಿದರು ಎಂಬುದನ್ನೆಲ್ಲ ಹೇಳುವ ಉಲಿಗುಂಪುಗಳಿರುತ್ತವೆ. **ಬರುತ್ತಾನೆ** ಎಂಬ ಕೆಲಸ ಪಚ ಸೊಲ್ಲಿನ ಕೊನೆಗೆ ಬಂದರೆ ಬರುವವನು ಗಂಡಸು ಮತ್ತು ಒಬ್ಬ ಗಂಡಸು ಎಂಬುದು ಮತ್ತು ಆತ ಇನ್ನೂ ಬರುವ ಕೆಲಸವನ್ನು ಮಾಡಿಲ್ಲ ಎಂಬುದು ಗೊತ್ತಾಗುತ್ತದೆ. **ಬರುತ್ತಾನೆ**ಎನ್ನುವ ಬದಲು **ಬಂದಳು** ಎಂದರೆ ಆಗ ನಮ್ಮ ತಿಳುವಳಿಕೆ ಬದಲಾಗುತ್ತದೆ. ಬರುವ ಕೆಲಸ ಈಗಾಗಲೇ ಮುಗಿದಿದೆ; ಬಂದದ್ದು ಹೆಂಗಸು ಮತ್ತುಒಬ್ಬ ಹೆಂಗಸು ಮಾತ್ರ ಬಂದಿರುವುದು ಎನ್ನುವುದು ತಿಳಿಯುತ್ತದೆ. ಸೊಲ್ಲಿನ ಉಳಿದ ವಿವರಗಳು ಇದಕ್ಕೆ ಹೊಂದಿಕೆಯಾಗುವಂತಿರಬೇಕು. ಇಲ್ಲದಿದ್ದರೆ ಅದು ಸೊಲ್ಲರಿಮೆಯ ಕಟ್ಟುಗಳ ಪಾಲನೆ ಆಗುವುದಿಲ್ಲ. ಎತ್ತುಗೆಗಾಗಿ ಹುಡುಗರು **ನಿನ್ನೆ ಇಡೀ ಗಿಡಗಳಿಗೆ ನೀರು ಹಾಕುತ್ತಾರೆ** ಎಂದು ಬರೆದರೆ ಅದುತಪ್ಪು. ಏಕೆ ಎಂಬುದು ಮೇಲಿನ ಮಾತುಗಳನ್ನು ಓದಿದವರಿಗೆ ಗೊತ್ತಾಗುತ್ತದೆ.

3. ಇದಲ್ಲದೆ ಸರಿಯಾದ ಪದಗಳನ್ನು ಆಯ್ದು ಬಳಸದಿರುವ ತಪ್ಪುಗಳನ್ನೂ ಮಾಡುತ್ತಿರಬಹುದು. ಈ ಬಗೆಯ ತಪ್ಪುಗಳನ್ನು ಈಗ ಚರ್ಚೆಗೆ ತೆಗೆದುಕೊಳ್ಳುವುದು ಬೇಡ.

ಇಂದಿನ ಮಕ್ಕಳು ಸರಿಯಾದ ಕನ್ನಡವನ್ನು ಬರೆಯುತ್ತಿಲ್ಲ ಎಂದು ಹೇಳುವ ನಾವು ಯಾವ ಬಗೆಯ ತಪ್ಪುಗಳನ್ನು ಹಲವರು ಮತ್ತೆ ಮತ್ತೆ ಮಾಡುತ್ತಿದ್ದಾರೆ ಎನ್ನುವುದನ್ನು ಗುರುತು ಹಚ್ಚಿಲ್ಲ. ಆದರೂ ಸಾರಸಗಟಾಗಿ ಹೇಳುವವರು ಮಹಾಪ್ರಾಣ ಎಂದು ಕರೆಯುವ ಉಲಿಗಳನ್ನು ಸರಿಯಗಿ ಬರೆಯದಿರುವುದು; **ಸ, ಶ** ಮತ್ತು **ಷ** ಎಂಬ ಉಲಿಗುರುತುಗಳನ್ನು ಸರಿಯಾಗಿ ಬಳಸದಿರುವುದು ಹಾಗೂ ಪದದ ಮೊದಲಲ್ಲಿ **ಹಕಾರ** ಇರುವ ಪದಗಳನ್ನು ಬರೆಯುವಾಗ **ಹ** ಉಲಿಯ ಗುರುತನ್ನು ಬರೆಯದಿರುವುದು ಇವೇ ಮೊದಲಾದ ತಪ್ಪುಗಳನ್ನು ಹೇಳುತ್ತಾರೆ. ಎಚ್ಚರಿಕೆಯಿಂದ ನೋಡಿದರೆ ಸರಿಯಾದ ಕನ್ನಡವನ್ನು ಮಾತನಾಡುತ್ತಿಲ್ಲ; ತಪ್ಪಾಗಿ ನುಡಿಯುತ್ತಾರೆ ಎಂದು ಗೊಣಗುವಾಗಲೂ ಇವೇ ಮೂರು ಬಗೆಯ ತಪ್ಪುಗಳನ್ನು ಗುರುತಿಸುವುದುಂಟು. ಹೆಚ್ಚಾಗಿ ತಪ್ಪು ಕನ್ನಡವನ್ನು ಮಾತನಾಡುತ್ತಾರೆಂದು ಗುರುತಿಸುವಾಗ ಅದಕ್ಕೆ ಕಾರಣಗಳನ್ನೂ ಹೇಳುವ ತವಕವೂ ಹಲವರಲ್ಲಿದೆ. ಮಾತನಾಡುವವರ ಹುಟ್ಟಿನ ನೆಲೆ, ಕಲಿಕೆ ಇಲ್ಲದ ಕುಟುಂಬಗಳಿಂದ ಬಂದ ಹಿನ್ನೆಲೆ, ಬೇರೆ ಬೇರೆ ಒಳನುಡಿಗಳನ್ನಾಡುವ ನೆಲೆ, ಜೊತೆಗೆ ಕನ್ನಡವಲ್ಲದ ಬೇರೊಂದು ನುಡಿಯನ್ನು ಮನೆಯಲ್ಲಿ ಆಡುತ್ತಿರುವುದು ಇವೆಲ್ಲವನ್ನೂ ಬೆರಳಿಟ್ಟು ತೋರಿಸಲಾಗುತ್ತದೆ. ಆದರೆ ಬರಹದ ಮಾತಿಗೆ ಬಂದರೆ ಈ ಕಾರಣಗಳು ನಿಲ್ಲುವುದಿಲ್ಲ.

ಹಾಗಿದ್ದರೆ ಬರವಣಿಗೆಯಲ್ಲಿ ಕಾಣಿಸುವ ತಪ್ಪುಗಳ ಬೇರು ಎಲ್ಲಿವೆ? ಬರೆಯುವಾಗ ಪದದ ಒಂದೊಂದು ಉಲಿಯನ್ನು ಕೂಡ ಲಿಪಿಯ ಗುರುತುಗಳಿಂದ ಮೂಡಿಸ ಬೇಕಾಗಿರುತ್ತದೆ. ಆದರೆ ಆಪದ ನಮಗೆ ಗೊತ್ತಾದದ್ದು ಈ ಬಗೆಯಲ್ಲಿ ಅಲ್ಲ. ಆ ಪದವನ್ನು ನಾವು ಕಿವಿಯಿಂದ ಕೇಳಿದ್ದರೆ ಇಲ್ಲವೇ ಬೇರೆಲ್ಲೋ ಓದಿ ಕಣ್ಣಿನಿಂದ ಅರಿತಿದ್ದರೆ ಆ ಪದದಲ್ಲಿ ಇರುವ ಉಲಿಗಳೆಲ್ಲ ನಮ್ಮ ತಿಳುವಳಿಕೆಯಲ್ಲಿ ಸೇರಿರುವುದಿಲ್ಲ. ಈಗಲೂ ನಾವು ಓದುವ ಬಗೆಯನ್ನು ನೋಡಿ. ಪದವೊಂದನ್ನು ಕಣ್ಣು ಇಡಿಯಾಗಿ ನೋಡಿರುತ್ತದೆಯೇ ಹೊರತು ಅದರಲ್ಲಿರುವ ಉಲಿಗಳನ್ನು ಬಡಿಬಿಡಿಯಾಗಿ ಓದಿರುವುದೂ ಇಲ್ಲ, ಅರಿತಿರುವುದೂ ಇಲ್ಲ. ಪದ ಇಡಿಯಾದ ಚಿತ್ರವಾಗಿ ನಮ್ಮೆದುರು ಕಾಣಿಸಿಕೊಂಡಿರುತ್ತದೆ. ಕೆಲವೊಮ್ಮೆ ಅದನ್ನು ನಾವು ಕಿವಿಯಿಂದ ಕೇಳಿರುವುದಿಲ್ಲ. ಒಂದು ವೇಳೆ ಕೇಳಿಸಿಕೊಂಡಿದ್ದರೂ ಅದರಲ್ಲಿರುವ ಉಲಿಗಳು ಬಿಡಿಬಿಡಿಯಾಗಿ ನಮ್ಮಲ್ಲಿ ಅಚ್ಚೊತ್ತಿರುವುದಿಲ್ಲ. ಹಾಗಾಗಿ ಆ ಪದಗಳನ್ನು ಬರೆಯುವಾಗ ನಮ್ಮ ಕಣ್ಣು ಅರಿತ ಬಗೆ ಇಲ್ಲವೇ ನಮ್ಮ ಕಿವಿ ಕೇಳಿಸಿಕೊಂಡ ಬಗೆ ಮಾತ್ರ ನಮ್ಮ ಬರಹದಲ್ಲಿ ಮೈದಳೆಯುತ್ತದೆ. (ನಾವು ಕಂಡದ್ದನ್ನು ಚಿತ್ರದಲ್ಲಿ ಬರೆಯಲು ಹೊರಟರೆ ಇಲ್ಲವೇ ಕೇಳಿದ ಹಾಡನ್ನು ಗುನುಗಲು ಹೊರಟರೆ ಏನು ಆಗುವುದೆಂದು ನೆನಪಿಸಿಕೊಳ್ಳಿ)

ಇದಲ್ಲದೆ ನಾವು ಮಾತಾಡುವಾಗ ಪದಗಳನ್ನು ಹೇಗೆ ನುಡಿಯುತ್ತಿರುತ್ತೇವೋ ಹಾಗೆಯೇ ಬರೆಯಲು ಮುಂದಾಗುತ್ತೇವೆ. ಆದರೆ ಕನ್ನಡದಲ್ಲಿ ಆಡುಮಾತಿನ ರೂಪಗಳೂ ಅದರ ಬರಹ ರೂಪಗಳೂ ಯಾವಾಗಲೂ ಒಂದೇ ಆಗಿರುವುದಿಲ್ಲ. ಅದರಲ್ಲೂ ಇಡಿಯಾಗಿ ಒಂದು ಸೊಲ್ಲನ್ನು ಗಮನಿಸಿದರೆ ಅದರಲ್ಲಿರುವ ಪದಗಳನ್ನು ಮಾತಾಡುವಾಗ ಬಿಡಿಬಿಡಿಯಗಿ ನುಡಿಯುವುದಿಲ್ಲ. ಸೊಲ್ಲಿನ ಲಯದಲ್ಲಿ ನುಡಿಯುತ್ತೇವೆ. ಹಾಗಾಗಿ ಕೂಡ ಪದಗಳನ್ನು ಕಿವಿಯಿಂದ ಕೇಳಿದ್ದು, ಬಾಯಿಂದ ಆಡಿದ್ದು ಬರೆಯುವವರಲ್ಲಿ ಅಚ್ಚೊತ್ತಿರುತ್ತವೆ. ಹಾಗಾಗಿ ಬರೆಯುವವರು ಪದಗಳ ಬರಹ ರೂಪಗಳನ್ನೇ ಬರೆಯಲು ಸೋಲತ್ತಾರೆ.

ಕನ್ನಡ ಪದಗಳ ಬರಹರೂಪ(ಕಣ್ಣುರೂಪ) ಮತ್ತು ಅವುಗಳ ನುಡಿರೂಪ (ಕಿವಿ ರೂಪ)ಗಳಲ್ಲಿ ಹೊಂದಿಕೆ ಇಲ್ಲದಿರುವುದನ್ನು ನೋಡೋಣ. ಬೆಕ್ಕು ಎಂದು ನಾವು ಬರೆಯುವ ಪದವನ್ನು ನುಡಿಯುವಾಗ **ಬ್, ಎ, ಕ್, ಕ್ ಮತ್ತು** ಉ ಎಂಬ ಉಲಿಗಳನ್ನು ಅದೇ ಸರಣಿಯಲ್ಲಿ ಹೇಳುತ್ತೇವೆ. **ಕ್** ಉಲಿ ಎರಡು ಬಾರಿ ಬರುತ್ತದೆ. **ಉ** ಎಂಬ ಉಲಿಯನ್ನುಎರಡನೆಯ **ಕ್** ಉಲಿಯ ಬಳಿಕ ನುಡಿಯುತ್ತೇವೆ. ಆದರೆ ಬರೆಯುವಾಗ ಏನಾಗುತ್ತದೆ ನೋಡೋಣ. **ಬ್** ಮತ್ತು ಎ ಉಲಿಗಳನ್ನು **ಬೆ** ಎಂದು ಬರೆದದ್ದು ಸರಿ. ಆದರೆ ಬಳಿಕ ಬರೆಯುವ **ಕ್** ಉಲಿಯ ಗುರುತಿಗೆ ಉ ಉಲಿಯ ಗುರುತನ್ನು ಸೇರಿಸಿ **ಕು** ಎಂದು ಬರೆಯುತ್ತೇವೆ. ಎರಡನೆಯ **ಕ್** ಉಲಿಯ ಗುರುತನ್ನು **ಕು** ಎಂಬುದರ ಅಡಿಯಲ್ಲಿ ಬರೆಯುತ್ತೇವೆ. ಅಂದರೆ ನುಡಿಯುವಾಗ ಬರುವ ಉಲಿಗಳ ಸರಣಿಯು ಬರೆಯುವಾಗ ಬದಲಾಗುತ್ತದೆ. ಇನ್ನೊಂದು ಎತ್ತುಗೆಯನ್ನು ನೋಡಿ. **ಚಕ್ರ** ಎಂಬ ಪದವನ್ನು ನುಡಿಯುವಾಗ **ಚ್, ಅ, ಕ್, ರ್,ಅ** ಎಂಬ ಉಲಿಗಳು ಅದೇ ಸರಣಿಯಲ್ಲಿ ಬರುತ್ತವೆ. ಆದರೆ ಬರಹದಲ್ಲಿ ಮೊದಲೆರಡು ಉಲಿಗಳನ್ನು ಚ ಎಂದು ಬರೆದಾದ ಮೇಲೆ **ಕ್** ಮತ್ತು ಕೊನೆಯ ಉಲಿ ಅ ಎಂಬುದನ್ನು **ಕ** ಎಂದು ಬರೆದು ಆ

ಉಲಿಗಿಂತ ಮೊದಲೇ ನುಡಿಯುವ ರ್ ಉಲಿಯ ಗುರುತನ್ನು ಕ ಗುರುತಿನ ಕೆಳಗೆ ಬರೆಯುತ್ತೇವೆ.

ಹೀಗೆ ಬರೆಯುವುದು ಸರಿಯೋ ತಪ್ಪೋ ಎಂದು ಹೇಳಲು ಈ ಎತ್ತುಗೆಯನ್ನು ನೀಡಿಲ್ಲ. ನುಡಿಯುವುದಕ್ಕೂ ಬರೆಯುವದಕ್ಕೂ ಇರುವು ಬದಲಾವಣೆಗಳನ್ನು ಕಲಿಕೆಯಲ್ಲಿ ತೋರಿಸಿಕೊಡದಿದ್ದಲ್ಲಿ ಕಿವಿಯನ್ನು ಹೆಚ್ಚಾಗಿ ನಂಬುವ (ಏಕೆಂದರೆ ಶಾಲೆಯ ಹೊತ್ತಗೆಗಳಲ್ಲಿ ಬಿಟ್ಟರೆ ಬರಹವನ್ನೇ ಕಣ್ಣಲ್ಲಿ ನೋಡದವರು) ಮಕ್ಕಳು ತಪ್ಪಾಗಿ ಬರೆದರೆ ಅಚ್ಚರಿ ಪಡಬೇಕಿಲ್ಲ. ಅಂದರೆ ಬರವಣಿಗೆಯ ತಪ್ಪುಗಳು ಅವರಲ್ಲಿ ಇರುವ ತಿಳುವಳಿಕೆಯ ಕೊರತೆ ಮತ್ತು ಗೊಂದಲಗಳನ್ನು ತೋರಿಸುತ್ತವೆ.

ಇನ್ನು ಸೊಲ್ಲರಿಮೆಯ ಕಟ್ಟುಗಳನ್ನು ಪಾಲಿಸದಿರುವ ತಪ್ಪುಗಳನ್ನೂ ನೋಡೋಣ. ಒಬ್ಬರೊಡನೆ ಒಬ್ಬರು ಮಾತನಾಡುವುದನ್ನು ಬಿಟ್ಟರೆ ಹಲವರ ಎದುರು ಒಬ್ಬರೇ ಮಾತನಾಡಬೇಕಾಗುವುದು ಕಡಿಮೆ. ಈ ಮಾತು ಗಮನದಲ್ಲಿ ಇಡಬೇಕು. ಏಕೆಂದರೆ ಒಂದು ವಿಷಯವನ್ನು ಹಲವರಿಗೆ ಮಾತಿನಲ್ಲಿ ಹೇಳಲು ಹೊರಟಾಗ ನಮ್ಮ ಮಾತು ಹೇಗಿರುತ್ತದೆ ಎಂಬುದನ್ನು ಗಮನಿಸಿದರೆ ಹಲವು ಸಂಗತಿಗಳು ಗೊತ್ತಾಗುತ್ತವೆ. ಮಾತನಾಡುವಾಗಲೇ ಸೊಲ್ಲುಗಳನ್ನು ಕಟ್ಟುವ ನಾವು ಎಷ್ಟೋ ವೇಳೆ ಅರೆಬರೆ ಸೊಲ್ಲುಗಳನ್ನು ಹೇಳಿರುತ್ತೇವೆ. ಸೊಲ್ಲರಿಮೆಯ ಕಟ್ಟುಗಳನ್ನು ಪಾಲಿಸದೆಯೂ ಮಾತನಾಡಿಬಿಟ್ಟಿರುತ್ತೇವೆ. ಹೇಳಬೇಕಾದ್ದನ್ನು ಹೇಳಲು ಮತ್ತೆ ಮತ್ತೆ ಹೇಳುವ, ಬೇರೆ ಮಾತುಗಳನ್ನು ಬಳಸುವ ಹಾದಿಗಳನ್ನು ಹಿಡಿಯುತ್ತೇವೆ. ಆದರೆ ಬರೆಯುವಾಗ ಈ ಹಾದಿಯನ್ನು ಹಿಡಿಯಲಾಗುವುದಿಲ್ಲ. ತಪ್ಪು ಸೊಲ್ಲನ್ನು ತಿದ್ದಿಕೊಂಡು ಇನ್ನೊಂದು ಸೊಲ್ಲನ್ನು ಬರೆಯಲಾಗುವುದಿಲ್ಲ. ಅಂದರೆ ಒಂದು ವಿಷಯವನ್ನು ಎಡೆಬಿಡದೆ ಮಂಡಿಸುವ ನಿರೂಪಣೆಯ ಬಗೆಯನ್ನು ಮಾತಿನಲ್ಲಿ ಕಲಿತರೂ ಬರಹದಲ್ಲಿ ಅದನ್ನು ಅಳವಡಿಸಿಕೊಳ್ಳಲು ಬೇರೆಯೇ ತರಬೇತಿ ಬೇಕಾಗುತ್ತದೆ. ನಮ್ಮ ಕಲಿಕೆಯಲ್ಲಿ ಈ ಬಗೆಯ ತರಬೇತಿ ಕಡಿಮೆ. ಹಾಗಾಗಿ ಬರೆಯುವವರು ನೀರಿಗೆ ಬಿದ್ದು ಈಜು ಕಲಿಯುವವರಂತೆ ತೋರುತ್ತಾರೆ.

ಕಲಿಯುವಾಗ ಬರೀ ಕೇಳುವುದಷ್ಟೇ ಅಲ್ಲದೆ ತಾವೇ ಮಾತಾಡುವ, ಬೇರೆ ಬೇರೆ ಬರಹಗಳನ್ನು ಓದುವ ಮತ್ತು ತಾವೆ ಬರೆಯುವ ಕೆಲಸವನ್ನು ಹೆಚ್ಚು ಹೆಚ್ಚು ಮಾಡದ ಹೊರತು (ಹೊತ್ತಗೆಯಲ್ಲಿದ್ದದ್ದನ್ನೇ ಮತ್ತೆ ಮತ್ತೆ ನಕಲು ಮಾಡುವ ಇಂದಿನ ಬಗೆ ಸಾಲದು) ಮಕ್ಕಳ ಬರಹ ಚಳಕ ಈಗಿರುವಂತೆ ಇರುವುದೇ ಹೊರತು ಅದು ಸರಿಯಾದ ಹಳಿಗೆ ಬರಲಾರದು. ಇದೆಲ್ಲವನ್ನೂ ಹೇಳುವಾಗ ಬರವಣಿಗೆಯನ್ನು ಸರಿಪಡಿಸುವ ಗುರಿಯನ್ನು ಮಾತ್ರ ಇರಿಸಿಕೊಂಡಿರುವುದಿಲ್ಲ. ಅರಿಯುವ, ಅರಿತದ್ದನ್ನು ನುಡಿಯಲ್ಲಿ ಹೇಳುವ ಮತ್ತು ಬರಹದ ಮೂಲಕ ಅರಿತದನ್ನು ಓದುವ ಬೇರೆಯವರಿಗೆ ತಿಳಿಸುವ ಚಳಕ ಮೈಗೂಡಬೇಕಾಗಿದೆ. ಬರವಣಿಗೆಯ ತಪ್ಪುಗಳು ಎಂಬುದು ಕೇವಲ ನುಡಿ ಚಳಕ ನೆಲೆಗೊಳ್ಳದಿರುವ ಮಾತಷ್ಟೇಅಲ್ಲ. ಅದರಾಚೆಗೆ ಕಲಿಕೆಯ ಬಗೆಯಲ್ಲಿ ಅರಿವಿನ ಚಹರೆ ಬೇರು ಬಿಡದೇ ಹೋಗಿರುವುದರ ಕುರುಹು ಕೂಡ ಹೌದು. ಸರಿಯಾಗಿ ಮಾತಾಡಲಾರದವರು ಬರೆಯಲಾರದವರು ದಡ್ಡರೆಂದು ಗುರುತಿಸಿ ಕೈ ತೊಳೆದುಕೊಂಡರೆ ಸಾಲದು. ಕಲಿಕೆಯ ನೆಲೆಯಲ್ಲೇ ಇರುವ ತಪ್ಪುಗಳನ್ನು ಮೊದಲು ಗುರುತಿಸಿಕೊಳ್ಳಬೇಕಿದೆ.

ಕನ್ನಡ ಆಡುನುಡಿಯ ಸೊಲ್ಲರಿಮೆ:1

ಕನ್ನಡದ ಉಲಿಕಂತೆಗಳು

ಓದುವ ಮೊದಲು

ಕಳೆದ ಅಯ್ವತ್ತು ಅರವತ್ತು ವರುಶಗಳಲ್ಲಿ ಕನ್ನಡ ನುಡಿಯರಿಮೆ ಸಾಗಿ ಬಂದಿರುವ ದಾರಿಯನ್ನು ನೋಡಿದಾಗ ಅದು ಎರಡು ಕವಲುಗಳಲ್ಲಿ ಸಾಗಿದಂತೆ ತೋರುತ್ತದೆ. ಒಂದು ಕಡೆ ಅದು ಹಿಂದಿನ ಸೊಲ್ಲರಿಮೆಯ ನೆಲೆಗಳನ್ನು ಮುಂದುವರೆಸುತ್ತ ಸಾಗಿದೆ. ಇನ್ನೊಂದೆಡೆ ನುಡಿಯರಿವಿನ ಹೊಸ ನೆಲೆಗಳನ್ನು ತಿಳಿದುಕೊಳ್ಳುವ ಕಡೆಗೆ ಸಾಗುತ್ತಿದೆ. ಎರಡನೆಯ ಕವಲಿನಲ್ಲಿ ಮೂರು ಒಳ ಕವಲುಗಳಿದ್ದಂತಿವೆ. ಒಂದು ಕವಲು ನುಡಿಯರಿವಿನ ಹೊಸ ತಿಳುವಳಿಕೆಯನ್ನು ಕನ್ನಡ ನುಡಿಯಲ್ಲಿ ಹೇಳುವುದನ್ನೇ ತನ್ನ ಗುರಿಯನ್ನಾಗಿಸಿಕೊಂಡಿದೆ. ಈ ಬಗೆಯ ಬರಹಗಳು ಕನ್ನಡದಲ್ಲಿ ಸಾಕಷ್ಟು ದೊರಕುತ್ತವೆ. ಎರಡನೆಯ ಕವಲು ನುಡಿಯರಿವಿನ ಹೊಸ ಚಿಂತನೆಗಳು ಕನ್ನಡದ ರಚನೆ ,ಬೆಳವಣಿಗೆ, ಬಳಕೆ ಮುಂತಾದವುಗಳನ್ನು ಅರಿಯಲು ಹೇಗೆ ನೆರವಾಗಬಹುದು ಎಂಬುದನ್ನು ಹುಡುಕುವ ಕಡೆಗೆ ಸಾಗಿವೆ. ಈ ಬಗೆಯ ಬರಹಗಳು ಕನ್ನಡದಲ್ಲಿ ಇರುವಂತೆ ಇಂಗ್ಲಿಶ್ ನುಡಿಯಲ್ಲೂ ಇವೆ. ಮೂರನೆಯ ಕವಲಿನ ಬರಹಗಳು ಕನ್ನಡದ ರಚನೆಯ ನೆಲೆಗಳು, ನುಡಿಯರಿವಿನ ಹೊಸ ತಿಳುವಳಿಕೆಯ ಚೌಕಟ್ಟುಗಳನ್ನೇ ಹಿಗ್ಗಿಸುವ ಇಲ್ಲವೇ ಬದಲಿಸುವ ಕಸುವನ್ನು ಹೊಂದಿವೆಯೇ ಎಂಬುದನ್ನು ತಿಳಿಯಲು ಹೊರಟಿವೆ. ಇದಕ್ಕಾಗಿ ಕನ್ನಡ ಬೆಳೆದ ಬಂದ ಬಗೆಯನ್ನು ತಿಳಿಯುವುದು, ಕನ್ನಡ ಬೇರೆ ನುಡಿಗಳೊಡನೆ ಹೊಂದಿರುವ ನಂಟನ್ನು ಹುಡುಕುವುದು,ಹಿಂದಿನ ವ್ಯಾಕರಣದ ಚೌಕಟ್ಟುಗಳನ್ನು ಮರಳಿ ಉಜ್ಜಿ ನೋಡುವುದು ಇವೇ ಮುಂತಾದ ಕೆಲಸಗಳನ್ನು ನಮ್ಮ ನುಡಿಯರಿಗರು ಮಾಡುತ್ತ ಬಂದಿದ್ದಾರೆ.

ಈ ಹೊತ್ತಗೆಯಲ್ಲಿ ಕನ್ನಡ ನುಡಿಯ ರಚನೆಯನ್ನು ಇಂದಿನ ನುಡಿಯರಿಮೆಯ ಚೌಕಟ್ಟುಗಳಲ್ಲಿ ತಿಳಿಯುವ ಹೊಣೆಯನ್ನು ಆಯ್ದುಕೊಳ್ಳಲಾಗಿದೆ. ಅಲ್ಲದೆ ಉಲಿ,ಪದ,ಸೊಲ್ಲು ಮತ್ತು ಪದನೆರಿಕೆ ಈ ನೆಲೆಗಳಲ್ಲಿ ನುಡಿಯನ್ನು ಅರಿಯಲು ಈವರೆಗೆ ಮುಂದಾಗಿದ್ದೇವೆ. ಉಲಿ ಮತ್ತು ಪದಗಳ ನಡುವೆ ಇನ್ನೊಂದು ಹಂತದ ರಚನೆ ಇದೆಯೆಂದೂ ಅದನ್ನು ಅರಿಯುವುದರಿಂದ ನುಡಿಯ ರಚನೆಯ ಕೆಲವು ಹೊಸ ಕಟ್ಟುಗಳು ತಿಳಿಯುತ್ತವೆಂದೂ ಅರಿತು ಮುಂದುವರೆದಿದ್ದೇನೆ.

ಎಲ್ಲಕ್ಕಿಂತ ಹೆಚ್ಚಾಗಿ ಈ ಬರವಣಿಗೆಯಲ್ಲಿ ಹೆಚ್ಚಾಗಿ ಕನ್ನಡ ಪದಗಳನ್ನೇ ಬಳಸಲಾಗಿದೆ. ಅರಿಮೆಯ ಪದಗಳಿಗೂ ಹೊಸದಾಗಿ ಕನ್ನಡ ಪದಗಳನ್ನು ಆಯ್ದುಕೊಳ್ಳಲಾಗಿದೆ. ಈ ಕೆಲಸವನ್ನು ಶಂಕರ ಬಟ್ ಅವರು ಮೊದಲು ಮಾಡಿದ್ದಾರೆ. ಇಲ್ಲಿ ಅದನ್ನು ಮುಂದುವರೆಸಲಾಗುತ್ತಿದೆ. ಈವರೆಗೆ ಕನ್ನಡದಲ್ಲಿ ನುಡಿಯರಿಮೆಯ ಬರಹಗಳನ್ನು

ಓದುತ್ತ ಬಂದವರಿಗೆ ಇಲ್ಲಿನ ಕೆಲವು ಅರಿಮೆಯ ಪದಗಳು ಹೊಸದಾಗಿ ತೋರಬಹುದು. ಆದರೆ ಹೀಗೆ ಮಾಡುತ್ತಿರುವುದೇಕೆ ಎಂಬುದನ್ನು ಒಪ್ಪಿದರೆ ಈ ಬರವಣಿಗೆಯನ್ನು ಓದಲು ಸುಳುವಾದೀತು.

ಈ ನಡೆ ಸಂಸ್ಕೃತ ನುಡಿಯೊಡನೆ ಪೋಟಿ ಮಾಡಲೆಂದು ಆದುದಲ್ಲ. ಏಕೆಂದರೆ ನಮ್ಮಲ್ಲಿ ಬಳಕೆಯಾದ ಹತ್ತಾರು ನುಡಿಯರಿಮೆಯ ಪದಗಳು ಸಂಸ್ಕೃತದಿಂದ ಬಂದ ಇಲ್ಲವೇ ಸಂಸ್ಕೃತದ ಪದಗಳ ನೆರೆವಿನಿಂದ ಕಟ್ಟಿಕೊಂಡ ಪದಗಳೇ ಆಗಿವೆ. ಹಿಂದಿನ ಸೊಲ್ಲರಿಮೆಗಳೂ ಇದೇ ಹಾದಿಯನ್ನು ತುಳಿದಿದ್ದವು. ಈಗಲೂ ಅದನ್ನೇ ಮುಂದುವರಿಸುತ್ತಿದ್ದೇವೆ. ಆದರೆ ಕನ್ನಡದ ತಿಳುವಳಿಕೆ ಕನ್ನಡದಲ್ಲೇ ಮೈದಳೆಯ ಬೇಕಾದರೆ ನಾವು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ನಮ್ಮ ತಿಳಿವನ್ನು ಕನ್ನಡ ಪದಗಳಲ್ಲೇ ಕಟ್ಟಲು ಮೊದಲು ಮಾಡಬೇಕು ಎಂಬ ನಂಬಿಕೆ ನನ್ನದು.

ಕನ್ನಡ ಬರಹವನ್ನು ಸರಿಪಡಿಸ ಬೇಕು ಎಂಬ ಇರಾದೆಯಿಂದ ಶಂಕರ ಬಟ್ ಅವರು 'ಮಹಾಪ್ರಾಣ'ಗಳ ಬದಲಿಗೆ 'ಅಲ್ಪ ಪ್ರಾಣ'ಗಳನ್ನು ಬರೆಯಲು ಹೇಳುತ್ತಾರೆ. ಹಾಗೆಯೇ ಅವರು ಬರೆಯುತ್ತಿದ್ದಾರೆ ಕೂಡ. ಇದನ್ನು ಒಪ್ಪದೇ ಇರುವವರು ಹೆಚ್ಚು ಜನರಿದ್ದಾರೆ. ಈ ಗೋಜಲಿನಿಂದ ಹೊರಬರಲು ಇನ್ನೊಂದು ದಾರಿ ಇರುವಂತಿದೆ. ಅದೆಂದರೆ ನಮ್ಮ ಬರವಣಿಗೆಯಲ್ಲಿ 'ಮಹಾಪ್ರಾಣ'ಗಳಿರುವ ಪದಗಳನ್ನೇ ದೂರವಿಡುವುದು. ಈ ಬರವಣಿಗೆಯಲ್ಲಿ ಆ ದಾರಿಯನ್ನು ಹಿಡಿಯಲಾಗಿದೆ. ಇದರಿಂದ ಕನ್ನಡದ ಪದಗಳನ್ನು ಹುಡುಕಿ ಬಳಸುವ ಹೊಣೆ ಹೆಚ್ಚಾಗಿದೆ. ಓದುವವರು ಮುಜುಗರಕ್ಕೆ ಒಳಗಾಗುವ ಗೋಜೂ ಇಲ್ಲ. ಇದೆಲ್ಲ ಸೇರಿ ಈ ಬರವಣಿಗೆಯ ಚಹರೆಯನ್ನು ಕೊಂಚ ಬದಲಿಸಿವೆ. ಓದುವವರು ತಾಳ್ಮೆಯಿಂದ ಏಕೆ ಹೀಗೆ ಬರೆಯಲಾಗಿದೆ ಎಂಬುದನ್ನು ತಿಳಿದು ಓದಬೇಕಾಗುತ್ತದೆ.

ಅಲ್ಲದೆ ಈ ಬರಹದಲ್ಲಿ ಅಲ್ಲಲ್ಲಿ ಗಣಿತದ ಮಾದರಿಯ ಹೇಳಿಕೆಗಳು ಬಂದಿವೆ. ಈ ಹೇಳಿಕೆಗಳ ತಿರುಳನ್ನು ಪದಗಳಲ್ಲಿ ಬೇರೆಯಾಗಿ ಬಣ್ಣಿಸಿದ್ದರೂ ಈ ಬಗೆಯ ಗಣಿತದ ನೆಲೆಯ ಹೇಳಿಕೆಗಳನ್ನು ಕೊಟ್ಟಿರುವುದೇಕೇ? ಪದಗಳಲ್ಲಿ ಬಣ್ಣಿಸಿರುವುದು ಕಣ್ಣಿಗೆ ಕಟ್ಟುವಂತೆ ಮಾಡಲು ಮತ್ತು ಕಿರಿದಾಗಿ ಹೇಳುವಂತಾಗಲು ಇಂತಹ ಮಾದರಿಗಳು ನೆರವಿಗೆ ಬರುತ್ತವೆ. ಹಾಗಾಗಿ ಇಂತಹ ಹೇಳಿಕೆಗಳನ್ನು ನೋಡುತ್ತೀರಿ. ಈ ಹೇಳಿಕೆಗಳಲ್ಲಿ ಇಂಗ್ಲಿಶ್ ಬರಿಗೆಗಳು ಕಂಡರೂ ಈ ಹೇಳಿಕೆಗಳಿಗೂ ಇಂಗ್ಲಿಶ್ ನುಡಿಗೂ ಯಾವ ನಂಟೂ ಇಲ್ಲ.

ಕನ್ನಡ ನುಡಿ ಬಳಕೆಯನ್ನು ಬಣ್ಣಿಸುವ ಕಡೆಗೆ ನಮ್ಮ ಒಲುವೆ ಈಗ ಹೆಚ್ಚಾಗಿದೆ. ಇದರಿಂದಾಗಿ ಕನ್ನಡದ ಕಟ್ಟೋಣವನ್ನು ಅರಿಯುವ ದಿಕ್ಕಿನತ್ತ ನಾವು ನಡೆಯುವುದನ್ನು ನಿಲ್ಲಿಸಿಯೇ ಬಿಟ್ಟಿದ್ದೇವೆ. ಈ ಬರಹ ಆ ಕಡೆಗೆ ಸಾಗಲು ಇಟ್ಟಿರುವ ಹೊಸ ಹೆಜ್ಜೆ. ಇದನ್ನು ಓದುವ ಕಿರಿಯರಲ್ಲಿ ಈ ದಿಕ್ಕಿನಲ್ಲಿ ನಡೆಯುವ ಆಸೆ ಮೂಡಿದರೆ ಆಗ ಈ ಬರಹದ ಗುರಿ ಮುಟ್ಟಿದಂತೆಯೇ ಸರಿ. ಅಲ್ಲದೆ ಈ ಬರಹ ತಲುಪಿದ ತೀರ್ಮಾನಗಳು ಇಡಿಯಾಗಿ ಸರಿಯಿಲ್ಲ; ಇದಕ್ಕೆ ತಿದ್ದುಪಡಿ ಬೇಕು ಅನ್ನಿಸುವ ಎಡೆಗಳೂ ಇಲ್ಲಿರಬಹುದು. ಇದನ್ನು ಓದಿದವರು ಅದನ್ನು ತಿದ್ದುವ ಕಡೆಗೆ ನಡೆಯಬೇಕೆಂಬ ಬಿನ್ನಹ ನನ್ನದು.

ಬಳಸಿರುವ ಅರಿಮೆಯ ಪದಗಳು

ಈ ಬರಹದಲ್ಲಿ ಬಳಸಿರುವ ಕೆಲವು ಪದಗಳ,ಕೂಡುಪದಗಳ ತಿರುಳೇನು ಎಂಬುದನ್ನು ಮೊದಲಲ್ಲಿ ತಿಳಿದಿದ್ದರೆ ಮುಂದೆ ಓದುವಾಗ ಅದು ನೆರವಿಗೆ ಬರುತ್ತದೆ.

1. **ಉಲಿ** ಎಂದರೆ ಮಾತಾಡುವಾಗ ನಾವು ಹೊರಡಿಸುವ ದನಿ. ಅದನ್ನು ಇನ್ನೂ ಚಿಕ್ಕದಾಗಿ ಒಡೆಯಲು ಬರುವುದಿಲ್ಲ. **ಅ,ಕ್,ನ್,ಪ್,ರ್** ಮುಂತಾದವು ಕನ್ನಡದ ಉಲಿಗಳು. ಒಂದು ನುಡಿಯಲ್ಲಿ ಇರುವ ಉಲಿಗಳು ಇನ್ನೊಂದು ನುಡಿಯಲ್ಲೂ ಇರಬೇಕೆಂಬ ಕಟ್ಟು ಇಲ್ಲ.

2. **ಸೊಲ್ಲರಿಮೆ**: ನುಡಿಯನ್ನು ಬಳಸುವವರು ತಮಗೇ ತಿಳಿಯದಂತೆ ಯಾವ ಕಟ್ಟುಗಳನ್ನು ಬಳಸುತ್ತಿರುತ್ತಾರೋ ಅವೆಲ್ಲವನ್ನೂ ವಿವರಿಸುವ ನುಡಿಯರಿಮೆಯನ್ನು ಸೊಲ್ಲರಿಮೆ ಎನ್ನಲಾಗಿದೆ.

3. **ಉಲಿಕಂತೆ**: ಉಲಿಗಳ ಗುಂಪು. ಇದು ಪದಕ್ಕಿಂತ ಚಿಕ್ಕದು. ಉಲಿಕಂತೆಗಳ ಕಟ್ಟುಗಳನ್ನು ಮುಂದೆ ತಿಳಿಯಲಿದ್ದೇವೆ.

4. **ಏರು**. ಉಲಿಕಂತೆಯಲ್ಲಿರುವ ಉಲಿಗಳಲ್ಲಿ ಮೊದಲು ಬರುವ ತಡೆಯುಲಿ(ಗಳು).

5. **ನಡು**: ಉಲಿಕಂತೆಯ ಉಸಿರು. ಇದು ಒಂದು ತೆರೆದ ಉಲಿಯೇ ಆಗಿರಬೇಕು.

6. **ಇಳಿ**: ಉಲಿಕಂತೆಯಲ್ಲಿರುವ ತೆರೆದ ಉಲಿಯ ಬಳಿಕ ಬರುವ ತಡೆಯುಲಿ(ಗಳು).

7. **ತೆರೆದ ಉಲಿಕಂತೆ**: ಉಲಿಕಂತೆಯ ಕೊನೆಯಲ್ಲಿ ತಡೆಯುಲಿ ಇಲ್ಲದಿದ್ದಲ್ಲಿ ಅಂದರೆ ಇಳಿ ಇಲ್ಲದಿದ್ದಲ್ಲಿ ಅದೊಂದು ತೆರೆದ ಉಲಿಕಂತೆ.

8. **ಮುಚ್ಚಿದ ಉಲಿಕಂತೆ**: ಉಲಿಕಂತೆಯುಲ್ಲಿರುವ ತೆರೆದ ಉಲಿಯು ಬಳಿಕ ತಡೆಯುಲಿಯು(ಗಳು) ಇದ್ದರೆ ಅದು ಮುಚ್ಚಿದ ಉಲಿಕಂತೆ ಎನಿಸುವುದು.

9. **ಗಿಡ್ಡ ತೆರೆದ ಉಲಿ**: ಕನ್ನಡದ ಅ, ಇ, ಉ, ಎ, ಒ ಇವು ಗಿಡ್ಡ ತೆರೆದ ಉಲಿಗಳು

10. **ಉದ್ದ ತೆರೆದ ಉಲಿ**: ಕನ್ನಡದ ಆ, ಈ, ಊ, ಏ ಮತ್ತು ಓ ಉದ್ದ ತೆರೆದ ಉಲಿಗಳು.

11. **ಮೂಗುಲಿ**: **ಜ,ಞ,ನ ಣ** ಮತ್ತು **ಮ** ಇವು ಕನ್ನಡದ ಮೂಗುಲಿಗಳು. ಕೆಲವೊಮ್ಮೆ ಪದದಲ್ಲಿ ಮೂಗುಲಿ ಈಗ ಇಲ್ಲದಿದ್ದರೂ ಹಿಂದೆ ಆ ಪದದಲ್ಲಿ ಮೂಗುಲಿ ಇದ್ದಿತೆಂಬುದರ ಕುರುಹಾಗಿ ಈಗ ಆ ಮೂಗುಲಿ ಇದ್ದ ಜಾಗದ ಹಿಂದಿನ ತೆರೆದ ಉಲಿಯನ್ನು ನುಡಿಯುವಾಗ ಅದನ್ನೊಂದು ಮೂಗುಲಿಯ ಬಗೆಯಲ್ಲಿ ನುಡಿಯುವುದುಂಟು. ಕೊಳ್ಳೇಗಾಲ, ಚಾಮರಾಜನಗರಗಳ ಕಡೆ ಮಗಳು ಎಂದು ಮತ್ತು ಮಗ ಎಂದು ಹೇಳಲು ಒಂದೇ ಪದವನ್ನು ನುಡಿಯುವಂತೆ ಬೇರೆಯವರಿಗೆ ತೋರುವುದುಂಟು. **ಮಗ** ಎಂಬುದನ್ನು ಹೇಳುವಾಗ ಕೊನೆಯ ತೆರೆದ ಉಲಿ **ಅ** ಎಂಬುದನ್ನು ಮೂಗುಲಿಯಂತೆ ನುಡಿಯುತ್ತಾರೆ. **ಮಗಳು** ಎಂಬ ತಿರುಳಿನಎಂದು ಹೇಳುವಾಗ ಈ ಕುರುಹು ಕಾಣುವುದಿಲ್ಲ. ಈಗ ನಾವು **ಮಗ** ಎಂದು ಹೇಳುತ್ತಿರುವ ಪದ ನುಡಿಯ ಒಳ ಪದರಿನಲ್ಲಿ **ಮಗನ್** ಎಂದಿದೆ. ಇಲ್ಲಿರುವ ಕೊನೆಯ ತಡೆಯುಲಿ **ನ್** ಎಂಬುದನ್ನು ನುಡಿಯುತ್ತಿಲ್ಲ. ಆದರೆ **ನ್** ಇದ್ದುದರ ಕುರುಹಾಗಿ ಅದರ ಹಿಂದಿನ ತೆರೆದ ಉಲಿಯ ಚಹರೆಯಲ್ಲಿ ಬದಲಾವಣೆ ಮಾಡಿಕೊಂಡಿದ್ದೇವೆ.

12. **ನುಡಿಯರಿಮೆ**: ನುಡಿಯ ಕಟ್ಟುಗಳನ್ನು ಕುರಿತ ತಿಳುವಳಿಕೆ. ನುಡಿಯನ್ನು ಬಳಸುವವರು ಈ ನುಡಿಯರಿಮೆಯನ್ನು ಹೊಂದಿದ್ದರೂ ಅದೇನೆಂಬುದನ್ನು ಹೇಳಲಾರರು. ನುಡಿಯರಿಗರು ಬೇರೆ ಬೇರೆ ನುಡಿಗಳ ಒಳರಚನೆಯನ್ನು ತಿಳಿದು ಆಯಾ ನುಡಿಯ ನುಡಿಯರಿಮೆಯನ್ನು ತಿಳಿಸಬಲ್ಲರು.

13. **ನುಡಿ ಕಸುವು**: ನುಡಿಯನ್ನು ಆಡುವ ಎಲ್ಲರಲ್ಲೂ ಇರುವ ನುಡಿಯ ರಚನೆಯ ಕಟ್ಟುಗಳು ಮತ್ತು ಪರಿಕರಗಳು. ಇದರಲ್ಲಿ ಪದನೆರಿಕೆ ಸೇರುವುದಿಲ್ಲ.

14. **ನುಡಿ ನಡೆ**: ನುಡಿ ಕಸುವಿನ ಹೊರ ಪದರದ ರೂಪ. ನಾವು ಆಡುವ ಮಾತಿನ ಚಹರೆಗಳನ್ನು ನುಡಿ ನಡೆಯಲ್ಲಿ ಕಾಣಬಹುದು. ಇದು ನುಡಿ ಕಸುವಿನ ಕಟ್ಟುಗಳಿಂದ ಹುಟ್ಟಿಕೊಂಡಿರುತ್ತದೆ. ಮೇಲು ನೋಟಕ್ಕೆ ಒಬ್ಬರಿಂದ ಒಬ್ಬರಿಗೆ, ಒಂದು ಕಡೆಯಿಂದ ಇನ್ನೊಂದು ಕಡೆಗೆ ಬದಲಾದಂತೆ ತೋರುವುದಾದರೂ ಒಳ ಪದರದ ನುಡಿ ಕಸುವು ಮಾತ್ರ ಬೇರೆಬೇರೆ ಆಗಿರುವುದಿಲ್ಲ.

15. **ಸೊಲ್ಲು**: ತನ್ನದೇ ಆದ ತಿರುಳುಳ್ಳ ಹಲವು ಪದಗಳ ಗುಂಪು. ಬಳಕೆಯ ಸೊಲ್ಲರಿಮೆಗಳಲ್ಲಿ ಇದನ್ನು ವಾಕ್ಯ ಎಂದು ಕರೆಯಲಾಗಿದೆ.

16. **ಅರೆ ತಡೆಯುಲಿಗಳು**: ನುಡಿಯ ಕೆಲವು ಉಲಿಗಳಿಗೆ ತೆರೆದ ಉಲಿ ಮತ್ತು ತಡೆಯುಲಿ ಇವೆರಡರ ಚಹರೆಯೂ ಇರುವುದುಂಟು. ಅಂತಹ ಉಲಿಗಳನ್ನು ಅರೆ ತಡೆಯುಲಿಗಳೆಂದು ಕರೆಯಲಾಗಿದೆ. ಕನ್ನಡದಲ್ಲಿ **ಯ್** ಮತ್ತು **ವ್** ಎಂಬ ಎರಡು ಅರೆ ತಡೆಯುಲಿಗಳಿವೆ. ಕನ್ನಡದಲ್ಲಿ **ವ್** ಎಂದು ನಾವು ಬರೆಯುವ ಇನ್ನೊಂದು ತಡೆಯುಲಿಯೂ ಇದೆ. ಬರಹದಲ್ಲಿ ಇವೆರಡಕ್ಕೂ ಒಂದೇ ಬರಿಗೆಯನ್ನು ಬಳಸುತ್ತಿದ್ದರೂ ನುಡಿಯುವ ಬಗೆ ಮಾತ್ರ ಬೇರೆ ಬೇರೆ.

ದಿಂಡು: ಇದು ರಚನೆಯ ನಿಟ್ಟಿನಲ್ಲಿ ನೋಡಿದಾಗ ಒಂದು ಬಗೆಯ ಪದವೇ ಸರಿ. ಆದರೆ ಇದನ್ನು ಬಳಸಿ ಇನ್ನೊಂದು ಪದವನ್ನು ಕಟ್ಟಲು ಆಗುತ್ತದೆ. ಅದಕ್ಕಾಗಿ ದಿಂಡಿಗೆ ಪತ್ತುಗೆಯೊಂದನ್ನು ಸೇರಿ ಬೇಕಾಗುತ್ತದೆ.

ಪತ್ತುಗೆ: ದಿಂಡುಗಳಿಗೆ ಸೇರಿ ಪದಗಳನ್ನು ಕಟ್ಟಲು ನೆರವಾಗುವ ಉಲಿಗುಂಪುಗಳು. ಎತ್ತುಗೆಗಾಗಿ **ಗ** ಎಂಬ ಪತ್ತುಗೆಯನ್ನು ನೋಡಿ. ಇದನ್ನು **ಓದು** ಎಂಬ ಕೆಲಸ ಪದದ ದಿಂಡಿಗೆ ಸೇರಿಸಿ ಓದುಗ ಎಂಬ ಪದವನ್ನು ಕಟ್ಟ ಬಹುದು. ಪತ್ತುಗೆಗಳು ಬಿಡಿಯಾಗಿ ಬಳಕೆಯಾಗಲಾರವು. ಅವುಗಳಿಗೆ ತಮ್ಮದೇ ಆದ ತಿರುಳಿರುವುದಿಲ್ಲ.

ನುಡಿಯ ಪದರಗಳು

ಯಾರಾದರೂ ನನಗೆ ಕನ್ನಡ ಗೊತ್ತು ಎಂದು ಹೇಳಿದರೆ ಏನೆಂದು ತಿಳಿಯ ಬೇಕು? ಅವರು ಮಾತಾಡಿದರೆ ಕನ್ನಡ ಬಲ್ಲ ನನಗೆ ಅದರ ತಿರುಳು ತಿಳಿಯುತ್ತದೆ ಮತ್ತು ನಾನು ಮಾತಾಡಿದ್ದರ ತಿರುಳು ಅವರಿಗೆ ಗೊತ್ತಾಗುತ್ತದೆ ಎಂದು ತಿಳಿಯಬೇಕಷ್ಟೆ ಹೀಗೆ ತಿಳಿಯಲು ನೆರವಾಗುವುದೇನು? ನಾವು ಬಲ್ಲ ಕನ್ನಡ ನಮ್ಮಲ್ಲಿ ಎಲ್ಲಿ ಅಡಗಿರುತ್ತದೆ? ಕನ್ನಡ ಎಂದರೆ ಅದರಲ್ಲಿ ಬರುವ ಪದಗಳೇ? (ಹೆಚ್ಚು ಜನರಿಗೆ ನುಡಿಯೆಂದರೆ ಅದರಲ್ಲಿರುವ ಪದಗಳು ಎಂಬ ನಂಬಿಕೆ ಇರುತ್ತದೆ. ಹೆಚ್ಚು ಪದಗಳನ್ನು ಬಲ್ಲವರು ನುಡಿ ಜಾಣರೆಂದು ಹೆಸರು ಪಡೆದಿರುತ್ತಾರೆ) ಆದರೆ ಪದಗಳಷ್ಟೇ ನುಡಿಯಲ್ಲ. ಇನ್ನು ಸೊಲ್ಲುಗಳ ಮಾತಿಗೆ ಬರೋಣ. ಕನ್ನಡದ ಎಲ್ಲ ಸೊಲ್ಲುಗಳನ್ನು ನಾವು ಮೊದಲೇ ಅರಿತಿರುವುದು ಆಗದ ಮಾತು. ಯಾರೋ ನುಡಿದ ಕನ್ನಡ ಸೊಲ್ಲು ಅದೇ ಮೊದಲ ಬಾರಿಗೆ ನಮಗೆ ಕೇಳಿಸಿರುತ್ತದೆ. ಆದರೂ ಅದರ ತಿರುಳನ್ನು ನಾವು ಅರಿಯಬಲ್ಲೆವು. ಹಾಗಾಗಿ ಒಂದು ನುಡಿಯೆಂದರೆ ಅದರಲ್ಲಿ ಉಲಿಗಳು, ಪದಗಳು, ಸೊಲ್ಲುಗಳು, ತಿರುಳು ಮುಂತಾದವೆಲ್ಲ ಇದ್ದರೂ ಇವೆಲ್ಲವನ್ನೂ ಒಗ್ಗೂಡಿಸುವ ಕಟ್ಟುಗಳನ್ನು ಕನ್ನಡ ಎನ್ನುತ್ತೇವೆ. ಈ ಕಟ್ಟುಗಳು ನಮ್ಮ ನುಡಿ ಕಸುವು. ಅಂದರೆ ಆ ಕಸುವು ಇರುವುದರಿಂದಲೇ ಮಾತಾಡಲು ಆಗುತ್ತದೆ. ಹಾಗೆಯೇ ಬೇರೆಯವರು ಮಾತಾಡಿದ್ದನ್ನು ಕೇಳಿ ತಿಳಿದುಕೊಳ್ಳಲು ಆಗುತ್ತದೆ. ನುಡಿ ಕಸುವಿನಿಂದಾಗಿಯೇ ನಾವು ನುಡಿ ಬಳಕೆಗೆ ಮೊದಲು ಮಾಡಿದಂದಿನಿಂದ ಮಾತಾಡುವುದನ್ನು ನಿಲ್ಲಿಸುವವರೆಗೂ ಕನ್ನಡವನ್ನು ನಾವು ಬಳಸಬಲ್ಲೆವು. ಬಳಸುವುದು ಎಂದರೆ ಆಡುವುದು ಮಾತ್ರವಲ್ಲ; ಆಡಿದ್ದನ್ನು ಅರಿಯಲು ಕೂಡ ಈ ಕಸುವು ನಮ್ಮ ನೆರವಿಗೆ ಬರುತ್ತದೆ. ಹಾಗಾಗಿ ಮೊದಲ ನುಡಿಯಾಗಿ ಕನ್ನಡವನ್ನು ಬಳಸಲು ಮೊದಲು ಮಾಡಿದವರು ಹಲವಾರು ವರುಶ ಕನ್ನಡವನ್ನು ಕೇಳಿಸಿಕೊಳ್ಳಲಾಗದ, ಮಾತಾಡಲಾಗದ ಜಾಗದಲ್ಲಿ ವಾಸಿಸಿದ್ದರೂ ಮತ್ತೆ ಕನ್ನಡವನ್ನು ಕೇಳಿದಾಗ ಅರಿತುಕೊಳ್ಳಬಲ್ಲರು ; ತಾವೇ ಮಾತಾಡಬಲ್ಲರು. ನಾವು ಪಡೆದ ಒಳ ಕಸುವು ನಮ್ಮೊಡನೆ ಇದ್ದೇ ಇರುತ್ತದೆ. ಅಂದರೆ ಕನ್ನಡ ಎಂದರೆ ನಾವು ಆಡುವ ಸೊಲ್ಲುಗಳಲ್ಲ. ಆ ಸೊಲ್ಲುಗಳನ್ನು ಹುಟ್ಟಿಸಬಲ್ಲ, ಕೇಳಿದ ಸೊಲ್ಲುಗಳ ತಿರುಳನ್ನು ತಿಳಿಸಿಕೊಡಬಲ್ಲ ಒಳ ಕಸುವು ಕನ್ನಡ.

ಇನ್ನೂ ಒಂದು ಎತ್ತುಗೆಯನ್ನು ನೋಡೋಣ. ಕನ್ನಡ ಬಲ್ಲವರೊಬ್ಬರು ಕ್ ಎಂಬ ಉಲಿಯನ್ನು ಹೊರಡಿಸುತ್ತಾರೆ ಎಂದುಕೊಳ್ಳಿ. ನೀವು ಹೊರಡಿಸಿದ ಉಲಿ ಯಾವುದೆಂದು ಕೇಳಿದರೆ ಅವರು ಅದನ್ನು ಕ್ ಎಂದು ಮರಳಿ ಹೇಳಬಲ್ಲರು. ಆದರೆ

ಅವರು ಹೇಳಿದ ಉಲಿ ಯಾವುದೆಂದು ನಮಗೆ ಗೊತ್ತಾದದ್ದು ಹೇಗೆ? ನಮ್ಮ ಕಿವಿಗಳಿಂದ ಅದನ್ನು ಕೇಳಿದೆವು. ದಿಟ. ಆದರೆ ಅದೇ **ಕ್** ಎಂಬ ಉಲಿ ಎಂದು ನಿಕ್ಕಿಯಾಗಿ ನಾವು ನಂಬಿದ್ದು ಹೇಗೆ? ನಮಗೆ **ಕ್** ಉಲಿ ಗೊತ್ತು. ಆ ಉಲಿಯ ಚಹರೆಯೊಂದಿಗೆ ನಾವು ಕೇಳಿದ ಉಲಿ ಚಹರೆ ಹೊಂದಿಕೊಂಡದ್ದರಿಂದ ನಾವು ಕೇಳಿಸಿಕೊಂಡದ್ದು ಮತ್ತು ಎದುರಿಗಿರುವವರು ನುಡಿದದ್ದು **ಕ್** ಎಂದು ಹೇಳಬಲ್ಲೆವು. ಆದರೆ ನಾವು ನುಡಿಯಬಲ್ಲ **ಕ್** ಮತ್ತು ನಾವು ಕೇಳಿಸಿಕೊಂಡ **ಕ್** ಎರಡೂ ನೂರಕ್ಕೆ ನೂರು ಒಂದೇ ಅಗಿರುವುದಿಲ್ಲ. ಎರಡು ಬೇರೆ **ಕ್** ಉಲಿಗಳೇ ಅಲ್ಲಿರಬಹುದು. ಇದು ದಿಟವೆಂದು ತಿಳಿಸಿಕೊಡುವ ಯಂತ್ರಗಳಿವೆ. ಎರಡೂ **ಕ್** ಗಳಲ್ಲಿ ಹೊಂದಾಣಿಕೆ ಆಗದೆಯೂ ಇರಬಹುದು. ಆದರೆ ಯಾರೂ ನೀವು ನುಡಿದದ್ದು ನಾವು ಬಲ್ಲ **ಕ್** ಉಲಿಯಲ್ಲ ಎಂದು ಜಗಳಕ್ಕೆ ನಿಲ್ಲುವುದಿಲ್ಲ. ಏಕೆಂದರೆ ಎದುರಿಗಿರುವವರು ನುಡಿದದ್ದು ಮತ್ತು ನಾವು ಕೇಳಿಸಿಕೊಂಡದ್ದು ಒಂದು ನೆಲೆಯಾದರೆ **ಕ್** ಉಲಿಯನ್ನು ಹೊರಡಿಸಿದ್ದೇನೆಂದು ಹೇಳುವ ಎದುರಿಗೆ ಇರುವವರು, ನಾನು ಕೇಳಿದ್ದು **ಕ್** ಉಲಿಯೇ ಎಂದು ನಂಬುವ ನಾವು ಇಬ್ಬರೂ ಒಪ್ಪುವ ನೆಲೆಯೇ ಬೇರೆ. ಇವೆರಡೂ ನೆಲೆಗಳಲ್ಲಿ ಮೊದಲನೆಯದನ್ನು ನುಡಿಯ **ಹೊರ ಪದರ** ಎಂದೂ ಎರಡನೆಯದನ್ನು ನುಡಿಯ **ಒಳ ಪದರ** ಎಂದೂ ಕರೆಯುತ್ತೇವೆ.

ಈ ಮೇಲಿನ ಮಾತುಗಳಿಂದ ತಿಳಿಯುವುದೇನು? ನುಡಿಯಲ್ಲಿ ಎರಡು ಪದರಗಳಿರುತ್ತವೆ. ಒಂದು: ನುಡಿಯ ಒಳ ಪದರ. ಈ ಪದರವನ್ನು **ನುಡಿಕಸುವು** ಎನ್ನೋಣ. ಎರಡು: ನುಡಿಯ ಹೊರ ಪದರ. ಈ ಪದರವನ್ನು **ನುಡಿನಡೆ** ಎಂದು ತಿಳಿಯಲಡ್ಡಿಯಿಲ್ಲ. ಹಾಗೆ ನೋಡಿದರೆ ನುಡಿಕಸುವಿನ ಕುರುಹುಗಳನ್ನು ಕಾಣಬಹುದೇ ಹೊರತು ಅದೇನು ಮತ್ತು ಅದೆಲ್ಲಿದೆ ಎಂಬುದನ್ನು ಬೆರಳಿಟ್ಟು ತೋರಿಸಲು ಬರುವುದಿಲ್ಲ. ಆದರೆ ನುಡಿನಡೆ ಎಂಬುದು ನಮಗೆ ಕೇಳಿಸುತ್ತದೆ; ನಾವು ಅದನ್ನು ಆಡುತ್ತಿರುತ್ತೇವೆ.ಅದೇ ನಮಗೆ ಗೊತ್ತಾಗುವಂತಹುದು. ಹಿಂದೆ ನುಡಿಯರಿಗರು ನುಡಿಯ ಹೊರ ಪದರವಾದ ನುಡಿನಡೆಯ ಬಣ್ಣನೆ ಮಾಡಿದರೆ ಸಾಕು ಎಂದು ತಿಳಿದಿದ್ದರು. ಆದರೆ ಈಗ ನುಡಿ ಕಸುವನ್ನು ತಿಳಿದ ಹೊರತು ದಿಟವಾಗಿ ನುಡಿಯರಿಮೆ ಇಡಿಯಾಗಿ ನಮಗೆ ದೊರಕದು ಎಂದು ತಿಳಿಯುತ್ತಾರೆ.

ನುಡಿಕಸುವು ಎಂಬುದು ನಮಗೆ ಗೊತ್ತಾಗದಂತೆ ನಮ್ಮಲ್ಲಿ ನೆಲೆಯೂರಿರುತ್ತದೆ ಎಂಬುದನ್ನು ತಿಳಿಯಲು ಹಲವು ಹಾದಿಗಳಿವೆ. ಒಂದು ಎತ್ತುಗೆಯನ್ನು ನೋಡೋಣ. ಕನ್ನಡವನ್ನು ಚಿಕ್ಕಂದಿನಲ್ಲಿ ಮೊದಲ ನುಡಿಯನ್ನಾಗಿ ಪಡೆದುಕೊಂಡವರೊಬ್ಬರು ಕೆಲವು ವರುಶ ಕನ್ನಡವನ್ನು ಕೇಳಿಸಿಕೊಳ್ಳಲಾಗದ ಮತ್ತು ಕನ್ನಡವನ್ನು ನುಡಿಯಲಾಗದ (ತಾವೇ ಒಬ್ಬರೇ ಮಾತಾಡಿ ಕೇಳಿಸಿಕೊಳ್ಳುವ ಮಾತು ಬದಿಗಿರಿಸಿ) ಕಡೆ ಬದುಕುತ್ತಿರುತ್ತಾರೆ ಎಂದುಕೊಳ್ಳಿ. ಅಂದರೆ ಅವರ ಕನ್ನಡದ ನುಡಿ ನಡೆ ಲೆಕ್ಕಕ್ಕೆ ಸೊನ್ನೆ. ಏಕೆಂದರೆ ಅವರು ಕನ್ನಡವನ್ನು ಕೇಳುತ್ತಲೂ ಇಲ್ಲ; ಕನ್ನಡವನ್ನು ಆಡುತ್ತಲೂ ಇಲ್ಲ. ಆದರೆ ಅವರು ಮತ್ತೆ ಕನ್ನಡ ಕೇಳುವವರ ,ಆಡುವವರ ನಡುವೆ ಬದುಕಲು ಬಂದರೆ ಅವರಿಗೆ ಕನ್ನಡ ಹೊಸದು ಎನ್ನಿಸುವುದೇ ಇಲ್ಲ. ಅವರಲ್ಲಿ ಈವರೆಗೂ ಅಡಗಿ ಕುಳಿತಿದ್ದು ಏನು? ಅದೇ ಕನ್ನಡ ನುಡಿ ಕಸುವು. ಇದು ಒಮ್ಮೆ ನಮ್ಮಲ್ಲಿ ನೆಲೆಯೂರಿದರೆ ಕೊನೆಯವರೆಗೂ ನಮ್ಮೊಡನೆ ಇದ್ದೇ ಇರುತ್ತದೆ. ಹಾಗೆ ನೋಡಿದರೆ ಇದರ ಚೌಕಟ್ಟಿನಲ್ಲಿ ಬದಲಾವಣೆಗಳು ಆಗುವುದೇ ಇಲ್ಲ.

ನುಡಿಕಸುವು ಹೇಗಿರುತ್ತದೆ?

ದಿಟದಲ್ಲಿ ಇದೊಂದು ಕಟ್ಟುಗಳ ಗಡಣ. ನುಡಿಯಲ್ಲಿ ಬೆರೆತು ಹೋಗಿರುವ ನೂರಾರು ಕಟ್ಟುಗಳು ಈ ನುಡಿ ಕಸುವಿನಲ್ಲಿ ಅಡಕವಾಗಿರುತ್ತವೆ. ಹೇಗೆಂಬುದನ್ನು ನೋಡೋಣ.

1. **ಆ ಮರ ಎತ್ತರವಾಗಿದೆ**
2. **ಈ ಕಂಬ ಉದ್ದವಾಗಿದೆ**
3. **ಈ ಮನೆ ಹೊಸದಾಗಿದೆ**

ಈ ಮೂರೂ ಸೊಲ್ಲುಗಳೂ ಮೇಲಿನ ನೋಟಕ್ಕೆ ಬೇರೆ ಬೇರೆ ಆಗಿವೆ. ಆದರೆ ಅವುಗಳ ಒಳಗಿನ ಕಟ್ಟುಗಳು ಮಾತ್ರ ಒಂದೇ ಆಗಿದೆ. ಆ ಕಟ್ಟನ್ನು ಹೀಗೆ ವಿವರಿಸಬಹುದು. **ಆ ಮರ/ ಈ ಕಂಬ/ ಈ ಮನೆ** ಎಂಬ ರಚನೆಗಳು ಒಂದು ಗುಂಪಿಗೆ ಸೇರಿದವು. ಇವು ಹೇಗಿವೆ ಎಂಬುದನ್ನು ಬಣ್ಣಿಸುವ ಮಾತುಗಳು **ಎತ್ತರವಾಗಿದೆ/ಉದ್ದವಾಗಿದೆ/ ಹೊಸದಾಗಿದೆ** ಎಂಬ ಮಾತುಗಳು ಸೊಲ್ಲಿನಲ್ಲಿ ಇವೆ. ಈ ಕಟ್ಟನ್ನು ಬಳಸಿ ಕನ್ನಡದಲ್ಲಿ ಲೆಕ್ಕವಿಲ್ಲದಷ್ಟು ಸೊಲ್ಲುಗಳನ್ನು ತಯಾರಿಸಬಹುದು.

1. **ಆ ರಸ್ತೆ ಹಾಳಾಗಿದೆ.**
2. **ನನ್ನ ಕಾಲು ಮುರಿದಿದೆ.**
3. **ಅವನ ಅಂಗಿ ಹರಿದುಹೋಗಿದೆ.**

ಹೀಗೆ ಸೊಲ್ಲುಗಳನ್ನು ಕಟ್ಟುತ್ತಲೇ ಹೋಗಬಹುದು. ಬೇರೆ ಬೇರೆ ಸೊಲ್ಲುಗಳಲ್ಲಿ ಹೊಸಹೊಸ ಪದಗಳು ಕಾಣಿಸುತ್ತವೆಯೇ ಹೊರತು ಸೊಲ್ಲಿನ ಹಿಂದಿರುವ ಕಟ್ಟು ಮಾತ್ರ ಒಂದೇ ಆಗಿದೆ. ಎಳವೆಯಲ್ಲಿ ನುಡಿಯನ್ನು ಪಡೆದುಕೊಳ್ಳುವಾಗ ಈ ಕಟ್ಟು ನಮ್ಮಲ್ಲಿ ನೆಲೆಯೂರಿರುವುದರಿಂದ ಅದನ್ನು ಬಳಸಿ ನೂರಾರು ಸೊಲ್ಲುಗಳನ್ನು ನಾವು ಕಟ್ಟುತ್ತಿರುತ್ತೇವೆ. ಹಾಗಾಗಿ ನುಡಿ ಕಸುವು ಎಂದರೆ ನುಡಿಯ ಕಟ್ಟುಗಳ ಕಂತೆ ಎಂದು ತಿಳಿಯುವುದೇ ಸರಿ.

ಇಂತಹ ಇನ್ನೊಂದು ಕಟ್ಟನ್ನು ಈಗ ನೋಡೋಣ.

1. **ಹುಡುಗರು ಮನೆಗೆ ಹೋದರು.**
2. **ಹಸುಗಳು ಕಾಡಿಗೆ ಹೋದವು**
3. **ಮಕ್ಕಳು ಶಾಲೆಗೆ ಹೋದರು.**

ಈ ಮೂರು ಸೊಲ್ಲುಗಳಲ್ಲಿ ಇರುವ ಪದಗಳು ಮೂರು ಮೂರು. ಈ ಸೊಲ್ಲುಗಳ ಹಿಂದಿರುವ ಕಟ್ಟನ್ನು ತಿಳಿಯಲು ಈ ಪದಗಳನ್ನು ಗುಂಪು ಮಾಡಿ ನೋಡಬೇಕು ಇದಕ್ಕೆ ಮೂರು ಹಾದಿಗಳಿವೆ

1. ಮೂರೂ ಬೇರೆ ಬೇರೆ ಗುಂಪುಗಳು ಎನ್ನುವುದು (**ಹುಡುಗರು/ಮನೆಗೆ/ಹೋದರು**)

2. ಎರಡು ಗುಂಪುಗಳನ್ನಾಗಿ ಒಡೆಯುವುದು. ಇದರಲ್ಲಿ ಎರಡು ಬಗೆಗಳಿವೆ :

   1. **ಹುಡುಗರು ಮನೆಗೆ/ ಹೋದರು** ಇಲ್ಲವೇ

   2. **ಹುಡುಗರು/ಮನೆಗೆ ಹೋದರು**

3. **ಹುಡುಗರು ಹೋದರು/ಮನೆಗೆ** ಎಂದು ಮತ್ತೊಂದು ಬಗೆಯಲ್ಲಿ ಎರಡು ಗುಂಪುಗಳನ್ನಾಗಿ ಮಾಡಬಹುದಾದರೂ ಈಗ ಅದನ್ನು ಬದಿಗಿಡೋಣ.

ನಾವು ಆಯ್ದುಕೊಂಡ ಎರಡು ಬಗೆಯ ಗುಂಪುಗಳಲ್ಲಿ ಯಾವುದು ಸರಿ ಎಂಬುದನ್ನು ಹೇಗೆ ತಿಳಿಯುವುದು? ಎರಡೂ ಸರಿ ಎಂದು ಹೇಳಿ ಕೈ ತೊಳೆದುಕೊಳ್ಳೋಣವೇ? ಇದಕ್ಕೊಂದು ಹಾದಿ ಇದೆ. **ಹುಡುಗರು ಮನೆಗೆ ಹೋದರು** ಎಂಬ ಸೊಲ್ಲಿನಲ್ಲಿ ಮೂರು ತುಂಡುಗಳಿವೆ. ಅವುಗಳಲ್ಲಿ ಎರಡು ತುಂಡುಗಳಲ್ಲಿ ಹೆಸರು ಪದಗಳಾದ **ಹುಡುಗರು** ಮತ್ತು **ಮನೆ** ಎಂಬ ಪದಗಳನ್ನು ಹೊಂದಿವೆ. ಇನ್ನೊಂದು ತುಂಡಿನಲ್ಲಿ **ಹೋಗು** ಎಂಬ ಕೆಲಸ ಪದವಿದೆ. ಈಗ ಮೂರು ಕೇಳ್ವಿಗಳನ್ನು ರೂಪಿಸೋಣ.

ಯಾರು ಮನೆಗೆ ಹೋದರು?,

ಹುಡುಗರು ಎಲ್ಲಿಗೆ ಹೋದರು? **ಮತ್ತು**

ಹುಡುಗರು ಏನು ಮಾಡಿದರು?

ಈ ಮೂರೂ ಕೇಳ್ವಿಗಳಿಗೆ ಸೊಲ್ಲಿನಲ್ಲಿ ಬದಲುಗಳಿವೆ. **ಹುಡುಗರು, ಮನೆಗೆ** ಮತ್ತು **ಮನೆಗೆ ಹೋದರು** ಎಂಬ ಬದಲುಗಳು ನಮಗೆ ಸಿಗುತ್ತವೆ. ಅಂದರೆ **ಮನೆಗೆ ಹೋದರು** ಎಂಬ ಬದಲನ್ನು ಪಡೆಯಲು ಬೇಕಾದ ಕೇಳ್ವಿಯನ್ನು ನಾವು ಕಟ್ಟಬಹುದು. ಆದರೆ **ಹುಡುಗರು ಮನೆಗೆ** ಎಂಬ ಬದಲನ್ನು ಪಡೆಯುವ ಕೇಳ್ವಿಯನ್ನು ಕಟ್ಟಲಾಗುವುದಿಲ್ಲ. **ಹುಡುಗರು ಮನೆಗೆ** ಎಂಬುದು ಯಾವುದೇ ಒಂದು ಕೇಳ್ವಿಗೆ ದೊರಕುವ ಬದಲು ಆಗಲಾರದು. ಇದರಿಂದ ತಿಳಿಯುವುದೇನು? ಈ ಸೊಲ್ಲಿನಲ್ಲಿ ಒಳಗುಂಪುಗಳಿರುವುದಾದರೆ ಅದು **ಹುಡುಗರು** ಮತ್ತು **ಮನೆಗೆ ಹೋದರು** ಎಂಬ ಗುಂಪುಗಳೇ ಆಗಿರುತ್ತವೆ. ಇದೇ ಬಗೆಯಲ್ಲಿ ನಾವು ಮೇಲೆ ಈ ಸೊಲ್ಲಿನ ಮಾದರಿಯಲ್ಲಿ ಹೇಳಿದ ಮತ್ತೆರಡು ಸೊಲ್ಲುಗಳಲ್ಲೂ ಗುಂಪುಗಳನ್ನು ಗುರುತಿಸಬಹುದು.

ಸೊಲ್ಲುಗಳನ್ನು ನುಡಿಯುವಾಗ ಅದರಲ್ಲಿರುವ ಪದಗಳನ್ನು ಸುಮ್ಮನೆ ಒಂದರ ಜೊತೆ ಇನ್ನೊಂದನ್ನು ಜೋಡಿಸಿಕೊಂಡು ಹೋದಂತೆ ತೋರಿದರೂ ಆ ಪದಗಳು ತಮ್ಮಲ್ಲೇ ಕಟ್ಟಿಕೊಳ್ಳುವ ಒಳಗುಂಪುಗಳ ಚಹರೆಯ ಕಟ್ಟು ನುಡಿಯುವವರಿಗೆ ಗೊತ್ತಿರುತ್ತದೆ. ಈ ಕಟ್ಟು ಕನ್ನಡ ಮಾತಾಡುವ, ಅದನ್ನು ಕೇಳಿ ಅರಿಯುವ ಎಲ್ಲರ ನುಡಿ ಕಸುವಿನಲ್ಲಿ ಸೇರಿಕೊಂಡಿರುತ್ತವೆ. ಆದರೆ ಅಂತಹ ಒಂದು ಕಟ್ಟು ಇದೆಯೆಂಬುದನ್ನು ಅವರು ಗುರುತಿಸಿ ಹೇಳಲಾರರು. ಆದರೆ ಅವರ ನುಡಿ ಬಳಕೆಯಲ್ಲಿ ಈ ಕಟ್ಟನ್ನು ಪಾಲಿಸಿರುವುದನ್ನು ನಾವು ತಿಳಿಯಬಹುದು.

ಇನ್ನೂ ಒಂದು ಎತ್ತುಗೆಯನ್ನು ನೋಡೋಣ. ಕನ್ನಡ ಬಲ್ಲವರ ಎದುರು ಒಂದು ಪದವನ್ನು ಹೇಳೋಣ. **ಕೆಪಿಗ** ಎಂಬುದು ಆ ಪದ ಎಂದು ಕೊಳ್ಳಿ. ಅವರಿಗೆ ಇದು ಒಂದು ಹಕ್ಕಿಯೆಂದು ಹೇಳೋಣ. ಯಾವುದೋ ಫೆಸಿಫಿಕ್ ಸಾಗರದ ದ್ವೀಪದಲ್ಲಿ ಸಿಗುವುದೆಂದೂ ಅಲ್ಲಿನ ಜನರು ಇದನ್ನು ಸಾಕುತ್ತಾರೆಂದೂ ತಿಳಿಸೋಣ. ಈಗ ಒಂದು ಚಿತ್ರವನ್ನು ತೋರಿಸೋಣ. ಆ ಚಿತ್ರದಲ್ಲಿ ಯಾರೋ ಒಬ್ಬಾಕೆ ಹಕ್ಕಿಯೊಂದಕ್ಕೆ ತಿನಿಸನ್ನು ನೀಡುವುದನ್ನು ತೋರಿಸುವಂತಿರಬೇಕು. ಆ ಚಿತ್ರದಲ್ಲಿರುವ ಹಕ್ಕಿಯೇ **ಕೆಪಿಗ** ಎಂದೂ ಆ ಚಿತ್ರದಲ್ಲಿರುವಾಕೆ ಏನು ಮಾಡುತ್ತಿದ್ದಾಳೆ ಎಂದು ಕೇಳೋಣ. ಅವರು ನೀಡುವ ಬದಲು ಹೀಗಿರುತ್ತದೆ.

ಒಬ್ಬಾಕೆ ಕೆಪಿಗಕ್ಕೆ ತಿಂಡಿ ತಿನ್ನಿಸುತ್ತಿದ್ದಾಳೆ.

ಇಲ್ಲಿ **ಕೆಪಿಗಕ್ಕೆ** ಎಂಬ ಪದವನ್ನು ಕನ್ನಡ ಮಾತಾಡುವವರು ಕಟ್ಟಿದ್ದು ಹೇಗೆ? ಅವರಿಗೆ **ಕೆಪಿಗ** ಒಂದು ಪದ ಮತ್ತು ಅದೊಂದು ಹೆಸರು ಪದ. ಈ ಪದ **ಅ** ಎಂಬ ಉಲಿಯಿಂದ ಕೊನೆಗೊಳ್ಳುತ್ತದೆ. ಇಂತಹ ಪದಗಳನ್ನು ಸೊಲ್ಲಿನಲ್ಲಿ ಬಳಸಲು ಬೇಕಾದ ಕಟ್ಟುಗಳು ಅವರ ನುಡಿಕಸುವಿನಲ್ಲಿ ಇರುತ್ತವೆ. ಅವರೀಗ ಅದನ್ನು **ಪುಸ್ತಕ, ದೀಪ, ದಾರ, ಬೀಗ** ಮುಂತಾದ ಹೆಸರು ಪದಗಳ ಬಗೆಯಲ್ಲಿ ಬಳಸುತ್ತಾರೆ. ಅವರೆಲ್ಲರಿಗೂ ಇವೆಲ್ಲವೂ **ಅ** ಎಂಬ ಉಲಿಯಿಂದ ಕೊನೆಗೊಳ್ಳುತ್ತವೆ ಎಂಬುದೂ **ಕೆಪಿಗ** ಎಂಬ ಹಕ್ಕಿಯ ಹೆಸರಿನ ಪದವನ್ನೂ ಇವುಗಳ ಮಾದರಿಯಲ್ಲೇ ಬಳಸ ಬೇಕೆಂಬುದೂ ಗೊತ್ತಿರುತ್ತದೆ. ಆದರೆ ತಮಗೇನು ಗೊತ್ತಿದೆ ಎನ್ನುವುದು ಗೊತ್ತಿರುವುದಿಲ್ಲ. ಹಾಗಾಗಿ ನುಡಿಯ ಒಳ ಪದರದಲ್ಲಿರುವ ಕಸುವು ನುಡಿನಡೆಯ ಚಹರೆಗಳನ್ನು ತಂತಾನೇ ಕಟ್ಟುತ್ತಿರುತ್ತದೆ.

ಇನ್ನೂ ಮುಂದುವರೆದು ಬೇರೊಂದು ಗುಂಪಿನ ಕನ್ನಡಿಗರಿಗೆ ಆ ಹಕ್ಕಿಯ ಹೆಸರು **ಕೆಪಿಗಾ** ಎಂದು ತಿಳಿಸಿದರೆ ಏನಾಗುತ್ತದೆ? ನುಡಿಯುವಾಗ ಎಚ್ಚರದಿಂದ ಹೆಸರಿನ ಕೊನೆಯ ಉಲಿಯನ್ನು **ಆ** ಎಂದು ನುಡಿಯ ಬೇಕು. ಆಗ ಅದೇ ಚಿತ್ರವನ್ನು ಈ ಗುಂಪಿನ ಕನ್ನಡಿಗರಿಗೆ ತೋರಿಸಿದರೆ ಅವರು ಕಟ್ಟುವ ಸೊಲ್ಲು ಹೀಗಿರುತ್ತದೆ.

ಒಬ್ಬಾಕೆ **ಕೆಪಿಗಾಗೆ** ತಿಂಡಿ ತಿನ್ನಿಸ್ತಿದಾಳೆ ಇಲ್ಲವೇ
ಒಬ್ಬಾಕೆ **ಕೆಪಿಗಾವಿಗೆ** ತಿಂಡಿ ತಿನ್ನಿಸ್ತಿದಾಳೆ

ಎಂತಲೂ ಇರುತ್ತದೆ. (ಏಕೆ ಹೀಗೆ ಎರಡು ಸೊಲ್ಲುಗಳು ಹುಟ್ಟಿಕೊಳ್ಳಬಲ್ಲವು ಎಂಬುದು ಬೇರೆ ಕತೆ. ಅದಿಲ್ಲಿ ಬೇಡ.) ಇಲ್ಲಿಯೂ ಹೆಸರು ಪದವೊಂದು **ಆ** ಎಂಬ ಉದ್ದದ ತೆರೆದ ಉಲಿಯಿಂದ ಕೊನೆಯಾದರೆ ಅದನ್ನು ಹೇಗೆ ಸೊಲ್ಲಿನಲ್ಲಿ ಬಳಸ ಬೇಕು ಎಂಬುದನ್ನು ಕನ್ನಡಿಗರ ನುಡಿಕಸುವು ತಿಳಿದಿರುತ್ತದೆ. ಅದಕ್ಕೆ ತಕ್ಕಂತೆ ಅವರು **ಕೆಪಿಗಾ** ಎಂಬ ಹೆಸರು ಪದವನ್ನೂ ಬಳಸುತ್ತಿರುತ್ತಾರೆ.

ನುಡಿಯುವವರಲ್ಲಿ ನುಡಿ ಕಸುವು ಒಳಪದರವಾಗಿ ಇರುವುದು ಎಂಬುದನ್ನು ಒಪ್ಪಲು ಇನ್ನೂ ಕೆಲವು ಎತ್ತುಗೆಗಳನ್ನು ನೋಡೋಣ. ಕನ್ನಡ ನುಡಿಯನ್ನು ಅರಿತವರ

ಮುಂದೆ ಕೆಳಗೆ ಬರೆದ ಈ ಎರಡು ಸೊಲ್ಲುಗಳನ್ನು ಹೇಳಿ ನೋಡಿ. ಬಳಿಕ ಆ ಸೊಲ್ಲುಗಳು ಸರಿಯಾಗಿ ಇವೆಯೇ ಎಂದು ಕೇಳಿ ನೋಡಿ.

1. **ಕೋತಿ ನೆಗೆಯುತ್ತಾರೆ.**

2. **ಮಳೆ ಬಿಲ್ಲು ನೆಟ್ಟಗೆ ನಿಂತಿತ್ತು.**

ಕನ್ನಡ ನುಡಿಯುವವರು ಎರಡೂ ಸೊಲ್ಲುಗಳೂ ಸರಿಯಿಲ್ಲ ಎನ್ನುತ್ತಾರೆ. ಆದರೆ ಅವು ಏಕೆ ಸರಿಯಾಗಿಲ್ಲ ಎಂದು ಕೇಳಿದರೆ ಅದಕ್ಕೆ ಅವರು ಕೊಡುವ ಬದಲುಗಳು ಬೇರೆ ಬೇರೆಯಾಗಿರುತ್ತವೆ. ಎರಡನೆಯ ಸೊಲ್ಲಿನಲ್ಲಿ ಯಾವಾಗಲೂ ಬಾಗಿಯೇ ಇರುವ ಮಳೆಬಿಲ್ಲು, ನೆಟ್ಟಗೆ ಇತ್ತು ಎಂದು ಹೇಳಿರುವುದರಿಂದ ಅದು **ಸುಳ್ಳು** ಎನ್ನುತ್ತಾರೆ. ಆದರೆ ಮೊದಲನೆಯ ಸೊಲ್ಲಿನಲ್ಲಿ ಹೇಳಿರುವಂತೆ ಕೋತಿ ನೆಗೆಯುವುದನ್ನು ಅಲ್ಲಗಳೆಯುವುದಿಲ್ಲ. ಆದರೆ ಆ ಸೊಲ್ಲನ್ನು ತಿದ್ದಿ **ಕೋತಿ ನೆಗೆಯುತ್ತದೆ** ಎಂದೋ ಇಲ್ಲವೇ **ಕೋತಿ ನೆಗೆಯುತ್ತವೆ** ಎಂದೋ ತಿದ್ದಿ ಹೇಳಿಯಾರು.ಹಾಗಾಗಿ ಮೊದಲನೆಯದು **ತಪ್ಪು** ಸೊಲ್ಲು ಎಂದಾದರೆ ಎರಡನೆಯದು **ಸುಳ್ಳು** ಸೊಲ್ಲು ಎಂದಾಯಿತು. ಎರಡನೆಯ ಸೊಲ್ಲನ್ನು ಅವರು ತಿದ್ದುವುದೇ ಆದರೆ **ನೆಟ್ಟಗೆ** ಎಂಬ ಪದವನ್ನು ಬದಲಿಸಿ **ಬಾಗಿ** ಎಂದು ಹೇಳಬಹುದು. ಒಂದು ಸೊಲ್ಲು ನುಡಿಯ ಕಟ್ಟುಗಳನ್ನು ಮೀರಿದ್ದರೆ ಇನ್ನೊಂದು ಸೊಲ್ಲು ದಿಟವನ್ನು ಮರೆ ಮಾಚಿದೆ. ನುಡಿಯುವವರ ನುಡಿಕಸುವಿನಲ್ಲಿ ಸೊಲ್ಲಿನ ಸರಿಯಾದ ಕಟ್ಟು ಯಾವುದು ಎಂದು ತಿಳಿದಿದ್ದರಿಂದಲೇ ಅವರು ಮೊದಲನೆಯ ಸೊಲ್ಲಿನಲ್ಲಿ ತಪ್ಪು ಇದೆ ಎಂಬುದನ್ನು ಕಂಡು ಹಿಡಿಯಲು ಆಯಿತು ಅಲ್ಲವೇ? ಎರಡನೆಯ ಸೊಲ್ಲಿನಲ್ಲಿ ನುಡಿಯ ಕಟ್ಟನ್ನು ಮೀರಿಲ್ಲ. ಅದರಲ್ಲಿ ದಿಟವನ್ನು ಮರೆಮಾಚಿದೆ. ಅದನ್ನು ತಿದ್ದಲು ನುಡಿಕಸುವಿನ ನೆರವು ಬೇಕಿಲ್ಲ. ಮಳೆ ಬಿಲ್ಲು ಹೇಗಿರುತ್ತದೆ ಎಂಬ ತಿಳುವಳಿಕೆ ಇದ್ದರೆ ಸಾಕು. ಅಂತಹ ತಿಳುವಳಿಕೆ ಇಲ್ಲದಿದ್ದರೆ ಆಗ ಸುಳ್ಳು ಸೊಲ್ಲುಗಳನ್ನು ಗುರುತಿಸುವುದು ಆಗದ ಮಾತು. ಎತ್ತುಗೆಗಾಗಿ

ಬರ್ಲಿನ್ ನಗರದ ಉತ್ತರದಲ್ಲಿ ಒಂದು ಗಣೇಶನ ದೇವಾಲಯವಿದೆ.

ಎಂಬ ಸೊಲ್ಲನ್ನು ಕೇಳಿದಾಗ ಅದು ಸುಳ್ಳನ್ನು ಹೇಳುತ್ತಿದೆಯೋ ದಿಟವನ್ನು ಹೇಳುತ್ತಿದೆಯೋ ಎಂದು ಗುರುತಿಸಲಾರೆವು. ಅದಕ್ಕಾಗಿ ಬರ್ಲಿನ್ ನಗರಕ್ಕೆ ಹೋಗಿ ನೋಡಿ ಬರುವುದಂತೂ ಆಗದ ಮಾತು ತಾನೆ?

ಕನ್ನಡದ ಒಂದು ಒಳನುಡಿಯಿಂದ ಒಂದು ಎತ್ತುಗೆಯನ್ನು ನೋಡೋಣ. ಹಾಸನ ಜಿಲ್ಲೆಯ ಕೆಲವು ತಾಲೂಕುಗಳಲ್ಲಿ **ಕಿಟಕಿ, ಕೀಳು, ಗಿಡ, ಗೀಟು, ಕೆರೆ, ಕೇಳು, ಗೆರೆ** ಮುಂತಾದ ಪದಗಳನ್ನು **ಚಿಟಕಿ, ಚೀಳು, ಜಿಡ, ಜೀಟು, ಚೆರೆ, ಚೇಳು, ಜೆರೆ** ಎಂದು ನುಡಿಯುತ್ತಾರೆ. ಪದದ ಮೊದಲ ಉಲಿಕಂತೆಯ ಏರಿನ ತಡೆಯುಲಿಯಾದ **ಕ್/ಗ್** ಗಳನ್ನು **ಚ್/ಜ್** ಎಂದು ಬದಲಿಸಿರುವುದು ಈ ಎತ್ತುಗೆಗಳಲ್ಲಿ ಗೊತ್ತಾಗುತ್ತದೆ. ಆದರೆ **ಕಡಿ, ಗಳು, ಕುಡಿ, ಕೊಡು** ಮುಂತಾದ ಪದಗಳಲ್ಲಿ ಮೊದಲ ತಡೆಯುಲಿ **ಕ್/ಗ್** ಆಗಿದ್ದರೂ ಅವುಗಳ ಮೊದಲ ಉಲಿಗಳನ್ನು ಬದಲಿಸಿ **ಚಡಿ, ಜಳು, ಚುಡಿ, ಚೊಡು** ಎಂದು ನುಡಿಯುವುದಿಲ್ಲ. ನುಡಿಯರಿಗರು ಈ ಉಲಿ ಬದಲಾವಣೆ ಆಗುವ ಬಗೆಯನ್ನು

ಗುರುತಿಸಿ ಆ ಒಳನುಡಿಯನ್ನು ಆಡುವವರಲ್ಲಿ ಇರುವ ಒಂದು ಉಲಿಕಟ್ಟನ್ನು ಗೊತ್ತು ಮಾಡಿದ್ದಾರೆ. ಒಂದು ಪದದ ಮೊದಲ ಉಲಿಕಂತೆಯ ನಡುವಿನಲ್ಲಿ ಮುಂಬದಿಯ ತೆರೆದ ಉಲಿಗಳಿದ್ದರೆ (ಎ/ಏ/ಇ/ಈ) ಮತ್ತು ಆ ಉಲಿಕಂತೆಯ ಏರಿನಲ್ಲಿ **ಕ್/ಗ್** ಗಳಿದ್ದರೆ ಆಗ ಆ ತಡೆಯುಲಿಗಳನ್ನು **ಚ್/ಜ್** ಎಂದು ಬದಲಿಸುತ್ತಾರೆ ಎನ್ನುವುದೇ ಆ ಉಲಿಕಟ್ಟು.

1. k—>c/#kV—

2. g—>j/#kV—

ಈ ಕಟ್ಟಿನಲ್ಲಿ # ಗುರುತು ಪದದ ಮೊದಲು ಎಂಬುದನ್ನು ಹೇಳುತ್ತದೆ. V ಎಂದರೆ ಅದು **ಎ/ಏ/ಇ/ಈ** ಎಂಬ ತೆರೆದ ಉಲಿಗಳಲ್ಲಿ ಒಂದು ಎಂದು ತಿಳಿಯಬೇಕು.

ಉಳಿದ ಕಡೆ ಯಾವುದೇ ಬದಲಾವಣೆ ಇರುವುದಿಲ್ಲ. ಆ ಒಳ ನುಡಿಯ ಆಡುಗರಿಗೆ ಈ ಉಲಿಕಟ್ಟನ್ನು ಯಾರೂ ಹೇಳಿಕೊಡುವುದಿಲ್ಲ. ಅವರ ನುಡಿ ಕಸುವಿನಲ್ಲಿ ಅದು ಸೇರಿರುತ್ತದೆ. ಇದು ದಿಟವೇ ಎಂಬುದನ್ನು ಗೊತ್ತು ಮಾಡಲು ಹೀಗೆ ಮಾಡೋಣ. ಆ ನುಡಿಯನ್ನಾಡುವವರನ್ನು ಕನ್ನಡಕ್ಕೆ ಇಂಗ್ಲಿಶ್ ಇಲ್ಲವೇ ಬೇರೆ ನುಡಿಗಳಿಂದ ಬಂದ ಕೆಲವು ಪದಗಳನ್ನು ಹೇಳಲು ಕೋರೋಣ. ಆ ಪದಗಳು ಇವು: **ಕಿಲೋ, ಕೆಜಿ, ಗಿಲೀಟ್, ಗೀಸರ್, ಕೇರ್** ಆಗಿದ್ದರೆ ಅವರು ಆ ಪದಗಳನ್ನು **ಚಿಲೋ, ಚೆಜಿ, ಜಿಲೀಟ್, ಜೀಸರ್, ಚೇರ್** ಎಂದು ನುಡಿಯುತ್ತಾರೆ. ಈ ಹೊಸ ಪದಗಳಿಗೆ ತಮ್ಮಲ್ಲಿರುವ ಉಲಿಕಟ್ಟನ್ನು ಹೊಂದಿಸ ಬೇಕೆಂಬುದು ಅವರಿಗೆ ತಿಳಿದದ್ದು ಹೇಗೆ? ಈ ಉಲಿಕಟ್ಟು ನುಡಿಕಸುವಿನಲ್ಲಿ ಸೇರಿರುವುದರಿಂದಲೇ ಅವರು ಇಂತಹ ಬದಲಾವಣೆಗಳನ್ನು ಮಾಡಿಕೊಂಡರು. ಆದರೆ ಅವರ ಪದನೆರಿಕೆಯಲ್ಲಿ ಇರುವ ಪದಗಳನ್ನು ನುಡಿಯುವಾಗ ಮೇಲೆ ಹೇಳಿದ ಬಗೆಯ ಪದಗಳಲ್ಲಿ **ಕ್/ಗ್** ಎಂಬ ಉಲಿಗಳ ಬದಲು **ಚ್/ಜ್** ಎಂದು ಬದಲಿಸಿ ನುಡಿಯುತ್ತಾರೆ ಎಂದಾಯಿತು. ಅವರೆಗೆ ಅರಿಯದಿದ್ದ ಮತ್ತು ಬಳಸದಿದ್ದ ಪದಗಳಲ್ಲೂ ಈ ಉಲಿ ಬದಲಾವಣೆಯ ಕಟ್ಟನ್ನು ಬಳಸುತ್ತಾರೆ ಎಂದರೆ ಆ ಉಲಿಕಟ್ಟು ನುಡಿಕಸುವಿನಲ್ಲಿ ಸೇರಿರಲೇಬೇಕು. ಈ ಒಳನುಡಿಯನ್ನು ಆಡುವವರ ಜೊತೆಯಲ್ಲಿ ಮಾತಾಡುವ ಬೇರೆಯವರು (ಅದರಲ್ಲೂ ಮೇಲು ಜಾತಿಯ ಕಲಿತವರು) ಏನಾದರೂ **ಕಿಟಕಿ** ಬದಲಿಗೆ **ಚಿಟಕಿ** ಎಂದರೆ, **ಗಿಡ** ಎನ್ನುವ ಬದಲು **ಜಿಡ** ಎಂದರೆ ಈ ಒಳ ನುಡಿಯ ಆಡುಗರಿಗೆ ಕೋಪ ಬರುತ್ತದೆ. ತಮ್ಮನ್ನು ಅಣಕಿಸಲು ಹೀಗೆ ಮಾಡುತ್ತಿದ್ದಾರೆಂದು ತಿಳಿಯುತ್ತಾರೆ. ಈ ಮಾಹಿತಿ ಕೂಡ ಅವರ ನುಡಿಕಸುವಿನಲ್ಲಿ ಆ ಉಲಿಕಟ್ಟು ಸೇರಿರುವುದನ್ನು ಮತ್ತಷ್ಟು ಗಟ್ಟಿ ಮಾಡುತ್ತದೆ.

ಇನ್ನೂ ಒಂದು ಎತ್ತುಗೆಯನ್ನು ನೋಡೋಣ. ಕನ್ನಡ ಮಾತಾಡುವ ಕೆಲವರಿಗೆ ಒಂದೆರಡು ಉಲಿಗಳನ್ನು ಅದರಲ್ಲೂ **ರ್** ಎಂಬ ಉಲಿಯನ್ನು ಸರಿಯಾಗಿ ನುಡಿಯಲು ಆಗುತ್ತಿಲ್ಲ ಎಂದುಕೊಳ್ಳೋಣ. ಅವರು **ರ್** ಬದಲಿಗೆ **ಬ್, ಲ್** ಇಲ್ಲವೇ **ವ್** ಎಂದು ನುಡಿಯುತ್ತಿರ ಬಹುದು. ಅಂದರೆ **ಲಾರಿ** ಎಂಬ ಪದ ನುಡಿಯುವಾಗ **ಲಾವಿ** ಎನ್ನುತ್ತಾರೆ ಎಂದುಕೊಳ್ಳಿ. ಕೇಳಿಸಿಕೊಳ್ಳುತ್ತಿರುವವರು **ಲಾವಿ** ಎಂದು ಕೇಳಿಸಿಕೊಂಡರೂ

ಅದನ್ನು **ಲಾರಿ** ಎಂದೇ ತಿಳಿದುಕೊಳ್ಳುತ್ತಾರೆ. ಇದಕ್ಕೆ ಮಾತಾಡುತ್ತಿರುವ ಹೊತ್ತಿನಲ್ಲಿ ಅದು ಲಾರಿಯನ್ನೇ ಕುರಿತ ಮಾತು ಎಂದು ತಿಳಿಯಲು ಕೇಳಿಸಿಕೊಂಡವರಿಗೆ ಆಗುತ್ತದೆ. ಆದರೆ ಬದಲು ನುಡಿಯುವಾಗ ಯಾರಾದರೂ **ಲಾರಿ** ಎನ್ನುವ ಬದಲು ಬೇಕೆಂತಲೇ **ಲಾವಿ** ಎಂದು ನುಡಿದರೆ ಆಗ **ರ್** ಉಲಿಯನ್ನು ನುಡಿಯಲು ತೊಂದರೆ ಇರುವವರಿಗೆ ಬೇಸರ ಆಗುತ್ತದೆ. ಮುನಿಸಿಕೊಳ್ಳಲೂಬಹುದು. ಇದೇಕೆ ಹೀಗಾಗುತ್ತದೆ? ನುಡಿಯುತ್ತಿರುವವರು **ಲಾವಿ** ಎಂದು ಹೇಳುತ್ತಿದ್ದರೂ ಅದರ ಒಳಪದರದ ರೂಪ **ಲಾರಿ** ಎಂಬುದು ಅವರಿಗೆ ಗೊತ್ತಿರುತ್ತದೆ. ಆದರೆ ತಮ್ಮೊಡನೆ ಮಾತಾಡುತ್ತಿರುವವರು ಬೇಕೆಂತಲೇ **ಲಾರಿ** ಬದಲಿಗೆ **ಲಾವಿ** ಎಂದರೆ ಅದು ತಮ್ಮನ್ನು ಅಣಕಿಸುವಂತೆ ಮಾತಾಡುತ್ತಿದ್ದಾರೆ ಎಂದುಕೊಳ್ಳುತ್ತಾರೆ. ಇದು ಸರಿಯೇ ಸರಿ. ಇಲ್ಲಿ ನಮಗೆ ಬೇಕಾಗಿರುವುದಿಷ್ಟು. **ರ್** ಉಲಿಯನ್ನು **ವ್** ಎಂದು ನುಡಿದರೂ ಒಳ ಪದರದಲ್ಲಿ ಆ ಉಲಿ ಯಾವುದು ಎಂಬುದು ನುಡಿಯುವವರಿಗೆ ಮತ್ತು ಕೇಳಿಸಿಕೊಳ್ಳುವವರಿಗೆ ತಿಳಿದಿರುತ್ತದೆ. ಹಾಗಾಗಿ ನುಡಿ ನಡೆಯಲ್ಲಿ ಆಗುವ ಪಲ್ಲಟಗಳನ್ನು ನುಡಿ ಕಸುವಿನ ಮೂಲಕ ಸರಿಪಡಿಸಿಕೊಳ್ಳುತ್ತಿರುತ್ತಾರೆ. ಅಂದರೆ ನುಡಿಗೆ ಎರಡು ಪದರಗಳಿರುವ ಮಾತು ಇದರಿಂದಲೂ ದಿಟವೆಂಬುದು ಗೊತ್ತಾಗುವುದಷ್ಟೆ.

ಮಕ್ಕಳು ಮಾತಾಡುವುದನ್ನು ಕಲಿಯಲು ಮೊದಲು ಮಾಡಿದಾಗ ಏನೇನಾಗುತ್ತದೆ ಎಂಬುದನ್ನು ಎಚ್ಚರದಿಂದ ಗಮನಿಸಿದರೆ ನುಡಿಯಲ್ಲಿ ಎರಡು ಪದರುಗಳು ಇರುತ್ತವೆ ಎಂಬ ನೆಲೆ ಮತ್ತಷ್ಟು ಗಟ್ಟಿಗೊಳ್ಳಬಲ್ಲುದು. ಎತ್ತುಗೆಗಾಗಿ ಮಗುವೊಂದು **ನೀರು** ಎಂದು ಹೇಳುವುದು ಎಂದುಕೊಳ್ಳಿ. ಅದು ಹಲವು ಬೇರೆ ಬೇರೆ ಸೊಲ್ಲುಗಳಿಗೆಲ್ಲ ಒಂದೇ ರೂಪವಾಗಿರಬಹುದು. **ನನಗೆ ಕುಡಿಯಲು ನೀರು ಬೇಕು, ನೆಲದ ಮೇಲೆ ನೀರು ಚೆಲ್ಲಿದೆ, ನಾನು ನೋಡುತ್ತಿರುವ ಪುಸ್ತಕದ ಚಿತ್ರದಲ್ಲಿ ನೀರು ಕಾಣಿಸುತ್ತಿದೆ, ನಲ್ಲಿಯಲ್ಲಿ ನೀರು ಬೀಳುತ್ತಿದೆ**– ಹೀಗೆ ಹಲವು ಸೊಲ್ಲುಗಳನ್ನು ಈ ಒಂದೇ ಪದದಿಂದ ಮಗು ಹೇಳುತ್ತಿರುತ್ತದೆ. ಕೇಳಿಸಿಕೊಂಡವರಿಗೆ ಮಗು ಹೇಳುತ್ತಿರುವುದೇನನ್ನು ಎಂದು ತಿಳಿಯುವ ತಾಳ್ಮೆ ಇರಬೇಕು. ತಪ್ಪಾಗಿ ತಿಳಿದುಕೊಂಡರೆ ಮಗು ತಾನು ಹೇಳಿದ್ದು ಅದಲ್ಲ ಎಂದು ಹೇಳಿ ಮೊದಲು ಹೇಳಿದ **ನೀರು** ಪದವನ್ನೇ ಮತ್ತೆ ಹೇಳುವುದು. ಇದರಿಂದ ತಿಳಿಯುವುದಿಷ್ಟು, ಮಗುವಿಗೆ ತಾನು ಆಡಬೇಕಾಗಿರುವ ಸೊಲ್ಲಿನ ಒಳ ರಚನೆ ಗೊತ್ತಿದೆ. ಅದರೆ ಅದನ್ನು ನುಡಿ ನಡೆಯ ನೆಲೆ ತರಬೇಕಾದರೆ ಬೇಕಾದ ಹತ್ಯಾರುಗಳು ದೊರೆತಿರುವುದಿಲ್ಲ. ಹಾಗಾಗಿ ದೊರಕಿರುವ ಪದಗಳಿಂದಲೇ ಸೊಲ್ಲನ್ನು ಕಟ್ಟುತ್ತಿರುತ್ತದೆ. ಇದೆಲ್ಲವೂ ನುಡಿಯ ಎರಡು ಪದರಗಳ ಇರುವಿಕೆಯನ್ನು ಮತ್ತಷ್ಟು ಗಟ್ಟಿಗೊಳಿಸಿ ತಿಳಿಸುತ್ತವೆ.

ನುಡಿನಡೆಯಲ್ಲಿ ಇರುವುದು ನುಡಿಕಸುವಿನ ಹೊರ ರೂಪ. ನುಡಿಕಸುವು ಹೇಗಿರುತ್ತದೆ ಎಂಬುದನ್ನು ಹಿಡಿಯಲ್ಲಿ ಹಿಡಿದು ಬಣ್ಣಿಸಲು ಆಗುವುದಿಲ್ಲ. ಅದರೆ ಅದೊಂದು ಕಟ್ಟುಗಳ ಗಡಣ ಎಂದಷ್ಟೇ ಹೇಳಬಹುದು. ಕನ್ನಡದ ಬೇರೆ ಒಳ ನುಡಿಗಳನ್ನು ಆಡುತ್ತಿರುವವರು ಬೇರೆ ಬೇರೆ ನುಡಿನಡೆಗಳನ್ನು ಹೊಂದಿರುವಂತೆ ನಮಗೆ ತೋರುತ್ತದೆ. ಆದರೆ ಆ ಎಲ್ಲ ಒಳ ನುಡಿಗಳ ನುಡಿ ನಡೆಯ ಹಿಂದೆ ಒಂದೇ ನುಡಿಕಸುವು ಇರುತ್ತದೆ ಎಂಬುದನ್ನು ಮರೆಯಬಾರದು. ಇಲ್ಲದಿದ್ದರೆ ಒಂದು

ಒಳನುಡಿಯನ್ನು ಆಡುತ್ತಿರುವವರ ಮಾತು ಇನ್ನೊಂದು ಒಳನುಡಿಯನ್ನು ಆಡುತ್ತಿರುವವರಿಗೆ ಎಳ್ಳಷ್ಟೂ ತಿಳಿಯುತ್ತಿರಲಿಲ್ಲ. ಹಲವಾರು ಪದಗಳು ಒಳನುಡಿಯಿಂದ ಒಳನುಡಿಗೆ ಬೇರೆ ಬೇರೆ ಆಗಿರುತ್ತದೆ. ಹಾಗೆಯೇ ನುಡಿಕಸುವಿನಿಂದ **ನುಡಿನಡೆ** ರೂಪುಗೊಳ್ಳುವ ಕಟ್ಟುಗಳು ಬೇರೆ ಬೇರೆ ನೆಲೆಗಳಲ್ಲಿ ಕೆಲಸ ಮಾಡುತ್ತಿರಲೂಬಹುದು. ಆದರೆ ಎಲ್ಲ ನುಡಿನಡೆಗಳ ನುಡಿ ಕಸುವು ಮಾತ್ರ ಒಂದೇ ಆಗಿರಬೇಕು. ಅದೇ ಕನ್ನಡ ಎಂದು ಕರೆಯಲು ತಕ್ಕುದಾದುದು.

ಕನ್ನಡದ ಬೇರೆ ಬೇರೆ ಒಳನುಡಿಗಳಲ್ಲಿ ದೊರಕುವ ಒಂದು ಎತ್ತುಗೆಯನ್ನು ತೆಗೆದುಕೊಳ್ಳಿ. **ನೋಡೋಣ, ನೋಡಾಮು, ನೋಡ**ನ ಎಂಬ ಪದಗಳನ್ನು ಕೇಳಿಸಿಕೊಳ್ಳುತ್ತೇವೆ ಎಂದುಕೊಳ್ಳಿ. ಇವು ಸೊಲ್ಲುಗಳಲ್ಲಿ ಬಂದಾಗ ಒಂದೇ ಕೆಲಸವನ್ನು ಮಾಡುತ್ತವೆ. **ನೋಡ್** ಎಂಬ ಕೆಲಸ ಪದದೊಡನೆ ಬಂದು ಸೇರಿರುವ ಪತ್ತುಗೆಗಳು (**ಓಣ, ಆಮು ಮತ್ತು ಅನ**) ಬೇರೆ ಬೇರೆ ಆಗಿವೆ. ಅದರೆ ಈ ರಚನೆಗಳ ಹಿಂದಿರುವ ಸೊಲ್ಲರಿಮೆಯ ಕಟ್ಟುಗಳು ಮಾತ್ರ ಒಂದೇ ಆಗಿವೆ. ಮೊದಲು ಕೆಲಸ ಪದದ ದಿಂಡು ಬಳಿಕ ಹೊತ್ತನ್ನು ಹೇಳುವ ಪತ್ತುಗೆ ಕೊನೆಗೆ ಕೆಲಸ ಮಾಡುತ್ತಿರುವವರು ಯಾರು ಎಷ್ಟು ಮಂದಿ ಎಂಬುದನ್ನು ಹೇಳುವ ಪತ್ತುಗೆ ಇವೆಲ್ಲವೂ ಹಾಗೇ ಬರಬೇಕು. ಹಾಗಾಗಿ ಇವೆಲ್ಲದರ ಒಳ ಪದರದ ರಚನೆ ಮಾತ್ರ ಒಂದೇ ಅಗಿರುತ್ತದೆ. ಹಾಗಿರುವುದರಿಂದಲೇ ಒಂದು ಒಳನುಡಿಯಾಡುವ ಕನ್ನಡಿಗರು ಇನ್ನೊಂದು ಒಳನುಡಿಯನ್ನಾಡುವ ಕನ್ನಡಿಗರೊಡನೆ ಮಾತಾಡುವುದಕ್ಕೆ ಹಾಗೂ ಅವರು ಮಾತಾಡಿದ್ದನ್ನು ಅರಿಯುವುದಕ್ಕೆ ಆಗುತ್ತಿದೆ.

ಇಲ್ಲಿಯವರೆಗೆ ನಾವು ನುಡಿಯಲ್ಲಿರುವ ಎರಡು ಪದರಗಳ ಚಹರೆಗಳನ್ನು ತಿಳಿದೆವು. ಅವುಗಳ ನಡುವೆ ಇರುವ ನಂಟನ್ನು ಕೂಡ ಅರಿತೆವು. ಈ ಹಿನ್ನೆಲೆಯೊಡನೆ ನಾವೀಗ ಉಲಿಕಂತೆಗಳ ಚಹರೆಗಳನ್ನು ತಿಳಿಯಲು ಮುಂದಾಗಬಹುದು. ಎರಡು ಪದರಗಳ ಮಾದರಿಯನ್ನು ಸರಿಯಾಗಿ ಅರಿಯದಿದ್ದರೆ ಇಲ್ಲವೇ ಈ ಚೌಕಟ್ಟನ್ನು ಒಪ್ಪದಿದ್ದರೆ ಉಲಿಕಂತೆಗಳ ಚಹರೆಯನ್ನು ಅರಿಯುವುದಾಗಲೀ ಒಪ್ಪುವುದಾಗಲೀ ಆಗದು.ಇದಕ್ಕಾಗಿಯೇ ಈ ಎಲ್ಲ ಮಾತುಗಳನ್ನು ಬರೆಯಬೇಕಾಗಿ ಬಂತು.

ಆಡುಮಾತು ಮತ್ತು ಬರಹ

ಬಳಕೆಯ ಸೊಲ್ಲರಿಮೆಗಳು ಬರಹದ ನುಡಿಯನ್ನು ಬಣ್ಣಿಸುತ್ತವೆ. ಆಡು ಮಾತಿನ ಕಟ್ಟುಗಳನ್ನು ಬಣ್ಣಿಸಲು ಹೋಗುವುದಿಲ್ಲ. ಕೆಲವೊಮ್ಮೆ ಇವೆರಡರ ನಂಟನ್ನು ಬಣ್ಣಿಸ ಬೇಕಾಗಿ ಬಂದರೆ ಆಗ ಬರಹ ನುಡಿಯಿಂದ ಆಡುಮಾತಿನ ರೂಪಗಳು ಹೇಗೆ ಹುಟ್ಟುತ್ತವೆ ಎಂಬುದನ್ನು ತೋರಿಸಲು ಮುಂದಾಗುತ್ತವೆ. ಒಂದು ಸುಳುವಾದ ಎತ್ತುಗೆಯನ್ನು ನೋಡೋಣ. **ತಲೆ, ತಲಿ** ಮತ್ತು **ತಲ** ಈ ಮೂರೂ ಪದಗಳು ಕನ್ನಡದಲ್ಲಿ, ಅಂದರೆ ಅದರ ಒಳ ನುಡಿಗಳಲ್ಲಿ ಬಳಕೆಯಲ್ಲಿವೆ. ಇವುಗಳಲ್ಲಿ ಬರಹದ ಸೊಲ್ಲರಿಮೆ ಇಲ್ಲವೆ ಪದನೆರಿಕೆಗಳು **ತಲೆ** ಎಂಬುದನ್ನು ಮೊದಲ ರೂಪವೆಂದೂ **ತಲಿ** ಮತ್ತು **ತಲ** ಎಂಬುವು ಅದರಿಂದ ಹುಟ್ಟಿದುವೆಂದು ಹೇಳುತ್ತವೆ. ತುಂಗಭದ್ರಾ ನದಿಯ ಉತ್ತರಕ್ಕೆ ಕನ್ನಡ ಮಾತಾಡುವವರು **ತಲಿ** ಎನ್ನುತ್ತಾರೆ. ಕಾವೇರಿ ಮತ್ತು ಕಪಿಲಾ ನದಿಗಳ ತೆಂಕಣದ ನಾಡಿನವರು **ತಲ** ಎನ್ನುತ್ತಾರೆ. ಈ ಎರಡೂ ನಾಡುಗಳಲ್ಲಿ **ತಲೆ** ಎಂಬುದು **ತಲಿ** ಮತ್ತು **ತಲ** ಎಂಬುದಾಗಿ ಬದಲಾಗಿದೆ ಎನ್ನುವುದು ಬಳಕೆಯ ಸೊಲ್ಲರಿಮೆಗಳ ನಿಲುವು. ಇದರಿಂದ ಬರಹದಲ್ಲಿ ಯಾವ ರೂಪಕ್ಕೆ ಮನ್ನಣೆ ದೊರಕಿದೆಯೋ ಅದನ್ನು ನೆಮ್ಮಿಯೇ ಉಲಿದ ಬಗೆಗಳ ಹುಟ್ಟನ್ನು ಬಣ್ಣಿಸಲಾಗುತ್ತಿದೆ.

ಹೀಗಲ್ಲದೆ ಈ ಮೂರೂ ರೂಪಗಳಿಗೆ ದಿಂಡು ರೂಪ ಬೇರೊಂದು ಇದ್ದು ಅದರಿಂದ ಬೇರೆ ಬೇರೆ ಕಡೆಗಳಲ್ಲಿ ಕನ್ನಡದ ಈ ಮೂರೂ ರೂಪಗಳು ಹುಟ್ಟಿಕೊಂಡಿವೆ ಎಂದು ಬಣ್ಣಿಸಬಾರದೇಕೆ? ಇದು ದಿಟವಾದರೆ ಆಗ ಮೂರೂ ರೂಪಗಳು ಆಡು ಮಾತಿನಲ್ಲಿ ನೆಲೆಸಿದ್ದು ಅವುಗಳಲ್ಲಿ ಒಂದನ್ನು ಬರಹದ ನೆಲೆಗೆ ಒಯ್ದಿದ್ದಾರೆ ಎಂದು ಹೇಳಬೇಕಾಗುತ್ತದೆ. ಅಲ್ಲದೆ ಅದೇ ಸರಿಯಾದ ಬಣ್ಣನೆ ಕೂಡ.

ಇನ್ನೂ ಒಂದು ಎತ್ತುಗೆಯನ್ನು ತೆಗೆದುಕೊಳ್ಳೋಣ. **ಬರುತ್ತದೆ** ಎಂಬ ಬರಹದ ರೂಪಕ್ಕೆ ಸಾಟಿಯಾಗಿ ಕನ್ನಡದ ಬೇರೆ ಬೇರೆ ಒಳನುಡಿಗಳಲ್ಲಿ **ಬತ್ತದೆ. ಬರ್ತದೆ, ಬತ್ತೈತೆ, ಬತ್ತೈತಿ, ಬರತೈತಿ, ಬರತದ, ಬತ್ತು** ಮುಂತಾದ ರೂಪಗಳು ಬಳಕೆಯಲ್ಲಿವೆ. ಇವೆಲ್ಲವೂ **ಬರುತ್ತದೆ** ರೂಪದಲ್ಲಿರುವ ಸೊಲ್ಲರಿಮೆಯ ಕಟ್ಟುಗಳ ತಳಹದಿಯ ಮೇಲೆ ಹುಟ್ಟಿಕೊಂಡಿವೆ. ಸೊಲ್ಲರಿಮೆಯ ಬೇರೆ ಕಟ್ಟುಗಳನ್ನು ಇವುಗಳಿಗಾಗಿ ಬೇರೆಯಾಗಿ ರೂಪಿಸ ಬೇಕಿಲ್ಲ. ಅಂದರೆ ಕೆಲಸ ಪದದ ದಿಂಡು, ಹೊತ್ತನ್ನು ಹೇಳುವ ಪತ್ತುಗೆ ಮತ್ತು ಕೊನೆಯಲ್ಲಿ ಕೆಲಸ ಮಾಡಿದವರು ಯಾರು, ಎಷ್ಟು ಜನ ಎಂಬುದನ್ನು ಹೇಳುವ ಪತ್ತುಗೆಗಳು

ಸೇರಿವೆ. ಈ ಒಳನುಡಿಗಳ ಪದಗಳನ್ನು ಒಡೆದು ಈ ಎಲ್ಲ ತುಂಡುಗಳೂ ಅಲ್ಲಿರುವುದನ್ನು ತೋರಿಸಬಹುದು. ಈಗ ಇವುಗಳಲ್ಲಿ ಯಾವುದು ಬೇರು ಪದ ಎಂದು ಹೇಳುವುದು ಹೇಗೆ? ಮಾತಿನ ವರಸೆಯಲ್ಲಿ ಯಾರೂ ಕೂಡ **ಬರುತ್ತದೆ** ಎಂದು ನುಡಿಯುವುದಿಲ್ಲ, ಹಾಗೆ ನುಡಿಯವುದೇ ಆದರೆ ಅದಕ್ಕೆ ನುಡಿಯ ಕಟ್ಟುಗಳ ಚೌಕಟ್ಟನ್ನು ಮೀರಿದ ಯಾವುದಾದರೂ ಒತ್ತಡ ಇರಬೇಕಾಗುತ್ತದೆ. ಹಾಗಾಗಿ ಆಡು ಮಾತಿನ ರೂಪಗಳ ಪಟ್ಟಿಯಲ್ಲಿ ನಾವು **ಬರುತ್ತದೆ** ಎಂಬುದನ್ನು ಸೇರಿಸಲು ಬರುವುದಿಲ್ಲ. ಈಗಿರುವ ಕೇಳ್ವಿ ಹೀಗಿದೆ. **ಬರುತ್ತದೆ** ಎಂಬ ರೂಪದಿಂದ **ಬತ್ತದೆ** ಎಂಬ ರೂಪವನ್ನು ಪಡೆದುಕೊಳ್ಳಬೇಕೋ ಇಲ್ಲವೇ **ಬತ್ತದೆ** ಎಂಬ ರೂಪದಿಂದ **ಬರುತ್ತದೆ** ಎಂಬ ರೂಪವನ್ನು ಪಡೆದುಕೊಳ್ಳ ಬೇಕೋ ಎಂಬುದು. ಬರೆಯಲು ಮತ್ತು ಓದಲು ಕಲಿತವರು ಮಾತ್ರ **ಬರುತ್ತದೆ** ಎಂಬ ರೂಪವನ್ನು ಪಡೆದುಕೊಳ್ಳುತ್ತಾರೆ. ಬೇಕೆಂದರೆ ಬರಹದಲ್ಲಿ ಅದನ್ನು ಬಳಸಲೂ ಬಲ್ಲರು. ಆದರೆ ಆಡು ಮಾತಿನಲ್ಲೆ ಕನ್ನಡವನ್ನು ಉಳಿಸಿಕೊಂಡವರು **ಬರುತ್ತದೆ** ಎಂಬ ರೂಪದಿಂದ **ಬತ್ತದೆ** ಎಂಬ ರೂಪವನ್ನು ಪಡೆದುಕೊಳ್ಳುವ ಕಟ್ಟನ್ನು ಹೊಂದಿರುತ್ತಾರೆ ಎಂದು ಹೇಳುವುದು ಸರಿಯೇ?

ಇದೂ ಅಲ್ಲದೆ ಇನ್ನೂ ಒಂದು ದಿಕ್ಕಿನಿಂದ ನೋಡೋಣ. ನಾವು ಮೊದಲು ಕಲಿಯುವುದು ಆಡುಮಾತನ್ನು ತಾನೆ?ಅಂದರೆ ಆಡುಮಾತಿನ ರೂಪಗಳನ್ನು ಕಟ್ಟಲು ಬೇಕಾದ ಕಟ್ಟುಗಳು ನಮಗೆ ಮೊದಲು ತಿಳಿಯಬೇಕು. ಅವುಗಳನ್ನು ಬಳಸಿ ನಾವು ಮಾತಾಡುತ್ತಿರುತ್ತೇವೆ. ಬಳಿಕ ಕಲಿಯಲು ಹೋದಾಗ ಬರಹದ ನುಡಿ ಮತ್ತದರ ರೂಪಗಳ ಕಟ್ಟುಗಳನ್ನು ತಿಳಿಯುತ್ತೇವೆ. ಕನ್ನಡ ಮಾತಾಡುವ ಎಷ್ಟೋ ಜನರು ಈ ಕಟ್ಟುಗಳನ್ನು ಕಲಿಯುವುದೇ ಇಲ್ಲ. ಆದರೆ ಅವರು ಕನ್ನಡವನ್ನು ಮಾತಾಡುತ್ತಿರುತ್ತಾರೆ. ಹಾಗಾಗಿ ಬರಹದ ರೂಪಗಳಿಂದ ಆಡುಮಾತಿನ ರೂಪಗಳನ್ನು ಪಡೆಯಬೇಕು ಎಂದು ಹೇಳುವುದು ಸರಿಯಾಗದು.

ಈ ಎಲ್ಲ ಮಾತುಗಳ ಹಿನ್ನೆಲೆಯಲ್ಲಿ ನೋಡಿದರೆ ಒಂದು ನುಡಿಯ ಚಹರೆಯನ್ನು ಗುರುತಿಸಲು ಅದರ ಆಡುರೂಪವನ್ನೇ ನೆಮ್ಮುವುದು ಸರಿಯೆಂದು ಗೊತ್ತಾಗುತ್ತದೆ. ಆಡುರೂಪಗಳು ಹಲವು ಇರುವುದರಿಂದ ಅವುಗಳ ಸೊಲ್ಲರಿಮೆಗಳೂ ಬೇರೆ ಬೇರೆ ಇರುತ್ತವೆ ಎಂಬುದು ಕೆಲವರ ದಿಗಿಲು. ಇರುವಷ್ಟೂ ಆಡುಮಾತಿನ ಬಗೆಗಳಿಗೆ ಬೇರೆ ಬೇರೆ ಸೊಲ್ಲರಿಮೆಗಳು ಇರುವುದಾದರೆ ಆಗ ನುಡಿಯ ಬಳಕೆಯ ಕಲಿಕೆ ಎನ್ನುವುದು ಆಗದ ಮಾತೆಂಬುದು ಅಂತಹವರ ಅನಿಸಿಕೆ. ಅವರು ಅಂದು ಕೊಂಡಹಾಗೆ ಬೇರೆ ಬೇರೆ ಒಳನುಡಿಗಳಿಗೆ(ಅಂದರೆ ಅವುಗಳ ಆಡುಮಾತಿಗೆ) ಬೇರೆ ಬೇರೆ ಸೊಲ್ಲರಿಮೆಗಳು ಇರುವುದು ದಿಟವಾಗಿದ್ದರೆ ಈ ಮಾತನ್ನು ಒಪ್ಪಬೇಕಾಗುತ್ತಿತ್ತು. ಆದರೆ ಹಾಗಿರುವುದಿಲ್ಲ. ಎಲ್ಲ ಒಳನುಡಿಗಳ ಒಳ ಪದರಗಳ ರಚನೆಯಲ್ಲೂ ಒಂದೇ ಬಗೆಯ ಕಟ್ಟುಗಳಿರುತ್ತವೆ. ಹೆಚ್ಚೆಂದರೆ ಒಂದೊಂದರ ಪದ ನೆರಿಕೆಗಳು ಬೇರೆಬೇರೆ ಆಗಿರುತ್ತವೆ; ಕೆಲವು ಪತ್ತುಗೆಗಳು ಬೇರೆ ಬೇರೆ ಆಗಿರುತ್ತವೆ ಮತ್ತು ಕೆಲವು ಉಲಿ ಕಟ್ಟುಗಳು ಬೇರೆ ಆಗಿರುತ್ತವೆ. ಅದು ಒಳ ನುಡಿಗಳನ್ನು ಅವುಗಳ ಕಟ್ಟುಗಳನ್ನು ತಿಳಿಯಲು ಯಾವ ಅಡ್ಡಿಯನ್ನೂ ಉಂಟುಮಾಡುವುದಿಲ್ಲ.

ಬರಹ ಮತ್ತು ಮಾತುಗಳ ನಡುವೆ ಇರುವ ನಂಟನ್ನು ಕೆಲವರು 'ಮಾತನ್ನು ಕಣ್ಣಿಗೆ ಕಟ್ಟುವಂತೆ ಇರಿಸುವುದೇ ಬರಹ' ಎಂದು ಹೇಳಿ ಮುಂದೆ ಸಾಗುತ್ತಾರೆ. ಆದರೆ ಈ ಬಣ್ಣನೆ ಇಡಿಯಾಗಿ ಸರಿಯಲ್ಲ. ಮಾತು ಕಿವಿಗೂ, ಬರಹ ಕಣ್ಣಿಗೂ ಸೇರಿದ್ದು ಎಂಬುದು ದಿಟ. ಆದರೆ ಅದಲ್ಲದೆ ಇನ್ನೂ ಕೆಲವು ನೆಲೆಗಳಲ್ಲಿ ಒಂದು ಇನ್ನೊಂದರಿಂದ ಬೇರೆ ಆಗಿರುತ್ತದೆ. ಅದೆಲ್ಲವನ್ನೂ ಬಿಡಿಸಿ ಹೇಳಲು ಇಲ್ಲಿ ಆಗುವುದಿಲ್ಲ. ಕೆಲವು ಎಳೆಗಳನ್ನು ಮಾತ್ರ ಬಿಡಿಸಿ ಇಡಬಹುದಾಗಿದೆ. ಉಲಿಗಳ ನೆಲೆಯನ್ನು ನೋಡೋಣ. ಮಾತಿನಲ್ಲಿರುವ ಎಲ್ಲ ಉಲಿಗಳೂ ಬರಹದಲ್ಲಿ ಕಾಣಿಸುವುದಿಲ್ಲ. ಹಾಗೆಯೇ ಬರಹದಲ್ಲಿ ಕಾಣಿಸುವ ಅಷ್ಟೂ ಉಲಿಗಳನ್ನು ಮಾತಿನಲ್ಲಿ ನಾವು ಕೇಳುವುದಿಲ್ಲ. ಬರಹ ಮಾತಿನ ಕನ್ನಡಿ ಎಂಬುದು ಹಾಗಾಗಿ ಅಷ್ಟೊಂದು ಸರಿಯಾದ ಬಣ್ಣನೆಯಲ್ಲ.

ಎತ್ತುಗೆಗಾಗಿ ಕನ್ನಡದ **ಅಡ್ಡ, ಗಂಡು** ಮತ್ತು **ಅಡಕೆ** ಪದಗಳನ್ನು ನೋಡೋಣ. ಈ ಮೂರರಲ್ಲೂ **ಡ್** ಎಂಬ ಉಲಿ ಇದೆ. ಆದರೆ **ಅಡ್ಡ** ಮತ್ತು **ಗಂಡು** ಪದಗಳಲ್ಲಿರುವ **ಡ್** ಉಲಿ **ಅಡಕೆ** ಪದದಲ್ಲಿರುವ **ಡ್** ಉಲಿ ಇವೆರಡೂ ಬೇರೆ ಬೇರೆ .ಆದರೆ ಕೇಳುವ ನಮಗಾಗಲೀ ನುಡಿಯುವವರಿಗಾಗಲೀ ಈ ಉಲಿಗಳು ಬೇರೆ ಎಂದು ಅನಿಸುವುದೇ ಇಲ್ಲ. ಈ ಎರಡೂ ಉಲಿಗಳೂ ಯಾವ ಯಾವ ಕಡೆ ಕಾಣಿಸಿಕೊಳ್ಳ ಬೇಕು ಎಂಬ ಕಟ್ಟು ನಮ್ಮ ನುಡಿಕಸುವಿನಲ್ಲಿ ಇರುವುದರಿಂದ ಯಾವ ಗೊಂದಲವೂ ಉಂಟಾಗುವುದಿಲ್ಲ. (**ಅಡಕೆ** ಎಂಬುದನ್ನು **ಅಡ್ಕೆ** ಎಂದು ನುಡಿದರೆ ಆಗ **ಅಡಕೆ** ಪದದಲ್ಲಿರುವ **ಡ್** ಉಲಿ ತನ್ನ ಚಹರೆಯನ್ನು ಬದಲಿಸಿಕೊಂಡು **ಅಡ್ಡ** ಪದದ **ಡ್** ಉಲಿಯಂತೆಯೇ ಆಗಿಬಿಡುತ್ತದೆ)

ಇಂತಹ ಹತ್ತಾರು ಎತ್ತುಗೆಗಳನ್ನು ತೋರಿಸಬಹುದು. ಬೇರೆ ಬೇರೆ ಒಳನುಡಿಗಳಲ್ಲಿ ಬರಹದಲ್ಲಿ ಕಾಣಿಸದ ತೆರೆದ ಉಲಿಗಳು ಬಳಕೆಯಲ್ಲಿವೆ. ಅವುಗಳನ್ನು ಬರಹದಲ್ಲಿ ತೋರಿಸುವುದೇ ಇಲ್ಲ. ಇಲ್ಲವೇ ತೋರಿಸುವಾಗ ತಪ್ಪಾಗಿ ಬರೆಯಲಾಗುತ್ತದೆ. ಎತ್ತುಗೆಗಾಗಿ ಹೇಳುವುದಾದರೆ ತೆಂಕಣದಲ್ಲಿ **ಕೆರೆ** ಎಂದು ನಾವು ಬರೆಯುವ ಪದವನ್ನು ನುಡಿಯುವಾಗ ಪದದ ಮೊದಲ ತೆರೆದ ಉಲಿಯನ್ನು **ಎ** ಎನ್ನುವುದಕ್ಕೆ ಬದಲಾಗಿ ಬೇರೆ ತೆರೆದ ಉಲಿಯನ್ನು ನುಡಿಯುತ್ತಾರೆ. ಅದನ್ನು ಬರಹದಲ್ಲಿ ತೊರಿಸಬೇಕೆಂದವರು **ಕ್ಯರೆ** ಎಂದು ಬರೆಯುವುದುಂಟು (ಎಸ್.ಎಲ್. ಭೈರಪ್ಪನವರು ಚನ್ನರಾಯಪಟ್ಟಣದ ಆಸುಪಾಸಿನ ಕನ್ನಡದಲ್ಲಿರುವ ಈ ತೆರೆದ ಉಲಿಯನ್ನು ಅವರ ಕಾದಂಬರಿಗಳಲ್ಲಿ ಹೀಗೆ ಬರೆದಿರುವುದನ್ನು ನೋಡಬಹುದು) ಅಂದರೆ ಆಡು ನುಡಿಯಲ್ಲಿರುವ (ಒಂದು ಒಳನುಡಿಯಲ್ಲಿ ಕೇಳಸಿಗುವ) ತೆರೆದ ಉಲಿಯೊಂದನ್ನು ಬರೆಯಲು ಬೇಕಾದ ಬರಿಗೆಯು ಕನ್ನಡ ಬರವಣಿಗೆಯಲ್ಲಿ ಇಲ್ಲ.

ಇದೇನೇ ಇರಲಿ ಈ ಮುಂದಿನ ಬರವಣಿಗೆಯ ಮಟ್ಟಿಗೆ ಕನ್ನಡ ನುಡಿಯ ಆಡು ರೂಪವನ್ನು ಬಣ್ಣಿಸುವ ಗುರಿಯನ್ನು ಹೊಂದಲಾಗಿದೆ. ಮತ್ತು ಆಡುನುಡಿಯ ಒಳಪದರದ ರಚನೆ ಹೇಗಿರಬಹುದು ಎಂಬುದನ್ನು ಗುರುತಿಸಲೆಂದು ಮುಂದಿನ ಬರವಣಿಗೆಯನ್ನು ಮಾಡಲಾಗಿದೆ.

ಕನ್ನಡ ಆಡುಮಾತಿನ ಉಲಿಗಳು

ನಾವು ಗಂಟೆಗಟ್ಟಲೆ ಕನ್ನಡ ಮಾತಾಡುತ್ತಿದ್ದರೂ ನಾವು ಹೊರಡಿಸುವ ಉಲಿಗಳು ಮಾತ್ರ ಕೆಲವೇ ಕೆಲವು. ಆ ಉಲಿಗಳನ್ನೇ ಮತ್ತೆಮತ್ತೆ ನುಡಿಯುತ್ತಲೇ ಇರುತ್ತೇವೆ. ಹಾಗಾಗಿ ಕನ್ನಡದ ನುಡಿಯುಲಿಗಳು ಯಾವುವು ಎಂಬುದನ್ನು ಲೆಕ್ಕಹಾಕಬಹುದು. ಅಲ್ಲದೆ ಆ ಉಲಿಗಳ ಚಹರೆಯನ್ನು ಕೂಡ ಗುರುತು ಮಾಡಬಹುದು. **ಕನ್ನಡದ ನುಡಿಯುಲಿಗಳೆಲ್ಲ ಉಸಿರನ್ನು ಹೊರಹಾಕುವಾಗ ಉಂಟಾಗುವಂತಹವು**. ಬೇರೆ ಬೇರೆ ನುಡಿಗಳಲ್ಲಿ ಕೆಲವು ನುಡಿಯುಲಿಗಳು ಉಸಿರನ್ನು ಒಳಗೆ ತೆಗೆದುಕೊಳ್ಳುವಾಗ ಉಂಟಾಗುತ್ತವೆ. ಬೇರೆ ಬೇರೆ ನಾಡುಗಳ ನುಡಿಗಳಲ್ಲಿ ಇಂತಹ ನುಡಿಯುಲಿಗಳಿವೆ. ಆದರೆ ಕನ್ನಡದಲ್ಲಿ ಅಂತಹ ನುಡಿಯುಲಿಗಳು ಇದ್ದಂತಿಲ್ಲ. (ಈ ಮಾತನ್ನು ಅಲ್ಲ ಎನ್ನುವ ಎತ್ತುಗೆಯೊಂದು ಈಚಿನ ದಿನಗಳಲ್ಲಿ ಕಾಣಿಸಲು ತೊಡಗಿದೆ. ಹದಿ ಹರೆಯದ ಮಕ್ಕಳು ಅದರಲ್ಲೂ ಪಟ್ಟಣದಲ್ಲಿನ ಇಂಗ್ಲಿಶ್ ನುಡಿಯನ್ನು ಕಲಿತ ಹೆಣ್ಣುಮಕ್ಕಳು ಕೆಲವು ಪದಗಳ ಕೊನೆಯಲ್ಲಿರುವ **ಕ್** ಎಂಬ ತಡೆಯುಲಿಯನ್ನು ನುಡಿಯುವಾಗ ಉಸಿರನ್ನು ಒಳಗೆ ಎಳೆದುಕೊಂಡಂತೆ ತೋರುತ್ತದೆ. ಅದರಲ್ಲೂ ಸೊಲ್ಲಿನ ಕೊನೆಯಲ್ಲಿ ಬರುವ **ಬೇಕ್** ಎಂಬ ಪದವನ್ನು ನುಡಿಯುವಾಗ ಇದು ಎದ್ದು ಕಾಣುವಂತಿರುತ್ತದೆ. ಇದು ದಿಟವಾಗಿಯೂ ಉಸಿರನ್ನು ಒಳಗೆ ತೆಗೆದುಕೊಳ್ಳುವಾಗ ಉಂಟಾಗುವ ಉಲಿಯೋ ಅಲ್ಲವೋ ಎಂಬುದನ್ನು ಇನ್ನೂ ಹೆಚ್ಚು ಆಳವಾಗಿ ನೋಡಿ ಗಟ್ಟಿ ಮಾಡಿಕೊಳ್ಳಬೇಕಿದೆ.)

ನುಡಿಯುಲಿಗಳನ್ನು ಎರಡು ಗುಂಪುಗಳಲ್ಲಿ ಇರಿಸಲಾಗಿದೆ.

1. **ತೆರೆದ ಉಲಿಗಳು**

2. **ತಡೆಯುಲಿಗಳು**

   (ತಡೆಯುಲಿಗಳನ್ನು ಡಿ.ಎನ್.ಶಂಕರ ಬಟ್ ಅವರು ಮುಚ್ಚಿದ ಉಲಿ ಎನ್ನುತ್ತಾರೆ. ಈ ಬರಹದ ಮಟ್ಟಿಗೆ **ಮುಚ್ಚಿದ ಉಲಿ** ಎಂಬುದು ತಡೆಯುಲಿಯ ಒಂದು ಬಗೆ.)

ತೆರೆದ ಉಲಿಗಳು ಉಸಿರು ಬಾಯಿಯಿಂದ ಹೊರ ಹೋಗುವಾಗ ಆ ಗಾಳಿಯ ಹರಿವಿಗೆ ಎಲ್ಲಿಯೂ ಯಾವ ಅಡ್ಡಿಯೂ ಉಂಟಾಗದಿದ್ದಾಗ ಮೈದಳೆಯುವ ಉಲಿಗಳು. ಕನ್ನಡದಲ್ಲಿ **ಅ, ಉ, ಎ** ಮುಂತಾದವು ಈ ಮಾದರಿಯ ಉಲಿಗಳು. ಉಸಿರಿನ

ಹರಿವಿಗೆ ಎಲ್ಲಿಯೂ ಅಡ್ಡಿಯನ್ನು ಮಾಡದಿದ್ದರೂ ಬೇರೆ ಬೇರೆ ತೆರೆದ ಉಲಿಗಳು ಉಂಟಾಗುವುದು ಹೇಗೆ ಎಂಬ ಕೇಳ್ವಿಯನ್ನು ಮುಂದಿಡಬಹುದು. ಉಸಿರಿನ ಹರಿವಿಗೆ ಅಡ್ಡಿ ಮಾಡದಿದ್ದರೂ ಬಾಯಿಯ ಒಳಗೆ ಅದು ಹರಿಯುವ ಜಾಗವನ್ನು ಹೆಚ್ಚು ಕಡಿಮೆ ಮಾಡುವ ಮೂಲಕ ಬೇರೆ ಬೇರೆ ತೆರೆದ ಉಲಿಗಳನ್ನು ಉಂಟು ಮಾಡುತ್ತೇವೆ. ಹೀಗೆ ಉಸಿರಿನ ಹರಿವಿನ ಜಾಗವನ್ನು ಹೆಚ್ಚು ಕಡಿಮೆ ಮಾಡಲೆಂದು ಬಾಯಿಯ ಒಳಗೆ ನಾಲಿಗೆ ಹಿಂಬದಿ ಇಲ್ಲವೇ ಮುಂಬದಿಗಳನ್ನು ಮೇಲೆ ಕೆಳಗೆ ಮಾಡುತ್ತಿರುತ್ತೇವೆ. ಹಾಗೆಯೇ ಎರಡೂ ತುಟಿಗಳನ್ನು ಗುಂಡಾಗಿಸುವುದು ಇಲ್ಲವೇ ಉದ್ದಕ್ಕೆ ಅಗಲಿಸುವುದು ಇವೇ ಬೇರೆ ಬೇರೆ ಬಗೆಗಳಿಂದ ಉಸಿರಿನ ಹರಿವಿನ ತೆರಪನ್ನು ಹೆಚ್ಚು ಕಡಿಮೆ ಮಾಡುತ್ತೇವೆ.

ಉಸಿರಿನ ಹರಿವಿಗೆ ಅದು ಹರಿಯುವ ದಿಕ್ಕಿನಲ್ಲಿ ಎಲ್ಲಿಯಾದರೂ ಅಡ್ಡಿಯನ್ನು ಉಂಟು ಮಾಡಿದರೆ ಆಗ ತಡೆಯುಲಿಗಳನ್ನು ಕೇಳುತ್ತೇವೆ. **ಪ್** ಎಂಬ ಉಲಿಯನ್ನೇ ನೋಡಿ. ಉಸಿರು ಬಾಯಿಯಿಂದ ಇನ್ನೇನು ಹೊರಗೆ ಹೋಗಬೇಕು ಅನ್ನುವಾಗ ಎರಡೂ ತುಟಿಗಳನ್ನು ಹತ್ತಿರ ತಂದು ಉಸಿರನ್ನು ಕೊಂಚ ಹೊತ್ತು ತಡೆದು ಬಳಿಕ ಹೊರ ಹಾಕುತ್ತೇವೆ ತಾನೇ? ಆಗ **ಪ್** ಉಲಿ ನಮಗೆ ಕೇಳಿಸುತ್ತದೆ. ಉಸಿರಿನ ಹರಿವಿಗೆ ತಡೆಯನ್ನು ಉಂಟು ಮಾಡುವುದರಿಂದಾಗಿಯೇ ಈ ಉಲಿಗಳನ್ನು **ತಡೆಯುಲಿ**ಗಳೆಂದು ಕರೆಯುತ್ತೇವೆ.

ಬೇರೆ ಬೇರೆ ತಡೆಯುಲಿಗಳು ಉಂಟಾಗುವುದು ಹೇಗೆ? ಉಸಿರು ಹರಿಯುವ ದಾರಿಯಲ್ಲಿ ಯಾವ ಜಾಗದಲ್ಲಿ ಮತ್ತು ಹೇಗೆ ತಡೆಯನ್ನು ಒಡ್ಡುತ್ತೇವೆ ಎಂಬುದರಿಂದ ಬೇರೆ ಬೇರೆ ತಡೆಯುಲಿಗಳು ಉಂಟಾಗುತ್ತವೆ. ತುಟಿಗಳಿಂದ ಮೊದಲಾಗಿ ಗಂಟಲವರೆಗೂ ಎಲ್ಲಿಯಾದರೂ ಉಸಿರಿನ ಹರಿವಿಗೆ ಅಡ್ಡಿಯನ್ನು ತರಬಹುದು. ಹಾಗೆಯೇ ಉಸಿರಿನ ಹರಿವನ್ನು ಇಡಿಯಾಗಿ ಕೊಂಚ ಹೊತ್ತು ತಡೆದು ಬಳಿಕ ಬಿಡುವುದು, ಹೆಚ್ಚು ಒತ್ತಡದಿಂದ ಅದು ಹೊರ ನುಗ್ಗುವಂತೆ ಮಾಡುವುದು ಹೀಗೆ ಬೇರೆ ಬೇರೆ ಬಗೆಗಳಿಂದ ಬೇರೆ ಬೇರೆ ತಡೆಯುಲಿಗಳನ್ನು ಉಂಟುಮಾಡುತ್ತಿರುತ್ತೇವೆ.

ಇಲ್ಲಿ ನಾವು ಕನ್ನಡದ ನುಡಿಯುಲಿಗಳ ಚಹರೆಗಳನ್ನು ಕಂಡುಕೊಳ್ಳುವ ಗುರಿಯನ್ನು ಹೊಂದಿಲ್ಲ. ಆದರೆ ನುಡಿಯ ಒಳಪದರ ಮತ್ತು ಹೊರಪದರಗಳನ್ನು ಒಪ್ಪಿದ ಮೇಲೆ ನುಡಿಯುಲಿಗಳನ್ನು ಒಳಪದರದಲ್ಲಿ ಹೇಗೆ ಇರಿಸಿಕೊಳ್ಳಲಾಗುತ್ತದೆ ಎಂಬುದನ್ನು ತಿಳಿಯಬೇಕಿದೆ. ಅಂದರೆ ಕನ್ನಡದಲ್ಲಿ **ಕ್** ಮತ್ತ **ಗ್** ಎಂಬ ಎರಡು ತಡೆಯುಲಿಗಳಿವೆ ಎಂದುಕೊಳ್ಳಿ. ಇವೆರಡನ್ನೂ ನುಡಿಯುವಾಗ ಬಾಯಿಯ ಒಳಗೆ ನಾಲಗೆ ಎಲ್ಲಿರುತ್ತದೆ ಮತ್ತು ಉಸಿರಿನ ಹರಿವಿಗೆ ಹೇಗೆ ತಡೆಯನ್ನು ಉಂಟು ಮಾಡಲಾಗುತ್ತದೆ ಎಂಬುದನ್ನು ತಿಳಿದರೆ ಇವೆರಡೂ ಒಂದೇ ಉಲಿಗಳಂತೆ ನಮಗೆ ತೋರುತ್ತದೆ. ಆದರೆ **ಕ್** ಮತ್ತು **ಗ್** ಗಳನ್ನು ನುಡಿಯುವವರು ಹಾಗೂ ಅವುಗಳನ್ನು ಕೇಳಿದವರು ಅವೆರಡೂ ಬೇರೆ ಬೇರೆ ಉಲಿಗಳೆಂದು ತಿಳಿಯುವುದಂತೂ ದಿಟ. ಇವೆರಡನ್ನೂ ಬೇರೆ ಬೇರೆ ಮಾಡಲು ನಮ್ಮ ಗಂಟಲಿನ ಒಳಗೆ ಕೆಳಗಡೆ ಇರುವ ಉಲಿತಂತುಗಳನ್ನು ನಾವು ಬಳಸುತ್ತೇವೆ. ಉಸಿರಿನ ಹರಿವು ಈ ತಂತುಗಳ ನಡುವೆ ನುಗ್ಗಿ ಬರಬೇಕು. ಹಾಗೆ ನುಗ್ಗುವಾಗ ಈ

ತಂತುಗಳ ನಡುವೆ ಆ ಗಾಳಿಯ ಹರಿವು ಸಲೀಸಾಗಿ ಹೊರ ಬರಬಹುದು ಇಲ್ಲವೇ ಆ ತಂತುಗಳನ್ನು ಕೊಂಚ ಬಿಗಿ ಮಾಡಿಕೊಂಡರೆ ಉಸಿರು ಹೊರಬರುವಾಗ ಆ ತಂತುಗಳು ನಡುಗುತ್ತವೆ. **ಕ್** ಉಲಿಯನ್ನು ನುಡಿಯುವಾಗ ಉಲಿ ತಂತುಗಳು ಸಡಿಲವಾಗಿರುತ್ತವೆ. ಆದರೆ **ಗ್** ಉಲಿಯನ್ನು ನುಡಿಯುವಾಗ ಅವು ಬಿಗಿದು ಕೊಂಡಿರುತ್ತವೆ. ಇದರಿಂದ ತಿಳಿಯುವುದೇನು? ನುಡಿಯ ಒಳ ಪದರದಲ್ಲಿ **ಕ್** ಮತ್ತು **ಗ್** ಎಂಬ ಎರಡು ಉಲಿಗಳನ್ನು ಬೇರೆ ಬೇರೆ ಮಾಡಿ ಇರಿಸಿಕೊಳ್ಳಬೇಕಿಲ್ಲ. ಅವೆರಡಕ್ಕೂ ಒಂದೇ ಆಗಿರುವ ಚಹರೆಗಳನ್ನು ಇರಿಸಿಕೊಂಡು ಬೇರೆ ಬೇರೆ ಮಾಡುವ ಉಲಿ ತಂತುಗಳ ಸಡಿಲತೆ ಇಲ್ಲವೇ ಬಿಗಿ ಎಂಬ ಚಹರೆಯನ್ನು ಇರಿಸಿಕೊಂಡರೆ ಸಾಕು.

ಈ ಮೇಲಿನ ಮಾತುಗಳ ತಿರುಳು ಇಷ್ಟೆ. ನಾವು ನುಡಿಯುವ ಉಲಿಗಳನ್ನು ಒಳ ಪದರದಲ್ಲಿನ ನುಡಿ ಕಸುವು ಬೇರೆ ಬೇರೆಯಾಗಿ ಇರಿಸಿಕೊಳ್ಳಬೇಕಿಲ್ಲ. ಒಂದೊಂದು ಉಲಿಯೂ ಇನ್ನೊಂದು ಉಲಿಗಿಂತ ಹೇಗೆ ಬೇರೆ ಎಂಬುದನ್ನು ಮತ್ತು ಉಲಿಗಳ ಚಹರೆಗೆ ಬೇಕಾದ ಕೆಲವು ನುಡಿಯುವ ಬಗೆಗಳನ್ನು ಇರಿಸಿಕೊಂಡಿದ್ದರೆ ಸಾಕು. ಹಾಗಾಗಿ ನುಡಿಯುಲಿಗಳು ನಮಗೆ ಬೇರೆ ಬೇರೆ ಉಲಿಗಳಂತೆ ತೋರಿದರೂ ಅವು ತಮ್ಮಲ್ಲೇ ಒಂದು ಜಾಲವನ್ನು ಕಟ್ಟಿಕೊಂಡಿರುತ್ತವೆ. ಒಂದು ಇನ್ನೊಂದರೊಡನೆ ಹೊಂದಿರುವ ನಂಟನ್ನು ನುಡಿಯ ಒಳ ಪದರದಲ್ಲಿ ಇರಿಸಿಕೊಂಡಿರುತ್ತೇವೆ. ಇದರಿಂದಾಗಿ ಏನಾಗುವುದು? ನಾನು ನುಡಿದ ಉಲಿ **ಮ್** ಆಗಿದೆ ಎಂದುಕೊಳ್ಳಿ. ಇದನ್ನು ಕೇಳುವವರು ಎರಡು ನೆಲೆಗಳಲ್ಲಿ ಅರಿಯುತ್ತಾರೆ. 1. ಅವರು ಕೇಳಿದ ಉಲಿಗೆ ಇರುವ ಚಹರೆಗಳನ್ನು ಗುರುತಿಸುವುದರ ಜೊತೆಗೆ 2. ಕನ್ನಡದ ಬೇರೆ ನುಡಿಯುಲಿಯ ಯಾವ ಚಹರೆಯನ್ನೂ ಈ ಉಲಿಯು ಹೊಂದಿಲ್ಲ ಎಂಬುದನ್ನೂ ಗುರುತಿಸಿಕೊಳ್ಳುತ್ತಿರುತ್ತಾರೆ. **ಮ್** ಎಂದರೆ ಅದು **ಮ್** ಅಗಿರುವುದರ ಜೊತೆಗೆ ಕನ್ನಡದ ಬೇರೆ ಯಾವ ನುಡಿಯೂ ಅಲ್ಲ ಎಂಬುದನ್ನೂ ತಿಳಿದಿರಬೇಕಾಗುತ್ತದೆ.

ಇದೆಲ್ಲವೂ ನುಡಿಯುವವರ ಮತ್ತು ಕೇಳುವವರ ತಿಳಿವಿಗೆ ಬರುವಂತೆ ಆಗುವುದಿಲ್ಲ. ಅವರ ಅರಿವಿಗೇ ಬಾರದಂತೆ ಹೀಗೆ ಗುರುತಿಸುವುದು ನಡೆದೇ ಇರುತ್ತದೆ. ಒಂದು ವೇಳೆ ಯಾರಾದರೂ ಕನ್ನಡದಲ್ಲಿ ಬಳಕೆಯಲ್ಲಿ ಇಲ್ಲದ ಉಲಿಯೊಂದನ್ನು ನುಡಿದರು ಎಂದಿಟ್ಟುಕೊಳ್ಳಿ. ಆಗ ಕನ್ನಡ ನುಡಿಯುವವರು ಎರಡು ಬಗೆಯಲ್ಲಿ ಆ ಉಲಿಯನ್ನು ಗುರುತಿಸಬಹುದು **1. ಅದು ಕನ್ನಡದ ಉಲಿಯಲ್ಲ ಎಂದು ಗುರುತಿಸುವುದು**. ಇಲ್ಲವೇ **2. ಕನ್ನಡದಲ್ಲಿ ಇರುವ ಯಾವುದಾದರೊಂದು ಉಲಿಗೆ ತಾವು ಕೇಳಿದ ಹೊಸ ಉಲಿಯನ್ನು ಹೊಂದಿಸಿಕೊಳ್ಳುವುದು**. ಎರಡನೆಯ ಬಗೆಗೆ ಹಲವು ಎತ್ತುಗೆಗಳಿವೆ. ಸಂಸ್ಕೃತ ನುಡಿಯಿಂದ ಮತ್ತು ಕೆಲವು ಬೇರೆ ನುಡಿಗಳಿಂದ ಪಡೆದುಕೊಂಡ ಪದಗಳಲ್ಲಿ ಕೆಲವೊಮ್ಮೆ ಕನ್ನಡ ನುಡಿಯ ಉಲಿಜಾಲದಲ್ಲಿ ಇಲ್ಲದ ಉಲಿಗಳು ಇರುತ್ತವೆ. ಅಂತಹ ಪದಗಳನ್ನು ಕನ್ನಡಿಗರು ನುಡಿಯುವಾಗ ಆ ಉಲಿಗಳ ಜಾಗದಲ್ಲಿ ಕನ್ನಡದ ಉಲಿಗಳನ್ನು ನುಡಿಯುತ್ತಾರೆ. ಮೊದಲಿದ್ದ ಉಲಿ ಮತ್ತು ಬದಲಿಸಿದ ಉಲಿ ಎರಡೂ ಬೇರೆ ಬೇರೆಯಾದರೂ ನಮಗೆ, ಕನ್ನಡಿಗರಿಗೆ ಅವೆರಡೂ ಒಂದೇ ಅನಿಸಿರುತ್ತವೆ.

ಕನ್ನಡ ನುಡಿಯ ಉಲಿಕಂತೆಗಳ ಚಹರೆ

ಉಲಿಕಂತೆ ಎಂದರೇನು?

ಇಂಗ್ಲಿಶ್ ನುಡಿಯಲ್ಲಿ ದೊರಕುವ ನುಡಿಯರಿವಿನ ಬರಹಗಳಲ್ಲಿ **ಸಿಲೆಬಲ್** ಎಂಬ ಮಾತೊಂದನ್ನು ನೋಡುತ್ತೇವೆ. ಕನ್ನಡ ನುಡಿಯಲ್ಲಿ ಸಿಲೆಬಲ್ ಎಂಬ ಪದಕ್ಕೆ ಸಾಟಿಯಾಗಿ ಉಲಿಕಂತೆ ಎಂದು ಬಳಸಬಹುದಾಗಿದೆ. ಕನ್ನಡದ ಕೆಲವು ನುಡಿಯರಿಗರು ಸಿಲೆಬಲ್ ಪದಕ್ಕೆ ಸಾಟಿಯಾಗಿ ಅಕ್ಷರ ಎಂಬ ಪದವನ್ನು ಬಳಸಿದ್ದಾರೆ. ಆದರೆ ಅಕ್ಷರ ಎನ್ನುವುದು ಕಣ್ಣಿಗೆ ಕಾಣುವ ಬರಹಕ್ಕೆ ಸೇರಿದ್ದಾಗಿದೆ. ಸಿಲೆಬಲ್ ಎಂಬುದು ಬರಹಕ್ಕೆ ಸೇರಿದ್ದಲ್ಲ. ಅದು ನುಡಿಯುವಿಕೆ ಮತ್ತು ಕೇಳುವಿಕೆಯೊಡನೆ ನಂಟು ಪಡೆದ ಪದ. ಹಾಗಾಗಿ ಈ ಬರವಣಿಗೆಯಲ್ಲಿ ಸಿಲೆಬಲ್ ಪದಕ್ಕೆ ಸಾಟಿಯಾಗಿ ಉಲಿಕಂತೆ ಎಂದೇ ಬಳಸಲಾಗಿದೆ.

ನಾವು ಮಾತಾಡುವಾಗ ಏನು ಮಾಡುತ್ತಿರುತ್ತೇವೆ? ದಿಟವಾಗಿ ಹೇಳುವುದಾದರೆ ಬೇರೆಯವರ ಕಣ್ಣಿಗೆ ಕಾಣುವಂತೆ ಮತ್ತು/ಇಲ್ಲವೇ ಬೇರೆಯವರ ಕಿವಿಗೆ ಕೇಳುವಂತೆ ಉಲಿಗಳನ್ನು ಒಂದೇ ಸಮನೆ ಹೊರಡಿಸುತ್ತಿರುತ್ತೇವೆ. ಹಾಗೆ ನೋಡಿದರೆ ಮಾತಾಡುವುದು ಎಂದರೆ ಉಲಿಗಳನ್ನು ಒಂದಾದ ಮೇಲೊಂದರಂತೆ ನುಡಿಯುತ್ತಿರುವುದೇ ಆಗಿದೆ. ನಮಗೆ ಗೊತ್ತಿಲ್ಲದ ನುಡಿಯೊಂದನ್ನು ಕೇಳಿದಾಗ (ಎತ್ತುಗೆಗೆ ಜಪಾನಿ, ಸ್ವಾಹಿಲಿ, ಟರ್ಕಿಶ್ ನುಡಿಗಳು) ದಿಟದಲ್ಲಿ ಬರೀ ಉಲಿಗಳನ್ನು ಕೇಳಿಸಿಕೊಳ್ಳುತ್ತಿರುತ್ತೇವೆ.

ನುಡಿಯ ಕಟ್ಟಡವನ್ನು ತಿಳಿಸುವ ಸೊಲ್ಲರಿಮೆಗಳು (ಇಂತಹವು ಶಾಲೆಗಳಲ್ಲಿ ಮಕ್ಕಳಿಗೆ ವ್ಯಾಕರಣ ಎಂಬ ಹೆಸರಿನಲ್ಲಿ ಅವರ ಕಲಿಕೆಯಲ್ಲಿ ಸೇರ್ಪಡೆಯಾಗಿರುತ್ತವೆ) ಹೆಚ್ಚಾಗಿ ಉಲಿಗಳಿಂದ ಪದಗಳನ್ನು ಕಟ್ಟಿಕೊಳ್ಳುತ್ತೇವೆ ಎಂದು ಬಣ್ಣಿಸುತ್ತವೆ. ಇದು ಸರಿಯಾದ ಮಾತು. **ಹುಲಿ** ಎಂಬ ಪದವನ್ನು ಕಟ್ಟಲು ನಾವು ನಾಲ್ಕು ಉಲಿಗಳನ್ನು ಒಂದಾದ ಮೇಲೊಂದರಂತೆ ಬಳಸಿಕೊಳ್ಳುತ್ತೇವೆ. **ಹ್,ಉ,ಲ್** ಮತ್ತು ಇ ಎಂಬುವೇ ಆ ಉಲಿಗಳು. ಹುಲಿ ಪದವನ್ನು ನುಡಿಯುವಾಗ ಇವುಗಳನ್ನು ನುಡಿಯುವ ಸರತಿಯನ್ನು ಬದಲಿಸುವ ಹಾಗಿಲ್ಲ. ಬದಲಿಸಿದರೆ ಬೇರೆ ಯಾವುದೋ ಪದ ಹುಟ್ಟಿಕೊಳ್ಳಬಹುದು. **ಹಿಲು (ಹ್/ಇ/ಲ್/ಉ), ಲುಹಿ (ಲ್/ಉ/ಹ್/ಇ),ಲಿಹು (ಲ್/ಇ/ಹ್/ಉ)** ಮುಂತಾದ ಪದಗಳು ಹೀಗೆ ಹುಟ್ಟಿಕೊಳ್ಳಬಹುದಲ್ಲವೇ? ಆ ಪದಗಳಲ್ಲೂ ಅವೇ ನಾಲ್ಕು ಉಲಿಗಳಿವೆ. ಆದರೆ ಅವುಗಳನ್ನು ನುಡಿಯುವ ಸರತಿ ಮಾತ್ರ ಬೇರೆಬೇರೆಯಾಗಿದೆ. ಹದಿಹರೆಯದ ಮಕ್ಕಳು ನುಡಿಯ ಆಟಗಳನ್ನು ಆಡುವಾಗ ಹಿಂದುಮುಂದಾಗಿ ಮಾತಾಡುವ ಆಟವನ್ನು

ಆಡುತ್ತಾರೆ. ಆಗ ಅವರು ಹೀಗೆ ಪದಗಳಲ್ಲಿ ಇರುವ ಉಲಿಗಳ ಸರತಿಯನ್ನು ಬದಲಿಸಿ ಮಾತಾಡುವ ಹಾದಿಯನ್ನು ಹಿಡಿಯುವುದನ್ನು ನೋಡುತ್ತೇವೆ. ಆಗ **ಕೋಡುಬಳೆ** ಎಂಬುದು **ಬೋಡುಕಳೆ** ಎಂದೂ, **ಸೌತೆಕಾಯಿ** ಎಂಬುದು **ಕೌತೆಸಾಯಿ** ಎಂದೂ ಆಗುವುದುಂಟು. ಇಂತಹ ಆಟಗಳನ್ನು ಆಡುವ ಮಕ್ಕಳು ಉಲಿಗಳ ಸರತಿಯನ್ನು ಬೇಕಾಬಿಟ್ಟಿಯಾಗಿ ಬದಲಿಸುವುದಿಲ್ಲ. ಅದಕ್ಕೊಂದು ಕಟ್ಟನ್ನು ಇರಿಸಿಕೊಂಡಿರುತ್ತಾರೆ. ಆ ಕಟ್ಟನ್ನು ಆಟದಲ್ಲಿ ಕೇಳಿಸಿಕೊಳ್ಳುತ್ತಿರುವವರು ಕೂಡ ಬಲ್ಲವರಾಗಿರುತ್ತಾರೆ. ಹಾಗಾಗಿ ನುಡಿದವರು ಯಾವ ಪದವನ್ನು ಹೇಳಿದ್ದಾರೆ ಎಂಬುದನ್ನು ಅರಿತುಕೊಳ್ಳಬಲ್ಲರು. ಈ ಬಗೆಯ ಆಟಗಳನ್ನು ಇದೇ ಬರಹದಲ್ಲಿ ಮುಂದೆ ಮತ್ತೆ ನೋಡುತ್ತೇವೆ.

ಕನ್ನಡ ನುಡಿಯ ಉಲಿಕಂತೆಗಳ ರಚನೆ ಹೇಗಿರುತ್ತದೆ ಎಂದು ಕಂಡು ಹಿಡಿಯುವ ಕೆಲಸ ಹೆಚ್ಚು ಆಗಿಲ್ಲ. ಕನ್ನಡದಲ್ಲೇ ದೊರೆಯುವ ಕನ್ನಡ ನುಡಿಯರಿಮೆಯ ಬರಹಗಳಲ್ಲಿ ಉಲಿಕಂತೆಗಳನ್ನು ಬಣ್ಣಿಸುವುದಿಲ್ಲ. ಬರಹದ ರೂಪದಲ್ಲಿ ಕಾಣುವ ಅಕ್ಷರಗಳನ್ನೇ ಉಲಿಕಂತೆಗಳೆಂದು ಕೆಲವರು ತಿಳಿದಿದ್ದಾರೆ. ವರ್ಣ ಮತ್ತು ಅಕ್ಷರಗಳೆಂಬ ಪದಗಳನ್ನು ಉಲಿ ಮತ್ತು ಉಲಿಕಂತೆಗಳೆಂದು ಬಣ್ಣಿಸಿರುವುದುಂಟು. ಇಂಗ್ಲಿಶ್ ನುಡಿಯಲ್ಲಿ ಬಂದಿರುವ ಕನ್ನಡ ನುಡಿಯರಿಮೆಯ ಬರಹಗಳಲ್ಲಿ ಉಲಿಕಂತೆಗಳ ಚಹರೆಯನ್ನು ಬಣ್ಣಿಸಿರುವುದನ್ನು ಕಾಣುತ್ತೇವೆ. ಯು.ಪಿ.ಉಪಾಧ್ಯಾಯ, ಎಚ್.ಸ್ಪೆನ್ಸರ್, ಎಸ್.ಎನ್.ಶ್ರೀಧರ ಇವರ ನುಡಿಯರಿಮೆಯ ಬರಹಗಳಲ್ಲಿ ಕನ್ನಡ ನುಡಿಯ ಉಲಿಕಂತೆಗಳ ಚಹರೆಯನ್ನು ಹೇಳಿರುವುದುಂಟು. ಆದರೆ ಅಲ್ಲಿಯೂ ಹೆಚ್ಚು ಮಾಹಿತಿ ನಮಗೆ ದೊರೆಯುವುದಿಲ್ಲ. ಅಲ್ಲದೆ. ಕನ್ನಡ ಆಡು ಮಾತು ಮತ್ತು ಬರಹದ ನುಡಿಗಳಲ್ಲಿ ಯಾವುದರ ಉಲಿಕಂತೆಗಳ ಚಹರೆಯನ್ನು ಬಣ್ಣಿಸಬೇಕು ಎಂಬುದನ್ನು ಮೊದಲು ಗಟ್ಟಿ ಮಾಡಿಕೊಳ್ಳಬೇಕಾಗಿದೆ. ಆಡು ಮಾತಿನಲ್ಲೇ ಇರಬಹುದಾದ ಎಲ್ಲರೂ ತಿಳಿಯುವ ಆಡು ಕನ್ನಡದ ಉಲಿಕಂತೆಗಳ ಚಹರೆಯನ್ನು ಬಣ್ಣಿಸಿರುವುದೂ ತುಂಬಾ ಕಡಿಮೆ. ಹೀಗಾಗಿ ಒಳನುಡಿಗಳಲ್ಲಿ ಇರುವ ಉಲಿಕಂತೆಗಳ ಚಹರೆಯನ್ನು ಕಾಣುವ ಮಾತು ದೂರವೇ ಉಳಿಯಿತು. ಹಾಗೆಂದು ಒಂದೊಂದು ಒಳ ನುಡಿಗೂ ತನ್ನದೇ ಆದ ಉಲಿಕಂತೆಗಳ ರಚನೆ ಇರುತ್ತದೆ ಎಂದಲ್ಲ. ಆದರೆ ಉಲಿಕಂತೆಗಳ ಕಟ್ಟುಗಳಲ್ಲಿ ಕೆಲವು ಒಳನುಡಿಗಳು ಕೆಲವು ಆಯ್ಕೆಗಳನ್ನು ಮಾಡಿಕೊಂಡಿರುವುದುಂಟು. ಹಾಗಾಗಿ ಆಡುಮಾತಿನಲ್ಲಿ ಕಾಣುವ ಉಲಿಕಂತೆಗಳ ರಚನೆಯನ್ನು ತಿಳಿಯಬೇಕಿದೆ.

ಪದಗಳಲ್ಲಿ ಇರಬಹುದಾದ ಉಲಿಗಳು ಎಷ್ಟು?

ಒಂದೇ ಉಲಿಯಿರುವ ಪದಗಳೂ ಇವೆ. **ಆ,ಈ** ಇಂತಹ ಪದಗಳು. ಕನ್ನಡ ನುಡಿಯ ಮಟ್ಟಿಗೆ ಹೇಳುವುದಾದರೆ **ಈ ನುಡಿಯ ಪದಗಳಲ್ಲಿ ಒಂದು ಉಲಿಯಿಂದ ಮೊದಲಾಗಿ ಆರು ಉಲಿಗಳಿರುವ ಪದಗಳೇ ಹೆಚ್ಚಾಗಿ ಇರುವುದು**. ಆರಕ್ಕಿಂತ ಹೆಚ್ಚಿನ ಉಲಿಗಳನ್ನು ಕನ್ನಡ ನುಡಿಯಲ್ಲಿ ಬಳಕೆಯಾಗುವ ಪದಗಳಲ್ಲಿ ನಾವು ಕೇಳುವುದುಂಟು. ಆದರೆ ಅವೆಲ್ಲವೂ ಬೇರೊಂದು ನುಡಿಯಿಂದ ಕನ್ನಡ ಪಡೆದುಕೊಂಡ ಪದಗಳೇ ಆಗಿರುತ್ತವೆ. **ಅವಸರ (8), ಜಾನುವಾರು (8), ಅಹಂಕಾರ(7),ನಿರ್ದೇಶನ (9)** ಮುಂತಾದ ಪದಗಳಲ್ಲಿ ಆರಕ್ಕಿಂತ ಹೆಚ್ಚು ಉಲಿಗಳಿವೆ ಎನ್ನುವುದು ದಿಟ. ಆದರೆ ಇವೆಲ್ಲವೂ ಬೇರೆ ನುಡಿಗಳಿಂದ ಕನ್ನಡಕ್ಕೆ ಬಂದಿವೆ. ಈ ಮಾತು ಹಾಗಿರಲಿ.

ಪದಗಳಲ್ಲಿ ಉಲಿಗಳು ಎಷ್ಟೇ ಇರಲಿ.ಪದವನ್ನು ನುಡಿಯುವಾಗ ತೋರಿಕೆಗೆ ಅದರಲ್ಲಿರುವ ಎಲ್ಲ ಉಲಿಗಳನ್ನೂ ಒಂದಾದ ಮೇಲೊಂದರಂತೆ ನುಡಿದಂತೆ ತೋರಿದರೂ ದಿಟದಲ್ಲಿ ಆ ಪದದಲ್ಲಿರುವ ಉಲಿಗಳು ತಮ್ಮೊಳಗೇ ಗುಂಪುಗಳನ್ನು ಕಟ್ಟಿಕೊಂಡಿರುತ್ತವೆ. (ಬೇರೊಂದು ಎತ್ತುಗೆಯನ್ನು ಗಮನಿಸಿ. ಒಂದು ಪದ್ಯದ ಸಾಲೊಂದರಲ್ಲಿ ಎಷ್ಟೇ ಪದಗಳಿದ್ದರೂ ಆ ಸಾಲಿನ ಉಲಿಗಳು ಗೊತ್ತಾದ ಬಗೆಯಲ್ಲಿ ಒಳಗುಂಪುಗಳನ್ನು ಮಾಡಿಕೊಂಡಿರಬೇಕೆಂಬ ಕಟ್ಟು ಇರುವುದಷ್ಟೇ? ಹದಿನಾಲ್ಕು ಮಾತ್ರೆಗಳ ಸಾಲಿರುವ ಭಾಮಿನಿ ಷಟ್ಪದಿಯ ಸಾಲಿನಲ್ಲಿ ಮೂರು,ನಾಲ್ಕು,ಮೂರು ಮತ್ತು ನಾಲ್ಕು ಸಾಲುಗಳ ನಾಲ್ಕು ಗಣಗಳಿರಲೇ ಬೇಕು. ಹೊಸಗಾಲದ ಪದ್ಯವೊಂದನ್ನು ನೋಡಿ. **ಯಾವ ಮೋಹನ ಮುರಲಿ ಕರೆಯಿತು ದೂರ ತೀರಕೆ ನಿನ್ನನು?** ಎಂಬ ಸಾಲಿನಲ್ಲಿ ಹೀಗೆಯೇ ಮೂರು ಮತ್ತು ನಾಲ್ಕು ಮಾತ್ರೆಗಳ ಒಳ ಗುಂಪುಗಳು ಒಂದಾದ ಮೇಲೊಂದರಂತೆ ಬರುತ್ತವೆ. ಈ ನಿಟ್ಟಿನಲ್ಲಿ ನೋಡಿದರೆ ಪದಗಳು ಎಷ್ಟಿವೆ ಎಂಬುದಕ್ಕಿಂತ ಅಲ್ಲಿ ಈ ಮಾತ್ರೆಗಳ ಕಟ್ಟು ಇದೆಯೋ ಇಲ್ಲವೋ ಎಂಬುದನ್ನು ಕರಾರುವಾಕ್ಕಾಗಿ ನೋಡುತ್ತೇವೆ. **ದೋಣಿ ಸಾಗಲಿ ಮುಂದೆ ಹೋಗಲಿ ದೂರ ತೀರವ ಸೇರಲಿ** ಎಂಬ ಸಾಲಾಗಲೀ, **ಪಡುವ ದಿಬ್ಬದ ಗೌಡನೊಬ್ಬನು ಬಿಡದೆ ತೊರೆಯನ ಕೂಗಿಕೊಂಡನು** ಎಂಬ ಸಾಲಾಗಲೀ **ಧರಣಿಮಂಡಲ ಮಧ್ಯದೊಳಗೆ ಇರುವ ಕಾಳಿಂಗನೆಂಬ ಗೊಲ್ಲನ** ಎಂಬ ಸಾಲಾಗಲೀ ಒಂದೇ ಕಟ್ಟನ್ನು ಹೊಂದಿವೆ) ಅಂದರೆ ಹೀಗೆಯೇ ಪದಗಳಲ್ಲಿರುವ ಉಲಿಗಳು ಕೂಡ ತಮ್ಮೊಳಗೇ ಒಳಗುಂಪುಗಳನ್ನು ಮಾಡಿಕೊಳ್ಳುತ್ತವೆ ಎಂದಾಯಿತು. ಪದದಲ್ಲಿರುವ ಉಲಿಗಳು ಮಾಡಿಕೊಳ್ಳುವ ಒಳಗುಂಪುಗಳನ್ನು ಉಲಿಕಂತೆಗಳೆಂದು ಗುರುತಿಸುತ್ತೇವೆ.

ಉಲಿಕಂತೆಗಳು ಇರುತ್ತವೋ, ಇಲ್ಲವೇ ಅವು ಇವೆ ಎಂದು ನಾವು ಸುಮ್ಮನೆ ತಿಳಿಯುತ್ತೇವೆಯೋ?

ಈ ಕೇಳ್ವಿಯೂ ಕೂಡ ಬದಲನ್ನು ಬಯಸುತ್ತದೆ. ಕೆಲವೊಮ್ಮೆ ಇದೆಯೆಂದು ತಿಳಿದದ್ದು ನಮ್ಮ ಅನಿಸಿಕೆ ಮಾತ್ರ ಆಗಿದ್ದು ದಿಟವಾಗಿ ಅದು ಅಲ್ಲಿ ಇಲ್ಲದೆಯೂ ಇರಬಹುದು ತಾನೆ? ಆದರೆ ಜಗತ್ತಿನ ಹೆಚ್ಚು ನುಡಿಗಳನ್ನು ಅವುಗಳ ಕಟ್ಟುಗಳನ್ನು ಅರಿಯಲು ಮುಂದಾದ ಹಲವು ನುಡಿಯರಿಗರು ಎಲ್ಲ ನುಡಿಗಳಲ್ಲೂ ಪದಗಳ ಉಲಿಗಳು ಒಳಗುಂಪುಗಳನ್ನು ಮಾಡಿಕೊಳ್ಳುವುದನ್ನು ಗುರುತಿಸಿದ್ದಾರೆ. ಅಲ್ಲದೆ ಈ ಉಲಿಕಂತೆಗಳಿಗೆ ಒಂದು ಗೊತ್ತಾದ ಚಹರೆ ಇರುವುದನ್ನೂ ಪತ್ತೆ ಮಾಡಿದ್ದಾರೆ. ಹಾಗಾಗಿ ಉಲಿಕಂತೆಗಳು ನಮ್ಮ ನುಡಿಯುವಿಕೆಯಲ್ಲೇ ಅಳವಟ್ಟಿರುವ ಉಲಿಗಳ ಗುಂಪುಗಳೆಂಬುದು ದಿಟ. ಇದನ್ನು ದಿಟವೆಂದು ತೋರಿಸಿಕೊಡಲು ಹಲವಾರು ನೆಲೆಗಳಿವೆ. ಈ ಬರಹದಲ್ಲೇ ಆ ನೆಲೆಗಳನ್ನು ನಾವು ಕಂಡುಕೊಳ್ಳಲಿದ್ದೇವೆ.

ಉಲಿಕಂತೆಗಳನ್ನು ಮತ್ತು ಅವುಗಳ ಕಟ್ಟುಗಳನ್ನು ಏಕೆ ಅರಿತುಕೊಳ್ಳಬೇಕು?

ಪದಗಳೆಂದು ಹೇಳುವ ಉಲಿಗಳ ಗುಂಪಿನ ಕಟ್ಟಡವನ್ನು ಸರಿಯಾಗಿ ಅರಿಯಲು ಉಲಿಕಂತೆಗಳ ಚಹರೆಗಳನ್ನು ತಿಳಿದುಕೊಳ್ಳಬೇಕಾಗುತ್ತದೆ. ಎತ್ತುಗೆಗಾಗಿ ಕನ್ನಡದಲ್ಲಿ ಪದಗಳ ಮೊದಲಲ್ಲಿ ಒಂದಕ್ಕಿಂತ ಹೆಚ್ಚು ತಡೆಯುಲಿಗಳು ಬರುವುದಿಲ್ಲವೇಕೆ ಎಂಬ ಕೇಳ್ವಿಯನ್ನು ಎದುರಿಗೆ ಇರಿಸಿಕೊಳ್ಳೋಣ. ಅಂತಹ ಪದಗಳು ಕನ್ನಡದಲ್ಲಿ ಇಲ್ಲವಾದ್ದರಿಂದ

ಹೀಗಾಗುತ್ತದೆ ಎಂದು ಹೇಳಿ ಸುಮ್ಮನಾಗುತ್ತೇವೆ. ಎತ್ತುಗೆಗಾಗಿ ಸಂಸ್ಕೃತದಲ್ಲಿ **ಕ್ರಮ,ಧ್ರುವ, ಶ್ಲೇಷೆ,ನ್ಯಾಯ** ಮುಂತಾದ ಪದಗಳಿವೆ. ಹಾಗೆಯೇ ಇಂಗ್ಲಿಶ್ ನುಡಿಯಲ್ಲಿ **ಕ್ಲಾಸ್, ಕ್ರಾಸ್, ಸ್ಪ್ರಿಂಗ್** ಮುಂತಾದ ಪದಗಳಿವೆ. ಈ ಪದಗಳ ಮೊದಲಲ್ಲಿ ಒಂದಕ್ಕಿಂತ ಹೆಚ್ಚು ತಡೆಯುಲಿಗಳಿವೆ. ಆದರೆ ಕನ್ನಡದಲ್ಲಿ ಇಂತಹ ಪದಗಳು ಇಲ್ಲ. ಇದೇಕೆ? ಇದನ್ನು ತಿಳಿಯ ಬೇಕಾದರೆ ಕನ್ನಡದ ಉಲಿಕಂತೆಗಳ ಕಟ್ಟನ್ನು ತಿಳಿಯಬೇಕಾಗುತ್ತದೆ.

ಇದಲ್ಲದೆ ನುಡಿಯನ್ನು ಮಕ್ಕಳು ಕಲಿಯುವಾಗ ಆಗಲಿ, ದೊಡ್ಡವರು ಕಲಿಯುವಾಗ ಆಗಲಿ 'ತಪ್ಪು'ಗಳನ್ನು ಮಾಡುತ್ತಾರೆಂದು ತಿಳಿದಿದ್ದೇವೆ. ಇಂತಹ ತಪ್ಪುಗಳು ನುಡಿಯುವಿಕೆಯಲ್ಲೂ ಕಂಡುಬರುತ್ತವೆ. ಮಕ್ಕಳು **ಡಬ್ಬ** ಪದವನ್ನು **ಬಡ್ಡ** ಎಂದೂ, **ಕಂಬ** ಎನ್ನುವುದನ್ನು **ಬಂಕ** ಎಂದೂ ಹೇಳುವುದನ್ನು ಕೇಳಿದ್ದೇವೆ. ಇಂತಹ ಹಲವಾರು ತಪ್ಪು ನುಡಿಯುವಿಕೆಗಳನ್ನು ಪಟ್ಟಿ ಮಾಡಬಹುದು. ಇಂತಹ ತಪ್ಪುಗಳ ಚಹರೆಗಳನ್ನು ಅರಿಯಲು ಉಲಿಕಂತೆಗಳ ರಚನೆಯನ್ನು ಮೊದಲು ತಿಳಿದಿರಬೇಕಾಗುತ್ತದೆ. ಇದಲ್ಲದೆ ಉಲಿಕಂತೆಗಳ ರಚನೆಯ ತಿಳಿವನ್ನು ಬಳಸುವ ಇನ್ನೂ ಹಲವು ನೆಲೆಗಳಿವೆ. ಅವುಗಳನ್ನೂ ಮುಂದೆ ತಿಳಿಯಲಿದ್ದೇವೆ.

ಉಲಿಕಂತೆಗಳೆಂದರೆ ಪದಗಳ ಒಳಗೆ ಇರುವ ಉಲಿಗಳು ಮಾಡಿಕೊಂಡ ಒಳಗುಂಪುಗಳೆಂದಾಯ್ತು. ಈ ಒಳಗುಂಪುಗಳನ್ನು ಮಾಡಿಕೊಳ್ಳುವಾಗ ಏನಾದರೂ ಕಟ್ಟುಗಳನ್ನು ಗುರುತಿಸಲು ಆಗುತ್ತದೆಯೇ ಎಂಬುದು ಮುಂದಿನ ಕೇಳ್ವಿ. ನೂರಾರು ನುಡಿಗಳನ್ನೂ ಅವುಗಳ ಸೊಲ್ಲರಿಮೆಗಳನ್ನೂ ಅರಿತ ನುಡಿಯರಿಗರು ಯಾವುದೇ ನುಡಿಯಿರಲಿ ಅವುಗಳಲ್ಲಿರುವ ನುಡಿಕಂತೆಗಳು ಎರಡು ಬಗೆಯ ಕಟ್ಟುಗಳನ್ನು ಹೊಂದಿರುವುದನ್ನು ಗುರುತಿಸಿದ್ದಾರೆ.

1. ಉಲಿಕಂತೆಯೊಂದರಲ್ಲಿ **ಒಂದು ಮತ್ತು ಒಂದು ಮಾತ್ರ** ತೆರೆದ ಉಲಿ ಇರಬೇಕು. ಬರಿಯ ತಡೆಯುಲಿಗಳು ಒಟ್ಟುಗೂಡಿ ತಮ್ಮಲ್ಲೇ ಒಂದು ಉಲಿಕಂತೆಯನ್ನು ಕಟ್ಟಿಕೊಂಡಿರುವ ಉದಾಹರಣೆಗಳು ಯಾವ ನುಡಿಯಲ್ಲೂ ನಮಗೆ ದೊರಕಿಲ್ಲ. ಈ ಕಟ್ಟು ಕಡ್ಡಾಯ. ಇದಕ್ಕೆ ವಿನಾಯತಿ ಎಂಬಂತೆ ತಡೆಯುಲಿಗಳು ಮಾತ್ರ ಇರುವ ಉಲಿಕಂತೆಗಳನ್ನು ಕೆಲವು ನುಡಿಗಳಿಂದ ತೋರಿಸಬಹುದು. ಆದರೆ ಅಂತಹ ಉಲಿಕಂತೆಗಳಲ್ಲಿರುವ ತಡೆಯುಲಿಗಳಲ್ಲಿ ಒಂದು ಉಲಿ ತೆರೆದ ಉಲಿಯ ಹಾಗೆ ವರ್ತಿಸುತ್ತಿರುತ್ತದೆ.

2. ಒಂದು ಉಲಿಕಂತೆಯಲ್ಲಿ ಕಡ್ಡಾಯವಾಗಿ ಬರುವ ತೆರೆದ ಉಲಿಗಿಂತ ಮೊದಲು ಮತ್ತು ಅದರ ಬಳಿಕ ಎಷ್ಟು ತಡೆಯುಲಿಗಳಿರಬೇಕು ಎಂಬುದು ನುಡಿಯಿಂದ ನುಡಿಗೆ ಬದಲಾಗುತ್ತಾ ಹೋಗುತ್ತದೆ.ಅಂದರೆ ಉಲಿಕಂತೆಯಲ್ಲಿರುವ (ಇಲ್ಲವೇ ಇರಲೇ ಬೇಕಾದ) ತೆರೆದ ಉಲಿಗೆ ಮೊದಲು ತಡೆಯುಲಿ ಬರಬಹುದಾದರೆ ಅವು ಎಷ್ಟಿರಬಹುದು ಮತ್ತು ಅದರ ಬಳಿಕ ಬರಬಹುದಾದ ತಡೆಯುಲಿಗಳು ಎಷ್ಟಿರ ಬಹುದು ಎಂಬುದು ನುಡಿಯಿಂದ ನುಡಿಗೆ ಬದಲಾಗುತ್ತಾ ಹೋಗುತ್ತದೆ.

CVC

CCVC

CCVCC

ಮೇಲೆ ಹೇಳಿರುವಂತೆ ತಡೆಯುಲಿಗಳನ್ನು C ಎಂದೂ ತೆರೆದ ಉಲಿಯನ್ನು V ಎಂದೂ ಗುರುತಿಸಿಕೊಳ್ಳಬೇಕು. ಉಲಿಕಂತೆಯ ನಡುವನ್ನು V ಎಂದುಕೊಳ್ಳಿ. ಉಲಿಕಂತೆಯಲ್ಲಿ ನಡುವಿಗಿಂತ ಮೊದಲು ತಡೆಯುಲಿ ಬಂದಿರುವುದಕ್ಕೆ CVC ಮಾದರಿಯಾಗಿದೆ. ಅದೇ ಉಲಿಕಂತೆಯಲ್ಲಿ ನಡುವಿನ ಬಳಿಕವೂ ಕೊನೆಯಲ್ಲಿ ತಡೆಯುಲಿ ಬಂದಿದೆ.

ಇದನ್ನು ಇನ್ನಷ್ಟು ಬಿಡಿಸಿ ನೋಡೋಣ. ತೆರೆದ ಉಲಿಯನ್ನು ಉಲಿಕಂತೆಯ **ನಡು** ಎನ್ನೋಣ.ಉಲಿಕಂತೆಯಲ್ಲಿ ಒಗ್ಗೂಡುವ ಇತರ ಉಲಿಗಳು ತಡೆಯುಲಿಗಳೇ ಆಗಿರಬೇಕು ತಾನೆ?(ಏಕೆಂದರೆ ಒಂದು ಉಲಿಕಂತೆಯಲ್ಲಿ ಒಂದೇ ಒಂದು ತೆರೆದ ಉಲಿ ಬರಬಲ್ಲುದು) ಈ ತಡೆಯುಲಿಗಳಲ್ಲಿ ಕೆಲವು ನಡುವಿಗಿಂತ ಮೊದಲು ಬರಬಹುದು ಮತ್ತೆ ಕೆಲವು ನಡುವಿನ ಬಳಿಕ ಬರಬಹುದು. ಎತ್ತುಗೆಗಾಗಿ ಕನ್ನಡದ ಕೆಲವು ಉಲಿಕಂತೆಗಳನ್ನು ನೋಡೋಣ. ಮೊದಲು ನೀಡಿದ ಎತ್ತುಗೆಯ ಪದ **ಹುಲಿ**ಯನ್ನೇ ನೋಡಿ. ಅದರಲ್ಲಿ ಎರಡು ತೆರೆದ ಉಲಿಗಳಿವೆ. **ಉ** ಮತ್ತು ಇ ಎಂಬ ತೆರೆದ ಉಲಿಗಳು ಅದರಲ್ಲಿವೆ. ಅಂದರೆ ಈ ಪದದಲ್ಲಿ ಎರಡು ಉಲಿಕಂತೆಗಳಿವೆ ಎಂದು ತಿಳಿಯಬೇಕು. (ದಯವಿಟ್ಟು ನುಡಿಯ ಬರೆವಣಿಗೆಯ ಬಗೆಗೂ ಉಲಿಕಂತೆಗಳ ರಚನೆಗೂ ನಂಟು ಇದೆಯೆಂದು ತಿಳಿಯಬಾರದು. ಕೆಲವು ಲಿಪಿ ಮಾದರಿಗಳು ಉಲಿಕಂತೆಗಳನ್ನು ತೋರಿಸುತ್ತವೆ ಎಂದು ಅನಿಸುವುದುಂಟು. ಕನ್ನಡದ ಲಿಪಿ ಜೋಡಣೆಯೂ ಹಾಗೇ ಇರುವಂತೆ ತೋರುತ್ತದೆ. ಆದರೆ ಇದು ನಾವು ತಿಳಿದಷ್ಟು ಸುಳುವಲ್ಲ) ಮೊದಲ ಉಲಿಕಂತೆಯ ನಡು **ಉ** ಎಂಬ ತೆರೆದ ಉಲಿ. ಎರಡನೆಯ ಉಲಿಕಂತೆಯ ನಡು ಇ ಎಂಬ ತೆರೆದ ಉಲಿ. ಹೀಗೆ ಹೇಳಿದರೆ ಗೋಜಲು ಬಿಡಿಸಿದಂತೆ ಆಗಲಿಲ್ಲ. ಈ ಪದದಲ್ಲಿ ಇರುವ ಎರಡು ಉಲಿಕಂತೆಗಳು ಯಾವುವು?

1. **ಹು** ಮತ್ತು ಲಿ.

2. **ಹುಲ್** ಮತ್ತು ಇ

ಎಂದು ಎರಡು ಬಗೆಯಲ್ಲಿ ಗುಂಪು ಮಾಡಬಹುದು. ಇವೆರಡರಲ್ಲಿ ಯಾವ ಗುಂಪು ಸರಿ? ಇದನ್ನು ತಿಳಿಯಲು ನಾವು ಬೇರೆಯ ದಾರಿಗಳನ್ನು ಹುಡುಕಿಕೊಳ್ಳಬೇಕು. ನಾವು ಆಯ್ದುಕೊಂಡ **ಹುಲಿ** ಎಂಬ ಪದಕ್ಕಿಂತ ಬೇರೆ ಬಗೆಯ ಪದವೊಂದನ್ನು ಆಯ್ದುಕೊಂಡರೆ ನಾನು ಹೇಳುತ್ತಿರುವ ಮಾತು ಇನ್ನಷ್ಟು ತಿಳಿಗೊಳ್ಳುತ್ತದೆ. **ಕಣ್ಣು** ಎಂಬ ಪದವನ್ನು ತೆಗೆದುಕೊಳ್ಳೋಣ. ಇದರಲ್ಲೂ ಎರಡು ತೆರೆದ ಉಲಿಗಳಿರುವುದರಿಂದ (**ಅ** ಮತ್ತು **ಉ**) ಇಲ್ಲಿ ಎರಡು ಉಲಿಕಂತೆಗಳಿರಬೇಕು. ಅವು ಯಾವುವು?

1. **ಕ ಮತ್ತು ಣ್ಣು,**

2. **ಕಣ್ ಮತ್ತು ಣು**

3. **ಕಣ್ಣ್ ಮತ್ತು ಉ.**

ಹೀಗೆ ಮೂರು ಬಗೆಯಲ್ಲಿ ಗುಂಪು ಮಾಡಿಕೊಳ್ಳಲು ಬರುತ್ತದೆ. ಆದರೆ ಇವುಗಳಲ್ಲಿ ಯಾವುದೋ ಒಂದು ಮಾತ್ರ ಸರಿ. ಉಳಿದವು ಅಲ್ಲ. ಹಾಗಾದರೆ ಈ ಮೂರರಲ್ಲಿ ಯಾವುದು ಕನ್ನಡ ಉಲಿಕಂತೆಗಳ ಕಟ್ಟುಗಳನ್ನು ಹೊಂದಿದೆ ಎನ್ನುವುದನ್ನು ಕಂಡುಕೊಳ್ಳಬೇಕಾಗಿದೆ.

ಈ ಗೋಜಲನ್ನು ಕಳೆಯಲು ಕನ್ನಡದ ಉಲಿಕಂತೆಗಳ ಕಟ್ಟುಗಳ ಚಹರೆಗಳನ್ನು ಇನ್ನಷ್ಟು ಬಿಡಿಸಿ ನೋಡಬೇಕಾಗಿದೆ. **ಕನ್ನಡದ ಪದಗಳ ಮೊದಲಲ್ಲಿ ಒಂದಕ್ಕಿಂತ ಹೆಚ್ಚು ತಡೆಯುಲಿಗಳು ಬರುವುದಿಲ್ಲ** ಎಂಬುದನ್ನು ಈಗಾಗಲೇ ನೋಡಿದ್ದೇವೆ. ಒಂದು ವೇಳೆ ಹಾಗೆ ಒಂದಕ್ಕಿಂತ ಹೆಚ್ಚು ತಡೆಯುಲಿಗಳು ಪದಗಳ ಮೊದಲಲ್ಲಿ ಬಂದರೆ ಏನಾಗುತ್ತದೆ ಎಂಬುದನ್ನು ನೊಡೋಣ. ನಾವು ಬೇರೆ ನುಡಿಯಿಂದ ಎರವಲು ಪಡೆದ ಪದಗಳಲ್ಲಿ ಇಂತಹ ಪದಗಳಿವೆ. ಎತ್ತುಗೆಗಾಗಿ ಸಂಸ್ಕೃತ ದಿಂದ ಬಂದಿರುವ **ಕ್ರಮ** ಎಂಬ ಪದವನ್ನೇ ನೋಡಿ. ಇದರಲ್ಲಿ ಎರಡು ತೆರೆದ ಉಲಿಗಳಿರುವುದರಿಂದ ಇಲ್ಲಿ ಎರಡು ಉಲಿಕಂತೆಗಳಿರಬೇಕು. **ಕ್ರ** ಮತ್ತು **ಮ** ಎಂಬವು ಆ ಎರಡು ಉಲಿಕಂತೆಗಳು ಎಂದುಕೊಳ್ಳೋಣ. **ಕ್ರ (ಕ್/ರ್/ಅ)** ಎಂಬ ಉಲಿಕಂತೆಯ ನಡುವಾಗಿ **ಅ** ಎಂಬ ತೆರೆದ ಉಲಿ ಬಂದಿದೆ. ಈ ಉಲಿಕಂತೆಯಲ್ಲಿ ನಡುವಿಗಿಂತ ಮೊದಲು **ಕ್** ಮತ್ತು **ರ್** ಎಂಬ ತಡೆಯುಲಿಗಳು ಬಂದಿವೆ. ಅಂದರೆ ಸಂಸ್ಕೃತ ನುಡಿಯಲ್ಲಿ ಉಲಿಕಂತೆಗಳ ನಡುವಿಗಿಂತ ಹಿಂದೆ ಒಂದಕ್ಕಿಂತ ಹೆಚ್ಚು ತಡೆಯುಲಿಗಳು ಬರಬಹುದು ಎಂದಾಯ್ತು. ಆದರೆ ಕನ್ನಡದಲ್ಲಿ ಹೀಗೆ ಆಗದು. ನಡುವಿಗಿಂತ ಮೊದಲಲ್ಲಿ ಹೆಚ್ಚೆಂದರೆ ಒಂದು ತಡೆಯುಲಿ ಮಾತ್ರ ಬರಬಲ್ಲುದು. ಈಗ **ಕಣ್ಣು** ಎಂಬ ಪದದಲ್ಲಿ ಇರುವ ಉಲಿಕಂತೆಗಳನ್ನು ಗುರುತಿಸುವ ಕಡೆಗೆ ಹೋಗೋಣ. ಅಲ್ಲಿ ಒಂದು ಗುಂಪಿನಲ್ಲಿ **ಕ** ಮತ್ತು **ಣ್ಣು** ಎಂಬ ಎರಡು ಉಲಿಕಂತೆಗಳಿರಬಹುದು ಎಂಬು ತಿಳಿಯಲಾಗಿದೆ. ಇದು ಸರಿಯಾಗಿದ್ದರೆ ಆಗ **ಣ್ಣು (ಣ್/ಣ್/ಉ)** ಎಂಬ ಉಲಿಕಂತೆಯನ್ನು ಒಪ್ಪಬೇಕಾಗುತ್ತದೆ. ಆದರೆ ಆ ಉಲಿಕಂತೆಯಲ್ಲಿ ನಡುವಿನ ಉಲಿಯಾಗಿರುವ **ಉ** ಎಂಬ ತೆರೆದ ಉಲಿಗಿಂತ ಮೊದಲಲ್ಲಿ **ಣ್** ಮತ್ತು **ಣ್** ಎಂಬ ಉಲಿಗಳು ಬಂದಿರುವುದನ್ನು ಒಪ್ಪಬೇಕಾಗುವುದು. ಇದು ಕನ್ನಡ ಉಲಿಕಂತೆಗಳ ಕಟ್ಟಿಗೆ ಹೊಂದಿಕೆಯಾಗುವುದಿಲ್ಲ. ಹಾಗಾಗಿ **ಕಣ್ಣು** ಎಂಬ ಪದದಲ್ಲಿ **ಕ** ಮತ್ತು **ಣ್ಣು** ಎಂಬ ಉಲಿಕಂತೆಗಳಿವೆ ಎಂಬ ಮಾತನ್ನು ಒಪ್ಪಲು ಆಗದು.

ಈಗ ನಮ್ಮೆದುರು ಎರಡು ಆಯ್ಕೆಗಳು ಉಳಿದವು:

1. **ಕಣ್ ಮತ್ತು ಣು**

2. **ಕಣ್ಣ್ ಮತ್ತು ಉ**

ಇವೆರಡರಲ್ಲಿ ಯಾವುದು ಸರಿಯಾದ ಆಯ್ಕೆ ಎಂಬುದನ್ನು ತಿಳಿಯಲು ಬೇರೆ ದಾರಿಗಳನ್ನೇ ಹುಡುಕಬೇಕಾಗುತ್ತದೆ. ಇದಕ್ಕಾಗಿ ನಾವು ಕೆಲವು ಹೆಚ್ಚಿನ ಮಾಹಿತಿಗಳನ್ನು ಅರಿತಿರಬೇಕು. ಈಗ ಅವನ್ನು ನೋಡೋಣ. **ಕಣ್ಣು** ಎಂಬ ಪದವನ್ನು ತೆರೆದ ಉಲಿಯಿಂದ ಮೊದಲಾಗುವ ಯಾವುದಾದರೊಂದು ಪದದೊಡನೆ ಕೂಡಿಸೋಣ. ಎತ್ತುಗೆಗಾಗಿ **ಅಳತೆ** ಎಂಬ ಪದವನ್ನು **ಕಣ್ಣು** ಎಂಬ ಪದಕ್ಕೆ ಕೂಡಿಸಿದಾಗ **ಕಣ್ಣಳತೆ** ಎಂಬ ಹೊಸ ಪದವೊಂದು ಸಿಗುತ್ತದೆ. ಇಲ್ಲಿ 'ಲೋಪ ಸಂಧಿ' ನಡೆದಿದೆ ಎಂದು ನಮ್ಮ ಬಳಕೆಯ ಸೊಲ್ಲರಿಮೆಗಳು ಹೇಳುತ್ತವೆ. ಕಣ್ಣು ಪದದ ಕೊನೆಯಲ್ಲಿರುವ **ಉ** ಎಂಬ ತೆರೆದ ಉಲಿ **ಕಣ್ಣಳತೆ** ಪದದಲ್ಲಿ ಕಳೆದು ಹೋಗಿದೆ ಎಂದು ಹೇಳುವುದನ್ನು ಕೇಳಿದ್ದೇವೆ. ಏಕೆ **ಉ** ಎಂಬ ತೆರೆದ ಉಲಿ ಕಳೆದು ಹೋಯಿತು? ಈ ಕೇಳ್ವಿಯನ್ನು ನಾವು ಕೇಳಿಯೂ ಇಲ್ಲ.ಅದಕ್ಕೊಂದು ಬದಲನ್ನು ಹುಡುಕುವ ಮಾತು ದೂರವೇ ಉಳಿಯಿತು. ಈಗ ಆ ಕೇಳ್ವಿಯನ್ನು ಮುಂದಿಟ್ಟರೆ ಏನಾಗುತ್ತದೆ? ಒಂದು ಬದಲು ಹೀಗಿರಬಹುದು: **ಕಣ್ಣು** ಎಂಬ ಪದದ ಕೊನೆಯ **ಉ** ಎಂಬ ತೆರೆದ ಉಲಿ ಆ ಪದದ ದಿಂಡಿನಲ್ಲಿ ಇರಲೇ ಇಲ್ಲ ಎನ್ನಬಹುದೇ? ಆಗ ನಾವು ನುಡಿಯುವಾಗ ಹೇಳುವ ಕಣ್ಣು ಪದ ದಿಟವಾಗಿ **ಕಣ್ಣ್** ಎಂದೇ ಇದ್ದಿರಬೇಕು.ಇದು ಸರಿಯಾಗಿದ್ದರೆ **ಕಣ್ಣು** ಪದದಲ್ಲಿ ಇರುವ ಉಲಿಕಂತೆಗಳು **ಕಣ್ಣ್** ಮತ್ತು **ಉ** ಎಂಬ ಹೇಳಿಕೆಯನ್ನು ಒಪ್ಪಬೇಕಾಗುತ್ತದೆ. ಇದು ಸರಿ ಎಂದು ಹೇಳಲು ಇನ್ನೂ ಒತ್ತಾಸೆ ನೀಡುವ ಮಾತುಗಳಿವೆ. ಮುಂದೆ ಆ ಮಾತುಗಳನ್ನೂ ಗಮನಿಸುತ್ತೇವೆ.


ಈಗ ಉಲಿಕಂತೆಯ ಕಟ್ಟಡದ ಮಾತಿಗೆ ಹಿಂದಿರುಗೋಣ. ನಡು ಎಂಬುದು ಎಲ್ಲ ಉಲಿಕಂತೆಗಳಲ್ಲೂ ಇದ್ದೇ ಇರುತ್ತದೆ; ಅದು ಯಾವಾಗಲೂ ಒಂದು ತೆರೆದ ಉಲಿಯಾಗಿರುತ್ತದೆ. (ಕೆಲವು ನುಡಿಗಳಲ್ಲಿ ಉಲಿಕಂತೆಗಳ ನಡುವಾಗಿ ತಡೆಯುಲಿಗಳು ಬರುವುದುಂಟು. ಸಂಸ್ಕೃತದಲ್ಲಿ **ರ್** ಎಂಬ ತಡೆಯುಲಿ ಉಲಿಕಂತೆಯ ನಡುವಾಗಿ ಬಂದಾಗ ಅದನ್ನು **ಋ** ಎಂಬ ತೆರೆದ ಉಲಿಯೆಂದು ಗುರುತಿಸುವುದುಂಟು. ಇಂತಹುದೇ ಇನ್ನೊಂದು ಎತ್ತುಗೆಯನ್ನು ಇಂಗ್ಲಿಶ್ ನುಡಿಯಲ್ಲಿ ಕಾಣಬಹುದು.ಇಂಗ್ಲಿಶ್ ನುಡಿಯಲ್ಲಿ **ಬಟನ್** ಎಂಬ ಪದವೊಂದಿದೆ. ಕನ್ನಡಿಗರಾದ ನಾವು ಈ ಪದವನ್ನು ನುಡಿಯುವ ಬಗೆಯನ್ನು ನೋಡಿದರೆ ಅಲ್ಲಿ **ಬ** ಮತ್ತು **ಟನ್** ಎಂಬ ಎರಡು ಉಲಿಕಂತೆಗಳಿವೆ ಎಂದು ಹೇಳಬೇಕಾಗುತ್ತದೆ. ಆದರೆ ಇಂಗ್ಲಿಶ್ ನುಡಿಯನ್ನು ಆಡುವವರ ಲೆಕ್ಕಕ್ಕೆ ಆ ಪದದಲ್ಲಿ **ಬ** ಮತ್ತು **ಟ್ನ್** ಎಂಬ ಎರಡು ಉಲಿಕಂತೆಗಳಿರುತ್ತವೆ. **ಟ್ನ್** ಎಂಬುದು ಉಲಿಕಂತೆ ಆಗುವುದಿಲ್ಲ ಅಲ್ಲವೇ? ಏಕೆಂದರೆ ಅದರಲ್ಲಿ ಯಾವ ತೆರೆದ ಉಲಿಯೂ ಇಲ್ಲ. ಇಂಗ್ಲಿಶ್ ನುಡಿಯ ನುಡಿಯರಿಮೆಯಲ್ಲಿ ಈ ಕೇಳ್ವಿಗೆ ಬದಲನ್ನು ನೀಡಲಾಗಿದೆ. ಅದರಂತೆ **ಟ್ನ್** ಎಂಬ ಉಲಿಕಂತೆಯಲ್ಲಿ **ನ್** ಎಂಬ ಉಲಿಯು ತೆರೆದ ಉಲಿಯಂತೆ ಕೆಲಸ ಮಾಡುತ್ತದೆ. ಹಾಗಾಗಿ ಕೆಲವೊಮ್ಮೆ ತಡೆಯುಲಿಗಳೂ ಕೂಡ ಉಲಿಕಂತೆಗಳಲ್ಲಿ ತೆರೆದ ಉಲಿಗಳ ಕೆಲಸ ಮಾಡುತ್ತವೆ ಮತ್ತು ಉಲಿಕಂತೆಯ ನಡುವಾಗುತ್ತವೆ.ಕನ್ನಡದಲ್ಲಿ ಎಲ್ಲಿಯೂ ಹೀಗಾಗುವುದಿಲ್ಲ. ಹಾಗಾಗಿ ಆ ಮಾತು ಈಗ ಬದಿಗಿಡೋಣ)

ನಡುವಿನ ಉಲಿಯ ಹಿಂದೆ ಬರುವ/ಬರಬಹುದಾದ ತಡೆಯುಲಿಗಳನ್ನು **ಏರು** ಎಂದು ಕರೆಯೋಣ. **ಹುಲಿ** ಪದದ **ಹು** ಎಂಬ ಉಲಿಕಂತೆಯ ನಡು **ಉ** ಎಂಬ

ತೆರೆದ ಉಲಿಯಾದರೆ **ಹ್** ಎಂಬ ತಡೆಯುಲಿ ಆ ಉಲಿಕಂತೆಯ ಏರು ಎನ್ನಿಸಿಕೊಳ್ಳುವುದು.

ಉಲಿಕಂತೆಯ ನಡು ಆದ ಬಳಿಕ ಬರುವ ತಡೆಯುಲಿಗಳನ್ನು ಇಳಿ ಎಂದು ಕರೆಯೋಣ. ನಾವೀಗ ನೋಡಿದ ಕಣ್ಣು ಪದದ ಮೊದಲ ತಡೆಯುಲಿ **ಕಣ್ಣ್** ಎಂಬುದರಲ್ಲಿ **ಕ್/ಅ/ಣ್/ಣ್** ಎಂಬ ಉಲಿಗಳಿವೆ. **ಅ** ಎಂಬ ತೆರೆದ ಉಲಿಯೇ ಈ ಉಲಿಕಂತೆಯ ನಡು. **ಕ್** ಉಲಿ ನಡು ಬರುವ ಮೊದಲೇ ಬಂದಿದೆಯಾದ್ದರಿಂದ ಅದು ಏರು. **ಣ್** ಮತ್ತು **ಣ್** ಎಂಬ ಎರಡು ತಡೆಯುಲಿಗಳು ಈ ಉಲಿಕಂತೆಯ ಇಳಿಗೆ ಸೇರುತ್ತವೆ. ಇಲ್ಲಿಯೂ ಕೂಡ ಇಳಿಯಲ್ಲಿ ಬರಬಹುದಾದ ತಡೆಯುಲಿಗಳು ಎಷ್ಟು ಎಂಬುದು ನುಡಿಯಿಂದ ನುಡಿಗೆ ಬೇರೆ ಬೇರೆ ಆಗಿರುತ್ತವೆ. ಏರಿನಲ್ಲಿ ಸೊನ್ನೆಯಿಂದ (ಅಂದರೆ ಯಾವುದೇ ತಡೆಯುಲಿ ಇಲ್ಲದಿರುವುದು) ಮೂರು ತಡೆಯುಲಿಗಳು ಬರುವ ನುಡಿಗಳನ್ನು ಗುರುತಿಸಲಾಗಿದೆ. ಇದಕ್ಕೂ ಹೆಚ್ಚಿನ ತಡೆಯುಲಿಗಳನ್ನು ಏರಿನಲ್ಲಿ ಹೊಂದಿರುವ ನುಡಿಗಳು ಬಲು ಕಡಿಮೆ. ಇಳಿಯಲ್ಲಿ ಕೂಡ ಸೊನ್ನೆಯಿಂದ(ಅಂದರೆ ನಡುವಿನ ಬಳಿಕ ಯಾವ ತಡೆಯುಲಿಯೂ ಬರದಿರುವುದು) ಮೂರು ತಡೆಯುಲಿಗಳು ಬರುವ ನುಡಿಗಳು ಹೆಚ್ಚಾಗಿವೆ.

ಉಲಿಕಂತೆಯ ಕಟ್ಟಡ ಹೇಗಿರುವುದೆಂಬುದನ್ನು ತಿಳಿಯಲು ಕೆಳಗೆ ಕೊಟ್ಟ ಚಿತ್ರ ನೆರವಾದೀತು:



ಈಗ ಕನ್ನಡದ ಪದಗಳ ಉಲಿಕಂತೆಗಳು ಹೇಗಿರುತ್ತವೆ ಎಂಬುದನ್ನು ನೋಡೋಣ. ಈ ಮುಂದಿನ ಮಾತುಗಳನ್ನು ಹೇಳುವಾಗ ಕನ್ನಡ ಬರಹವನ್ನು ತಳಹದಿಯನ್ನಾಗಿ ಇರಿಸಿಕೊಂಡಿಲ್ಲ. ಆಡು ಕನ್ನಡದ ಉಲಿಕಂತೆಗಳು ಮಾತ್ರ ಇಲ್ಲಿ ಬಣ್ಣನೆಗೆ ಬರುತ್ತವೆ. ಹೀಗಿದ್ದಾಗಲೂ ಇನ್ನೊಂದು ಕೇಳ್ವಿ ಹಾಗೇ ಉಳಿಯುತ್ತದೆ. ಕನ್ನಡ ಈಗಿನ ಎಲ್ಲ ಒಳನುಡಿಗಳಲ್ಲೂ ಉಲಿಕಂತೆಗಳ ಚಹರೆ ಒಂದೇ ಬಗೆಯಲ್ಲಿ ಇರುತ್ತದೋ? ಇದಕ್ಕೆ ಬದಲನ್ನು ಹೇಳಬೇಕಾಗುತ್ತದೆ. ಈಗ ಇಂದು ಬಳಕೆಯಲ್ಲಿರುವ ಕನ್ನಡದ ಎಲ್ಲ ನುಡಿಗಳಿಗೂ ಆಡು ಕನ್ನಡ ಒಂದೇ ಆಗಿರುತ್ತದೆ ಎಂಬ ನೆಲೆಯಲ್ಲಿ ಮುಂದುವರೆಯುತ್ತಿದ್ದೇನೆ. ಆದರೆ ಇದೇ ಬರಹದಲ್ಲಿ ಬಗೆಬಗೆಯ ಆಡು ಕನ್ನಡಗಳು ಉಲಿಕಂತೆಗಳ ಕಟ್ಟುಗಳನ್ನೂ ಬದಲಿಸಿಕೊಂಡಿರುವುದಕ್ಕೆ ಎತ್ತುಗೆಗಳನ್ನು ನೋಡಲಿದ್ದೇವೆ.

1. ಏರು ಮತ್ತು ಇಳಿಗಳಿಲ್ಲದೆ ನಡು ಮಾತ್ರ ಇರುವ ಉಲಿಕಂತೆಗಳು: **ಆ, ಈ** ಎಂಬುವು ಇಂತಹ ಉಲಿಕಂತೆಗಳಿಗೆ ಎತ್ತುಗೆಗಳು. ಇಂತಹ **ಏರು ಮತ್ತು ಇಳಿಗಳಿಲ್ಲದ ಉಲಿಕಂತೆಗಳೇ ಬಿಡಿಯಾದ ಪದಗಳಾಗಿದ್ದರೆ ಅವುಗಳಲ್ಲಿ ಗಿಡ್ಡ ತೆರೆದ ಉಲಿಗಳು**

ಬರಲಾರವು ಎಂಬುದನ್ನು ಕನ್ನಡದ ಮಟ್ಟಿಗೆ ಒಂದು **ಕಟ್ಟು** ಎಂದೇ ತಿಳಿಯಬೇಕು.ಇದನ್ನು ಹೀಗೂ ಹೇಳಬಹುದು. ಇಂತಹ ಉಲಿಕಂತೆಗಳು ಪದದಲ್ಲಿ ಇನ್ನೊಂದು ಉಲಿಕಂತೆಯ ಜೊತೆಗೆ ಮಾತ್ರ ಬರಬಲ್ಲವು. ಅದರಲ್ಲೂ ಎರಡನೆಯ ಇಲ್ಲವೇ ಮೂರನೆಯ ಉಲಿಕಂತೆಗಳಾಗಿ ಬರಲಾರವು. ಹಾಗೇನಾದರೂ ಬಂದಿದ್ದರೆ ಆಗ ಅವು ಪದದ ದಿಂಡಿಗೆ ಸೇರಿರುವುದಿಲ್ಲ.

2. **ಏರಿನಲ್ಲಿ ಒಂದು ತಡೆಯುಲಿ ಇರುವ ಉಲಿಕಂತೆಗಳು: ಬಾ,ತಾ,ನೀ,ನಾ** ಇಂತಹವು ಈ ಬಗೆಗೆ ಎತ್ತುಗೆಗಳು.ಇಲ್ಲಿಯೂ ಉಲಿಕಂತೆಯ ನಡುವಿನಲ್ಲಿ ಬರುವ ತೆರೆದ ಉಲಿ ಉದ್ದವೇ ಆಗಿದೆ ಎಂಬುದನ್ನು ನೋಡಿ. ಅಂದರೆ ಏರಿನಲ್ಲಿ ಒಂದು ತಡೆಯುಲಿ ಬರುವ ಉಲಿಕಂತೆಯನ್ನು ಬಿಡಿಯಾಗಿ ಪದವಾಗಿ ಕಾಣಲಾರೆವು. **ಕ,ಪ,ಚ,ನ** ಮುಂತಾದವು ಇಂತಹ ಉಲಿಕಂತೆಗಳು. ಇಂತಹವು ಬಿಡಿಯಾಗಿ ಪದಗಳಾಗಲಾರವು. ಹಾಗೇನಾದರೂ **ಏರಿನಲ್ಲಿ ತಡೆಯುಲಿ ಇರುವ ಉಲಿಕಂತೆಯೊಂದು ಬಿಡಿ ಪದವಾಗಿದ್ದರೆ ಆಗ ನಡುವಿನ ತೆರೆದ ಉಲಿ ಗಿಡ್ಡವಾಗಿರಲಾರದು; ಅದು ಉದ್ದ ತೆರೆದ ಉಲಿಯೇ ಆಗಿರಬೇಕು** ಎಂಬುದು ಕನ್ನಡದ ಇನ್ನೊಂದು ಕಟ್ಟು. ಈ ಎರಡೂ ಮಾದರಿಯ ಉಲಿಕಂತೆಗಳನ್ನು ಅಂದರೆ ಇಳಿ ಇಲ್ಲದ ಉಲಿಕಂತೆಗಳನ್ನು **ತೆರೆದ ಉಲಿಕಂತೆ**ಗಳೆಂದು ಹೇಳುತ್ತೇವೆ.

3. **ಏರಿನಲ್ಲಿ ತಡೆಯುಲಿ ಇರಲಿ ಇಲ್ಲದಿರಲಿ ನಡುವಿನ ಬಳಿಕ ಒಂದು ತಡೆಯುಲಿಯನ್ನು ಇಳಿಯಲ್ಲಿ ಹೊಂದಿರುವ ಉಲಿಕಂತೆಗಳು**: ಇವು ಇನ್ನೊಂದು ಬಗೆಯವು. ಎತ್ತುಗೆಗಾಗಿ ಕನ್ನಡದ **ಅಂದ** ಮತ್ತು **ಕಂದ** ಎಂಬ ಎರಡು ಪದಗಳನ್ನು ನೋಡೋಣ. ಇವೆರಡರಲ್ಲೂ ಎರಡೆರಡು ಉಲಿಕಂತೆಗಳಿವೆ. ಏಕೆಂದರೆ ಎರಡೂ ಪದಗಳಲ್ಲಿ ಇರುವ ತೆರೆದ ಉಲಿಗಳು ಎರಡೆರಡು. **ಅಂದ** ಪದದ ಉಲಿಕಂತೆಗಳು ಹೇಗಿರುತ್ತವೆ? **ಅಂದ** ಪದದಲ್ಲಿರುವ ಉಲಿಕಂತೆಗಳು **ಅ** ಮತ್ತು **ನ್ದ (ನ್ ದ್ ಅ)** ಅಗಿರಬಹುದು ಇಲ್ಲವೇ **ಅನ್** ಮತ್ತು **ದ** ಆಗಿರಬಹುದು (ಇದಲ್ಲದೆ **ಅನ್ದ್** ಮತ್ತು **ಅ** ಎಂಬ ಉಲಿಕಂತೆಗಳಿವೆ ಎಂದೂ ಹೇಳಬಹುದು. ಈಗ ಈ ಜೋಡಿಯುನ್ನು ಬದಿಗಿಡೋಣ) ಮೊದಲ ಜೋಡಿಯಲ್ಲಿ **ನ್ದ** ಎಂಬ ಉಲಿಕಂತೆಯನ್ನು ಒಪ್ಪಲಾಗುವುದಿಲ್ಲ. ಏಕೆಂದರೆ ಅದು ಕನ್ನಡದ ಉಲಿಕಂತೆ ರಚನೆಯ ಕಟ್ಟನ್ನು ಮೀರಿದೆ. ಅದರ ಏರಿನಲ್ಲಿ ಎರಡು ತಡೆಯುಲಿಗಳಿವೆ (**ನ್** ಮತ್ತು **ದ್**) ಇದು ಕನ್ನಡದ ಉಲಿಕಂತೆಯಾಗಲಾರದು. ಹೀಗಾಗಿ **ಅನ್** ಮತ್ತು **ದ** ಎಂಬುವೇ ಇಲ್ಲಿನ ಉಲಿಕಂತೆಗಳು ಎಂದು ತಿಳಿಯೋಣ.

ಕಂದ ಎಂಬ ಪದವನ್ನು ಮೇಲೆ ಹೇಳಿದಂತೆಯೇ ಉಲಿಕಂತೆಗಳಾಗಿ ಒಡೆದರೆ **ಕನ್** ಮತ್ತು **ದ** ಎಂಬುವು ಉಲಿಕಂತೆಗಳಾಗುತ್ತವೆ. ಇಲ್ಲಿ **ಕನ್(ಕ್/ಅ/ನ್)** ಎಂಬುದು ಮೂರನೆಯ ಮಾದರಿಯ ಉಲಿಕಂತೆಗೆ ತಕ್ಕ ಎತ್ತುಗೆ . ಇದರಲ್ಲಿ ಏರಿನಲ್ಲಿ ಒಂದು ತಡೆಯುಲಿ (**ಕ್**) ಇದೆ. ಇಳಿಯಲ್ಲಿ ಕೂಡ ಒಂದು ತಡೆಯುಲಿ(**ನ್**) ಇದೆ. ಈಗ ಅಂದ ಪದವನ್ನು ನೋಡಿದರೆ ಅಲ್ಲಿಯೂ **ಅನ್** ಮತ್ತು **ದ** ಎಂಬ ಎರಡು ಉಲಿಕಂತೆಗಳಿವೆ. **ಅನ್** ಮತ್ತು **ಕನ್** ಎಂಬವು ಲೆಕ್ಕಕ್ಕೆ

ಹಿಡಿದಾಗ ಒಂದೇ ಮಾದರಿಯ ಉಲಿಕಂತೆಗಳು.ಏಕೆಂದರೆ ಏರಿನಲ್ಲಿ ತಡೆಯುಲಿ ಇದೆಯೋ ಇಲ್ಲವೋ ಎಂಬುದನ್ನು ಬದಿಗಿಟ್ಟರೆ ಇಳಿಯುಲ್ಲಿ ಎರಡೂ ಉಲಿಕಂತೆಗಳಲ್ಲಿ ಒಂದೊಂದು ತಡೆಯುಲಿ ಇರುವುದನ್ನು ನೋಡುತ್ತೇವೆ.

ಇಂತಹ ಉಲಿಕಂತೆಗಳನ್ನು,ಅಂದರೆ ಇಳಿಯಲ್ಲಿ ಒಂದು ಇಲ್ಲವೇ ಹೆಚ್ಚಿನ ತಡೆಯುಲಿಗಳನ್ನು ಹೊಂದಿರುವ ಉಲಿಕಂತೆಗಳನ್ನು **ಮುಚ್ಚಿದ ಉಲಿಕಂತೆಗಳೆಂದು** ಕರೆಯಲಾಗಿದೆ. **ಅನ್**(<**ಅಂದ**), **ಕತ್**(<**ಕತ್ಲೆ**), **ಬಿತ್**(<**ಬಿತ್ನೆ**) , **ಹಿತ್**(<**ಹಿತ್ಲು**), **ಹತ್**(<**ಹತ್ರ**) ಮುಂತಾದವು ಮುಚ್ಚಿದ ಉಲಿಕಂತೆಗೆ ಎತ್ತುಗೆಗಳು, ಇಲ್ಲೆಲ್ಲಾ ನಡುವಿನ ತೆರೆದ ಉಲಿಯ ಬಳಿಕ ಒಂದು ತಡೆಯುಲಿ ಇರುವುದನ್ನು ನೋಡಬಹುದು.

4. ಇನ್ನೊಂದು ಮಾದರಿಯ ಉಲಿಕಂತೆಯನ್ನೀಗ ನೋಡೋಣ. **ಪಾತ್**(<**ಪಾತ್ರೆ**), **ಕಾಲ್**(<**ಕಾಲು**), **ನಾಚ್**(<**ನಾಚ್ಕೆ**), **ಕಾಗ್**(< **ಕಾಗ್ದ**), **ಅಗ್**(<**ಅಗ್ಲೆ**), **ತೋರ್**(<**ತೋರ್ಣ**) ಮುಂತಾದ ಉಲಿಕಂತೆಗಳನ್ನು ನೋಡಿ. ಇವೂ ಕೂಡ ಮುಚ್ಚಿದ ಉಲಿಕಂತೆಗಳೇ. ಆದರೆ ಇವು ಮೇಲೆ ಹೇಳಿದ ಮುಚ್ಚಿದ ಉಲಿಕಂತೆಗಳಿಗಿಂತ ಬೇರೆ. ಏಕೆಂದರೆ ಈ ಉಲಿಕಂತೆಗಳಲ್ಲಿ ನಡುವಿನ ತೆರೆದ ಉಲಿ ಉದ್ದವಾಗಿದೆ. ಉಳಿದಂತೆ ಏರಿನಲ್ಲಿ ತಡೆಯುಲಿ ಇರಲೂಬಹುದು; ಇಲ್ಲದೆಯೂ ಇರಬಹುದು.

ಮುಚ್ಚಿದ ಉಲಿಕಂತೆಗಳ ಈ ಎರಡೂ ಮಾದರಿಗಳು ಕನ್ನಡದ ಪದಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ. ಇವೆರಡೂ ತೋರಿಕೆಗೆ ಮಾತ್ರ ಬೇರೆಬೇರೆಯೋ ಇಲ್ಲವೇ ನಡೆವಳಿಯಲ್ಲಿ ಒಂದೆಯೋ ಇನ್ನೊಂದು ಕೇಳ್ವಿ. ಮುಂದೆ ನಾವು ನೋಡುವಂತೆ ಈ ಮುಚ್ಚಿದ ಉಲಿಕಂತೆಗಳಲ್ಲಿ ಉದ್ದ ತೆರೆದ ಉಲಿ ಇದೆಯೋ ಇಲ್ಲವೇ ಗಿಡ್ಡ ತೆರೆದ ಉಲಿ ಇದೆಯೋ ಎಂಬುದು ಲೆಕ್ಕಕ್ಕೆ ಬಾರದೆಯೇ ಹೋಗಬಹುದು. ಆದರೆ ಕನ್ನಡ ಪದರಚನೆಯನ್ನು ಮತ್ತದರ ಕಟ್ಟುಗಳನ್ನು ತಿಳಿಯ ಬಯಸುವವರಿಗೆ ಇವೆರಡೂ ಮಾದರಿಗಳು ಹೆಚ್ಚಿನ ಒಳನೋಟಗಳನ್ನು ನೀಡುತ್ತವೆ.

5. ಈಗ ಇನ್ನೊಂದು ಮಾದರಿಯ ಉಲಿಕಂತೆಯನ್ನು ನೋಡೋಣ. ಇದನ್ನು ಅರಿಯಲು ಕೇಳ್ವಿಯೊಂದನ್ನು ಮುಂದಿಡಬೇಕಾಗುವುದು. ಕನ್ನಡದಲ್ಲಿ ಮುಚ್ಚಿದ ಉಲಿಕಂತೆಗಳ ಇಳಿಯಲ್ಲಿ ಒಂದಕ್ಕಿಂತ ಹೆಚ್ಚು ತಡೆಯುಲಿಗಳು ಬರಬಹುದೇ ಎಂಬುದೇ ಈ ಕೇಳ್ವಿ. ಬೇರೆ ನುಡಿಗಳ ಎತ್ತುಗೆಗಳನ್ನು ನೋಡೋಣ. ಇಂಗ್ಲಿಶ್ ನುಡಿಯ **ಸ್ಪ್ರಿಂಗ್** ಎಂಬ ಪದದಲ್ಲಿ ಒಂದೇ ತೆರೆದ ಉಲಿ ಇದೆ. ಅಂದರೆ ಅದು ಇಡಿಯಾಗಿ ಒಂದೇ ಉಲಿಕಂತೆ. ಇ ಎಂಬ ತೆರೆದ ಉಲಿ ಅದರ ನಡುವಿನಲ್ಲಿದ್ದರೆ ಏರಿನಲ್ಲಿ **ಸ್,ಪ್,ರ್** ಎಂಬ ಮೂರು ತಡೆಯಲಿಗಳಿವೆ. ಇಳಿಯಲ್ಲಿ **ನ್** (**ಇಲ್ಲವೇ ಙ್**) ಮತ್ತು **ಗ್** ಎಂಬ ಎರಡು ತಡೆಯುಲಿಗಳಿವೆ. ಇಂತಹ ನೂರಾರು ಪದಗಳನ್ನು ಆ ನುಡಿಯಲ್ಲಿ ಗುರುತಿಸಬಹುದು. ಆದರೆ ಕನ್ನಡ ನುಡಿಯಲ್ಲಿ

ಇಂತಹ ಉಲಿ ಕಂತೆಗಳು ಇರಬಹುದೇ? ಈಗಾಗಲೇ ನಾವು **ಕಣ್ಣು** ಎಂಬ ಪದದಲ್ಲಿ **ಕಣ್ಣ್** ಮತ್ತು **ಉ** ಎಂಬ ಎರಡು ಉಲಿಕಂತೆಗಳಿವೆ ಎಂದು ಹೇಳಿದ್ದೇವೆ. ಅಂದರೆ **ಕಣ್ಣ್** ಎಂಬುದು ಇಳಿಯಲ್ಲಿ ಒಂದಕ್ಕಿಂತ ಹೆಚ್ಚು ತಡೆಯುಲಿಗಳನ್ನು ಹೊಂದಿರುವ ಉಲಿಕಂತೆ ಎಂದು ತಿಳಿಯಬೇಕಾಗುತ್ತದೆ. **ಕಲ್ಲ್ (<ಕಲ್ಲು) ಗೆಲ್ಲ್ (<ಗೆಲ್ಲು), ಚೆಲ್ಲ್ (<ಚೆಲ್ಲು), ಕತ್ತ್ (<ಕತ್ತು)** ಮುಂತಾದವು ಇದೇ ಮಾದರಿಯ ಉಲಿಕಂತೆಗಳೆಂದು ತೋರುತ್ತವೆ. ಇಲ್ಲೆಲ್ಲಾ ಇಳಿಯಲ್ಲಿ ಒಂದೇ ತಡೆಯುಲಿ ಎರಡು ಬಾರಿ ಬಂದಿರುವುದನ್ನು ನೋಡುತ್ತೇವೆ. ಅಂದರೆ ಇಳಿಯಲ್ಲಿ ಎರಡು ತಡೆಯುಲಿಗಳಿರುವ ಉಲಿಕಂತೆಗಳು ಕನ್ನಡದಲ್ಲಿ ಕಂಡರೆ ಅವುಗಳ ಇಳಿಯಲ್ಲಿ ಒಂದೇ ತಡೆಯುಲಿ ಎರಡು ಬಾರಿ ಬರುತ್ತದೆಯೇ ಹೊರತು ಬೇರೆ ಬೇರೆ ತಡೆಯುಲಿಗಳು ಒಟ್ಟಾಗಿ ಬರಲಾರವು ಎಂಬ ಉಲಿಕಂತೆಯ ಕಟ್ಟನ್ನು ಗುರುತಿಸಬೇಕಾಗುತ್ತದೆ.

ಇಲ್ಲಿ ಒಂದು ಕೇಳ್ವಿ ಎದುರಾಗುತ್ತದೆ. **ಕಂದ, ಚೆಂಡು, ಬಂಡೆ** ಮುಂತಾದ ಪದಗಳಲ್ಲಿ ಒಂದು ವೇಳೆ ಮೊದಲ ಉಲಿಕಂತೆ **ಕನ್,ಚೆಣ್, ಬಣ್** ಆಗಿರುವ ಬದಲು **ಕನ್ದ್, ಚಣ್ಡ್** ಮತ್ತು **ಬಣ್ಡ್** ಆಗಿದ್ದರೆ ಆಗ ಈ ಉಲಿಕಂತೆಗಳ ಇಳಿಯಲ್ಲಿ ಎರಡು ತಡೆಯುಲಿಗಳಿರುವುವಲ್ಲದೆ ಅವೆರಡೂ ಬೇರೆ ಬೇರೆ ಆಗಿವೆ ಎಂದು ಒಪ್ಪಬೇಕಾಗುತ್ತದೆಯೇ? ಆಗ ಮೇಲೆ ಈ ಮೊದಲು ಹೇಳಿದ ಕಟ್ಟನ್ನು ಇಡಿಯಾಗಿ ಒಪ್ಪಲಾಗುವುದಿಲ್ಲ. ಬದಲಿಗೆ ಆ ಕಟ್ಟನ್ನು ಬದಲಿಸಿ ಹೇಳಬೇಕಾಗುವುದು. ಉಲಿಕಂತೆಯ ಇಳಿಯಲ್ಲಿ ಎರಡು ತಡೆಯುಲಿಗಳು ಬರುವುದಾದಲ್ಲಿ ಅಲ್ಲಿ ಒಂದೇ ತಡೆಯುಲಿ ಎರಡು ಬಾರಿ ಬಂದಿರುತ್ತದೆ. ಇಲ್ಲವೇ ಆ ಎರಡು ತಡೆಯುಲಿಗಳಲ್ಲಿ ಮೊದಲನೆಯದು ಒಂದು ಮೂಗುಲಿಯಾಗಿದ್ದು ಎರಡನೆಯದು ಅದೇ ಮೂಗುಲಿಯ ಗುಂಪಿಗೆ ಸೇರಿದ ತಡೆಯುಲಿಯಾಗಿರುತ್ತದೆ. ಈ ಕಟ್ಟು ಸರಿಯಾಗಿದೆ ಎಂದು ತೋರುತ್ತದೆ. ಆಗ **ಕಣ್ದ್, ಚೆಣ್ಡ್,ಬಣ್ಡ್** ಮುಂತಾದ ಉಲಿಕಂತೆಗಳು (ಅಂತಹವು ಇದ್ದರೆ) ಕನ್ನಡ ಉಲಿಕಂತೆಯ ಕಟ್ಟಿಗೆ ಹೊಂದಿಕೆಯಾಗಿರುವುದು ತಿಳಿಯುತ್ತದೆ.

6. ಮುಂದಿನ ಕೇಳ್ವಿಯೆಂದರೆ ಮೇಲೆ ಹೇಳಿದ ಇಳಿಯಲ್ಲಿ ಎರಡು ತಡೆಯುಲಿಗಳು ಬರುವ ಉಲಿಕಂತೆಗಳಲ್ಲಿ ನಡುವಿನ ತೆರೆದ ಉಲಿ ಉದ್ದವಾಗಿರಬಹುದೆ? ಬೇರೆ ನುಡಿಗಳಲ್ಲಿ ಈ ಮಾದರಿಯ ಉಲಿಕಂತೆಗಳು ಕಾಣಿಸಿಕೊಳ್ಳುತ್ತವೆ. ತಮಿಳಿನ **ತೋಟ್ಟಂ** ಎಂಬ ಪದವನ್ನು ನೋಡಿ. ಇದರ ಮೊದಲ ಉಲಿಕಂತೆಯಲ್ಲಿ ಉದ್ದನೆಯ ತೆರೆದ ಉಲಿ ಇದೆ. (ಓ) ಅದರ ಬಳಿಕ **ಟ್ಟ್** ಎಂಬ ಇಳಿ ಇದೆ. ಅದರಲ್ಲಿ **ಟ್** ಎಂಬ ತಡೆಯುಲಿ ಎರಡು ಬಾರಿ ಬಂದಿದೆ. **ಕೋಟ್ಟೈ,ಆಟ್ಟು,ಮಾಟ್ಟು** ಮುಂತಾದ ತಮಿಳಿನ ಪದಗಳಲ್ಲಿ ಇದೇ ಮಾದರಿಯ ಉಲಿಕಂತೆಗಳಿವೆ. ಈಗ ನಾವು ಆಡುತ್ತಿರುವ ಕನ್ನಡದಲ್ಲಿ ಈ ಮಾದರಿಯ ಉಲಿಕಂತೆಗಳು ಕೇಳಬರುವುದಿಲ್ಲ. ಆದರೆ ಕೆಲವು ಒಳನುಡಿಗಳಲ್ಲಿ ಇಂತಹ ಉಲಿಕಂತೆಗಳು ಕೇಳಿಬರುವುದುಂಟು. ಹಾಗೇಕೇ ಎಂಬ ಕೇಳ್ವಿಗೆ ಬದಲನ್ನು ಮುಂದೆ ಹುಡುಕೋಣ.

ಉಲಿಕಂತೆಗಳ ಚಹರೆಗಳನ್ನು ತಿಳಿಯಬೇಕೇಕೆ?

ಈ ಕೇಳ್ವಿ ನಮ್ಮೆದುರು ನಿಲ್ಲುತ್ತದೆ. ಕನ್ನಡವನ್ನು ಮೊದಲ ನುಡಿಯಾಗಿ ಪಡೆದುಕೊಂಡ ಮಕ್ಕಳೆಲ್ಲರೂ ಆ ನುಡಿಯ ಉಲಿಕಂತೆಯ ಕಟ್ಟುಗಳನ್ನು ಅರಿತುಕೊಂಡಿರುತ್ತಾರೆ ಎಂಬುದನ್ನು ಮೊದಲು ಒಪ್ಪಬೇಕು. ಅಂದರೆ ಇದು ಕಲಿಕೆಯಿಂದ ಬಂದುದಲ್ಲ. ಯಾರೂ ಇಗೋ ಕನ್ನಡದ ಉಲಿಕಂತೆ ಎಂದರೆ ಹೀಗಿರುತ್ತದೆ ಎಂದು ತಿಳಿಸಿ ಹೇಳಿರುವುದಿಲ್ಲ. ನುಡಿಯ ಸೊಲ್ಲರಿಮೆಯ ಕಟ್ಟುಗಳನ್ನು ಹೇಗೆ ಪಡೆದುಕೊಳ್ಳುತ್ತಾರೋ ಹಾಗೆಯೇ ಉಲಿಕಂತೆಗಳ ಕಟ್ಟುಗಳನ್ನೂ ಪಡೆದುಕೊಂಡಿರುತ್ತಾರೆ. ಇದು ಹೀಗಿರಬಹುದು ಎಂದು ಹೇಳುವ ಮಾತಲ್ಲ. ಈ ಬಗೆಯ ತಿಳುವಳಿಕೆಗಳು ಇರುತ್ತವೆ ಎಂಬುದನ್ನು ಗೊತ್ತು ಮಾಡಲು ಹಾದಿಗಳಿವೆ. ಮೊದಲನೆಯದಾಗಿ ಕಟ್ಟುಗಳನ್ನು ಮೀರಿದ ಉಲಿಕಂತೆಗಳನ್ನು ಯಾರೂ ಕನ್ನಡ ನುಡಿಯಲ್ಲಿ ಬಳಸುವುದಿಲ್ಲ. ಒಂದುವೇಳೆ ಹಾಗೆ ಮಾಡಬೇಕಾಗಿ ಬಂದರೆ ಅಂತಹ ಪದಗಳನ್ನು ಕನ್ನಡ ನುಡಿಯ ಉಲಿಕಂತೆಗಳ ಕಟ್ಟುಗಳಿಗೆ ಹೊಂದಿಸಿಕೊಳ್ಳುತ್ತಾರೆ ಎಂಬುದನ್ನು ತೋರಿಸಿಕೊಡಬಹುದು. ಎತ್ತುಗೆಗಾಗಿ ಕೆಲವು ಕನ್ನಡ ಒಳನುಡಿಗಳಲ್ಲಿ ನಾವು ಕೇಳುವ **ಬರಮ, ಪಿರೂತಿ, ಗಳಾಸು,ಪಿಲೇಟು, ಕಿರಿಸ್ತರು/ಕಿಲಿಸ್ತರು** ಮುಂತಾದ ಪದಗಳನ್ನು ನೋಡಿ. ಈ ಪದಗಳು ಬೇರೆ ನುಡಿಗಳಿಂದ ಬಂದ **ಬ್ರಹ್ಮ, ಪ್ರೀತಿ,ಗ್ಲಾಸು, ಪ್ಲೇಟು, ಕ್ರೈಸ್ತರು** ಪದಗಳ ಬದಲಿಗೆ ನುಡಿಯುತ್ತಿರುವ ಪದಗಳು. ಹೊರ ನುಡಿಯಿಂದ ಬಂದ ಪದಗಳ ಮೊದಲ ಉಲಿಕಂತೆಗಳ ಏರಿನಲ್ಲಿ ಒಂದಕ್ಕಿಂತ ಹೆಚ್ಚು ತಡೆಯುಲಿಗಳಿವೆ. (**ಬ್ರ, ಪ್ರೀ, ಗ್ಲಾ, ಪ್ಲೇ, ಕ್ರೈ**) ಹಾಗಾಗಿಯೇ ಈ ಉಲಿಕಂತೆಗಳು ಕನ್ನಡದ ಉಲಿಕಂತೆಗಳ ಕಟ್ಟಿಗೆ ಹೊಂದುವುದಿಲ್ಲ. ಕನ್ನಡದ ನುಡಿಗೆ ಹೊಂದುವಂತೆ ಆ ಪದಗಳ ಮೊದಲ ಉಲಿಕಂತೆಗಳ ಏರಿನ ಎರಡು ತಡೆಯುಲಿಗಳ ನಡುವೆ ಒಂದು ತೆರೆದ ಉಲಿಯನ್ನು ಸೇರಿಸಿಕೊಂಡು ಹೊಸ ಉಲಿಕಂತೆಯೊಂದನ್ನು ಕಟ್ಟಿಕೊಂಡಿದ್ದಾರೆ. (ಈ ಮಾತನ್ನು ಹೇಳುವಾಗ ಒಂದು ಮಾತನ್ನು ಮರೆಯಬಾರದು. ಕನ್ನಡದ ಉಲಿಕಂತೆಗಳ ಏರಿನಲ್ಲಿ ಎರಡು ತಡೆಯುಲಿಗಳು ಬರುವುದಿಲ್ಲ ಎಂದ ಮಾತ್ರಕ್ಕೆ ಕನ್ನಡಿಗರು ಎರಡು ತಡೆಯುಲಿಗಳು ಏರಿನಲ್ಲಿ ಇರುವ ಉಲಿಕಂತೆಗಳನ್ನು ನುಡಿಯಲಾರರು; ಅವರ ಬಾಯಿ ಹೊರಳುವುದಿಲ್ಲ ಎಂದು ತಿಳಿಯಬಾರದು. ಅಂತಹ ಉಲಿಕಂತೆಗಳು ಅವರ ನುಡಿಯ ಸೊಲ್ಲರಿಮೆಯಲ್ಲಿ ಇಲ್ಲದಿರುವುದರಿಂದ ನುಡಿಯುತ್ತಿಲ್ಲ ಎಂದಷ್ಟೇ ತಿಳಿಯಬೇಕು) ಹೀಗೆ ಬದಲಿಸಿಕೊಳ್ಳುತ್ತಿದ್ದೇನೆ ಎನ್ನುವುದು ನುಡಿಯುತ್ತಿರುವವರಿಗೆ ಗೊತ್ತಿರುವುದಿಲ್ಲ. ಅವರು ಪಡೆದುಕೊಂಡ ಕನ್ನಡದ ಸೊಲ್ಲರಿಮೆಯ ಕಟ್ಟುಗಳು ಇಂತಹ ಬದಲಾವಣೆಯನ್ನು ಮಾಡಿಕೊಳ್ಳಲು ಅನುವು ಮಾಡಿಕೊಟ್ಟಿವೆ.

ಈ ಬರಹದ ಮೊದಲಲ್ಲಿ ಕನ್ನಡ ನುಡಿಯುವವರು ಆಡುವ ನುಡಿಯ ಆಟಗಳನ್ನು ಎತ್ತುಗೆಗಾಗಿ ನೋಡಿದ್ದೇವೆ.ಚಿಕ್ಕವರು ಅದರಲ್ಲೂ ಹದಿಹರೆಯದವರು ಕನ್ನಡ ನುಡಿಯನ್ನು ಆಡುವಾಗ ಪದದಲ್ಲಿ ಬರುವ ಉಲಿಗಳನ್ನು ಹಿಂದೆ ಮುಂದೆ ಮಾಡಿ ಆಡುವ ನುಡಿಯಾಟವನ್ನು ಆಡುತ್ತಾರೆ. ತಂತಮ್ಮಲ್ಲೇ ಗುಟ್ಟನ್ನು

ಹಂಚಿಕೊಳ್ಳುವವರು ಕೂಡ ಹೀಗೆ ಮಾಡುವುದುಂಟು. ಹೀಗೆ ಉಲಿಗಳನ್ನು ತಲೆಕೆಳಗು ಇಲ್ಲವೇ ಹಿಂದುಮುಂದು ಮಾಡುವಾಗ ಏನು ಮಾಡುತ್ತಾರೆ ಎಂಬುದನ್ನು ನೋಡೋಣ. **ಕೋಡುಬಳೆ** ಎಂಬ ಪದರಚನೆಯಲ್ಲಿ ಎಂಟು ಉಲಿಗಳಿದ್ದು ಅವುಗಳಿಂದ ನಾಲ್ಕು ಉಲಿಕಂತೆಗಳು ಮೈದಳೆದಿವೆ (**ಕೋ, ಡು, ಬ, ಳೆ**) ಹಿಂದು ಮುಂದಲಾಗಿ ನುಡಿಯುತ್ತಿದ್ದೇವೆ ಎಂದು ಹೇಳುವವರು ಕೋಡುಬಳೆ ಪದದಲ್ಲಿರುವ ಉಲಿಗಳ ಸರತಿಯನ್ನು ಇಡಿಯಾಗಿ ಹಿಂದೆ ಮಾಡಿಲ್ಲ. ಹಾಗೆ ಮಾಡಿದರೆ **ಎಳಬುಡೋಕ್** ಎಂಬ ಪದವನ್ನು ಹೇಳಬೇಕಾಗುತ್ತದೆ. ಬದಲಿಗೆ ಒಂದು ಮತ್ತು ಮೂರನೆಯ ಉಲಿಕಂತೆಗಳ ಏರಿನಲ್ಲಿರುವ ತಡೆಯುಲಿಗಳ ಜಾಗವನ್ನು ಬದಲಿಸಿದ್ದಾರೆ.

ಕ್/ಓ/ಡ್/ಉ/ **ಬ್**/ಅ/ಳ್/ಎ > **ಬ್**/ಓ/ಡ್/ಉ/ **ಕ್**/ಅ/ಳ್/ಎ/

ಮೊದಲ ಉಲಿಕಂತೆಯ ಏರಿನ **ಕ್** ಮೂರನೆಯ ಉಲಿಕಂತೆಯ ಏರಿಗೆ ಹೋದರೆ, ಮೂರನೆಯ ಉಲಿಕಂತೆಯ ಏರಿನ **ಬ್** ಮೊದಲ ಉಲಿಕಂತೆಯ ಏರಿಗೆ ಬಂದಿದೆ. ಬದಲಿಸುವಾಗ ಅನುಸರಿಸಿದ ಈ ಕಟ್ಟನ್ನು ಯಾರೂ ಹೇಳಿಕೊಡುವುದಿಲ್ಲ. ಅಲ್ಲದೆ **ಕೋಡುಬಳೆ** ಪದದಲ್ಲಿ ಎಷ್ಟು ಉಲಿಗಳಿವೆ ಇಲ್ಲವೆ ಎಷ್ಟು ಉಲಿಕಂತೆಗಳಿವೆ ಎಂದು ಕೇಳಿದರೆ ಕನ್ನಡ ನುಡಿಯುವವರು ಏನೂ ಬದಲು ಹೇಳಲಾರರು. ಆದರೂ ಅವರು ಪಡೆದುಕೊಂಡ ಕನ್ನಡದ ಸೊಲ್ಲರಿಮೆಯ ಕಟ್ಟುಗಳಲ್ಲಿ ಉಲಿಕಂತೆಗಳ ಕಟ್ಟುಗಳು ಇರುವುದರಿಂದಲೇ ಈ ನುಡಿಯಾಟದಲ್ಲಿ ಪಾಲ್ಗೊಳ್ಳಬಲ್ಲರು.

ಇನ್ನೂ ಕೆಲವು ಎತ್ತುಗೆಗಳನ್ನು ನೋಡೋಣ. **ಕೋಡುಬಳೆ** ಮಾದರಿಯ ರಚನೆಗಳಲ್ಲಿ ಒಂದಕ್ಕಿಂತ ಹೆಚ್ಚು ಪದಗಳಿವೆ.ಅದನ್ನು **ಬೋಡುಕಳೆ** ಎಂದು ಬದಲಿಸಿ ನುಡಿಯುವವರಿಗೆ ಉಲಿಕಂತೆಗಳ ಕಟ್ಟುಗಳು ಮಾತ್ರವಲ್ಲದೆ ಪದಗಳು ಯಾವುವು ಎಂಬುದನ್ನು ಗುರುತಿಸುವ ಕಟ್ಟೂ ಕೂಡ ತಿಳಿದಿರಬೇಕು. ಈ ಮಾತನ್ನು ಹೇಳುವಾಗ ನಾನು ಬರೆಯಲು ಕಲಿತವರನ್ನು ಮತ್ತು ತಾವು ನುಡಿಯುತ್ತಿರುವ ರಚನೆಗಳ ಪದಗಳನ್ನು ಬರಹದಲ್ಲಿ ಕಂಡವರನ್ನು ಎದುರಿಗೆ ಇರಿಸಿಕೊಂಡಿಲ್ಲ. ಹಾಗಿಲ್ಲದೇ ಇರುವವರೂ ಇದೇ ಬಗೆಯ ಬದಲಾವಣೆಯನ್ನು ಮಾಡಬಲ್ಲರು. ಒಂದೇ ಪದವನ್ನು ನುಡಿಯುವಾಗ ಉಲಿಗಳನ್ನು ಹಿಂದುಮುಂದು ಮಾಡುವ ಆಟ ಏನಾಗುತ್ತದೆ ನೋಡೋಣ. **ಬಲೆ** ಎಂಬ ಪದದ ಉಲಿಗಳನ್ನು ಹಿಂದೆ ಮುಂದೆ ಮಾಡುವವರು ಅದನ್ನು **ಎಲಬ್** ಎಂದು ಹೇಳುವುದಿಲ್ಲ. ಹಾಗೆ ಮಾಡಿದರೆ ಅವರಿಗೆ ಬಲೆಯಲ್ಲಿ ಇರುವ ಉಲಿಗಳು ಮತ್ತು ಅವುಗಳ ಸರತಿಯನ್ನು ಇಡಿಯಾಗಿ ಹಿಂದೆ ಮುಂದೆ ಮಾಡುವುದು ತಿಳಿದಿದೆ ಎನ್ನಬೇಕಾಗುವುದು. ಆದರೆ ಈ ನುಡಿಯಾಟ ಆಡುವವರು ಹೀಗೆ ಮಾಡುವುದಿಲ್ಲ ಹೆಚ್ಚಾಗಿ ಅದನ್ನು **ಲೆಬ** ಎಂತಲೂ ಇಲ್ಲವೇ **ಲಬೆ** ಎಂತಲೋ ನುಡಿಯುತ್ತಾರೆ. ಮೊದಲ ಬಗೆಯ ಬದಲಾವಣೆ ಮಾಡಿಕೊಳ್ಳುವವರು ಬಲೆ ಪದದಲ್ಲಿರುವ ಎರಡು ಉಲಿಕಂತೆಗಳನ್ನು

ಇಡಿಯಾಗಿ ಹಿಂದೆ ಮುಂದೆ ಮಾಡಿದ್ದಾರೆ. ಎರಡನೆಯ ಬಗೆಯ ಬದಲಾವಣೆಯನ್ನು ಮಾಡಿಕೊಳ್ಳುವವರು **ಬಲೆ** ಪದದ ಎರಡು ಉಲಿಕಂತೆಗಳ ಏರಿನಲ್ಲಿರುವ ತಡೆಯುಲಿಗಳ (ಅಂದರೆ **ಬ್/ಲ್** ಉಲಿಗಳ) ಜಾಗಗಳನ್ನು ಬದಲಿಸಿಬಿಟ್ಟಿದ್ದಾರೆ. ಹೀಗೆ ನುಡಿಯಲ್ಲಿ ಈ ಬದಲಾವಣೆ ಮಾಡಿದವರಿಗೆ ಕನ್ನಡದ ಉಲಿಕಂತೆಗಳ ಕಟ್ಟುಗಳು ಗೊತ್ತಿರಲೇ ಬೇಕು. ಇಲ್ಲದಿದ್ದರೆ ಹೀಗೆ ನುಡಿಯುವುದನ್ನು ಅವರು ಬೇರೆ ಯಾರಿಂದಲೋ ಕಲಿತಿದ್ದಾರೆ ಎಂದು ಹೇಳಬೇಕಾಗುತ್ತದೆ.

ಉಲಿಕಂತೆಗಳ ಕಟ್ಟುಗಳನ್ನು ನುಡಿಯನ್ನು ಪಡೆದುಕೊಳ್ಳುವಾಗಲೇ ಅರಿತಿರುತ್ತಾರೆ ಎನ್ನುವುದನ್ನು ತಿಳಿಯಲು ಇನ್ನೂ ಒಂದು ಹಾದಿ ಇದೆ. ನುಡಿಯನ್ನು ಆಡಲು ಮೊದಲು ಮಾಡುವ ಮಕ್ಕಳು ಪದವನ್ನು ಹೇಳುವಾಗ ಕೆಲವೊಮ್ಮೆ ದೊಡ್ಡವರ ಹೇಳುವಂತೆ 'ತಪ್ಪು' ಮಾಡುತ್ತಾರೆ. ದೊಡ್ಡವರು ಆ ತಪ್ಪುಗಳನ್ನು ತಿದ್ದಲು ಮುಂದಾಗುತ್ತಾರೆ. ಪದವನ್ನು ಸರಿಯಾಗಿ ನುಡಿಯಲು ಹೇಳಿಕೊಡುತ್ತಾರೆ. ಮಕ್ಕಳು ಸರಿಯಾದ ಬಗೆಯಲ್ಲಿ ನುಡಿಯಲು ಕೂಡಲೇ ಮುಂದಾಗುವುದಿಲ್ಲ. 'ತಪ್ಪಾಗಿಯೇ' ಹೇಳುತ್ತಿರುತ್ತಾರೆ. ಅಂತಹ ಒಂದು ಬಗೆಯ 'ತಪ್ಪನ್ನು' ನೋಡೋಣ. **ಡಬ್ಬ** ಎಂಬುದನ್ನು **ಬಡ್ಡ** ಎಂದೋ **ಕಂಬ** ಎನ್ನುವುದನ್ನು **ಬಂಗ** ಎಂತಲೋ ಮಕ್ಕಳು ಹೇಳುತ್ತಾರೆಂದು ಕೊಳ್ಳೋಣ. ಈ ಎತ್ತುಗೆ ಸುಮ್ಮನೆ ಹೇಳಿದುದಲ್ಲ. ಇಂತಹ 'ತಪ್ಪನ್ನು' ಹಲವು ಮಕ್ಕಳು ಮಾಡುವುದನ್ನು ನೋಡಿದ್ದೇನೆ. ನೀವೂ ಕೂಡ ಕೇಳಿರುತ್ತೀರಿ. ನುಡಿಯುವಲ್ಲಿ ಮಕ್ಕಳು ಮಾಡಿರುವ ತಪ್ಪು ಏನು? ಮೊದಲಿಗೆ **ಕಂಬ** ಪದವನ್ನು ನೋಡೋಣ. ಈಗಾಗಲೇ ನೋಡಿರುವಂತೆ ಅದರಲ್ಲಿ **ಕಮ್** ಮತ್ತು ಬ ಎಂಬ ಎರಡು ಉಲಿಕಂತೆಗಳಿವೆ. 'ತಪ್ಪಾಗಿ' ನುಡಿಯುವ ಮಗು ಏನು ಮಾಡುತ್ತಿದೆ? ಎರಡೂ ಉಲಿಕಂತೆಗಳ ಏರಿನಲ್ಲಿರುವ ತಡೆಯುಲಿಗಳ ಜಾಗವನ್ನು ಬದಲಿಸಿದೆ. ಹಾಗಾಗಿ **ಕಂಬ**ದ ಬದಲು **ಬಂಗ** ಎನ್ನುತ್ತಿದೆ. (ಇದಲ್ಲದೆ ಇನ್ನೂ ಒಂದು ಬದಲಾವಣೆಯನ್ನು ಮಾಡಿಕೊಳ್ಳಲಾಗಿದೆ. **ಕಂಬ** ಪದದ ಮೊದಲ ಉಲಿಕಂತೆಯ ಇಳಿಯಲ್ಲಿ **ಮ್** ಎಂಬ ಮೂಗುಲಿ ಇದೆ. ಆದರೆ **ಬಂಗ**ದ ಮೊದಲ ಉಲಿಕಂತೆಯ ಇಳಿಯಲ್ಲಿ ಈಗ **ಮ್** ಇಲ್ಲ; ಬದಲಿಗೆ **ಙ್** ಇದೆ. ಈ ಬದಲಾವಣೆ ಏಕಾಯಿತು ಎಂಬುದು ಉಲಿಕಂತೆಗಳ ಇನ್ನೊಂದು ಕಟ್ಟಿನ ಕಡೆಗೆ ನಮ್ಮನ್ನು ಕರೆದೊಯ್ಯುತ್ತದೆ. ಈಗ ಅದನ್ನು ಬದಿಗಿಡೋಣ) **ಡಬ್ಬ** ಎಂಬ ಪದದಲ್ಲಿ ಎರಡು ಉಲಿಕಂತೆಗಳಿವೆ. **ಡಬ್** ಮತ್ತು ಬ ಎಂದು ತಿಳಿಯೋಣ. ಇವೆರಡೂ ಉಲಿಕಂತೆಗಳ ಏರಿನಲ್ಲಿರುವ ತಡೆಯುಲಿಗಳ ಜಾಗವನ್ನು ಬದಲಿಸಿ ಮಗು ನುಡಿಯುತ್ತಿದೆ. ಇಲ್ಲಿಯೂ ಕೂಡ ಇನ್ನೊಂದು ಹೆಚ್ಚಿನ ಬದಲಾವಣೆ ನಡೆದಿದೆ. ಕೇವಲ ಏರಿನ ತಡೆಯುಲಿಗಳ ಜಾಗ ಅದಲು ಬದಲು ಮಾಡಿದ್ದರೆ **ಬಡ್ಡ** ಎಂದು ಹೇಳಬೇಕಿತ್ತು ಹಾಗೆ ಮಾಡಿಲ್ಲ. ಇದನ್ನೂ ಕೂಡ ನಾವು ತಿಳಿಯಬೇಕಿದೆ. ಏನೇ ಇರಲಿ ಮಗುವಿಗೆ ಕನ್ನಡದ ಉಲಿಕಂತೆಗಳ ಕಟ್ಟುಗಳು ಅರಿವಿಗೆ ಬಂದಿರುವುದರಿಂದಲೇ ಅದು ಇಂತಹ ಬದಲಾವಣೆಯನ್ನು ಮಾಡಿ ನುಡಿಯುತ್ತಿದೆ ಎಂಬು ಹೇಳುವುದೇ ಸರಿ.

ಈ ಮಾತು ನಮ್ಮನ್ನು ಇನ್ನೊಂದು ನೆಲೆಗೆ ಒಯ್ಯುತ್ತದೆ. ಮಕ್ಕಳು ಪದದ ಉಲಿಗಳ ಸರಣಿಯನ್ನು ಅರಿಯುವ ಮೊದಲೇ ಆ ಪದದ ಉಲಿಕಂತೆಯ ನೆಲೆಯನ್ನು ಅರಿತಿರುತ್ತಾರೆ. ಈ ಉಲಿಕಂತೆಯ ನೆಲೆಯನ್ನು **ನಾದದ ಪದರು** ಎಂದು ತಿಳಿಯಬೇಕು. ಈ ನಾದದ ಪದರಿನಲ್ಲಿ ಯಾವ ಬದಲಾವಣೆಯನ್ನೂ ಮಾಡುವುದಿಲ್ಲ. ಅದರಲ್ಲಿ ಬಂದು ಸೇರುವ ತಡೆಯುಲಿಗಳನ್ನು ಮಾತ್ರ ಬದಲಾಯಿಸುತ್ತಿರುತ್ತೇವೆ. ಈ ಮಾತಿಗೆ ಇನ್ನೂ ಒಂದು ಎತ್ತುಗೆಯನ್ನು ನೋಡಬಹುದು. ಹಾಡೊಂದನ್ನು ಹೇಳುವಾಗ ಯಾವುದೋ ಸಾಲು ಮರೆಯಿತು ಎಂದುಕೊಳ್ಳಿ. ಸಾಲು ಮರೆಯಿತು ಎಂದರೆ ಆ ಸಾಲಿನಲ್ಲಿ ಬರುವ ಪದಗಳು ಮರೆತು ಹೋಗಿವೆ ಎಂದಾಯ್ತು. ಆದರೂ ಹಾಡುವವರು ಸುಮ್ಮನಾಗುವುದಿಲ್ಲ. ಬದಲಿಗೆ ಯಾವುದೋ ಒಂದು ಉಲಿಯನ್ನು ಆ ಹಾಡಿನ ನಾದದ ಪದರಿಗೆ ಹೊಂದುವಂತೆ ಗುನುಗುತ್ತ ಹಾಡುವುದನ್ನು ಮುಂದುವರೆಸುತ್ತಾರೆ. ಅಂದರೆ ಪದಕ್ಕಿಂತ ಮೊದಲಿಗೆ ಆ ಪದದ ನಾದದ ಪದರು ನಮಗೆ ಮನದಟ್ಟಾಗಿರುತ್ತದೆ. ಈ ಎಲ್ಲ ಎತ್ತುಗೆಗಳನ್ನು ನೋಡಿದಾಗ ಉಲಿಕಂತೆಯ ಕಟ್ಟುಗಳು ನುಡಿಯನ್ನು ಪಡೆಯುವಾಗಲೇ ನಮ್ಮಲ್ಲಿ ನೆಲೆಯೂರಿರುತ್ತವೆ ಎಂದು ಒಪ್ಪಲೇಬೇಕಾಗುತ್ತದೆ. ನಮ್ಮ ನುಡಿಯರಿಮೆಯ ಚಹರೆಯನ್ನು ಅರಿಯಲು ಉಲಿಕಂತೆಗಳ ಕಟ್ಟನ್ನು ತಿಳಿದುಕೊಳ್ಳಲೇ ಬೇಕಾಗುತ್ತದೆ.

ಉಲಿಕಂತೆಗಳ ಕಟ್ಟುಗಳನ್ನು ಆಡುಗರು ಬಲ್ಲವರಾಗಿರುತ್ತಾರೆ ಎಂಬುದನ್ನು ಒಪ್ಪಲು ಇನ್ನೂ ಒಂದು ಪುರಾವೆ ಇದೆ. ಮಾತಾಡುವಾಗ ಗೊತ್ತಿಲ್ಲದೆ ಏನನ್ನೋ ಹೇಳಲು ಹೋಗಿ ಮತ್ತೇನ್ನೋ ಹೇಳುವುದುಂಟು. ಹಲವು ಬಗೆಗಳಲ್ಲಿ ಈ ತಪ್ಪುಗಳಾಗುತ್ತವೆ. ಅವುಗಳಲ್ಲಿ ಪದಗಳಲ್ಲಿರುವ ಉಲಿಗಳನ್ನು ತಪ್ಪಾಗಿ ನುಡಿಯುವುದು ಒಂದು ಬಗೆ. ಹೊಸದಾಗಿ ನುಡಿಯನ್ನು ಕಲಿಯುತ್ತಿರುವವರಲ್ಲಿ, ಮಾತನಾಡುವಾಗ ಇನ್ನೆಲ್ಲೋ ನಿಗಾ ಇಟ್ಟಿರುವವರಲ್ಲಿ, ವೇಗವಾಗಿ ಮಾತನಾಡುವವರಲ್ಲಿ, ಕೆಲವೊಮ್ಮೆ ಮಕ್ಕಳಲ್ಲಿ ಇಂತಹ ತಪ್ಪುಗಳು ನಡೆಯುತ್ತವೆ. ಈ ಬಗೆಯ ತಪ್ಪುಗಳನ್ನು ಬಾಯ್ತಪ್ಪುಗಳು ಎಂದು ಗುರುತಿಸುತ್ತೇವೆ.ಹೆಚ್ಚಾಗಿ ಇಂದು ಸೊಲ್ಲಿನಲ್ಲಿ(=ವಾಕ್ಯ) ಬರುವ ಪದಗಳ ಉಲಿಗಳನ್ನು ಬದಲಿಸಿದಂತೆ ಇಂತಹ ತಪ್ಪುಗಳು ಕೇಳಿಸುತ್ತವೆ. ಇಂತಹ ಬಾಯ್ತಪ್ಪುಗಳನ್ನು ನುಡಿಯರಿಗರು ಅರಿಯಲು ಮುಂದಾಗಿದ್ದಾರೆ. ಇಂಗ್ಲಿಶ್ ನುಡಿಯನ್ನಾಡುವಾಗ ನಡೆಯುವ ಇಂತಹ ಬಾಯ್ತಪ್ಪುಗಳನ್ನು ಎತ್ತುಗೆಗಾಗಿ ನೋಡೋಣ. **you've wasted two terms** ಅನ್ನುವ ಬದಲು **you've tasted two worms** ಎಂದರೆ ಅದೊಂದು ಬಾಯ್ತಪ್ಪು. ಇಲ್ಲೇನಾಗಿದೆ? **ವೇಸ್ಟೆಡ್** (**ವೇ/ಸ್ಟೆಡ್**) ಎಂಬ ಪದದ ಮೊದಲ ಉಲಿಕಂತೆಯ ಏರಿನ ತಡೆಯುಲಿಯಾದ **ವ್** ಮತ್ತು **ಟರ್ಮ್ಸ್** (**ಟರ್ಮ್ಸ್** ಒಂದೇ ಉಲಿಕಂತೆಯ ಪದ-**ಟ್**/**ಅ**/**ರ್**/**ಮ್**/**ಸ್**) ಉಲಿಕಂತೆಯ ಏರಿನ ತಡೆಯುಲಿಯಾದ **ಟ್** ಉಲಿಗಳು ತಂತಮ್ಮ ಜಾಗವನ್ನು ಬದಲಿಸಿಕೊಂಡಿವೆ. (ಮೇಲೆ ಬಂದಿರುವ ಇಂಗ್ಲಿಶ್ ಸೊಲ್ಲುಗಳ ಬರಹ ರೂಪವನ್ನು ನೋಡಬೇಡಿ; ಆ ಸೊಲ್ಲುಗಳನ್ನು ನುಡಿಯುವ ಬಗೆಯನ್ನು ಕೇಳಿಸಿಕೊಳ್ಳಿ) ಈ ಬಗೆಯ ಬಾಯ್ತಪ್ಪುಗಳನ್ನು ಮಾಡುವವರಲ್ಲಿ ಉಲಿಕಂತೆಗಳ ಕಟ್ಟುಗಳು ಮೊದಲೇ ನೆಲೆಗೊಂಡಿರಬೇಕಲ್ಲವೇ? ಈ ಬಗೆಯ

ಬಾಯ್ತಪ್ಪುಗಳು ಯಾರಾದರೂ ಒಬ್ಬರಲ್ಲಿ ಯಾವಾಗಲೋ ಒಮ್ಮೆ ನಡೆಯಬಹುದು. ಆದರೆ ಅದರ ಹಿಂದೆ ಉಲಿಕಂತೆಯ ಒತ್ತಡ ಮಾತ್ರ ಇದ್ದೇ ಇರುತ್ತದೆ.

ಕನ್ನಡದಲ್ಲಿ ಇರುವ ಉಲಿಕಂತೆಗಳ ಬಗೆಗಳನ್ನು ಮತ್ತು ಅವು ಪದದಲ್ಲಿ ಎಲ್ಲಿ ಬರಬಲ್ಲವು ಎಂಬುದನ್ನು ಈಗ ಪಟ್ಟಿ ಮಾಡಿ ನೋಡಿಕೊಳ್ಳೋಣ

1. **ಒಂದು ಗಿಡ್ಡ ತೆರೆದ ಉಲಿ ಇರುವ ಉಲಿಕಂತೆಗಳು**: ಇಂತಹವು ಬಿಡಿಯಾಗಿ ಬರಲಾರವು. ಅಂದರೆ ಅವೇ ಒಂದು ಬಿಡಿ ಪದವಾಗಲಾರವು. ಪದದಲ್ಲಿ ಯಾವುದಾದರೂ ಜಾಗದಲ್ಲಿ ಬರಬಲ್ಲವು. ಎತ್ತುಗೆಗಾಗಿ ಇಲಿ ಎಂಬ ಪದವನ್ನು ನೋಡಿ. ಅದರ ಮೊದಲ ಉಲಿಕಂತೆ ಇ ಎಂಬ ತೆರೆದ ಉಲಿ. ಇದು ಪದದಲ್ಲಿ ಉಲಿಕಂತ ಆಗಬಲ್ಲುದು. ಆದರೆ **ಒಂದು ಗಿಡ್ಡ ತೆರೆದ ಉಲಿ ಮಾತ್ರ ಇರುವ ಪದಗಳು ಕನ್ನಡದಲ್ಲಿ ಇಲ್ಲ.**

2. **ಏರಿನಲ್ಲಿ ಒಂದು ತಡೆಯುಲಿ ಇದ್ದು ನಡುವಿನಲ್ಲಿ ಗಿಡ್ಡ ತೆರೆದ ಉಲಿ ಇರುವ ಉಲಿಕಂತೆಗಳು**: ಇಂತಹ ಉಲಿಕಂತೆಗಳು ಕೂಡ ಬಿಡಿಯಾಗಿ ಬರಲಾರವು. ಅಂದರೆ **ಒಂದು ತಡೆಯುಲಿ ಮತ್ತು ಒಂದು ತೆರೆದ ಉಲಿ ಮಾತ್ರ ಇರುವ ಬಿಡಿ ಪದಗಳು ಕನ್ನಡದಲ್ಲಿ ಇಲ್ಲ**. ಆದರೆ ಇಂತಹವು ಯಾವುದೇ ಪದದ ಉಲಿಕಂತೆಗಳಲ್ಲಿ ಒಂದಾಗಿ ಬರಬಲ್ಲವು. ಎತ್ತುಗೆಗಾಗಿ **ತಲೆ** ಎಂಬ ಪದದಲ್ಲಿ ಇರುವ **ತ** ಮತ್ತು **ಲೆ** ಎಂಬ ಎರಡೂ ಉಲಿಕಂತೆಗಳ ಏರಿನಲ್ಲಿ ಒಂದು ತಡೆಯುಲಿ (**ತ್/ಲ್**) ಇದ್ದು ನಡುವಿನಲ್ಲಿ ಒಂದು ಗಿಡ್ಡ ತೆರೆದ ಉಲಿ (**ಅ/ಎ**) ಇದೆ.

3. **ಉದ್ದ ತೆರೆದ ಉಲಿ ಮಾತ್ರ ಇರುವ ಉಲಿಕಂತೆಗಳು**: ಈ ಉಲಿ ಕಂತೆಗಳು ಬಿಡಿಯಾಗಿ ಪದವೊಂದರಲ್ಲಿ ಬರುವ ಎತ್ತುಗೆಗಳು ಕನ್ನಡದಲ್ಲಿ ಬಲು ಕಡಿಮೆ. **ಆ, ಈ,** ಏ ಮತ್ತು **ಓ** ಎಂಬ ಪದಗಳನ್ನು ಲೆಕ್ಕಕ್ಕೆ ಹಿಡಿಯಬಹುದು. ಆದರೆ ಇಂತಹ ಉದ್ದ ತೆರೆದ ಉಲಿ ಮಾತ್ರ ಇರುವ ಉಲಿಕಂತೆಗಳು ಮೊದಲ ಪದಗಳಲ್ಲಿ ಉಲಿ ಕಂತೆಗಳಾಗಿ ಬರಬಲ್ಲವು. ಪದಗಳ ನಡುವೆ ಎರಡನೆಯ ಇಲ್ಲವೇ ಮೂರನೆಯ ಉಲಿಕಂತೆಗಳಾಗಿ ಬರಲಾರವು. ಅಂದರೆ ಆಗ. **ಈತ,ಊಟ, ಏತ** ಮುಂತಾದ ಪದಗಳು ಕನ್ನಡದಲ್ಲಿವೆಯೇ ಹೊರತು, ಪದಗಳ ನಡುವೆ ಎರಡನೆಯ ಇಲ್ಲವೇ ಮೂರನೆಯ ಉಲಿಕಂತೆಯಾಗಿ ಈ ಬಗೆಯ ಉಲಿಕಂತೆಗಳು ಬರಲಾರವು.

4. **ಏರಿನಲ್ಲಿ ಒಂದು ತಡೆಯುಲಿ ಇದ್ದು ನಡುವಿನಲ್ಲಿ ಉದ್ದ ತೆರೆದ ಉಲಿ ಇರುವ ಉಲಿಕಂತೆಗಳು**: ಈ ಉಲಿ ಕಂತೆಗಳು ಬಿಡಿಯಾಗಿ ಒಂದು ಪದವೆಂಬಂತೆ ಇರುವ ಎತ್ತುಗೆಗಳು ಕನ್ನಡದಲ್ಲಿ ಕಡಿಮೆ. **ತಾ, ಬಾ, ನಾ,** ನೀ ಇಂತಹ ಕೆಲವನ್ನು ಹೆಸರಿಸಬಹುದು. (ಇಲ್ಲಿ **ಕೈ, ಬೌ, ಗೌ** (<**ಗೌಗತ್ತು**) ಮುಂತಾದ ಪದಗಳನ್ನು ಮೇಲೆ ಹೇಳಿದ ಮಾದರಿಯ ಉಲಿಕಂತೆಗಳಿಗೆ ಎತ್ತುಗೆಗಳೆಂದು ಹೇಳಲಾಗದು. ಏಕೆಂದರೆ ಈ ಪದಗಳನ್ನು ನುಡಿಯುವ ಬಗೆಯಲ್ಲಿ ಇವು **ಕಯ್,ಬವ್, ಗವ್** ಎಂದು ಕೇಳಿಸುತ್ತವೆ. ಅಂದರೆ ಇವುಗಳಲ್ಲಿ ಉದ್ದ ತೆರೆದ ಉಲಿಗಳು ನಡುವಿನಲ್ಲಿ

ಇಲ್ಲ) ಈ ಬಗೆಯ ಉಲಿಕಂತೆಗಳು ಕನ್ನಡದ ಪದಗಳಲ್ಲಿ ಹೆಚ್ಚುಹೆಚ್ಚು ಕಾಣಿಸಿಕೊಳ್ಳುತ್ತವೆ. ಆದರೆ 1 ಮತ್ತು 2 ನೆಯ ಬಗೆಯ ಉಲಿಕಂತೆಗಳು ಪದದ ಮೊದಲ ಉಲಿಕಂತೆಯಾಗಿದ್ದರೆ ಈ ಬಗೆಯ ಉಲಿಕಂತೆಗಳು ಎರಡನೆಯ ಉಲಿಕಂತೆಯಾಗಿರುವ ಪದಗಳು ಕನ್ನಡದಲ್ಲಿ ಇಲ್ಲ. ಎತ್ತುಗೆಗಾಗಿ **ಕಲಾ,ಮಹಾ** ಮಾದರಿಯ ಪದಗಳು. ಇವು ಕನ್ನಡದ ಪದಗಳಲ್ಲ. ಕನ್ನಡದಲ್ಲಿ ಇಂತಹ ಪದಗಳು ಇರಲಾರವು. ಏಕೆಂಬುದನ್ನು ಇದೇ ಬರಹದ ಬೇರೊಂದು ಕಡೆ ತಿಳಿಯೋಣ.

5. **ನಡುವಿನಲ್ಲಿ ಗಿಡ್ಡ ತೆರೆದ ಉಲಿ ಮತ್ತು ಇಳಿಯಲ್ಲಿ ಒಂದು ತಡೆಯುಲಿ ಇರುವ ಉಲಿಕಂತೆಗಳು**: ಇಂತಹ ಉಲಿಕಂತೆಗಳು ಬಿಡಿಯಾಗಿ ಪದಗಳಾಗಿ ಬರಬಲ್ಲವು. **ಉಳ್, ಇರ್, ಅಳ್, ಒರ್** ಮುಂತಾದ ಪದಗಳನ್ನು ಎತ್ತುಗೆಗಾಗಿ ಹೇಳಬಹುದು. ಕನ್ನಡ ನುಡಿಯುವ ಹಲವರಿಗೆ ಇವು ಕನ್ನಡ ಬಿಡಿ ಪದಗಳಲ್ಲವಲ್ಲ ಎನಿಸಬಹುದು. ಆದರೆ ಮುಂದೆ ಇದೇ ಬರಹದಲ್ಲಿ ನುಡಿಯ ಒಳ ಪದರ ಮತ್ತು ಹೊರ ಪದರಗಳ ಮಾತು ಬಂದಾಗ ಈ ಕೇಳ್ವಿಗೆ ಬದಲು ದೊರಕುತ್ತದೆ. ಈ ಉಲಿಕಂತೆಗಳು ಪದಗಳಲ್ಲಿ ಹೆಚ್ಚು ಹೆಚ್ಚು ಕಾಣಿಸಿಕೊಳ್ಳುತ್ತವೆ. ಕನ್ನಡ ಬರಹದ ಸೊಲ್ಲರಿಮೆಗಳಲ್ಲಿ ಇಂದಿನ ಕನ್ನಡದ ಪದಗಳು ತನ್ನ ಕೊನೆಯ ಉಲಿಕಂತೆಗಳನ್ನಾಗಿ ಇಂತಹ ಉಲಿಕಂತೆಗಳನ್ನು ಹೊಂದಲಾರವು ಎಂದು ತಿಳಿಸುತ್ತವೆ. (ಆ ಸೊಲ್ಲರಿಮೆಗಳ ಮಾತುಗಳಲ್ಲಿ ಹೇಳುವುದಾದರೆ ಕನ್ನಡದ ಪದಗಳೆಲ್ಲ ತೆರೆದ ಉಲಿಗಳಿಂದ ಕೊನೆಗೊಳ್ಳುವುದರಿಂದ ಈ ಬಗೆಯ ಉಲಿಕಂತೆಗಳು ಪದದ ಕೊನೆಯಲ್ಲಿ ಬರಲಾರವು) ಇದು ಹೆಚ್ಚೂ ಕಡಿಮೆ ದಿಟ. ಕನ್ನಡದ ಕೆಲವು ಒಳನುಡಿಗಳಲ್ಲಿ ಇಂತಹ ಉಲಿಕಂತೆಗಳು ಪದಗಳ ಕೊನೆಗೆ ಬರುವ ಎತ್ತುಗೆಗಳು ದೊರೆಯುವುದುಂಟು ಎಂದು ಈಗ ನೆನಪಿಟ್ಟುಕೊಂಡರೆ ಸಾಕು

6. **ಏರಿನಲ್ಲಿ ಒಂದು ತಡೆಯುಲಿ, ನಡುವಿನಲ್ಲಿ ಗಿಡ್ಡ ತೆರೆದ ಉಲಿ ಮತ್ತು ಕೊನೆಯಲ್ಲಿ ಒಂದು ತಡೆಯುಲಿ ಇರುವ ಉಲಿಕಂತೆಗಳು**: ಈ ಬಗೆಯ ಉಲಿಕಂತೆಗಳಿಗೆ ನೂರಾರು ಎತ್ತುಗೆಗಳಿವೆ. ಇವು ಬಿಡಿಯಾದ ಪದಗಳೂ ಆಗಬಲ್ಲವು. ಪದಗಳಲ್ಲಿ ಯಾವ ಜಾಗದಲ್ಲಿಯೂ ಉಲಿಕಂತೆಗಳಾಗಿಯೂ ಬರಬಲ್ಲವು. ಇಂತಹ ಉಲಿಕಂತೆಗಳಿಗೆ ಎತ್ತುಗೆಗಳು: **ಕನ್(<ಕಂದ), ಕಮ್(<ಕಂಪು)**. ಕನ್ನಡದ ಕೆಲಸ ಪದಗಳ ದಿಂಡುಗಳು ಇಂತಹ ಉಲಿಕಂತೆಗಳೇ ಆಗಿವೆ. ಎತ್ತುಗೆಗಾಗಿ ನೋಡಿ; **ನಿಲ್, ಬರ್, ತರ್** ಮಂತಾದವು.

7. **ಉದ್ದ ತೆರೆದ ಉಲಿಯನ್ನು ನಡುವಿನಲ್ಲಿ ಹೊಂದಿದ್ದು ಇಳಿಯಲ್ಲಿ ಒಂದು ತಡೆಯುಲಿಯನ್ನು ಹೊಂದಿರುವ ಉಲಿಕಂತೆಗಳು:ಆಳ್, ಈಯ್, ಏರ್, ಊರ್** ಮುಂತಾದವು ಇಂತಹ ಉಲಿಕಂತೆಗಳಿಗೆ ಎತ್ತುಗೆಗಳು. ಇವು ಬಿಡಿಯಾದ ಪದಗಳೂ ಆಗಿವೆ. ಹೀಗಲ್ಲದೆ ಪದದಲ್ಲಿ ಒಂದು ಉಲಿಕಂತೆಯಾಗಿಯೂ ಈ ಬಗೆಯ ಉಲಿಕಂತೆಗಳು ಬರಬಲ್ಲವು. ಪದದ ಮೊದಲ ಉಲಿಕಂತೆ ತೆರೆದ ಉಲಿಕಂತೆಯಾಗಿದ್ದರೆ ಇಲ್ಲವೇ ಅದರ ನಡುವಿನ ತೆರೆದ ಉಲಿ ಗಿಡ್ಡವಾಗಿದ್ದರೆ ಆಗ ಇಂತಹ ಉಲಿಕಂತೆಗಳು ಪದದ ಎರಡನೆಯ ಉಲಿಕಂತೆಗಳಾಗಿ ಬರಲಾರವು.

8. **ಏರಿನಲ್ಲಿ ಒಂದು ತಡೆಯುಲಿಯೂ,ನಡುವಿನಲ್ಲಿ ಉದ್ದ ತೆರೆದ ಉಲಿಯೂ ಮತ್ತು ಇಳಿಯಲ್ಲಿ ಒಂದು ತಡೆಯುಲಿಯನ್ನು ಹೊಂದಿರುವ ಉಲಿ ಕಂತೆಗಳು: ಕಾಲ್, ಕೇಳ್, ಬೀಳ್, ತೂರ್, ತೇಯ್** ಮುಂತಾದವು ಈ ಮಾದರಿಯ ಉಲಿಕಂತೆಗಳಿಗೆ ಎತ್ತುಗೆಗಳು. ಇವು ಬಿಡಿ ಪದಗಳಾಗಿರುವಂತೆಯೇ ಪದದಲ್ಲಿ ಒಂದು ಉಲಿಕಂತೆಯಾಗಿಯೂ ಬರಬಲ್ಲವು. ಆದರೆ 7ರಲ್ಲಿ ಹೇಳಿದ ಶರತ್ತು ಈ ಬಗೆಯ ಉಲಿಕಂತೆಗಳಿಗೂ ಸರಿಹೊಂದುತ್ತದೆ. ಅಂದರೆ **ಇವು ಪದದ ಎರಡನೆಯ ಉಲಿಕಂತೆಯಾಗಿ ಬರಬೇಕಾದರೆ ಆ ಪದದ ಮೊದಲನೆಯ ಉಲಿಕಂತೆಯ ನಡುವಿನ ತೆರೆದ ಉಲಿಯು ಗಿಡ್ಡವಾಗಿರಬಾರದು.** ಆದರೆ ಕನ್ನಡದ ಕೆಲವು ಒಳನುಡಿಗಳಲ್ಲಿ ಈ ಮಾದರಿಯ ಪದಗಳು ಕೇಳಲು ಸಿಗುತ್ತವೆ. ಹೀಗಾಗುವುದೇಕೆಂದು ಕೇಳಬಹುದು. ಕನ್ನಡ ನುಡಿ ಬೆಳೆದು ಬಂದ ಬಗೆಯನ್ನು ಅರಿತರೆ ಈ ಕೇಳ್ವಿಗೆ ಬದಲು ಸಿಗುವುದು.

9. **ನಡುವಿನಲ್ಲಿ ಗಿಡ್ಡ ತೆರೆದ ಉಲಿ ಮತ್ತು ಇಳಿಯಲ್ಲಿ ಒಂದಕ್ಕಿಂತ ಹೆಚ್ಚು ತಡೆಯುಲಿಗಳನ್ನು ಹೊಂದಿರುವ ಉಲಿಕಂತೆಗಳು:** ನುಡಿಯ ಒಳ ಪದರದಲ್ಲಿ ಇಂತಹ ಉಲಿಕಂತೆಗಳಿರುತ್ತವೆ ಎಂದು ತಿಳಿಯಲಾಗಿದೆ. ಎತ್ತುಗೆಗಾಗಿ **ಅಪ್ಪು,ಉಪ್ಪು, ಉಜ್ಜು, ಎತ್ತು** ಮುಂತಾದ ಪದಗಳನ್ನು ನೋಡಿ. ಇವುಗಳ ಮೊದಲ ಉಲಿಕಂತೆಗಳು **ಅಪ್ಪ್, ಉಪ್ಪ್, ಉಜ್ಜ್, ಎತ್ತ್** ಆಗಿವೆ. ಈ ಉಲಿಕಂತೆಗಳಲ್ಲಿ ಇಳಿಯಲ್ಲಿ ಒಂದಕ್ಕಿಂತ ಹೆಚ್ಚು ತಡೆಯುಲಿಗಳಿವೆ. ಆದರೆ ಒಂದೇ ತಡೆಯುಲಿ ಎರಡು ಬಾರಿ ಬಂದಿರುವುದನ್ನು ನೋಡುತ್ತೇವೆ. ಇಂತಹ ಉಲಿಕಂತೆಗಳಲ್ಲಿ ಇಳಿಯಲ್ಲಿ ಎರಡು ಬೇರೆ ಬೇರೆ ಬಗೆಯ ತಡೆಯುಲಿಗಳು ಬರಲಾರವು ಎಂಬುದು ಒಂದು ಶರತ್ತು. ಒಂದೊಮ್ಮೆ ಹೀಗೆ ಎರಡು ಬೇರೆ ಬೇರೆ ತಡೆಯುಲಿಗಳು ಇಳಿಯಲ್ಲಿ ಇರುವುದಾದರೆ ಮೊದಲ ತಡೆಯುಲಿ ಒಂದು ಮೂಗುಲಿಯೇ ಆಗಿರುತ್ತದೆ ಎಂಬುದು ಇನ್ನೊಂದು ಶರತ್ತು. **ಅಂಟು** ಎಂಬ ಪದವನ್ನು ನೋಡಿ. ಇದರ ಮೊದಲ ಉಲಿಕಂತೆ **ಅಂಟ್**. ಅಂದರೆ ಇಳಿಯಲ್ಲಿ **ಣ್** ಮತ್ತು **ಟ್** ಇವೆ.

10. **ಏರಿನಲ್ಲಿ ಒಂದು ತಡೆಯುಲಿ,ನಡುವಿನಲ್ಲಿ ಗಿಡ್ಡ ತೆರೆದ ಉಲಿ ಮತ್ತು ಇಳಿಯಲ್ಲಿ ಒಂದಕ್ಕಿಂತ ಹೆಚ್ಚು ತಡೆಯುಲಿ ಇರುವ ಉಲಿಕಂತೆಗಳು:** ಇಂತಹ ಉಲಿಕಂತೆಗಳು ಕನ್ನಡ ಪದಗಳಲ್ಲಿ ಕಾಣಿಸಿಕೊಳ್ಳುತ್ತವೆ. **ಕಣ್ಣ್**(<**ಕಣ್ಣು**), **ಕಲ್ಲ್**(<**ಕಲ್ಲು**), **ಸೊಲ್ಲ್**(<**ಸೊಲ್ಲು**) ಮುಂತಾದವು ಇಂತಹ ಉಲಿಕಂತೆಗಳು. 9ರಲ್ಲಿ ಹೇಳಿದ ಉಲಿಕಂತೆಗೆ ಯಾವ ಶರತ್ತುಗಳಿವೆಯೋ ಅವೆಲ್ಲ ಶರತ್ತುಗಳು ಈ ಉಲಿಕಂತೆಗಳಿಗೂ ಹೊಂದಿಕೊಳ್ಳುತ್ತವೆ.

ಮುಂದೆ ಬೇರೆ ನುಡಿಗಳಲ್ಲಿ ಕಾಣಿಸಿಕೊಂಡರೂ ಕನ್ನಡದಲ್ಲಿ ಕಾಣಸಿಗದ ಉಲಿಕಂತೆಯ ಮಾದರಿಗಳನ್ನು ನಾವು ನೋಡೋಣ.

1. **ಏರಿನಲ್ಲಿ ಒಂದಕ್ಕಿಂತ ಹೆಚ್ಚು ತಡೆಯುಲಿಗಳನ್ನು ಹೊಂದಿರುವ ಉಲಿಕಂತೆಗಳು:** ಈಗಾಗಲೇ ಇಂಗ್ಲಿಶ್ ನುಡಿಯಲ್ಲಿ ಅಂತಹ ಉಲಿಕಂತೆಗಳಿರುವುದನ್ನು ನೋಡಿದ್ದೇವೆ.

2. **ನಡುವಿನಲ್ಲಿ ಉದ್ದ ತೆರೆದ ಉಲಿ ಇದ್ದು ಇಳಿಯಲ್ಲಿ ಒಂದಕ್ಕಿಂತ ಹೆಚ್ಚು ತಡೆಯುಲಿಗಳು (ಎರಡು ಇಲ್ಲವೇ ಅದಕ್ಕೂ ಹೆಚ್ಚು) ಇರುವ ಉಲಿಕಂತೆಗಳು**: ತಮಿಳಿನಲ್ಲಿ ಇಂತಹ ಉಲಿಕಂತೆಗಳಿರುವುದನ್ನು ಈಗಾಗಲೇ ನೋಡಿದ್ದೇವೆ.

ಹೀಗೆ ಕನ್ನಡದಲ್ಲಿ ಯಾವುದೋ ಮಾದರಿಯ ಉಲಿಕಂತೆಗಳು ಇಲ್ಲವೆಂದು ಹೇಳಿದ ಕೂಡಲೇ ಕನ್ನಡ ನುಡಿಯುವವರು ಅಂತಹ ಉಲಿಕಂತೆಗಳನ್ನು ನುಡಿಯಲಾರರು ಎಂದು ತಿಳಿಯಬಾರದು. ಬೇರೆ ನುಡಿಗಳಿಂದ ಪದಗಳನ್ನು ಕನ್ನಡಕ್ಕೆ ಪಡೆದುಕೊಂಡಾಗ ಕನ್ನಡದಲ್ಲಿ ಇಲ್ಲದ ಮಾದರಿಯ ಉಲಿಕಂತೆಗಳನ್ನು ಪಡೆದ ಪದಗಳೂ ಸೇರಿಕೊಂಡಿರುತ್ತವೆ. ಮೇಲೆ ಹೇಳಿದ ಉಲಿಕಂತೆಗಳ ಒಂದನೆಯ ಮಾದರಿಗೆ **ಕ್ರಮ, ಸ್ಕಿನ್, ಪ್ರೇಮ, ಸ್ಕೋರ್** ಮುಂತಾದವು ಎತ್ತುಗೆಗಳಾಗುತ್ತವೆ. ಹೀಗೆ ಕನ್ನಡದಲ್ಲಿ ಇಲ್ಲದ ಮಾದರಿಯ ಉಲಿಕಂತೆಗಳನ್ನು ಹೊಂದಿರುವ ಪದಗಳನ್ನು ಬೇರೆ ನುಡಿಗಳಿಂದ ಪಡೆದಾಗ ಎರಡು ಹಾದಿಗಳನ್ನು ಹಿಡಿಯುವುದನ್ನು ನೋಡುತ್ತೇವೆ.

1. ಕನ್ನಡದಲ್ಲಿ ಇಲ್ಲದಿದ್ದರೂ ಹೊಸ ಮಾದರಿಯ ಉಲಿಕಂತೆಗಳನ್ನು ನುಡಿಯ ತೊಡಗುವುದು.

2. ಕನ್ನಡದ ಉಲಿಕಂತೆಗಳ ಮಾದರಿಗೆ ಹೊಂದಿಸಿಕೊಂಡು ಪಡೆದ ಪದಗಳನ್ನು ಅಳವಡಿಸಿಕೊಳ್ಳುವುದು.

   ಬಳಕೆಯ ಸೊಲ್ಲರಿಮೆಗಳು ಹೀಗೆ ಹೊಂದಿಸಿಕೊಂಡ ಪದಗಳನ್ನು 'ತದ್ಭವ'ಗಳೆಂದು ಕರೆದಿವೆ. **ಬರಮ(<ಬ್ರಹ್ಮ) , ದರುಮ(<ಧರ್ಮ)** ಮುಂತಾದವು ಇಂತಹ ಹೊಂದಾಣಿಕೆಯ ಪದಗಳಾಗಿವೆ.

ಕನ್ನಡದಲ್ಲಿ ಇರುವ ಮಾದರಿಯ ಉಲಿಕಂತೆಗಳು ಬೇರೆ ನುಡಿಗಳಲ್ಲಿ ಇದ್ದರೂ ಕನ್ನಡ ಆ ಉಲಿಕಂತೆಗಳ ಬಳಕೆಗೆ ಹಾಕಿಕೊಂಡಿರುವ ಶರತ್ತುಗಳು ಆ ನುಡಿಯ ಚಹರೆಯಷ್ಟೇ ಅಗಿರುತ್ತವೆ. ಅಂದರೆ ಕನ್ನಡ ಒಂದು ಬಗೆಯ ಉಲಿಕಂತೆ ಪದದ ಯಾವುದೋ ಜಾಗದಲ್ಲಿ ಬರಲಾರದೆಂದು ಕಟ್ಟನ್ನು ಮಾಡಿಕೊಂಡಿದ್ದರೆ ಬೇರೆ ನುಡಿಯಲ್ಲಿ ಅಂತಹ ಉಲಿಕಂತೆ ಆ ಕಟ್ಟನ್ನು ಮೀರಿ ಬಳಕೆಯಾಗುತ್ತಿರಬಹುದು. ಹೀಗಾಗಿ ಉಲಿಕಂತೆಗಳ ಮಾದರಿಗಳ ಆಯ್ಕೆ ಮತ್ತು ಅವುಗಳ ಬಳಕೆಯ ಕಟ್ಟುಗಳು ಆಯಾ ನುಡಿಗೆ ಹೊಂದುವ ಚೌಕಟ್ಟುಗಳಾಗಿರುತ್ತವೆ. ಬೇರೆ ನುಡಿಯಲ್ಲಿ ಬೇರೆಯೇ ಆಯ್ಕೆಗಳಿದ್ದು ಅವುಗಳ ಬಳಕೆಗೆ ಬೇರೆಯೇ ಕಟ್ಟುಗಳಿರುತ್ತವೆ.

ಇನ್ನೊಂದು ಕೇಳ್ವಿಯನ್ನು ಮುಂದಿಡೋಣ. ಕನ್ನಡದ ಉಲಿಕಂತೆಗಳ ಆಯ್ಕೆಗಳು ಮತ್ತು ಕಟ್ಟುಗಳು ಎಂದಿನಿಂದಲೂ ಬದಲಾಗದೆ ಉಳಿದಿವೆಯೇ? ನುಡಿಯ ಬೆಳವಣಿಗೆಯನ್ನು ತಿಳಿಯಬಯಸುವವರು ಈ ಕೇಳ್ವಿಯನ್ನು ಎದುರಿಸುತ್ತಾರೆ. ಉಲಿಕಂತೆಗಳ ಆಯ್ಕೆ ಮತ್ತು ಕಟ್ಟುಗಳು ನುಡಿಯರಿವಿನಲ್ಲಿ ಸೇರುತ್ತವೆ ಎಂದು ಹೇಳಿದ್ದೇವೆ. ನುಡಿಯ ಒಳಪದರದ ಕಟ್ಟುಗಳು ಬದಲಾಗುವುದಿಲ್ಲ. ಹಾಗೆ ಬದಲಾದರೆ ಒಂದು ಕಾಲದ ನುಡಿ ಇನ್ನೊಂದು ಕಾಲದವರಿಗೆ ತಿಳಿಯದೇ ಹೋಗಬಹುದು. ಅಂದರೆ ನುಡಿಯ ಒಳ ಪದರದಲ್ಲಿರುವ ಕಟ್ಟುಗಳು ಬದಲಾಗದೇ ಉಳಿದಿರಬೇಕು.

ಆಗ ಮಾತ್ರ ನಮಗೆ ಹಳಗನ್ನಡದ ಸೊಲ್ಲನ್ನು, ಸಾವಿರ ವರುಶದ ಹಿಂದಿನ ಕಲ್ಬರಹವನ್ನು ಓದಿ ಅದರ ತಿರುಳನ್ನು ಅರಿಯಲು ಆಗುತ್ತದೆ. ಆದರೆ ನುಡಿಯಲ್ಲಿ ಆಗುವ ಬದಲಾವಣೆಗಳನ್ನು ಉಲಿಕಂತೆಗಳ ನೆಲೆಯಲ್ಲಿ ಅರಿತುಕೊಂಡರೆ ಕೆಲವು ಕೇಳ್ವಿಗಳಿಗೆ ಬದಲು ಸಿಗುತ್ತದೆ.

ಒಂದೆರಡು ಎತ್ತುಗೆಗಳನ್ನು ಇಟ್ಟುಕೊಂಡು ಇದನ್ನು ಅರಿಯಲು ಮುಂದಾಗೋಣ. ಬಳಕೆಯ ಸೊಲ್ಲರಿಮೆಗಳು ಹಳಗನ್ನಡದಲ್ಲಿ ಇದ್ದ '**ಸಬಿಂದುಕ**' ಪದಗಳು ನಡುಗನ್ನಡದ ಹೊತ್ತಿಗೆ 'ಅಬಿಂದುಕ'ಗಳಾದವು ಎಂದು ಹೇಳುತ್ತವೆ. ಹಳಗನ್ನಡ ಮತ್ತು ನಡುಗನ್ನಡಗಳಲ್ಲಿ ಗೆರೆ ಎಳೆದು ತೋರುವ ಒಂದು ಬದಲಾವಣೆಯನ್ನಾಗಿ ಈ 'ಬಿಂದುಲೋಪ'ವನ್ನು ಬಣ್ಣಿಸಲಾಗಿದೆ. **ತೋಂಟ, ದಾಂಟು, ಮೀಂಟು, ನಾಂಟು, ತೇಂಕು, ನೂಂಕು** ಮುಂತಾದ ಪದಗಳು ಹಳಗನ್ನಡದ ಬರಹಗಳಲ್ಲಿ ಕಾಣಸಿಗುತ್ತವೆ. ನಡುಗನ್ನಡದಲ್ಲಿ ಈ ಪದಗಳು **ತೋಟ, ದಾಟು, ಮೀಟು, ನಾಟು, ತೇಕು ನೂಕು** ಎಂದಾಗುತ್ತವೆ. ಈ ಪದಗಳ ಬರಹ ರೂಪದಲ್ಲಿದ್ದ ಬಿಂದುಗಳು ಕಳೆದು ಹೋಗಿವೆ ಎನ್ನುವುದು ಬಳಕೆಯ ಸೊಲ್ಲರಿಮೆಗಳ ನಿಲುವು. ದಿಟವಾಗಿ ಇಲ್ಲಿ ನಡೆದಿರುವ ಬದಲಾವಣೆ ಯಾವುದು?

ಹಳಗನ್ನಡದ ಈ ಎಲ್ಲ ಪದಗಳ ಮೊದಲ ಉಲಿಕಂತೆಗಳನ್ನು ನೋಡಿ. ಅದರಲ್ಲಿ ಏರಿನಲ್ಲಿ ಒಂದು ತಡೆಯುಲಿ (**ತ್, ದ್, ಮ್, ನ್, ತ್, ನ್**)ಇದ್ದು ನಡುವಿನ ಉಲಿ ಉದ್ದ ತೆರೆದ ಉಲಿಯಾಗಿವೆ (**ಓ, ಆ, ಈ, ಆ, ಏ, ಊ**). ಈ ಪದಗಳ ಎರಡನೆಯ ಉಲಿಕಂತೆಗಳು ಯಾವುವು? **ಣ್ಟ, ಣ್ಟು, ಣ್ಟು, ಣ್ಟು ಙ್ಕು, ಙ್ಕು** ಎಂದು ಹೇಳಬರುವುದಿಲ್ಲ. ಆಗ ಎರಡನೆಯ ಉಲಿಕಂತೆ ಏರಿನಲ್ಲಿ ಒಂದಕ್ಕಿಂತ ಹೆಚ್ಚು ತಡೆಯುಲಿ ಇರುವ ಉಲಿಕಂತೆಗಳು ಕನ್ನಡದಲ್ಲಿ ಇವೆಯೆಂದು ಹೇಳಬೇಕಾಗುತ್ತದೆ. ಇದು ಸರಿಯಾಗದು. ಹಾಗಿದ್ದಲ್ಲಿ ಮೊದಲನೆಯ ಉಲಿಕಂತೆಯ ಇಳಿಯಲ್ಲಿ ಎರಡು ತಡೆಯುಲಿಗಳಿರುತ್ತವೆಂದು ತಿಳಿಯಬೇಕಾಗುತ್ತದೆ. ನಾವೀಗ ನೋಡಿದಂತೆ ಇಂದಿನ ಕನ್ನಡದಲ್ಲಿ ಈ ಮಾದರಿಯ ಉಲಿಕಂತೆಗಳನ್ನು ಕಾಣಲಾಗುವುದಿಲ್ಲ. ಅಂದರೆ ಕನ್ನಡ ಒಂದು ಹಂತದಲ್ಲಿ ಇಂತಹ ಉಲಿಕಂತೆಗಳನ್ನು ಹೊಂದಿದ್ದು ಬಳಿಕ ಆ ಆಯ್ಕೆಯನ್ನು ಬಿಟ್ಟುಕೊಟ್ಟಿದೆ ಎನ್ನಬೇಕಾಗುವುದಲ್ಲವೇ? ಆ ಆಯ್ಕೆಯನ್ನು ಬಿಟ್ಟು ಕೊಡುವುದೆಂದರೆ ಉಲಿಕಂತೆಯ ಕಟ್ಟನ್ನು ಬದಲಿಸಿಕೊಳ್ಳುವುದು ಎಂದಾಯ್ತು. ದಿಟದಲ್ಲಿ ನಡೆದಿರುವುದು ಇದೇ ಆಗಿದೆ. **ನೂಂಕ್** ಎಂಬ ಉಲಿಕಂತೆಯನ್ನು ಕನ್ನಡ ಬಳಕೆಯ ಮಾದರಿಗೆ ಹೊಂದಿಸಿಕೊಳ್ಳಬೇಕಾದರೆ ಇಳಿಯಲ್ಲಿರುವ ಎರಡು ತಡೆಯುಲಿಗಳಲ್ಲಿ ಒಂದನ್ನು ಬಿಟ್ಟುಬಿಡಬೇಕಾಗುವುದು. ಹಾಗಾಗಿ **ನೂಂಕ್(ನ್/ಊ/ಙ್/ಕ್)** ಇದ್ದು **ನೂಕ್(ನ್/ಊ/ಕ್)** ಆಯಿತು. ಇದು ಇಳಿಯಲ್ಲಿ ಒಂದು ತಡೆಯುಲಿ ಇದ್ದು ನಡುವಿನಲ್ಲಿ ಉದ್ದ ತೆರೆದ ಉಲಿ ಇರುವ ಉಲಿಕಂತೆಯ ಬಗೆಯಾಯಿತು. ಇದು ಕನ್ನಡದಲ್ಲಿ ಇಂದೂ ಬಳಕೆಯಲ್ಲಿರುವ ಉಲಿಕಂತೆಯ ಮಾದರಿಯೇ ಆಗಿದೆ. ಎತ್ತುಗೆಗಾಗಿ **ಕೇಳ್,ಮಾಡ್,ಕೋರ್** ಮುಂತಾದವು.

ಬದಲಾವಣೆ ಹೀಗೇ ಆಗಿರಬೇಕು ಎಂದು ಹೇಳಿದ್ದು ಸುಮ್ಮಸುಮ್ಮನೆ ಅಲ್ಲ. ಕನ್ನಡದ ಕೆಲವು ಒಳನುಡಿಗಳಲ್ಲಿ ಈಗಲೂ **ದಾಂಟು** ಮಾದರಿಯ ಪದಗಳು ಕೇಳಸಿಗುತ್ತವೆ ಎನ್ನುವುದು ಒಂದು ಪುರಾವೆ. ಅಂದರೆ ಕನ್ನಡದ ಹಳೆಯ ಉಲಿಕಂತೆಯ ಮಾದರಿ

ಕೆಲವು ಒಳನುಡಿಗಳಲ್ಲಿ ಇನ್ನೂ ಬಳಕೆಯಾಗುತ್ತಿದೆ.(ಕರ್ನಾಟಕ,ಆಂಧ್ರ,ತಮಿಳು ನಾಡುಗಳು ಸೇರುವ ಜಗದಲ್ಲಿ ಜನರಾಡುವ ಕನ್ನಡ ನುಡಿಯಲ್ಲಿ **ದಾಂಟು** ಮಾದರಿಯ ಪದಗಳು ಈಗಲೂ ಇವೆ.) ಆ ಒಳನುಡಿ ನಾವು ಮೇಲೆ ಬಣ್ಣಿಸಿದಂತೆ ಬದಲಾಗಿಲ್ಲ. ಹಳಗನ್ನಡದ ಉಲಿಕಂತೆಯ ಆಯ್ಕೆಯನ್ನು ಹಾಗೆಯೇ ಉಳಿಸಿಕೊಂಡಿದೆ.

ಇದಲ್ಲದೆ ಇನ್ನೂ ಒಂದು ಪುರಾವೆ ಕೇಳಲು ಸಿಗುತ್ತದೆ. ಇಳಿಯಲ್ಲಿ ಇದ್ದ ಎರಡು ತಡೆಯುಲಿಗಳಲ್ಲಿ ಮೊದಲನೆಯದು ಮೂಗುಲಿಯೇ ಆಗಿರುವುದಷ್ಟೆ. ಈ ಮೂಗುಲಿ ಕಳೆದು ಹೋದರೂ ಆ ಮೂಗುಲಿಯ ಪಳಿಯುಳಕೆ ಕೆಲವು ಪದಗಳಲ್ಲಿ ಉಳಿಯುವುದುಂಟು. ಕನ್ನಡದ ಕೆಲವು ಒಳನುಡಿಗಳಲ್ಲಿ **ಹಾಂವು** ಎಂಬ ಪದವನ್ನು ಕೇಳುತ್ತೇವೆ. ಇಲ್ಲಿ ಬರಹದಲ್ಲಿ ಸೊನ್ನೆ ಇದ್ದರೂ ಅದನ್ನು ನುಡಿಯುವಾಗ **ಹ್** ಆದ ಮೇಲೆ ಬರುವ ಉದ್ದ ತೆರೆದ ಉಲಿ **ಆ**. ಇದನ್ನು ಹೇಳುವಾಗ ಮೂಗಿನಲ್ಲಿ ನುಡಿದಂತೆ ತೋರುತ್ತದೆ. ಏಕೆಂದರೆ **ಹಾಂವು(>ಹಾವು)** ಮೊದಲು **ಪಾಂಬು** ಎಂದಿತ್ತು ತಾನೇ? **ಪಾಂಬು** ಪದದ ಮೊದಲ ಉಲಿಕಂತೆ **ಪಾಂಬ್**.ಉದ್ದ ತೆರೆದ ಉಲಿ ನಡುವಿನಲ್ಲಿದ್ದು ಇಳಿಯಲ್ಲಿ ಎರಡು ತಡೆಯುಲಿಗಳಿವೆ. ಇವುಗಳಲ್ಲಿ ಮೊದಲನೆಯದು **ಮ್** ಎಂಬ ಮೂಗುಲಿ ಮತ್ತು ಎರಡನೆಯದು **ಬ್**. ಈ ಮಾದರಿಯ ಉಲಿಕಂತೆಗಳನ್ನು ಕನ್ನಡ ಬಿಟ್ಟುಕೊಟ್ಟಾಗ ಹೊರಟು ಹೋಯಿತೆನ್ನಲಾದ **ಮ್** ಮೂಗುಲಿ ತನ್ನ ಸೆಳಕನ್ನು ಹಿಂದಿನ ತೆರೆದ ಉಲಿಯಲ್ಲಿ(ಈ ಪದದಲ್ಲಿ ಆ ಎಂಬ ತೆರೆದ ಉಲಿಯಲ್ಲಿ) ಉಳಿಸಿಹೋಗಿದೆ. (**ಪಾಂಬ್** ಪದದ **ಬ್** ಉಲಿ **ವ್** ಉಲಿ ಆದುದರ ಕತೆ ಬೇರೆಯೇ ಇದೆ.)

ಇನ್ನೂ ಕೆಲವು ಪದಗಳನ್ನು ನೊಡೋಣ. **ಅಡಂಗು, ಮುಳುಂಗು, ಇಡುಂಕು** ಪದಗಳಲ್ಲಿನ ಬರಹ ರೂಪದ ಸೊನ್ನೆ ನಡುಗನ್ನಡದಲ್ಲಿ ಇಲ್ಲವಾಗಿ **ಅಡಗು,ಮುಳುಗು, ಇಡುಕು** ಆಗಿವೆ. ಆದರೆ ಈ ಪದಗಳಲ್ಲಿ ಎರಡನೆಯ ಉಲಿಕಂತೆಯನ್ನು ನೋಡಿ. ಏರಿನಲ್ಲಿ ಒಂದು ತಡೆಯುಲಿ ಇದ್ದು ನಡುವಿನಲ್ಲಿ ಗಿಡ್ಡ ತೆರೆದ ಉಲಿ ಇದೆ. ಇಳಿಯಲ್ಲಿ ಎರಡು ತಡೆಯುಲಿಗಳಿರುವ ಉಲಿಕಂತೆಗಳಿವು. **ಡಂಗ್, ಳುಂಗ್, ಡುಂಕ್** ಎಂಬ ಈ ಉಲಿಕಂತೆಗಳು ಇಂದಿನ ಆಡುಗನ್ನಡದಲ್ಲಿ ಎರಡನೆಯ ಉಲಿಕಂತೆಗಳಾಗಿ ಬರಲಾರವು ಎಂಬುದನ್ನು ನೋಡಿದ್ದೇವೆ. ಮುಚ್ಚಿದ ಉಲಿಕಂತೆಗಳು ಮೊದಲ ಉಲಿಕಂತೆಗಳಾಗಿ ಬರುವ ಆಯ್ಕೆಯನ್ನು ಕನ್ನಡ ಮಾಡಿಕೊಂಡಿದೆ. ಇಲ್ಲಿ ಎರಡನೆಯ ಉಲಿಕಂತೆಗಳೆಲ್ಲ ಮುಚ್ಚಿದ ಉಲಿಕಂತೆಗಳೇ ಆಗಿವೆ. ಇಳಿಯಲ್ಲಿರುವ ಎರಡು ತಡೆಯುಲಿಗಳಲ್ಲಿ ಮೊದಲನೆಯದಾದ ಮೂಗುಲಿಯನ್ನು ಬಿಟ್ಟು ಬಿಡುವುದರಿಂದ ಎರಡನೆಯ ಉಲಿಕಂತೆಗಳು ತೆರೆದ ಉಲಿಕಂತೆಗಳಾದವು. ಅಂದರೆ ಹಳಗನ್ನಡದ ಒಂದು ಉಲಿಕಂತೆಯ ಶರತ್ತನ್ನು ನಡುಗನ್ನಡ ಮತ್ತು ಇಂದಿನ ಕನ್ನಡ ಬಿಟ್ಟುಕೊಟ್ಟಿದೆ ಎಂದು ಹೇಳುವುದೇ ಸರಿ. ಹಾಗಾಗಿ 'ಸಬಿಂದುಕ'ಗಳು 'ಅಬಿಂದುಕ'ಗಳಾದವು ಎಂದು ಬಳಕೆಯ ಸೊಲ್ಲರಿಮೆಗಳು ಹೇಳುವ ಬಗೆಗಿಂತ ಅಲ್ಲಿ ಕನ್ನಡ ನುಡಿಯು ಉಲಿಕಂತೆಗಳ ಆಯ್ಕೆಯಲ್ಲಿ ಮತ್ತು ಶರತ್ತುಗಳಲ್ಲಿ ಮಾಡಿಕೊಂಡಿರುವ ಬದಲಾವಣೆಯನ್ನು ನೋಡುವುದೇ ಸರಿಯಾದುದು.

ಇನ್ನೊಂದು ಎತ್ತುಗೆಯನ್ನು ನೋಡೋಣ. ಸಂಸ್ಕೃತ ನುಡಿಯಿಂದ ಪಡೆದ **ರಕ್ತ, ಶಕ್ತಿ, ಯುಕ್ತಿ, ಮುಕ್ತಿ, ಭಕ್ತಿ** ಮುಂತಾದ ಪದಗಳು ಹಳಗನ್ನಡದಲ್ಲಿ ಬದಲಾಗದೆ ಬಳಕೆಯಾಗುತ್ತಿದ್ದವೆಂದು ಅಂದಿನ ಬರಹಗಳು ತೋರಿಸುತ್ತವೆ. ಆದರೆ ನಡುಗನ್ನಡದ ಬರಹಗಳಲ್ಲಿ ಈ ಪದಗಳು **ರಕುತ, ಶಕುತಿ, ಯುಕುತಿ, ಮುಕುತಿ, ಭಕುತಿ** ಎಂದಾದವು. ಈ ಬದಲಾವಣೆಯನ್ನು ಉಲಿಕಂತೆಗಳ ಕಟ್ಟುಗಳ ನೆಲೆಯಿಂದ ನೋಡೋಣ. **ರಕ್ತ** ಎಂಬ ಸಂಸ್ಕೃತ ಪದ. ಆ ನುಡಿಯಲ್ಲಿ ಯಾವ ಉಲಿಕಂತೆಗಳನ್ನು ಹೊಂದಿದೆ ಎಂಬ ಕೇಳ್ವಿಯನ್ನು ಬದಿಗಿಡೋಣ. ಕನ್ನಡದಲ್ಲಿ **ರಕ್ತ** ಪದವನ್ನು **ರ/ಕ್ತ, ರಕ್/ತ ಮತ್ತು ರಕ್ತ್/ಅ** ಎಂಬ ಉಲಿಕಂತೆಗಳನ್ನಾಗಿ ನೋಡಬಹುದು. ಮೊದಲನೆಯದು ಒಪ್ಪಿತವಾಗಲಾರದು. ಹಾಗೆ ಮಾಡಿದರೆ ಎರಡನೆಯ ಉಲಿಕಂತೆಯ ಏರಿನಲ್ಲಿ ಎರಡು ತಡೆಯುಲಿ ಇರುವ ಉಲಿಕಂತೆಯನ್ನು ಒಪ್ಪಬೇಕಾಗುತ್ತದೆ.ಎರಡನೆಯದನ್ನು ಒಪ್ಪಲು ಅಡ್ಡಿಯಿಲ್ಲ. ಏಕೆಂದರೆ ಮುಚ್ಚಿದ ಉಲಿಕಂತೆಯೊಂದು ಪದದ ಮೊದಲಲ್ಲಿ ಬರುವುದು ಕನ್ನಡಕ್ಕೆ ಅದರಲ್ಲೂ ನಡುಗನ್ನಡಕ್ಕೆ ಹೊಂದಿಕೊಳ್ಳದ ಆಯ್ಕೆ ಏನಲ್ಲ. **ತಣ್ಣೀರು, ಕಣ್ಣೀರು, ಕೆನ್ನಾಯಿ** ಮುಂತಾದ ಪದಗಳ ಮೊದಲ ಉಲಿಕಂತೆ ಮುಚ್ಚಿದ ಉಲಿಕಂತೆಯೇ ಆಗಿದೆ.ಹಾಗಾಗಿ ಅದನ್ನು ಬದಲಿಸುವ ಆಯ್ಕೆ ಬೇಕಿಲ್ಲ. ಹಾಗಿದ್ದಲ್ಲಿ ಮೂರನೆಯ ಮಾದರಿಯಾದ **ರಕ್ತ್/ಅ** ಎಂಬುದನ್ನು ನೋಡೋಣ. ಇದರಲ್ಲಿ ಮೊದಲ ಉಲಿಕಂತೆ ಕೇವಲ ಮುಚ್ಚಿರುವುದು ಮಾತ್ರವಲ್ಲ, ಇಳಿಯಲ್ಲಿ ಎರಡು ಬೇರೆ ತಡೆಯುಲಿಗಳಿವೆ **(ಕ್, ತ್)** ಇಂತಹ ಉಲಿಕಂತೆಗಳು ನಡುಗನ್ನಡಕ್ಕೆ ಹೊಂದಿಕೊಳ್ಳದ್ದರಿಂದ **ರಕ್ತ್** ಎಂಬ ಉಲಿಕಂತೆಯ ಇಳಿಯ ಎರಡು ತಡೆಯುಲಿಗಳ ನಡುವೆ ಒಂದು ತೆರೆದುಲಿಯನ್ನು ಸೇರಿಸುವ ಮೂಲಕ ಅದನ್ನು ಎರಡು ಉಲಿಕಂತೆಗಳನ್ನಾಗಿ ಮಾಡಿಕೊಳ್ಳಲಾಗಿದೆ.

ರ್ಅಕ್/ತ್ಅ> ರ್ಅ/ಕ್ಉ/ತ್ಅ

ಬಳಿಕ **ತ್** ಎಂಬುದು ಮುಂದಿನ ತಡೆದ ಉಲಿಯ ಜೊತೆ ಸೇರಿ ತಾನೇ ಉಲಿಕಂತೆಯ ಏರಿನ ಜಾಗದಲ್ಲಿ ಕುಳಿತುಬಿಡುತ್ತದೆ. ಅಂದರೆ **ರಕ್ತ** ಎಂಬುದು **ರ/ಕು/ತ** ಎಂಬ ಮೂರು ಉಲಿಕಂತೆಗಳಾಗಿ ಬಿಡುತ್ತವೆ.

ಇದೆಲ್ಲವನ್ನೂ ಗಮನಿಸಿದಾಗ ನುಡಿಯ ಬೆಳವಣಿಗೆಯಲ್ಲಿ ಉಲಿಕಂತೆಗಳ ಕಟ್ಟುಗಳು ಮತ್ತು ಮಾದರಿಗಳು ಬದಲಾಗುವುದಿಲ್ಲವಾದರೂ ಅವುಗಳಲ್ಲಿ ಯಾವ ಮಾದರಿಯನ್ನು ಉಳಿಸಿಕೊಳ್ಳಬೇಕು ಮತ್ತು ಬಳಕೆಗೆ ಯಾವ ಶರತ್ತನ್ನು ಇರಿಸಬೇಕು ಎಂಬುದು ಬೇರೆ ಬೇರೆ ಆಗುತ್ತ ಹೋದಂತೆ ತೋರುತ್ತದೆ. ಬಳಕೆಯ ಸೊಲ್ಲರಿಮೆಗಳು ಏನು ಬದಲಾವಣೆ ಆಗಿದೆ ಎಂದು ಹೇಳಿ ಸುಮ್ಮನಾಗುತ್ತವೆ. ಉಲಿಕಂತೆಗಳ ಅರಿವಿನ ಮೂಲಕ ನಾವು ಆ ಬದಲಾವಣೆಗಳು ಏಕೆ ನಡೆದಿವೆ ಎಂಬುದನ್ನು ಅರಿಯಬಹುದು.

ಉಲಿಕಂತೆಗಳ ಕಟ್ಟುಗಳ ತಿಳಿವು ನುಡಿಯ ಕಟ್ಟೋಣದ ಇನ್ನಷ್ಟು ನೆಲೆಗಳನ್ನು ನಮ್ಮ ಅರಿವಿಗೆ ತಂದುಕೊಡುತ್ತದೆ. ಇದನ್ನು ಅರಿಯಲು ನಾವು ಕನ್ನಡ ಛಂದಸ್ಸನ್ನು ನೋಡಬೇಕು. ಮಾತ್ರಾ ಲಯ ಮತ್ತು ಅಂಶ ಲಯಗಳನ್ನು ದೇಸಿ ಎಂದು

ಗುರುತಿಸುತ್ತಿದ್ದೇವೆ. ಅಂಶ ಲಯದಲ್ಲಿ ಗಣ ಯಾವುದೇ ಇರಲಿ (ಬ್ರಹ್ಮ,ವಿಷ್ಣು ಮತ್ತು ರುದ್ರ) ಅದರ ಮೊದಲ ಅಂಶ ಒಂದು ಗುರುವಾಗಿರಲೇ ಬೇಕು ಇಲ್ಲವೇ ಎರಡು ಲಘು ಆಗಿರಬೇಕು ಎಂಬ ಕಟ್ಟು ಇದೆ. ಈ ಕಟ್ಟು ಏಕೆ ಮೈದಳೆಯಿತು? ಅಂದರೆ ಗಣದ ಮೊದಲ ಅಂಶ ಲಘುವಾಗಿದ್ದಾಗ ಎರಡನೆಯ ಅಂಶ ಏಕೆ ಗುರುವಾಗಲಾರದು?

ಲಘು ಇಲ್ಲವೇ ಗುರು ಎಂಬುದು ಉಲಿಕಂತೆಯ ಚಹರೆಯ ಮೇಲೆ ಗೊತ್ತಾಗುವಂತಹುದು. ಉಲಿಕಂತೆಯ ನಡು ಗಿಡ್ಡ ತೆರೆದ ಉಲಿಯಾಗಿದ್ದರೆ ಆ ಉಲಿಕಂತೆ ಲಘು ಎನಿಸಿಕೊಳ್ಳುತ್ತದೆ. ಉಲಿಕಂತೆ ನಡು ಉದ್ದ ತೆರೆದ ಉಲಿಯಾಗಿದ್ದರೆ ಆ ಉಲಿಕಂತೆ ಗುರು ಎನಿಸುವುದು. **ಆಡು, ಅರಿ, ಕರೆ, ಕಾಲು** ಮುಂತಾದ ಪದಗಳಿಗೆ ಲಘು ಗುರು ಗುರುತು ಮಾಡಿದರೆ ಮೇಲೆ ಹೇಳಿದ ಮಾತು ಸರಿಯೆಂದು ತಿಳಿಯುತ್ತದೆ. ಇದಲ್ಲದೆ ಉಲಿಕಂತೆಯ ನಡು ಗಿಡ್ಡ ತೆರೆದ ಉಲಿಯಾಗಿದ್ದರೂ ಆ ಉಲಿಕಂತೆಯ ಇಳಿಯುಲ್ಲಿ ಒಂದು ತಡೆಯುಲಿ ಇದ್ದರೆ,ಅಂದರೆ ಅದೊಂದು ಮುಚ್ಚಿದ ಉಲಿಕಂತೆಯಾಗಿದ್ದರೆ ಆಗಲೂ ಅದಕ್ಕೆ ಗುರುವಿನ ಬೆಲೆ ಬರುತ್ತದೆ. **ಅಕ್ಕ, ಇಪ್ಪತ್ತು,ಹಗ್ಗ** ಮುಂತಾದ ಪದಗಳ ಮೊದಲ ಉಲಿಕಂತೆಯ ನಡು ಗಿಡ್ಡ ತೆರೆದ ಉಲಿಯಾಗಿದ್ದರೂ ಅದೊಂದು ಮುಚ್ಚಿದ ಉಲಿಕಂತೆಯಾಗಿರುವುದರಿಂದ (ಇಳಿಯುಲ್ಲಿ ಒಂದು ತಡೆಯುಲಿಯನ್ನು ಹೊಂದಿರುವುದರಿಂದ) ಅದಕ್ಕೆ ಗುರುವಿನ ಬೆಲೆ ಬರುತ್ತದೆ. ಕಲಿಕೆಯ ನೆಲೆಯಲ್ಲಿ 'ಒತ್ತಕ್ಷರದ ಹಿಂದಿನ ಅಕ್ಷರ ಗುರು' ಎಂದು ಕುರುಡು ಕಟ್ಟನ್ನು ಹೇಳಿಕೊಡಲಾಗುತ್ತದೆ. ದಿಟವಾಗಿ ಉಲಿಕಂತೆಗಳ ಮೂಲಕವಷ್ಟೇ ಈ ಲೆಕ್ಕಾಚಾರ ಗೊತ್ತಾಗುವುದು. ಈ ನಿಟ್ಟಿನಲ್ಲಿ ನೋಡಿದಾಗ ತೆರೆದ ಉಲಿಕಂತೆಯೊಂದು ನಡುವಿನಲ್ಲಿ ಉದ್ದದ ತೆರೆದ ಉಲಿಯನ್ನು ಹೊಂದಿರುವುದಕ್ಕೂ (**ಕಾ, ನೀ, ನೋ,ಪಾ**) ಮುಚ್ಚಿದ ಉಲಿಕಂತೆಯೊಂದು ನಡುವಿನಲ್ಲಿ ಗಿಡ್ಡ ತೆರೆದ ಉಲಿಯನ್ನು ಹೊಂದಿರುವುದಕ್ಕೂ ಮಾತ್ರೆಗಳ ಲೆಕ್ಕದಲ್ಲಿ ಏನೂ ಬದಲಾವಣೆ ಇಲ್ಲ; ಎರಡೂ ಒಂದೇ ಆಗಿರುತ್ತವೆ. **ಕಾ** ಮತ್ತು **ಕತ್** ಎಂಬ ಉಲಿಕಂತೆಗಳು ಮಾತ್ರೆಗಳ ನೆಲೆಯಲ್ಲಿ ಒಂದೇ ಆಗಿರುತ್ತವೆ.

ಈಗ ಅಂಶ ಗಣದ ಮಾತಿಗೆ ಬರೋಣ. ಮೊದಲ ಅಂಶ ಲಘುವಾಗಿದ್ದರೆ ಅಂದರೆ ಮೊದಲ ಉಲಿಕಂತೆ ಗಿಡ್ಡ ತೆರೆದ ಉಲಿಯನ್ನು ನಡುವಿನಲ್ಲಿ ಪಡೆದ ತೆರೆದ ಉಲಿಕಂತೆಯಾಗಿದ್ದರೆ ಎರಡನೆಯ ಉಲಿಕಂತೆ ಮುಚ್ಚಿದ ಉಲಿಕಂತೆಯಾಗಲಾರದು ಮತ್ತು ಅದು ಉದ್ದ ತೆರೆದ ಉಲಿಯನ್ನು ನಡುವಿನಲ್ಲಿ ಪಡೆದ ತೆರೆದ ಉಲಿಕಂತೆಯೂ ಆಗಲಾರದು. ಇದು ಕನ್ನಡ ಉಲಿಕಂತೆಗಳ ಬಳಕೆಯ ಕಟ್ಟು. ಇದನ್ನು ತಿಳಿದಾಗ ಏಕೆ ಅಂಶ ಗಣದ ಮೊದಲಲ್ಲಿ ಒಂದು ಲಘು ಬರಬಾರದು ಎನ್ನುವುದು ತಿಳಿಯುತ್ತದೆ.

ಇದು ಬಳಸು ಹಾದಿಯಲ್ಲಿ ಮಾತ್ರಾಗಣಗಳಿಗೂ ಹೊಂದುವ ಕಟ್ಟು ಎಂಬುದನ್ನು ಗಮನಿಸಿ. ಎತ್ತುಗೆಗಾಗಿ ಆರು ಸಾಲಿನ ಪದ್ಯ (ಷಟ್ಪದಿ)ಯನ್ನು ನೋಡೋಣ. ಹೆಚ್ಚು ಬಳಕೆಯಾದ ಭಾಮಿನಿ ಎಂಬ ಮಾದರಿಯನ್ನೇ ನೋಡಿ. ಇದು ಮೂರು,ನಾಲ್ಕು ಮಾತ್ರೆಗಳ ಓಟವನ್ನು ಪಡೆದಿದೆಯಷ್ಟೆ. ಮೊದಲ ಗಣ ಮೂರು ಮಾತ್ರೆಗಳನ್ನು ಹೊಂದಿರಬೇಕು. ಮೂರು ಮಾತ್ರೆಗಳ ಹರಹನ್ನು ಕನ್ನಡ ಉಲಿಕಂತೆಗಳ ನಿಟ್ಟಿನಲ್ಲಿ ನೋಡಿದಾಗ

1. ಮೂರೂ ಲಘುಗಳು,

2. ಮೊದಲನೆಯದು ಗುರು ಎರಡನೆಯದು ಲಘು

3. ಮೊದಲನೆಯದು ಲಘು ಮತ್ತು ಎರಡನೆಯದು ಗುರು.

ಗಣಗಳ ರಚನೆ ಮೇಲಿನಂತೆ ಇರಬಹುದು. ಎಚ್ಚರದಿಂದ ನೋಡಿದರೆ ಮೂರನೆಯ ಬಗೆಯನ್ನು ಅಂಶಗಣ ಒಪ್ಪುವುದಿಲ್ಲ. ಏಕೆಂದರೆ ಅಲ್ಲಿ ಒಂದು ಲಘು ಬಂದಕೂಡಲೇ ಗುರು ಬರುತ್ತದೆ. ಇದನ್ನು ಅಂಶ ಗಣದಿಂದ ದೂರವಿರಿಸಲು ಕನ್ನಡ ನುಡಿಯ ಉಲಿಕಂತೆಗಳ ಕಟ್ಟುಗಳು ಒತ್ತಾಯಿಸುತ್ತವೆ ಎಂಬುದನ್ನು ಕಂಡೆವು. ಮಾತ್ರಾ ಲಯದಲ್ಲೂ ಭಾಮಿನಿಯ ಓಟದಲ್ಲಿ ಮೂರು ಮಾತ್ರೆಗಳ ಹರಹಿನಲ್ಲಿ ಮೊದಲ ಎರಡು ಮಾದರಿಗಳು ಬರುತ್ತವೆಯೇ ಹೊರತು ಮೂರನೆಯದಲ್ಲ. ಏಳು ಸಾವಿರದಷ್ಟು ಭಾಮಿನಿ ಷಟ್ಪದಿಯ ಪದ್ಯಗಳನ್ನು ಬರೆದ ಕುಮಾರವ್ಯಾಸನಲ್ಲಿ ಮೂರು ಮಾತ್ರೆಯ ಗಣ ಎಲ್ಲಿಯೂ ಒಂದು ಲಘುವಿನ ಬಳಿಕ ಒಂದು ಗುರು ಬರುವಂತೆ ಇಲ್ಲ ((c)v/(c)vv) ಎಂಬುದನ್ನು ನೋಡಬೇಕು. ಇದೇಕೆ ಹೀಗೆ ಎಂಬ ಕೇಳ್ವಿಗೆ ದೊರಕುವ ಬದಲು ಸುಳುವಾಗಿದೆ. ಹಾಗೆ ಲಘು ಬಳಿಕ ಗುರು ಬಂದು ಮೂರು ಮಾತ್ರೆಯ ಗಣ ಆಗಬಾರದೆಂದು ಭಾಮಿನಿ ಷಟ್ಪದಿಯ ಕಟ್ಟು ಏನೂ ಇಲ್ಲ. ಅದರೆ ಕನ್ನಡ ಉಲಿಕಂತೆಗಳು ಪದಗಳಲ್ಲಿ ಜೋಡಣೆಯಾಗುವ ನೆಲೆಯ ಕಟ್ಟುಗಳಂತೆ ಗಿಡ್ಡ ತೆರೆದ ಉಲಿಯನ್ನು ನಡುವಾಗಿ ಉಳ್ಳ ಉಲಿಕಂತೆಯ ಬಳಿಕ ಉದ್ದ ತೆರೆದ ಉಲಿಯನ್ನು ನಡುವಾಗುಳ್ಳ ಉಲಿಕಂತೆ ಬರಲಾರದು. (ಎತ್ತುಗೆಗಾಗಿ **ಕಲಾ, ಮಹಾ,** ಇಳಾ ಮಾದರಿಯ ಪದಗಳು. ಇವು ಕನ್ನಡದಲ್ಲೇ ಇದ್ದ ಪದಗಳಲ್ಲ) ಕನ್ನಡದಲ್ಲೂ ಲಘುವಿನ ಬಳಿಕ ಗುರುವನ್ನು ಹೊಂದಿರುವ ಕೆಲವು ಪದಗಳಿವೆ. **ಅಗೋ, ಅಹಾ, ಭಲಾ, ಎಲಾ** ಮುಂತಾದ ಪದಗಳನ್ನು ಎತ್ತಿ ಹೇಳಬಹುದು. ಇವೆಲ್ಲವು ಅಚ್ಚರಿಯನ್ನು ಹೇಳುವಾಗ ಬಳಕೆಯಾಗುವ ಪದಗಳು. (ಹೊಸಗಾಲದ ಕವಿತೆಗಳಲ್ಲಿ ಇಂತಹ ಉಲಿಕಂತೆಗಳ ಜೋಡಣೆಯಿಂದ ಮೊದಲಾಗುವ ಕವಿತೆಗಳನ್ನು ನೋಡುತ್ತೇವೆ.) ಈ ಪದಗಳ ಕೊನೆಯಲ್ಲಿರುವ ಉದ್ದ ತೆರೆದ ಉಲಿ ಆ ಅಚ್ಚರಿಯನ್ನು ಹೇಳುವ ಪದವೂ ಆಗಿರಬಹುದು. ಹಾಗಾಗಿ ಕನ್ನಡ ಹುಟ್ವಿಗೆ ಲಘು-ಗುರು ಮಾದರಿಯ ಪದಗಳು ಹೊಂದುವುದಿಲ್ಲ.

ಅಕ್ಷರ ಗಣಗಳಲ್ಲೂ ಜಗಣ (ಲಘು-ಗುರು-ಲಘು) ವನ್ನು ಕನ್ನಡ ರಚನೆಗಳಲ್ಲಿ ದೂರವಿಡಲು ಕನ್ನಡ ಉಲಿಕಂತೆಗಳ ಕಟ್ಟುಗಳೇ ಒತ್ತಾಯಿಸುತ್ತವೆ . ಅದರಲ್ಲೂ ಸೊಲ್ಲಿನ ಮೊದಲಿಗೆ ಈ ಬಗೆಯ ಪದಗಳನ್ನು ಬಳಸುವುದು ಸಲ್ಲದು. ಬಳಸಬಾರದು ಎಂದರೆ ಬಳಸಲು ಅಂತಹ ಪದಗಳೇ ಕನ್ನಡದಲ್ಲಿ ಇಲ್ಲ ಎಂದೇ ತಿಳಿಯಬೇಕು. ಬೇರೆ ನುಡಿಗಳಿಂದ ಪಡೆದ ಪದಗಳ ಮಾತು ಬೇರೆ. (**ಉದಾರ, ಅಗಾಧ, ಗಲಾಟೆ, ಮುಲಾಮು, ಕಲಾಯಿ, ಅಪಾರ,ಕಲಾಪ** ಮುಂತಾದ ಪದಗಳನ್ನು ನೋಡಿ. ಇವೆಲ್ಲ ಬೇರೆ ನುಡಿಗಳಿಂದ ಕನ್ನಡಕ್ಕೆ ಬಂದಿರುವ ಪದಗಳು)

ಇಲ್ಲಿಯೇ ಅಕ್ಷರ ಗಣಗಳ ನಂಟನ್ನು ಹೊಂದಿರುವ ಮಾತನ್ನು ಹೇಳಬೇಕಿದೆ. ಸಂಸ್ಕೃತದಲ್ಲಿ ಬಳಕೆಯಾಗುತ್ತಿದ್ದ ಅಕ್ಷರ ವೃತ್ತಗಳನ್ನು ಕನ್ನಡದಲ್ಲಿ ಬಳಸಲು ಮುಂದಾದ

ಕನ್ನಡ ಕವಿಗಳು ಅಂತಹ ವೃತ್ತಗಳಲ್ಲಿ ಆರು ವೃತ್ತಗಳನ್ನು ಹೆಚ್ಚಾಗಿ ಬಳಸಿದ್ದಾರೆ. ಈ ಆರನ್ನು 'ಖ್ಯಾತ ಕರ್ನಾಟಕ'ಗಳೆಂದು ಕರೆದಿರುವುದುಂಟು. ಏಕೆ ಈ ಆರು ವೃತ್ತಗಳೇ ಹೆಚ್ಚಾಗಿ ಬಳಕೆಯಾದವು? ಇವು ಕನ್ನಡದ ಜಾಯಮಾನಕ್ಕೆ ಹೊಂದಿಕೊಂಡಿವೆ ಎಂದು ಈ ಕೇಳ್ವಿಗೆ ಬದಲನ್ನು ಹೇಳಲಾಗಿದೆ. ಸರಿಯೇ .ಆದರೆ ಈ ಜಾಯಮಾನ ಯಾವುದು? ಹಾಗಂದರೇನು? ನನಗೆ ತಿಳಿದ ಮಟ್ಟಿಗೆ ಈ ನಿಟ್ಟಿನಲ್ಲಿ ಬೆಲೆಯುಳ್ಳ ಮಾತನ್ನು ಹೇಳಿದವರು ಡಿ.ಎಸ್.ಕರ್ಕಿಯವರು. ಅವರ 'ಕನ್ನಡ ಛಂದೋವಿಕಾಸ' ಕೃತಿಯಲ್ಲಿ ಈ ಆರು ವೃತ್ತಗಳ ನಂಟೊಂದನ್ನು ಗೊತ್ತು ಮಾಡಿದ್ದಾರೆ. ಆರು ಖ್ಯಾತ ಕರ್ನಾಟಕಗಳಲ್ಲಿ **ಶಾರ್ದೂಲ ವಿಕ್ರೀಡಿತ/ಮತ್ತೇಭ ವಿಕ್ರೀಡಿತ, ಉತ್ಪಲ ಮಾಲೆ/ ಚಂಪಕ ಮಾಲೆ, ಮತ್ತು ಸ್ರಗ್ಧರೆ/ ಮಹಾ ಸ್ರಗ್ಧರೆ** ಎಂಬ ಜೋಡಿಗಳನ್ನು ಗುರುತು ಮಾಡಬಹುದು. ಮೊದಲ ಜೋಡಿಯಲ್ಲಿ 19/20 ಅಕ್ಷರಗಳು(ದಿಟವಾಗಿ ಉಲಿಕಂತೆಗಳು), ಎರಡನೆಯ ಜೋಡಿಯಲ್ಲಿ 20/21 ಅಕ್ಷರಗಳು ಮತ್ತು ಮೂರನೆಯ ಜೋಡಿಯಲ್ಲಿ 21/22 ಅಕ್ಷರಗಳಿವೆ. ಒಂದೊಂದು ಜೋಡಿಯಲ್ಲೂ ಮೊದಲ ವೃತ್ತದ ಮೊದಲ ಅಕ್ಷರ ಗುರುವಾಗಿರುತ್ತದೆ. ಜೋಡಿಯ ಎರಡನೆಯ ವೃತ್ತದಲ್ಲಿ ಒಂದು ಅಕ್ಷರ ಹೆಚ್ಚಿದೆ. ಮೊದಲಿದ್ದ ಗುರುವಿನ ಬದಲು ಎರಡು ಲಘುಗಳು ಬಂದಿರುವುದರಿಂದಲೇ ಒಂದು ಅಕ್ಷರ ಹೆಚ್ಚಾಯಿತು. ಏನೇ ಆದರೂ ಈ ಯಾವ ವೃತ್ತದಲ್ಲೂ ಮೊದಲ ಗಣದಲ್ಲಿ ಲಘು ಅಕ್ಷರದ ಬಳಿಕ ಗುರು ಅಕ್ಷರ ಬರುವುದಿಲ್ಲ ಎಂಬುದನ್ನು ಗುರುತಿಸಬೇಕು. ಆಂದರೆ ಕನ್ನಡ ಪದಗಳಲ್ಲಿರುವ ಉಲಿಕಂತೆಗಳ ಜೋಡಣೆಗೆ ಹೊಂದಿಕೊಳ್ಳದ ಪದಗಳನ್ನು ಇಲ್ಲಿ ಬಳಸಬೇಕಾದ ಒತ್ತಾಯವೇ ಇಲ್ಲ.. ಕರ್ಕಿಯವರು ಉಲಿಕಂತೆಗಳ ಮಾತನ್ನು ಎತ್ತದಿದ್ದರೂ ಅವರು ನೀಡುವ ಒಳನೋಟದ ನೆರವಿನಿಂದ ಈ ವೃತ್ತಗಳು ಕನ್ನಡ ಕವಿಗಳಿಗೆ ಏಕೆ ಹೆಚ್ಚು ಹತ್ತಿರವಾದವು ಎಂಬುದನ್ನು ತಿಳಿಯಲು ನೆರವು ಸಿಗುತ್ತದೆ. (ಕನ್ನಡ ಛಂದೋವಿಕಾಸ,96-126, 1992 ಏಳನೆಯ ಮುದ್ರಣ)

ಉಲಿಕಂತೆಗಳ ಅರಿವು ನುಡಿಯ ಒಳ ಪದರದಲ್ಲಿ ಗಟ್ಟಿಯಾಗಿ ನೆಲೆಯೂರಿರುತ್ತದೆ ಎಂಬುದನ್ನು ತಿಳಿಯಲು ಇನ್ನೊಂದು ಎತ್ತುಗೆಯನ್ನು ಈಗ ನೋಡೋಣ. ಊರಿನ ಹೆಸರುಗಳು ಹೆಚ್ಚಾಗಿ ಬಾಯ್ದೆರೆಯಲ್ಲಿರುತ್ತವೆ. ಈಚೆಗೆ ಆಡಳಿತದ ನೆರವಿಗಾಗಿ ಊರ ಹೆಸರುಗಳನ್ನು ಬರಹಕ್ಕೆ ತರುತ್ತಿದ್ದೇವೆ. ಹೀಗೆ ಬರಹಕ್ಕೆ ತರುವಾಗ ಏನೆಲ್ಲ ಗೋಜಲುಗಳಾಗುತ್ತವೆ ಎಂಬ ಕೇಳ್ವಿಯನ್ನು ಕೊಂಚ ಬದಿಗಿಡೋಣ. ಬಾಯ್ದೆರೆಯಲ್ಲಿರುವ ಊರಿನ ಹೆಸರುಗಳನ್ನು ಎಚ್ಚರಿಕೆಯಿಂದ ನೋಡಿದರೆ ಅವುಗಳಲ್ಲಿ ಬರಹದ ನೆಲೆಗಿಂತ ಉಲಿಕಂತೆಗಳ ಲೆಕ್ಕ ಬೇರೆಯೇ ಅಗಿರುವುದನ್ನು ಕಾಣುತ್ತೇವೆ. ಬರಹದಲ್ಲಿ ಹೆಚ್ಚು ಉಲಿಕಂತೆಗಳಿದ್ದರೆ ಬಾಯ್ದೆರೆಯಲ್ಲಿ ಅವು ಕಡಿಮೆಯಾಗುತ್ತವೆ. ಎತ್ತುಗೆಗಾಗಿ ಈ ಮುಂದಿನ ಕೆಲವನ್ನು ನೋಡಿ. **ಚನ್ನರಾಯಪಟ್ಟಣ (ಏಳು)/ ಚನ್ರಾಯ್ಪಟ್ಣ (ಚನ್-ರಾಯ್-ಪಟ್-ಣ ಅಂದರೆ ನಾಲ್ಕು), ಹುಬ್ಬಳ್ಳಿ(ಮೂರು) /ಹುಬ್ಳಿ(ಹುಬ್-ಳಿ ಅಂದರೆ ಎರಡು), ಚಾಮರಾಜನಗರ(ಏಳು)/ಚಾಮ್ರಾಜ್ನಗ್ರ (ಚಾಮ್-ರಾಜ್-ನಗ್-ರ ಅಂದರೆ ನಾಲ್ಕು), ಚಿಕ್ಕಮಗಳೂರು (ಆರು)/ ಚಿಕ್ಮಗ್ಳೂರ್ (ಚಿಕ್-ಮಗ್-ಳೂರ್ ಅಂದರೆ ಮೂರು)** ಮುಂತಾದವು. ಬರಹದ ನೆಲೆಯಲ್ಲಿ ಇರುವ ಉಲಿಕಂತೆಗಳು ಎಷ್ಟೇ ಇದ್ದರೂ ನುಡಿಯುವಾಗ ಅವು ಹೆಚ್ಚೆಂದರೆ ನಾಲ್ಕು ಉಲಿಕಂತೆಗಳಷ್ಟೇ ಆಗಿ ಉಳಿದುಕೊಳ್ಳುತ್ತವೆ.

ಇದೇಕೆ ಹೀಗೆ? ನುಡಿಯುವವರಲ್ಲಿ ಉಲಿಕಂತೆಗಳ ಕಟ್ಟುಗಳ ಅರಿವು ಇದೆಯೆಂದೂ ಆ ಅರಿವಿನಿಂದಾಗಿಯೇ ಹೆಸರುಗಳಲ್ಲಿ ಉಲಿಕಂತೆಗಳು ನಾಲ್ಕನ್ನು ಮೀರದಂತೆ ನೋಡಿಕೊಳ್ಳುತ್ತಿರುವರೆಂದೂ ಒಪ್ಪಬೇಕಾಗುತ್ತದೆ. (ಊರಿನ ಹೆಸರುಗಳಲ್ಲಿ ಎರಡನೆಯ ಉಲಿಕಂತೆಯು ಉದ್ದ ತೆರೆದ ಉಲಿಯನ್ನು ನಡುವಿನಲ್ಲಿ ಹೊಂದಿದ್ದು ಅದೊಂದು ತೆರೆದ ಉಲಿಕಂತೆಯಾಗಿದ್ದರೆ ಊರಿನ ಹೆಸರನ್ನೇ ಎರಡು ಗಣಗಳನ್ನಾಗಿ ಒಡೆಯುವುದನ್ನು ನೋಡುತ್ತೇವೆ. ಎತ್ತುಗೆಗಾಗಿ ಹಿರೇ ಮಗಳೂರು ಎಂಬ ಹೆಸರನ್ನು ನೋಡಿ. ಇಲ್ಲಿ ಹಿರೇ ಎಂಬ ಪದದ ಎರಡನೆಯ ಉಲಿಕಂತೆ ತೆರೆದ ಉಲಿಕಂತೆಯಾಗಿದೆ ಮತ್ತು ಅದರ ನಡುವಿನಲ್ಲಿ ಉದ್ದದ ತೆರೆದ ಉಲಿ ಇದೆ. ಈ ಪದ ಒಂದೆಡೆ ನಿಂತರೆ ಮಗಳೂರು ಎರಡನೆಯ ಗಣವಾಗಿ ಬಿಡುತ್ತದೆ. ಇದೆಲ್ಲವೂ ಉಲಿಕಂತೆಗಳ ಮತ್ತು ಅವುಗಳ ಜೋಡಣೆಯ ಕಟ್ಟುಗಳು ನುಡಿಯುವವರ ಅರಿವಿನಲ್ಲಿ ಬೇರೂರಿರುವುದಕ್ಕೆ ಪುರಾವೆಗಳೇ ಆಗಿವೆಯಲ್ಲವೇ?)

ಕನ್ನಡ ಮತ್ತು ಅದರೊಡನೆ ನಂಟು ಹೊಂದಿರುವ ಕೆಲವು ನುಡಿಗಳಲ್ಲಿ ಇರುವ ಕೆಲವು ಪದಕಟ್ಟಿನ ಬಗೆಗಳು ಉಲಿಕಂತೆಗಳ ತಿಳಿವು ನುಡಿಯನ್ನಾಡುವವರಲ್ಲಿ ಇರುತ್ತದೆ ಎಂಬುದಕ್ಕೆ ಪುರಾವೆಗಳನ್ನು ನೀಡಬಲ್ಲುವು.

ಈ ಕೆಳಗಿನ ಎತ್ತುಗೆಗಳನ್ನು ನೋಡಿ.

ಹುಲಿಗಿಲಿ ಬಂದ್ರೆ (ಹುಲಿ/ಗಿಲಿ)

ಕಾಲ್ಗೀಲ್ ತರ್ಚಿದೆಯಾ? (ಕಾಲ್/ಗೀಲ್)

ಗೋಡೆಗೀಡೆ ಬಿದ್ದೋದ್ರೆ (ಗೋಡೆ/ಗೀಡೆ)

ಗುಟ್ಗಿಟ್ ಬಿಟ್ಕೋಟ್ಟೀಯೇ (ಗುಟ್/ಗಿಟ್)

ನಾಚ್ಕೆಗೀಚ್ಕೆ ಏನೂ ಇಲ್ಲ (ನಾಚ್/ಗೀಚ್)

ಆಟಗೀಟಕ್ ಹೋಗ್ಬೇಡ (ಆಟ/ಗೀಟ)

ಇಲ್ಲೆಲ್ಲಾ ನಡೆದಿರುವ ಬದಲಾವಣೆ ಏನು? **ಹುಲಿ, ಕಾಲು, ಗೋಡೆ, ಗುಟ್ಟು, ನಾಚ್ಕೆ** ಮುಂತಾದ ಪದಗಳಿಗೆ ಇನ್ನೇನೋ ಸೇರಿ ಹೊಸ ಪದಗಳು ಹುಟ್ಟಿಕೊಂಡಿವೆ. ಈ ಬಗೆಯಲ್ಲಿ ಹೊಸ ಪದ ಕಟ್ಟುವುದು ಕನ್ನಡ ಮತ್ತು ಅದರ ನಂಟು ಹೊಂದಿರುವ ನುಡಿಗಳಲ್ಲಿ ಕಂಡು ಬರುತ್ತದೆ. ಪದದ ಈ ಹೊಸ ತುಂಡನ್ನು ಕಟ್ಟಿರುವ ಬಗೆ ಹೀಗಿದೆ. ಇದರಲ್ಲಿ ಕೆಲವು ಕಟ್ಟುಗಳು ಇದ್ದಂತಿವೆ.

1. ದಿಂಡಿನ ಮೊದಲ ಉಲಿಕಂತೆಯ ಏರಿನಲ್ಲಿ ಯಾವ ತಡೆಯುಲಿ ಇದ್ದರೂ **(ಹ್, ಕ್, ಗ್, ನ್)** ಇಲ್ಲವೇ ಯಾವ ತಡೆಯುಲಿಯೂ ಇಲ್ಲದಿದ್ದರೂ (ಆಟ) ಹೊಸ ತುಂಡಿನಲ್ಲಿ **ಗ್** ಬರುತ್ತದೆ.

2. ಬಳಿಕ ಮೊದಲ ಉಲಿಕಂತೆಯ ನಡುವಿನಲ್ಲಿ ಇರುವ ತೆರೆದ ಉಲಿಯ ಬದಲು ಬೇರೆ ತೆರೆದ ಉಲಿ ಬರುತ್ತದೆ. ಬೇರಿನ ಪದದ ಮೊದಲ ಉಲಿಕಂತೆಯಲ್ಲಿ ಗಿಡ್ಡ ತೆರೆದ ಉಲಿ ಇದ್ದರೆ ಆಗ ತುಂಡಿನಲ್ಲಿ ಇ ಎಂಬ ಉಲಿಯೂ (**ಹು>ಗಿ**) ಅಲ್ಲಿ ಉದ್ದ ತೆರೆದ ಉಲಿ ಇದ್ದರೆ ಹೊಸ ತುಂಡಿನಲ್ಲಿ **ಈ** ಎಂಬ ಉಲಿಯೂ ಬರುತ್ತದೆ. (**ಕಾಲ್>ಗೀಲ್**)

3. ಮೊದಲ ಉಲಿಕಂತೆಯ ಇಳಿಯಲ್ಲಿ ಯಾವುದಾದರೂ ತಡೆಯುಲಿ ಇದ್ದರೆ– ಅಂದರೆ ಅದು ಮುಚ್ಚಿದ ಉಲಿ ಆಗಿದ್ದರೆ– ಆಗ ಆ ತಡೆಯುಲಿಯೇ ಹೊಸ ತುಂಡಿನಲ್ಲಿ ಉಳಿದುಕೊಳ್ಳುತ್ತದೆ. (**ನಾಚ್>ಗೀಚ್, ಗುಟ್>ಗಿಟ್**)

ಈ ಹೊಸ ಬಗೆಯನ್ನು ಕಟ್ಟುವುದೇಕೆ ಎಂಬ ಕೇಳ್ವಿಯನ್ನು ಬದಿಗಿಡೋಣ. ಆದರೆ ನುಡಿಯಲ್ಲಿರುವ ಉಲಿಕಂತೆಯ ರಚನೆಯಲ್ಲಿ ಬರುವ ಏರು,ನಡು ಮತ್ತು ಇಳಿಗಳ ಚಹರೆಗಳು ತಿಳಿದಿಲ್ಲವಾದರೆ ಇಂತಹ ಹೊಸ ಪದಗಳನ್ನು ಕಟ್ಟುವುದಾಗದು. ಕನ್ನಡದ್ದಲ್ಲದ ಪದಗಳನ್ನು ನೀಡಿದರೂ ಕನ್ನಡ ನುಡಿಯುವವರು ಇದೇ ಕಟ್ಟುಗಳನ್ನು ಬಳಸಿ ಇಂತಹ ಪದಗಳನ್ನು ಕಟ್ಟುತ್ತಾರೆ. ಎತ್ತುಗೆಗಾಗಿ **ಪೆನ್ನಿಗಿನ್, ಬಸ್ಸಿಗಿಸ್,ಸ್ಕೂಲ್ಗೀಲ್, ಕಾರ್ಗೀರ್** ಮುಂತಾದ ರಚನೆಗಳನ್ನು ನೋಡಬಹುದು. ಇದರಿಂದ ಉಲಿಕಂತೆಗಳ ಕಟ್ಟುಗಳು ನುಡಿಯುವವರ ನುಡಿಕಸುವಿನಲ್ಲಿ ಅಡಕವಾಗಿರುತ್ತದೆ ಎಂಬುದು ಮತ್ತಷ್ಟು ಗಟ್ಟಿಯಾಗುತ್ತದೆ.

ಈವರೆಗೆ ಕನ್ನಡ ಉಲಿಕಂತೆಗಳ ಚಹರೆಗಳನ್ನು ತಿಳಿದೆವು. ಉಲಿಕಂತೆಗಳ ಕಟ್ಟುಗಳ ಅರಿವನ್ನು ನುಡಿಯುವವರು ಅರಿತಿರುತ್ತಾರೆ ಎಂಬುದನ್ನು ಗುರುತಿಸಿದೆವು. ಉಲಿಕಂತೆಗಳ ಕಟ್ಟುಗಳು ನುಡಿಯ ಬೆಳವಣಿಗೆಯ ಬೇರೆ ಬೇರೆ ಹಂತಗಳಲ್ಲಿ ತೋರಿದ ಬದಲಾವಣೆಗಳನ್ನು ತಿಳಿದೆವು. ಕೊನೆಗೆ ಉಲಿಕಂತೆಗಳ ಕಟ್ಟುಗಳಿಗೂ ಕನ್ನಡ ಕವಿಗಳು ನೆಮ್ಮಿದ ಛಂದಸ್ಸಿನ ಬಗೆಗಳಿಗೂ ಇರುವ ನಂಟನ್ನು ಕಂಡೆವು. ನುಡಿಯಲ್ಲಿ ನಡೆಯುವ ಬದಲಾವಣೆಗಳಿಗೂ ಉಲಿಕಂತೆಗಳ ಕಟ್ಟುಗಳಿಗೂ ಇರುವ ನಂಟನ್ನು ಮೇಲೆ ಒಂದೆರಡು ಕಡೆ ನೋಡಿದ್ದೇವೆ. ಇದನ್ನು ಮತ್ತಷ್ಟು ಬಿಡಿಸಿ ತಿಳಿಯೋಣ.

ಇಂದಿನ ಆಡು ಕನ್ನಡದ ಉಲಿಕಂತೆಗಳ ಕಟ್ಟುಗಳನ್ನು ಬಣ್ಣಿಸುವಾಗ ಮುಚ್ಚಿದ ಉಲಿಕಂತೆಗಳ ಇಳಿಯಲ್ಲಿ ಎರಡು ತಡೆಯುಲಿಗಳಿದ್ದರೆ ಅವೆರಡೂ ಒಂದೇ ತಡೆಯುಲಿಗಳಾಗಿರಬೇಕು ಇಲ್ಲವೇ ಆ ಎರಡು ತಡೆಯುಲಿಗಳಲ್ಲಿ ಮೊದಲನೆಯದು ಮೂಗುಲಿಯಾಗಿರಬೇಕು ಎಂಬ ಕಟ್ಟು ಇರುವುದನ್ನು ಕಂಡೆವು. **ಕಲ್ಲು, ತಪ್ಪು,ಕಟ್ಟೆ,ಕತ್ತಿ** ಮುಂತಾದ ಪದಗಳು ಮೊದಲ ಬಗೆಗೆ ಎತ್ತುಗೆಗಳು. ಇವುಗಳಲ್ಲಿ ಮೊದಲ ಉಲಿಕಂತೆಯ ಇಳಿಯಲ್ಲಿ ಒಂದೇ ತಡೆಯುಲಿ ಎರಡು ಬಾರಿ ಬಂದಿದೆ. **ಕಂತೆ, ತಂಪು,ಅಂಬು,ಚಂದ** ಮುಂತಾದ ಪದಗಳು ಎರಡನೆಯ ಬಗೆಗೆ ಎತ್ತುಗೆಗಳು. ಈ ಪದಗಳಲ್ಲಿ ಮೊದಲ ಉಲಿಕಂತೆಯ ಇಳಿಯಲ್ಲಿ ಎರಡು ಬೇರೆ ಬೇರೆ ತಡೆಯುಲಿಗಳಿದ್ದರೂ ಅವುಗಳಲ್ಲಿ ಮೊದಲನೆಯದು ಮೂಗುಲಿಯೇ ಆಗಿದೆ. **ಚರ್ಪು,ಬಳ್ಪ,ಕೊಳ್ಪೆ, ತಲ್ಪು, ಬಲ್ಮೆ** ಮುಂತಾದ ಪದಗಳನ್ನು ತೋರಿಸಿ ಇವುಗಳಲ್ಲಿ ಮೊದಲ ಉಲಿಕಂತೆಯ ಇಳಿಯಲ್ಲಿ ಎರಡು

ತಡೆಯುಲಿಗಳು ಬಂದಿದ್ದು ಆ ತಡೆಯುಲಿಗಳು ಬೇರೆ ಬೇರೆ ಮಾತ್ರವಲ್ಲ, ಅವುಗಳಲ್ಲಿ ಮೊದಲನೆಯದು ಮೂಗುಲಿಯಲ್ಲವಲ್ಲ ಎಂಬ ಕೇಳ್ವಿಯನ್ನು ಮುಂದಿಡಬಹುದು. ಆದರೆ ಈ ಪದಗಳ ಮೊದಲ ಉಲಿಕಂತೆಗಳು ಮುಚ್ಚಿದ ಉಲಿಕಂತೆಗಳೆಂಬುದು ದಿಟವಾದರೂ ಅವುಗಳ ಇಳಿಯಲ್ಲಿ ಎರಡು ತಡೆಯುಲಿಗಳಿಲ್ಲ. ಬರಹದಲ್ಲಿ ಕಾಣುವ ಎರಡನೆಯ ತಡೆಯುಲಿ ಆಯಾ ಪದಗಳ ಎರಡನೆಯ ಉಲಿಕಂತೆಯ ಏರಿಗೆ ಸೇರಿದೆ. **ಬಳ್/ಪ** ಸರಿಯೇ ಹೊರತು. **ಬಳ್ಪ್/ಅ** ಅಲ್ಲ; ಹಾಗೆಯೆ ಚರ್ಪು ಎಂಬುದನ್ನು **ಚರ್/ಪು** ಎಂಬು ಒಡೆಯಬೇಕೇ ಹೊರತು **ಚರ್ಪ್/ಉ** ಎಂದಲ್ಲ. ಹಾಗಾಗಿ ನಾವು ಮೇಲೆ ಹೇಳಿದ ಉಲಿಕಂತೆಯ ಕಟ್ಟು ಸರಿಯಾಗಿಯೇ ಇದೆ ಎನ್ನಬೇಕು.

ಆದರೆ ಕನ್ನಡದ ಉಲಿಕಂತೆಗಳ ಕಟ್ಟುಗಳು ಇಲ್ಲವೇ ಉಲಿಕಂತೆಗಳ ರಚನೆಯ ಆಯ್ಕೆಗಳು ಬದಲಾಗುತ್ತಲೇ ಬಂದಿವೆ. ಒಂದೆರಡು ಎತ್ತುಗೆಗಳನ್ನು ಈಗ ನೋಡೋಣ.

ಉಕ್ಕು ಎಂಬುದು ಕೆಲಸ ಪದವಾಗಿ ಇಂದಿನ ಕನ್ನಡದಲ್ಲಿ ಬಳಕೆಯಲ್ಲಿದೆ. ಇದರ ಹಳಗನ್ನಡದ ರೂಪ **ಉರ್ಕು**. ಈಗ **ಉಕ್ಕು** ಪದದ ಉಲಿಕಂತೆಗಳನ್ನು ಗುರುತಿಸಿದರೆ ಅದನ್ನು **ಉಕ್ಕ್** ಮತ್ತು **ಉ** ಎಂದು ಒಡೆಯಬೇಕಷ್ಟೇ? ಆದರೆ **ಉರ್ಕು** ಪದದ ಉಲಿಕಂತೆಗಳು ಹೇಗಿವೆ? ಇಂದಿನ ಮಾದರಿಯನ್ನು ಹಿಡಿದರೆ **ಉರ್ಕ್** ಮತ್ತು **ಉ** ಎಂದು ಒಡೆಯಬೇಕು. ಆದರೆ ಹಳಗನ್ನಡದ ಉರ್ಕು ಪದದಲ್ಲಿ **ಕ್** ಇಲ್ಲವೇ **ಕು** ಎಂಬ ಪತ್ತುಗೆ (=ಪ್ರತ್ಯಯ) ಇದೆಯೆಂದು ಗುರುತಿಸಬೇಕು. **ಸೊರ್ಕು** (>**ಸೊಕ್ಕು**), **ಸುರ್ಕು** (>**ಸುಕ್ಕು**). **ಸಿಲ್ಕು** (>**ಸಿಕ್ಕು**) ಮುಂತಾದ ಕೆಲಸ ಪದಗಳಲ್ಲಿ ಇದಕ್ಕೆ ಬೇಕಾದ ಪುರಾವೆ ಇದೆ. ಅಲ್ಲದೆ ಹಳಗನ್ನಡದ ಕೆಲಸ ಪದಗಳಲ್ಲಿ **ಕ್** ಅಲ್ಲದೆ **ಚ್** (**ಬಾಚು,ಚಾಚು, ತೋಚು**) ಎಂಬ ಪತ್ತುಗೆಯೂ ಇದೆ. ಹಾಗಾಗಿ **ಉರ್ಕು** ಎಂಬ ಹಳಗನ್ನಡದ ಪದವನ್ನು ಉಲಿಕಂತೆಗಳನ್ನಾಗಿ ಒಡೆದರೆ **ಉರ್** ಮತ್ತು **ಕು** ಎಂದೇ ಒಡೆಯ ಬೇಕಾಗುವುದಲ್ಲವೇ? ಅಂದರೆ ಉರ್ಕು ಪದದ ಹಳಗನ್ನಡದ ಪದದ ಮೊದಲ ಉಲಿಕಂತೆಗೂ (=**ಉರ್**) ಹೊಸಗನ್ನಡದ **ಉಕ್ಕು** ಪದದ ಮೊದಲ ಉಲಿಕಂತೆಗೂ (**ಉಕ್ಕ್**) ಬದಲಾವಣೆ ಇದೆ ಎಂದು ಹೇಳಬೇಕಾಗುತ್ತದೆ. (**ಉರ್** ಎಂಬ ದಿಂಡಿನಲ್ಲಿ ಬರುವ **ರ್** ಉಲಿ ನಾವು ಇಂದಿನ ಕನ್ನಡದಲ್ಲಿ ಬಳಸುತ್ತಿರುವ **ರ್** ಉಲಿ ಅಲ್ಲದಿರಬಹುದು)

ಒಂದು ನುಡಿಯ ಉಲಿಕಂತೆಯ ಆಯ್ಕೆಗಳು ಬದಲಾವಣೆಯಾಗುತ್ತವೆ ಎನ್ನುವುದಕ್ಕೆ ಬೇರೆ ಎತ್ತುಗೆಗಳನ್ನು ಈ ಹಿಂದೆಯೇ ನೋಡಿದ್ದೇವೆ. ಹಳಗನ್ನಡದ ಪದಗಳು ನಡುಗನ್ನಡದಲ್ಲಿ ಬದಲಾಗುವ ಬಗೆಯಲ್ಲಿ ಉಲಿಕಂತೆಗಳ ಆಯ್ಕೆಗಳೂ ಬದಲಾಗಿವೆ.ಮುಚ್ಚಿದ ಉಲಿಕಂತೆಗಳು ತೆರೆದ ಉಲಿಕಂತೆಗಳಾಗಿ ಬದಲಾಗುವುದನ್ನು ಅಲ್ಲಿ ನೋಡಿದ್ದೇವೆ. ಇದಲ್ಲದೆ ಇನ್ನೂ ಒಂದು ಬದಲಾವಣೆಯನ್ನು ಗಮನಿಸೋಣ. **ಕೊಲ್, ಕಲ್, ಪುಲ್** (>**ಹುಲ್**) ಮುಂತಾದ ಹಳಗನ್ನಡ ಪದಗಳನ್ನು ನೋಡೋಣ. ಇವೆಲ್ಲವೂ ಒಂದೇ ಉಲಿಕಂತೆಯನ್ನು ಹೊಂದಿರುವ ಪದಗಳು. ಹೊಸಗನ್ನಡದಲ್ಲಿ ಇವು **ಕೊಲ್ಲು, ಕಲ್ಲು, ಹುಲ್ಲು** ಎಂದು ಬಳಕೆಯಲ್ಲಿವೆ. ಈ ಹೊಸಗನ್ನಡ ರೂಪಗಳ ಮೊದಲ ಉಲಿಕಂತೆಯನ್ನು **ಕೊಲ್ಲ್, ಕಲ್ಲ್, ಹುಲ್ಲ್** ಎಂದು ಗುರುತಿಸುತ್ತೇವೆ. ಹೊಸಗನ್ನಡ ಈ ಉಲಿಕಂತೆಗಳಂತೆ ಹಳಗನ್ನಡದ ಉಲಿಕಂತೆಗಳಿಲ್ಲ. ಇದನ್ನು ಹೇಗೆ ಅರಿತುಕೊಳ್ಳುವುದು?

ಹೊಸಗನ್ನಡದ ಈ ಪದಗಳ ಮೊದಲ ಉಲಿಕಂತೆಯ ಕೊನೆಗೆ ಬಂದಿರುವ ಎರಡನೆಯ ತಡೆಯುಲಿ ಹೊಸದಾಗಿ ಬಂದು ಸೇರಿದೆ ಎನ್ನೋಣವೇ? (**ಕೊಲ್> ಕೊಲ್ಲ್**) ಇಲ್ಲವೇ ಇದನ್ನು ಇನ್ನೂ ಒಂದು ಬಗೆಯಲ್ಲಿ ಬಣ್ಣಿಸಬಹುದು. ಹಳಗನ್ನಡದ ರೂಪಗಳ ಮೊದಲ ಉಲಿಕಂತೆಗಳು ಒಳಪದರದಲ್ಲಿ ಎರಡು ತಡೆಯುಲಿಗಳನ್ನು ಇಳಿಯಲ್ಲಿ ಹೊಂದಿದ್ದವು ಎಂದು ಹೇಳುವುದು. ಇದೇ ಸರಿಯಾದ ಬಣ್ಣನೆ ಎಂದು ತೋರುತ್ತದೆ. ಈಗ ಒಂದು ಕಟ್ಟನ್ನು ಹೀಗೆ ಹೇಳಬಹುದು

ಹಳಗನ್ನಡ	ನಡುಗನ್ನಡ	ಹೊಸಗನ್ನಡ
ಒಳಪದರ>ಹೊರಪದರ	ಒಳಪದರ>ಹೊರಪದರ	ಒಳಪದರ>ಹೊರಪದರ
ಕೊಲ್ಲ್>ಕೊಲ್ಲ್	**ಕೊಲ್ಲ್>ಕೊಲ್**	**ಕೊಲ್ಲ್>ಕೊಲ್ಲ್**
ಕಣ್ಣ್>ಕಣ್ಣ್	**ಕಣ್ಣ್>ಕಣ್**	**ಕಣ್ಣ್>ಕಣ್ಣ್**

ಇದರಿಂದ ನಡುಗನ್ನಡದಲ್ಲಿ ಮಾತ್ರ ಹೊರಪದರದಲ್ಲಿ ಉಲಿಕಂತೆಯ ಇಳಿಯ ಒಂದು ತಡೆಯುಲಿ ಬಿದ್ದು ಹೋಗಿದೆ ಎಂಬುದು ಗೊತ್ತಾಗುತ್ತದೆ. ಹಾಗಾಗಿಯೇ **ಕೊಲು, ಹುಲು, ಕಲು** ಮುಂತಾದ ರೂಪಗಳು ಆ ಕನ್ನಡದ ಮಾದರಿಯಲ್ಲಿ ನಮಗೆ ಕಾಣಿಸುತ್ತವೆ.

ನುಡಿಯರಿಗರು ಇನ್ನೂ ಒಂದು ಬಗೆಯಲ್ಲಿ ಈ ಬದಲಾವಣೆಯನ್ನು ಬಣ್ಣಿಸಿದ್ದಾರೆ. ಇದಕ್ಕಾಗಿ ಉಲಿಕಂತೆಗಳ ರಚನೆಯ ಇನ್ನೊಂದು ಮಾದರಿಯನ್ನು ಅರಿತುಕೊಳ್ಳಬೇಕು. ಎರಡು ಉಲಿಕಂತೆಗಳು ಒಂದಾದ ಬಳಿಕ ಇನ್ನೊಂದು ಬರುವಾಗ ಮೊದಲ ಉಲಿಕಂತೆಯ ಇಳಿಯಲ್ಲಿರುವ ಒಂದು ತಡೆಯುಲಿ ಎರಡನೆಯ ಉಲಿಕಂತೆಯ ಏರಿನಲ್ಲಿರುವ ತಡೆಯುಲಿಯಂತೆಯೂ ಕೆಲಸಮಾಡುತ್ತದೆ ಎನ್ನುವ ನಿಲುವನ್ನು ಈಗ ನುಡಿಯರಿಗರು ಮಂಡಿಸುತ್ತಿದ್ದಾರೆ. ಆಗ ಕೊಲ್ಲು ಎಂಬ ಉಲಿಕಂತೆಯನ್ನು ಈ ಕೆಳಕಂಡಂತೆ ಬಣ್ಣಿಸಬೇಕಾಗುವುದು.

> **ಕೊಲ್ಲು> ಕೊಲ್ (ಕ್/ಒ/ಲ್ ಎಂಬ ಮುಚ್ಚಿದ ಉಲಿಕಂತೆ) ಮತ್ತು ಲು (ಲ್/ಉ). ಆದರೆ ಮೊದಲ ಉಲಿಕಂತೆಯ ಇಳಿಯಲ್ಲಿರುವ ಲ್ ಮತ್ತು ಎರಡನೆಯ ಉಲಿಕಂತೆಯ ಏರಿನಲ್ಲಿರುವ ಲ್ ಬೇರೆಬೇರೆ ಅಲ್ಲ. ಒಂದೇ ತಡೆಯುಲಿ ಎರಡೂ ಉಲಿಕಂತೆಗಳಲ್ಲಿ ಬೇರೆ ಬೇರೆ ಜಾಗಗಳಲ್ಲಿರುವಂತೆ ಕೆಲಸ ಮಾಡುತ್ತಿದೆ.**

ಇದು ಈವರೆಗೆ ನಾವು ಬಣ್ಣಿಸಿದ ಉಲಿಕಂತೆಯ ಕಟ್ಟುಗಳಲ್ಲಿ ಸೇರಿಲ್ಲ. ಈ ಬಗೆಯಲ್ಲಿ ನೋಡುವುದರಿಂದ ಕನ್ನಡದ ಉಲಿ ಜೋಡಣೆಗಳ ಕೆಲವು ಕೇಳ್ವಿಗಳಿಗೆ ನಮಗೆ ಬದಲು ಸಿಗಬಹುದಾಗಿದೆ. ಬೇರೆ ನುಡಿಗಳಿಂದ ಕನ್ನಡಕ್ಕೆ ಬಂದು ಸೇರಿಕೊಂಡು ಬಳಕೆಯಾಗುತ್ತಿರುವ ಪದಗಳನ್ನು ನೋಡೋಣ. ಇಂಗ್ಲಿಶಿನಿಂದ ಬಂದ **ಕಾರ್, ಪೆನ್, ಬಸ್, ಬಾರ್** ಮುಂತಾದ ಪದಗಳು ಕನ್ನಡಿಗರ ಬಳಕೆಯಲ್ಲಿವೆ. (ಈ

ಪದಗಳನ್ನು ನಾವು ಹೇಗೆ ಹೇಳುತ್ತೇವೋ ಹಾಗೆ ಬರೆದಿದ್ದೇನೆ) ಇವೆಲ್ಲವೂ ಇಂಗ್ಲಿಶಿನಲ್ಲಿರುವಂತೆ ಒಂದು ಉಲಿಕಂತೆಯ ಪದಗಳು. ಆದರೆ ಕನ್ನಡದಲ್ಲಿ ಇವುಗಳನ್ನು ತೆರೆದ ಉಲಿಯಿಂದ ಕೊನೆಯಾಗುವಂತೆ ನುಡಿಯಲಾಗುವುದು. ಅಂದರೆ ಇವೇ ಪದಗಳು **ಕಾರು, ಬಸ್ಸು, ಪೆನ್ನು , ಬಾರು** ಎಂದಾಗುವುವು. ಎಲ್ಲ ಪದಗಳೂ ಇಂಗ್ಲಿಶಿನಲ್ಲಿ ಒಂದು ಉಲಿಕಂತೆಯನ್ನು ಹೊಂದಿವೆಯಾಗಿ ಅವುಗಳನ್ನು ಕನ್ನಡಕ್ಕೆ ಹೊಂದಿಸಿಕೊಳ್ಳುವಾಗ ಎರಡು ಹಾದಿಗಳನ್ನು ಹಿಡಿದಂತಿದೆ.

1. ನೇರವಾಗಿ **ಉ** ಎಂಬ ತೆರೆದ ಉಲಿಯನ್ನು ಇಂಗ್ಲಿಶ್ ಪದದ (ಅಂದರೆ ಉಲಿಕಂತೆಯ) ಇಳಿಯಲ್ಲಿರುವ ತಡೆಯುಲಿಗೆ ಸೇರಿಸುವುದು. ಆಗ **ಕಾರ್** ಎಂಬುದು **ಕಾರು (ಕಾರ್+ಉ)** ಎಂದಾಗುತ್ತದೆ.

2. **ಉ** ಎಂಬ ತೆರೆದ ಉಲಿಯನ್ನು ಇಂಗ್ಲಿಶ್ ಪದದ ಇಳಿಯ ತಡೆಯುಲಿಗೆ ಸೇರಿಸುವಾಗ ಆ ತಡೆಯುಲಿಯನ್ನು ಮತ್ತೆ ನುಡಿಯುವುದು. ಆಗ **ಬಸ್** ಎಂಬುದು **ಬಸು (ಬಸ್+ಉ)** ಎಂದಾಗುವುದಿಲ್ಲ; ಬದಲಿಗೆ **ಬಸ್+ಸ್+ಉ>ಬಸ್ಸು** ಎಂದಾಗುತ್ತದೆ. ಇಂಗ್ಲಿಶ್ ಇರಲಿ ಮತ್ತೆ ಯಾವುದೇ ನುಡಿಯಿಂದ ಪದಗಳನ್ನು ಕನ್ನಡ ಪಡೆದಿರಲಿ ಅವು ಒಂದು ಉಲಿಕಂತೆಯ ಪದಗಳಾಗಿದ್ದು ಆ ಉಲಿಕಂತೆಗಳ ಇಳಿಯಲ್ಲಿ ಒಂದು ತಡೆಯುಲಿ ಇದ್ದರೆ ಇದೇ ಮಾದರಿಯಗೆ ತಕ್ಕಂತೆ ಕನ್ನಡ ಹೊಂದಾಣಿಕೆ ಮಾಡಿಕೊಂಡಿದೆ.ಎಚ್ಚರಿಕೆಯಿಂದ ನೋಡಿದರೆ ಕನ್ನಡ ತನ್ನ ನುಡಿಯ ಹಾದಿಗೆ ಹೊಸ ಪದಗಳನ್ನು ಒಗ್ಗಿಸಿಕೊಳ್ಳುವಾಗ ತನ್ನ ಉಲಿಕಂತೆಯ ಕಟ್ಟುಗಳನ್ನೇ ನೆಮ್ಮಿಕೊಂಡಿದೆ ಎನ್ನುವುದು ಗೊತ್ತಾಗುತ್ತದೆ. ನಾವೀಗ ನೋಡಿದ ಇಂಗ್ಲಿಶಿನ ಪದಗಳು ಒಂದೇ ಉಲಿಕಂತೆಯನ್ನು ಹೊಂದಿದ್ದರೂ ಅವುಗಳಲ್ಲಿ ಕೆಲವು ಉದ್ದದ ತೆರೆದ ಉಲಿಯುಲಿಯನ್ನು ನಡುವಿನಲ್ಲಿ ಹೊಂದಿದ್ದರೆ **(ಕಾರ್, ಬಾರ್)**ಮತ್ತೆ ಕೆಲವು ಗಿಡ್ಡ ತೆರೆದ ಉಲಿಯನ್ನು ನಡುವಿನಲ್ಲಿ **(ಬಸ್, ಪೆನ್)**ಹೊಂದಿವೆ. ಮೊದಲ ಬಗೆಯ ಪದಗಳಿಗೆ ಸುಮ್ಮನೆ **ಉ** ಎಂಬ ತೆರೆದ ಉಲಿಯನ್ನು ಸೇರಿಸುವ ಬಗೆಯಿದ್ದರೆ ಎರಡನೆಯ ಗುಂಪಿನ ಪದಗಳಿಗೆ ಕೊನೆಯ ತಡೆಯುಲಿಯನ್ನು ಮತ್ತೆ ಹೇಳಿ ಬಳಿಕ **ಉ** ಎಂಬ ತೆರೆದ ಉಲಿಯನ್ನು ಸೇರಿಸಿಕೊಳ್ಳಲಾಗಿದೆ. ಇದು ಇಲ್ಲಿರುವ **ಕಟ್. ಪಾಟ್, ಬಾಲ್, ಬಿಲ್, ಕಿಟ್** ಮುಂತಾದ ಪದಗಳಿಗೆ ಹೊಂದಿಕೆಯಾಗುತ್ತದೆ.

ಇವೆಲ್ಲ ಎತ್ತುಗೆಗಳನ್ನು ನೋಡಿದಾಗ ಕನ್ನಡ ನುಡಿಯುವವರ ನುಡಿ ಕಸುವಿನಲ್ಲಿ ಉಲಿಕಂತೆಗಳ ಕಟ್ಟುಗಳು ನೆಲೆಯೂರಿದ್ದು ಹೊಸದಾಗಿ ಬಂದು ಸೇರಿದ ಪದಗಳನ್ನು ಕನ್ನಡಕ್ಕೆ ಹೊಂದಿಸಿಕೊಳ್ಳುವಾಗಲೂ ಆ ಕಟ್ಟುಗಳನ್ನು ಬಳಸುತ್ತಿರುವುದು ಗೊತ್ತಾಗುತ್ತದೆ.

ಈಗ ಇನ್ನೊಂದು ಎತ್ತುಗೆಯನ್ನು ನೋಡೋಣ. **ಸಿಕ್ಸ್** ಎಂಬ ಇಂಗ್ಲಿಶ್ ಪದವನ್ನು ನೋಡಿ. ಇದನ್ನು ಕನ್ನಡ ಬರಹದಲ್ಲಿ **ಉ** ಎಂಬ ತೆರೆದ ಉಲಿಯನ್ನು ಸೇರಿಸಿ ಬರೆಯುವ ಪರಿಪಾಟವಿದೆ. **(ಸಿಕ್ಸು)** ಮಾತಿನಲ್ಲಿ ಹಾಗೇನಿಲ್ಲ; ಸಿಕ್ಸ್ ಎಂದೇ ಹೇಳುತ್ತೇವೆ. ಇದೂ ಕೂಡ **ಪೆನ್** ಹಾಗೆ ಒಂದೇ ಉಲಿಕಂತೆಯ ಪದ. ಆದರೆ **ಸಿಕ್ಸ್** ಪದದ

ಇಳಿಯಲ್ಲಿ ಎರಡು ತಡೆಯುಲಿಗಳಿವೆ. (**ಕ್ ಮತ್ತು ಸ್**) ಅಂದರೆ ಕನ್ನಡ ಬೇರೆ ನುಡಿಯ ಪದಗಳನ್ನು ತನ್ನದನ್ನಾಗಿ ಮಾಡಿಕೊಳ್ಳುವಾಗ (ಅದರಲ್ಲೂ ಹಾಗೆ ಬಂದ ಪದದಲ್ಲಿ ಒಂದೇ ಉಲಿಕಂತೆಯಿದ್ದು ಅದೊಂದು ಮುಚ್ಚಿದ ಉಲಿಕಂತೆಯಾಗಿದ್ದರೆ) ತಡೆಯುಲಿಯಿಂದ ಕೊನೆಗೊಳ್ಳುತ್ತಿದ್ದರೆ **ಉ** ಎಂಬ ಉಲಿಯನ್ನು ಸೇರಿಸಿಕೊಳ್ಳುತ್ತದೆ ಎಂದು ಹೇಳಿಬಿಟ್ಟರೆ ಸಾಲದು. ಅಂತಹ ಹೊಸ ಪದಗಳ ಕೊನೆಯಲ್ಲಿ ಎಷ್ಟು ತಡೆಯುಲಿಗಳಿವೆ ಎನ್ನುವುದು ಇಲ್ಲಿ ಲೆಕ್ಕಕ್ಕೆ ಬರುತ್ತದೆ. ಅಲ್ಲಿ ಒಂದು ಕಟ್ಟು ಕೆಲಸ ಮಾಡುವಂತಿದೆ. ಅದನ್ನು ಈ ಕೆಳಕಂಡಂತೆ ಹೇಳಬಹುದು:

ಹೊಸ ಪದ ಒಂದೇ ಉಲಿಕಂತೆಯನ್ನು ಹೊಂದಿದ್ದರೆ;

ಅದರ ನಡುವಿನಲ್ಲಿರುವ ತೆರೆದ ಉಲಿ ಗಿಡ್ಡವಾಗಿದ್ದರೆ; ಮತ್ತು

ಇಳಿಯಲ್ಲಿ ತಡೆಯುಲಿಗಳಿದ್ದರೆ (ಅಂದರೆ ಅದೊಂದು ಮುಚ್ಚಿದ ತಡೆಯುಲಿ ಆಗಿದ್ದರೆ) ಆಗ

ಇಳಿಯಲ್ಲಿ ಒಂದು ತಡೆಯುಲಿ ಇದ್ದರೆ ಕನ್ನಡದ **ಉ** ಉಲಿ ಸೇರುವ ಮೊದಲು ಪದದ ಕೊನೆಯ ತಡೆಯುಲಿ ಇನ್ನೊಂದು ಸಲ ಬರುತ್ತದೆ. ಬಳಿಕ **ಉ** ಎಂಬ ಉಲಿ ಸೇರುತ್ತದೆ (**ಬಸ್**>**ಬಸ್ಸು. ಪೆನ್**>**ಪೆನ್ನು**)

ಇಳಿಯಲ್ಲಿ ಎರಡು ತಡೆಯುಲಿಗಳಿದ್ದರೆ ಆಗ ಉ ಎಂಬ ಉಲಿ ಇಳಿಯಲ್ಲಿ ಇರುವ ಕೊನೆಯ ತಡೆಯುಲಿಗೆ ಸೇರಿಕೊಳ್ಳುತ್ತದೆ. (**ಸಿಕ್ಸ್**> **ಸಿಕ್ಸು, ಬೆಸ್ಟ್**>**ಬೆಸ್ಟು**)

ಇಳಿಯಲ್ಲಿ ಎರಡಕ್ಕಿಂತ ಹೆಚ್ಚು ತಡೆಯುಲಿಗಳಿರುವ ಪದಗಳಾಗಿದ್ದರೆ ಆಗಲೂ ಕೊನೆಯ ತಡೆಯುಲಿಗೆ ಉ ಎಂಬ ಉಲಿ ಸೇರುತ್ತದೆ. (**ಬರ್ಸ್ಟ್**> **ಬರ್ಸ್ಟು**)

ಪಡೆದುಕೊಂಡ ಪದದಲ್ಲಿ ಒಂದು ಉಲಿಕಂತೆ ಮಾತ್ರವೇ ಇದ್ದು ಅದರ ನಡುವಿನ ತೆರೆದ ಉಲಿ ಉದ್ದವಾಗಿದ್ದರೆ ಮತ್ತು ಇಳಿಯಲ್ಲಿ ತಡೆಯುಲಿ ಇದ್ದರೆ ಆಗ ಕೊನೆಯ ತಡೆಯುಲಿಗೆ **ಉ** ಎಂಬ ಉಲಿ ಸೇರುತ್ತದೆ. ಬೇರೆ ಬದಲಾವಣೆಗಳಿರುವುದಿಲ್ಲ (**ಕಾರ್**>**ಕಾರು. ಬಾರ್**>**ಬಾರು, ಟೂರ್**>**ಟೂರು, ಬಾಲ್**>**ಬಾಲು**) ಇಂತಹ ಪದಗಳ ಇಳಿಯಲ್ಲಿ ಒಂದಕ್ಕಿಂತ ಹೆಚ್ಚು ತಡೆಯುಲಿಗಳಿದ್ದರೂ ಕೊನೆಯ ತಡೆಯುಲಿಗೆ **ಉ** ಎಂಬ ಉಲಿ ಸೇರುತ್ತದೆ. ಮತ್ತೆ ಯಾವ ಬದಲಾವಣೆಯೂ ಆಗುವುದಿಲ್ಲ (**ಬಾಂಬ್**>**ಬಾಂಬು, ಟೆಂಟ್**>**ಟೆಂಟು, ಪಾರ್ಟ್**>**ಪಾರ್ಟು, ವೇಸ್ಟ್**>**ವೇಸ್ಟು**)

ಇದರಿಂದ ಕನ್ನಡದ ಒಂದೇ ಉಲಿಕಂತೆಯ ಪದಗಳ ಬಗೆಗೆ ಒಂದು ಕಟ್ಟನ್ನು ಹೇಳಬರುವಂತಿದೆ. ಅದರಲ್ಲೂ ಅಂತಹ ಪದಗಳ ಉಲಿಕಂತೆಗಳು ಮುಚ್ಚಿದ ಬಗೆಯವಾಗಿದ್ದರೆ ಆಗ ಈ ಕಟ್ಟು ಹೊಂದುತ್ತದೆ. ಅಂತಹ ಪದಗಳ ಉಲಿಕಂತೆಗಳಲ್ಲಿ

1) ನಡುವಿನಲ್ಲಿ ಗಿಡ್ಡ ತೆರೆದ ಉಲಿ ಇದ್ದರೆ ಆಗ ಅದರ ಇಳಿಯಲ್ಲಿ ಎರಡು ತಡೆಯುಲಿಗಳಿರುತ್ತವೆ. ಹೆಚ್ಚು ಪಾಲು ಒಂದೇ ತಡೆಯುಲಿ ಎರಡು ಬಾರಿ ಕಾಣಿಸಿಕೊಳ್ಳುತ್ತದೆ. ಒಂದೇ ತಡೆಯುಲಿ ಇರಲಾರದು (**ಮುಟ್ಟ್**>**ಮುಟ್ಟು, ಅಚ್ಚ್**>**ಅಚ್ಚು , ಉಜ್ಜ್**>**ಉಜ್ಜು**)

2) ನಡುವಿನಲ್ಲಿ ಉದ್ದ ತಡೆಯುಲಿ ಇದ್ದರೆ ಆಗ ಇಳಿಯಲ್ಲಿ ಒಂದೇ ತಡೆಯುಲಿ ಇರಬಹುದು. ಒಂದಕ್ಕಿಂತ ಹೆಚ್ಚು ಬೇರೆ ಬೇರೆ ಚಹರೆಯ ತಡೆಯುಲಿಗಳೂ ಇರುವುದನ್ನು ಕಾಣುತ್ತೇವೆ.

ಕನ್ನಡ ಪದಗಳಲ್ಲಿ ಒಂದೇ ಉಲಿಕಂತೆ ಇದ್ದರೆ ಮತ್ತು ಆ ಉಲಿಕಂತೆ ಮುಚ್ಚಿದ ತಡೆಯುಲಿ ಆಗಿದ್ದರೆ ಅದು ಹೇಗಿರುತ್ತದೆ ಎಂಬುದನ್ನು ಕಂಡೆವು. ಆ ಮುಚ್ಚಿದ ಉಲಿಕಂತೆಯ ನಡುವಿನಲ್ಲಿ ಗಿಡ್ಡ ತೆರೆದ ಉಲಿಯಿದ್ದರೆ ಇಳಿಯಲ್ಲಿ ಒಂದಕ್ಕಿಂತ ಹೆಚ್ಚು ತಡೆಯುಲಿಗಳಿರುತ್ತವೆ. ಆದರೆ ಇಳಿಯಲ್ಲಿ ಒಂದೇ ತಡೆಯುಲಿ ಇರಲಾರದು. ಒಂದೊಮ್ಮೆ ಆ ಪದದ ನಡುವಿನಲ್ಲಿ ಉದ್ದ ತೆರೆದ ಉಲಿ ಇದ್ದರೆ ಆಗ ಅದರ ಇಳಿಯಲ್ಲಿ ಒಂದೇ ತಡೆಯುಲಿ ಇರಬಹುದು. ಕನ್ನಡದ **ಕಣ್ಣ್, ತಿನ್ನ್, ಕಲ್ಲ್, ಬಿಲ್ಲ್, ಜಜ್ಜ್** ಮುಂತಾದವು ಮೊದಲ ಬಗೆಯ ಪದಗಳ ಉಲಿಕಂತೆಗಳಾದರೆ **ಕಾಲ್, ಕೋಲ್, ಚೀರ್, ಮೀರ್, ಕೇಳ್** ಮುಂತಾದವು ಎರಡನೆಯ ಬಗೆಯ ಪದಗಳ ಉಲಿಕಂತೆಗಳು.

ಒಂದೇ ಉಲಿಕಂತೆಯ ಪದವಾಗಿದ್ದು ಅದು ಮುಚ್ಚಿದ ಉಲಿಕಂತೆಯಾಗಿದ್ದರೆ ಆಗ ಅದನ್ನು ಬಿಡಿಯಾಗಿ ನುಡಿಯುವಾಗ ಇಳಿಯಲ್ಲಿರುವ ಕೊನೆಯ ತಡೆಯುಲಿಗೆ **ಉ** ಎಂಬ ಉಲಿ ಸೇರಿಕೊಳ್ಳುತ್ತದೆ ಎಂಬುದು ಇನ್ನೊಂದು ಕಟ್ಟು. ಉಳಿದ ಕಡೆಗಳಲ್ಲಿ ಅದು ಮುಚ್ಚಿದ ಉಲಿಕಂತೆಯಾಗಿಯೇ ಬಳಕೆಯಾಗುತ್ತದೆ. ಒಂದು ಎತ್ತುಗೆಯನ್ನು ನೋಡೋಣ.

ಕಾಲ್ ಎಂಬುದು ಕನ್ನಡದ ಒಂದು ಪದ. ಇದರಲ್ಲಿ ಒಂದೇ ಉಲಿಕಂತೆ ಇದೆ. ಮತ್ತು ಅದು ಮುಚ್ಚಿದ ಉಲಿಕಂತೆಯಾಗಿದೆ. ಈ ಪದವನ್ನು ಬಿಡಿಯಾಗಿ ನುಡಿಯುವಾಗ **ಕಾಲ್** ಪದದ ಇಳಿಯ ತಡೆಯುಲಿಗೆ **ಉ** ಸೇರಿಸುತ್ತೇವೆ. ಹಾಗಾಗಿ ಅದು **ಕಾಲು** ಎಂದಾಗುತ್ತದೆ. ಉಳಿದ ಕಡೆಗಳಲ್ಲಿ ಅದು **ಕಾಲ್** ಎಂದೇ ಇರುತ್ತದೆ. **ಕಾಲನ್ನು, ಕಾಲಿಂದ,ಕಾಲಲ್ಲಿ** ಎಂಬ ಬಳಕೆಗಳಲ್ಲಿ **ಕಾಲ್** ಎಂದಷ್ಟೇ ಇದೆ. ಹಾಗೆಯೇ **ಕಾಲ್ಗೆ, ಕಾಲ್ಚೆಂಡು, ಕಾಲ್ಬೆರಳು,ಕಾಲ್ತೆಗೆ** ಮುಂತಾದ ಕಡೆಗಳಲ್ಲೂ (ಅಂದರೆ **ಕಾಲ್** ಬಳಿಕ ಒಂದು ತಡೆಯುಲಿ ಬಂದಾಗಲೂ) **ಕಾಲ್** ಎಂದೇ ಉಳಿದುಕೊಳ್ಳುತ್ತದೆ.

ಈ ಕಟ್ಟನ್ನು ಇನ್ನಷ್ಟು ಬಿಡಿಸಿ ನೋಡೋಣ. ಒಂದು ವೇಳೆ ಒಂದೇ ಉಲಿಕಂತೆಯ ಪದದಲ್ಲಿ ಇರುವುದು ಮುಚ್ಚಿದ ಉಲಿಕಂತೆಯಾಗಿದ್ದರೆ ಮತ್ತು ಅದರ ನಡುವಿನಲ್ಲಿ ಇರುವುದು ಗಿಡ್ಡ ತೆರೆದ ಉಲಿಯಾಗಿದ್ದರೆ ಆಗ ಏನಾಗುತ್ತದೆ? ಈಗಾಗಲೇ ನಾವು ನೋಡಿದಂತೆ ಇಂತಹ ಪದಗಳ ಇಳಿಯಲ್ಲಿ ಒಂದೇ ತಡೆಯುಲಿ ಇರುವಂತಿಲ್ಲ. ಇರುವ ತಡೆಯುಲಿಯೇ ಎರಡು ಬಾರಿ ಬರಬೇಕು ಇಲ್ಲವೇ ಬೇರೆ ಬೇರೆ ತಡೆಯುಲಿಗಳು ಇರಬೇಕು. ಹಾಗಾಗಿ ನಾವು **ಕಲ್** ಎಂಬ ಉಲಿಕಂತೆಯ ಬದಲಿಗೆ **ಕಲ್ಲ್** ಎಂಬುದನ್ನು ಒಪ್ಪಬೇಕಾಗುತ್ತದೆ. ಸರಿ. ಈ ಪದ ಹೇಗೆ ಬಳಕೆಯಾಗುತ್ತದೆ? ಬಿಡಿಯಾಗಿ ನುಡಿದಾಗ ಮೇಲೆ ಹೇಳಿದ ಕಟ್ಟಿನಂತೆ ಕೊನೆಯ ತಡೆಯುಲಿಗೆ **ಉ** ಎಂಬ ಉಲಿ ಸೇರಿಕೊಳ್ಳುತ್ತದೆ. ನಾವು **ಕಲ್ಲು** ಎಂದು ನುಡಿಯುತ್ತೇವೆ. ಬೇರೆ ಉಲಿಗಳ ಜೊತೆಯಲ್ಲಿ ನುಡಿಯುವಾಗ ಏನಾಗುತ್ತದೆ?

ಒಂದು ಎತ್ತುಗೆಯನ್ನು ನೋಡೋಣ. **ಕಲ್ಲ್** ಎಂಬುದನ್ನು ತೆರೆದ ಉಲಿಗಳ ಮೊದಲು ನುಡಿದರೆ ಅದು ಏನೂ ಬದಲಾಗುವುದಿಲ್ಲ. **ಕಲ್ಲನ್ನು (ಕಲ್ಲ್+ಅನ್ನು), ಕಲ್ಲಿಂದ(ಕಲ್ಲ್+ಇಂದ) ,ಕಲ್ಲಲ್ಲಿ (ಕಲ್ಲ್+ಅಲ್ಲಿ)**ಇವೆಲ್ಲ ಪದಗಳಲ್ಲೂ **ಕಲ್ಲ್** ಎಂಬುದು ಹಾಗೇ ಉಳಿದಿದೆ. ಆದರೆ ತಡೆಯಲಿಗಳಿಗೆ ಮೊದಲು ಬಂದರೆ ಏನಾಗುತ್ತದೆ. **ಕಲ್ಗೆ (ಕಲ್ಲ್+ಗೆ), ಕಲ್ದವಸಿ(ಕಲ್ಲ್+ತವಸಿ) (ಕೊಂಚ ಹಳೆಯ ಪದ), ಕಲ್ನಾರು (ಕಲ್ಲ್+ನಾರು), ಕಲ್ಬಂಡೆ(ಕಲ್ಲ್+ಬಂಡೆ)** ಮುಂತಾದ ಪದಗಳಲ್ಲಿ **ಕಲ್ಲ್** ಬದಲು **ಕಲ್** ಎಂಬುದು ಮಾತ್ರ ಕೇಳಿಸುತ್ತದೆ. ಅಂದರೆ **ಕಲ್ಲ್** ಎಂಬ ಉಲಿಕಂತೆಯ ಕೊನೆಯಲ್ಲಿದ್ದ ಒಂದು **ಲ್** ಉಲಿ ಬಿದ್ದು ಹೋಗಿದೆ ಎನ್ನಬೇಕು.

ಹೀಗೆ ಉಲಿಕಂತೆಯ ಕೊನೆಯಲ್ಲಿರುವ ಎರಡನೆಯ ತಡೆಯುಲಿಯು ಬಿದ್ದು ಹೋಗಿದೆ ಎನ್ನುವುದನ್ನು ಬಣ್ಣಿಸಲು ಇನ್ನೂ ಒಂದು ಹಾದಿ ಇದೆ. ಕನ್ನಡ ಪದಗಳಲ್ಲಿ ಅಂದರೆ ಒಂದಕ್ಕಿಂತ ಹೆಚ್ಚು ಉಲಿಕಂತೆಗಳಿರುವ ಪದಗಳು ಮತ್ತು ರಚನೆಗಳಲ್ಲಿ ಒಂದಾದ ಮೇಲೊಂದರಂತೆ ಮೂರು ತಡೆಯುಲಿಗಳು ಕಾಣಿಸಿಕೊಳ್ಳಲಾರವು. ಹಾಗೇನಾದರೂ ಕಾಣಿಸಿಕೊಂಡರೆ ಆ ಮೂರು ತಡೆಯುಲಿಗಳಲ್ಲಿ ಮೊದಲನೆಯದು ಮೂಗುಲಿಯೇ ಆಗಿರಬೇಕಾಗುತ್ತದೆ.

ಕೆಲವು ಎತ್ತುಗೆಗಳನ್ನು ನೋಡೋಣ. ಬಂದ್ರೆ, **ತಂದ್ಳು, ಅಂಚ್ನಲ್ಲಿ, ಚಂಡ್ಗೆ** ಮುಂತಾದ ರಚನೆಗಳನ್ನು ನೋಡಿ. ಇವುಗಳಲ್ಲಿ ಒಂದೊಂದರಲ್ಲೂ ಮೂರು ತಡೆಯುಲಿಗಳು ನಡುವೆ ಕಾಣಿಸಿಕೊಳ್ಳುತ್ತವೆ. **ಬಂದ್ರೆ(ನ್/ದ್/ರ್), ತಂದ್ಳು (ನ್/ದ್/ಳ್), ಅಂಚ್ನಲ್ಲಿ (ಞ/ಚ್/ನ್), ಚಂಡ್ಗೆ (ಣ್/ಡ್/ಗ್).** ಈ ಎಲ್ಲ ರಚನೆಗಳಲ್ಲೂ ಕಂಡು ಬರುವ ಮೂರು ತಡೆಯುಲಿಗಳ ಜೋಡಣೆಯಲ್ಲಿ ಮೊದಲನೆಯದು ಮೂಗುಲಿಯೇ ಆಗಿದೆ ಎನ್ನುವುದನ್ನು ನೋಡಬಹುದು. ಹೀಗಲ್ಲದೆ ಮೂರು ತಡೆಯುಲಿಗಳು ಒಟ್ಟಾಗಿ ಬರಬೇಕಾದ ರಚನೆಗಳಲ್ಲಿ ಒಂದು ತಡೆಯುಲಿ ಕಳೆದು ಹೋಗುವುದು ಒಂದು ಹಾದಿ. **ಕಲ್ಲ್+ಬಂಡೆ** ಸೇರಿದ ಪದದಲ್ಲಿ **ಲ್/ಲ್/ಬ್** ಎಂಬ ಮೂರು ತಡೆಯುಲಿಗಳು ಒಟ್ಟಾಗಿವೆ. ಹಾಗಾಗುವುದಕ್ಕೆ ಆಗದು. ಆದ್ದರಿಂದ ಒಂದು **ಲ್** ಉಲಿಯನ್ನು ಹೊರಪದರದ ರಚನೆ ಕಳೆದುಕೊಳ್ಳುತ್ತದೆ.

ಇದಲ್ಲದೆ ಮೂರೂ ಬೇರೆ ತಡೆಯುಲಿಗಳು ಒಟ್ಟಾಗಿ ಬರಬೇಕಾದ ರಚನೆಗಳಿದ್ದರೆ (ಮತ್ತು ಅವುಗಳಲ್ಲಿ ಮೊದಲನೆಯದು ಮೂಗುಲಿ ಆಗದಿದ್ದಲ್ಲಿ) ಆಗ ಮೊದಲನೆಯ ತಡೆಯುಲಿಯ ಬಳಿಕ ಒಂದು ಹೊಸ ತೆರೆದ ಉಲಿಯನ್ನು ಸೇರಿಸಬೇಕಾಗುತ್ತದೆ. **ನೋಡ್ದ್ಳು** ಎಂಬ ರಚನೆಯನ್ನು ನೋಡಿ. ಇದರಲ್ಲಿ **ಡ್/ದ್/ಳ್** ಎಂಬ ಮೂರು ತಡೆಯುಲಿಗಳು ಒಟ್ಟಾಗಿ ಬಂದಂತೆ ತೋರುತ್ತದೆ. ಆದರೆ ಈ ರಚನೆಯನ್ನು ನುಡಿದಾಗ, ಡ್ ಉಲಿಯು ಬಳಿಕ ಒಂದು ತೆರೆದ ಉಲಿಯುನ್ನು ಸೇರಿಸುವುದನ್ನು ಗುರುತಿಸಬಹುದು,ಅದು ಒಂದು ತೆರಪಿನಂತೆ ನಮ್ಮ ಕಿವಿಗೆ ಕೇಳಿಸುತ್ತದೆ. ಅಂದರೆ **ಡ್** ಉಲಿಯ ಬಳಿಕ ನಾವು ಗಮನಿಸ ಬಹುದಾದಷ್ಟು ತೆರಪು ಇರುತ್ತದೆ. ಅಲ್ಲಿ ಒಂದು ತೆರೆದ ಉಲಿ ಇರುವುದೆಂದು ತೋರಿಸಬಹುದು. ಕೆಲವು ಒಳನುಡಿಗಳಲ್ಲಿ ಈ ತೆರಪಿನಲ್ಲಿ ಇ ಎಂಬ ಉಲಿಯನ್ನು ಸೇರಿಸಿ **ನೋಡಿದ್ಳು** ಎಂದು ನುಡಿಯುವುದೂ ಉಂಟು.

ಕನ್ನಡ ಪದ ರಚನೆ ಮತ್ತು ಉಲಿಕಂತೆಗಳ ಕಟ್ಟುಗಳು

ತಿರುಳುಳ್ಳ ಉಲಿಗಳ ಗುಂಪನ್ನು ಪದ ಎಂದು ಕರೆಯುವುದು ವಾಡಿಕೆ. **ಕಿವಿ** ಎಂಬುದು ಕನ್ನಡದ ಪದ ಏಕೆಂದರೆ ಅದರಲ್ಲಿ **ಕ್**/ ಇ/ **ವ್**/ ಇ ಎಂಬ ನಾಲ್ಕು ಉಲಿಗಳಿವೆ ಮತ್ತು ಅವೆಲ್ಲವೂ ಸೇರಿರುವ ಬಗೆಯಿಂದ ಹುಟ್ಟಿದ ಗುಂಪಿಗೆ ಕನ್ನಡದಲ್ಲಿ ಒಂದು ತಿರುಳಿದೆ. ಇವೇ ನಾಲ್ಕು ಉಲಿಗಳನ್ನು **ವಿಕಿ** (**ವ್**+ಇ+**ಕ್**+ಇ) ಎಂದು ಜೋಡಿಸಿದಾಗ ಕನ್ನಡದಲ್ಲಿ ಒಂದು ತಿರುಳಿರುವ ಪದ ಹುಟ್ಟುವುದಿಲ್ಲ . ಹಾಗಾಗಿ ಅದು ಕನ್ನಡದ ಪದ ಅಲ್ಲ, (ಬೇರೆ ನುಡಿಯಲ್ಲಿ **ವಿಕಿ** ಎಂಬುದಕ್ಕೆ ತಿರುಳಿರಬಹುದು. ಆದರೆ ನಮಗೆ ಅದು ಇಲ್ಲಿ ಬೇಡ)

ಪದವೆಂದರೇನು ಎಂದು ತಿಳಿಯಲು ಇದಿಷ್ಟೇ ಸಾಲದು. ಇದಲ್ಲದೆ ಪದವನ್ನು ತಿರುಳಿರುವ ಚಿಕ್ಕ ತುಂಡುಗಳನ್ನಾಗಿ ಒಡೆಯಲು ಬಾರದಂತಿರಬೇಕು. **ಕಾಗೆಪುಕ್ಕ** ಎಂಬುದು ಕನ್ನಡದ ಪದವೇ ಎಂದು ಕೇಳಿದರೆ ಅಲ್ಲವೆಂದೇ ಹೇಳಬೇಕಾಗುತ್ತದೆ. ದಿಟ. ಅದರಲ್ಲಿ **ಕ್,ಆ,ಗ್,ಎ,ಪ್,ಉ,ಕ್,ಕ್,ಅ** ಎಂಬ ಉಲಿಗಳು ಸೇರಿವೆ. ಅಲ್ಲದೆ ಈ ಉಲಿಗಳ ಗುಂಪಿಗೆ ಕನ್ನಡದಲ್ಲಿ ತಿರುಳಿದೆ. ಆದರೆ **ಕಾಗೆಪುಕ್ಕ** ಎಂಬುದನ್ನು **ಕಾಗೆ** ಮತ್ತು **ಪುಕ್ಕ** ಎಂಬ ತುಂಡುಗಳನ್ನಾಗಿ ಒಡೆಯಬಹುದು, ಹೀಗೆ ಒಡೆದಾಗ ಸಿಗುವ **ಕಾಗೆ** ಮತ್ತು **ಪುಕ್ಕ** ಎಂಬ ಎರಡು ತುಂಡುಗಳಿಗೆ ಕನ್ನಡದಲ್ಲಿ ಬಿಡಿಬಿಡಿಯಾದ ತಿರುಳಿದೆ. ಅಲ್ಲದೆ ಈ ತುಂಡುಗಳನ್ನು (ಬಿಡಿ ಪದಗಳನ್ನು) ಬಳಸಿ ಕನ್ನಡದಲ್ಲಿ ಬೇರೆ ಬೇರೆ ರಚನೆಗಳನ್ನು ಪಡೆಯಬಹುದು; ಎತ್ತುಗೆಗಾಗಿ ಕಾಗೆಕೊಕ್ಕು,ಕಾಗೆರೆಕ್ಕೆ, ಕೋಳಿಪುಕ್ಕ,ಹಕ್ಕಿಪುಕ್ಕ ಹೀಗೆ.

ಒಂದು ರಚನೆಯನ್ನು ಪದವೆಂದು ಕರೆಯಲು ಯಾವಾಗ ಆಗುವುದಿಲ್ಲ ಎಂದು ತಿಳಿದೆವು. ಆದರೆ ಹೀಗೆ ಆ ರಚನೆಯನ್ನು ಒಡೆದಾಗ ಸಿಗುವ ಎಲ್ಲ ತುಂಡುಗಳಿಗೂ ಗೊತ್ತಾದ ತಿರುಳು ಇರಲೇಬೇಕೇ ಎಂಬುದು ಮುಂದಿನ ಕೇಳ್ವಿ. ಇಲ್ಲ. ಹಾಗೇನೂ ಇಲ್ಲ. ಒಂದು ರಚನೆಯನ್ನು ಒಡೆದಾಗ ಸಿಗುವ ತುಂಡುಗಳಲ್ಲಿ ಯಾವುದಾದರೊಂದಕ್ಕೆ ಕನ್ನಡದಲ್ಲಿ ತಿರುಳು ಇದ್ದರೂ ಆ ರಚನೆಯನ್ನು ಪದವೆಂದು ಕರೆಯಲಾಗುವುದಿಲ್ಲ ಎಂದು ಕೆಲವರು ಹೇಳುವುದುಂಟು. ಆದರೆ ಕನ್ನಡದ ಮಟ್ಟಿಗೆ ಈ ಶರತ್ತನ್ನು ಹಾಕಲು ಆಗುವುದಿಲ್ಲ. ಅಂದರೆ ಒಂದು ರಚನೆಯನ್ನು ಒಡೆದಾಗ ಸಿಗುವ ತುಂಡುಗಳಲ್ಲಿ ಯಾವುದಾದರೊಂದಕ್ಕೆ ಕನ್ನಡದಲ್ಲಿ ಗೊತ್ತಾದ ತಿರುಳಿಲ್ಲ ಎಂದಾದರೂ ಆ ರಚನೆಯನ್ನು ಪದವೆಂದೇ ಕರೆಯಬೇಕಾಗುತ್ತದೆ. ಈ ಮಾತನ್ನು ಇನ್ನಷ್ಟು ಬಿಡಿಸಿ ನೋಡೋಣ.

ಎತ್ತುಗೆಗಾಗಿ **ತಲೆಗೆ** ಎಂಬ ರಚನೆಯನ್ನು ನೋಡೋಣ. ಇದನ್ನು **ತಲೆ** ಮತ್ತು **ಗೆ** ಎಂದು ಒಡೆಯಬಹುದು. (**ತ** ಮತ್ತು **ಲೆಗೆ** ಎಂದು ಒಡೆಯಬಹುದಾದರೂ ಅದು ಕೆಲಸಕ್ಕೆ ಬಾರದ್ದು ಎಂಬುದು ಮುಂದೆ ಗೊತ್ತಾಗಲಿದೆ) ಈ ತುಂಡುಗಳಲ್ಲಿ **ತಲೆ** ಎಂಬುದನ್ನು ಪದವೆಂದು ಕರೆಯಬಹುದು. **ಗೆ** ಎಂಬುದು ಉಲಿಗಳ ಗುಂಪು ಆಗಿದ್ದರೂ ಅದಕ್ಕೆ ಗೊತ್ತಾದ ತಿರುಳಿಲ್ಲ. ಹಾಗಾಗಿ **ತಲೆಗೆ** ಎಂಬುದನ್ನು ಪದವೆಂದು ಕರೆಯಲಾಗದು ಎಂದು ಹೇಳುವ ನುಡಿಯರಿಗರೂ ಇದ್ದಾರೆ. ಏಕೆಂದರೆ **ತಲೆಗೆ** ಎಂಬುದನ್ನೇ ಕನ್ನಡಿಗರು ಒಂದು ತುಂಡನ್ನಾಗಿ ನೆನಪಿನಲ್ಲಿ ಇರಿಸಿಕೊಂಡಿರುವುದಿಲ್ಲ. **ತಲೆ** ಮತ್ತು **ಗೆ** ಎಂಬ ತುಂಡುಗಳು ಬೇರೆ ಬೇರೆಯಾಗಿದ್ದು ಬೇಕಾದಾಗ ಅವೆರಡನ್ನೂ ಕೂಡಿಸಿ **ತಲೆಗೆ** ಎಂಬ ರಚನೆಯನ್ನು ಕಟ್ಟಿಕೊಳ್ಳುತ್ತಾರೆ. ಹಾಗೆಯೇ **ಗೆ** ಎಂಬುದನ್ನು ಬಳಸಿ **ಮನೆಗೆ,ಒಲೆಗೆ,ಅಕ್ಕಿಗೆ** ಮುಂತಾದ ರಚನೆಯನ್ನು ಕಟ್ಟಿಕೊಳ್ಳುತ್ತಾರೆ. ಅಂತೆಯೇ **ತಲೆ** ಪದವನ್ನು ಬಳಸಿ **ತಲೆಯಲ್ಲಿ, ತಲೆಯಿಂದ, ತಲೆನೋವು,ತಲೆದಿಂಬು** ಮುಂತಾದ ರಚನೆಗಳನ್ನು ಕಟ್ಟಬಲ್ಲರು. ಆದ್ದರಿಂದ **ತಲೆ** ಎಂಬುದನ್ನು ಪದವೆಂದು ಕರೆಯಬೇಕೇ ಹೊರತು **ತಲೆಗೆ** ಎಂಬುದನ್ನಲ್ಲ ಎನ್ನುವುದು ಈ ನುಡಿಯರಿಗರ ಮಾತಿನ ತಿರುಳು. ಇದು ದಿಟವೇ ಎಂಬುದನ್ನು ಮುಂದೆ ನೋಡೋಣ.

ಇದಲ್ಲದೆ ಇನ್ನೂ ಒಂದು ದಿಕ್ಕಿನಿಂದ ಈ ಕೇಳ್ವಿಯನ್ನು ನೊಡಬಹುದು. ಕನ್ನಡದಲ್ಲಿ ಬಳಕೆಯಲ್ಲಿರುವ ಎಷ್ಟೋ ರಚನೆಗಳನ್ನು ಕನ್ನಡವನ್ನು ಆಡುವವರು ಚಿಕ್ಕಚಿಕ್ಕ ತುಂಡುಗಳನ್ನಾಗಿ ತಾವೇ ಒಡೆಯಲು ಬಲ್ಲರೇ ಎಂಬುದನ್ನು ತಿಳಿದುಕೊಳ್ಳಬೇಕು. ಏಕೆಂದರೆ ಈಗ ಕನ್ನಡದಲ್ಲಿ ಬಳಕೆಯಲ್ಲಿರುವ ಎಷ್ಟೋ ರಚನೆಗಳು ಒಮ್ಮೆ ಒಂದಕ್ಕಿಂತ ಹೆಚ್ಚು ತುಂಡುಗಳಿಂದ ಕಟ್ಟಿದವಾದರೂ ಈಗ ಅವುಗಳನ್ನು ಬೇರೆ ಮಾಡಿ ತೋರಿಸಲು ಆಗುವುದಿಲ್ಲ ಎಂಬಂತಾಗಿಬಿಟ್ಟಿರುತ್ತದೆ. ಎತ್ತುಗೆಗಾಗಿ **ಇಪ್ಪತ್ತು** ಎಂಬ ರಚನೆಯನ್ನು ನೋಡೋಣ. ಇದರಲ್ಲಿ **ಇರ್(=ಎರಡು)** ಮತ್ತು **ಪತ್ತು(=ಹತ್ತು)** ಎಂಬ ಎರಡು ತುಂಡುಗಳಿರುವುದು ದಿಟ. ಆದರೆ ಈಗ ಆ ರಚನೆಯನ್ನು ಹಾಗೆ ಒಡೆಯುವುದರಿಂದ ಬರುವ **ಇರ್** ಎಂಬುದನ್ನಾಗಲೀ **ಪತ್ತು** ಎಂಬುದನ್ನಾಗಲಿ ಬಳಸಿ ಹೊಸ ರಚನೆಗಳನ್ನು ಮಾಡಲು ಬರುವುದಿಲ್ಲ. ಹಾಗಿರುವಾಗ **ಇಪ್ಪತ್ತು** ಎಂಬ ರಚನೆಯನ್ನು ಅದರಲ್ಲಿ ತಿರುಳುಳ್ಳ ಚಿಕ್ಕ ತುಂಡುಗಳಿವೆ ಎಂಬುದರಿಂದಾಗಿಯೇ ಅದು ಒಂದು ಪದವಲ್ಲ ಎಂದು ಹೇಳಲು ಆಗುವುದೇ?

ಹಾಗಿದ್ದರೆ ಈ ಮೊದಲು ಪದವನ್ನು ಬಣ್ಣಿಸಲು ನಾವು ಹೇಳಿದ ಕಟ್ಟನ್ನು ಮರಳಿ ಹೀಗೆ ಹೇಳಿದರೆ ಸರಿಹೋಗುವುದೇ ಎಂದು ನೋಡೋಣ.

1. ಪದವೆಂದರೆ ಉಲಿಗಳ ಗುಂಪು
2. ಆ ಉಲಿಗಳ ಗುಂಪಿಗೆ ಕನ್ನಡದಲ್ಲಿ ತಿರುಳಿರಬೇಕು.
3. ಆ ರಚನೆಯನ್ನು ಚಿಕ್ಕ ಚಿಕ್ಕ ತುಂಡುಗಳಾಗಿ ಒಡೆಯಲು ಆಗಬಾರದು

4. ಹಾಗೆ ಆ ರಚನೆಯನ್ನು ಚಿಕ್ಕ ಚಿಕ್ಕ ತುಂಡುಗಳನ್ನಾಗಿ ಒಡೆಯಲು ಆಗುತ್ತದೆ ಎಂದಾದರೆ ಆ ತುಂಡುಗಳಲ್ಲಿ ಒಂದೊಂದಕ್ಕೂ ಬಿಡಿಬಿಡಿಯಾದ ತಿರುಳಿದ್ದರೆ ಆ ರಚನೆ ಒಂದು ಪದವಲ್ಲ.

5. ಒಂದುವೇಳೆ ಆ ರಚನೆಯನ್ನು ಒಡೆದಾಗ ಸಿಕ್ಕ ತುಂಡುಗಳಲ್ಲಿ ಯಾವುದಾದರೂ ಒಂದಕ್ಕೆ ತಿರುಳಿದ್ದರೂ ಉಳಿದವಕ್ಕೆ ತಿರುಳಿರದಿದ್ದರೂ ಅದನ್ನು ಪದವೆಂದೇ ಕರೆಯಬೇಕು.

6. ಒಡೆಯಲು ಬಾರದ ಮತ್ತು ಒಡೆದಾಗ ತಿರುಳಿರುವ ತುಂಡಾಗಿರುವ ರಚನೆಗೆ ಪದವೆಂದು ಕರೆದರೂ ಅದನ್ನು ದಿಂಡು ಎಂಬ ಇನ್ನೊಂದು ಹೆಸರಿನಿಂದ ಕರೆಯಬಹುದಾಗಿದೆ.

ದಿಂಡು ಎಂಬುದನ್ನು ನೋಡೋಣ. ದಿಟವಾಗಿ ದಿಂಡು ಎಂಬುದೂ ಒಂದು ಪದವೇ ಸರಿ. ಆದರೆ ಅದು ಬಿಡಿಯಾದ ತಿರುಳಿರದ ಇನ್ನೊಂದು ಉಲಿಗುಂಪಿನೊಡನೆ ಸೇರಿ ರಚನೆಯನ್ನು ಕಟ್ಟಿಕೊಳ್ಳಬಲ್ಲುದು. **ತಲೆ** ಎಂಬ ಪದ **ಅಲ್ಲಿ** ಎಂಬ ತಿರುಳಿರದ ಉಲಿಗುಂಪಿನೊಡನೆ ಸೇರಿ **ತಲೆಯಲ್ಲಿ** ಎಂದಾಗುತ್ತದೆ. ಆಗ **ತಲೆಯಲ್ಲಿ** ಎಂಬುದನ್ನೂ ಪದವೆಂದೇ ಕರೆಯಬೇಕು. ಆಗ **ತಲೆಯಲ್ಲಿ** ಎಂಬ ಪದದಲ್ಲಿ **ತಲೆ** ಎಂಬುದ ದಿಂಡು ಎಂದಾಗುತ್ತದೆ. ಅಂದರೆ ದಿಂಡು ಎಂದರೆ ಅದು ಒಂದು ಬಿಡಿಯಾದ ಪದವೂ ಹೌದು; ಇನ್ನೊಂದು ಪದದ ಜೊತೆ ಸೇರಿಕೊಂಡ ತುಂಡೂ ಹೌದು. ಇನ್ನಷ್ಟು ಎತ್ತುಗೆಗಳನ್ನು ನೋಡೋಣ. **ಮನೇಲಿ, ಊರಿಂದ, ಕೋತೀನಾ, ಕಿಟಕೀಲಿ** ಮುಂತಾದ ರಚನೆಗಳಲ್ಲಿ ಒಂದು ಪದ ಮತ್ತು ಇನ್ನೊಂದು ಬಿಡಿ ತಿರುಳು ಇಲ್ಲದ ಉಲಿಗುಂಪು ಇವೆ. (**ಮನೆ/ಲಿ, ಊರು/ಇಂದ, ಕೋತಿ/ನಾ ಮತ್ತು ಕಿಟಕಿ/ಲಿ**) ಇವೆಲ್ಲವೂ ಪದಗಳೇ.ಜೊತೆಗೆ ಇವುಗಳಲ್ಲಿರುವ ದಿಂಡುಗಳು (ಅಂದರೆ ಮೊದಲಿಗೆ ಬರುವ **ಮನೆ,ಕೋತಿ,ಕಿಟಕಿ**) ಇವೂ ಕೂಡ ಪದಗಳೇ.

ಕೊಡ್ತೇನೆ,ಕುಡೀತೇನೆ,ಓಡ್ದೆ ಮುಂತಾದ ರಚನೆಗಳನ್ನು ಪದಗಳೆಂದು ಹೇಳಬಹುದೆ? ಇವುಗಳಲ್ಲೂ ಮೊದಲಲ್ಲಿ ದಿಂಡುಗಳಿವೆ. **ಕೊಡು, ಕುಡಿ** ಮತ್ತು **ಓಡು** ಎಂಬುವೇ ಆ ದಿಂಡುಗಳು. ಅವುಗಳ ಜೊತೆಗೆ ಬೇರೆ ಕೆಲವು ಉಲಿಗುಂಪುಗಳು ಬಂದು ಸೇರಿವೆ. ಆ ಉಲಿಗುಂಪುಗಳಿಗೆ ಗೊತ್ತಾದ ತಿರುಳಿಲ್ಲ. ಮೇಲೆ ಹೇಳಿದ ಮಾತನ್ನು ಗಮನಿಸಿದರೆ ಹೀಗೆ ಉಲಿಗುಂಪುಗಳು ಸೇರಿದ ದಿಂಡುಗಳನ್ನೂ ಪದಗಳೆಂದೇ ಕರೆಯಬೇಕು. ಆದರೆ ಇಲ್ಲಿ ಹಾಗೆ ಮಾಡಲು ಆಗುವುದಿಲ್ಲ. ಏಕೆ ಎನ್ನುವುದನ್ನು ನೋಡೋಣ.

ಕಿಟಕೀಲಿ ಮತ್ತು **ಕೊಡ್ತೇನೆ** ಎಂಬ ರಚನೆಗಳನ್ನು ಒಂದೇ ನೆಲೆಯಲ್ಲಿ ನೋಡಲಾಗುವುದಿಲ್ಲ. **ಕಿಟಕಿ** ಮತ್ತು **ಕೊಡು** ಎಂಬ ದಿಂಡುಗಳಿಗೆ ಬಂದು ಸೇರಿರುವ (ಗೊತ್ತಾದ ತಿರುಳಿರದ) **ಲಿ** ಮತ್ತು **ತೇನೆ** ಎಂಬ ಉಲಿಗುಂಪುಗಳು ಆಯಾ ರಚನೆಯಲ್ಲಿ ಮಾಡುತ್ತಿರುವ ಕೆಲಸ ಬೇರೆ ಬೇರೆ ಆಗಿದೆ. **ಕಿಟಕೀಲಿ** ಎಂಬ ರಚನೆಯಲ್ಲಿ **ಲಿ** ಎಂಬುದು ಕಿಟಕಿಯೊಡನೆ ನಂಟನ್ನು ಉಳಿಸಿಕೊಂಡಿದೆ. ಒಂದು ಸೊಲ್ಲಿನಲ್ಲಿ ಅದರ ಬಳಕೆಯನ್ನು ನೋಡಿ.

ಆ ಕಿಟಕೀಲಿ ಹಕ್ಕಿ ಕುಳಿತಿದೆ

ಈ ಸೊಲ್ಲಿಗೆ ಹಕ್ಕಿ ಕುಳಿತಿರುವುದು ಕಿಟಕಿಯಲ್ಲಿ ಎಂಬ ತಿರುಳಿದೆ. ಅಂದರೆ ಲಿ ಎಂಬ ಉಲಿಗುಂಪು ಕಿಟಕಿ ಮತ್ತು ಹಕ್ಕಿಗಳ ನಡುವೆ ಇರುವ ನಂಟನ್ನು ಹೇಳುತ್ತಿದೆ. ಎಲ್ಲಕ್ಕಿಂತ ಹೆಚ್ಚಾಗಿ ಅದು ಕಿಟಕಿ ಪದದೊಡನೆ ತನ್ನ ನಂಟನ್ನು ಉಳಿಸಿಕೊಂಡಿದೆ. ಆದರೆ ಇದೇ ಮಾತನ್ನು **ಕೊಡ್ತೇನೆ** ಎಂಬ ರಚನೆಯ ಬಗೆಗೆ ಹೇಳಲಾಗುವುದಿಲ್ಲ ಒಂದು ಬಳಕೆಯನ್ನು ನೋಡಿ

ಆ ಪುಸ್ತಕ ನಾಳೆ ಕೊಡ್ತೇನೆ.

ಇಲ್ಲಿ **ಕೊಡು** ಎಂಬ ದಿಂಡಿಗೂ ಅದಕ್ಕೆ ಬಂದು ಸೇರಿರುವ **ತೇನೆ** ಎಂಬ ಉಲಿಗುಂಪಿಗೂ ನೇರವಾದ ಯಾವ ನಂಟೂ ಇಲ್ಲ ಸೊಲ್ಲಿನಲ್ಲಿ ಇರುವ ಯಾವುದೋ ಬೇರೆ ಒಂದು ಕೆಲಸವನ್ನು ಆ ಉಲಿಗುಂಪು (**ತೇನೆ**) ಎಂಬುದು ಮಾಡುತ್ತಿದೆ. ಪುಸ್ತಕವನ್ನು ಕೊಡುವುದು ಯಾವಾಗ ಎಂಬುದನ್ನು ಮತ್ತು ಕೊಡುವವರು ಯಾರು ಎಂಬುದನ್ನು ಈ ಉಲಿಗುಂಪು ಹೇಳುತ್ತಿದೆ. ಹಾಗಾಗಿ **ತೇನೆ** ಎಂಬುದಕ್ಕೆ ಸೊಲ್ಲಿನ ಹಂತದ ಕೆಲಸ ಇದ್ದಂತಿದೆ. ಹಾಗಾಗಿ ಅದು ಪದವನ್ನು ಕಟ್ಟುವಲ್ಲಿ ನೇರವಾಗಿ ಪಾಲ್ಗೊಳ್ಳಲಾರದು. ಆದ್ದರಿಂದ **ಕೊಡ್ತೇನೆ** ಎಂಬುದನ್ನು ಪದವೆಂದು ಕರೆಯುವುದು ಸರಿಯಾಗಲಾರದು. ಅದು ಸೊಲ್ಲಿಗಿಂತ ಚಿಕ್ಕದಾದ ಆದರೆ ಪದಕ್ಕಿಂತ ದೊಡ್ಡದಾದ ರಚನೆ ಎಂದು ಮಾತ್ರ ಹೇಳಬೇಕಾಗುತ್ತದೆ. ಪದ ಅಂದರೆ ಯಾವುದು ಮತ್ತು ಪದಕ್ಕಿಂತ ದೊಡ್ಡ ರಚನೆ ಯಾವುದು ಎಂಬುದು ಒಂದೊಂದು ನುಡಿಗೂ ಬೇರೆ ಬೇರೆ ಆಗುತ್ತದೆ. ಕನ್ನಡದ ಮಟ್ಟಿಗೆ ಈ ಬಣ್ಣನೆ ಸರಿಯೆಂದೇ ತೋರುತ್ತದೆ.

ಈಗ ಪದಗಳಿಗೂ ಉಲಿಕಂತೆಗಳಿಗೂ ಇರುವ ನಂಟನ್ನು ನೋಡೋಣ. ಪದಗಳಲ್ಲಿ ಉಲಿಕಂತೆಗಳು ಜೋಡಣೆಗೊಂಡಿರುತ್ತವೆ. ಕನ್ನಡ ಪದಗಳನ್ನು ಕಟ್ಟುವಾಗ ಉಲಿಕಂತೆಗಳು ಹೇಗೆ ಜೋಡಣೆಗೊಳ್ಳುತ್ತವೆ ಎಂಬುದನ್ನು ಇನ್ನೂವರೆಗೂ ಹುಡುಕಿ ನೋಡಿಲ್ಲ. ಹೆಚ್ಚೆಂದರೆ ಪದದ ಮೊದಲಿನ ಉಲಿಕಂತೆಯಲ್ಲಿ ಗಿಡ್ಡ ತೆರೆದ ಉಲಿಯಿದ್ದರೆ ಎರಡನೆಯ ಉಲಿಕಂತೆಯಲ್ಲಿ ಉದ್ದ ತೆರೆದ ಉಲಿ ಇರಲಾರದು ಎಂಬ ಕಟ್ಟನ್ನು ಹುಡುಕಿರಬಹುದು. ಒಂದು ವೇಳೆ ಅಂತಹ ಪದಗಳು ಕನ್ನಡದಲ್ಲಿ ಇದ್ದರೆ (ಇದ್ದರೆ ಏನು;ಇವೆ) ಅವೆಲ್ಲವೂ ಬೇರೊಂದು ನುಡಿಯಿಂದ ಕನ್ನಡಕ್ಕೆ ಬಂದು ಸೇರಿರುವ ಪದಗಳಾಗಿರುತ್ತವೆ. ಇಲ್ಲವೇ ಕನ್ನಡದ ಇಂತಹ ಪದಗಳಲ್ಲಿ ಕೆಲವು ಅಚ್ಚರಿಯನ್ನು ಇಲ್ಲವೇ ಎಚ್ಚರವನ್ನು ಹೇಳುವ ಪದಗಳಾಗಿರುತ್ತವೆ (**ಅಹಾ, ಇಗೋ,**) ಆದರೆ ಇನ್ನೂ ಹೆಚ್ಚಿನ ಮಾಹಿತಿಗಳು ನಮಗೆ ಬೇಕಾಗಿದೆ.

ಒಂದು ಪದವನ್ನು ಹೇಗೆ ನುಡಿಯುತ್ತೇವೆ ಎನ್ನುವುದನ್ನು ನೋಡಿ ಬಳಿಕ ಆ ಪದದ ಉಲಿಕಂತೆಗಳ ಜೋಡಣೆಯನ್ನು ಅರಿಯುವುದು ಸರಿಯಾದ ದಾರಿ. ಬರವಣಿಗೆಯಲ್ಲಿ **ಕಿಟಕಿಯಲ್ಲಿ** ಎಂದು ಇರುವ ರಚನೆಯನ್ನು **ಕಿಟಕೀಲಿ, ಕಿಟ್ಕೀಲಿ** ಎಂದು ಎರಡು ಬಗೆಯಲ್ಲಿ ನುಡಿಯುವುದುಂಟು. ಮೊದಲ ಪದದಲ್ಲಿ ನಾಲ್ಕು ಉಲಿಕಂತೆಗಳಿದ್ದರೆ (**ಕಿ,ಟ,ಕೀ,ಲಿ**) ಎರಡನೆಯ ಪದದಲ್ಲಿ ಮೂರು ಉಲಿಕಂತೆಗಳಿವೆ

(**ಕಿಟ್,ಕೀ, ಲಿ**). ಈ ಬದಲಾವಣೆಯಿಂದ ಏನಾಗಿದೆ ನೋಡೋಣ. **ಕಿಟಕೀಲಿ** ಎಂಬ ಪದದ ಎರಡನೆಯ ಉಲಿಕಂತೆಯ ತೆರೆದ ಉಲಿ ಬಿದ್ದು ಹೋಗಿ ಆ ಉಲಿಕಂತೆಯ ಏರಿನಲ್ಲಿದ್ದ ತಡೆಯುಲಿ (ಟ್) ಈಗ ಮೊದಲನೆಯ ಉಲಿಕಂತೆಯ ಇಳಿಯಾಗಿ ಬದಲಾಗಿದೆ.

CV/CV/CVV/CV——>CVC/CV/CV

ಎರಡು ಉಲಿಕಂತೆಗಳು ಪದದಲ್ಲಿ ಜೊತೆಯಾಗಿ ಬಂದಾಗ ಹೀಗೆ ತಡೆಯುಲಿಗಳು ಒಂದು ಉಲಿಕಂತೆಯ ಏರಿನಿಂದ ಇನ್ನೊಂದು ಉಲಿಕಂತೆಯ ಇಳಿಗೆ ಬದಲಾಗುವುದು ಏಕೆ? ಇಲ್ಲವೇ ಈ ಬಗೆಯ ಬದಲಾವಣೆ ಎಲ್ಲ ಪದಗಳಲ್ಲೂ ನಡೆಯುವುದೇ? ಇಲ್ಲವೆಂದು ಈ ಮುಂದಿನ ಎತ್ತುಗೆಗಳನ್ನು ಕಂಡಾಗ ಗೊತ್ತಾಗುತ್ತದೆ. **ದಾರೀಲಿ, ತಲೇಲಿ, ಹೊಟ್ಟೇಲಿ, ಅಂಗೀಲಿ** ಮುಂತಾದ ಪದಗಳನ್ನು ನೋಡಿದರೆ ಅವುಗಳ ಮೊದಲ ಮತ್ತು ಎರಡನೆಯ ಉಲಿಕಂತೆಗಳ ನಡುವೆ ನಾವು **ಕಿಟಕೀಲಿ** ಎಂಬ ಪದದಲ್ಲಿ ಕಂಡ ಬದಲಾವಣೆಗಳು ನಡೆದಿಲ್ಲ ಎನ್ನುವುದು ಗೊತ್ತಾಗುತ್ತದೆ. ಅಂದರೆ ಎರಡನೆಯ ಉಲಿಕಂತೆಯ ನಡುವಿನ ತೆರೆದ ಉಲಿಯನ್ನು ಬಿಟ್ಟು ನುಡಿಯುವುದು ಈ ಪದಗಳಲ್ಲಿ ಕಾಣುವುದಿಲ್ಲ.

ಈ ಬದಲಾದ ಬಗೆಗೆ ಆಯಾ ಪದಗಳ ಅದರಲ್ಲೂ ಆಯಾ ಪದಗಳ ದಿಂಡುಗಳ ಉಲಿಕಂತೆಗಳ ರಚನೆಯನ್ನು ಅರಿಯ ಬೇಕಾಗುತ್ತದೆ. **ಕಿಟಕಿ** ಎಂಬುದು ಮೂರು ಉಲಿಕಂತೆಗಳ ಪದ. ಆದರೆ **ದಾರಿ,ಹೊಟ್ಟೆ** ಮತ್ತು **ಅಂಗಿ** ಎಂಬವು ಎರಡು ಉಲಿಕಂತೆಗಳ ಪದಗಳಾಗಿವೆ. **ಕಿಟಕಿ** ಪದವನ್ನು ನುಡಿಯುವ ಬಗೆಯನ್ನು ಗುರುತಿಸಿದರೆ ಅದರಲ್ಲೂ ಎರಡೇ ಉಲಿಕಂತೆಗಳಿವೆ ಎನ್ನಬೇಕು: **ಕಿಟ್ಕಿ. ಸನ್ಕೆ,ಚಟ್ಣಿ, ತಪ್ಲೆ** ಮುಂತಾದವು ಇಂತಹ ಪದಗಳು. ಇವುಗಳ ಬರಹ ರೂಪ ಮತ್ತು ಆಡು ರೂಪಗಳನ್ನು ನೋಡಿದರೆ ಬರಹ ರೂಪದಲ್ಲಿ ಮೂರು ಉಲಿಕಂತೆಗಳಿದ್ದರೆ ಆಡು ರೂಪದಲ್ಲಿ ಎರಡು ಉಲಿಕಂತೆಗಳಿರುವುದು ಗೊತ್ತಾಗುತ್ತದೆ. (ಕನ್ನಡದ ಒಳನುಡಿಗಳಲ್ಲಿ ಆಡು ರೂಪಗಳು ಬದಲಾಗುತ್ತವೆ ಎನ್ನುವುದನ್ನು ಲೆಕ್ಕಕ್ಕೆ ಹಿಡಿದೇ ಈ ಮಾತು ಹೇಳುತ್ತಿದ್ದೇನೆ.) ಈ ಪದಗಳ ಮೊದಲ ಉಲಿಕಂತೆಯು ಮುಚ್ಚಿದ ಉಲಿಕಂತೆಯಾಗಿದೆ. ಮತ್ತು ಅದರ ಇಳಿಯಲ್ಲಿ ಒಂದು ತಡೆಯುಲಿ ಇದೆ. (**ಕಿಟ್/ಕಿ, ಸನ್/ಕೆ, ಚಟ್/ಣಿ, ತಪ್/ಲೆ**) ಅಂದರೆ ಎರಡು ಉಲಿಕಂತೆಗಳಿರುವ ಯಾವುದೇ ಪದವಿರಲಿ ಅದಕ್ಕೆ ಸೇರುವ ಹೆಚ್ಚಿನ ಉಲಿಗುಂಪುಗಳು (ಇಲ್ಲವೇ ಪತ್ತುಗೆಗಳು) ಉಲಿಕಂತೆಗಳ ಜೋಡಣೆಯಲ್ಲಿ ಯಾವುದೇ ಬದಲಾವಣೆಯನ್ನು ಉಂಟು ಮಾಡುವುದಿಲ್ಲ ಎಂದು ತಿಳಿಯುವುದೇ ಸರಿ.

ಇನ್ನು ಒಂದೇ ಉಲಿಕಂತೆಯನ್ನು ಹೊಂದಿರುವ ಪದಗಳ ಮಾತಿಗೆ ಬರೋಣ. ಇಂತಹ ಪದಗಳು ತೆರೆದ ಉಲಿಕಂತೆಗಳನ್ನು ಹೊಂದಿರುವ ಎತ್ತುಗೆಗಳು ಕನ್ನಡದಲ್ಲಿ ತುಂಬಾ ಕಡಿಮೆ ಎನ್ನುವುದನ್ನು ಈ ಮೊದಲೇ ನೋಡಿದ್ದೇವೆ. (**ಆ,ಈ, ತಾ, ಬಾ** ಇಂತಹ ಕೆಲವು ತೆರೆದ ಉಲಿಕಂತೆಗಳು ಇವೆ) ಇವುಗಳನ್ನು ಬಿಟ್ಟರೆ ಒಂದು ಉಲಿಕಂತೆಯ ಪದಗಳು ಮುಚ್ಚಿದ ಉಲಿಕಂತೆಯೊಂದನ್ನು ಹೊಂದಿರುತ್ತವೆ. **ಕಾಲ್, ಕಣ್ಣ್, ಬಿಲ್ಲ್, ಕಲ್ಲ್, ಹಲ್ಲ್, ಕೋಲ್, ಊರ್, ಕಾಳ್, ಹಾಲ್** ಮುಂತಾದವು ಇಂತಹ ಪದಗಳು **ಕಿಟಕೀಲಿ,ದಾರೀಲಿ** ಮುಂತಾದ ರಚನೆಗಳಲ್ಲಿ ದಿಂಡಿಗೆ ಬಂದು ಸೇರಿದ ಹೆಚ್ಚಿನ

ಉಲಿಗುಂಪನ್ನು ಈ ಪದಗಳಿಗೆ ಸೇರಿಸಿದಾಗ ಏನಾಗುತ್ತದೆ? **ಕಾಲಲ್ಲಿ,ಕಣ್ಣಲ್ಲಿ, ಹಲ್ಲಲ್ಲಿ, ಬಿಲ್ಲಲ್ಲಿ, ಕಲ್ಲಲ್ಲಿ, ಕೋಲಲ್ಲಿ, ಕಾಲಲ್ಲಿ, ಹಾಲಲ್ಲಿ** ಎಂಬ ರೂಪಗಳು ಸಿಗುತ್ತವೆ. ಬರಿಯ **ಲಿ** ಎಂದು ಸೇರಿಸಲು ಬರುವುದಿಲ್ಲ. (**ಕಾಲಲಿ, ನೀರಲಿ, ಕಣ್ಣಲಿ** ಮುಂತಾದ ರೂಪಗಳು ಹಾಡುಗಳಲ್ಲಿ ಕೇಳುವುದುಂಟು. ಇವು ನಡುಗನ್ನಡದ ಸವಕಲು ರೂಪಗಳು.ಅಲ್ಲದೆ ದಿಂಡಿಗೆ ಬಂದು ಸೇರಿರುವ ಉಲಿಗುಂಪು **ಲಿ** ಬದಲಿಗೆ **ಅಲಿ** ಆಗಿದೆ ಎನ್ನುವುದನ್ನು ಮರೆಯಬಾರದು. ನಡುಗನ್ನಡದ ಉಲಿಕಂತೆಗಳ ಕಟ್ಟುಗಳ ಆಯ್ಕೆ ಕೊಂಚ ಬೇರೆಯಾಗಿತ್ತು ಎಂಬುದನ್ನು ಈ ಹಿಂದೆ ನೋಡಿದ್ದೇವೆ)

ಒಂದೇ ಉಲಿಕಂತೆಯ ಕನ್ನಡ ಪದಗಳಲ್ಲಿ ತೆರೆದ ಉಲಿಕಂತೆಯ ಮಾದರಿಯಲ್ಲಿರುವ **ಆ, ಈ ,ತಾ, ಬಾ** ಮುಂತಾದವು ಕೂಡ **ಅದು, ಇದು, ತರ್, ಬನ್** ಮುಂತಾದ ಮುಚ್ಚಿದ ಉಲಿಕಂತೆಯನ್ನುಳ್ಳ ಪದಗಳ ಚಹರೆಯನ್ನು ಪಡೆದುಕೊಳ್ಳುವುದನ್ನು ನೋಡಬಹುದು. **ಅದು , ಇದು** ಎಂಬ ಪದಗಳಲ್ಲಿ ಎರಡು ಉಲಿಕಂತೆಗಳಿರುವಂತೆ ತೋರಿದರೂ ಒಳ ಪದರದಲ್ಲಿ ಅವು **ಅದ್** ಮತ್ತು **ಇದ್** ಆಗಿರುತ್ತವೆ. ಅಂದರೆ ಕನ್ನಡದಲ್ಲಿರುವ ಒಂದು ಉಲಿಕಂತೆಯ ಪದಗಳೆಲ್ಲ ಒಳ ಪದರದಲ್ಲಿ ಮುಚ್ಚಿದ ಉಲಿಕಂತೆಗಳೇ ಆಗಿರುತ್ತವೆ ಎಂಬ ಕಟ್ಟನ್ನು ಹೇಳಬಹುದೆಂದು ತೋರುತ್ತದೆ.

ಒಂದೇ ಉಲಿಕಂತೆಯ ಪದಗಳು ಮುಚ್ಚಿದ ಉಲಿಕಂತೆಗಳೇ ಆಗಿರುವುದರಿಂದ ಅವುಗಳ ಇಳಿಯಲ್ಲಿ ತಡೆಯುಲಿಗಳು ಇರಲೇ ಬೇಕು. ಇಲ್ಲಿ ನಮಗೆ ಎರಡು ಬಗೆಯ ಉಲಿಕಂತೆಗಳು ಸಿಗುತ್ತವೆ. ಇಳಿಯಲ್ಲಿ ಒಂದೇ ತಡೆಯುಲಿಯನ್ನು ಹೊಂದಿರುವ ಉಲಿಕಂತೆಗಳು ಒಂದು ಬಗೆಯವು; ಇಳಿಯಲ್ಲಿ ಎರಡು ತಡೆಯುಲಿಗಳನ್ನು ಹೊಂದಿರುವ ಉಲಿಕಂತೆಗಳು ಎರಡನೆಯ ಬಗೆಯುವು.

1.(C)VC

2.(C)VCC

(C) ಎಂದು ಬರೆದರೆ ಆ ಉಲಿಕಂತೆಯ ಏರಿನಲ್ಲಿ ತಡೆಯುಲಿ ಬರಬಹುದು ಇಲ್ಲವೇ ಬರದೆಯೂ ಇರಬಹುದು ಎಂದು ತಿಳಿಯಬೇಕು

ಮೊದಲ ಬಗೆಯ ಉಲಿಕಂತೆಗಳಿಗೆ **ಕಾಲ್, ಕೇಳ್, ತೋರ್, ಬೀರ್** ಮುಂತಾದವು ಎತ್ತುಗೆಗಳು. ಎರಡನೆಯ ಬಗೆಯ ಉಲಿಕಂತೆಗಳಿಗೆ **ಕಲ್ಲ್, ಕಣ್ಣ್, ಕಪ್ಪ್, ತಿನ್ನ್, ಅಪ್ಪ್, ನತ್ತ್** ಮುಂತಾದವು ಎತ್ತುಗೆಗಳು. ಮೊದಲ ಬಗೆಯ ಉಲಿಕಂತೆಗಳಲ್ಲಿ ನಡುವಿನ ತೆರೆದ ಉಲಿಯು ಉದ್ದವಾಗಿರುವುದನ್ನು ನೋಡುತ್ತೇವೆ. ಹಾಗೆಯೇ ಎರಡನೆಯ ಬಗೆಯ ಉಲಿಕಂತೆಗಳಲ್ಲಿ ನಡುವಿನ ತೆರೆದ ಉಲಿಯು ಗಿಡ್ಡವೇ ಆಗಿದೆ.

ಇದಲ್ಲದೆ ಇನ್ನೂ ಒಂದು ಮಾತನ್ನು ಇಲ್ಲಿಯೇ ಹೇಳಬೇಕಿದೆ. ಇಳಿಯಲ್ಲಿ ಎರಡು ತಡೆಯುಲಿಗಳು ಬಂದಾಗ ಅವೆರಡೂ ಒಂದೇ ತಡೆಯುಲಿ ಎರಡು ಬಾರಿ ಬಂದಿರುವ ಉಲಿಕಂತೆಗಳೇ ಆಗಿವೆ. ಮತ್ತೆ ಕೆಲವು ಎತ್ತುಗೆಗಳನ್ನು ನೋಡಿದರೆ ಅವು ಹೀಗೆ ಕಾಣುತ್ತವೆ: **ಕಣ್ಡ್, ತಿನ್ದ್, ಕೊನ್ದ್, ತುಮ್ಬ್, ಗಣ್ಡ್** ಮುಂತಾದವು ಕಾಣಸಿಗುತ್ತವೆ.

ಅಂದರೆ ಇವುಗಳಲ್ಲಿ ಎರಡು ಬೇರೆ ತಡೆಯುಲಿಗಳು ಇಳಿಯಲ್ಲಿ ಬಂದಿದ್ದರೂ ಅವೆರಡರಲ್ಲಿ ಮೊದಲನೆಯದು ಮೂಗುಲಿಯೇ ಆಗಿದೆ ಮತ್ತು ಆ ಮೂಗುಲಿಯು ಅದರ ಬಳಿಕ ಬರುವ ತಡೆಯುಲಿಯ ನುಡಿ ಚಹರೆಗಳನ್ನೇ ಪಡೆದಿರುವುದನ್ನೂ ನೋಡುತ್ತೇವೆ.

ಇದೆಲ್ಲವನ್ನೂ ಸೇರಿಸಿ ಒಂದೇ ಉಲಿಕಂತೆಯುಳ್ಳ ಕನ್ನಡದ ಪದಗಳ ರಚನೆಯ ಕಟ್ಟನ್ನು ಈ ಕೆಳಗೆ ಹೇಳಿದಂತೆ ಬಣ್ಣಿಸಬಹುದು.

ಪದದಲ್ಲಿ ಒಂದೇ ಉಲಿಕಂತೆಯಿದ್ದರೆ ಅದರ ನಡುವಿನಲ್ಲಿ ಗಿಡ್ಡ ಇಲ್ಲವೇ ಉದ್ದ ತೆರೆದ ಉಲಿ ಇರಬಹುದು.

ಉಲಿಕಂತೆಯಲ್ಲಿ ಉದ್ದ ತೆರೆದ ಉಲಿ ಇದ್ದರೆ ಆಗ ಇಳಿಯಲ್ಲಿ ಒಂದೇ ತಡೆಯುಲಿ ಇರಬೇಕು.

ಉಲಿಕಂತೆಯಲ್ಲಿಗಿಡ್ಡ ತೆರೆದ ಉಲಿ ಇದ್ದರೆ ಇಳಿಯಲ್ಲಿ ಎರಡು ತಡೆಯುಲಿಗಳಿರುತ್ತವೆ. ಆ ಎರಡು ತಡೆಯುಲಿಗಳಲ್ಲಿ ಒಂದೇ ತಡೆಯುಲಿ ಎರಡು ಬಾರಿ ಬಂದಿರಬಹುದು ಇಲ್ಲವೇ ಎರಡರಲ್ಲಿ ಮೊದಲನೆಯದು ಮೂಗುಲಿಯಾಗಿದ್ದರೆ ಎರಡನೆಯ ತಡೆಯುಲಿ ಆ ಮೂಗುಲಿಯ ಚಹರೆಯನ್ನೇ ಉಳ್ಳ ತಡೆಯುಲಿ ಆಗಿರುತ್ತದೆ.

ಕನ್ನಡ ಪದಗಳಲ್ಲಿ ಒಂದು ಉಲಿಕಂತೆಯನ್ನು ಮಾತ್ರ ಹೊಂದಿರುವಂತಹವು ಮೇಲೆ ಹೇಳಿದ ಕಟ್ಟನ್ನು ಪಾಲಿಸುತ್ತವೆ. ಹಾಗಾಗಿ ಇನ್ನೊಂದು ನುಡಿಯಿಂದ ಎರವಲು ಪಡೆದ ಒಂದೇ ಉಲಿಕಂತೆಯ ಪದಗಳನ್ನು ಈ ಕಟ್ಟಿಗೆ ತಕ್ಕಂತೆ ಬದಲಿಸಿಕೊಳ್ಳುವುದು ಕನ್ನಡದ ಜಾಯಮಾನವಾಗಿದೆ. ಈಗಾಗಲೇ ನಾವು ಗಮನಿಸಿರುವಂತೆ ಇಂಗ್ಲಿಶ್ ನುಡಿಯಿಂದ ಕನ್ನಡಕ್ಕೆ ಹೆಚ್ಚು ಹೆಚ್ಚು ಒಂದೇ ಉಲಿಕಂತೆಯ ಪದಗಳು ಬಂದು ಸೇರಿಕೊಂಡಿವೆ. ಅವುಗಳ ರಚನೆಯನ್ನು ಈ ಕೆಳಗೆ ಹೇಳಿರುವಂತೆ ಬಣ್ಣಿಸಬಹುದು

(C)(C)(C)V(C)(C)(C)

ಇಂಗ್ಲಿಶ್ ನುಡಿಯ ಒಂದೇ ಉಲಿಕಂತೆಯ ಪದಗಳ ಏರಿನಲ್ಲಿ ಒಂದಕ್ಕಿಂತ ಹೆಚ್ಚು ತಡೆಯುಲಿಗಳು ಬರಬಲ್ಲವು. ಅವು ಮೂರು ತಡೆಯುಲಿಗಳೂ ಅಗಿರುವುದುಂಟು. ಎತ್ತುಗೆಗಾಗಿ ಹೇಳುವುದಾದರೆ **ಸ್ಟ್ರೀಟ್ (ಸ್/ಟ್/ರ್/ಇ/ಟ್)** ಹಾಗೆಯೇ ಅಂತಹ ಪದಗಳ ಇಳಿಯಲ್ಲಿ ಒಂದಕ್ಕಿಂತ ಹೆಚ್ಚು ತಡೆಯುಲಿಗಳು ಬರುವುದುಂಟು . ಅಲ್ಲಿಯೂ ಅವು ಮೂರು ಅಗಿರುವ ಎತ್ತುಗೆಗಳಿವೆ. **ಬರ್ಸ್ಟ್** ಎಂಬ ಪದವನ್ನೇ ನೋಡಿ. ಅದರ ಇಳಿಯಲ್ಲಿ ಮೂರು ತಡೆಯುಲಿಗಳಿವೆ **(ಬ್/ಅ/ರ್/ಸ್/ಟ್)**. ಕನ್ನಡ ಆಡುನುಡಿಯಲ್ಲಿ ಇಂತಹ ಪದಗಳು ಪಡೆದುಕೊಳ್ಳುವ ಬದಲಾವಣೆಗಳನ್ನು ಬಣ್ಣಿಸಲು ಇಲ್ಲಿ ಆಗುವುದಿಲ್ಲ. ಕನ್ನಡಕ್ಕೆ ಬಂದು ಸೇರಿದ ಇಂಗ್ಲಿಶ್ ನುಡಿಯ ಒಂದೇ ಉಲಿಕಂತೆಯ ಹೆಚ್ಚಿನ ಪದಗಳು ಏರಿನಲ್ಲಿ ಒಂದು ತಡೆಯುಲಿಯುನ್ನು ಇಳಿಯುಲ್ಲಿ ಒಂದು ಇಲ್ಲವೇ ಎರಡು ತಡೆಯುಲಿಗಳನ್ನು ಹೊಂದಿರುತ್ತವೆ. ಇಂಗ್ಲಿಶ್ ಕನ್ನಡದಲ್ಲಿರುವಂತೆ ಗಿಡ್ಡ ಮತ್ತು ಉದ್ದ ತೆರೆದ ಉಲಿಗಳ ಸರಣಿಯನ್ನು ಹೊಂದಿಲ್ಲ. ಹಾಗಾಗಿ ಒಂದೇ ಉಲಿಕಂತೆಯ ಇಂಗ್ಲಿಶ್

ಪದಗಳ ಇಳಿಯಲ್ಲಿ ಒಂದೇ ತಡೆಯುಲಿ ಇದ್ದರೆ ಕನ್ನಡ ಉಲಿಕಂತೆಯ ಕಟ್ಟಿಗೆ ತಕ್ಕಂತೆ ಆ ಉಲಿಕಂತೆಯ ನಡುವಿನ ತೆರೆದ ಉಲಿಯನ್ನು ಉದ್ದದ ತೆರೆದ ಉಲಿಯಂತೆ ನಾವು ಬದಲಿಸಿಕೊಳ್ಳುತ್ತೇವೆ. **ಕಾರ್, ಬಾಲ್, ಟಾಕ್, ಪಾಟ್** ಮುಂತಾದವು ಇದಕ್ಕೆ ತಕ್ಕ ಎತ್ತುಗೆಗಳು. ಇಂಗ್ಲಿಶ್ ನುಡಿಯಲ್ಲಿ ಕೇಳಿಸದ ಉದ್ದದ ತೆರೆದ ಉಲಿಗಳು ಕನ್ನಡದಲ್ಲಿ ಆ ಪದಗಳನ್ನು ನುಡಿದಾಗ ಕೇಳಿಸುತ್ತವೆ.

ಕನ್ನಡ ಪದಗಳ ನಾದಪದರದ ಬಗೆಗೆ ಈಗಾಗಲೇ ತಿಳಿದಿದ್ದೇವೆ. ಆ ನಿಟ್ಟಿನಲ್ಲಿ ನೋಡಿದಾಗ **ಕಾಲ್** ಮತ್ತು **ಕಲ್ಲ್** ಎರಡೂ ಒಂದೇ ನಾದಪದರವನ್ನು ಹೊಂದಿವೆ. ಏಕೆಂದರೆ ಎರಡೂ ಎರಡು ಮಾತ್ರೆಗಳನ್ನು ಪಡೆದುಕೊಳ್ಳುತ್ತವೆ. ಈ ಮಾತನ್ನು ನೋಡಿದಾಗ ಒಂದೇ ಉಲಿಕಂತೆಯ ಪದಗಳಲ್ಲಿ ಉದ್ದದ ತೆರೆದ ಉಲಿಯನ್ನು ಹೊಂದಿರುವ ಪದಗಳಲ್ಲಿ ಒಂದೇ ತಡೆಯುಲಿ ಇರುವುದು ಕನ್ನಡದ ಒಂದು ಆಯ್ಕೆಯೇ ಹೊರತು ಎರಡು ತಡೆಯುಲಿಗಳು ಇಳಿಯಲ್ಲಿ ಬಂದರೆ ಅದರಿಂದ ಪದದ ನಾದಪದರಕ್ಕೆ ಯಾವ ತೊಂದರೆಯೂ ಆಗುವುದಿಲ್ಲ. ಉದ್ದದ ತೆರೆದ ಉಲಿ ಇರುವುದರಿಂದ ಪದಕ್ಕೆ ಎರಡು ಮಾತ್ರೆಗಳು ಒದಗುತ್ತವೆ. ಇಳಿಯಲ್ಲಿ ಒಂದು ತಡೆಯುಲಿ ಇದೆಯೋ ಎರಡು ಇವೆಯೋ ಎಂಬುದು ಆಗ ಲೆಕ್ಕಕ್ಕೆ ಬರುವುದಿಲ್ಲ. ಹಾಗಾಗಿ ಇಂಗ್ಲಿಶಿನಿಂದ ಬಂದ **ಲಾಸ್ಟ್, ಲೀಸ್ಟ್, ಬಾಕ್ಸ್, ಬೂಸ್ಟ್, ಪೇಸ್ಟ್** ಮುಂತಾದ ಪದಗಳು ಕನ್ನಡದಲ್ಲಿ ಯಾವ ಅಡಚಣೆಯನ್ನೂ ಎದುರಿಸುವುದಿಲ್ಲ.

ಎರಡು ಉಲಿಕಂತೆಗಳಿರುವ ಕನ್ನಡ ಪದಗಳ ರಚನೆ

ಈಗ ಎರಡು ಉಲಿಕಂತೆಗಳಿರುವ ಕನ್ನಡ ಪದಗಳ ರಚನೆಗೆ ಬರೋಣ. ಎರಡು ಉಲಿಕಂತೆಗಳು ಎನ್ನುವಾಗ ಒಳ ಪದರದಲ್ಲಿ ಎರಡು ಉಲಿಕಂತೆಗಳನ್ನು ಹೊಂದಿರುವ ಪದಗಳು ಎಂದು ತಿಳಿಯಬೇಕು. ಏಕೆಂದರೆ ಒಂದು ಉಲಿಕಂತೆಯನ್ನು ಒಳ ಪದರದಲ್ಲಿ ಹೊಂದಿರುವ ಕನ್ನಡ ಪದಗಳು ಬಿಡಿಯಾಗಿ ನುಡಿದಾಗ ಎರಡು ಉಲಿಕಂತೆಗಳಿರುವ ಪದಗಳಂತೆ ತೋರುತ್ತವೆ. **ಕಾಲು, ಕಣ್ಣು, ಹಲ್ಲು ,ಬಿಲ್ಲು** ಮುಂತಾದ ಪದಗಳನ್ನು ಎತ್ತುಗೆಗಾಗಿ ನೋಡಬಹುದು. ಹಾಗಾಗಿ ನಾವಿಲ್ಲಿ ಎರಡು ಉಲಿಕಂತೆಗಳಿರುವ ಪದಗಳು ಎಂದಾಗ ಒಳ ಪದರದಲ್ಲೇ ಎರಡು ಉಲಿಕಂತೆಗಳಿರುವ ಪದಗಳು ಎಂಬುದನ್ನು ನೋಡುತ್ತಿದ್ದೇವೆ. **ಕಿವಿ, ತಲೆ, ನೆಲ, ಬೀಗ,** ಇಲಿ ಮುಂತಾದವು ಇಂತಹ ಪದಗಳು.

ಇಂತಹ ಉಲಿಕಂತೆಗಳಲ್ಲಿ ಮೊದಲನೆಯ ಉಲಿಕಂತೆ ತೆರೆದ ಮಾದರಿಯದ್ದು ಎಂಬುದಾದರೆ ಆಗ ನಾಲ್ಕು ಬಗೆಗಳು ಇರಬಹುದು ತಾನೆ.

1. CV/CV

2. CVV/CV

3. CV/CVV

4. CVV/CVV

ಇವುಗಳಲ್ಲಿ ಪದದ ಮೊದಲಿನ ತಡೆಯುಲಿ ಇರಲೂ ಬಹುದು ಇಲ್ಲದೆಯೂ ಇರಬಹುದು. ಹಾಗಾಗಿ ಈ ನಾಲ್ಕು ಬಗೆಯ ಪದಗಳನ್ನು ಪಟ್ಟಿ ಮಾಡಬಹುದು. ಆದರೆ ಅದರಿಂದ ಪದಗಳ ರಚನೆಯನ್ನು ಅರಿಯಲು ಹೆಚ್ಚಿನ ನೆರವು ಸಿಗುವುದಿಲ್ಲ. ಹಾಗಾಗಿ ಅವುಗಳನ್ನು ಬೇರೆಯಾಗಿ ಇಲ್ಲಿ ಹೇಳಿಲ್ಲ.

ಒಂದನೆಯ ಮಾದರಿ ಪದಗಳು: **ಇಲಿ, ಕಿವಿ, ಮಗ, ಅಗೆ**

ಎರಡನೆಯ ಮಾದರಿಯ ಪದಗಳು: **ಆಗ, ಆಮೆ, ಆನೆ, ಊಟ, ಕೇರಿ, ಗೂಟ**

ಮೂರನೆಯ ಮಾದರಿಯ ಪದಗಳು : **ಕನ್ನಡದಲ್ಲಿ ಇಲ್ಲ**

ನಾಲ್ಕನೆಯ ಮಾದರಿಯ ಪದಗಳು : **ಕನ್ನಡದಲ್ಲಿ ಇಲ್ಲ.**

ಮೂರು ಮತ್ತು ನಾಲ್ಕನೆಯ ಮಾದರಿಯ ಕೆಲವು ಪದಗಳು ಅಚ್ಚರಿಯನ್ನು ಹೇಳುವಾಗ ಇಲ್ಲವೇ ಯಾರನ್ನಾದರೂ ಕರೆದು ಮಾತನಾಡುವಾಗ ಕಾಣಿಸುವುದುಂಟು. ಎತ್ತುಗೆಗಾಗಿ ಮೂರನೆಯ ಮಾದರಿಗೆ **ಎಲಾ, ಅಹಾ** ಎಂಬ ಪದಗಳನ್ನು ನೋಡಿ. ನಾಲ್ಕನೆಯ ಮಾದರಿಯ ಪದಗಳಿಗೆ **ಬಾರೋ, ಕೊಡೋ, ತೋರೋ** ಮುಂತಾದ ಪದಗಳನ್ನು ಹೇಳಬಹುದಾಗಿದೆ. ಇವೆಲ್ಲವೂ ಯಾರ ಜೊತೆಗಾದರೂ ಮಾತಾಡುವಾಗ ಅವರನ್ನು ಗುರಿಯಾಗಿ ಇರಿಸಿಕೊಂಡು ಬಳಸಿದ ಪದಗಳು ಮತ್ತು ಅವುಗಳ ದಿಂಡು ರೂಪಗಳು **ಬಾ, ಕೊಡು, ತೋರು** ಆಗಿವೆ.

ಮೇಲೆ ತೋರಿಸಿದ ನಾಲ್ಕು ಗುಂಪುಗಳಲ್ಲಿ ಎರಡನೆಯ ಉಲಿಕಂತೆ ತೆರೆದ ಮಾದರಿಯದ್ದಾಗಿದೆ. ಇದು ಮುಚ್ಚಿದ ಉಲಿಕಂತೆಯಾದರೆ ಆಗ ನಮಗೆ ಮತ್ತಷ್ಟು ಬಗೆಗಳು ದೊರೆಯುತ್ತವೆ.

1. CV/CVC

2. CVV/CVC

3. CV/CVVC

4. CVV/CVVC

ಇವುಗಳಲ್ಲಿ ಯಾವ ಮಾದರಿಗೆ ಕನ್ನಡದ ಪದಗಳು ದೊರೆಯುತ್ತವೆ ನೋಡೋಣ.

ಮೊದಲ ಮಾದರಿ : **ಹಗಲ್, ತಗಲ್, ಬೆರಳ್,ಕೊರಳ್, ತಿಮಿರ್, ತೊಗಲ್** ಮುಂತಾದವು

ಎರಡನೆಯ ಮಾದರಿ : **ಕಾವಲ್, ಕೀರಲ್, ಬೋರಲ್ ಮುಂತಾದವು** (ಇವು ಒಳಪದರದಲ್ಲಿ **ಕಾವ್ಲ್, ಕೀರ್ಲ್, ಬೋರ್ಲ್** ಎಂದಿರುವುದು ದಿಟವಾದರೆ ಇವೆಲ್ಲವೂ ಒಂದು ಉಲಿಕಂತೆಯ ಪದಗಳೇ ಆಗಿಬಿಡುತ್ತವೆ. ಆಗ ಈ ಎರಡನೆಯ ಮಾದರಿಗೆ ಕನ್ನಡದಲ್ಲಿ ಪದಗಳು ಇಲ್ಲವೆಂದೇ ಹೇಳಬೇಕಾಗುವುದು)

ಮೂರನೆಯ ಮಾದರಿ : ಇವು ಕನ್ನಡದ ನಾದ ಪದರಕ್ಕೆ ಹೊಂದದಿರುವ ಮಾದರಿಗಳು. ಏಕೆಂದರೆ ಇದರ ಚಹರೆಯಿಂದ ಮೊದಲು ಒಂದು ಮಾತ್ರೆಯ (ಲಘು) ಉಲಿಕಂತೆ ಬಂದು ಆ ಬಳಿಕ ಎರಡು ಮಾತ್ರೆಯ (ಗುರು) ಉಲಿಕಂತೆ ಬರಬೇಕಾಗುತ್ತದೆ. ಇದು ಕನ್ನಡಕ್ಕೆ ಹೊಂದದ ಉಲಿಕಂತೆ ಜೋಡಣೆ ಎಂಬುದನ್ನು ನೋಡಿದ್ದೇವೆ.

ನಾಲ್ಕನೆಯ ಮಾದರಿ : **ಕಾಲಾಳ್, ತೂರಾಡ್, ನೂರಾರ್, ಈಚಾಡ್** ಮುಂತಾದವನ್ನು ಎತ್ತುಗೆಗಳಾಗಿ ನೋಡಬಹುದು. ಇವು ಯಾವುವೂ ಬಿಡಿ ಪದಗಳಲ್ಲ. ಒಂದು ದಿಂಡಿಗೆ ಮತ್ತೊಂದು ದಿಂಡು ಇಲ್ಲವೇ ಒಂದು ಪತ್ತುಗೆ ಸೇರಿ ಆಗಿರುವ ಪದಗಳಾಗಿವೆ.

ಈ ಮೇಲಿನ ಮಾತುಗಳಿಂದ **ಈ ನಾಲ್ಕು ಮಾದರಿಗಳಲ್ಲಿ ಮೊದಲನೆಯ ಮಾದರಿಯ ಪದಗಳು ಮಾತ್ರ ಕನ್ನಡದಲ್ಲಿ ಇವೆ ಎಂದು ತಿಳಿಯಬೇಕಾಗುತ್ತದೆ.**

ಈ ಎಲ್ಲ ಮಾದರಿಗಳಲ್ಲೂ ಎರಡು ಉಲಿಕಂತೆಗಳ ಪದಗಳಲ್ಲಿ ಮೊದಲನೆಯ ಉಲಿಕಂತೆ ತೆರೆದ ಉಲಿಕಂತೆಯ ಮಾದರಿಯನ್ನಾಗಿ ಇರಿಸಿದ್ದೇವೆ. ಒಂದುವೇಳೆ ಮೊದಲನೆಯ ಉಲಿಕಂತೆ ಮುಚ್ಚಿದ ಮಾದರಿಯದ್ದಾದರೆ ಆಗ ಎರಡು ಪದಗಳ ಉಲಿಕಂತೆಗಳಲ್ಲಿ ಈ ಕೆಳಗಿನ ಬಗೆಗಳು ಇರುತ್ತವೆ.

1. CVC/V
2. CVVC/V
3. CVC/VV
4. CVVC/VV
5. CVCC/V
6. CVVCC/V
7. CVCC/VV
8. CVVCC/VV

ಇವುಗಳಲ್ಲಿ ಯಾವಯಾವ ಮಾದರಿಯ ಉಲಿಕಂತೆಗಳ ಜೋಡಣೆಗಳು ಕನ್ನಡದ ಎರಡು ಉಲಿಕಂತೆಗಳ ಪದದಲ್ಲಿ ಇರುತ್ತವೆ ಎನ್ನುವುದನ್ನು ನೋಡೋಣ.

ಇವುಗಳಲ್ಲಿ 3, 4, 7 ಮತ್ತು ಎಂಟನೆಯ ಮಾದರಿಗಳು ಕನ್ನಡಕ್ಕೆ ಹೊಂದುವುದಿಲ್ಲ. ಏಕೆಂದರೆ ಇವುಗಳ ಎರಡನೆಯ ಉಲಿಕಂತೆಗಳಲ್ಲಿ ಉದ್ದದ ತೆರೆದ ಉಲಿ ಇದ್ದು ಅದು ಪದದ ಕೊನೆಯ ಉಲಿಯಾಗಿದೆ. ಈ ಬಗೆಯ ಪದಗಳು ಕನ್ನಡದಲ್ಲಿ ಇಲ್ಲ. ಇನ್ನುಳಿದ 1, 2, 5 ,ಮತ್ತು 6ನೆಯ ಮಾದರಿಯ ಕನ್ನಡ ಪದಗಳೂ ಕೂಡ ಹೊರ

ಪದರದಲ್ಲಿ ಕಾಣಿಸುವ ಪದಗಳಲ್ಲಿ ಇರಬಹುದೇ ಹೊರತು ಒಳ ಪದರದಲ್ಲಿ ಅಲ್ಲ. ಏಕೆಂದರೆ CVC/V ಮಾದರಿಯ ಪದಗಳ ಉಲಿಕಂತೆಗಳು CV/CV ಎಂಬಂತೆ ಒಡೆದುಕೊಳ್ಳುತ್ತವೆ. ಹಾಗಾಗಿ ಈ ಮೇಲಿನ ಯಾವ ಮಾದರಿಯ ಪದಗಳೂ ಕನ್ನಡಕ್ಕೆ ಹೊಂದುವುದಿಲ್ಲ ಎಂದಾಯಿತು.

ಪದದಲ್ಲಿರುವ ಉಲಿಕಂತೆಗಳಲ್ಲಿ ಎರಡೂ ಮುಚ್ಚಿದ ಉಲಿಕಂತೆಗಳಾದರೆ ಆಗ ಈ ಕೆಳಗೆ ಹೇಳಿದ ಮಾದರಿಯ ಪದರಚನೆಗಳು ಇರಬೇಕಾಗುತ್ತದೆ. ಇಲ್ಲಿ ಎರಡನೆಯ ಉಲಿಕಂತೆಯ ಏರಿನಲ್ಲಿ ತಡೆಯುಲಿಗಳಿಲ್ಲ ಎಂಬುದನ್ನು ಗುರುತಿಸಿಕೊಳ್ಳಿ.

1. CVC/VC

2. CVVC/VC

3. CVC/VVC

4. CVVC/VVC

5. CVCC/VC

6. CVVCC/VC

7. CVCC/VVC

8. CVVCC/VVC

ಇಂತಹ ಪದಗಳು ಕನ್ನಡದಲ್ಲಿ ಇವೆಯೇ? ಇದು ಆಗದ ಮಾತು ಎಂಬುದನ್ನು ಯಾರಾದರೂ ಹೇಳಬಹುದು. ಏಕೆಂದರೆ ಎರಡನೆಯ ಉಲಿಕಂತೆ ಹೀಗೆ ಏರಿನ ತಡೆಯುಲಿ ಇಲ್ಲದೆ ಮೊದಲಾಗುವುದಕ್ಕೆ ಕನ್ನಡ ಬಿಡುವುದಿಲ್ಲ. ಎತ್ತುಗೆಗಾಗಿ **ನೇಸರ್** ಎಂಬ ಪದವನ್ನು ನೋಡಿ. ಇದರಲ್ಲಿ ಎರಡು ಉಲಿಕಂತೆಗಳಿವೆ. ಮೇಲು ನೋಟಕ್ಕೆ ಇದು ಮೇಲೆ ಪಟ್ಟಿ ಮಾಡಿದ ಎರಡನೆಯ ಬಗೆಯ ರಚನೆಗೆ ಹೊಂದಿಕೊಳ್ಳುವಂತೆ ತೋರುತ್ತದೆ.

ನ್/ಏ/ಸ್/ಅ/ರ್ ಎಂಬ ಉಲಿಗಳನ್ನು **ನೇಸ್/ಅರ್** ಎಂದು ಒಡೆದು ಕೊಳ್ಳುವುದಿಲ್ಲ ತಾನೆ? ಅದು **ನೇ/ಸರ್** ಎಂದೇ ಒಡೆಯುವುದು. ಅಂದರೆ ಮೇಲೆ ಹೇಳಿದ ಯಾವ ಬಗೆಯೂ ಕನ್ನಡದಲ್ಲಿ ಕಾಣಿಸಿಕೊಳ್ಳುವುದಿಲ್ಲ ಎನ್ನುವುದೇ ಸರಿಯಾದ ಮಾತು.

ಆದರೆ ಎರಡೂ ಉಲಿಕಂತೆಗಳು ಮುಚ್ಚಿದ ಉಲಿಕಂತೆಗಳಿರುವ ಪದದಲ್ಲಿ ಎರಡನೆಯ ಉಲಿಕಂತೆಯ ಏರಿನಲ್ಲಿ ತಡೆಯುಲಿ ಇದ್ದರೆ ಅಂತಹ ಪದಗಳು ಕನ್ನಡದಲ್ಲಿ ಇರಬಹುದೇ ಎಂಬ ಕೇಳ್ವಿ ಎದುರಾಗುತ್ತದೆ. ಅದರ ಬಗೆಗಳನ್ನು ಈ ಕೆಳಗೆ ನೀಡಿದೆ.

1. CVC/CVC

2. CVVC/CVC

3. CVC/CVVC

4. CVVC/CVVC

5. CVCC/CVC

6. CVVCC/CVC

7. CVCC/CVVC

8. CVVCC/CVVC

ಇಂತಹ ಪದಗಳೂ ಕೂಡ ಕನ್ನಡದಲ್ಲಿ ಇಲ್ಲ. ಮೊದಲ ಮಾದರಿಗೆ **ಕಟ್‌ಕಟ್, ಪಟ್‌ಪಟ್** ಎಂಬಂತಹ ಎತ್ತುಗೆಗಳನ್ನು ಹೇಳಬಹುದು. ಉಳಿದವು ಒಂದಕ್ಕಿಂತ ಹೆಚ್ಚು ಪದಗಳನ್ನು ಕೂಡಿಸುವುದರಿಂದ ಉಂಟಾಗುವ ಪದಗಳಾಗಿರಬಹುದು.

ಎರಡು ಉಲಿಕಂತೆಗಳಿರುವ ಪದಗಳಲ್ಲಿ ಸುಮಾರು ಮೂವತ್ತೆರಡು ಬಗೆಗಳು ಇರಬಹುದು. ಆದರೆ ಕನ್ನಡದಲ್ಲಿ ಕೆಲವು ಬಗೆಗಳು ಮಾತ್ರ ಇವೆ. ಅವು ಹೀಗಿವೆ.

1. CVCV

2. CVVCV

3. CVCVC

ಈ ಮೂರು ಬಗೆಗಳು ಮಾತ್ರ ಕನ್ನಡದಲ್ಲಿ ಇವೆ.

1. ಎರಡೂ ತೆರೆದ ಉಲಿಗಳು ಮತ್ತು ಎರಡರಲ್ಲೂ ಗಿಡ್ಡ ತೆರೆದ ಉಲಿಗಳು **(ಇಲಿ, ಕಿವಿ ಮುಂ)**

2. ಎರಡೂ ತೆರೆದ ಉಲಿಗಳು ಮತ್ತು ಮೊದಲನೆಯ ಉಲಿಕಂತೆಯಲ್ಲಿ ಉದ್ದದ ತೆರೆದ ಉಲಿ ಮತ್ತು ಎರಡನೆಯದರಲ್ಲಿ ಗಿಡ್ಡ ತೆರೆದ ಉಲಿ **(ಆಗ, ಆಮೆ, ಬೇರೆ)** ಮತ್ತು

3. ಮೊದಲನೆಯದು ತೆರೆದ ಉಲಿಕಂತೆಯಾಗಿದ್ದು ಅದರಲ್ಲಿ ಗಿಡ್ಡ ತೆರೆದ ಉಲಿ ಇರುತ್ತದೆ ಮತ್ತು ಎರಡನೆಯದು ಮುಚ್ಚಿದ ಉಲಿಕಂತೆ ಮತ್ತು ಅದರಲ್ಲೂ ಗಿಡ್ಡ ತೆರೆದ ಉಲಿ ಇರುತ್ತದೆ. **(ಹಗಲ್, ಕೊರಳ್ ಮುಂ)**

ಎರಡಕ್ಕಿಂತ ಹೆಚ್ಚು ಉಲಿಕಂತೆಗಳಿರುವ ಕನ್ನಡ ಪದಗಳು ಬಿಡಿಬಿಡಿಯಾಗಿ ಇರುವುದಿಲ್ಲ. ಅಂದರೆ ಎರಡು ದಿಂಡುಗಳು ಇಲ್ಲವೇ ಒಂದು ದಿಂಡಿಗೆ ಒಂದಕ್ಕಿಂತ ಹೆಚ್ಚು ಪತ್ತುಗೆಗಳು ಸೇರಿ ಕಟ್ಟಿದ ರಚನೆಗಳಾಗಿರುತ್ತವೆ.ಹಾಗಾಗಿ ಕನ್ನಡದ ಬಿಡಿ ಪದಗಳಲ್ಲಿ ಎರಡಕ್ಕಿಂತ ಹೆಚ್ಚು ಉಲಿಕಂತೆಗಳಿರುವ ಎತ್ತುಗೆಗಳು ತುಂಬಾ ಕಡಿಮೆ. ಬರಹದಲ್ಲಿ ಹಾಗೆ ಹೆಚ್ಚು ಉಲಿಕಂತೆಗಳಿರುವ ಪದಗಳು ಇರುವಂತೆ ತೋರಿದರೂ ಆಡು ಮಾತಿನಲ್ಲಿ ಅವು ಎರಡೇ ಉಲಿಕಂತೆಗಳ ಪದಗಳಾಗಿರುತ್ತವೆ. ಎತ್ತುಗೆಗಾಗಿ **ಬಳಪ** ಎಂಬ ಪದವನ್ನು

ನೋಡಿ. ಇದನ್ನು ಬರೆದಾಗ ಅದರಲ್ಲಿ ಮೂರು ಉಲಿಕಂತೆಗಳಿವೆ ಎಂದು ತೋರುತ್ತದೆ. ಆದರೆ ಅದನ್ನು ನುಡಿಯುವಾಗ **ಬಳ್ಪ** ಎನ್ನುತ್ತೇವೆ. ಆಗ ಎರಡೇ ಉಲಿಕಂತೆಗಳಿರುತ್ತವೆ. **ಕಣಕ (>ಕಣ್ಕ), ಮರುಗ (ಮರ್ಗ), ಗಳಿಗೆ (ಗಳ್ಗೆ), ಗುಳಿಗೆ (ಗುಳ್ಗೆ), ತನಕ (ತಂಕ), ತಾವರೆ(>ತಾವ್ರೆ), ಬಾವಲಿ (ಬಾವ್ಲಿ), ತೋರಣ (>ತೋರ್ಣ)** ಇವೆಲ್ಲವೂ ಅಂತಹ ಪದಗಳಾಗಿವೆ.

ಕನ್ನಡಕ್ಕೆ ಹೊಂದದ ಉಲಿಕಂತೆಗಳ ಜೋಡಣೆ ಎಂದರೇನು?

ಈ ಮಾತು ಈಗಾಗಲೇ ಬಂದಿದೆ. ಕನ್ನಡದ ಪದಗಳಲ್ಲೇ ಇರುವ ಉಲಿಕಂತೆಗಳ ಕಟ್ಟುಗಳು ಮತ್ತು ಅವುಗಳ ಜೋಡಣೆಯಾಗುವಾಗ ಯಾವ ಬಗೆಗಳನ್ನು ಕನ್ನಡ ನುಡಿ ಆಯ್ದುಕೊಂಡಿದೆ ಎಂಬುದನ್ನು ನಾವು ನೋಡಿದ್ದೇವೆ. ಕನ್ನಡದ ಪದನೆರಿಕೆ ಎಂಬುದು ಕನ್ನಡದ ಪದಗಳಿಂದ ಮಾತ್ರವೇ ಆಗಿಲ್ಲ. ಸಾವಿರಾರು ಪದಗಳು ಕನ್ನಡದ ಪದ ನೆರಿಕೆಗೆ ಬಂದು ಸೇರಿವೆ. ಅವುಗಳಲ್ಲಿ ಹೆಚ್ಚು ಪಾಲು ಬರಹದಲ್ಲಿ ಕಂಡು ಬರುತ್ತವೆ. ಆದರೂ ಆಡುನುಡಿಯಲ್ಲೂ ಈ ಬಗೆಯ ಪದಗಳು ಸೇರಿಕೊಂಡಿವೆ. ಅವು ಕನ್ನಡದೊಡನೆ ಬೆರೆತಿರುವ ಬಗೆಯನ್ನು ನೋಡಿದರೆ ಅವು ಕನ್ನಡ ಪದಗಳಲ್ಲ ಎಂದು ತಟ್ಟನೆ ಹೇಳಲಾಗುವುದಿಲ್ಲ. ಇಂತಹ ಪದಗಳು ಕನ್ನಡದ ಉಲಿಕಂತೆಗಳ ಕಟ್ಟುಗಳ ಚೌಕಟ್ಟಿನಲ್ಲೇ ಇರುತ್ತವೆಯೋ ಎಂಬುದು ಈಗ ನಮ್ಮ ಎದುರು ಇರುವ ಕೇಳ್ವಿ

ಇದಕ್ಕೆ ಎರಡು ಬದಲುಗಳಿವೆ.

1. ಬೇರೆ ನುಡಿಯಿಂದ ಬಂದು ಸೇರಿದ ಪದಗಳು ಅದರಲ್ಲೂ ಆಡು ನುಡಿಗೆ ಬಂದು ಸೇರಿದ ಪದಗಳು ತಮ್ಮ ಉಲಿ ಚಹರೆಯನ್ನು ಕನ್ನಡದ ಉಲಿಕಂತೆಗಳ ಕಟ್ಟುಗಳಿಗೆ ತಕ್ಕ ಹಾಗೆ ಬದಲಿಸಿಕೊಂಡಿರುವುದು ಒಂದು ನೆಲೆ. ಹೊರ ನುಡಿಗಳಿಂದ ಬಂದ ಪದಗಳು ತಮ್ಮ ತಿರುಳನ್ನು ಬದಲಿಸಿಕೊಳ್ಳಬಹುದು; ತಮ್ಮ ಉಲಿಗಳ ಚಹರೆಯನ್ನು ಬದಲಿಸಿಕೊಳ್ಳಬಹುದು. ಜೊತೆಗೆ ಉಲಿಗಳ ಜೋಡಣೆಯು ಹಿಡಿತದಲ್ಲಿರುವ ಉಲಿಕಂತೆಗಳ ಕಟ್ಟುಗಳಲ್ಲೂ ಬದಲಾವಣೆ ಮಾಡಿಕೊಳ್ಳಬಹುದು. ಆ ಬಳಿಕವೇ ಕನ್ನಡದಲ್ಲಿ ಅವು ಆಡು ನುಡಿಯಲ್ಲಿ ಬಳಕೆಗೆ ಸಲ್ಲುತ್ತವೆ. ಕನ್ನಡದಲ್ಲಿರುವ **ಅಜ್ಜ** ಮತ್ತು **ಅಯ್ಯ** ಪದಗಳೆರಡರ ಬೇರೂ ಸಂಸ್ಕೃತ ನುಡಿಯಲ್ಲೇ ಇದೆಯೆಂದು ಹೇಳಲಾಗಿದೆ. ಸಂಸ್ಕೃತದ **ಆರ್ಯ** ಪದವೇ ನೇರವಾಗಿ ಕನ್ನಡಕ್ಕೆ ಬಂದಾಗ ತನ್ನ ಚಹರೆಯನ್ನು ಬದಲಿಸಿಕೊಂಡು **ಅಯ್ಯ** ಆಯಿತು. **ಆರ್ಯ** ಪದವು ಪ್ರಾಕೃತ ನುಡಿಗೆ ಹೋದಾಗ ಅಲ್ಲಿ ಅದು **ಅಜ್ಜ** ಎಂದಾಯಿತು. ಪ್ರಾಕೃತ ನುಡಿಯಿಂದ ಕನ್ನಡಕ್ಕೆ ಅದು ಬಂದು ಬಳಕೆಯಲ್ಲಿದೆ. ತಿರುಳಿನಲ್ಲಿ ಆಗಿರುವ ಬದಲಾವಣೆಯನ್ನು ಬದಿಗಿಡೋಣ. ಹಾಗೆಯೇ ಪ್ರಾಕೃತ ನುಡಿಯಲ್ಲಿ **ಆರ್ಯ** ಪದವು ಏಕೆ **ಅಜ್ಜ** ಎಂದಾಯಿತು ಎಂಬ ಕೇಳ್ವಿಯನ್ನೂ ಬದಿಗಿಡೋಣ. ಆದರೆ ಕನ್ನಡದಲ್ಲಿ ಆಗಿರುವ ಬದಲಾವಣೆಯಿಂದ **ಅಯ್ಯ** ಪದ ಉಂಟಾದುದುದು ಏಕೆ ಮತ್ತು ಹೇಗೆ ಎಂಬ ಕೇಳ್ವಿಯನ್ನು ಎತ್ತಿಕೊಳ್ಳೋಣ.

ಸಂಸ್ಕೃತದ **ಆರ್ಯ** ಪದದ ಉಲಿಕಂತೆಗಳು ಎರಡು. ಅದು **ಆ/ರ್ಯ** ಇಲ್ಲವೇ **ಆರ್/ಯ** ಎಂದೋ ಇದ್ದಿರಬಹುದು. ಇವೆರಡರಲ್ಲಿ ಎರಡನೆಯದು ಕನ್ನಡಕ್ಕೆ ಹೊಂದುವ ಉಲಿಕಂತೆ ಜೋಡಣೆ. ಕನ್ನಡದಲ್ಲಿ ನಡೆದ ಒಂದು ಉಲಿ ಕಟ್ಟು ಬದಲಾವಣೆಯಿಂದಾಗಿ ಇಲ್ಲವೇ ಕನ್ನಡ ಮಾಡಿಕೊಂಡ ಒಂದು ಆಯ್ಕೆಯಿಂದಾಗಿ ಬೇರೆ ಬೇರೆ ತಡೆಯುಲಿಗಳು ಪದದಲ್ಲಿ ಒಟ್ಟಾಗಿ ಬಂದಿದ್ದರೆ ಅವುಗಳಲ್ಲಿ ಒಂದು ತನ್ನ ಚಹರೆಯನ್ನು ಕಳೆದುಕೊಂಡು ತನ್ನ ಜೊತೆಯಲ್ಲಿರುವ ತಡೆಯುಲಿಯ ಚಹರೆಯನ್ನೇ ಪಡೆದುಕೊಂಡಿತು. ಇಂತಹ ಹಲವು ಎತ್ತುಗೆಗಳು ನಮಗೆ ಕಾಣ ಸಿಗುತ್ತವೆ. (ಈ ಬದಲಾವಣೆಯೂ ಕೂಡ ಪ್ರಾಕೃತ ನುಡಿಯ ಒಡನಾಟದಿಂದ ಆಗಿದ್ದಿರಬಹುದು.) ಇದರಿಂದ **ರ್** ಮತ್ತು **ಯ್** ಗಳ ಜೊತೆಯಲ್ಲಿ **ರ್** ತನ್ನ ಚಹರೆಯನ್ನು ಕಳೆದುಕೊಂಡು **ಯ್** ಆಯಿತು .ಹಾಗಾಗಿ **ರ್ಯ** ಎಂಬುದು **ಯ್ಯ** ಆಗಿ ಬದಲಾಯಿತು. **ಆಯ್ಯ** ಎಂಬುದು ಕನ್ನಡ ಉಲಿಕಂತೆಗಳ ಕಟ್ಟಿಗೆ ಹೊಂದುವುದಿಲ್ಲ. ಏಕೆಂದರೆ ಉದ್ದ ತೆರೆದ ಉಲಿಯು ಮೊದಲ ಉಲಿಕಂತೆಯಲ್ಲಿದ್ದರೆ ಅದರ ಇಳಿಯಲ್ಲಿ ಒಂದೇ ತಡೆಯುಲಿ ಎರಡು ಬಾರಿ ಬರಲಾರದು. ಇದರಿಂದಾಗಿ **ಆಯ್ಯ** ಎಂಬುದು **ಅಯ್ಯ** ಎಂದಾಗಲೇ ಬೇಕಾಯಿತು. ಹೀಗೆ ಕನ್ನಡದ ಉಲಿಕಂತೆಗಳ ಕಟ್ಟಿಗೆ ತಕ್ಕಂತೆ ಬೇರೆ ನುಡಿಗಳಿಂದ ಬಂದ ಪದಗಳು ತಮ್ಮ ಉಲಿ ಚಹರೆಯನ್ನು ಬದಲಿಸಿಕೊಂಡದ್ದಕ್ಕೆ ನೂರಾರು ಎತ್ತುಗೆಗಳು ನಮಗೆ ದೊರಕುತ್ತವೆ. (ಕನ್ನಡದ **ಅಜ್ಜಿ** ಮತ್ತು ಪ್ರಾಕೃತದ **ಆಜೆ**ಗಳ ನಡುವೆ ಇದೇ ಬಗೆಯ ನಂಟು ಇದ ಎಂಬುದನ್ನು ನೆನಪು ಮಾಡಿಕೊಳ್ಳೋಣ. ಕನ್ನಡದಲ್ಲೂ **ಆಜಿ** ಪದವು ಹೆಸರಿನ ಕೊನೆಯಲ್ಲಿ ಬಂದು ಸೇರುವುದುಂಟು)

2. ಈ ಮೇಲಿನ ಬಗೆಯಲ್ಲದೆ ಇನ್ನೂ ಒಂದು ಬಗೆಯಲ್ಲಿ ಬೇರೆ ನುಡಿಗಳಿಂದ ಬಂದ ಪದಗಳು ಸೇರ್ಪಡೆಯಾಗುವುದನ್ನು ಕಾಣುತ್ತೇವೆ. ಅದರಂತೆ ಕನ್ನಡವು ತನ್ನ ಪದ ರಚನೆಯಲ್ಲಿ ಯಾವ ಉಲಿಕಂತೆಗಳ ಚೌಕಟ್ಟನ್ನು ಆಯ್ದುಕೊಂಡಿರಲಿಲ್ಲವೋ ಆ ಚೌಕಟ್ಟನ್ನು ಆಯ್ದುಕೊಂಡು ಹೊಂದಿಸಿಕೊಂಡದ್ದು ಇನ್ನೊಂದು ಬಗೆ. ಇದು ಹೆಚ್ಚಾಗಿ ಬರಹದ ನುಡಿಯಲ್ಲಿ ಆದ ಬದಲಾವಣೆ. ಎತ್ತುಗೆಗಾಗಿ **ವಿಕಾರ, ಕರಾಳ,ಜಮಾನ, ಸಲೀಸು** ಮುಂತಾದ ಪದಗಳನ್ನು ನೋಡಿ. ಇವೆಲ್ಲವೂ ಕನ್ನಡಕ್ಕೆ ಬೇರೆ ನುಡಿಗಳಿಂದ ಬಂದು ಸೇರಿದ ಪದಗಳು. ಇವು ಕನ್ನಡ ಪದಗಳ ಉಲಿಕಂತೆಯ ಚೌಕಟ್ಟಿಗೆ ಹೊಂದುವಂತಿಲ್ಲ. ಏಕೆಂದರೆ ಮೊದಲ ಉಲಿಕಂತೆಯಲ್ಲಿ ಗಿಡ್ಡ ತೆರೆದ ಉಲಿ ಇದ್ದರೆ ಎರಡನೆಯ ಉಲಿಕಂತೆಯಲ್ಲಿ ಉದ್ದ ತೆರೆದ ಉಲಿ ಇರುವುದು ಕನ್ನಡಕ್ಕೆ ಹೊಂದದ ಆಯ್ಕೆ. ಆದರೆ ಈ ಎಲ್ಲ ಪದಗಳೂ ಅದೇ ಬಗೆಯವು(ಛಂದಸ್ಸಿನ ಮಾತಿನಲ್ಲಿ ಹೇಳುವುದಾದರೆ ಇವೆಲ್ಲವೂ ಜಗಣದ ರಚನೆಯನ್ನು ಹೊಂದಿವೆ.)

ಕನ್ನಡ ಪದ ರಚನೆಯಲ್ಲಿ ಯಾವುದೋ ಒಂದು ಬಗೆಯ ಉಲಿಕಂತೆಗಳ ಜೋಡಣೆ ಆಯ್ಕೆಯಾಗಿಲ್ಲ ಎಂದ ಕೂಡಲೇ ಅದು ಕನ್ನಡಿಗರ ನುಡಿ ಬಳಕೆಗೆ ಸಲ್ಲದ್ದು ಎಂದು ಹೇಳಲಾಗುವುದಿಲ್ಲ. ಇನ್ನೂ ಒಂದು ಎತ್ತುಗೆಯನ್ನು

ತೋರಿಸುವುದಾದರೆ ಉಲಿಕಂತೆಯ ಏರಿನಲ್ಲಿ ಒಂದಕ್ಕಿಂತ ಹೆಚ್ಚು ತಡೆಯುಲಿಗಳು ಇಲ್ಲದಿರುವುದು ಕನ್ನಡದ ಆಯ್ಕೆ. ಆದರೆ ಇಂದು ಕನ್ನಡದಲ್ಲಿರುವ ನೂರಾರು ಬೇರೆ ನುಡಿಗಳಿಂದ ಬಂದ ಪದಗಳು ತಮ್ಮ ಉಲಿಕಂತೆಯ ಏರಿನಲ್ಲಿ ಒಂದಕ್ಕಿಂತ ಹೆಚ್ಚು ತಡೆಯುಲಿಗಳನ್ನು ಹೊಂದಿವೆ.**ಬ್ರಶ್, ಕ್ಲಾಸ್, ಗ್ಲಾಸ್, ಪ್ಲೇನ್, ಸ್ಪೂನ್** ಮುಂತಾದ ಪದಗಳ ಮೊದಲ ಉಲಿಕಂತೆಗಳು ತಮ್ಮ ಏರಿನಲ್ಲಿ ಎರಡೆರಡು ತಡೆಯುಲಿಗಳನ್ನು ಪಡೆದಿವೆ. ಅಂದರೆ ಕನ್ನಡ ತನ್ನ ಪದಗಳಿಗಾಗಿ ಬಿಟ್ಟುಕೊಟ್ಟ ಚೌಕಟ್ಟನ್ನು ಬೇರೆ ನುಡಿಯ ಪದಗಳನ್ನು ಪಡೆದುಕೊಳ್ಳುವಾಗ ಆಯ್ದು ಒಪ್ಪಿಕೊಂಡಿದೆ ಎಂದಾಯಿತು. ಹೀಗಾದಾಗಲೂ ಕನ್ನಡ ತನ್ನ ನಾದ ಪದರದ ಚಹರೆಯನ್ನು ಬಿಟ್ಟು ಕೊಡುವುದಿಲ್ಲ ಎಂಬುದನ್ನು ಮರೆಯಬಾರದು.

ಈ ಮಾತನ್ನು ಹೇಳುವಾಗ ಬರಹ ಮತ್ತು ಆಡು ಮಾತುಗಳು ಈ ನೆಲೆಯಲ್ಲಿ ಎದುರಿಸುವ ಬಿಕ್ಕಟ್ಟುಗಳನ್ನು ಎತ್ತಿ ಹೇಳಬೇಕು. ಕನ್ನಡ ಬರವಣಿಗೆಯು ತಾನು ಬೇರೆ ನುಡಿಗಳಿಂದ ಪಡೆದುಕೊಂಡ ಪದಗಳ ಉಲಿ ರಚನೆ ಮತ್ತು ಉಲಿಕಂತೆಗಳ ಕಟ್ಟುಗಳನ್ನು ಹೊಂದಿಸಿಕೊಳ್ಳಲು ಕನ್ನಡದ ಆಯ್ಕೆಗಳನ್ನೇ ಹಿಗ್ಗಿಸುತ್ತಾ ಬಂದಿದೆ ಎಂಬುದು ಕನ್ನಡ ನುಡಿ ನಡೆದು ಬಂದ ಹಾದಿಯನ್ನು ಕಂಡಾಗ ಗೊತ್ತಾಗುತ್ತದೆ. ಆದರೆ ಕನ್ನಡದ ಆಡು ನುಡಿಯ ಉಲಿಕಂತೆಗಳ ಕಟ್ಟುಗಳು ಬಲವಾಗಿವೆ. ಹೀಗಾಗಿ ಕೆಲವೊಮ್ಮೆ ಬರಹದಲ್ಲಿ ಕಾಣಿಸುವುದಕ್ಕೂ ಮಾತಿನಲ್ಲಿ ಕೇಳಿಸುವುದಕ್ಕೂ ಏರುಪೇರುಗಳನ್ನು ಕಾಣುತ್ತೇವೆ.

ಎತ್ತುಗೆಗಾಗಿ **ಅನಾದಿ, ಅನಂತ,ಅನಿಷ್ಟ** ಎಂಬ ಪದಗಳನ್ನು ತೆಗೆದುಕೊಳ್ಳೋಣ. ಇವು ಕನ್ನಡಕ್ಕೆ ಸಂಸ್ಕೃತದಿಂದ ಬಂದು ಸೇರಿದ ಪದಗಳು. ಇವು ಒಂದು ದಿಂಡಿಗೆ ಪತ್ತುಗೆಯೊಂದನ್ನು (ಅನ್) ಸೇರಿಸುವುರಿಂದ ಕಟ್ಟಿದ ಪದಗಳು. **ಅನ್+ಆದಿ, ಅನ್+ಅಂತ, ಅನ್+ಇಚ್ಚೆ** ಎಂಬುದು ಇವುಗಳ ರಚನೆ. ಆದರೆ ಇವು ಕನ್ನಡದ ಪದರಚನೆಯ ಕಟ್ಟುಗಳಿಂದ ಹುಟ್ಟಿದ ಪದಗಳೂ ಅಲ್ಲ ; ಜೊತೆಗೆ ಕನ್ನಡ ನುಡಿಯುವವರಿಗೆ ಇವುಗಳ ಒಳ ಪದರದ ನೆಲೆಯಲ್ಲಿರುವ ರಚನೆಯ ಕಟ್ಟುಗಳು ಗೊತ್ತೂ ಇಲ್ಲ. ಇವು ಈಗಿರುವಂತೆ ಇಡಿಯಾಗಿಯೇ ಕನ್ನಡಿಗರ ಪದನೆರಿಕೆಯಲ್ಲಿ ಸೇರಿಕೊಂಡಿವೆ. ಹಾಗಾಗಿ ಇವುಗಳ ಉಲಿಕಂತೆಗಳನ್ನು ಒಡೆಯುವಾಗ ಕನ್ನಡ ತನ್ನದೇ ಆದ ಹಾದಿಯನ್ನು ಹಿಡಿಯುತ್ತದೆ. **ಅನ್/ಅಂ/ತ** ಎಂಬುದಾಗಿ ಒಡೆಯುವ ಬದಲು **ಅ/ನನ್/ತ** ಎಂದು ಒಡೆದುಕೊಳ್ಳುತ್ತದೆ. ಕನ್ನಡದ ಉಲಿಕಂತೆಗಳ ಜೋಡಣೆಯ ಕಟ್ಟುಗಳಿಗೆ **ಅನಂತ, ಅನಾದಿ, ಅನಿಚ್ಚೆ** ಮುಂತಾದ ಪದಗಳು ಹೊಂದಿಕೊಳ್ಳದಿದ್ದರೂ ಆ ಪದಗಳನ್ನು ನುಡಿಯುವ ಬಗೆಯಲ್ಲಿ ಸಂಸ್ಕೃತದ ಪದ ರಚನೆಯ ಕಟ್ಟುಗಳನ್ನು ಒಪ್ಪಿಕೊಳ್ಳುವುದಿಲ್ಲ. ಕನ್ನಡದ ಕೆಲವು ಒಳ ನುಡಿಗಳಲ್ಲಿ ಈ ಪದಗಳನ್ನು ನುಡಿಯುವಾಗ **ಅ** ಎಂಬ ಮೊದಲ ಉಲಿಯ ಬಳಿಕ ಕೊಂಚ ಬಿಡುವು ಕೊಟ್ಟು ಮುಂದಿನದನ್ನು ಹೇಳುವುದನ್ನು ಕೇಳಸಿಕೊಳ್ಳಬಹುದು.

ಇನ್ನೊಂದು ಎತ್ತುಗೆಯನ್ನು ನೋಡೋಣ. **ಉಪನ್ಯಾಸ** ಎಂಬ ಪದ ಕೂಡ ಸಂಸ್ಕೃತದಿಂದ ಕನ್ನಡಕ್ಕೆ ಬಂದು ಸೇರಿದೆ. ಇದರಲ್ಲಿ ನಾಲ್ಕು ಉಲಿಕಂತೆಗಳಿವೆ. ಅದರ ಬರಹ ರೂಪವನ್ನು ನೋಡಿದರೆ ಅದರ ಮೂರನೆಯ ಉಲಿಕಂತೆ **(ನ್ಯಾ)**ಯಲ್ಲಿ

ಮಾತ್ರ ಉದ್ದದ ತೆರೆದ ಉಲಿ ಇದೆ. ಉಲಿದ ಮೂರೂ ಉಲಿಕಂತೆಗಳಲ್ಲಿ (**ಉ, ಪ, ಸ**) ಗಿಡ್ಡ ತೆರೆದ ಉಲಿಗಳಿವೆ. ಆದರೆ ಕನ್ನಡದ ಆಡು ನುಡಿಯಲ್ಲಿ ಇದು ಕಿವಿಗೆ ಬಿದ್ದಾಗ ಅದು **ಉಪನ್‌ಯಾಸ** (ಕೆಲವರು ನುಡಿಯುವಾಗ **ಉಪನ್ನ್ಯಾಸ**) ಎಂಬಂತೆ ಕೇಳುತ್ತದೆ. ಹೀಗೆ ನೋಡಿದಾಗ ಇದರಲ್ಲೂ ನಾಲ್ಕು ಉಲಿಕಂತೆಗಳಿದ್ದರೂ ಎರಡನೆಯ ಉಲಿಕಂತೆ (**ಪನ್**‌ಇಲ್ಲವೇ **ಪನ್ನ್**) ಮುಚ್ಚಿದ ಉಲಿಕಂತೆಯಂತೆ ತೋರುತ್ತದೆ. ಸಂಸ್ಕೃತ ಪದದಲ್ಲಿ ಹಾಗಿಲ್ಲ. ಅದರೆ ಕನ್ನಡದಲ್ಲಿ ನುಡಿಯುವಾಗ ಈ ಬದಲಾವಣೆ ಆಗುವುದನ್ನು ನೋಡಬಹುದು. ಅಂದರೆ ಬೇರೆ ನುಡಿಗಳಿಂದ ಪಡೆದುಕೊಂಡ ಪದಗಳ ಬರಹ ರೂಪದಲ್ಲಿ ಯಾವ ಉಲಿ ಚಹರೆಯು ಬದಲಾವಣೆಯೂ ಆದಂತೆ ತೋರುವುದಿಲ್ಲವಾದರೂ ಅದೇ ಪದವನ್ನು ನುಡಿಯುವಾಗ ಬದಲಾವಣೆಗಳನ್ನು ಮಾಡಿಕೊಂಡಿರುವುದು ಗೊತ್ತಾಗುತ್ತದೆ.

ಕನ್ನಡದ ಉಲಿಕಂತೆಗಳ ರಚನೆಗಳು ಮತ್ತು ಕಟ್ಟುಗಳನ್ನು ತಿಳಿಯುವಾಗ ನಾವು ತೆರೆದ ಉಲಿಕಂತೆಯಿಂದ ಕನ್ನಡದ ಪದ ಮೊದಲಾಗುತ್ತಿದ್ದರೆ ಅದರ ಬಳಿಕ ಬರುವ ಉಲಿಕಂತೆಯ ಏರಿನಲ್ಲಿ ಒಂದು ತಡೆಯುಲಿ ಇರಲೇ ಬೇಕೆಂದು ಕಂಡುಕೊಂಡಿದ್ದೇವೆ. ಇದನ್ನೇ ಹಳೆಯ ಸೊಲ್ಲರಿಮೆಗಳು ಪದಗಳ ನಡುವೆ ಎರಡು ತೆರೆದ ಉಲಿಗಳು ಒಂದರ ಬಳಿಕ ಇನ್ನೊಂದು ಬರುವುದಿಲ್ಲ ಎಂದು ಹೇಳುತ್ತಿದ್ದವು. ಅಂದರೆ ಪದದ ಮೊದಲ ಉಲಿಕಂತೆ ತೆರೆದ ಉಲಿಯಿಂದ ಮೊದಲಾಗಬಹುದು. ಅದು ಹೊರತು ಪದಗಳ ಒಳಗೇ ತೆರೆದ ಉಲಿಯಿಂದಲೇ ಮೊದಲಾಗುವ (ಅಂದರೆ ಏರಿನಲ್ಲಿ ತಡೆಯುಲಿ ಇಲ್ಲದ) ಉಲಿಕಂತೆ ಬರಲಾರದು ಎಂದಾಯಿತು.

ಈ ಕಟ್ಟನ್ನು ಇನ್ನಷ್ಟು ಬಲಗೊಳಿಸಿಕೊಂಡ ಕನ್ನಡದ ಆಡು ಮಾತಿನ ಕೆಲವು ಒಳನುಡಿಗಳು ಪದದ ಮೊದಲಲ್ಲೂ ಕೂಡ ತೆರೆದ ಉಲಿಗಳಿಂದ ಮೊದಲಾಗುವ ಉಲಿಕಂತೆಗಳನ್ನು ಒಪ್ಪುವುದಿಲ್ಲ ಇದರಿಂದಾಗಿ ಆ ಒಳನುಡಿಗಳಲ್ಲಿ ತೆರೆದ ಉಲಿಗಳಿಂದ ಮೊದಲಾಗುವ ಪದಗಳು ಇರುವುದಿಲ್ಲ. ಆದರೆ ಅಂತಹ ಒಳನುಡಿಗಳಲ್ಲೂ **ಅ** ಎಂಬ ಉಲಿಗೆ ವಿನಾಯತಿ ಇದ್ದಂತಿದೆ. **ಅ** ಉಲಿಯಿಂದ ಮೊದಲಾಗುವ ಪದಗಳು ಹಲವು ಆ ಒಳನುಡಿಗಳಲ್ಲಿ ಕೇಳ ಸಿಗುತ್ತವೆ. ನಂಟನ್ನು ಹೇಳುವ ಕೆಲವು ಪದಗಳಲ್ಲಿ ಮಾತ್ರ **ಅ** ಉಲಿಗಿಂತ ಮೊದಲು **ಯ್** ಎಂಬ ಉಲಿಯನ್ನು ಸೇರಿಸುವುದುಂಟು. **ಅಪ್ಪ** (>**ಯಪ್ಪ**), **ಅವ್ವ** (>**ಯವ್ವ**), **ಅಕ್ಕ** (>**ಯಕ್ಕ**), **ಅಣ್ಣ** (>**ಯಣ್ಣ**). ಆದರೆ ಉಳಿದ ತೆರೆದ ಉಲಿಗಳಾದ **ಇ/ಈ, ಉ/ಊ, ಎ/ಏ, ಒ/ಓ** ಗಳಿಂದ ಯಾವ ಪದವೂ ಮೊದಲಾಗುವುದಿಲ್ಲ. ಇ/ಈ ಮತ್ತು ಎ/ಏ ಗಳನ್ನು ನಡುವಾಗುಳ್ಳ ಪದದ ಮೊದಲ ಉಲಿಕಂತೆಗಳು **ಯ್** ಎಂಬ ಉಲಿಯನ್ನು ಏರಿನಲ್ಲಿ ಹೊಂದಿರುತ್ತವೆ. **ಏನು/ ಯೇನು, ಈಗ/ಯೀಗ, ಇಲಿ/ ಯಿಲಿ, ಎತ್ತು/ಯೆತ್ತು** ಮುಂತಾದ ಎತ್ತುಗೆಗಳನ್ನು ನೋಡಬಹುದು. ಉಳಿದ ತೆರೆದ ಉಲಿಗಳಾದ **ಉ/ಊ** ಮತ್ತು **ಒ/ಓ** ಗಳನ್ನು ನಡುವಾಗುಳ್ಳ ಪದದ ಮೊದಲಿನ ಉಲಿಕಂತೆಗಳು **ವ್** ಎಂಬ ಉಲಿಯನ್ನು ಏರಿನಲ್ಲಿ ಹೊಂದಿರುತ್ತವೆ **ಉರಿ/ವುರಿ, ಊದು/ವೂದು, ಒಂದು/ವಂದು, ಓಡು/ ವೋಡು** ಮುಂತಾದ ಎತ್ತುಗೆಗಳನ್ನು ನೋಡಬಹುದು. (ಕನ್ನಡ ಕಲ್ಬರಹಗಳ ಬರವಣಿಗೆಯಲ್ಲಿ ಮತ್ತು ಕೈ ಬರಹವಿರುವ ಹೊತ್ತಗೆಗಳಲ್ಲಿ ಇದೇ ಮಾದರಿಯಲ್ಲಿ ಪದಗಳನ್ನು ಬರೆದಿರುವುದನ್ನು ಕಾಣಬಹುದು)

ಪದಗಳ ಒಳಗೆ ಉಲಿಕಂತೆಗಳ ಆಯ್ಕೆ ಮತ್ತು ಅವುಗಳ ಜೋಡಣೆಯನ್ನು ಈವರೆಗೆ ಅರಿತೆವು. ಈಗ ಎರಡು ಪದಗಳು ಒಗ್ಗೂಡಿದಾಗ ಅಂದರೆ ಒಂದರ ಬಳಿಕ ಇನ್ನೊಂದು ಬರುವಾಗ ಅವೆರಡರ ಉಲಿಕಂತೆಗಳ ನಡುವಣ ನಂಟಿನಲ್ಲಿ ಏನಾದರೂ ಬದಲಾವಣೆಗಳು ಆಗುತ್ತವೆಯೋ ಇಲ್ಲವೋ ನೋಡೋಣ. ಪದಗಳು ಒಗ್ಗೂಡುವುದನ್ನು ಬಳಕೆಯ ಸೊಲ್ಲರಿಮೆಗಳು 'ಸಂಧಿ' ಎಂದು ಕರೆದಿವೆ. ಎರಡು ಪದಗಳು ಒಗ್ಗೂಡಿದಾಗ ಮೊದಲ ಪದದ ಕೊನೆಯ ಉಲಿಕಂತೆ ಮತ್ತು ಎರಡನೆಯ ಪದದ ಮೊದಲನೆಯ ಉಲಿಕಂತೆಗಳು ಎದುರುಬದುರಾಗುತ್ತವೆ. ಈಗಿರುವ ಕೇಳ್ವಿಯೆಂದರೆ ಹೀಗಾಗುವಾಗ ಈ ಉಲಿಕಂತೆಗಳ ರಚನೆಯಲ್ಲಿ ಏನಾದರೂ ಬದಲಾವಣೆ ಆಗುವುದೋ ಇಲ್ಲವೋ ಎನ್ನುವುದು. ಕೆಲವು ಎತ್ತುಗೆಗಳನ್ನು ನೋಡೋಣ.

ಕಾಲ್ಬೆರಳು ಎಂಬ ರಚನೆಯನ್ನು ನೋಡಿ. ಬಳಕೆಯ ಸೊಲ್ಲರಿಮೆಗಳು ಈ ರಚನೆಯಲ್ಲಿ **ಕಾಲು** ಮತ್ತು **ಬೆರಳು** ಎಂಬ ಎರಡು ಪದಗಳಿವೆಯೆಂದೂ ಇವೆರಡೂ ಒಗ್ಗೂಡಿದಾಗ **ಕಾಲು** ಪದದ ಎರಡನೆಯ ಉಲಿಕಂತೆಯ ತೆರೆದ ಉಲಿಯಾಗಿರುವ **ಉ** ಎಂಬುದು ಬಿದ್ದುಹೋಗುತ್ತದೆಂದೂ ಬಣ್ಣಿಸುತ್ತವೆ. ಅಲ್ಲದೆ ಹೀಗಾಗುವುದನ್ನು 'ಲೋಪಸಂಧಿ' ಎಂದೂ ಹೇಳುತ್ತವೆ. **ಕಾಲ್ಚೆಂಡು (ಕಾಲು/ಚೆಂಡು), ಕಣ್ಗಾವಲು(ಕಣ್ಣು/ ಕಾವಲು), ಹಕ್ಕೊತ್ತಾಯ (ಹಕ್ಕು ಒತ್ತಾಯ)** ಮುಂತಾದವು ಇಂತಹುದೇ ಎತ್ತುಗೆಗಳು.

ಕಾಲ್ ಎಂಬುದೇ ಆ ಪದದ ಒಳ ಪದದ ರೂಪ ಎಂದಾದರೆ ಆಗ **ಚೆಂಡು,ಕಾವಲು** ಮುಂತಾದ ಪದಗಳಿಗೆ ಮೊದಲಲ್ಲಿ ಅದು ಬಂದಾಗ ಆ ಪದದ ಯಾವ ಉಲಿಯೂ ಕಳೆದು ಹೋಗುವುದಿಲ್ಲ. ಆದರೆ ಈಗಾಗಲೇ ಹೇಳಿದಂತೆ **ಕಾಲ್** ಪದವನ್ನು ಬಿಡಿಯಾಗಿ ನುಡಿಯುವಾಗ ಮಾತ್ರ ಅದಕ್ಕೆ **ಉ** ಎಂಬ ಉಲಿ ಬಂದು ಸೇರುತ್ತದೆ ಎಂದು ಬಣ್ಣಿಸಬಹುದು. ಆದ್ದರಿಂದ **ಕಾಲ್ಚೆಂಡು ,ಕಾಲ್ಬೆರಳು, ಹಕ್ಕೊತ್ತಾಯ** ಮುಂತಾದ ಪದಗಳ ರಚನೆಯಲ್ಲಿ 'ಲೋಪ ಸಂಧಿ' ನಡೆದಿದೆ ಎಂದು ಬಣ್ಣಿಸುವುದು ಸರಿಯೇ ಎಂಬುದನ್ನು ಮತ್ತೊಮ್ಮೆ ನೋಡಬೇಕಿದೆ.

ಕಾಲುಂಗುರ ಪದದ ರಚನೆಯಲ್ಲೂ 'ಲೋಪ ಸಂಧಿ ಇದೆಯೆಂದು ಬಳಕೆಯ ಸೊಲ್ಲರಿಮೆಗಳು ಬಣ್ಣಿಸುತ್ತವೆ. **ಕಾಲು** ಮತ್ತು **ಉಂಗುರ** ಪದಗಳು ಒಗ್ಗೂಡಿದಾಗ **ಉ** ಎಂಬ ಉಲಿ ಬಿದ್ದು ಹೋಗುವುದೆಂದು ಹೇಳಲಾಗುತ್ತದೆ. **ಕಾಲು** ಪದದ ಕೊನೆಯ ಉಲಿಯೂ **ಉ** ಮತ್ತು ಉಂಗುರ ಪದದ ಮೊದಲ ಉಲಿಯೂ **ಉ**. ಇವೆರಡರಲ್ಲಿ ಯಾವ **ಉ** ಕಳೆದು ಹೋಗಿದೆ ಎಂಬು ಕೇಳಿದರೆ ಅದು **ಕಾಲು** ಪದದ ಕೊನೆಯದ್ದು ಎಂದೇ ಹೇಳಲಾಗುತ್ತದೆ. ಅದಕ್ಕೆ ಒತ್ತಾಸೆಯಾಗಿ **ಕಾಲೂರು (ಕಾಲು+ಊರು), ಕಾಲೆಳೆ (ಕಾಲು+ಎಳೆ), ಕಾಲಂಗುಲ (ಕಾಲು+ಅಂಗುಲ)** ಮುಂತಾದ ಪದಗಳನ್ನು ಎತ್ತುಗೆಗಳನ್ನಾಗಿ ನೀಡಲಾಗುವುದು. ಇಲ್ಲೆಲ್ಲಾ ಎರಡನೆಯ ಪದದ ಮೊದಲ ಉಲಿ ಹಾಗೇ ಉಳಿದು ಕೊಂಡಿದೆ. ಹಾಗಾಗಿ **ಕಾಲು** ಪದದ ಕೊನೆಯ **ಉ** ಉಲಿಯೇ ಕಳೆದು ಹೋಗಿದೆ ಎಂದು ಬಣ್ಣಿಸಲಾಗುತ್ತಿದೆ. ಆದರೆ **ಕಾಲ್** ಎಂಬುದೇ ದಿಟವಾದ ರೂಪ ಎನ್ನುವುದಾದರೆ ಆಗ ಈ ಎತ್ತುಗೆಗಳಲ್ಲಿ ಯಾವ ಉಲಿ ಬದಲಾವಣೆಯೂ ಆಗಿಲ್ಲವೆಂಬುದು ಗೊತ್ತಾಗುತ್ತದೆ.

ಬೆಟ್ಟದಾವರೆ, ಮಳೆಗಾಲ, ಅಡಿಗಲ್ಲು, ಮನೆಗೆಲಸ ಮುಂತಾದ ಪದಗಳನ್ನು ಬಳಕೆಯ ಸೊಲ್ಲರಿಮೆಯು ಬಣ್ಣಿಸುವಾಗ "ಆದೇಶ ಸಂಧಿ' ಎಂಬ ಮಾತನ್ನು ಬಳಸುತ್ತದೆ. ಅಂದರೆ ಈ ಪದಗಳು ಎರಡು ಬೇರೆ ಬೇರೆ ಪದಗಳು ಸೇರುವುದರಿಂದ ಹುಟ್ಟಿವೆ. ಎರಡನೆಯ ಪದದ ಮೊದಲ ಉಲಿಕಂತೆಯು ಏರಿನಲ್ಲಿ ಹೊಂದಿರುವ ತಡೆಯುಲಿಗಳು ತಮ್ಮ ಚಹರೆಯನ್ನು ಬದಲಿಸಿಕೊಂಡಿವೆ. ಅವುಗಳನ್ನು ಬಿಡಿಯಾಗಿ ನುಡಿಯುವಾಗ ದನಿ ತಂತುಗಳಲ್ಲಿ ಇಲ್ಲದಿದ್ದ ನಡುಕ ಈಗ ಸೇರ್ಪಡೆಯಾಗಿದೆ. ಹಾಗಾಗಿ **ಕ್** ಎಂಬುದು **ಗ್** ಆಗಿ (ಅಡಿ+ಕಲ್ಲು) **ತ್** ಎಂಬುದು **ದ್** ಆಗಿ ಬದಲಾಗಿವೆ (**ಬೆಟ್ಟ+ತಾವರೆ**). ಒಂದು ಉಲಿಯ ಬದಲು ಇನ್ನೊಂದು ಬಂದಿರುವುದರಿಂದ ಇದನ್ನು 'ಆದೇಶ ಸಂಧಿ' ಎನ್ನಬೇಕೆಂದು ಹೇಳಲಾಗಿದೆ. ಹೀಗೆ ಉಲಿಗಳ ಚಹರೆಯು ಬದಲಾಗುವುದೇಕೆ?

ಇದನ್ನು ಅರಿಯಲು ಇನ್ನೊಂದು ಎತ್ತುಗೆಯನ್ನು ನೋಡೋಣ. **ಕೆಟ್ಕಣ್ಣು (ಕೆಟ್+ಕಣ್ಣು), ಪುಟ್ತಾಯಿ (ಪುಟ್+ತಾಯಿ)** ಪದಗಳಲ್ಲಿ ಎರಡನೆಯ ಪದದ ಮೊದಲ ಉಲಿಕಂತೆಯ ಏರಿನಲ್ಲಿ **ಕ್** ಮತ್ತು **ತ್** ಎಂಬ ತಡೆಯುಲಿಗಳಿವೆ. ಆದರೆ ಅವು ತಮ್ಮ ಚಹರೆಯನ್ನು ಬದಲಿಸಿಕೊಂಡಿಲ್ಲ. **ಅಡಿಗಲ್ಲು** ಮತ್ತು **ಬೆಟ್ಟದಾವರೆ** ಪದಗಳಲ್ಲಿ **ಕಲ್ಲು** ಮತ್ತು **ತಾವರೆ** ಪದಗಳ ಮೊದಲನೆಯ ಉಲಿಕಂತೆಯ ಏರಿನ **ಕ್** ಮತ್ತು **ತ್** ಗಳು ಹಿಂದಿನ ಪದದ ತೆರೆದ ಉಲಿಗಳ ಕೊನೆಯಲ್ಲಿರುವ ತೆರೆದ ಉಲಿ (ಅಡಿ ಪದದ ಕೊನೆಯ **ಇ** ಉಲಿ , ಬೆಟ್ಟ ಪದದ ಕೊನೆಯ **ಅ** ಉಲಿ) ಗಳ ಬಳಿಕ ಬರುತ್ತಿವೆ. ಅಲ್ಲದೆ ಈ ತಡೆಯುಲಿಗಳ ಬಳಿಕ ಆಯಾ ಉಲಿಕಂತೆಯ ತೆರೆದ ಉಲಿಗಳಾದ **ಅ** ಮತ್ತು **ಆ** ಉಲಿಗಳು ಬಂದಿವೆ. ಅಂದರೆ **ಕ್** ಮತ್ತು **ತ್** ಉಲಿಗಳು ಎರಡು ತೆರೆದ ಉಲಿಗಳ ನಡುವೆ ಬರುವಂತಾಗಿದೆ. ತೆರೆದ ಉಲಿಗಳ ನುಡಿಯುವಿಕೆಯನ್ನು ನೋಡಿದರೆ ಅವು ಕನ್ನಡದಲ್ಲಂತೂ ಯಾವಾಗಲೂ ಉಲಿ ತಂತುಗಳ ನಡುಕದೊಡನೆ ಹುಟ್ಟುತ್ತವೆ. ಹಾಗಾಗಿ **ಕ್** ಮತ್ತು **ತ್** ಉಲಿಗಳು ತಮ್ಮ ಆಚೀಚೆ ಬರುತ್ತಿರುವ ತಡೆಯುಲಿಗಳ ನಡುಕ ಚಹರೆಯನ್ನು ತಾವೂ ಪಡೆದುಕೊಳ್ಳುತ್ತವೆ. ಆದ್ದರಿಂದ **ಕ್** ಉಲಿಯು **ಗ್** ಆಗಿಯೂ **ತ್** ಉಲಿಯು **ದ್** ಅಗಿಯೂ ಬದಲಾಗಿವೆ.

ಆದರೆ **ಕೆಟ್ಕಣ್ಣು, ಪುಟ್ತಾಯಿ** ಪದಗಳಲ್ಲಿ **ಕಣ್ಣು** ಮತ್ತು **ತಾಯಿ** ಎಂಬ ಎರಡನೆಯ ಪದಗಳ ಮೊದಲ ಉಲಿಕಂತೆಯು ಎರಡೂ ಕಡೆ **ಟ್** ಎಂಬ ಉಲಿಯ ಬಳಿಕ ಬರುತ್ತಿವೆ. **ಟ್** ಎಂಬುದು ನಡುಕ ಇಲ್ಲದಿರುವ ಉಲಿ. ಅದನ್ನು ನುಡಿಯುವಾಗ ಉಲಿ ತಂತುಗಳು ಸಡಿಲವಾಗಿದ್ದು ನಡುಗುವುದಿಲ್ಲ. ಇದರಿಂದಾಗಿ **ಟ್** ಉಲಿಯು ತನ್ನ ಮುಂದೆ ಬರುತ್ತಿರುವ **ಕ್** ಮತ್ತು **ತ್** ಎಂಬ ಉಲಿಗಳ ಚಹರೆಯನ್ನು ನಡುಕವುಳ್ಳ ಉಲಿಗಳನ್ನಾಗಿ ಬದಲಾಯಿಸಲು ಒತ್ತಾಯಿಸುವುದಿಲ್ಲ.

ಬೆಟ್ಟದಾವರೆ ಪದವನ್ನು ಆಡುಮಾತಿನ ಒಂದು ಬಗೆಯಲ್ಲಿ **ಬೆಟ್ತಾವರೆ** ಎಂದು ನುಡಿಯುವುದನ್ನು ಕೇಳಬಹುದು. ಅಂದರೆ **ಬೆಟ್** ಪದದ ಕೊನೆಯ **ಟ್** ಉಲಿಯು ನಡುಕವಿಲ್ಲದ ಉಲಿಯಾದ್ದರಿಂದ ಅದು ತನ್ನ ಮುಂದೆ ಬರುವ **ತ್** ಉಲಿಯನ್ನು **ದ್** ಆಗಿ ಬದಲಿಸಲು ಒತ್ತಾಯಿಸುವುದಿಲ್ಲ. ಒಟ್ಟಾರೆ ಹೀಗೆ ಹೇಳಬಹುದು.

1.C(-voi)-- → C(+1.C(-voi)-- → C(+voi)/V–V

2.C(-voi)-- → C(-voi)/C(-voi)__V

(voi) ಅಂದರೆ ಉಲಿಯಲ್ಲಿ ನಡುಕ ಇದೆಯೋ ಇಲ್ಲವೋ ಎಂಬುದನ್ನು ತಿಳಿಸುವ ಚಹರೆ. ಅದು (+) ಆಗಿದ್ದರೆ ಉಲಿಯಲ್ಲಿ ನಡುಕ ಇದೆಯೆಂದು ತಿಳಿಯಬೇಕು. ಅದು (–) ಆಗಿದ್ದರೆ ಆ ಉಲಿಯಲ್ಲಿ ನಡುಕ ಇರುವುದಿಲ್ಲವೆಂದು ತಿಳಿಯಬೇಕು.

ಮೊದಲನೆಯ ಕಟ್ಟು ಹೇಳುವುದಿಷ್ಟು: ಯಾವುದೇ ನಡುಕ ಚಹರೆ ಇಲ್ಲದ ಉಲಿ ನಡುಕವುಳ್ಳ ತಡೆಯುಲಿಗಿಂತ ಮೊದಲು ಬರುವಂತಿದ್ದರೆ ಆಗ ಅದೂ ಕೂಡ ನಡುಕವನ್ನು ತನ್ನ ಚಹರೆಯನ್ನಾಗಿ ಪಡೆದುಕೊಳ್ಳುತ್ತದೆ. ಎರಡನೆಯ ಕಟ್ಟು ಹೇಳುವುದಿಷ್ಟು: ಯಾವುದೇ ನಡುಕ ಚಹರೆ ಇಲ್ಲದ ಉಲಿಯು ತನ್ನಂತೆಯೇ ನಡುಕ ಚಹರೆ ಇಲ್ಲದ ಉಲಿಗಿಂತ ಮೊದಲು ಬರುವಂತಿದ್ದರೆ ಅದು ತನ್ನ ಚಹರೆಯನ್ನು ಬಿಟ್ಟು ಕೊಡಬೇಕಾಗಿಲ್ಲ. ಎಂದಿನ ಚಹರೆಯನ್ನೇ ಕಾಯ್ದುಕೊಳ್ಳುತ್ತದೆ.

ಬಳಕೆಯ ಸೊಲ್ಲರಿಮೆಗಳು **ಕ,ತ,ಪ**ಗಳು **ಗ,ದ,ಬ** ಗಳಾಗಿ ಬದಲಾಗುವುದನ್ನು ಆದೇಶ ಸಂಧಿ ಎಂಬು ಬಣ್ಣಿಸುತ್ತವೆ. ಎರಡು ಕೇಳ್ವಿಗಳನ್ನು ಈ ಸೊಲ್ಲರಿಮೆಗಳು ಎದುರಿಸುವುದಿಲ್ಲ. **ಚ್** ಉಲಿಯು **ಜ್** ಆಗುವುದೇ? ಅಂದರೆ **ಚ್** ಉಲಿಗೆ **ಜ್** ಉಲಿಯು ಆದೇಶವಾಗುವುದೇ? ಹಾಗಿದ್ದರೆ ಅದು ಯಾವಾಗ? ಎರಡನೆಯ ಕೇಳ್ವಿ: **ಟ್** ಉಲಿಯು **ಡ್** ಉಲಿಯಾಗಿ ಬದಲಾಗುವುದೇ? ಅಂದರೆ **ಟ್** ಉಲಿಗೆ **ಡ್** ಉಲಿ 'ಆದೇಶ'ವಾಗಿ ಬರುವುದೇ? ಹಾಗಿದ್ದರೆ ಅದು ಯಾವಾಗ? ಮೊದಲನೆಯ ಕೇಳ್ವಿಗೆ ಬದಲು ಹುಡುಕಿದರೆ **ಸ್** ಉಲಿಗೆ **ಜ್** ಆದೇಶ ಆಗುವ ಎತ್ತುಗೆಗಳು ದೊರಕುತ್ತವೆಯೇ ಹೊರತು **ಚ್** ಉಲಿಗೆ **ಜ್** ಆದೇಶವಾಗುವ ಎತ್ತುಗೆಗಳಿಲ್ಲ. **ಕೆಂಜೊಡರು (ಕೆಮ್+ಸೊಡರು), ಹಿಂಜರಿ(ಹಿನ್+ಸರಿ).** ಎರಡನೆಯ ಕೇಳ್ವಿಗೆ ಬದಲು ಹೇಳುವುದಾದರೆ **ಟ್** ಉಲಿಯಿಂದ ಮೊದಲಗುವ ಪದಗಳು ಕನ್ನಡದಲ್ಲಿ ಕಡಿಮೆಯಾದ್ದರಿಂದ ಅದು **ಡ್** ಆಗಿ ಬದಲಾಗುವುದೋ ಇಲ್ಲವೋ ಎಂಬುದನ್ನು ಹೇಳಲು ಸಾಕಷ್ಟು ಎತ್ತುಗೆಗಳಿಲ್ಲ.

ಪ್ ಉಲಿ **ಬ್** ಉಲಿಯಾಗಿ ಬದಲಾಗುವ ಮಾತೂ ಕೂಡ ಇಡಿಯಾಗಿ ಒಪ್ಪುವ ಮಾತಾಗಿಲ್ಲ. ಏಕೆಂದರೆ ಎರಡು ಪದಗಳು ಕೂಡುವೆಡೆಯಲ್ಲಿ ಎರಡನೆಯ ಪದದ ಮೊದಲ ಉಲಿಕಂತೆಯ ತಡೆಯುಲಿ **ಪ್** ಆಗಿದ್ದಲ್ಲಿ ಮತ್ತು ಮೊದಲ ಪದದ ಕೊನೆಯ ಉಲಿಕಂತೆ ತೆರೆದ ಉಲಿಕಂತೆಯಾಗಿದ್ದಲ್ಲಿ ಆಗ **ಪ್** ಉಲಿ **ಬ್** ಆಗುವುದಕ್ಕಿಂತ **ವ್** ಆಗಿ ಬದಲಾಗುವುದನ್ನೇ ಹೆಚ್ಚಾಗಿ ನೋಡುತ್ತೇವೆ. **ಪ್** ಬದಲಿಗೆ **ಬ್** ಇಲ್ಲವೇ **ಮ್** ಉಲಿಗಳು ಇದ್ದರೂ ಆ ಉಲಿಗಳೂ **ವ್** ಉಲಿಯಾಗಿಯೇ ಬದಲಾಗುತ್ತವೆ.

ಮುಂದು+ಪರಿ-->ಮುಂದುವರಿ

ಬಲ+ಬಂದು-->ಬಲವಂದು

ಎಲೆ+ಮನೆ-->ಎಲೆವನೆ

ಈ ಬಗೆಯ ಪದಕಟ್ಟುವಿಕೆ ಈಗ, ಅಂದರೆ ಇಂದಿನ ಕನ್ನಡದಲ್ಲಿ ಹೆಚ್ಚಾಗಿ ನಡೆಯುತ್ತಿಲ್ಲ. ಆದರೆ ಬಳಕೆಯ ಸೊಲ್ಲರಿಮೆಗಳು 'ಆದೇಶ ಸಂಧಿ' ಎಂಬ ಹೆಸರಿನಲ್ಲಿ ಬಣ್ಣಿಸುತ್ತಿರುವ ಉಲಿ ಕಟ್ಟನ್ನು ಇಡಿಯಾಗಿ ಒಪ್ಪುವಂತೆ ಇಲ್ಲ ಎನ್ನುವುದನ್ನು ತಿಳಿಸಲು ಈ ಎತ್ತುಗೆಗಳನ್ನು ನೋಡಬೇಕಾಯಿತು.

ಇದೆಲ್ಲವೂ ನಮಗೆ ತಿಳಿಸುವುದೇನು? **ಕ್** ಮತ್ತು **ತ್** ಉಲಿಗಳು ಹಾಗೂ **ಚ್** ಮತ್ತು **ಪ್** ಉಲಿಗಳು ಬೇರೆ ಬೇರೆ ಚಹರೆಯನ್ನು ಹೊಂದಿದ್ದು ಅವುಗಳ ನಡೆಯೂ ಕೂಡ ಬೇರೆಯಾಗಿದೆ. ಅವುಗಳನ್ನು ಸುಮ್ಮನೆ ಮುಚ್ಚುಲಿಗಳೆಂದು (ನುಡಿಯುವಾಗ ಗಾಳಿಯ ಹರವಿಗೆ ಬಾಯಿಯಲ್ಲಿ ಎಲ್ಲಿಯಾದರೂ ಕೊಂಚ ಹೊತ್ತು ಇಡಿಯಾಗಿ ತಡೆಯೊಡ್ಡಿ ಕೂಡಲೆ ಅದನ್ನು ತೆರವುಗೊಳಿಸುವ ಮೂಲಕ ಹುಟ್ಟುವ ಉಲಿಗಳು) ಬಣ್ಣಿಸಲು ಬರುವುದಿಲ್ಲ.

ಈ ಕೆಳಗಿನ ಎತ್ತುಗೆಗಳನ್ನು ನೋಡಿರಿ:

ಮನೆ+ಅಲ್ಲಿ--> ಮನೆಯಲ್ಲಿ

ಕಿಟಕಿ+ಅಲ್ಲಿ-->ಕಿಟಕಿಯಲ್ಲಿ

ಮಗು+ಅನ್ನು-->ಮಗುವನ್ನು

ಮರ+ಅಲ್ಲಿ-->ಮರದಲ್ಲಿ

ಹುಡುಗ+ಅನ್ನು-->ಹುಡುಗನನ್ನು

ಮುದುಕಿ+ಅನ್ನು-->ಮುದುಕಿಯನ್ನು

ಇವೆಲ್ಲ ಎತ್ತುಗೆಗಳಲ್ಲಿ 'ಆಗಮ ಸಂಧಿ' ನಡೆದಿದೆ ಎಂದು ಬಳಕೆಯ ಸೊಲ್ಲರಿಮೆಗಳು ಹೇಳುತ್ತವೆ. ಸೇರುತ್ತಿರುವ ಎರಡೂ ಪದಗಳಲ್ಲಿ ಇಲ್ಲದಿದ್ದ ತಡೆಯುಲಿಯೊಂದು ಹೊಸದಾಗಿ ಬಂದು ಸೇರುವುದರಿಂದ ಅದನ್ನು ಆಗಮ ಸಂಧಿ, ಎಂದು ಕರೆಯಲಾಗಿದೆ. (ಇಲ್ಲಿ ಯಾವುದೇ ಉಲಿಯು ಕಳೆದು ಹೋಗುವುದೂ ಇಲ್ಲ; ಇರುವ ಉಲಿಗಳಲ್ಲಿ ಯಾವುದೋ ಒಂದರ ಬದಲು ಇನ್ನೊಂದು ಉಲಿ ಬರುವುದಿಲ್ಲ)

'ಆಗಮ ಸಂಧಿ' ಎಂದು ಹೇಳಿದ್ದು ಉಲಿಕಂತೆಗಳ ನಡುವೆ ಏನು ಬದಲಾವಣೆ ನಡೆಯುತ್ತಿದೆ ಎಂಬುದರ ಬಣ್ಣನೆಯಾಯಿತು. ಆದರೆ ಅದು ಏಕೆ ನಡೆದಿದೆ ಎಂಬ ಕೇಳ್ವಿಗೆ ಬದಲು ಆಗಲಿಲ್ಲ. ಇಲ್ಲಿ ಮೂರು ಕೇಳ್ವಿಗಳು ಎದುರಾಗುತ್ತವೆ.

1. ಹೊಸ ತಡೆಯುಲಿಯೊಂದು ಬಂದು ಸೇರುವುದೇಕೆ?
2. ಆದೇ ತಡೆಯುಲಿ ಹೊಸದಾಗಿ ಬಂದು ಸೇರಬೇಕೆಂದು ಹೇಳುವುದಾದರೂ ಹೇಗೆ?

3. ಮೇಲೆ ಎತ್ತುಗೆಯಾಗಿ ನೀಡಿದ ಪದಗಳೆಲ್ಲ ಬರಹದಲ್ಲಿ ಕಾಣಿಸುವಂತಹವು.ಇವೇ ಪದಗಳು ಆಡು ನುಡಿಯಲ್ಲಿ ಈ ರೂಪವನ್ನು ಹೊಂದಿರುವುದಿಲ್ಲ. ಅವು **ಮನೇಲಿ, ಕಿಟಕೀಲಿ, ಮಗೂನ, ಮರ್ದಲ್ಲಿ, ಹುಡುಗನ್ನ, ಮುದುಕೀನಾ** ಎಂದಾಗುತ್ತವೆ. ಇಲ್ಲಿ ಆಗಮ ಸಂಧಿಯನ್ನು ಬಣ್ಣಿಸುವುದು ಹೇಗೆ?

ಮೊದಲ ಕೇಳ್ವಿಯನ್ನು ನೋಡೋಣ. ಹೊಸದಾಗಿ ಬಂದು ಸೇರುವ ಉಲಿಗಳಲ್ಲಿ ಎರಡು ಬಗೆಗಳಿವೆ. ಮೊದಲನೆಯ ಬಗೆಯಲ್ಲಿ ಯಾವ ಎರಡು ಪದಗಳು ಸೇರುತ್ತಿವೆಯೋ ಆ ಪದಗಳಲ್ಲಿ ಮೊದಲನೆಯ ಪದದ ಕೊನೆಯ ಉಲಿಕಂತೆ (ಅದು ತೆರೆದ ಉಲಿಕಂತೆಯಾಗಿರುತ್ತದೆ)ಯ ತೆರೆದ ಉಲಿ ಮತ್ತು ಎರಡನೆಯ ಪದದ ಮೊದಲ ಉಲಿಕಂತೆಯ (ಇದರ ಏರಿನಲ್ಲಿ ತಡೆಯುಲಿ ಇರುವುದಿಲ್ಲ) ತೆರೆದ ಉಲಿಗಳು ಸೇರುವಾಗ ಕಾಣಿಸಿಕೊಳ್ಳುವ ಉಲಿಗಳು ಇವೆ. ಇವು **ಯ್** ಇಲ್ಲವೇ **ವ್**ಎಂಬ ಉಲಿಯೇ ಆಗಿರುತ್ತವೆ. ಇಂತಹ ಕಡೆಗಳಲ್ಲಿ ಎರಡನೆಯ ಪದದ ಮೊದಲ ತೆರೆದ ಉಲಿ **ಅ** ಉಲಿ ಆಗಿರುತ್ತದೆ ಮತ್ತು ಆಗ ಮೊದಲ ಪದದ ಕೊನೆಯ ತೆರೆದ ಉಲಿ **ಇ/ಎ** ಆಗಿದ್ದರೆ **ಯ್** ಉಲಿಯೂ **ಅ** ಆಗಿದ್ದರೆ **ವ್** ಉಲಿಯು ಹೆಚ್ಚಾಗಿ ಬಂದು ಸೇರುತ್ತವೆ.

1. i+a——>ya/—i#a—
2. e+a——>ya/—e#a—-
3. a+a——>va/—a#a—-

ಗುರುತು ಎರಡು ಪದಗಳ ಇಲ್ಲವೇ ಒಂದು ಮತ್ತು ಒಂದು ಪತ್ತುಗೆಯ ನಡುವಣ ಗಡಿಯನ್ನು ಹೇಳುತ್ತದೆ. ಬೇರೆ ಬೇರೆ ಪದಗಳ ಎರಡು ಉಲಿಕಂತೆಗಳು ಜೊತೆಯಾಗಿ ಬರುವಾಗ ತೆರೆದ ಉಲಿಗಳು ಒಂದರೊಡನೆ ಬರುವಂತಾದರೆ ಆಗ ಅವರೆಡರ ನಡುವೆ ಅರೆ ತಡೆಯುಲಿಯೊಂದು ಸೇರಲೇ ಬೇಕಾಗುತ್ತದೆ. ಹಾಗಾಗಿಯೇ **ಯ್** ಇಲ್ಲವೇ **ವ್** ಎಂಬ ಉಲಿಗಳ ಸೇರ್ಪಡೆಯಾಗುವುದು. ಎರಡು ತೆರೆದ ಉಲಿಗಳು ಒಂದಾದ ಮೇಲೊಂದರಂತೆ ಒಂದೇ ಪದರಚನೆಯಲ್ಲಿ ಕಾಣಿಸಿಕೊಳ್ಳಲಾರವು ಎಂಬ ಕನ್ನಡ ಪದ ರಚನೆಯ ಕಟ್ಟನ್ನು ನೆನಪಿಸಿಕೊಳ್ಳಿ.

ಎರಡನೆಯ ಗುಂಪಿನ ಉಲಿಗಳಲ್ಲಿ **ನ್/ಳ್/ದ್/** ಇವೆ. ಈ ಉಲಿಗಳು ಬಂದು ಸೇರುವ ಪದಗಳ ಉಲಿಕಂತೆಗಳ ರಚನೆ ಹೀಗಿರುತ್ತದೆ. ಮೊದಲನೆಯ ಪದದ ಕೊನೆಯ ಉಲಿಕಂತೆ ತೆರೆದ ಉಲಿಕಂತೆಯಾಗಿದ್ದು ಅದರಲ್ಲಿರುವ ಉಲಿಯು (ನಡು) **ಅ** ಎಂಬ ಉಲಿಯಾಗಿರುತ್ತದೆ. ಎರಡನೆಯ ಪದದ ಮೊದಲ ಉಲಿಕಂತೆಯು ತೆರೆದ ಉಲಿಯಿಂದ ಮೊದಲಾಗುತ್ತಿದ್ದು ಅದು **ಅ** ಎಂಬ ಉಲಿಯೇ ಆಗಿರುತ್ತದೆ. ಹಿಂದಿನ ಕಂಡಿಕೆಯಲ್ಲಿ ಹೇಳಿದ ಮೂರನೆಯ ಕಟ್ಟನ್ನು ನೆನಪಿಸಿಕೊಂಡರೆ ಇಂತಹ ಕಡೆಗಳಲ್ಲಿ **ವ್** ಎಂಬ ಉಲಿಯು ಹೆಚ್ಚಿನ ಉಲಿಯಾಗಿ ಬಂದು ಸೇರಬೇಕಿತ್ತು. ಅಂದರೆ **ಮರ+ಅಲ್ಲಿ** ಎಂಬುದು ಮರವಲ್ಲಿ ಆಗಬೇಕಿತ್ತು. ಆದರೆ ಹಾಗಾಗುವುದಿಲ್ಲ. ಹಿಂದೆ ಬಣ್ಣಿಸಿದಂತೆ ಇಲ್ಲಿ ಎರಡು ತೆರೆದ ಉಲಿಗಳು ಒಂದಾದ ಮೇಲೊಂದರಂತೆ ಬರುವುದರಿಂದ **ಯ್** ಇಲ್ಲವೇ **ವ್** ಬರುತ್ತದೆ ಎಂದೂ ಹೇಳಲಾಗುತ್ತಿಲ್ಲ. ಹಾಗಿದ್ದರೆ ಇಲ್ಲಿ ಏನಾಗುತ್ತಿದೆ?

ನಾವಿಲ್ಲಿ ನುಡಿ ನಡೆಯಲ್ಲಿ **ಅ** ಉಲಿಯಿಂದ ಕೊನೆಗೊಳ್ಳುವ ಪದಗಳು ನುಡಿ ಕಸುವಿನಲ್ಲಿ ಅಂದರೆ ಒಳ ಪದರದಲ್ಲಿ **ನ್/ಳ್/ದ್** ಉಲಿಗಳಿಂದ ಕೊನೆಗೊಂಡಿರುತ್ತವೆ ಎಂದು ಹೇಳುವುದು ಸರಿ ಎನಿಸುತ್ತದೆ. ಈ ಮೂರೂ ಉಲಿಗಳು **ಅ** ಉಲಿಯಿಂದ ಕೊನೆಗೊಳ್ಳುವ ಹೆಸರು ಪದಗಳ ಲಿಂಗವನ್ನು ಹೇಳುತ್ತವೆ. ಗಂಡಸಾದರೆ **ನ್ (ಮಗನ್)** ಹೆಂಗುಸಾದರೆ **ಳ್ (ಕಮಲಳ್)** ಇವೆರಡೂ ಅಲ್ಲವಾದರೆ **ದ್ (ಮರದ್)** ಎಂದು ಒಳ ಪದರದಲ್ಲಿ ಕೊನೆಗೊಂಡಿರುತ್ತವೆ. ಹಾಗಾಗಿ ಈ ಪದಗಳ ಮುಂದೆ ಆ ಉಲಿಯಿಂದ ಮೊದಲಾಗುವ ಉಲಿಕಂತೆ ಬಂದರೆ ಅವು **ನ (ಮಗನ), ಳ (ಕಮಲಳ),**ಮತ್ತು **ದ (ಮರದ)** ಎಂದು ಬದಲಾಗುತ್ತವೆ. ಇದು ಸರಿಯಾದ ಬಣ್ಣನೆ. ಮರ ಎಂಬ ಪದವು ಒಳ ಪದರದಲ್ಲಿ **ದ್** ಎಂಬ ಲಿಂಗವನ್ನು ಹೇಳುವ ಪದವನ್ನು ಏಕೆ ಹೊಂದಿರಬೇಕು ಮತ್ತು ಆ ರೂಪ ಕೆಲವು ಕಡೆ ಮಾತ್ರ ಕಾಣಿಸಕೊಳ್ಳಬೇಕು ಎಂಬುದು ಸೊಲ್ಲಿನ ರಚನೆಯೊಡನೆ ನಂಟು ಹೊಂದಿರುವ ಕೇಳ್ವಿ, ಅದನ್ನು ಬೇರೆ ಕಡೆ ನೋಡೋಣ. (ಹೆಂಗಸಿನ ಹೆಸರನ್ನು ಹೇಳುವ ಕನ್ನಡ ಪದಗಳಲ್ಲಿ **ಅ** ಎಂಬ ಉಲಿಯಿಂದ ಕೊನೆಯಾಗುವ ಪದಗಳು ಇಲ್ಲವೇ ಇಲ್ಲ ಎನ್ನಬಹುದು. ಹಾಗಾಗಿ ಇಲ್ಲಿ **ಕಮಲ** ಎಂಬ ಸಂಸ್ಕೃತ ನುಡಿಯಿಂದ ಬಂದ ಪದವನ್ನು ಎತ್ತಿಕೊಂಡಿದೆ. ಇಂದಿನ ಆಡು ನುಡಿಯಲ್ಲಿ ಹೆಂಗಸನ್ನು ಹೆಸರಿಸುವ **ಳ್** ಎಂಬ ಪತ್ತುಗೆಯು ಇಲ್ಲವಾಗಿದೆ. ಇದು ಬರಹದ ಒಂದು ಬಗೆಯಲ್ಲಿ ಮಾತ್ರ ಕಾಣಿಸುವಂತಾಗಿದೆ.)

ಈಗ ನಾವು ಮೊದಲ ಎರಡು ಕೇಳ್ವಿಗಳಿಗೆ ಬದಲನ್ನು ನೀಡಿದಂತಾಗಿದೆ. ಮೂರನೆಯ ಕೇಳ್ವಿ ಆಡು ಮಾತಿನ ರೂಪಗಳನ್ನು ಕುರಿತಿದೆ. ಈ ನುಡಿಯ ರೂಪಗಳು ಬೇರೆ ಆಗಿದ್ದರೂ ಸೊಲ್ಲರಿಮೆಯ ಕಟ್ಟುಗಳು ಒಂದೇ ಆಗಿವೆಯೇ ಎಂಬುದನ್ನು ಈಗ ನೋಡಬೇಕು **ಮರ** ಎಂಬ ಪದವನ್ನೇ ಎತ್ತುಗೆಯನ್ನಾಗಿ ನೊಡೋಣ.

ಮರ+ಅನ್ನು-->ಮರಾನ

ಮರ+ಅಲ್ಲಿ-->ಮರ್ದಲ್ಲಿ

ಆಡು ಮಾತಿನ ಸೊಲ್ಲರಿಮೆಯು **ಅನ್ನು** ಎಂಬ ಪತ್ತುಗೆಯ ಬದಲು ನ (ಅದು ಮಾತಾಡುವಾಗ ನ್ ಎಂದೇ ಆಗಿಬಿಡುತ್ತದೆ) ಎಂಬುದನ್ನೇ ಪತ್ತುಗೆಯನ್ನಾಗಿ ಹೊಂದಿದೆ ಎನ್ನಬೇಕು ಇದು **ಅ** ಉಲಿಯಿಂದ ಕೊನೆಗೊಳ್ಳುವ ಪದಗಳ ಜೊತೆಗೆ ಸೇರುವಾಗ **ಆ** ಎಂಬ ಗಿಡ್ಡ ತೆರೆದ ಉಲಿಯು ಉದ್ದ ತೆರೆದ ಉಲಿ **ಆ** ಆಗಿ ಬದಲಾಗುತ್ತದೆ ಎಂಬ ಕಟ್ಟನ್ನೂ ಹೇಳಬೇಕು. ಇನ್ನು **ಅಲ್ಲಿ** ಎಂಬ ಪತ್ತುಗೆಯು ಸೇರುವಾಗ **ಮರದ್** ಎಂಬ ಒಳ ಪದರದ ರೂಪವೇ ಕಾಣಿಸಿಕೊಂಡಿರುವುದರಿಂದ ಈ ಮೊದಲು ಹೇಳಿದ ಸೊಲ್ಲರಿಮೆಯ ಕಟ್ಟಿನಲ್ಲಿ ಯಾವ ಬದಲಾವಣೆಯೂ ಆಗಬೇಕಿಲ್ಲ.

ಇನ್ನು ಎ/ಇ ಉಲಿಗಳಿಂದ ಕೊನೆಯಾಗುವ ಪದಗಳಲ್ಲಿ ಏನಾಗುವುದೆಂದು ನೋಡೋಣ.

ಕಿಟಕಿ+ಲಿ-->ಕಿಟಕೀಲಿ

ಮನೆ+ಲಿ-->ಮನೇಲಿ

ಕಿಟಕಿ+ನ-->ಕಿಟಕೀನ

ಮರ+ನ-->ಮರಾನಾ

ಮಗು+ನ-->ಮಗೂನಾ

ಬರಹದ ಕನ್ನಡದಲ್ಲಿ ಇರುವ ಉಲಿ ಬದಲಾವಣೆ ಇಲ್ಲಿ ಆಗುತ್ತಿಲ್ಲ. ಪತ್ತುಗೆಗಳೂ ಬೇರೆ ಆಗಿವೆ. ಆದರೆ ಈ ಸೇರ್ಪಡೆಯಲ್ಲಿ ಮೊದಲ ಪದದ ಕೊನೆಯ ಗಿಡ್ಡ ತೆರೆದ ಉಲಿಯು ಉದ್ದ ತೆರೆದ ಉಲಿಯಾಗಿ ಬದಲಾಗುತ್ತದೆ. ಇದು **ಅ** ಉಲಿಯಿಂದ ಕೊನೆಯಾಗುವ ಪದಗಳಲ್ಲೂ ಕಂಡು ಬಂದಿದ್ದ ಬದಲಾವಣೆ ಎನ್ನುವುದನ್ನು ಗಮನಿಸಬೇಕು. (ಆಡು ಮಾತಿನಲ್ಲಿ ಕಂಡು ಬರುವ ಈ ಕಟ್ಟಿನಲ್ಲಿ ಪತ್ತುಗೆಯು **ನ್/ಲಿ** ಆಗಿದೆ ಎಂದು ಹೇಳಿದರೂ ಒಳಪದರದಲ್ಲಿ ಈ ಪತ್ತುಗೆಗಳ ರಚನೆಯು ಬೇರೆಯೇ ಆಗಿರುತ್ತದೆ. ಆ ಪತ್ತುಗೆಗಳ ಒಳ ಪದರದ ರೂಪವನ್ನು **&ನ್/&ಲಿ** ಎಂದು ತಿಳಿಯಬೇಕು. ಈ ಪತ್ತುಗೆಗಳಲ್ಲಿ & ಎಂಬುದು ಒಂದು ಉಲಿ ಚಹರೆ. ಅದರ ಉಳಿದ ಚಹರೆಗಳು ಈ ಪತ್ತುಗೆಯು ಯಾವ ಪದಕ್ಕೆ ಸೇರುವುದೋ ಆ ಪದದ ಕೊನೆಯ ಗಿಡ್ಡ ತೆರೆದ ಉಲಿಯಂತೆ ಮೈತಳೆಯುತ್ತದೆ. ಅಂದರೆ ಮೊದಲ ಪದದ ಕೊನೆಯಲ್ಲಿ **ಎ** ಉಲಿ ಇದ್ದರೆ & ಎಂಬುದರೊಡಗೂಡಿ **ಏ** ಎಂಬ ಉಲಿಯಾಗುತ್ತದೆ. ಮೊದಲ ಪದದ ಕೊನೆಯ ಉಲಿ **ಇ** ಉಲಿ ಎಂದಾದರೆ ಅದು & ಎಂಬುದರೊಡಗೂಡಿ **ಈ** ಎಂದಾಗುತ್ತದೆ. ಇಲ್ಲವೇ ಮೊದಲ ಪದದ ಕೊನೆಯ ತೆರೆದ ಉಲಿ **ಅ** ಉಲಿ ಆಗಿದ್ದರೆ ಆಗ & ಎಂಬುದರೊಡಗೂಡಿ **ಆ** ಉಲಿ ಎಂದಾಗುತ್ತದೆ. ಒಂದುವೇಳೆ ಮೊದಲ ಪದದ ದಿಂಡಿನಲ್ಲೇ ಕೊನೆಯಲ್ಲಿ **ಉ** ಎಂಬ ಉಲಿ ಇದ್ದರೆ ಅದು ಈ ಪತ್ತುಗೆಯ ಮೊದಲ ಉಲಿ & ಎಂಬುದರೊಡಗೂಡಿ **ಊ** ಎಂದೇ ಮೈತಳೆಯುತ್ತದೆ. ಪತ್ತುಗೆಗಳ ಒಳ ಪದರದ ರಚನೆಯನ್ನು ಹೀಗೆ ಬಣ್ಣಿಸುವುದರಿಂದ ಎಲ್ಲಿ **ಏ** ಉಲಿ ಕಾಣಿಸುತ್ತದೆ ಮತ್ತು ಎಲ್ಲಿ **ಈ** ಉಲಿ ಕಾಣಿಸುತ್ತದೆ ಎಂಬುದನ್ನು ಹೇಳಬಹುದಾಗಿದೆ.

&ನ್-->ಆನ್/-ಅ+&ನ

&ಲಿ-->ಈಲಿ/-ಇ+&ಲಿ

&ಲಿ-->ಏಲಿ/-ಎ+&ಲಿ

&ನ್-->ಊನ/-ಉ+&ನ

(ಇವು ಒಳ ಪದರದಿಂದ ಹೊರ ಪದರಕ್ಕೆ ಬರುವಾಗ ಆಗುವ ಉಲಿ ಬದಲಾವಣೆಯನ್ನು ಹೇಳುತ್ತವೆ.)

ಈವರೆಗೆ ಕನ್ನಡ ಪದಗಳನ್ನು ಕಟ್ಟುವಾಗ ಒಂದು ಪದದ ಜೊತೆಗೆ ಇನ್ನೊಂದು ಪದ ಇಲ್ಲವೇ ಪತ್ತುಗೆ ಬಂದರೆ ಎರಡೂ ಪದಗಳ ಉಲಿಕಂತೆಗಳಲ್ಲಿ ಆಗುವ ಬದಲಾವಣೆಗಳನ್ನು ನೋಡಿದೆವು. ಪದಕ್ಕಿಂತ ದೊಡ್ಡ ರಚನೆಗಳನ್ನು ಕಟ್ಟುವಾಗ ಉಲಿಕಂತೆಗಳ ರಚನೆಯಲ್ಲಿ ಬದಲಾವಣೆಗಳು ಆಗುವುದಿಲ್ಲ. ಅಂತಹ ಕಡೆ ಪದಗಳು ಒಂದು ಗಡಿಗೆರೆಯನ್ನು ಇರಿಸಿಕೊಂಡಂತೆ ತೋರುತ್ತದೆ. ಈ ಕೆಳಗಿನ ಎತ್ತುಗೆಗಳನ್ನು ನೋಡೋಣ

ಮನೆ+ಕೆಲಸ-->ಮನೆಗೆಲಸ

ಮನೆ+ಕಟ್ಟು--> ಮನೆಕಟ್ಟು

ಈ ಎರಡೂ ರಚನೆಗಳಲ್ಲಿ ಮೊದಲನೆಯ ಪದ ಎರಡೂ ಕಡೆ **ಮನೆ** ಎಂಬುದೇ ಆಗಿದೆ. ಬಳಿಕ ಬರುವ ಎರಡನೆಯ ಪದದ ಮೊದಲ ಉಲಿಕಂತೆಯ ಏರಿನ ತಡೆಯುಲಿ **ಕ್** ಉಲಿಯೇ ಆಗಿದೆ. ಆದರೆ ಮೊದಲ ಎತ್ತುಗೆಯಲ್ಲಿ ಈ **ಕ್** ಉಲಿ **ಗ್** ಎಂದು ಬದಲಾಗಿದೆ. ಎರಡನೆಯ ಎತ್ತುಗೆಯಲ್ಲಿ **ಕ್** ಉಲಿ ಯಾವ ಬದಲಾವಣೆಯನ್ನೂ ಹೊಂದದೇ ಹಾಗೇ ಉಳಿದಿದೆ. ಅಂದರೆ ಉಲಿಕಂತೆಗಳ ರಚನೆಯಲ್ಲಿ ಬದಲಾವಣೆ ತರುವ ಕಟ್ಟುಗಳು ಎರಡನೆಯ ಎತ್ತುಗೆಯಲ್ಲಿ ಜಾರಿ ಆಗಿಲ್ಲ. ಆ ಎತ್ತುಗೆಯಲ್ಲಿ ಬರುವ **ಮನೆ** ಪದವನ್ನು ಬಳಸಿ ಕಟ್ಟುತ್ತಿರುವ ರಚನೆಯು ಪದಕ್ಕಿಂತ ದೊಡ್ಡ ನುಡಿ ರಚನೆ ಆಗಿರುವುದರಿಂದ ಅಲ್ಲಿ ಉಲಿಕಂತೆಗಳ ಜೋಡಣೆಯ ಕಟ್ಟು ಬಳಕೆಯಾಗಿಲ್ಲ. ಹೀಗೆ ಪದಗಳು ತಮ್ಮ ಉಲಿಕಂತೆಗಳಲ್ಲಿ ಬದಲಾವಣೆ ಆಗದಂತೆ ಯಾವಾಗ ಗಡಿಗೆರೆಗಳನ್ನು ಕಟ್ಟಿಕೊಳ್ಳುತ್ತವೆ ಮತ್ತು ಈ ಗಡಿಗೆರೆಗಳು ನುಡಿಯಲ್ಲಿ ಮೊದಲಿಂದಲೂ ಇದ್ದವೇ ಇಲ್ಲವೇ ಹೊಸದಾಗಿ ಮೈತಳೆದವೇ ಎಂಬುದನ್ನು ಹೆಚ್ಚಿನ ಓದಿನಿಂದ ಕಂಡು ಹಿಡಿಯಬೇಕಾಗಿದೆ.

ಕನ್ನಡದಲ್ಲಿ ಇರುವ ಉಲಿಕಂತೆಗಳ ಮಾದರಿಗಳು

	ರಚನೆ	ಎತ್ತುಗೆಗಳು
1.	V	ಅ ಇ
2.	VV	ಆ, ಈ
3.	CV	ಇದಕ್ಕೆ ಎತ್ತುಗೆ ಇಲ್ಲ
4.	CVV	ತಾ, ಬಾ
5.	CCV	ಇದಕ್ಕೆ ಎತ್ತುಗೆ ಇಲ್ಲ
6.	CCVV	ಇದಕ್ಕೆ ಎತ್ತುಗೆ ಇಲ್ಲ
7.	VC	ಅಲ್, ಉಳ್, ಅನ್,ಇರ್
8.	VVC	ಆರ್, ಏರ್, ಊರ್,
9.	CVC	ಬರ್, ತರ್, ಕಯ್, ತುಯ್
10.	CVVC	ಕಾಲ್, ತೇಲ್, ಬೇರ್
11.	CVCC	ಕಲ್ಲ್, ಕಣ್ಣ್, ಕಟ್ಟ್, ತಪ್ಪ್
12.	CVVCC	ಇದಕ್ಕೆ ಎತ್ತುಗೆ ಇಲ್ಲ

ಇದೆಲ್ಲವನ್ನೂ ಓದಿದ ಮೇಲೆ ನೀವು ಮಾಡಬಹುದಾದ ಕೆಲಸಗಳು

1. ಈ ಕೆಳಗಿನ ಪದಗಳಲ್ಲಿರುವ ಉಲಿಗಳನ್ನು ಬೇರೆ ಬೇರೆ ಮಾಡಿ ಬರೆಯಿರಿ: **ಓಡಾಟ, ಹಿನ್ನೀರು, ತಂಗಿ, ಬಂಗ್ರ, ಬೆರಳು, ಹೆದರಿಕೆ, ಬಿದ್ಬಿಟ್ಟ, ಬರ್ಲಾಕ, ತಂಗ್ಳು, ಮನ್ಯಾಗ**

2. ಈ ಕೆಳಗಿನ ಪದಗಳಲ್ಲಿರುವ ಉಲಿಕಂತೆಗಳನ್ನು ಬೇರೆ ಬೇರೆ ಮಾಡಿ ಬರೆಯಿರಿ: **ಚೆಲ್ಲಾಟ, ಕಣ್ಣೀರು, ಬರಿಗಾಲು, ಮಂಕು, ಕೊಟ್ರೆ, ಅದ್ರಿಂದ, ಯಾವಾಗ್ಲೂ, ಕಣ್ಣಲ್ಲಿ, ಹತ್ತಾರು, ತೆಂಗು**

3. ಈ ಕೆಳಗಿನ ಪದಗಳು ಕನ್ನಡ ಪದನೆರಿಕೆಗೆ ಸೇರಿವೇ ಇಲ್ಲವೇ ಎಂಬುದನ್ನು ಗುರುತಿಸಿ. ನಿಮ್ಮ ಹೇಳಿಕೆಗೆ ಒತ್ತಾಸೆಯಾಗಿರುವ ಉಲಿ ಕಟ್ಟುಗಳನ್ನು ಹೇಳಿರಿ: **ಕಲಾಪ, ಪ್ರಹಾರ, ಆಹ್ಲಾದ, ಸಲೀಸು, ಅನಂತರ, ಓಡಾಟ, ನಿಧಾನ, ಆಹ್ಲಾದ, ಆಗ್ರಹ, ಊರ್ಮಿ**

4. ನೀವು ಎಂದೂ ಕೇಳಿರದ ಇಲ್ಲವೇ ಓದಿರದ ಈ ಪದಗಳು ಕನ್ನಡ ಪದನೆರಿಕೆ ಸೇರಿವೆ ಎಂದು ಯಾರಾದರೂ ಹೇಳಿದರೆ ನೀವು ಆ ಹೇಳಿಕೆಯನ್ನು ಒಪ್ಪಲು ಇಲ್ಲವೇ ಒಪ್ಪದಿರಲು ತಕ್ಕ ಉಲಿಕಟ್ಟುಗಳನ್ನು ಹೇಳಿರಿ: **ದರಾಲ, ಲಾಪ್ಪುತ, ತ್ರಗಿಪ, ಪೆನಿಚ, ದಿಉಸ್ಸ, ಮರಜಿ, ತಕಾಮ, ಮಸ್ತ್ರ್ಕ, ಪಂಜ್ನ, ನಿಲಕ, ತೂಕ್ಕಿಲ,**

5. ಈ ಕೆಳಗಿನ ರಚನೆಗಳಲ್ಲಿ ಇರಬಹುದಾದ ಪದ, ದಿಂಡು ಇಲ್ಲವೇ ಪತ್ತುಗೆಗಳನ್ನು ಬೇರೆ ಬೇರೆ ಮಾಡಿ. ಅಲ್ಲಿ ಉಲಿಕಂತೆಗಳು ಸೇರುವಾಗ ಏನಾದರೂ ಉಲಿ ಬದಲಾವಣೆಗಳು ನಡೆದಿವೆಯೇ ಇಲ್ಲವೇ ಎಂಬುದನ್ನು ಬಣ್ಣಿಸಿ. ನಿಮ್ಮ ಬಣ್ಣನೆಯು ಬಳಕೆಯ ಸೊಲ್ಲರಿಮೆಗಳ ಬಣ್ಣನೆಯನ್ನು ಹೋಲುತ್ತದೋ ಇಲ್ಲವೋ ಎಂಬುದನ್ನು ನೋಡಿಕೊಳ್ಳಿ: **ಕಣ್ಣೋಟ, ತಲೆಗಂದಾಯ, ದಿನಕ್ಕೆ, ಕೊಡುಗೈ, ದರಪಟ್ಟಿ, ಕಾಡಿನಲ್ಲಿ, ತೋಳ್ಬಲ, ದೊಡ್ಮನೆ, ಕಲ್ನಾರು, ಪುಡಿಗಾಸು**

6. ಬೇರೆ ಬೇರೆ ನುಡಿಗಳಿಂದ ಕನ್ನಡಕ್ಕೆ ಬಂದು ಬಳಕೆಯಾಗುತ್ತಿರುವ ಈ ಮುಂದಿನ ಪದಗಳು ಉಲಿಕಂತೆಗಳ ನೆಲೆಯಲ್ಲಿ ಹೊಂದಿರುವ ಬದಲಾವಣೆಯನ್ನು ಬಣ್ಣಿಸಿ:**ಬೋರ್ಡು, ಕಜ್ಜ, ಮಿಸ್ಸು, ಮುಕುತಿ, ಕರೆಂಟು, ಶರ್ತು/ಶರತ್ತು, ಕ್ಲಿನಿಕ್ಕು, ರೋಡು, ರತುನ**

7. ಬೇರುಗೀರು ಮಾದರಿಯ ರಚನೆಗಳ ಹಿಂದಿನ ಕಟ್ಟನ್ನು ನೋಡಿ. ಅಂತಹ ರಚನೆಗಳನ್ನು ಈ ಪದಗಳನ್ನು ಬಳಸಿ ಕಟ್ಟಿರಿ. **ಬಡ್ಡಿ, ಕುರಿ, ಕೇಸು, ಟಿಕೆಟ್, ಡ್ರಾಮಾ, ಕ್ಯಾಮೆರಾ, ಸ್ಕೂಲ್, ನೋಡು, ವೇಸ್ಟ್, ಬೋಟು**

ಕನ್ನಡ ಭಾಷಾಭಿವೃದ್ಧಿ

ಭಾಷಾಭಿವೃದ್ಧಿ ಎಂದರೇನು?

ಭಾಷೆಗೊಂದು ಭಾಷಿಕ ಸಮುದಾಯವಿರುತ್ತದೆ. ಆ ಸಮುದಾಯದವರು ತಮ್ಮ ಭಾಷೆಯನ್ನು ಬೇರೆಬೇರೆ ಉದ್ದೇಶಗಳಿಗಾಗಿ ದಿನವೂ ಬಳಸುತ್ತಿರುತ್ತಾರೆ. ಹೀಗೆ ಬಳಕೆಯಾದಾಗ ಆ ಭಾಷಿಕ ರಚನೆಗಳು ಕೆಲವೊಮ್ಮೆ ರೂಪುಗೊಳ್ಳುತ್ತಿದ್ದಂತೆಯೇ (ಮಾತಾಡುವಾಗ) ಆಕಾರ ಕಳೆದುಕೊಳ್ಳಬಹುದು; ಮತ್ತೆ ಕೆಲವೊಮ್ಮೆ ಹೀಗೆ ರೂಪುಗೊಂಡ ರಚನೆಗಳು ಅನಂತರದಲ್ಲಿಯೂ ಉಳಿದುಕೊಳ್ಳಬಹುದು (ಬರಹದಲ್ಲಿ). ಈ ಎರಡು ಸಂದರ್ಭಗಳ ಅಗತ್ಯಗಳಿಗೆ ಅನುಗುಣವಾಗಿ ಭಾಷಿಕರು ತಮ್ಮ ಭಾಷಾ ಸಾಮರ್ಥ್ಯದ ಸಾಧ್ಯತೆಗಳಲ್ಲಿ ಸೂಕ್ತ ಆಯ್ಕೆಗಳನ್ನು ಮಾಡಿಕೊಳ್ಳುತ್ತಿರುತ್ತಾರೆ. ಆದರೆ ಹೀಗೆ ಮಾಡಿಕೊಳ್ಳುವ ಕೆಲವು ಆಯ್ಕೆಗಳು ಪ್ರತಿ ವ್ಯಕ್ತಿಗೆ ಮಾತ್ರ ಸೀಮಿತವಾಗಿರುವುದಿಲ್ಲ. ಆ ಭಾಷಿಕ ಸಮುದಾಯದ ಎಲ್ಲರೂ ಅಥವಾ ಬಹುಪಾಲು ಜನ ಆ ಹೊಸ ಆಯ್ಕೆಗಳನ್ನು ಒಪ್ಪಿ ಬಳಸುತ್ತಿರುತ್ತಾರೆ. ಈ ಒಮ್ಮತ ಯಾರ ಒತ್ತಾಯ ಅಥವಾ ನಿರ್ದೇಶನಗಳಿಲ್ಲದೆಯೂ ನಡೆಯುತ್ತಿರುತ್ತವೆ. ಉದಾಹರಣೆಗೆ ಭಾಷೆಯಲ್ಲಿ ನಡೆಯುವ ಧ್ವನಿವ್ಯತ್ಯಾಸಗಳನ್ನು ಗಮನಿಸೋಣ. ಯಾವ ಧ್ವನಿಯನ್ನು ಯಾವ ಧ್ವನಿ ಪರಿಸರದಲ್ಲಿ ಹೇಗೆ ಬದಲಾಯಿಸಿಕೊಳ್ಳಬೇಕು ಎಂಬುದನ್ನು ಒಂದು ನಿರ್ದಿಷ್ಟ ಸಂದರ್ಭದಲ್ಲಿ ಭಾಷಿಕರಿಗೆ ಯಾರೂ ಸೂಚಿಸುವುದಿಲ್ಲ. ಆದರೆ ಆ ಬದಲಾವಣೆಯನ್ನು ಎಲ್ಲರೂ ನಿಧಾನವಾಗಿ ಅಳವಡಿಸಿಕೊಳ್ಳುತ್ತಾರೆ. ಹಾಗೆಯೇ ಬೇರೆ ಭಾಷೆಯಿಂದ ಹೊಸ ಪದವೊಂದನ್ನು ಪಡೆದುಕೊಳ್ಳುವಾಗಲೂ ಕೂಡ ಯಾವ ಪದವನ್ನು ಯಾವ ಅರ್ಥ, ರೂಪ ಬದಲಾವಣೆಗಳೊಡನೆ ಸ್ವೀಕರಿಸಬೇಕು ಎನ್ನುವುದನ್ನು ಯಾರೂ ಮೇಲಿನಿಂದ ತೀರ್ಮಾನಿಸಿ ಆದೇಶಿಸುವುದಿಲ್ಲ. ಸಂಸ್ಕೃತದ ಆಕಾರಾಂತ ಪದಗಳನ್ನು ಕನ್ನಡ ಪದಕೋಶಕ್ಕೆ ತೆಗೆದುಕೊಂಡಾಗ ಆ ಪದಗಳನ್ನು ಏಕಾರಾಂತ (ಅಪ್ಸರಾ>ಅಪ್ಸರೆ) ಮಾಡಿಕೊಳ್ಳಬೇಕೆಂಬ ನಿರ್ಧಾರ ಯಾರೋ ಒಬ್ಬರದಲ್ಲ. ಅಲ್ಲದೆ ಭಾಷಿಕರಿಗೆ ಈ ಬದಲಾವಣೆಯ ಸ್ವರೂಪವನ್ನು ಕುರಿತು ಯಾರೂ, ಮೊದಲೇ ತಿಳಿಸಿ ಹೇಳಿರುವುದಿಲ್ಲ. ಹೀಗೆ ಭಾಷೆಯಲ್ಲಿ ಬದಲಾವಣೆಗಳು ತಂತಾನೇ ನಡೆಯುತ್ತಿರುತ್ತವೆ. ಈ ಬದಲಾವಣೆ ಆಗುವಂತೆ ಮಾಡುವ ಸಂದರ್ಭಗಳು ಚರಿತ್ರೆಯಲ್ಲಿ ಸಂಭವಿಸುತ್ತಿರುತ್ತವೆ. ಈ ಚಾರಿತ್ರಿಕ (ಹಾಗೂ ಸಾಮಾಜಿಕ) ಸಂದರ್ಭಗಳು ಕೇವಲ **ಸಂದರ್ಭ**ಗಳು ಮಾತ್ರ; ಅವು ಬದಲಾವಣೆಗೆ **ಕಾರಣ**ಗಳಲ್ಲ. ಆದರೆ ಎಲ್ಲ ಬದಲಾವಣೆಗಳೂ ಹೀಗೆ ತಂತಾನೇ ಸಂಭವಿಸುವುದಿಲ್ಲ. ಭಾಷಿಕ ಸಮುದಾಯದಲ್ಲಿ ಬೆಳವಣಿಗೆಯ ಸ್ವರೂಪ ಬಗೆಗೆ ಮೊದಲೇ ಒಂದು ಯೋಜನೆ ರೂಪಗೊಂಡು

ಅದನ್ನು ಕ್ರಮಬದ್ಧವಾಗಿ ಜಾರಿಗೆ ಕೊಡುವ ವಿಧಾನ ಕಂಡುಬರುತ್ತದೆ. ಹೀಗೆ ನಿರ್ದಿಷ್ಟ ದಿಕ್ಕಿನಲ್ಲಿ ಭಾಷೆಯ ಬೆಳವಣಿಗೆಯಾಗಬೇಕೆಂದು ನಿರ್ಣಯಿಸುವುದನ್ನು ಮತ್ತು ಅದನ್ನು ಜಾರಿಗೆ ಕೊಡುವುದನ್ನು 'ಭಾಷಾ ಯೋಜನೆ' ಎಂದು ಕರೆಯುತ್ತಾರೆ. ಭಾಷೆಯ ಬೆಳವಣಿಗೆ ಅಥವಾ ಅಭಿವೃದ್ಧಿ ಈ ಎರಡೂ ರೀತಿಗಳಲ್ಲಿ ನಡೆಯುತ್ತಿರುತ್ತದೆ. ನಿರ್ದೇಶನಗಳಿಲ್ಲದೆ ನಡೆಯುವ ಆದರೆ ಭಾಷಾ ಸಮುದಾಯವೆಲ್ಲ ಇಡಿಯಾಗಿ ಒಪ್ಪಿಕೊಳ್ಳುವ ಬೆಳವಣಿಗೆಗಳಿಗೆ ಕೆಲವು ಉದಾಹರಣೆಗಳನ್ನು ಈಗಾಗಲೇ ನೋಡಿದ್ದೇವೆ. ಯೋಜಿತ ಬದಲಾವಣೆಗಳಿಗೆ ಇಂತಹುದೇ ಉದಾಹರಣೆಗಳನ್ನು ಈಗ ನೋಡೋಣ. ಭಾಷಾ ಸಮುದಾಯದಲ್ಲಿ ಎಲ್ಲರೂ ಭಾಷೆಯನ್ನು ಮಾತನಾಡುತ್ತಿರುತ್ತಾರೆ. ಆದರೆ ಭಾಷೆಯ ಮತ್ತೊಂದು ಕೌಶಲವಾದ ಬರೆಯುವಿಕೆಯನ್ನು ಎಲ್ಲರೂ ತಂತಾನೇ ಕಲಿಯುವುದಿಲ್ಲ. ಭಾಷಾ ಸಮುದಾಯವು ಈ ಕಲಿಕೆಗೆ ತಕ್ಕ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಯಾರು ಕಲಿಯಬೇಕು, ಏನನ್ನು ಕಲಿಯಬೇಕು, ಎಷ್ಟು ಕಲಿಯಬೇಕು ಎಂಬ ಪ್ರಶ್ನೆಗಳಿಗೆ ತಕ್ಕ ಉತ್ತರಗಳಿರುವ ಕಲಿಕೆಯ ಮಾದರಿಯೊಂದನ್ನು ರೂಪಿಸಿ ಅದನ್ನು ಸಮುದಾಯದಲ್ಲಿ ಜಾರಿಗೆ ಕೊಡಲಾಗುತ್ತದೆ. ಇದರಿಂದ ಭಾಷಿಕರಲ್ಲಿ ಕೆಲವರ ಭಾಷಾ ಕೌಶಲಗಳಿಗೆ ಬರೆಯುವಿಕೆ ಕೂಡಾ ಆ ವೇಳೆ ಬಂದು ಸೇರಿಕೊಳ್ಳುವುದು ಸಾಧ್ಯವಾಗುತ್ತದೆ. ಇದೊಂದು ಯೋಜಿತ ಪರಿಣಾಮ. ಹಾಗಾಗಿ ಇದು ಭಾಷಾ ಯೋಜನೆಯ ಭಾಗವಾಗುತ್ತದೆ.

ಭಾಷಾ ಸಮುದಾಯಗಳಲ್ಲಿ ನಡೆಯುವ ಭಾಷಿಕ ಪರಿವರ್ತನೆಗಳನ್ನು ಸಾಮಾನ್ಯವಾಗಿ ಭಾಷಾಭಿವೃದ್ಧಿ ಎಂಬ ಪರಿಕಲ್ಪನೆಯಲ್ಲಿ ಚರ್ಚಿಸುವುದಿಲ್ಲ. ಇದಕ್ಕೆ ಕಾರಣಗಳಿವೆ. ಈ ಬದಲಾವಣೆಗಳನ್ನು ಅವು ನಡೆಯುವಾಗ ಗುರುತಿಸುವುದು ಬಲು ಕಷ್ಟ. ಅಲ್ಲದೆ ಆ ಬದಲಾವಣೆಗಳು ಅಗತ್ಯವೋ ಅಲ್ಲವೋ ಎಂಬ ಬಗೆಗೆ ಕೂಡ ಸಾಮಾನ್ಯ ಒಪ್ಪಂದವೊಂದು ಇರುವುದಿಲ್ಲ. ಉದಾಹರಣೆಗೆ ಹಳೆಗನ್ನಡದ ೞವನ್ನು ಳ ಕಾರವಾಗಿ ಉಚ್ಚರಿಸಲು ಮಾಡಿಕೊಂಡ ಬದಲಾವಣೆಗಳನ್ನು ಗಮನಿಸಿ (ನಡುವೆ ಆ ೞ ರಕಾರವಾಗಿ ಅನಂತರ ಳ ಆಗಿದೆ ಎಂದೂ ತಿಳಿಯಲಾಗಿದೆ.) ಜನ ಯಾವುದೋ ಕಾರಣಕ್ಕೆ ಈ ಉಚ್ಚಾರಣೆಯ ಬದಲಾವಣೆಯನ್ನು ಮಾಡಿಕೊಂಡರು. ಆದರೆ ಅದನ್ನು ಒಪ್ಪದೇ ಜನರು ಮೊದಲಿನಂತೆಯೇ ೞವನ್ನೇ ಉಚ್ಚರಿಸಬೇಕೆಂದು ಒತ್ತಾಯಿಸುವುದೂ ನಡೆದಿತ್ತು. ಬದಲಾವಣೆ ಹೇಗೋ ನಡೆದು ಹೋಯಿತು. ಅಲ್ಲದೆ ಇಂತಹ ಎಷ್ಟೋ ತಂತಾನೇ ನಡೆಯುವ ಬದಲಾವಣೆಗಳನ್ನು ಅವು ನಡೆದ ಮೇಲೆ ಮಾತ್ರ ಗುರುತಿಸಿ ವಿವರಿಸಲು ಬರುತ್ತದೆ. ಹೀಗಾಗಿ ಅವುಗಳನ್ನು ನಿಯೋಜಿತ ಭಾಷಾಭಿವೃದ್ಧಿ ಚಟುವಟಿಕೆಗಳೆಂದು ಚರ್ಚಿಸಲು ಆಗುವುದಿಲ್ಲ. ಅವುಗಳನ್ನು ಭಾಷಾ ಚರಿತ್ರಕಾರರು ವಿವರವಾಗಿ ಗಮನಿಸುತ್ತಾರೆ. ಆದರೆ ಯಾವ ಬದಲಾವಣೆಗಳನ್ನು ಒಂದು ಕಾರ್ಯಕ್ರಮದ ಮೂಲಕ ಯೋಜಿತವಾಗಿ ಜಾರಿಗೆ ಕೊಡಲಾಗುವುದೋ ಅಂತಹ ಬದಲಾವಣೆಗಳನ್ನು ಮಾತ್ರ ಭಾಷಾಭಿವೃದ್ಧಿ ಎಂಬ ಪರಿಕಲ್ಪನೆಯಲ್ಲಿ ಸೇರಿಸಿಕೊಂಡು ಚರ್ಚಿಸಲಾಗುತ್ತದೆ.

ಸಾಮಾನ್ಯವಾಗಿ ಭಾಷಾಯೋಜನೆಗಳನ್ನು ಮೂರು ನೆಲೆಗಳಲ್ಲಿ ರೂಪಿಸುತ್ತಾರೆ. 1. ಪರಿಕರಗಳ ಸಿದ್ಧತೆಯ ನೆಲೆ 2. ಸ್ಥಾನಮಾನಗಳ ನಿರ್ಣಯದ ನೆಲೆ ಮತ್ತು 3. ಕಲಿಕೆಯ ಸ್ವರೂಪವನ್ನು ನಿರ್ಧರಿಸುವ ನೆಲೆ. ಈ ಮೂರು ನೆಲೆಗಳಲ್ಲಿ ಭಾಷಾ

ಯೋಜನೆಯನ್ನು ರೂಪಿಸಿ ಜಾರಿಗೆ ಕೊಡುವ ಹೊಣೆಯನ್ನು ಸಾಮಾನ್ಯವಾಗಿ ಆಡಳಿತ ನಡೆಸುವ ಸರಕಾರವೇ ಮಾಡುತ್ತದೆ ಅಥವಾ ಸರಕಾರ ನಿಯೋಜಿಸಿದ ಸಂಸ್ಥೆಗಳು ಮಾಡುತ್ತಿರುತ್ತವೆ. ಕೆಲವೊಮ್ಮೆ ಹೀಗೆ ಸರಕಾರದಿಂದ ನಿಯೋಜಿತವಾಗದಿದ್ದರೂ ಬೇರೆ ಬೇರೆ ಸಂಸ್ಥೆಗಳು ಮಾಡಿದ ಯೋಜನೆಗಳಿಗೆ ಸರಕಾರ ಮನ್ನಣೆ ನೀಡುವುದೂ ಉಂಟು. ಹೀಗಾಗಿ ಭಾಷಾ ಯೋಜನೆಯೊಂದು ಸಾಮೂಹಿಕ ಪ್ರಯತ್ನ, ಪರಿಕರಗಳ ಸಿದ್ಧತೆಯ ನೆಲೆಯಲ್ಲಿ ಭಾಷೆಯನ್ನು ಬಳಸುವವರಿಗೆ ಅನುಕೂಲವಾಗುವ ಬಗೆಬಗೆಯ ಸಾಮಗ್ರಿಗಳನ್ನು ಸಿದ್ಧ ಪಡಿಸಲಾಗುತ್ತದೆ. ಇದರಲ್ಲಿ ಭಾಷಿಕ ಸಾಮಗ್ರಿಗಳಿರುವಂತೆ ಭಾಷೇತರ ಸಾಮಗ್ರಿಗಳು ಇರುತ್ತವೆ. ಲಿಪಿ ಇಲ್ಲದ ಭಾಷೆಗಳಿಗೆ ಹೊಸ ಲಿಪಿಯೊಂದನ್ನು ರೂಪಿಸಿದರೆ ಅಥವಾ ಬಳಕೆಯಲ್ಲಿರುವ ಬೇರೊಂದು ಲಿಪಿಯನ್ನು ಸೂಕ್ತ ಬದಲಾವಣೆಗಳೊಂದಿಗೆ ಬಳಕೆಗೆ ತರಲು ಒಪ್ಪಿಕೊಂಡರೆ ಅದು ಭಾಷಾ ಪರಿಕರ ಯೋಜನೆಯ ಒಂದು ಭಾಗವಾಗುತ್ತದೆ. ಸ್ಥಾನಮಾನಗಳ ನಿರ್ಣಯದ ನೆಲೆಯಲ್ಲಿ ಸರಕಾರದ ನೀತಿನಿರೂಪಣೆಗಳು ಹೆಚ್ಚು ಪ್ರಭಾವಶಾಲಿಯಾಗಿ ಕೆಲಸ ಮಾಡುತ್ತವೆ. ಕೆಲವು ನಿರ್ಣಯಗಳು ಕ್ಲುಪ್ತಕಾಲದಲ್ಲಿ ಜಾರಿಗೆ ಬರುವಂತಿದ್ದರೆ ಮತ್ತೆ ಕೆಲವು ದೂರಗಾಮಿ ಪರಿಣಾಮವನ್ನು ಹೊಂದಿರುತ್ತವೆ. ಬಹುಭಾಷೆಗಳ ಪರಿಸರದಲ್ಲಿ ಸ್ಥಾನಮಾನಗಳ ನಿರ್ಣಯ ಹೆಚ್ಚು ಜಾಗರೂಕತೆಯಿಂದ ಮತ್ತು ಜವಾಬ್ದಾರಿಯಿಂದ ಮಾಡಬೇಕಾದ ಕೆಲಸ. ಕಲಿಕೆಯ ಸ್ವರೂಪವನ್ನು ನಿರ್ಧರಿಸುವ ನೆಲೆಯ ಯೋಜನೆಗಳು ಮೊದಲೆರಡು ನೆಲೆಗಳ ಮೂಲಕವೇ ತನ್ನ ಲಕ್ಷಣಗಳನ್ನು ಪಡೆದುಕೊಳ್ಳುತ್ತವೆ. ಕಲಿಕೆ ಎಂದಾಗ ಭಾಷಾ ಕಲಿಕೆ ಮತ್ತು ಕಲಿಕೆಯಲ್ಲಿ ಭಾಷೆ ಎಂಬ ಎರಡೂ ನೆಲೆಗಳನ್ನು ಗಮನಿಸಬೇಕು.

ಭಾಷಾಭಿವೃದ್ಧಿಗಾಗಿ ಹೀಗೆ ಯೋಜನೆಗಳನ್ನು ರೂಪಿಸಿ ಜಾರಿಗೆ ಕೊಡುತ್ತಿದ್ದರೂ ಮೊದಲೇ ಹೇಳಿದಂತೆ ಭಾಷಾ ಸಮುದಾಯಗಳಲ್ಲಿ ತಂತಾನೆ ನಡೆಯುತ್ತಿರುವ ಬದಲಾವಣೆಗಳು ಕೆಲವು ಇರುತ್ತವೆ. ಈ ಎರಡೂ ಪ್ರವೃತ್ತಿಗಳು ಯಾವಾಗಲೂ ಪೂರಕವೇ ಆಗಿರುತ್ತವೆ ಎನ್ನುವಂತಿಲ್ಲ. ಒಂದು ಇನ್ನೊಂದಕ್ಕೆ ಪೂರಕವಾಗಿದ್ದಾಗ ಪರಿಣಾಮಕಾರಿಯಾಗಿರುತ್ತವೆ. ಆದರೆ ಒಂದು ಇನ್ನೊಂದರ ಉದ್ದೇಶ ಗುರಿಗಳನ್ನು ವಿರೋಧಿಸುವ ರೀತಿಯಲ್ಲಿ ಇರುವುದು ಅಸಹಜವೇನಲ್ಲ. ಆಗ ಒಂದರ ಪರಿಣಾಮವನ್ನು ಇನ್ನೊಂದು ಕುಗ್ಗಿಸುತ್ತಿರುತ್ತವೆ. ಅದರಲ್ಲೂ ತಂತಾನೇ ನಡೆಯುವ ಬದಲಾವಣೆಗಳು ಭಾಷಾ ಯೋಜನೆಯಿಂದ ಪ್ರೇರಿತವಾದ ಬದಲಾವಣೆಗಳಿಗೆ ತೊಡರುಗಾಲು ಗಳಾಗುತ್ತಿರುವುದು ಹೆಚ್ಚು ಸಂಭವನೀಯ. ಇದಕ್ಕೆ ಸಾಮಾಜಿಕವಾದ ಕಾರಣಗಳು ಇರುತ್ತವೆ. ಭಾಷಾಯೋಜಕರು ಈ ಸಾಮಾಜಿಕ ಕಾರಣಗಳನ್ನು ಗುರುತಿಸಿಕೊಳ್ಳುವುದು ಅಗತ್ಯ. ಅದಕ್ಕನುಗುಣವಾಗಿ ಸಾಮಾಜಿಕ ನೆಲೆಯ ಬದಲಾವಣೆಗಳನ್ನು ತಂದ ಹೊರತು ಭಾಷಾಯೋಜನೆಗಳಿಗೆ ಪರೋಕ್ಷವಾಗಿ ತೊಡರುಗಾಲುಗಳಾಗಿ ಉಳಿಯುವ ಸಾಮಾಜಿಕ ಕಾರಣಗಳು ಪ್ರಭಾವ ಬೀರುತ್ತಲೇ ಇರುತ್ತವೆ.

ಭಾಷಾಭಿವೃದ್ಧಿ ಕೇವಲ ಭಾಷಾ ಕೇಂದ್ರಿತ ಚಟುವಟಿಕೆಯಲ್ಲ ಎನ್ನುವುದು ಮೇಲಿನ ವಿವರಣೆಯಿಂದ ಗೊತ್ತಾಗುತ್ತದೆ. ಅದರಲ್ಲೂ ಕಳೆದ ಒಂದೂವರೆ ಶತಮಾನದಿಂದ ಸಮುದಾಯಗಳ ಚಹರೆಗಳನ್ನು ಗುರುತಿಸುವಾಗ ಚಾಲನೆಗೆ ಬರುವ ಅಂಶಗಳಲ್ಲಿ ಭಾಷಿಕ ಐಡೆಂಟಿಟಿಯೂ ಮುಖ್ಯವಾಗಿದೆ. ಅಂದರೆ ಸಮುದಾಯಗಳೂ ತಮ್ಮ

ಪ್ರತ್ಯೇಕತೆಯನ್ನು ಸ್ಥಾಪಿಸುವಾಗ ತಮ್ಮ ಭಾಷೆಯ ಚಹರೆಗಳನ್ನು ಪಟ್ಟಿಮಾಡುತ್ತಾರೆ. ಇದು ಅವರ ಆಯ್ಕೆಯಾಗಿರುವಂತೆ ಅವರ ಪರಿಸರದ ಒತ್ತಾಯಗಳು ಆಗಿರುತ್ತವೆ. ಈ ಕಾರಣದಿಂದಾಗಿ ಭಾಷಾಭಿವೃದ್ಧಿಯನ್ನು ಗುರಿಮಾಡಿಕೊಂಡ ಭಾಷಾಯೋಜನೆಯ ನೆಲೆಗಳೂ ಮತ್ತಷ್ಟು ಸೂಕ್ಷ್ಮವಾಗುತ್ತಾ ಹೋಗುತ್ತವೆ. ಜಗತ್ತಿನಾದ್ಯಂತ ಈ ಇಕ್ಕಟ್ಟು ದಶಕಗಳು ಕಳೆದಂತೆ ಹೆಚ್ಚಾಗುತ್ತಾ ಹೋಗುತ್ತಿದೆ.

ಕನ್ನಡದಲ್ಲಿ ಭಾಷಾಭಿವೃದ್ಧಿಯ ಚಾರಿತ್ರಿಕ ನೆಲೆಗಳು

ಶ್ರೀ ವಿಜಯ 'ಕವಿರಾಜಮಾರ್ಗ' ಕೃತಿಯನ್ನು ರಚಿಸಿದ್ದು ಒಂಬತ್ತನೆಯ ಶತಮಾನದಲ್ಲಿ. ಆ ಕೃತಿಯಲ್ಲೇ ಕನ್ನಡ ಭಾಷಾಭಿವೃದ್ಧಿಯ ಮೊದಲ ಹೆಜ್ಜೆಗಳು ಕಾಣತೊಡಗುತ್ತವೆ. ಅದು ರಾಜಾಸ್ಥಾನದಲ್ಲಿ, ರಾಜಾನುಮತಿಯನ್ನು ಪಡೆದು ರಚನೆಯಾದ ಕೃತಿ. ಅದರಲ್ಲಿ ಕನ್ನಡ ಭಾಷೆಯ ಸ್ವರೂಪದ ಬಗ್ಗೆ ವಿವರಗಳಿರುವಂತೆ ಅದರ ಲಕ್ಷಣಗಳನ್ನು ನಿರ್ದೇಶಿಸುವ ವಿವರಗಳೂ ಇವೆ. ಹಲವು ಪರ್ಯಾಯಗಳಲ್ಲಿ ಪ್ರಮಾಣ ಬದ್ಧವಾದ ಮಾದರಿಯನ್ನು ಆಯ್ದುಕೊಳ್ಳುವ ಆಸಕ್ತಿಯಿದೆ. ಕನ್ನಡ ಮಾತನಾಡುವ ಹಲವು ಪ್ರದೇಶಗಳಲ್ಲಿ ನಿರ್ದಿಷ್ಟ ಭೌಗೋಳಿಕ ಚೌಕಟ್ಟಿನ ಭಾಗದಲ್ಲಿ ಆಡುವ ಕನ್ನಡವನ್ನು ತಿರುಳುಗನ್ನಡವೆಂದು ಸೂಚಿಸುವಲ್ಲಿ ಈ ಆಯ್ಕೆ ಮಂಡಿತವಾಗಿದೆ. ಶ್ರೀ ವಿಜಯನನ್ನು ಕನ್ನಡ ಭಾಷೆಯನ್ನು ಕುರಿತು ಮೊದಲ ಯೋಜಕನೆಂದು ನಾವು ಹೇಳುವಾಗ ಇಂದಿನ ಅರ್ಥದಲ್ಲಿ ಭಾಷಾ ಯೋಜನೆಯ ನೆಲೆಗಳನ್ನು ನಾವು ಆ ಶತಮಾನಗಳಿಗೆ ಆರೋಪಿಸಬಾರದು. ಆದರೆ ಕನ್ನಡದ ಹಲವು ಪ್ರಭೇದಗಳಲ್ಲಿ ಒಂದನ್ನು ಅಧಿಕೃತಗೊಳಿಸುವ ಮೂಲಕ ಮತ್ತು ಅದಕ್ಕೆ ರಾಜಾಸ್ಥಾನದಲ್ಲಿ ಮನ್ನಣೆಯನ್ನು ನೀಡುವ ಮೂಲಕ ಆತ ಭಾಷಾಭಿವೃದ್ಧಿಯ ಬೀಜಗಳನ್ನು ನೆಟ್ಟಿದ್ದಾನೆಂದು ತಿಳಿಯಲು ಅಡ್ಡಿಯಿಲ್ಲ.

ಅನಂತರ ಕಾಲದಿಂದ ಕಾಲಕ್ಕೆ ಬಂದ ಕನ್ನಡ ವೈಯಾಕರಣಿಗಳು ಕನ್ನಡ ಭಾಷೆಯ ಯಾವ ನಿಟ್ಟಿನಲ್ಲಿ ತನ್ನ ಚಹರೆಗಳನ್ನು ರೂಪಿಸಿಕೊಳ್ಳಬೇಕು ಎಂಬ ಬಗೆಗೆ ತಮ್ಮ ನಿರ್ದೇಶನಗಳನ್ನು ನೀಡಿದ್ದಾರೆ. ಅವರು ನೀಡಿದ ನಿರ್ದೇಶನಗಳೆಲ್ಲವೂ ಭಾಷಾ ಸಮುದಾಯದಿಂದ ಪಾಲಿತವಾಗಿದೆ ಎಂದು ಹೇಳಲು ಬರುವುದಿಲ್ಲ. ಈ ಮೊದಲೇ ಹೇಳಿದಂತೆ ಭಾಷಾ ಯೋಜನೆಗಳ ದಿಕ್ಕುಗಳಲ್ಲಿ ನಡೆಯುವ ಪರಿವರ್ತನೆಗಳಿಗೂ ಭಾಷೆಯಲ್ಲಿ ತಂತಾನೇ ನಡೆಯುತ್ತಿರುವ ಬದಲಾವಣೆಗಳಿಗೂ ಪರಸ್ಪರ ಮುಖಾಮುಖಿಯಾಗುವುದು ಸತ್ಯ. ಆಗ ಯೋಜಿತ ಭಾಷಾಭಿವೃದ್ಧಿಯ ಗತಿಗೆ ಅಡ್ಡಿ ಆತಂಕಗಳು ಒದಗುತ್ತವೆ. ಕನ್ನಡದ ಮಟ್ಟಿಗೂ ಈ ಮಾತು ನಿಜ.

ಮೊದಲಿಗೆ ಸಂಸ್ಕೃತ, ಪ್ರಾಕೃತಗಳು ಅನಂತರದಲ್ಲಿ ಉರ್ದು (ಪರ್ಶಿಯನ್ – ಅರಾಬಿಕ್) ಮತ್ತು ಇಂಗ್ಲಿಷ್ ಭಾಷೆಗಳ ಸಂಪರ್ಕಕ್ಕೆ ಬಂದ ಕಾರಣದಿಂದಾಗಿ ಕನ್ನಡ ಭಾಷೆಯ ಬೆಳವಣಿಗೆಯ ಗತಿಯಲ್ಲೂ ಹಲವು ತಿರುವುಗಳು ಬಂದಿವೆ. ಸಂಸ್ಕೃತ, ಪ್ರಾಕೃತಗಳು ರಾಜಾಸ್ಥಾನಗಳ ಭಾಷೆಯಾಗಿದ್ದ ಹಂತದಿಂದ ಕನ್ನಡವೇ ಆಡಳಿತದ ಭಾಷೆಯಾಗಿ ಬಳಕೆಯಾಗತೊಡಗಿತು. ಹಲವು ಶತಮಾನಗಳ ಕಾಲ ಈ ಸ್ಥಾನಮಾನವನ್ನು ಹೊಂದಿದ್ದ ಕನ್ನಡ, ಮಧ್ಯಕಾಲೀನ ಚರಿತ್ರೆಯ ಉತ್ತರಾರ್ಧದಲ್ಲಿ ಉರ್ದುವಿಗೆ ತನ್ನ ಜಾಗವನ್ನು ಬಿಟ್ಟುಕೊಡಬೇಕಾಯಿತು. ಕನ್ನಡ ಮಾತಾಡುವ ಕೆಲವು ಪ್ರದೇಶಗಳಲ್ಲಿ ಈ

ಸ್ಥಾನ ಮರಾಠಿಗೂ ದೊರಕಿದ್ದೂ ಉಂಟು. ಅನಂತರ ಈ ಜಾಗಕ್ಕೆ ಇಂಗ್ಲಿಷ್ ಬಂದು ಸ್ಥಾಪಿತವಾಯಿತು. ಅದನ್ನು ಅಲ್ಲಿಂದ ಇಡಿಯಾಗಿ ಅಲುಗಾಡಿಸುವುದು ಈಗಲೂ ಸಾಧ್ಯವಾಗಿಲ್ಲ.

ಪರಿಕರಗಳ ಸಿದ್ಧತೆಯ ನೆಲೆಯಲ್ಲಿ ಹತ್ತೊಂಬತ್ತನೆಯ ಶತಮಾನದಲ್ಲಿ ಕೆಲವು ಮುಖ್ಯ ಹೆಜ್ಜೆಗಳನ್ನು ಇರಿಸಿರುವುದು ಗೊತ್ತಾಗುತ್ತದೆ. ಇದಕ್ಕೆ ತಂತ್ರಜ್ಞಾನದ ಅವಿಷ್ಕಾರಗಳು ಕಾರಣ. ಉದಾಹರಣೆಗೆ ಮುದ್ರಣದ ಸೌಲಭ್ಯ ದೊರಕಿದ್ದರಿಂದ ಕನ್ನಡದ ಬರವಣಿಗೆ ಮೊದಲು ಸೀಮಿತ ಸಂಖ್ಯೆಯ ಪ್ರತಿಗಳಿಗೆ ಬದ್ಧವಾಗಿದ್ದುದು, ಈಗ ಹೆಚ್ಚು ಪ್ರತಿಗಳಲ್ಲಿ ಪ್ರಕಟವಾಗುವುದು ಸಾಧ್ಯವಾಯಿತು. ಆಸಕ್ತರಾಗಿರುವವರಿಗೆ, ಓದುವ ಕೌಶಲವುಳ್ಳವರಿಗೆ ಈಗ ಆ ಸಾಮಗ್ರಿ ಲಭಿಸತೊಡಗಿತು. ಇದರೊಡನೆ ಕನ್ನಡದಲ್ಲಿ ಪತ್ರಿಕೋದ್ಯಮದ ಮೊದಲ ಹೆಜ್ಜೆಗಳು ಮೊದಲಾದವು. ಇದಕ್ಕೂ ಮುದ್ರಣ ಸೌಲಭ್ಯಕ್ಕೂ ಸಂಬಂಧವಿದೆ ಎಂಬುದಷ್ಟೇ ಇಲ್ಲಿ ಮುಖ್ಯವಲ್ಲ. ಸುದ್ದಿಯ ಮೇಲೆ ಕೆಲವರಿಗೆ ಮಾತ್ರ ಇದ್ದ ಹಿಡಿತವನ್ನು ಪತ್ರಿಕೆಗಳು ತಪ್ಪಿಸಿದವು. ತಿಳುವಳಿಕೆಗೆ ಇದ್ದ ಮಿತಿಗಳು ಇಲ್ಲವಾದವು. ಅರಿವಿನ ವಿಸ್ತಾರಕ್ಕೆ ಈಗ ಅವಕಾಶಗಳು ಒದಗಿಬಂದವು. ಇದರೊಡನೆ ಕನ್ನಡ ಭಾಷೆಯ ಬರಹದ ರೂಪ ಹೇಗಿರಬೇಕೆಂಬ ಚರ್ಚೆಯೂ ಮೊದಲಾದಂತೆ ತೋರುತ್ತದೆ. ಹತ್ತೊಂಬತ್ತನೆಯ ಶತಮಾನದಲ್ಲಿ ಆರಂಭವಾದ ಈ ಚರ್ಚೆ ಹಲವು ನೆಲೆಗಳಲ್ಲಿ ಇಪ್ಪತ್ತನೆಯ ಶತಮಾನದಲ್ಲೂ ಮುಂದುವರೆದಿದೆ. ಆದರೆ ರಾಜಕೀಯ ಕಾರಣಗಳಿಂದ ಕನ್ನಡ ಮಾತನಾಡುವ ಜನರು ಇರುವ ಪ್ರದೇಶಗಳು ಬೇರೆಬೇರೆ ಆಡಳಿತಗಳಿಗೆ ಒಳಗಾಗಿದ್ದರಿಂದ ಕನ್ನಡ ಭಾಷಾಭಿವೃದ್ಧಿಯ ನೆಲೆಯ ಚಟುವಟಿಕೆಗಳು ಒಂದು ನಿರ್ದಿಷ್ಟ ಆಕಾರವನ್ನು ಪಡೆಯುವುದು ಸಾಧ್ಯವಾಗಲಿಲ್ಲ. ಉದಾಹರಣೆಗೆ ಕನ್ನಡದ ಆಧುನಿಕ ರೂಪವನ್ನು ಕರ್ನಾಟಕದ ಬೇರೆಬೇರೆ ಪ್ರದೇಶಗಳಲ್ಲಿ ಬೇರೆಬೇರೆ ರೀತಿಯಲ್ಲೇ ನಿರೂಪಿಸಿಕೊಂಡಂತೆ ತೋರುತ್ತದೆ. ನಡುಗನ್ನಡದ ಮುಂದುವರಿಕೆಯಂತೆ ತೋರುವ ಕನ್ನಡವೊಂದು ಹಳೆಯ ಮೈಸೂರು ಪ್ರದೇಶದಲ್ಲಿ ಆಕಾರ ಪಡೆಯುತ್ತಿದ್ದರೆ ಹಳಗನ್ನಡದ ರಾಚನಿಕ ಸಂಬಂಧವನ್ನು ಕಾಯ್ದುಕೊಂಡು ತದ್ಭವಗಳಿಂದ ತುಂಬಿದ ಕನ್ನಡ ಪ್ರಭೇದವೊಂದನ್ನು ಕರಾವಳಿ ಪ್ರದೇಶದಲ್ಲಿ ರೂಪಿಸಲಾಗುತ್ತಿತ್ತು. ಆಡುಮಾತಿನ ಸಂಬಂಧವೊಂದನ್ನು ಕಾಯ್ದುಕೊಂಡ ಇನ್ನೊಂದು ಪ್ರಭೇದ ಮುಂಬಯಿ ಪ್ರಾಂತದ ಕನ್ನಡ ನಾಡಿನಲ್ಲಿ ಬಳಕೆಯಾಗುತ್ತಿತ್ತು. ಇದರಿಂದ ನಮಗೆ ಗೊತ್ತಾಗುವ ಸಂಗತಿಯೆಂದರೆ ಭಾಷಾಯೋಜನೆಯ ನೆಲೆಗಳು ಸಡಿಲವಾಗಿ ಆಕಾರ ಪಡೆದಿದ್ದರೂ ಅವು ಪರಿಣಾಮಕಾರಿಯಾಗಿ ಮತ್ತು ಕನ್ನಡ ನಾಡಿಗೆಲ್ಲ ಒಂದೇ ರೀತಿಯಲ್ಲಿ ಜಾರಿಗೆ ಬರುವ ಸಾಧ್ಯವಾಗದಿದ್ದ ಪರಿಸ್ಥಿತಿಯೊಂದು ಆಗ ಪ್ರಚಲಿತವಾಗಿತ್ತು.

ಸ್ಥಾನಮಾನಗಳಿಗೆ ಸಂಬಂಧಿಸಿದ ನೆಲೆಯಲ್ಲೂ ಇದೇ ಸಮಸ್ಯೆ ಮುಂದುವರೆದಂತೆ ತೋರುತ್ತದೆ. ಕನ್ನಡ, ಜನ ಬಳಕೆಯ ಭಾಷೆಯಾಗಿದ್ದರೂ ಅದರ ಬಳಕೆಗೆ ಇದ್ದ ಮನ್ನಣೆ ಕಾಲದಲ್ಲಿ ಕಾಲಕ್ಕೆ ಬದಲಾಗುತ್ತಾ ಬಂದಿದೆ. ರಾಜಾಸ್ಥಾನಗಳು ಕನ್ನಡಕ್ಕೆ ಮನ್ನಣೆಯನ್ನು ನೀಡುವ ಮೂಲಕ ಅವುಗಳ ಬಳಕೆಗೆ ಒತ್ತಾಸೆಯಾಗಿ ನಿಂತಿವೆ. ಕನ್ನಡದ ಜೊತೆಗೆ ಕೆಲವೊಮ್ಮೆ ಸಂಸ್ಕೃತ, ಪ್ರಾಕೃತ, ಉರ್ದು ಮತ್ತು ಇಂಗ್ಲಿಷ್ ಆಳುವವರ ಮನ್ನಣೆಯನ್ನು ಗಳಿಸಿಕೊಂಡಿವೆ. ಹೀಗೆ ಕನ್ನಡದೊಡನೆ ಇನ್ನೊಂದು ಭಾಷೆಗೆ ಮನ್ನಣೆ

ಇರುವಾಗ ಅವುಗಳಲ್ಲಿ ಕನ್ನಡದ ಜಾಗ ಏನು ಎಂಬ ಪ್ರಶ್ನೆ ಮುಂಚೂಣಿಗೆ ಬಂದಿದೆ. ಕೆಲವು ವಲಯಗಳಿಗೆ ಕನ್ನಡ, ಮತ್ತೆ ಕೆಲವು ವಲಯಗಳಿಗೆ ಇನ್ನೊಂದು ಭಾಷೆ ಎನ್ನುವ ಕ್ರಿಯಾವಿಧಿಗೆ ಒಪ್ಪಿಗೆ ದೊರೆತಾಗ ಕೆಲವು ಸಮಸ್ಯೆಗಳು ಉಂಟಾಗಿವೆ. ಉದಾಹರಣೆಗೆ ಅಧಿಕೃತ ದಾಖಲೆಗಳು ಉರ್ದು ಇಲ್ಲವೇ ಇಂಗ್ಲಿಶ್ ಭಾಷೆಯಲ್ಲಿ ಇರುವ ಪ್ರವೃತ್ತಿ ಮೈಸೂರು ಪ್ರಾಂತ್ಯದಲ್ಲಿ ಜಾರಿಯಲ್ಲಿತ್ತು. ಕನ್ನಡದಲ್ಲಿ ದಾಖಲೆಗಳು ದೊರೆತರೂ ಅವುಗಳ ಸ್ವರೂಪ ಮಾತ್ರ ಗೌಣ. ರಾಜ್ಯಾಡಳಿತ ಅನ್ಯಭಾಷೆಯನ್ನು ತನ್ನ ಅಧಿಕೃತ ವ್ಯಾವಹಾರಿಕ ಭಾಷೆಯನ್ನಾಗಿ ಇರಿಸಿಕೊಂಡಿತ್ತು. ಇದು ಕನ್ನಡದ ಅವಕಾಶಗಳನ್ನು ಕಡಿಮೆ ಮಾಡಿದ್ದು ಮಾತ್ರವಲ್ಲ. ಬೇರೆ ರೀತಿಯ ಪರಿಣಾಮಗಳೂ ಇದರಿಂದ ಉಂಟಾದವು. ಕನ್ನಡದ ಜತೆಗೆ ಅಧಿಕೃತ ಮನ್ನಣೆಯ ಭಾಷೆಗಳನ್ನು ಕಲಿಯುವ ಸಂದರ್ಭಗಳು ರೂಪುಗೊಂಡವು. ಹತ್ತೊಂಬತ್ತನೆಯ ಶತಮಾನದಲ್ಲಿ ಇಂಗ್ಲಿಶ್ ಕಲಿಕೆಯ ಒತ್ತಡಗಳೂ ಮೂಡಿದ್ದು ಹೀಗೆಯೇ ತಾನೆ. ಆ ಒತ್ತಡಗಳು ಇನ್ನೂ ಮುಂದುವರೆದಿವೆ.

ಏಕೀಕರಣದ ಸಂದರ್ಭದ ಕನ್ನಡ ಸ್ವರೂಪ.

ಈ ಹಿಂದೆ ಹೇಳಿದಂತೆ ಕನ್ನಡ ಹಲವು ಆಡಳಿತ ಪ್ರದೇಶಗಳಲ್ಲಿ ಹರಿದು ಹಂಚಿ ಹೋಗಿತ್ತು. ಈ ಪರಿಸ್ಥಿತಿಯಿಂದಾಗಿ ಕನ್ನಡ ಭಾಷಿಕರ ನಡುವೆ ವ್ಯವಹಾರಿಕ ಸಂಬಂಧ ಕನಿಷ್ಟ ಪ್ರಮಾಣದಲ್ಲಿ ನಡೆಯುತ್ತಿತ್ತು. ದೈನಂದಿನ ವ್ಯವಹಾರಗಳಲ್ಲಿ ಭಾಷಿಕ ಕೊಡುಗೆಗಳು ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತಿದ್ದುದು ಕಡಿಮೆ. ಇಡೀ ಕನ್ನಡ ಪ್ರದೇಶವನ್ನು ಸಾಂಸ್ಕೃತಿಕವಾಗಿ ಒಂದುಗೂಡಿಸಲು ಕನ್ನಡ ಸಾಹಿತ್ಯ ಪರಿಷತ್ ಪ್ರಯತ್ನಿಸಿತ್ತು. (ಈ ಸಂಸ್ಥೆಯ ಮೊದಲ ಹೆಸರು ಕರ್ನಾಟಕ ಸಾಹಿತ್ಯ ಪರಿಷತ್ತು ಎಂದಿತ್ತು. ಅನಂತರದಲ್ಲಿ ಅದು ಕರ್ಣಾಟಕವೋ ಕರ್ನಾಟಕವೋ ಎಂಬ ವಿವಾದ ಮೊದಲಾಗಿ ಕೊನೆಗೆ ಅದರ ಹೆಸರು ಕನ್ನಡ ಸಾಹಿತ್ಯ ಪರಿಷತ್ತು ಎಂದಾಯಿತು. ದೇಶವಾಚಿಯಾಗಿದ್ದ ಹೆಸರು ಭಾಷಾವಾಚಿಯಾಗಿ ಬದಲಾದದ್ದು ಆಕಸ್ಮಿಕವಿರಲಾರದು). ತನ್ನ ವಾರ್ಷಿಕ ಸಾಹಿತ್ಯ ಸಮ್ಮೇಳನಗಳ ಮೂಲಕ ಜನರು ಒಂಡೆದೆ ಸೇರುವಂತೆ ಏರ್ಪಾಡು ಮಾಡುತ್ತಿತ್ತು. ಭಾಷಿಕ ಕೊಡುಗೆಗಳ ದೃಷ್ಟಿಯಿಂದ ಈ ಸಮ್ಮೇಳನಗಳ ಪ್ರಭಾವ ಹೆಚ್ಚೇನು ಇದ್ದಿರಲಾರದು. ಬಹುಮಟ್ಟಿಗೆ ಅಭಿಮಾನವನ್ನು ಹುಟ್ಟಿರುವ ಕೆಲಸಕ್ಕೆ ಮಾತ್ರ ಅವು ಸೀಮಿತವಾಗಿರಬಹುದು. ಈ ಸಮ್ಮೇಳನಗಳ ಅಧ್ಯಕ್ಷರು ಮಾಡಿದ ಭಾಷಣಗಳ ಮುಖ್ಯ ಸಾಂಸ್ಕೃತಿಕ ದಾಖಲೆಗಳಾಗಿವೆ.

ಇದಲ್ಲದೇ ಶೈಕ್ಷಣಿಕ ವಾಣಿಜ್ಯ ಮತ್ತು ಆಡಳಿತ ಈ ನೆಲೆಗಳಲ್ಲಿಯೂ ವಿವಿಧ ಕನ್ನಡ ಪ್ರದೇಶಗಳ ನಡುವೆ ಸಂವಾದ ಸಾಧ್ಯವಿರಲಿಲ್ಲ. ಸಾಹಿತ್ಯ ಕೃತಿಗಳು ಒಂದು ನೆಲೆಯಲ್ಲಿ ಈ ಎಲ್ಲಾ ಕಟ್ಟುಪಾಡುಗಳನ್ನು ಮೀರಲು ಯತ್ನಿಸಿದವು. ಆದರೂ ಕನ್ನಡದ ವಿವಿಧ ಪ್ರಭೇದಗಳು ಎಲ್ಲಾ ಪ್ರದೇಶಗಳಲ್ಲೂ ಗಣನೆಗೆ ಬರುವಷ್ಟು ವ್ಯಾಪಕ ನೆಲೆಗಳು ರೂಪುಗೊಳ್ಳಲಿಲ್ಲ. ಎಲ್ಲಾ ಕನ್ನಡ ಪ್ರದೇಶಗಳನ್ನು ವ್ಯಾಪಿಸುವ ಸಮೂಹ ಮಾಧ್ಯಮಗಳು ಇರಲಿಲ್ಲ. ಇದಕ್ಕೆ ಚಲನಚಿತ್ರ ಮತ್ತು ವೃತ್ತಿ ರಂಗಭೂಮಿಯ ನಾಟಕಗಳು ವಿನಾಯತಿಯಾಗಿವೆ. ಅಖಿಲ ಕರ್ನಾಟಕ ವ್ಯಾಪ್ತಿಯ ಪತ್ರಿಕೆಗಳಾಗಲಿ. ಬಾನುಲಿಯಾಗಲಿ ಆಗ ಇರಲಿಲ್ಲ. ವಾಕ್ ಚಿತ್ರಗಳು ಸಾಕಷ್ಟು ಪ್ರಮಾಣದಲ್ಲಿ ಏಕೀಕರಣ ಹೊತ್ತಿಗೆ ಕರ್ನಾಟಕದ ಎಲ್ಲಾ ಪ್ರದೇಶಗಳಿಗೂ ವ್ಯಾಪಿಸಿದ್ದವು. ಹಾಗೆ ನೋಡಿದರೆ ಕರ್ನಾಟಕ

ಏಕೀಕರಣಗೊಂಡ ಮೇಲೆ ಅದರ ಭೌಗೋಳಿಕ ಚಹರೆಯನ್ನು ಸೂಚಿಸುವ ಭೂಪಟವೊಂದು ಮೊದಲು ಕನ್ನಡಿಗರಿಗೆ ಕಾಣಿಸಿದ್ದು ಒಂದು ಚಲನಚಿತ್ರದಲ್ಲಿ ಎಂಬುದನ್ನು ಗಮನಿಸಬೇಕು. 1958ರ ಸ್ಕೂಲ್ ಮಾಸ್ಟರ್ ಚಲನಚಿತ್ರದಲ್ಲಿ ಹಳ್ಳಿಯ ಶಾಲೆಯ ಗೋಡೆಯ ಮೇಲೆ ಒಂದು ಕರ್ನಾಟಕದ ಭೂಪಟ ಕಾಣಿಸುತ್ತದೆ. ಹೀಗಿದ್ದರೂ ಚಲನಚಿತ್ರಗಳು ಬಳಸುತ್ತಿದ್ದ ಭಾಷೆ ಒಂದು ಬಗೆಯಲ್ಲಿ ಕನ್ನಡ ಮಾತಾಡುವ ಜನರೆಲ್ಲರಿಗೂ ಬಹುಮಟ್ಟಿಗೆ ಒಪ್ಪಿತವಾದ ಪ್ರಮಾಣ ಭಾಷೆಯಾಗಿತ್ತು. ಅದರಲ್ಲೂ ಹಲವು ಬಗೆಗಳಿದ್ದವು. ಕಲಿತ ನಗರದ ಜನ ಬಳಸುವ ಕನ್ನಡ ಒಂದು ಬಗೆಯದ್ದಾದರೆ ಕಲಿಯದ ಹಳ್ಳಿಯ ಜನರು ಬಳಸುವ ಕನ್ನಡ ಇನ್ನೊಂದು ಬಗೆಯದು. ಈ ಮಾದರಿಗಳನ್ನು ಚಿತ್ರಗಳು ಅಚ್ಚುಕಟ್ಟಾಗಿ ಬಳಸುತ್ತಾ ಬಂದವು.

ವೃತ್ತಿ ರಂಗಭೂಮಿಯ ನಾಟಕಗಳು ಒಂದು ರೀತಿಯಲ್ಲಿ ಅಖಿಲ ಕರ್ನಾಟಕ ವ್ಯಾಪ್ತಿಯನ್ನು ಪಡೆಯಲು ಆರಂಭಿಸಿದವು. ದಕ್ಷಿಣ ಕಂಪನಿಗಳು ತುಂಗಭದ್ರೆಯನ್ನು ದಾಟಿ ಎತ್ತರಕ್ಕೆ ಹೋಗುವುದು, ಉತ್ತರದ ಕಂಪನಿಗಳು ಆಗಾಗ ದಕ್ಷಿಣಕ್ಕೆ ಬರುವುದು ನಡೆದಿತ್ತು. ಇದು ಹೆಚ್ಚು ವ್ಯಾಪಕವಾಗಿ ನಡೆಯುತ್ತಿರಲಿಲ್ಲ. ಇದಕ್ಕೆ ಆರ್ಥಿಕ ಕಾರಣಗಳು ಇರುವಂತೆ ತೋರುತ್ತದೆ. ಹೊರತಾಗಿ ಆಯಾ ಕಂಪನಿಗಳು ತಮ್ಮ ನಾಟಕಗಳಲ್ಲಿ ಬಳಸುತ್ತಿದ್ದ ಭಾಷೆಯಲ್ಲಿ ಅಷ್ಟೇನು ವ್ಯತ್ಯಾಸಗಳು ಆಗ ಕಾಣಿಸುತ್ತಿರಲಿಲ್ಲ. ಶಿರಹಟ್ಟಿ ಕಂಪನಿ, ಕೊಣ್ಣೂರು ಕಂಪನಿ, ಗರುಡ ಸದಾಶಿವರಾವ್ ಕಂಪನಿ ನಟಿಸುತ್ತಿದ್ದ ನಾಟಕಗಳ ಭಾಷೆಗಳು ದಕ್ಷಿಣದ ರತ್ನಾವಳಿ ಕಂಪನಿ, ಮಹಮದ್ ಪೀರ್ ಅವರ ಕಂಪನಿ, ಹಿರಣ್ಣಯ್ಯನವರ ಕಂಪನಿ, ಗುಬ್ಬಿ ವೀರಣ್ಣನವರ ಕಂಪನಿಯ ನಾಟಕಗಳ ಭಾಷೆಗಳಲ್ಲಿ ಅಗಾಧ ವ್ಯತ್ಯಾಸಗಳೇನು ಇರಲಿಲ್ಲ. ಅಂದರೆ ಈ ನಾಟಕಗಳೆಲ್ಲ ನಾಟಕದ ಒಂದು ಮನ್ನಿತ ಶೈಲಿಯನ್ನೇ ಒಟ್ಟಾರೆ ಬಳಸುತ್ತಿದ್ದವು.

ಕರ್ನಾಟಕದ ಜನತೆಗೆ ಕೇಳಲು ಸಿಗುತ್ತಿದ್ದ ಈ ಪ್ರಮಾಣ ಕನ್ನಡ ಹೀಗೆಯೇ ಸಮೂಹ ಮಾಧ್ಯಮಗಳಾದ ಚಲನಚಿತ್ರ ಮತ್ತು ವೃತ್ತಿ ರಂಗಭೂಮಿಗಳಲ್ಲಿ ಬಳಕೆಯಾಗುತ್ತಿದೆ. ಉಳಿದಂತೆ ಈ ಭಾಷಾ ಪ್ರದೇಶಗಳು ಪರಸ್ಪರ ಭಾಷಿಕ ಸಂಪರ್ಕ ಇಲ್ಲದೇ ವ್ಯವಹರಿಸುತ್ತಿದ್ದವು. ಈ ಮೇಲಿನ ವಿವರಣೆಯು ಕರಾವಳಿ ಪ್ರದೇಶಕ್ಕೆ ಮತ್ತು ನಿಜಾಮರ ಆಡಳಿತಕ್ಕೆ ಒಳಪಟ್ಟ ಪ್ರದೇಶಕ್ಕೆ ಹೆಚ್ಚು ಅನ್ವಯಿಸುವುದಿಲ್ಲ. ಆ ಪ್ರದೇಶಗಳಂತೂ ಇನ್ನೂ ಕನ್ನಡದ ತೆಕ್ಕೆಗೆ ಬಂದಿರಲಿಲ್ಲ.

ಏಕೀಕರಣದ ಸಂದರ್ಭದಲ್ಲಿ ಹೀಗೆ ಇದ್ದ ಹಲವು ಕನ್ನಡಗಳ ಪರಿಸ್ಥಿತಿಯು ಬೀಚಿಯವರ ಏಕೀಕರಣ ಕುರಿತ ನಾಟಕದಲ್ಲಿ ಗೇಲಿಗೆ ಒಳಗಾಗಿದೆ. ವಿವಿಧ ಪ್ರದೇಶದ ಉಪಭಾಷೆಗಳನ್ನು ಆಡುವ ಜನರು ಕನ್ನಡ ಮಾತೆಯ ಪೂಜೆಗೆ ಬಂದಾಗ ಆಗುವ ಅವಾಂತರವನ್ನು ಆ ನಾಟಕ ಚಿತ್ರಿಸುತ್ತದೆ. ಹೀಗೆ ಕನ್ನಡದ ವಿವಿಧ ಪ್ರಭೇದಗಳು ಆಯಾ ಪ್ರದೇಶದ ಜನರ ಓರೆಕೋರೆಗಳನ್ನು ತಿಳಿಸಲು ಬಳಕೆಯಾದಂತೆ ಕಾಣುತ್ತದೆ. ಹಾಸ್ಯ ಪ್ರಸಂಗಗಳನ್ನು ರೂಪಿಸಲು ಭಾಷೆಯ ವಿವಿಧ ಬಗೆಯಲ್ಲಿ ಇರುವ ವ್ಯತ್ಯಾಸಗಳನ್ನು ಆ ಹೊತ್ತಿನ ಬರಹಗಾರರು ಬಳಸಿಕೊಂಡರು. ಈ ಪರಿಸ್ಥಿತಿಯಿಂದ ಇನ್ನೂ ನಾವು ಹೊರಬಂದಿಲ್ಲ.

ಕರ್ನಾಟಕ ರಾಜ್ಯ ನಿರ್ಮಿತಿಯ ಸಂದರ್ಭದಲ್ಲಿ ಅಂದಿನ ಆಡಳಿತ ವರ್ಗಕ್ಕೆ ಎದುರಾದ ಮುಖ್ಯ ಸವಾಲೆಂದರೆ, ಹೀಗೆ ಭಿನ್ನ ಹಿನ್ನೆಲೆಯ ಭಾಷಾ ಪ್ರದೇಶದ ಜನರನ್ನು ಒಂದು ಚೌಕಟ್ಟಿಗೆ ಹೇಗೆ ತರುವುದು ಎಂಬ ಪ್ರಶ್ನೆ. ರಾಜ್ಯಾಂಗದಲ್ಲಿ ಆಗ ಲಭ್ಯವಿದ್ದ ಅವಕಾಶವನ್ನು ಬಳಸಿಕೊಂಡು ಆ ಹೊತ್ತಿಗೆ ಇಂಗ್ಲಿಶನ್ನು ಆಡಳಿತ ಭಾಷೆಯಂದು ಬಳಸಲು ಒಪ್ಪಿಗೆ ನೀಡಿದರು. ಆದರೆ ಭಾಷಾವಾರು ಪ್ರಾಂತ್ಯ ರಚನೆಯ ಮೂಲ ತರ್ಕವೇ ಆಯಾ ಪ್ರಾಂತ್ಯದ ಭಾಷೆಗಳ ಬೆಳವಣಿಗೆ ಆಗಬೇಕು ಎಂದಿತ್ತು. ಆದ್ದರಿಂದ ಇಂಗ್ಲಿಶನ್ನೇ ಎಂದೆಂದೂ ಹೀಗೆ ಸಂಪರ್ಕ ಭಾಷೆಯಾಗಿ ರಾಜ್ಯದೊಳಗೆ ಬಳಸುವುದು ಸಾಧ್ಯವಿರಲಿಲ್ಲ. ಹಾಗೆಂದು ಕನ್ನಡವನ್ನು ತಟ್ಟನೇ ರಾಜ್ಯದ ಆಡಳಿತ ಭಾಷೆಯಾಗಿ ಉನ್ನತೀಕರಿಸುವುದು ಕೂಡ ಸಾಧ್ಯವಿರಲಿಲ್ಲ. ಅದಕ್ಕೆ ಸಾಂದರ್ಭಿಕ ಕಾರಣಗಳು ಹಲವಿದೆ. ಮುಖ್ಯವಾಗಿ ಮದ್ರಾಸ ಪ್ರೆಸಿಡೆನ್ಸಿಯಿಂದ ಈ ರಾಜ್ಯಕ್ಕೆ ಸೇರ್ಪಡೆಯಾದ ಮಂಗಳೂರು ಪ್ರದೇಶ ತುಳು ಪ್ರಧಾನವಾದ ನಾಡಾಗಿತ್ತು. ಅಲ್ಲಿ ಹಿಂದಿನಿಂದಲೂ ಕನ್ನಡ ಎರಡನೇ ಪ್ರಧಾನ ಭಾಷೆಯಾಗಿ ಬಳಕೆಯಾಗಿತ್ತು. ಆದರೂ ಕಲಿಕೆಯ ಪ್ರಮಾಣ ಕಡಿಮೆ ಇದ್ದ ಆ ಹೊತ್ತಿನಲ್ಲಿ ಕನ್ನಡವನ್ನು ಅಧಿಕೃತವಾಗಿ ಬರಹದಲ್ಲಿ ಬಳಸುವವರ ಸಂಖ್ಯೆ ಅಲ್ಲಿ ಹೆಚ್ಚಿರಲಿಲ್ಲ. 'ಸಿ' ರಾಜ್ಯವೆಂದು ಮನ್ನಣೆ ಪಡೆದಿದ್ದ ಕೊಡಗನ್ನು ಅದರ ಪ್ರತ್ಯೇಕತೆಯಿಂದ ಪಲ್ಲಟಗೊಳಿಸಿ ಕರ್ನಾಟದ ಭಾಗವನ್ನಾಗಿ ಮಾಡಲಾಯಿತು. ಇಲ್ಲಿ ಸುಮಾರು ಒಂಬತ್ತು ವರ್ಷಗಳ ಕಾಲ ಸ್ವತಂತ್ರ ಅಸೆಂಬ್ಲಿ ಇದ್ದು ಪ್ರತ್ಯೇಕ ಮಂತ್ರಿಮಂಡಲ ಆಡಳಿತ ನಡೆಸುತ್ತಿತ್ತು ಎಂಬುದನ್ನು ಇಲ್ಲಿ ಗಮನಿಸಬೇಕು. ಕರ್ನಾಟಕ ರಾಜ್ಯಕ್ಕೆ ಸೇರ್ಪಡೆಯಾಗುವುದು ಕೊಡವರ ಆಯ್ಕೆಯಾಗಿತ್ತೇ ಎಂಬುದು ಇಂದಿಗೂ ಬಿಡಿಸಲಾಗದ ಪ್ರಶ್ನೆ. ಈಗಲೂ ಕೊಡವರಲ್ಲಿ ಒಂದು ಸಮುದಾಯ ಕರ್ನಾಟಕದಿಂದ ಬೇರೆಯಾಗಿ ರಾಜ್ಯವೊಂದನ್ನು ಕಟ್ಟಿಕೊಳ್ಳಲು ಇಲ್ಲವೇ ಈ ರಾಜ್ಯದೊಳಗೇ ಸ್ವಾಯತ್ತ ಪ್ರದೇಶವಾಗಬೇಕೆಂದು. ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ತರುತ್ತಿದೆ. ಇನ್ನು ಮುಂಬೈ ಪ್ರೆಸಿಡೆನ್ಸಿಗೆ ಸೇರಿದ ವಾಯುವ್ಯ ಕರ್ನಾಟಕ ಭಾಗಗಳಲ್ಲಿ ಮರಾಠಿಯ ಪ್ರಾಬಲ್ಯವಿತ್ತು. ಜೊತೆಗೆ ಕೊಂಕಣಿ ಮತ್ತಿತರ ಭಾಷೆಗಳನ್ನಾಡುವ ಜನರು ಬೆಳಗಾವಿ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಈ ಪ್ರದೇಶದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಕನ್ನಡದ ಬಳಕೆ ನೆಲೆಗೊಂಡಿತ್ತು. ಆದರೆ ಆಡಳಿತಾತ್ಮಕವಾಗಿ ಅದು ಇನ್ನೂ ಮರಾಠಿಯ ಗುಂಗಿನಲ್ಲಿತ್ತು. ನಿಜಾಮರ ಆಳ್ವಿಕೆಯಲ್ಲಿದ್ದ ಪ್ರದೇಶಗಳಲ್ಲಿ ಉರ್ದು ಎಷ್ಟು ಪ್ರಬಲವಾಗಿತ್ತೆಂದರೆ ಅಲ್ಲಿ ಕಲಿಯುವವರೆಲ್ಲ ಉರ್ದುವಿನ ಮೂಲಕವೇ ಕಲಿಯಬೇಕಿತ್ತು. ಅಂದರೆ ಅಕ್ಷರಸ್ತರು ಕೂಡ ಕನ್ನಡವನ್ನು ಬರೆದು, ಓದುವ ಕೌಶಲ್ಯಗಳನ್ನು ಪಡೆಯುವುದು ಸಾಧ್ಯವಿರಲಿಲ್ಲ. ಇನ್ನು ಕಲಿಯದ ಅಸಂಖ್ಯಾತ ಕನ್ನಡಿಗರು ದ್ವಿಭಾಷಿಕರಾಗಿ ತಮ್ಮ ದೈನಂದಿನ ವ್ಯವಹಾರವನ್ನು ನಡೆಸುತ್ತಿದ್ದವರು. ಅವರಲ್ಲಿದ್ದ ಕೌಶಲಗಳು ಕನಿಷ್ಠ ಪ್ರಮಾಣದಲ್ಲಿ ಇದ್ದಂತೆ ತೋರುತ್ತದೆ.

ಇದಲ್ಲದೆ, ಇಡೀ ಕರ್ನಾಟಕ ಹಲವಾರು ದ್ವಿಭಾಷಿಕ ಸಮುದಾಯಗಳನ್ನು ಹೊಂದಿತ್ತು. ಈ ಸಮುದಾಯಗಳಲ್ಲಿ ಹೆಚ್ಚಿನವಕ್ಕೆ ಕನ್ನಡ ಎರಡನೇ ಭಾಷೆ. ಪೂರ್ವ ಗಡಿಭಾಗದುದ್ದಕ್ಕೂ ತೆಲುಗು-ಕನ್ನಡ, ವಾಯುವ್ಯ ಗಡಿಭಾಗದಲ್ಲಿ ಮರಾಠಿ- ಕನ್ನಡ, ಕೊಂಕಣಿ-ಕನ್ನಡ, ಕರಾವಳಿಯಲ್ಲಿ ತುಳು-ಕನ್ನಡ ಮಾತಾಡುವವರು ಇದ್ದರು. ನಾಡಿನ ಒಳಗೆ ಕೂಡಾ ಈ ದ್ವಿಭಾಷಿಕ ಸಮುದಾಯಗಳು ಬೇರೆ ಬೇರೆ ರೀತಿ ವ್ಯಾಪಿಸಿದ್ದವು.

ಮಧ್ಯ ಕರ್ನಾಟಕದಲ್ಲಿ ಮತ್ತು ದಕ್ಷಿಣದ ಕೆಲವು ಭಾಗಗಳಲ್ಲಿ ಉರ್ದು - ಕನ್ನಡ ಸಮುದಾಯವು ನೆಲೆಸಿತ್ತು. ಈ ಎಲ್ಲಾ ಸಂಗತಿಗಳಿಂದ ಕರ್ನಾಟಕದ ಚಿತ್ರ ಸ್ಪಷ್ಟಗೊಳ್ಳುತ್ತದೆ. ರಾಜಕೀಯ ನಿರ್ಧಾರದಿಂದ ಒಗ್ಗೂಡಿದ ಈ ಭೂಪ್ರದೇಶದ ಜನ ಸಮುದಾಯ 1) ಹಲವು ಭಾಷೆಗಳ ನಡುವೆ ಹಂಚಿ ಹೋಗಿತ್ತು. ಮತ್ತು 2) ಕನ್ನಡ ಮಾತಾಡುವವರೂ ಕೂಡಾ ಪರಸ್ಪರ ಸಂಪರ್ಕವಿಲ್ಲದೆ ಹಲವು ಉಪಭಾಷೆಗಳಲ್ಲಿ ತಮ್ಮ ವ್ಯವಹಾರವನ್ನು ನಡೆಸುತ್ತಿದ್ದರು.

ಅಲ್ಲಿಯವರೆಗಿನ ಆಡಳಿತಗಳಿಗೆ ಇದು ದೊಡ್ಡ ಸಮಸ್ಯೆಯಾಗಿಯೇ ಪರಿಣಮಿಸಲಿಲ್ಲ. ಏಕೆಂದರೆ ಆ ಆಡಳಿತ ವರ್ಗದ ತಾತ್ವಿಕತೆಯೂ ಜನಪರವಾದುದ್ದಾಗಿರಲಿಲ್ಲ. ಆಡಳಿತದ ವಿವಿಧ ಅಂಗಗಳು ಜನರಿಗೆ ಉತ್ತರದಾಯಿಯಾಗಿರಲಿಲ್ಲ. ಜನರ ಕೆಲವು ಪ್ರತಿನಿಧಿಗಳು ಅಥವಾ ಜನರನ್ನು ಪ್ರತಿನಿಧಿಸುತ್ತೇವೆ ಎಂದು ಹೇಳುವವರು ಆಡಳಿತದೊಡನೆ ಸಂಪರ್ಕ ಹೊಂದಿದ್ದರೆ ಸಾಕಾಗಿತ್ತು. ಅಂತಹವರು ತಾವು ಇಂಗ್ಲಿಶ್ ಮೂಲಕ ಈ ಕೆಲಸವನ್ನು ಮಾಡುತ್ತಿದ್ದರು. ಆದರೆ 1950ರ ಭಾರತ ಸಂವಿಧಾನ, ಪ್ರಜಾಪ್ರಭುತ್ವವನ್ನು ತನ್ನ ಆಯ್ಕೆಯ ಆಡಳಿತ ಮಾದರಿಯನ್ನಾಗಿ ಪ್ರತಿಪಾದಿಸಿತ್ತು. 1952ರಲ್ಲಿ ಮೊದಲ ಸಾರ್ವತ್ರಿಕ ಚುನಾವಣೆಗಳು ನಡೆದಿದ್ದವು. ಕೃಷಿಗೆ ಒತ್ತುಕೊಟ್ಟ ಮೊದಲ ಪಂಚವಾರ್ಷಿಕ ಯೋಜನೆ ಜಾರಿಗೆ ಬಂದಿತು. ಗ್ರಾಮೀಣ ನೆಲೆಯ ಆಡಳಿತ ಕೇಂದ್ರಗಳಾಗಿ ಪಂಚಾಯಿತಿಗಳು ಜಿಲ್ಲಾ ಬೋರ್ಡುಗಳು ನೆಲೆಗೊಂಡಿದ್ದವು. ಅಂದರೆ ತಾತ್ವಿಕವಾಗಿಯಾದರೂ ಆಡಳಿತ, ಜನರಿಗೆ ಉತ್ತರದಾಯಿಯಾಗಿತ್ತು. ರಾಜ್ಯಾಂಗವು ರಾಜ್ಯಗಳಿಗೆ ನೀಡಿದ್ದ ನಿರ್ದೇಶಕ ಸೂತ್ರಗಳಲ್ಲಿ ಶಿಕ್ಷಣ ಕೂಡಾ ಸೇರಿತು. ಅಂದರೆ ಎಲ್ಲಾ ರಾಜ್ಯಗಳು ತನ್ನ ವ್ಯಾಪ್ತಿಯ ಮಕ್ಕಳಿಗೆ ಗೊತ್ತಾದ ಅವಧಿಯವರೆಗೆ ಶಿಕ್ಷಣ ನೀಡುವುದು ಕಡ್ಡಾಯವೆಂದು ಸೂಚಿಸಲಾಗಿತ್ತು. ಈ ಎಲ್ಲಾ ಕಾರಣಗಳಿಂದ ಜನರ ಭಾಷೆ ಮತ್ತು ಸರ್ಕಾರದ ಭಾಷೆ ಬೇರೆ ಬೇರೆಯಾಗಿ ಉಳಿಯುವುದು ಸಾಧ್ಯವಿರಲಿಲ್ಲ. ಕರ್ನಾಟಕದಲ್ಲೂ ಕನ್ನಡವನ್ನು ಅದು ಯಾವ ಸ್ಥಿತಿಯಲ್ಲೇ ಇರಲಿ, ಆ ಸ್ಥಿತಿಯಿಂದ ಬೇರ್ಪಡಿಸಿ ಅದಕ್ಕೆ ಅಖಿಲ ಕರ್ನಾಟಕ ವ್ಯಾಪ್ತಿ ಮತ್ತು ಬಳಕೆಯ ಮನ್ನಣೆಯನ್ನು ತಂದು ಕೊಡುವುದು ಸರ್ಕಾರದ ಜವಾಬ್ದಾರಿಯಾಯಿತು.

ಸಾರ್ವತ್ರಿಕ ಶಿಕ್ಷಣ, ಸರಕಾರದ ಒಂದು ಕಾರ್ಯಕ್ರಮವಾಗಿ ರೂಪುಗೊಂಡಿದ್ದರಿಂದ ಮೊದಲ ಹಂತದಲ್ಲಿ ಇಡೀ ಕರ್ನಾಟಕದ ಪ್ರಾಥಮಿಕ ಶಾಲೆಗಳ ಪಠ್ಯದಲ್ಲಿ ಬಳಕೆಯಾಗುವ ಕನ್ನಡದಲ್ಲಿ ಒಂದು ಸಮಾನ ರೂಪವನ್ನು ತರುವುದು ಸರಕಾರದ ನೀತಿಯಾಯಿತು. ಕನ್ನಡದ ಮಟ್ಟಿಗೆ ಏಕೀಕರಣದ ಅಂತರದ ಸರಕಾರ ತೆಗೆದುಕೊಂಡ ಮೊದಲ ಪ್ರಮುಖ ನಿರ್ಧಾರವಾಗಿದೆ. ಇಡೀ ಕರ್ನಾಟಕದ ಎಲ್ಲಾ ಶಾಲೆಗಳಿಗೂ ಒಂದೇ ಬಗೆಯ ಪಾಠಕ್ರಮವನ್ನು ಮತ್ತು ಪಠ್ಯವಸ್ತುವನ್ನು ರೂಪಿಸಬೇಕೆಂದು ಸರಕಾರ ನಿರ್ಣಯಿಸಿತು. ಈ ನೀತಿಯ ಸರಿ ತಪ್ಪುಗಳೇನು ಅದನ್ನು, ಜಾರಿಗೆ ಕೊಡುವಾಗ ಆದ ಪರಿಣಾಮಗಳೇನು ಎಂಬುದು ಸದ್ಯ ನಮ್ಮ ಚರ್ಚೆಯ ವಿಷಯವಲ್ಲ. ಆದರೆ ತೆಗೆದುಕೊಂಡ ನಿರ್ಣಯ ಒಂದು ದೂರಗಾಮಿಯಾದ ಪರಿಣಾಮಗಳಿಗೆ ಕಾರಣವಾಯಿತು ಎಂಬುದನ್ನು ಮರೆಯುವಂತಿಲ್ಲ. ದಕ್ಷಿಣದ ತುದಿಯ ಕೊಳ್ಳೆಗಾಲದ ಶಾಲೆಯ ಮಗು ಓದುವ ಕನ್ನಡ ಪಠ್ಯವನ್ನೇ ಉತ್ತರದ ಔರಾದ್‌ನ ಶಾಲೆಯ ಮಗು ಕೂಡಾ ಓದಬೇಕಾದ ಪ್ರಸಂಗ ಎದುರಾಯಿತು.

ಕರ್ನಾಟಕ ಎಂಬ ಈ ರಾಜ್ಯ ನಿರ್ಮಾಣವಾದಾಗ ಇದ್ದ ಈ ಭಾಷಿಕ ಸ್ಥಿತಿಯನ್ನು ಬದಲಾಯಿಸುವುದು ಅತ್ಯಂತ ಮುಖ್ಯವಾದ ಹೊಣೆಯಾಗಿ ಸರಕಾರಕ್ಕೆ ಕಂಡಿತು. ಈ ಮೊದಲೇ ಹೇಳಿದಂತೆ ಭಾಷೆಯಲ್ಲಿ ನಡೆದ ಪರಿವರ್ತನೆಗಳು ಈ ಹಿಂದೆ ನಿರ್ದಿಷ್ಟ ಗುರಿಗಳನ್ನಾಗಲೀ, ಯೋಜಿತ ಕಾರ್ಯಕ್ರಮಗಳನ್ನಾಗಲಿ ಅನುಸರಿಸಿರಲಿಲ್ಲ. ಆದರೆ ಈಗ ಚುನಾಯಿತ ಸರಕಾರ ತನ್ನ ಸಾಮಾಜಿಕ ಹೊಣೆಗಾರಿಕೆಯನ್ನು ನಿರ್ವಹಿಸುವ ದೃಷ್ಟಿಯಿಂದ ಗುರಿಯುಳ್ಳ ಯೋಜನೆಗಳನ್ನು ಭಾಷಾ ಪರಿವರ್ತನೆಗಾಗಿ ರೂಪಿಸುವುದು ಅಗತ್ಯವಾಗಿತ್ತು.

ಭಾಷಾ ನೀತಿ

ಭಾಷಾ ಅಧ್ಯಯನ ಮಾಡುವವರಿಗೆ ಇತ್ತೀಚಿನ ದಿನಗಳಲ್ಲಿ ಹೆಚ್ಚು ಪರಿಚಿತವಾಗುತ್ತಿರುವ ಪಾರಿಭಾಷಿಕ ಪದಗಳಲ್ಲಿ ಭಾಷಾ ನೀತಿಯೆಂಬುದು ಒಂದಾಗಿದೆ. ಭಾಷೆಯನ್ನು ದಿನವೂ ಬಳಸುವ ವ್ಯಕ್ತಿಗಳಿಗೆ ಅವರದ್ದೇ ಆದ ಭಾಷಾ ನೀತಿಯೆಂಬುದು ಇರುವುದಿಲ್ಲ. ಹಾಗೆಯೇ ವ್ಯಕ್ತಿಗೆ ಭಾಷೆಯ ಆಯ್ಕೆ ಮತ್ತು ದೃಷ್ಟಿಕೋನಗಳು ಇರುವುದು ಸಾಧ್ಯ. ಉದಾ. ಕನ್ನಡ ಮತ್ತು ತೆಲುಗು ಎರಡೂ ಭಾಷೆಗಳನ್ನು ಬಳಸುವ ವ್ಯಕ್ತಿಗೆ, ತಾನು ಕನ್ನಡವನ್ನು ಎಲ್ಲಿ ಬಳಸಬೇಕು ಅಥವಾ ಎಲ್ಲಿ ಬಳಸಬಾರದು, ಹಾಗೆಯೇ ತೆಲುಗನ್ನು ಎಲ್ಲಿ ಬಳಸಬೇಕು ಮತ್ತು ಎಲ್ಲಿ ಬಳಸಬಾರದು ಎಂಬ ಬಗ್ಗೆ ಒಂದು ನಿರ್ಧಾರವಿರುತ್ತದೆ. ಆ ನಿರ್ಧಾರಕ್ಕೆ ಆ ವ್ಯಕ್ತಿಯದೇ ಆದ ತಾರ್ಕಿಕ ಸಮರ್ಥನೆಗಳು ಇರುತ್ತವೆ. ಇದನ್ನು **ಭಾಷಾ ಆಯ್ಕೆ** ಎನ್ನುತ್ತೇವೆ. ಹಾಗೆಯೇ ಅದೇ ವ್ಯಕ್ತಿಗೆ ಕನ್ನಡಕ್ಕಿಂತ ತೆಲುಗು ಇಂಪಾದ ಭಾಷೆ ಎಂಬ ಮನಸ್ಸಿನಲ್ಲಿ ಇರಬಹುದು. ಹಾಗೆಯೇ ಕೆಲವರು ಸಂಸ್ಕೃತವನ್ನು ದೇವಭಾಷೆಯೆಂದು ಭಾವಿಸಿ, ಅದನ್ನು ಪ್ರಾರ್ಥನೆ ಪೂಜೆಗಳಲ್ಲಿ ಬಳಸುತ್ತಾರೆ. ಇದು ಭಾಷಾ **ದೃಷ್ಟಿಕೋನ**. ಈ ದೃಷ್ಟಿಕೋನಗಳಿಗೆ ಸಾಂಸ್ಕೃತಿಕವಾದ ಸಂದರ್ಭಗಳು ಪ್ರೇರಣೆ ನೀಡಿರಬಹುದು. ಭಾಷಾ ಆಯ್ಕೆಯಾಗಲೀ, ಭಾಷಾ ದೃಷ್ಟಿಕೋನವಾಗಲಿ ವ್ಯಕ್ತಿಯ ನೆಲೆಯಲ್ಲಿ ಇರುವಂತೆ ಸಾಮುದಾಯಿಕ ನೆಲೆಯಲ್ಲೂ ಇರಲು ಸಾಧ್ಯ.

ಆದರೆ ಭಾಷಾ ನೀತಿಯೆನ್ನುವುದು ಸಾಂಸ್ಥಿಕ ನೆಲೆಯ ಪರಿಕಲ್ಪನೆ. ಈ ಸಾಂಸ್ಥಿಕ ನೆಲೆಗಳಲ್ಲಿ ಸರಕಾರದ ಪಾತ್ರ ಪ್ರಧಾನವಾದದ್ದು. ಹಾಗೆಯೇ ಭಾಷೆಯ ಹಿತಾಸಕ್ತಿಗಳನ್ನು ರೂಪಿಸಲು ನಿರ್ಮಾಣಗೊಂಡು ಕೆಲಸ ಮಾಡುತ್ತಿರುವ ಸಂಸ್ಥೆಗಳು ಕೂಡ ತಮ್ಮದೇ ಆದ ಭಾಷಾ ನೀತಿಯನ್ನು ಹೊಂದಿರಬಹುದು. ಉದಾ: ಕನ್ನಡದ ವಿಷಯದಲ್ಲಿ ತೆಗೆದುಕೊಂಡಾಗ ಕನ್ನಡ ಸಾಹಿತ್ಯ ಪರಿಷತ್ತು, ಇದು ಕನ್ನಡ ಭಾಷೆಯ ನೆಲೆಗಳನ್ನು ನಿರ್ದೇಶಿಸಲು ಉದ್ದೇಶಿತವಾದ ಸಂಸ್ಥೆ. ಅದರ ಹಲವಾರು ಕಾರ್ಯಕ್ರಮಗಳಲ್ಲಿ ಈ ಉದ್ದೇಶವನ್ನು ಪೂರೈಸಲು ಅನುಕೂಲಕರವಾದ ಕಾರ್ಯಕ್ರಮಗಳನ್ನು ಅದು ಕಾಲದಿಂದ ಕಾಲಕ್ಕೆ ರೂಪಿಸುತ್ತಾ ಬಂದಿದೆ. ಹೀಗಾಗಿ ಅದಕ್ಕೂ ಒಂದು ಭಾಷಾ ನೀತಿ ಇದೆ ಎಂದು ಹೇಳಲಡ್ಡಿಯಿಲ್ಲ. ಸರಕಾರದ ಭಾಷಾ ನೀತಿಗೂ ಇತರ ಸಾಮಾಜಿಕ ಸಂಸ್ಥೆಗಳ ಭಾಷಾ ನೀತಿಗೂ ಇರುವ ಸಂಬಂಧ ಕಾಲದಿಂದ ಕಾಲಕ್ಕೆ ಬೇರೆಯಾಗುತ್ತಾ ಹೋಗಬಹುದು. ಕೆಲವೊಮ್ಮೆ ಪೂರಕ ಸಂಬಂಧಗಳು ಇದ್ದರೆ ಮತ್ತೆ ಕೆಲವೊಮ್ಮೆ

ವಿರೋಧ ನೆಲೆಯ ಸಂಬಂಧಗಳು ನಿರ್ಮಾಣಗೊಳ್ಳುತ್ತವೆ. ನಾವು ಈ ಲೇಖನದಲ್ಲಿ ಈ ಭಾಷಾ ನೀತಿಗಳು ಹೇಗೆ ಕರ್ನಾಟಕದಲ್ಲಿ ರೂಪಗೊಂಡಿವೆ ಎಂಬುದನ್ನು ಪ್ರಾಸಂಗಿಕವಾಗಿ ಗಮನಿಸಲಿದ್ದೇವೆ.

ಕರ್ನಾಟಕ ಸರಕಾರದ ಭಾಷಾ ನೀತಿಗೆ ಎರಡು ನೆಲೆಯ ಒತ್ತಾಯಗಳು ಪ್ರೇರಕಗಳಾಗಿವೆ. 1) ಸಂವಿಧಾನ ನಿರೂಪಿಸಿದ ಭಾಷಾ ನೀತಿಯನ್ನು ಕರ್ನಾಟಕದ ಸಂದರ್ಭದಲ್ಲಿ ಯಥಾವತ್ತಾಗಿ ಆಚರಿಸುವುದು. 2) ಜನತೆಯ ಆಶೋತ್ತರಗಳನ್ನು ಅಪೇಕ್ಷೆಗಳನ್ನು ಗಮನಿಸಿ, ಅದಕ್ಕನುಗುಣವಾದ ಭಾಷಾ ನೀತಿಯನ್ನು ರೂಪಿಸುವುದು. ಕರ್ನಾಟಕದಲ್ಲಿ ಈ ಎರಡೂ ಪ್ರೇರಣಾ ಮೂಲಗಳು ಯಾವಾಗಲೂ ಒಂದೇ ದಿಕ್ಕಿನಲ್ಲಿ ಕೆಲಸ ಮಾಡಿಲ್ಲ. ಸಂವಿಧಾನದ ಅಪೇಕ್ಷೆಗಳು ಜನರ ಅಗತ್ಯಗಳಿಗೆ ಪೂರಕವಾಗಿದ್ದಾಗ ಸರಕಾರದ ಭಾಷಾ ನೀತಿ ಉಪಯುಕ್ತವಾಗಿದೆ ಮತ್ತು ಅನುಕರಣೆಗೆ ಅರ್ಹವಾಗಿವೆ. ಆದರೆ ಈ ಪ್ರೇರಣೆಗಳಲ್ಲಿ ಯಾವಾಗ ಪರಸ್ಪರ ವಿರೋಧ ಉಂಟಾಗಿದೆಯೋ ಅಂತಹ ಸಂದರ್ಭದಲ್ಲಿ ಸರಕಾರ ಸಂವಿಧಾನ ಪರ ನೀತಿಯನ್ನೇ ತನ್ನ ಮೊದಲ ಕರ್ತವ್ಯವೆಂದು ವರ್ತಿಸಿದೆ. ಆಗ ಅದು ಜನರ ಅಪೇಕ್ಷೆಗಳನ್ನು ನಿರಾಕರಿಸಬೇಕಾದ ಪ್ರಸಂಗಗಳು ಉಂಟಾಗಿವೆ. ಅಂತಹ ಸಂದರ್ಭಗಳಲ್ಲಿ ಸರಕಾರದ ಭಾಷಾ ನೀತಿಯ ವಿರುದ್ಧ ಜನರು ವಿರೋಧವನ್ನು ವ್ಯಕ್ತಪಡಿಸುತ್ತಾ ಹೋರಾಟಕ್ಕೆ ಇಳಿದಿರುವುದು ಉಂಟು.

ಇಂತಹ ವಿರೋಧಗಳು ಉಂಟಾದಾಗ ಸರಕಾರ ಒಂದೋ ಸಂವಿಧಾನದ ಅಶೋತ್ತರಗಳನ್ನು ಜನರು ಒಪ್ಪುವಂತೆ ಅವರಿಗೆ ತಿಳಿಹೇಳುವ ಕೆಲಸಗಳನ್ನು ಮಾಡಿರಬಹುದು. ಇಲ್ಲವೆ ಅವರ ಅಪೇಕ್ಷೆಗಳನ್ನು ಹತ್ತಿಕ್ಕಿ ಸರಕಾರದ ಕಾರ್ಯಕ್ರಮವಾಗಿ ತಾನು ನಿರೂಪಿಸುವ ಭಾಷಾ ನೀತಿಯನ್ನು ಜಾರಿಗೆ ಕೊಟ್ಟಿರಬಹುದು. ಎರಡನೇ ಸಂದರ್ಭದಲ್ಲಿ ಜನರು ತೋರಿಕೆಗೆ ಒಪ್ಪಿದಂತೆ ಭಾಸವಾದರೂ ಅವರಲ್ಲಿ ಅತೃಪ್ತಿಯೆಂಬುದು ಮಡುಗಟ್ಟಿದ್ದು ಅದು ಯಾವಾಗಲಾದರೂ ಹೇಗಾದರೂ ಸಿಡಿದಿರುವ ಉದಾಹರಣೆಗಳು ಇವೆ.

ಸರಕಾರ ಸಂವಿಧಾನದ ಸೂಚನೆಗಳನ್ನು ಅನುಸರಣೆ ಮಾಡುತ್ತಾ ಅದಕ್ಕೆ ಅನುಗುಣವಾದ ಭಾಷಾನೀತಿಯನ್ನು ರೂಪಿಸುತ್ತದೆ. ಆದರೆ ಹೀಗೆ ನೀತಿಯೊಂದು ಆಕಾರ ಪಡೆಯುವಾಗ ಕೇವಲ ಸಂವಿಧಾನದ ಭಾಷಾ ಸಂಬಂಧಿಕ ನಿಲುವುಗಳು ಮಾತ್ರ ಪ್ರೇರಕಗಳಾಗಿ ಕೆಲಸ ಮಾಡುತ್ತವೆ ಎನ್ನುವಂತಿಲ್ಲ. ಸಂವಿಧಾನದಲ್ಲೇ ಅಡಕವಾಗಿರುವ ಇನ್ನಿತರ ಸಾಮಾಜಿಕ, ಸಾಂಸ್ಕೃತಿಕ ನೆಲೆಯ ನಿರೂಪಣೆಗಳು ಪರೋಕ್ಷವಾಗಿ ಭಾಷಾ ನೀತಿಯನ್ನು ನಿರ್ಧರಿಸುವ ಕೆಲಸ ಮಾಡುತ್ತವೆ. ಉದಾ: ಸಂವಿಧಾನ ವ್ಯಕ್ತಿಗೆ ನೀಡಿರುವ ಮೂಲಭೂತ ಹಕ್ಕುಗಳಿವೆ. ಈ ಹಕ್ಕುಗಳು ವ್ಯಾಪ್ತಿಯು ಕೇವಲ ಭಾಷೆಗೆ ಮಾತ್ರ ಸಂಬಂಧಿಸಿಲ್ಲ. ಆದರೆ ಭಾಷಾ ನೀತಿಯ ನಿರ್ಧಾರದ ಸಂದರ್ಭದಲ್ಲಿ ಈ ಮೂಲಭೂತ ಹಕ್ಕುಗಳು ನಿರ್ದೇಶಕ ನೆಲೆಯಲ್ಲಿ ಕೆಲಸ ಮಾಡುತ್ತಿವೆ. ಇದಕ್ಕೆ ಹಲವು ನಿದರ್ಶನಗಳು ಸಾಧ್ಯ. ಉದಾ: ಶಾಲೆಯಲ್ಲಿ ಮಕ್ಕಳು ಯಾವ ಭಾಷೆಯ ಮೂಲಕ ವಿಷಯ ಗ್ರಹಣ ಮಾಡಬೇಕು ಎಂಬುದು ಒಂದು ಪ್ರಶ್ನೆ. ಭಾಷಿಕ ನೆಲೆಯಲ್ಲಿ ಇದಕ್ಕಿರುವ ಉತ್ತರ ಮತ್ತು ಮೂಲಭೂತ ಹಕ್ಕುಗಳ ನೆಲೆಯಲ್ಲಿ

ಇರುವ ಉತ್ತರ ಬೇರೆ ಬೇರೆಯಾಗಿವೆ. ಮಗುವಿನ ಮನೆಯ ಮಾತನ್ನೇ ಕಲಿಕೆಯ ಮಾಧ್ಯಮವನ್ನಾಗಿ ಬಳಸಬೇಕೆಂಬ ನಿಲುವು ಕೆಲವೊಮ್ಮೆ ವ್ಯಕ್ತಿಯ ಮೂಲಭೂತ ಹಕ್ಕಿನ ಮಿತಿಯನ್ನು ಒಪ್ಪದೆಯೇ ಉಲ್ಲಂಘನೆಯಾಗಿದೆ ಎಂದು ಸಮಾಜದ ಕೆಲವು ವರ್ಗಗಳಿಗೆ ಅನಿಸಿದೆ. ಆದ್ದರಿಂದ ಸರಕಾರ ಈ ಎರಡು ಪರಸ್ಪರ ಮುಖಾಮುಖಿಯಾಗಿರುವ ನಿಲುವುಗಳಲ್ಲಿ ಯಾವ ಆಯ್ಕೆಯನ್ನು ಮಾಡಿಕೊಳ್ಳಬೇಕು ಎಂಬುದು ಪ್ರಶ್ನೆಯಾಗಿದೆ. ಕರ್ನಾಟಕ ಸಂದರ್ಭದಲ್ಲಿ ಇಂತಹ ಪ್ರಶ್ನೆಗಳು ಮೇಲಿಂದ ಮೇಲೆ ಮುಂಚೂಣಿಗೆ ಬಂದು ವಾಗ್ವಾದಗಳನ್ನು ಸೃಷ್ಟಿಸಿರುವುದನ್ನು ನಾವು ಗಮನಿಸಬಹುದು. ಸರ್ಕಾರದ ಭಾಷಾ ನೀತಿಯು ಕೆಲವೊಮ್ಮೆ ಖಚಿತ ಮಾತುಗಳಲ್ಲಿಯೂ ನಿರೂಪಿತವಾಗದೇ ಇರಬಹುದು. ಅದರ ಭಾಷಾ ಸಂಬಂಧಿತ ಕಾರ್ಯಕ್ರಮಗಳಲ್ಲಿ ಈ ನೀತಿಯು ಕಾರ್ಯ ಪ್ರವೃತ್ತವಾಗಿರುವುದನ್ನು ನಾವು ಗಮನಿಸಿ ಆ ಮೂಲಕ ಭಾಷಾ ನೀತಿಯ ನೆಲೆಯನ್ನು ಪುನಾರಚಿಸಬೇಕಾಗಿದೆ. ಕೆಲವೊಮ್ಮೆ ಇಂತಹ ಭಾಷಾ ನೀತಿಗಳು ಅಂಶಿಕವಾಗಿ ನಿರೂಪಿತವಾದ ಕಾರ್ಯಕ್ರಮಗಳ ಮೂಲಕ ಪೂರ್ಣ ಆಕಾರವನ್ನು ಪಡೆದುಕೊಳ್ಳುತ್ತಿರುತ್ತವೆ.

ಭಾಷಾ ನೀತಿಯ ಜಾರಿಗೆ ನೆಲೆಯೆಂದರೆ, ಭಾಷಾ ಯೋಜನೆ, ಭಾಷಾಯೋಜನೆ ಎಂದರೇನು, ಇಲ್ಲಿ ಯೋಜನೆ ಎಂಬ ಮಾತು ಏಕೆ ಬಂದಿದೆ ಎಂಬುದು ಗಮನಿಸಬೇಕಾದ ಸಂಗತಿ. ಪ್ರಗತಿಯ ಸಾಧನೆಗೆ ಅನುಕೂಲಕರವಾದ ಕಾರ್ಯಕ್ರಮಗಳನ್ನು ಮುಂದೆಯೇ ಯೋಚಿಸಿ ಅದಕ್ಕೆ ಅನುಗುಣವಾದ ಕಾರ್ಯಕ್ರಮಗಳನ್ನು ರೂಪಿಸಬೇಕಾಗುತ್ತದೆ. ಇದು ಸಮಾಜದ ಪ್ರಗತಿಯಲ್ಲಿ ನಂಬಿಕೆಯುಳ್ಳ ಪ್ರತಿಯೊಬ್ಬರು ಅನುಸರಿಸುವ ವಿಧಾನ. ಯೋಜನೆಯಿಂದ ಸಂಪನ್ಮೂಲಗಳ ಸರಿಯಾದ ವಿತರಣೆ, ನಿರ್ವಹಣೆ ಸಾಧ್ಯವಾಗಿರುತ್ತದೆ. ಸಂಪನ್ಮೂಲಗಳು ಹಾಳಾಗುವುದು, ಅನುಪಯುಕ್ತವಾಗುವುದು, ಅನಗತ್ಯವಾಗಿ ಹೆಚ್ಚು ಬಳಕೆಯಾಗುವುದು, ಅಗತ್ಯವಿದ್ದರೂ ಬಳಕೆಗೆ ಲಭ್ಯವಿಲ್ಲದಿರುವುದು. ಇಂತಹವನ್ನೆಲ್ಲ ಯೋಜನೆಗಳ ನಿರೂಪಣೆಗಳ ಮುಖಾಂತರ ನಿರ್ವಹಿಸಲು ಸಾಧ್ಯವಾಗುತ್ತದೆ. ಯೋಜನೆಯ ಈ ಸಾಮಾನ್ಯ ವ್ಯಾಖ್ಯಾನ ಭಾಷಾ ಯೋಜನೆಗೂ ಅನ್ವಯಿಸುವಂತಿದೆ. ಈ ಬಗ್ಗೆ ಭಾಷಾ ಶಾಸ್ತ್ರಜ್ಞರಲ್ಲಿ ಒಮ್ಮತ ಇಲ್ಲದಿದ್ದರೂ ಈಗ ಚಾಲ್ತಿಯಲ್ಲಿರುವ ಕ್ರಮದಂತೆಯೇ ಯೋಜನೆಗಳ ನಿರೂಪಣೆ ಮತ್ತು ನಿರ್ವಹಣೆಗಳ ಬಗ್ಗೆ ಎಂದು ಸರ್ವ ಸಮ್ಮತಿ ಇದೆ ಎಂದು ತೋರುತ್ತದೆ. ಅದರಲ್ಲೂ ಸರಿಸುಮಾರು ಹತ್ತೊಂಬತ್ತನೇ ಶತಮಾನದ ಅನಂತರದಲ್ಲಿ ಹೀಗೆ ಯೋಜನೆಗಳನ್ನು ಭಾಷೆಗಳ ನೆಲೆಯಲ್ಲಿ ರೂಪಿಸಿದ ಪ್ರವೃತ್ತಿ ಬೆಳೆದು ಬಂದಿದೆ. ಭಾಷೆಯ ಬೆಳವಣಿಗೆಯ ಬಗ್ಗೆ ಹೀಗೆ ಯೋಜನೆಗಳನ್ನು ರೂಪಿಸುವ ಪ್ರವೃತ್ತಿ ಬಹು ಹಿಂದಿನಿಂದಲೂ ಇದ್ದಿತೆಂದು ಹೇಳಲು ನಿದರ್ಶನಗಳಿವೆ. ಭಾಷೆಗಳಿಗೆ ಲಿಪಿ ವ್ಯವಸ್ಥೆ ರೂಪಿಸಿದ್ದು, ವ್ಯಾಕರಣಗಳನ್ನು ಬರೆದದ್ದು, ಕಲಿಕೆಯ ವಿಧಾನಗಳನ್ನು ನಿರೂಪಿಸಿದ್ದು, ನಿಘಂಟುಗಳನ್ನು ರಚಿಸಿದ್ದು ಇವೆಲ್ಲವೂ ಒಂದಲ್ಲ ಒಂದು ವಿಧದಲ್ಲಿ ಭಾಷಾ ಯೋಜನೆಗಳೇ. ಇವುಗಳಲ್ಲಿ ವ್ಯಕ್ತಿಗಳು ತಾವೇ ಮುಂದಾಗಿ ಕಾರ್ಯಪ್ರವೃತ್ತವಾದಂತೆ ತೋರಿದರೂ ಎಷ್ಟೋ ವೇಳೆ ಇಂತಹ ಸಾಮುದಾಯಿಕ ಒತ್ತಡಗಳು ಯೋಜನೆಗಳ ಹಿಂದೆ ಇವೆ. ಆಯಾ ಕಾಲದ ಆಳುವ ವರ್ಗದ ಒತ್ತಾಸೆಗಳು ಎನ್ನುವುದಕ್ಕೂ ನಿದರ್ಶನಗಳಿವೆ.

ಕರ್ನಾಟಕ ಸರಕಾರ ಭಾಷಾ ನೀತಿಯು ಹೀಗೆ ಎಲ್ಲಿಯೂ ನಿರ್ದಿಷ್ಟ ದಾಖಲೆಯಾಗಿ ಲಭಿಸುವುದಿಲ್ಲ. ಕಾಲದಿಂದ ಕಾಲಕ್ಕೆ ಸರಕಾರ ತನ್ನ ನಿರ್ಣಯ ಸ್ವರೂಪ ಕಾರ್ಯಕ್ರಮಗಳ ಮೂಲಕ ತನ್ನ ಭಾಷಾ ನೀತಿಯನ್ನು ತಾನೇ ಕಂಡುಕೊಳ್ಳುತ್ತಾ ಹೋದಂತೆ ಕಾಣುತ್ತದೆ. ಕಳೆದ ಹಲವು ದಶಕಗಳಲ್ಲಿ ಈ ಭಾಷಾ ನೀತಿ ಶೋಧದ ಹೆಜ್ಜೆಗಳನ್ನು ನಾವು ಗುರುತಿಸಲೂ ಬರುತ್ತದೆ. ಈ ಪ್ರಮಾಣದಲ್ಲಿ ಸರಕಾರ, ಪ್ರಾಂತೀಯ, ದೇಶೀಯ ಮತ್ತು ಜಾಗತಿಕ ನೆಲೆಯ ಪ್ರಭಾವ, ಪ್ರೇರಣೆಗಳಿಗೆ ಒಳಗಾಗಿದೆ.

ಎಷ್ಟೊ ಸಂದರ್ಭಗಳಲ್ಲಿ ತನ್ನ ಆಚರಿತ ಭಾಷಾ ನೀತಿಯನ್ನು ಬಿಟ್ಟುಕೊಟ್ಟು ಹೊಸ ಭಾಷಾ ನೀತಿಯ ಕಡೆಗೆ ಸರಕಾರ ಪಲ್ಲಟಗೊಂಡಿರುವುದು ಉಂಟು. ಇದರಿಂದಾಗಿ ಸರಕಾರದ ಭಾಷಾ ಯೋಜನೆಯು ಕೂಡ ನಿರ್ದಿಷ್ಟ ಚೌಕಟ್ಟಿನಲ್ಲಿ ನಿಗದಿಗೊಂಡಿಲ್ಲ. ಅದರಲ್ಲಾಗಿರುವ ಬದಲಾವಣೆಗಳನ್ನು ಗಮನಿಸಿಯೇ ಕೆಲವೊಮ್ಮೆ ಸರಕಾರಕ್ಕೆ ಭಾಷಾ ಯೋಜನೆಯೆ ಇಲ್ಲ ಎಂದು ಕೆಲವರು ಹೇಳಿರುವುದುಂಟು ಆದರೆ ಭಾಷಾ ಯೋಜನೆಯಲ್ಲಿ ಗೊಂದಲಗಳಿಲ್ಲವೆಂದಲ್ಲ ಈ ಗೊಂದಲಗಳಿಗೆ ಕಾರಣಗಳು ಸಾಮಾಜಿಕ ನೆಲೆಯಲ್ಲಿವೆ. ಅಥವಾ ಸಾಮಾಜಿಕ ನೆಲೆಯ ಗೋಜಲುಗಳೇ ಭಾಷಾ ಯೋಜನೆಯಲ್ಲೂ ಪ್ರತಿನಿಧಿತವಾಗಿವೆ ಎನ್ನಲು ಅಡ್ಡಿಯಿಲ್ಲ.

ಭಾಷಾ ಯೋಜನೆ

ಈ ಹಿಂದೆ ಹೇಳಿದಂತೆ ಸಾಮಾನ್ಯವಾಗಿ ಭಾಷಾ ಯೋಜನೆಗಳನ್ನು ಮೂರು ನೆಲೆಗಳಲ್ಲಿ ಭಾಷಾ ಅಧ್ಯಯನಕಾರರು ನಿರೂಪಿಸುತ್ತಾರೆ. 1) ಸ್ಥಾನಮಾನ ನಿರ್ಧಾರ 2) ಪರಿಕರಗಳ ನಿರ್ಮಾಣ ಮತ್ತು ಕಲಿಕೆಯ ವಿಧಾನಗಳ ನಿರೂಪಣೆ. ಇವುಗಳಲ್ಲಿ ಮೂರನೆಯುದನ್ನು ಪ್ರತ್ಯೇಕವಾಗಿ ಪರಿಗಣಿಸುವ ಅಗತ್ಯವಿಲ್ಲವೆಂದು ಕೆಲವರು ವಾದಿಸುವುದುಂಟು. ಆದರೆ ಕನ್ನಡದಂತಹ ಭಾಷೆಗಳ ಸಂದರ್ಭದಲ್ಲಿ ಈ ನೆಲೆಯ ಪರಿಶೀಲನೆ ಅಗತ್ಯವೆಂದು ತೋರಿದ್ದರಿಂದ ಅಂಶವನ್ನು ಚರ್ಚೆಗೆ ಗುರಿಪಡಿಸಲಾಗುವುದು.

1) ಸ್ಥಾನಮಾನಗಳ ನಿರ್ಧಾರ : ಭಾಷೆಗೆ ಸಮಾಜದ ಸಂರಚನೆಯಲ್ಲಿ ಯಾವ ಸ್ಥಾನಮಾನ ಇರಬೇಕು ಎನ್ನುವುದು ಈ ನೆಲೆಯ ಮುಖ್ಯ ನಿರ್ಧಾರ ಮತ್ತು ಈ ಸ್ಥಾನಮಾನವನ್ನು ಭಾಷೆಗೆ ಸಾಧಿಸಿಕೊಡಲು ಯಾವ ಕಾರ್ಯಕ್ರಮವನ್ನು ರೂಪಿಸಬೇಕು ಎಂಬುದು ಕೂಡ ಭಾಷಾ ಯೋಜನೆಯ ಈ ಹಂತದಲ್ಲಿ ನಿರೂಪಿತವಾಗುತ್ತದೆ.

ಒಂದು ಆಡಳಿತ ವಲಯದಲ್ಲಿ ಇರುವ ಜನರೆಲ್ಲ ಒಂದೇ ಭಾಷೆಯನ್ನು ಆಡುತ್ತಿದ್ದರೆ ಆಗ ಸ್ಥಾನಮಾನದ ನಿರ್ಧಾರದ ಸಮಸ್ಯೆ ಮುಖ್ಯವಾಗುವುದಿಲ್ಲ. ಇಂತಹ ಸಮುದಾಯಗಳು ಕೂಡ ಇನ್ನೊಂದು ಸಮುದಾಯದೊಡನೆ ವ್ಯವಹರಿಸಬೇಕಾಗಿ ಬರುತ್ತದೆ. ಆ ಇನ್ನೊಂದು ಭಾಷೆಯ ಸಾಂಸ್ಕೃತಿಕ ಸ್ಥಾನಮಾನ ಬೇರೆಯಾದರೆ ಆಗ ಈ ಎರಡು ಭಾಷೆಗಳ ನಡುವೆ ಸ್ಥಾನಮಾನದ ಸಮಸ್ಯೆ ಮುಂಚೂಣಿಗೆ ಬರುತ್ತದೆ. ಇನ್ನು, ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ಬಳಸುವ ಜನರು ಒಂದು ಆಡಳಿತ ವಲಯದಲ್ಲಿ ಇದ್ದಾಗಲಂತೂ ಈ ಸ್ಥಾನಮಾನದ ನಿರ್ಧಾರ ಅತ್ಯಗತ್ಯ. ಈ ನಿರ್ಧಾರ ಕೇವಲ ಭಾಷಿಕ ಆಯ್ಕೆಯಲ್ಲ. ಅದನ್ನು ನಿರ್ಣಯಿಸುವ ಒತ್ತಡಗಳು ಬೇರೆ ಕಡೆ ಇರುತ್ತವೆ.

ಉದಾ: ಕನ್ನಡ ಮತ್ತು ತೆಲುಗು. ಈ ಭಾಷೆಗಳ ಸ್ಥಾನ ಕರ್ನಾಟಕದಲ್ಲಿ ಏನು ಎಂಬ ಪ್ರಶ್ನೆ ಕನ್ನಡ ಮತ್ತು ಇಂಗ್ಲಿಶ್ ಇವುಗಳ ಸಂಬಂಧ ಏನು ಎಂಬುದಕ್ಕಿಂತ ಬೇರೆ ಉತ್ತರವನ್ನು ಬಯಸುತ್ತದೆ. ಇದಕ್ಕೆ ಆಯಾ ಭಾಷೆಗಳಿಗೆ ಮತ್ತು ಭಾಷಾ ಸಮುದಾಯಗಳಿಗೆ ಇರುವ ಹಿನ್ನೆಲೆಗಳು ಮುಖ್ಯವಾಗಿವೆ.

ಸ್ಥಾನಮಾನದ ನಿರ್ಧಾರ ಮಾಡುವಾಗ ಅದು ಏಕ ಘಟಕೀಯ ನೆಲೆಯಲ್ಲಿ ಇರಬೇಕೆಂದು ಹೇಳುವುದು ಯಾವಾಗಲೂ ಸಾಧ್ಯವಾಗದು. ಉದಾ: ಕನ್ನಡ ನಾಡಿನಲ್ಲಿ ಕನ್ನಡವೇ ಸಾರ್ವಭೌಮ ಎಂಬಂತಹ ಮಾತು ಒಂದು ಹೇಳಿಕೆಯಾಗಿ ತೋರುವುದೇ ಹೊರತು ವಾಸ್ತವವಾಗಿ ಒಂದು ನಿರ್ಧಾರಿತ ಕಾರ್ಯಕ್ರಮವಾಗಲಾರದು. ಹಾಗೆ ಆಗಿಲ್ಲ ಎಂಬುದಕ್ಕೆ ಹತ್ತಾರು ನಿದರ್ಶನಗಳನ್ನು ಕೊಡಬಹುದು. ಅಂದರೆ ಒಂದು ಭಾಷೆಯ ಸ್ಥಾನಮಾನದ ನಿರ್ಧಾರ ಆ ಭಾಷೆಯನ್ನು ಯಾವ ಯಾವ ವಲಯದಲ್ಲಿ ಯಾವ ಯಾವ ಬಗೆಯಲ್ಲಿ ಬಳಸುತ್ತೇವೆ ಎಂಬುದನ್ನು ಅವಲಂಬಿಸಿರುತ್ತದೆ. ಹೀಗಾಗಿ ಬೇರೆಬೇರೆ ಬಳಕೆಯ ವಲಯಗಳಿಗೆ ಅನುಗುಣವಾಗಿ ಬೇರೆ ಬೇರೆ ಸ್ಥಾನಮಾನದ ಯೋಜನೆಗಳು ರೂಪಿಸಬೇಕಾಗುತ್ತದೆ. ಇದು ಒಂದು ವಾಸ್ತವ ನೆಲೆಯ ಸಂಗತಿ. ಇದರಲ್ಲಿ ತಾತ್ವಿಕ ಗೊಂದಲಗಳು ಇದೆ ಎಂದು ಭಾಸವಾದರೂ ಪರಿಸ್ಥಿತಿಯ ವಿನ್ಯಾಸಗಳು ಹೀಗೆ ಬೇರೆಬೇರೆ ನಿರ್ಣಯಗಳನ್ನು ಮಾಡಲು ಒತ್ತಾಯಿಸುತ್ತವೆ. ಕನ್ನಡದ ಮಟ್ಟಿಗೆ ಹೇಳುವುದಾದರೆ ಸರಕಾರವು ಆಡಳಿತ, ಶಿಕ್ಷಣ, ವಾಣಿಜ್ಯ ಸಂವಹನ ಮಾಧ್ಯಮಗಳು ಹೀಗೆ ಬೇರೆಬೇರೆ ವಲಯಗಳಲ್ಲಿ ಬೇರೆಬೇರೆ ರೀತಿಯಲ್ಲಿ ಕನ್ನಡದ ಸ್ಥಾನಮಾನವನ್ನು ನಿರ್ದೇಶನವನ್ನು ಮಾಡಿದೆ. ಅದಕ್ಕನುಗುಣವಾದ ಕಾರ್ಯಕ್ರಮವನ್ನು ಕೂಡ ರೂಪಿಸಿಕೊಂಡಿದೆ.

2. ಪರಿಕರ ನಿರ್ಮಾಣ: ಪರಿಕರಗಳ ನೆಲೆಯ ಭಾಷಾ ಯೋಜನೆ ಎಂದರೇನು ಎಂಬುದನ್ನು ತಿಳಿಯುವುದು ಅಗತ್ಯ. ಒಂದು ಭಾಷೆಯನ್ನು ವಿವಿಧ ಉದ್ದೇಶಗಳಿಗೆ ಮತ್ತು ವಿವಿಧ ವಲಯಗಳಲ್ಲಿ ಬಳಸುವುದು ಅಗತ್ಯವಾದಾಗ ಇಂತಹ ಬಳಕೆಗಳಿಗೆ ಅನುಕೂಲವಾದ ಭಾಷಾ ಪರಿಕರಗಳನ್ನು ಸಿದ್ಧಪಡಿಸುವುದು ಈ ಯೋಜನೆಯ ವ್ಯಾಪ್ತಿಗೆ ಬರುತ್ತದೆ. ಕೆಲವು ಪ್ರಾಸಂಗಿಕ ನಿದರ್ಶನಗಳನ್ನು ಇಲ್ಲಿ ನೀಡುವುದು ಅಗತ್ಯ. ಲಿಪಿ ಇಲ್ಲದ ಭಾಷೆಗೆ ಒಂದು ಲಿಪಿಯನ್ನು ರೂಪಿಸುವುದು, ಈಗಾಗಲೇ ಲಿಪಿ ವ್ಯವಸ್ಥೆ ಇದ್ದರೆ ಅದನ್ನು ಹೊಸ ಅಗತ್ಯಗಳಿಗೆ ಅನುಗುಣವಾಗಿ ಸಜ್ಜುಗಳಿಸುವುದು ಇವು ಇಂತಹ ಯೋಜನೆಗಳು. ಲಿಪಿ ಇರುವ ಮತ್ತು ಬಹು ದೀರ್ಘಕಾಲದ ಬರವಣಿಗೆಯ ಚರಿತ್ರೆ ಇರುವ ಕನ್ನಡದಂತ ಭಾಷೆಗೆ ಇಂತಹ ಯೋಜನೆಗಳು ಏಕೆ ಅಗತ್ಯ ಎಂಬ ಪ್ರಶ್ನೆ ಸಾಧ್ಯ. ಆದರೆ ಕನ್ನಡದ ಲಿಪಿ ವ್ಯವಸ್ಥೆಯಲ್ಲಿ ಕಳೆದ ಹದಿನಾರು ಶತಮಾನಗಳಲ್ಲಿ ಎಷ್ಟು ಬದಲಾವಣೆ ಆಗಿದೆ ಎಂಬುದನ್ನು ಲಿಪಿ ವಿಕಾಸವನ್ನು ಅಭ್ಯಾಸ ಮಾಡಿದವರು ಬಲ್ಲರು. ಯಾವ ಭಿತ್ತಿಯ ಮೇಲೆ ಮತ್ತು ಯಾವ ಉಪಕರಣ ಬಳಸಿ ಬರೆಯುತ್ತೇವೆ ಎಂಬುದನ್ನು ಅವಲಂಬಿಸಿ ಲಿಪಿ ವ್ಯವಸ್ಥೆಯಲ್ಲಿ ಬದಲಾವಣೆಗಳು ಆಗುತ್ತಲೇ ಬಂದಿವೆ. ಬರೆಯುವ ಭಿತ್ತಿಗಳು ಕಲ್ಲು, ಮಣ್ಣಿನ ಹಲಗೆ, ಲೋಹದ ತಗಡು ಇವುಗಳಿಂದ ತಾಳೆಯ ಎಲೆಗೆ ಬದಲಾದಾಗ, ಅಲ್ಲಿಂದ ಮುಂದೆ ವಿವಿಧ ಬಗೆಯ ಕಾಗದಗಳ ಮೇಲೆ ಬರೆಯಬೇಕಾಗಿ ಬಂದಾಗ ಕನ್ನಡ ಲಿಪಿಯಲ್ಲಿ ಬದಲಾವಣೆಗಳು ಆಗುತ್ತಾ

ಬಂದಿವೆ. ಭಿತ್ತಿಗಳಂತೆಯೇ ಬರವಣಿಗೆಗೆ ಬಳಸುತ್ತಿದ್ದ ಸಾಮಗ್ರಿಗಳು ಬೇರೆಯಾಗಿವೆ. ತೀರ ಇತ್ತೀಚಿನವರೆಗೂ ಲಿಪಿ ಮೂಡಿಸಲು ಒಂದಿಲ್ಲೊಂದು ಬಗೆಯಲ್ಲಿ ಕೈ ಬೆರಳುಗಳನ್ನು ಬಳಸುತ್ತಾ ಬಂದಿದ್ದೇವೆ. ಕಳೆದ 50 ವರ್ಷಗಳಲ್ಲಿ ಮೂರು ಮುಖ್ಯ ಪಲ್ಲಟಗಳು ನಡೆದಿವೆ. 1) ಬೆರಳಚ್ಚು ಯಂತ್ರ 2) ಎಲೆಕ್ಟ್ರಾನಿಕ್ ಬೆರಳಚ್ಚು ಯಂತ್ರ ಮತ್ತು 3) ಗಣಕ ಯಂತ್ರ. ಈ ಬದಲಾವಣೆಗಳಿಂದಾಗಿ ಕನ್ನಡ ಲಿಪಿ ವ್ಯವಸ್ಥೆಯಲ್ಲಿ ಹಲವು ಪರಿವರ್ತನೆಗಳು ಅಗತ್ಯವಾಗಿವೆ. ಈ ಮಾತು ಇಲ್ಲಿ ಹೇಳಿದರ ಉದ್ದೇಶವಿಷ್ಟೆ ಬರವಣಿಗೆಗೆ ದೀರ್ಘ ಚರಿತ್ರೆ ಇದೆ ಎಂದ ಮಾತ್ರಕ್ಕೆ ಕನ್ನಡಕ್ಕೆ ಲಿಪಿನೆಲೆಯ ಭಾಷಾ ಯೋಜನೆಯ ಅಗತ್ಯವಿಲ್ಲ ಎಂದು ವಾದಿಸಲು ಬರುವುದಿಲ್ಲ ಎಂಬುದನ್ನು ಖಚಿತಪಡಿಸಬೇಕಾಗಿದೆ.

ಇದಲ್ಲದೆ ಭಾಷೆಯ ಬಳಕೆಗೆ ಇನ್ನೂ ಹತ್ತಾರು ಪರಿಕರಗಳು ಅಗತ್ಯವಾಗುತ್ತವೆ. ಹಿಂದೆ ಭಾಷೆಯನ್ನು ಸೀಮಿತ ವಲಯಗಳಲ್ಲಿ ಮತ್ತು ಸೀಮಿತ ಉದ್ದೇಶಗಳಿಗಾಗಿ ಬಳಸುತ್ತಿದ್ದಾಗ ಎದುರಾಗದ ಸಮಸ್ಯೆಗಳು ಈಗ ಮತ್ತೆ ಎದುರು ನಿಲ್ಲುತ್ತವೆ. ಅಲ್ಲದೇ ಒಂದೊಮ್ಮೆ ಇಂತಹ ಸಮಸ್ಯೆಗಳು ಬಂದಾಗ ಅವುಗಳ ಸ್ವರೂಪ ಮತ್ತು ಪ್ರಮಾಣಗಳನ್ನು ಗಮನಿಸಿ ಪರಿಹಾರ ನೀಡಲು ಭಾಷಿಕ ಸಮುದಾಯಗಳಲ್ಲಿ ನೆರವು ಪಡೆಯಬಹುದಾಗಿತ್ತು. ಆದರೆ ಈಗ ಪರಿಸ್ಥಿತಿ ಬದಲಾಗಿದೆ. ಅಂದರೆ ತಿಳಿದವರು ಇಲ್ಲವಾಗಿದ್ದಾರೆ ಎಂದಲ್ಲ. ಪ್ರಜಾಪ್ರಭುತ್ವದ ಮೂಲತತ್ವಗಳಲ್ಲಿ, ತಿಳುವಳಿಕೆ ಹೀಗೆ ಯಾರೋ ಕೆಲವರ ಸ್ವತ್ತಾಗುವುದು ಸಮರ್ಥನೀಯವಾದ ವಿಷಯವಲ್ಲ. ಮಾಹಿತಿ ಮತ್ತು ಅರಿವು ಯಾರಿಗೆ ಬೇಕಾದರೂ ಯಾವಾಗ ಬೇಕಾದರೂ ಸಿಗುವಂತೆ ವ್ಯವಸ್ಥೆ ರೂಪಗೊಳ್ಳಬೇಕಾದುದು ಅಗತ್ಯ. ಈ ದೃಷ್ಟಿಯಿಂದ ಭಾಷೆಯ ಬಳಕೆ ವಲಯಗಳು ಹೆಚ್ಚಾದಂತೆ, ಬಳಕೆಯ ಉದ್ದೇಶಗಳು ಹೆಚ್ಚಾದಂತೆ ಉಂಟಾಗುವ ಸಮಸ್ಯೆಗಳನ್ನು ಹಾಗೆ ಬಳಸುವವರೇ ಪರಿಹರಿಸಿಕೊಳ್ಳಲು ಅನುಕೂಲವಾಗುವ ಸನ್ನಿವೇಶ ನಿರ್ಮಾಣವಾಗಬೇಕು. ಉದಾ: ನಾವು ಓದುತ್ತಿರುವ ಯಾವುದೋ ಭಾಷಿಕ ದಾಖಲೆಯಲ್ಲಿ ನಮಗೆ ಅರ್ಥಗೊತ್ತಿಲ್ಲದ ಪದವೊಂದಿದೆ ಎಂದುಕೊಳ್ಳಿ. ಆ ಪದದ ಅರ್ಥವನ್ನು ನಾವು ತಿಳಿಯುವುದು ಹೇಗೆ? ಕೆಲವೊಮ್ಮೆ ಆ ಪದವು ಬಳಕೆಯಾದ ಸಂದರ್ಭವನ್ನು ಗಮನಿಸಿ ಅದರ ಅರ್ಥವನ್ನು ಹೇಗೋ ಊಹಿಸಿ ಸಮಸ್ಯೆಯಿಂದ ಪಾರಾಗಿ ಬಿಡಬಹುದು. ಆದರೆ ಇದು ಸರಿಯಾದ ಪರಿಹಾರವಲ್ಲ. ಆದರೆ ಇದು ಸರಿಯಾದ ಪರಿಹಾರವಲ್ಲ. ತಿಳಿಯದ ಪದಗಳಿಗೆ ಅರ್ಥವನ್ನು ಕಂಡುಕೊಳ್ಳಲು ನೆರವಾಗುವ ಸರಿಯಾದ ಪರಿಕರಗಳು ಭಾಷೆಯ ಬಳಕೆದಾರರಿಗೆ ಸುಲಭವಾಗಿ ಸಿಗುವಂತಿರಬೇಕು. ಅಂತಹ ಪರಿಕರಗಳೇ ಅರ್ಥಕೋಶಗಳು. ಬೇರೆ ಬೇರೆ ಉದ್ದೇಶಗಳಿಗೆ ಅನುಕೂಲವಾಗುವ ಬೇರೆ ಬೇರೆ ಅರ್ಥಕೋಶಗಳು ಸಿದ್ಧವಾಗುವುದು ಇದೇ ಉದ್ದೇಶಕ್ಕೆ.

ಹೀಗೆಯೇ ಭಾಷೆಯ ರಚನೆಯ ಸಮಸ್ಯೆಗಳನ್ನು ಪರಿಹರಿಕೊಳ್ಳಲು ವ್ಯಾಕರಣಗಳು ಅಗತ್ಯವಾಗುತ್ತವೆ. ವಿವಿಧ ಸಂದರ್ಭಗಳಿಗೆ ಅನುಗುಣವಾಗಿ ಭಾಷೆಯುನ್ನು ನಿರೂಪಿಸಬೇಕಾಗಿ ಬಂದಾಗ ಆಯಾ ಸಂದರ್ಭದ ಅಗತ್ಯಗಳನ್ನು ತಿಳಿಸಿಕೊಡುವ ಮತ್ತು ಮಾದರಿಗಳ ಮೂಲಕ ದಾರಿ ತೋರಿಸುವ ಕೈಪಿಡಿಗಳು ಕೂಡಾ ಈ ಪರಿಕರಗಳ ವ್ಯಾಪ್ತಿಯಲ್ಲೇ ಬರುತ್ತವೆ.

2. ಕಲಿಕೆ/ಬಳಕೆಯ ನೆಲೆ: ಕಲಿಕೆ ಬಳಕೆಯ ನೆಲೆ. ಈ ಮೊದಲೇ ಹೇಳಿದಂತೆ ಈ ನೆಲೆಯ ಭಾಷಾ ಯೋಜನೆಯನ್ನು ಅಗತ್ಯವೆಂದು ಕೆಲವರು ಒಪ್ಪುವುದಿಲ್ಲ. ಆದರೆ ಮೊದಲ ಯೋಜನೆಯಲ್ಲಿ ಆದ ಸ್ಥಾನಮಾನದ ನಿರ್ಣಯ ಮಾತ್ರ ಕೆಲವೊಮ್ಮೆ ಸಾಲುವುದಿಲ್ಲ. ಏಕೆಂದರೆ ಒಂದಕ್ಕಿಂತ ಹೆಚ್ಚು ಭಾಷೆಯನ್ನು ಆಡುವ ಸಮುದಾಯಗಳು ಹೆಚ್ಚಾಗುತ್ತಿರುವ ಸಂದರ್ಭಗಳು. ಇದರಿಂದಾಗಿ ಯಾವ ಯಾವ ಭಾಷೆಗಳನ್ನು ಕಲಿಯಬೇಕು. ಹಾಗೆ ಕಲಿಯಲು ಅನುಕೂಲವಾದ ದಾರಿಗಳ ಯಾವುವು ಎಂಬುದನ್ನು ತಿಳಿಸುವ ಯೋಜನೆಗಳು ಅಗತ್ಯ. ಅಲ್ಲದೇ ಹಲವು ಭಾಷೆಗಳಲ್ಲಿ ಯಾವ ಭಾಷೆಯನ್ನು ಎಲ್ಲಿ ಹೇಗೆ ಬಳಸಬೇಕು ಎಂಬುದನ್ನು ತೋರಿಸಿಕೊಡುವ ಅಗತ್ಯವಿದೆ. ಕನ್ನಡದಂತಹ ಭಾಷೆಗೆ ಈ ನೆಲೆಯ ಯೋಜನೆಗಳು ಅಗತ್ಯವೆಂದು ಈ ಹಿಂದೆ ಹೇಳಿದೆ. ಕನ್ನಡಕ್ಕೆ ಎಲ್ಲಾ ವಲಯಗಳಲ್ಲೂ ಮನ್ನಣೆ ನೀಡುವ ನಿರ್ಧಾರವನ್ನು ಸರ್ಕಾರ ಮಾಡಿದರೆ ಸಾಲದು. ಅದನ್ನು ಎಲ್ಲಾ ವಲಯದಲ್ಲೂ ಬೆಳೆಸಲು ಅನುಕೂಲವಾದ ಸಾಧ್ಯತೆಗಳನ್ನು ಸೃಷ್ಟಿಸಬೇಕಾಗುತ್ತದೆ. ಆಗ ಮಾತ್ರ ಕನ್ನಡದ ಬಳಕೆ ನಿರ್ದಿಷ್ಟ ಗುರಿಯತ್ತ ಸಾಗುವುದು ಸಾಧ್ಯವಾಗುತ್ತದೆ.

ಕಳೆದ 50 ವರ್ಷಗಳಲ್ಲಿ ಈ ಮೂರು ನೆಲೆಗಳಲ್ಲಿ ನಡೆದಿರುವ ಕರ್ನಾಟಕದ ಭಾಷಾ ಯೋಜನೆಗಳ ವಿವರವಾದ ಸಮೀಕ್ಷೆ ಅಗತ್ಯವಾಗಿದೆ. ಕರ್ನಾಟಕ ಸರ್ಕಾರವು ತನ್ನ ಭಾಷಾ ನೀತಿಯನ್ನು ಸರಳ ನೆಲೆಯಲ್ಲಿ ನಿರೂಪಿಸಿದೆ. ಆದರೂ ಅದರ ಕೆಲವು ಪರಿಣಾಮಗಳನ್ನು ಕಾಲದಿಂದ ಕಾಲಕ್ಕೆ ನಾವು ನೋಡುತ್ತಾ ಬಂದಿದ್ದೇವೆ. ಭಾರತದ ಸಂವಿಧಾನದ ರಾಷ್ಟ್ರದ ಅಧಿಕೃತ ಸಂಪರ್ಕ ಭಾಷೆಯಾಗಿ ಹಿಂದಿಯನ್ನು ಆಯ್ಕೆ ಮಾಡಿದೆ. (ಆ ಹೊತ್ತಿನಲ್ಲಿ ಹೀಗೆ ಸಂಪರ್ಕ ಭಾಷೆಯಾಗಬೇಕಾದದ್ದು ಹಿಂದಿಯಲ್ಲ, ಹಿಂದೂಸ್ಥಾನಿ. ಇದನ್ನು ದೇವನಾಗರಿ, ಮತ್ತು ಪರ್ಶಿಯನ್ ಲಿಪಿಗಳೆರಡರಲ್ಲೂ ಬರೆಯಬಹುದಾಗಿದೆ ಎಂಬುದು ಗಾಂಧೀಜಿಯವರ ನಿಲುವಾಗಿತ್ತು. ಆದರೆ ಹಿಂದೂಸ್ಥಾನಿಗೆ ಆ ಸ್ಥಾನವನ್ನು ನೀಡಲು ಆ ಹೊತ್ತಿನ ಆಳುವ ವರ್ಗದ ಒಂದು ಗುಂಪು ಸಿದ್ಧವಿರಲಿಲ್ಲ. ಇವರು ಪ್ರಬಲರಾಗಿ ತಮ್ಮವಾದ ಮಂಡಿಸಿದರು. ಸಂವಿಧಾನ ರಚನೆಯ ಸಂದರ್ಭದಲ್ಲಿ ಈ ಗುಂಪಿನ ವಾದಕ್ಕೆ ಮನ್ನಣೆ ಸಿಕ್ಕು ದೇವನಾಗರಿ ಲಿಪಿಯಲ್ಲಿ ಬರೆಯುವ ಹಿಂದಿಗೆ ರಾಷ್ಟ್ರದ ಭಾಷೆಯಾಗುವ ಅವಕಾಶ ದೊರಕಿತು. ಇದರಿಂದ ಉಂಟಾದ ಪರಿಣಾಮಗಳ ಚರ್ಚೆಗೆ ಇಲ್ಲಿ ಅವಕಾಶವಿಲ್ಲ). ಜೊತೆಗೆ ಅಲ್ಲಿಯವರೆಗೆ ಆಡಳಿತ ಭಾಷೆಯಾಗದ್ದ ಇಂಗ್ಲಿಶನ್ನು ಕೂಡ ಅಧಿಕೃತ ಸಂಪರ್ಕ ಭಾಷೆಯನ್ನಾಗಿ ಪರಿಗಣಿಸಲಾಯಿತು. ರಾಷ್ಟ್ರದ ಮಟ್ಟದಲ್ಲಿ ಇದರ ಪರಿಣಾಮಗಳೇನೇ ಇರಲಿ. ರಾಜ್ಯಮಟ್ಟದಲ್ಲಿ ಈ ನೀತಿಯ ಪರಿಣಾಮ ಏನಾಯಿತೆಂಬುದನ್ನು ಗಮನಿಸಬೇಕು.

ಸಂಪರ್ಕ ಭಾಷೆಯಾಗಿ ಅವಕಾಶ ಪಡೆದ ಇಂಗ್ಲಿಶ್ ಭಾಷೆಯು ರಾಜ್ಯಮಟ್ಟದಲ್ಲಿ ಎರಡನೆಯ ಆಡಳಿತ ಭಾಷೆಯಾಗಿಯೂ ಜಾಗ ಪಡೆದುಕೊಂಡಿತ್ತು. ರಾಜ್ಯಗಳ ನಡುವಣ ಮತ್ತು ರಾಜ್ಯ ಕೇಂದ್ರಗಳ ನಡುವಣ ವ್ಯವಹಾರಕ್ಕೆ ಇಂಗ್ಲಿಶ್ ಅಗತ್ಯವೆಂಬ ವಾದ ಮಂಡನೆಯಾಗಿ ಅದರ ಪರಿಣಾಮದಿಂದ ಇಂಗ್ಲಿಶ್‌ಗೆ ಸಂಪರ್ಕ ಭಾಷೆಯ ಅವಕಾಶ ಸಿಕ್ಕಿದ್ದೇನೋ ಸರಿ. ಆದರೆ ರಾಜ್ಯ ಮಟ್ಟದಲ್ಲಿ ಇಂಗ್ಲಿಶ್ ಆಡಳಿತ ಭಾಷೆಯಾಗಿಯೇ ಮುಂದುವರೆಯಿತು. ರಾಜ್ಯಗಳು ತಂತಮ್ಮ ಪ್ರಾಂತೀಯ ಭಾಷೆಗಳನ್ನು ತಂತಮ್ಮ

ರಾಜ್ಯಗಳ ಆಡಳಿತ ಭಾಷೆಯಾಗಿ ಬಳಸಬಹುದು ಎಂಬ ಅವಕಾಶ ರಾಜ್ಯಾಂಗದಲ್ಲಿದೆ. ಹೀಗಿದ್ದರೂ ಕರ್ನಾಟಕದಲ್ಲಿ ಕನ್ನಡವನ್ನು ಆಡಳಿತ ಭಾಷೆಯಾಗಿ ಬಳಸುವ ಅವಕಾಶ ನೀಡುವ ಕಾನೂನು ಜಾರಿಗೆ ಬರಲು 7 ವರ್ಷ ಹಿಡಿಯಿತು. 1963 ರಲ್ಲಿ ಈ ಅವಕಾಶ ನೀಡುವ ಮಸೂದೆಯನ್ನು ಕರ್ನಾಟಕ ವಿಧಾನ ಮಂಡಲ ಅಂಗೀಕರಿಸಿತು. ಇದರಿಂದ **ಇಂಗ್ಲಿಶ್‌ನ ಬದಲು ಕನ್ನಡ** ಎಂದಾಗಲಿಲ್ಲ. ಬದಲಿಗೆ **ಇಂಗ್ಲಿಶ್‌ನ ಜೊತೆಯಲ್ಲಿ ಕನ್ನಡ** ಎಂಬ ಪರಿಸ್ಥಿತಿ ನಿರ್ಮಾಣವಾಯಿತು.

ಭಾರತ ಸಂವಿಧಾನದ ಭಾಷಾ ನೀತಿಯಲ್ಲಿ ಇಂಗ್ಲಿಶ್‌ಗೆ ಸಂಪರ್ಕ ಭಾಷೆಯಾಗಿ ಅವಕಾಶ ನೀಡಿದ್ದು, ಸಂವಿಧಾನ ಅಂಗೀಕೃತವಾದ ಸಂದರ್ಭದ ಮುಂದಿನ 15 ವರ್ಷಗಳಿಗೆ ಮಾತ್ರ. ಅಂದರೆ 1965ರ ಜನವರಿ 26ರ ನಂತರ ಇಂಗ್ಲಿಶ್‌ನ್ನು ಸಂಪರ್ಕ ಭಾಷೆಯಾಗಿ ಬಳಸುವ ಅವಕಾಶ ಇಲ್ಲವೆಂದೇ ಸ್ಪಷ್ಟಪಡಿಸಲಾಗಿತ್ತು. ಆದರೆ ಈ ಹೊತ್ತಿಗೆ ಎಲ್ಲ ರಾಜ್ಯಗಳು ಹಿಂದಿಯನ್ನು ಸಂಪರ್ಕ ಭಾಷೆಯಾಗಿ ಬಳಸಲು ಸಿದ್ಧಗೊಳ್ಳಬೇಕಿತ್ತು. ಜೊತೆಗೆ ತಮ್ಮ ಪ್ರಾಂತೀಯ ಆಡಳಿತವೆಂದು ಪ್ರಾಂತೀಯ ಭಾಷೆಗಳಲ್ಲಿ ನಡೆಸಲು ಸನ್ನದ್ಧಗೊಳ್ಳಬೇಕಿತ್ತು. 1965ರಲ್ಲಿ ಆಗಬೇಕಾಗಿದ್ದ ಪರಿವರ್ತನೆ ಆಗಿರಲಿಲ್ಲ. ಸಂವಿಧಾನಕ್ಕೆ ಮತ್ತೊಂದು ತಿದ್ದುಪಡಿಯನ್ನು ತಂದು ಇಂಗ್ಲಿಶನ್ನು ಸಂಪರ್ಕ ಭಾಷೆಯನ್ನಾಗಿ ಮತ್ತೆ ಮುಂದುವರೆಸುವ ಅವಕಾಶವನ್ನು ಕಲ್ಪಿಸಲಾಯಿತು. ಈ ತಿದ್ದುಪಡಿಯಲ್ಲಿ ಬಹು ಎಚ್ಚರಿಕೆಯಿಂದ ಕಾಲಮಿತಿಯ ಶರತ್ತನ್ನು ವಿಧಿಸಿರಲಿಲ್ಲ. ಮೊದಲ 15 ವರ್ಷಗಳಲ್ಲಿ ಆಗದೆ ಹೋದದ್ದು ಮುಂದಿನ 40 ವರ್ಷಗಳಲ್ಲಾದರೂ ಆಗುವುದು ಹೇಗೆ ಸಾಧ್ಯ? ಇಂಗ್ಲಿಶ್ ತನ್ನ ಸ್ಥಾನದಲ್ಲಿ ಭದ್ರವಾಗಿ ಉಳಿದಿದೆ.

ಕರ್ನಾಟಕದಂತಹ ರಾಜ್ಯಗಳು 1965ರಲ್ಲಿ ಹಿಂದಿರುವ ಜೊತೆಗೆ ಇಂಗ್ಲಿಶನ್ನು ಸಂಪರ್ಕ ಭಾಷೆಯನ್ನಾಗಿ ಮುಂದುವರಿಸುವ ಚಳುವಳಿಯ ಪರವಾಗಿ ಇದ್ದುದ್ದಕ್ಕೆ ಎರಡು ಕಾರಣಗಳಿವೆ. ಒಂದು: ಹಿಂದಿ ಒತ್ತಾಯದಿಂದ ಹೇರಲಾದ ಭಾಷೆಯೆಂಬ, ಜನರಲ್ಲಿ ಪ್ರಚಲಿತವಿದ್ದ, ಭಾವನೆಗಳ ಪರವಾಗಿ ನಿಂತದ್ದು. ಹೀಗೆ ಹಿಂದಿಯನ್ನು ಜನರ ಮೇಲೆ ಹೇರುವುದರಿಂದ ದೇಶ ಒಡೆದು ಛಿದ್ರವಾಗುತ್ತದೆ ಎಂಬ ನಿಲುವನ್ನು ರಾಜ್ಯ ಸರ್ಕಾರವು ಸದ್ದಿಲ್ಲದೆ ಸಮರ್ಥಿಸಿದಂತಿದೆ. ಎರಡು: ಈ ಕಾರಣ ಇದಕ್ಕಿಂತ ಮುಖ್ಯವಾದದ್ದು. ಅದೆಂದರೆ ಏಕೀಕರಣವಾದ ಒಂಬತ್ತು ವರ್ಷಗಳ ನಂತರವು ಕನ್ನಡವನ್ನು ಇಂಗ್ಲಿಶಿನ ಸ್ಥಾನದಲ್ಲಿ ರಾಜ್ಯದ ಆಡಳಿತ ಭಾಷೆಯನ್ನಾಗಿ ಬಳಸಲು ರಾಜ್ಯಸರ್ಕಾರ ಸನ್ನದ್ಧಗೊಂಡಿರಲಿಲ್ಲ. ಇದಕ್ಕೆ ಬೇಕಾದ ಯೋಜನೆಗಳನ್ನು ರೂಪಿಸಿರಲಿಲ್ಲ. ತನ್ನ ಈ ಇಬ್ಬಂದಿ ಸ್ಥಿತಿಯಿಂದ ಹೊರ ಬರಲು ಪ್ರಾಂತೀಯ ಸರಕಾರಗಳಿಗೆ ಇದ್ದ ದಾರಿ ಎಂದರೆ ಹಿಂದಿಯನ್ನು ವಿರೋಧಿಸುವ ನೆಪದಲ್ಲಿ ಇಂಗ್ಲಿಶನ್ನು ಸಮರ್ಥಿಸುವುದು. ಸಂಪರ್ಕ ಭಾಷೆಯಾಗಿ ಇಂಗ್ಲಿಶ್ ಮುಂದುವರೆಯಿತೆಂದರೆ ಬಳಸು ಮಾರ್ಗದಿಂದ ರಾಜ್ಯ ಮಟ್ಟದಲ್ಲಿ ಆಡಳಿತ ಭಾಷೆಯಾಗಿ ಇಂಗ್ಲಿಶನ್ನೇ ಉಳಿಸಿಕೊಳ್ಳುವ ಅವಕಾಶ ಸಿಗುತ್ತದೆ. ಈ ಸಂಧಿಕಾಲದಲ್ಲಿ ಕನ್ನಡದ ನೀತಿ ಹಿಂದೆ ಸರಿದು ಆ ಸಂದರ್ಭದ ಆಡಳಿತಾತ್ಮಕ ಬಿಕ್ಕಟ್ಟಿನಿಂದಾಗಿ ಪಾರಾಗಲೂ ಸರಕಾರಗಳು ನಿರ್ಧರಿಸಿದ್ದವು. ಹೀಗಾಗಿ ಆಡಳಿತ ಭಾಷೆಯಾಗಿ ಕನ್ನಡ ಮಾನ್ಯವಾದರೂ ಅದು ಇಂಗ್ಲಿಶಿನೊಡನೆ ಸೆಣಸುವ ಸಂದರ್ಭ ಮಾತ್ರ ಹಾಗೆಯೇ ಮುಂದುವರೆದಿತ್ತು. ಇನ್ನೂ ಪರಿಸ್ಥಿತಿ ಹಾಗೆಯೇ ಉಳಿದಿದೆ.

ಭಾಷಾ ನೀತಿಯ ಇನ್ನೊಂದು ನೆಲೆ ಎಂದರೆ ಸಾಮಾಜೀಕರಣದ ಸಾಧನವಾದ ಶಿಕ್ಷಣ ಕ್ಷೇತ್ರದಲ್ಲಿ ಕಲಿಕೆಯ ಭಾಷೆಯಾಗಿ ಯಾವುದನ್ನೂ ಬಳಸಬೇಕು ಎಂಬ ಬಗ್ಗೆ ನಿರ್ಧಾರ ಮಾಡುವುದು. ಏಕೀಕರಣಕ್ಕೂ ಹಿಂದೆಯೇ ಕರ್ನಾಟಕದ ಹಲವು ಪ್ರದೇಶಗಳಲ್ಲಿ ಸಾರ್ವತ್ರಿಕ ಶಿಕ್ಷಣ ಜಾರಿಯಲ್ಲಿತ್ತು. ಇದರ ಸ್ವರೂಪ ಮತ್ತು ಪ್ರಮಾಣ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಇದ್ದವು. ಹೈದ್ರಾಬಾದ್ ನಿಜಾಮ್‌ರ ಆಳ್ವಿಕೆಯಲ್ಲಿನ ಪ್ರದೇಶಗಳನ್ನು ಬಿಟ್ಟರೆ ಉಳಿದ ಕಡೆ ಸಾರ್ವತ್ರಿಕ ಶಿಕ್ಷಣದಲ್ಲಿ ಕಲಿಕೆಯ ಭಾಷೆಯಾಗಿ ಕನ್ನಡಕ್ಕೆ ಮನ್ನಣೆ ದೊರೆತಿತ್ತು. ಸರಿಸುಮಾರು 70 – 80 ವರ್ಷ ಹೀಗೆ ಕನ್ನಡವನ್ನು ಕಲಿಕೆಯ ಮಾಧ್ಯಮವನ್ನಾಗಿ ಬಳಸಿದ ಪರಿಣಾಮವಾಗಿ ಏಕೀಕರಣದ ಹೊತ್ತಿನಲ್ಲಿ ಆಡಳಿತ ಭಾಷೆಯ ಸಂಬಂಧದಲ್ಲಿ ಇದ್ದ ಸಮಸ್ಯೆಗಳು ಇಲ್ಲಿ ಇರಲಿಲ್ಲ. ಹೆಚ್ಚೆಂದರೆ ಈಗಾಗಲೇ ಬಳಕೆಯಲ್ಲಿದ್ದ ಈ ನೀತಿಯನ್ನು ಅಧಿಕೃತಗೊಳಿಸುವುದು ಮತ್ತು ವ್ಯಾಪಕಗೊಳಿಸುವುದು ಮಾತ್ರ ಸರ್ಕಾರದ ಗುರಿ ಆಗಬೇಕಿತ್ತು. ಇದನ್ನು ಸರ್ಕಾರ ನಿರಾಕರಿಸಲಿಲ್ಲ. ಕನ್ನಡವನ್ನು ಸಾರ್ವತ್ರಿಕ ಶಿಕ್ಷಣದ ಕಲಿಕೆಯ ಮಾಧ್ಯಮವನ್ನಾಗಿ ಒಪ್ಪಿಕೊಳ್ಳುವ ನೀತಿಯನ್ನು ಸರ್ಕಾರ ಮುಂದುವರೆಸಿತ್ತು.

ಆದರೆ ಮುಂದಿನ ದಿನಗಳು ಅಷ್ಟು ಸರಳವಾಗಲಿಲ್ಲ. ಅದಕ್ಕೆ ಶೈಕ್ಷಣಿಕವಲ್ಲದ ಹಲವು ಕಾರಣಗಳಿವೆ. ಮೊದಲನೆಯದಾಗಿ ಕಲಿಕೆಯ ವ್ಯಾಪ್ತಿಗೆ ಬಂದವರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಾ ಹೋಯಿತು. ಕಡ್ಡಾಯ ಶಿಕ್ಷಣದ ಹೊಣೆಹೊತ್ತ ಸರ್ಕಾರ ತನ್ನ ಸಂಪನ್ಮೂಲಗಳನ್ನು ಬಳಸಿ ನಾಡಿನ ಎಲ್ಲಾ ಕಡೆಯೂ ಪ್ರತಿ ಮಗುವಿಗೂ ಹತ್ತು ವರ್ಷಗಳ ಶಿಕ್ಷಣವನ್ನು ನೀಡುವುದು ಅಗತ್ಯವಾಗಿತ್ತು. ಆದರೆ ರಾಜ್ಯ ಸರ್ಕಾರದ ಇತರ ಯೋಜನಾ ಪ್ರಕ್ರಿಯೆಗಳು ಈ ಗುರಿಯನ್ನು ಮುಂಚೂಣಿಯಲ್ಲಿ ಇರಿಸಿಕೊಳ್ಳಲಿಲ್ಲ. ಸರಕಾರ ತಾನು ಮಾಡಬೇಕಾದ ಕೆಲಸವನ್ನು ಪೂರೈಸಲು ಖಾಸಗಿ ವಲಯಕ್ಕೆ ಅವಕಾಶ ನೀಡಿತು. ಶಿಕ್ಷಣ ಪ್ರಸಾರವೂ ತಮ್ಮ ಹಲವು ಗುರುತುಗಳಲ್ಲಿ ಒಂದೆಂದು ತಿಳಿದಿದ್ದ ಕೆಲವು ಸಾಮಾಜಿಕ ಸಂಸ್ಥೆಗಳು ಈ ಮೊದಲು ಸಾರ್ವತ್ರಿಕ ಶಿಕ್ಷಣ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದವು. ಕ್ರೈಸ್ತ ಮಿಶನರಿಗಳು, ವೀರಶೈವ ಮಠಗಳು ದೇಶೀಯ ಆಡಳಿತ ಸ್ಥಾಪನೆಯ ಗುರಿ ಹೊಂದಿದ ಸೇವಾ ಸಂಸ್ಥೆಗಳು, ಹೀಗೆ ತೊಡಗಿಕೊಂಡು ತಂತಮ್ಮ ಶಾಲೆಗಳಲ್ಲಿ ಸಾರ್ವತ್ರಿಕ ಶಿಕ್ಷಣವನ್ನು ನೀಡುತ್ತಿದ್ದವು. ಇವುಗಳಲ್ಲಿ ಶ್ರೀಮಂತ ವರ್ಗದ ವಿದ್ಯಾರ್ಥಿಗಳಿಗಾಗಿಯೇ ಮೀಸಲಾಗಿದ್ದ ಕೆಲವು ಬೆರಳೆಣಿಕೆಯ ಶಾಲೆಗಳನ್ನು ಬಿಟ್ಟರೆ ಉಳಿದ ಕಡೆ ಸರ್ಕಾರದ ನೀತಿಯನ್ನು ಯಥಾವತ್ತಾಗಿ ಅನುಷ್ಠಾನಗೊಳಿಸುವ ಕೆಲಸವೇ ನಡೆಯುತ್ತಿತ್ತು. ಹಾಗಾಗಿ ಕನ್ನಡದ ಕಲಿಕೆ, ಬಳಕೆಗಳಿಗೆ ಆಘಾತಕಾರಿಯಾದ ಸಂದರ್ಭಗಳು ಇರಲಿಲ್ಲ. ಆದರೆ ಏಕೀಕರಣದ ಅನಂತರದ ಎರಡು ದಶಕಗಳು ಕಳೆಯುವ ಹೊತ್ತಿಗೆ ಖಾಸಗಿಯವರು ಅಧಿಕ ಪ್ರಮಾಣದಲ್ಲಿ ಈ ವಲಯವನ್ನು ಪ್ರವೇಶಿಸಿದರು. ಮೇಲು ನೋಟಕ್ಕೆ ಶಿಕ್ಷಣ ಪ್ರಸಾರ ಇವರ ಉದ್ದೇಶವೆಂದು ತೋರಿದರೂ ಸರ್ಕಾರ ತನ್ನ ಹೊಣೆ ನಿರ್ವಹಿಸದೆ ಇದ್ದುದರಿಂದ ಉಂಟಾದ ನಿರ್ವಾತ ಪ್ರದೇಶವನ್ನು ತುಂಬಲೆಂದು ಇವರು ಬಂದಂತೆ ತೋರುತ್ತದೆ. ಹೀಗೆ ಪ್ರವೇಶಿಸಿದ ಖಾಸಗಿ ಶಾಲೆಗಳು ಕನ್ನಡವನ್ನು ಕಲಿಕೆಯ ಭಾಷೆಯನ್ನಾಗಿ ಬಳಸಬೇಕು ಎಂಬ ನೀತಿಯನ್ನು ಅದು ಇರುವಂತೆಯೇ ಪಾಲಿಸಲಿಲ್ಲ. ಇದು ದೂರಗಾಮಿಯಾದ ಹಲವು ಪರಿಣಾಮವನ್ನುಂಟು ಮಾಡಿತ್ತು.

ಹೀಗೆ ಖಾಸಗಿ ಶಾಲೆಗಳು ಇಂಗ್ಲಿಶ್ ಮಾಧ್ಯಮದ ಪರವಾಗಿ ನಿಂತುದಕ್ಕೆ ಹಲವು ಕಾರಣಗಳನ್ನು ಗುರುತಿಸಲಾಗಿದೆ.

1) ಇಂಗ್ಲಿಶ್‌ಗೆ ಇದ್ದ ಹೆಚ್ಚಿನ ಮಾನ್ಯತೆಯಿಂದಾಗಿ ಆ ಭಾಷೆಯ ಮೂಲಕ ಕಲಿಯಲು ಜನರಲ್ಲಿ ಅಪೇಕ್ಷೆ ಹೆಚ್ಚಿದೆ. 2) ವೃತ್ತಿ ಅವಕಾಶಗಳಿಗಾಗಿ ಹೆಚ್ಚು ಚಲನಶೀಲರಾಗಿ ಜನರು ರಾಜ್ಯದ ಹೊರಗೆ ಹೋಗಬೇಕಾಗಿ ಬಂದುದರಿಂದಾಗಿ ಅವರು ಕನ್ನಡ ಮಾಧ್ಯಮದ ಮೂಲಕ ಕಲಿತರೇ ಅವಕಾಶಗಳಿಂದ ವಂಚಿತರಾಗುತ್ತಾರೆ. 3) ಪೋಷಕರು ತಮ್ಮ ಮಕ್ಕಳಿಗೆ ಇಂಗ್ಲಿಶ್ ಮೂಲಕ ಕಲಿಸಲು ಅಪೇಕ್ಷೆ ಪಡುತ್ತಾರೆ. 4) ಸರಕಾರಿ ಶಾಲೆಗಳಿಗಿಂತ ತಾವು ಭಿನ್ನ ಎಂದು ತೋರಿಸುವ ಮೂಲಕ ಮಕ್ಕಳನ್ನು ತಮ್ಮೆಡೆಗೆ ಸೆಳೆದುಕೊಳ್ಳಲು ಖಾಸಗಿಯವರೂ ಹೀಗೆ ಇಂಗ್ಲಿಶ್ ಮಾಧ್ಯಮವನ್ನು ಆಯ್ದುಕೊಂಡರು.

ಈ ಎಲ್ಲಾ ಕಾರಣಗಳು ಪೂರ್ಣ ಸತ್ಯವೂ ಅಲ್ಲ. ಹಾಗೆಂದು ಇವುಗಳನ್ನು ಹುಸಿಯೆಂದು ನಿರಾಕರಿಸುವಂತೆಯೂ ಇಲ್ಲ. ಖಾಸಗಿ ವಲಯದ ಶಾಲೆಗಳಿಗೆ ಇಂಗ್ಲಿಶ್ ಕಲಿಕೆಯ ಮಾಧ್ಯಮವಾಗಿ ಮನ್ನಣೆ ಪಡೆಯಲು ಇರುವ ಅನ್ಯಕಾರಣಗಳನ್ನು ನಾವು ಪರಿಶೀಲಿಸಬೇಕಾಗಿದೆ. 1956ರ ಪರಿಸ್ಥಿತಿಯ ಅನಂತರದ ಬೆಳವಣಿಗೆಗಳು ಹೇಗೆ ಇಂಗ್ಲಿಶ್ ಮಾಧ್ಯಮದ ಪರಿವಾಗಿವೆ ಎಂಬುದನ್ನು ಇಲ್ಲಿ ಸ್ಥೂಲವಾಗಿ ಪ್ರಸ್ತಾಪಿಸಲಾಗುತ್ತದೆ. ಏಕೀಕರಣದ ಸಂದರ್ಭದಲ್ಲಿ ನಿಜಾಮ ಆಡಳಿತದ ಪ್ರದೇಶಗಳನ್ನು ಹೊರತು ಪಡಿಸಿದರೆ ಬಹುಮಟ್ಟಿಗೆ ಕನ್ನಡ ಮಾಧ್ಯಮವೇ ಸಾರ್ವತ್ರಿಕ ಶಿಕ್ಷಣದಲ್ಲಿ ಅಧಿಕೃತವಾಗಿ ಮತ್ತು ಆಚರಣೆಯಲ್ಲಿ ಜಾರಿಯಲ್ಲಿತ್ತು. ಆದರೆ ಇದೇ ಮಾತನ್ನು ಉನ್ನತ ಶಿಕ್ಷಣ ಮತ್ತು ತಾಂತ್ರಿಕ, ವೈದ್ಯಕೀಯ ಶಿಕ್ಷಣಗಳಲ್ಲಿ ಅನ್ವಯಿಸಲು ಬರುವುದಿಲ್ಲ. ಅಲ್ಲಿ ಇಂಗ್ಲಿಶ್ ಮಾಧ್ಯಮವೇ ಜಾರಿಯಲ್ಲಿತ್ತು. ಕೇಂದ್ರ ಸರ್ಕಾರದ ಕಾರ್ಯಕ್ರಮ ಒಂದರ ಅನ್ವಯ ರಾಜ್ಯದ ಆಗಿನ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣದ ಹಂತದಲ್ಲಿ ಕನ್ನಡವನ್ನು ಶಿಕ್ಷಣ ಮಾಧ್ಯಮವನ್ನಾಗಿ ಅಳವಡಿಸಲು ಆರಂಭಿಸಲಾಯಿತು. ಇದಕ್ಕಾಗಿ ವಿಶೇಷ ಅನುದಾನ ಪಡೆದ ವಿಶ್ವವಿದ್ಯಾಲಯಗಳು, ಕನ್ನಡ ಭಾಷೆಯಲ್ಲಿ ವಿಜ್ಞಾನ ಮತ್ತು ಮಾನವಿಕ ವಿಷಯಗಳಲ್ಲಿ ಹೊಸ ಪಠ್ಯ ಪುಸ್ತಕಗಳನ್ನು ಸಿದ್ಧಪಡಿಸುವುದು ಮತ್ತು ಇಂಗ್ಲಿಶ್‌ನಿಂದ ಅನುವಾದಿಸುವ ಯೋಜನೆಯನ್ನು ಕೈಗೆತ್ತಿಕೊಂಡವು. ಆದರೆ ಈ ಯೋಜನೆ ವ್ಯಾಪಕ ಯಶಸ್ಸನ್ನು ಪಡೆಯಲಿಲ್ಲ. ಈ ಕನ್ನಡ ಮಾಧ್ಯಮ ಅಳವಡಿಕೆ ಪದವಿ ಪೂರ್ವ ಮತ್ತು ಪದವಿ ತರಗತಿಗಳಲ್ಲಿ ಜಾರಿಗೆ ಬಂದಂತೆ ಸ್ನಾತಕೋತ್ತರ ವೈದ್ಯಕೀಯ, ತಾಂತ್ರಿಕ ಮುಂತಾದ ಪದವಿಗಳಲ್ಲಿ ಮತ್ತು ವೃತ್ತಿ ತರಬೇತಿ ನೀಡುತ್ತಿದ್ದ ತರಗತಿಗಳಲ್ಲಿ ಜಾರಿಗೆ ಬರಲಿಲ್ಲ. ಅಂದರೆ ಕನ್ನಡ ಭಾಷೆಯೂ ಸಾಮಾನ್ಯ ಶಿಕ್ಷಣದ ಅವಧಿಯ ಆಚೆಗೆ ಶಿಕ್ಷಣ ಮಾಧ್ಯಮವಾಗಿ ಮನ್ನಣೆ ಪಡೆಯಲಿಲ್ಲ.

ಈ ಹಂತದ ಶಿಕ್ಷಣ ಮಾತ್ರ ಹೊಸ ಬಗೆಯ ವೃತ್ತಿಗಳಿಗೆ ಅವಕಾಶವನ್ನು ಕಲ್ಪಿಸುತ್ತಿತ್ತು. ಆದರೆ ಸಾರ್ವತ್ರಿಕ ಶಿಕ್ಷಣ ಪಡೆದವರು ಉನ್ನತ ಶಿಕ್ಷಣ ಪಡೆಯುವ ಮೂಲಕ ತಮ್ಮ ಜೀವನ ನಿರ್ವಹಣೆಗೆ ಹೊಸ ವೃತ್ತಿಗಳನ್ನು ಪಡೆಯುವ ಅವಕಾಶಗಳಿದ್ದವು. ಇದು ಸಹಜವಾಗಿಯೇ ಇಂಗ್ಲಿಶ್ ಮಾಧ್ಯಮದ ಕಡೆಗೆ ಒಲವನ್ನು ರೂಪಿಸಿತ್ತು. ಪ್ರಾಥಮಿಕ ಹಂತದಲ್ಲೇ ಉನ್ನತ ಶಿಕ್ಷಣ ಪಡೆಯಲು ಬೇಕಾದ ಅರ್ಹತೆಗಳನ್ನು

ಗಳಿಸಿಕೊಳ್ಳುವತ್ತ ಸಾಮಾಜಿಕ ಒಲವು ಮೂಡಿತು. ಕೆಳಹಂತದ ಶಿಕ್ಷಣ ಕ್ಷೇತ್ರದ ಸಂಸ್ಥೆಗಳು ತಮ್ಮ ವಿದ್ಯಾರ್ಥಿಗಳು ಹೀಗೆ ಉನ್ನತ ಶಿಕ್ಷಣ ವಲಯಕ್ಕೆ ದಾಟಲು ಅರ್ಹರಾಗಿದ್ದಾರೆ ಎಂಬುದನ್ನು ತೋರಿಸಿಕೊಡಬೇಕಾಗಿತ್ತು.

ಶಿಕ್ಷಣ ಕ್ಷೇತ್ರವೇ ಆಯ್ಕೆ ಮತ್ತು ನಿರಾಕರಣೆಗಳ ನೆಲೆಯಲ್ಲಿ ಕೆಲಸ ಮಾಡುತ್ತದೆ. ಸಾರ್ವತ್ರಿಕ ಶಿಕ್ಷಣಕ್ಕಾಗಿ ಬರುವ ಎಲ್ಲಾ ವಿದ್ಯಾರ್ಥಿಗಳನ್ನು ವ್ಯವಸ್ಥೆಯು ಆಯ್ಕೆ ಮಾಡಿಕೊಂಡರೂ ಅವರಲ್ಲಿ ಬಹುಪಾಲನ್ನು ನಿರಾಕರಿಸಿ ಕೆಲವರನ್ನು ಮಾತ್ರ ಉನ್ನತ ಶಿಕ್ಷಣಕ್ಕೆ ಸಿದ್ಧಪಡಿಸುವ ಕ್ರಮ ಇಲ್ಲಿ ಕೆಲಸ ಮಾಡುತ್ತಿದೆ. ಇದರಿಂದ ಇಂಗ್ಲಿಷ್ ಮಾಧ್ಯಮವು ಇಂತಹ ಆಯ್ಕೆಯ ಮತ್ತು ಅವಕಾಶ ನಿರಾಕರಣೆಯ ಕಾರ್ಯಕ್ರಮ ಜಾರಿಗೆ ಬರಲು ನೆರವಾಯಿತು ಎಂದರೆ ಇದು ಕೇವಲ ಶೈಕ್ಷಣಿಕ ನೆಲೆಯ ಆಯ್ಕೆಯಾಗದೆ ಸಾಮಾಜಿಕ ಚಲನಶೀಲತೆಯ ನಿರ್ಧಾರದಂತೆ ತೋರುತ್ತದೆ.

ಉನ್ನತ ಶಿಕ್ಷಣದಲ್ಲಿ ಮತ್ತು ವೃತ್ತಿ ತರಬೇತಿ ಶಿಕ್ಷಣದಲ್ಲಿ ಕನ್ನಡವನ್ನು ಕಲಿಕೆಯ ಮಾಧ್ಯಮವನ್ನಾಗಿ ನಿಗದಿ ಪಡಿಸಲು ಕರ್ನಾಟಕ ಸರ್ಕಾರ ತಾನೇ ಒಂದು ಯೋಜನೆಯನ್ನು ರೂಪಿಸಲಿಲ್ಲ. ಅದಕ್ಕಾಗಿ ಸಾಮಾಜಿಕ ಒತ್ತಾಯಗಳು ಆಗಾಗ ಇದ್ದರೂ ಅವುಗಳನ್ನು ಹತ್ತಿಕ್ಕಿ ಬೇರೆ ಬೇರೆ ಕಾರಣಗಳನ್ನು ಮುಂದೊಡ್ಡಿ ಇಂತಹ ನಿರ್ಧಾರವನ್ನು ತೆಗೆದುಕೊಳ್ಳಲಿಲ್ಲ. ತನ್ನ ಭಾಷಾ ನೀತಿಯ ಚೌಕಟ್ಟಿನಲ್ಲಿ ಕನ್ನಡವನ್ನು ಇಂಗ್ಲಿಶಿನ ಸಹ ಭಾಷೆಯನ್ನಾಗಿ ಇರಿಸುವ ಪ್ರಯತ್ನವನ್ನಷ್ಟೇ ಅದು ಮಾಡಿತ್ತು.

ಸರ್ಕಾರದ ಭಾಷಾ ನೀತಿಯು ಆಡಳಿತ ಮತ್ತು ಶಿಕ್ಷಣ ಕ್ಷೇತ್ರಗಳಲ್ಲದೆ ನ್ಯಾಯಾಂಗ ಕ್ಷೇತ್ರದಲ್ಲೂ ಪ್ರವೃತ್ತವಾಗುವ ಅವಕಾಶವಿದೆ. ಆದರೆ ನ್ಯಾಯಾಂಗ ಸಂವಿಧಾನದ ಪ್ರಕಾರ ಪೂರ್ಣವಾಗಿ ರಾಜ್ಯ ವ್ಯಾಪ್ತಿಯ ವಿಷಯವಲ್ಲ. ಅದಕ್ಕೆ ಕೇಂದ್ರ ಸರ್ಕಾರದ ಅಧಿಕಾರ ವ್ಯಾಪ್ತಿಯೂ ಇದೆ. ಅಂದರೆ ನ್ಯಾಯಾಂಗದಲ್ಲಿ ಯಾವ ಭಾಷೆಯನ್ನು ಬಳಸಬೇಕು ಎಂಬುದನ್ನು ನಿರ್ಧರಿಸುವ ಹೊಣೆ ಪೂರ್ಣವಾಗಿ ರಾಜ್ಯ ಸರ್ಕಾರಕ್ಕೆ ಸೇರುವುದಿಲ್ಲ. ಕೇಂದ್ರ ಸರ್ಕಾರ ಹೈಕೋರ್ಟ್ ಮತ್ತು ಸುಪ್ರಿಂ ಕೋರ್ಟುಗಳಲ್ಲಿ ಇಂಗ್ಲಿಶನ್ನು ಮಾತ್ರ ಅಧಿಕೃತ ಭಾಷೆಯನ್ನಾಗಿ ಮಾತ್ರ ಇರಿಸಿದೆ. ವ್ಯವಹಾರ, ವಾದ ಮಂಡಣೆ ಮತ್ತು ತೀರ್ಪುಗಳು ಇಂಗ್ಲಿಶಿನಲ್ಲಿ ಮಾತ್ರ ಇರಲು ಸಾಧ್ಯ. ಇದಕ್ಕೆ ಸಮರ್ಥನೆಗಳನ್ನು ನೀಡಲಾಗಿದೆ. ಅದೆಲ್ಲವನ್ನು ನಾವಿಲ್ಲಿ ಚರ್ಚಿಸುವ ಅಗತ್ಯವಿಲ್ಲ. ಆದರೆ ಕೆಳ ಹಂತದ ಕೋರ್ಟುಗಳಲ್ಲಿ ಪ್ರಾತೀಯ ಭಾಷೆಗಳು ಬಳಕೆಯಾಗಲು ಅವಕಾಶಗಳಿವೆ. ವ್ಯವಹಾರದಲ್ಲಿ ಮಾತ್ರವಲ್ಲದೇ ವಾದ ಮಂಡನೆ ಮತ್ತು ತೀರ್ಪುಗಳಲ್ಲಿಯೂ ಕನ್ನಡವನ್ನು ಬಳಸಲು ಅವಕಾಶಗಳಿವೆ.

ಇದಲ್ಲದೆ ನ್ಯಾಯಾಂಗದ ಸಂಬಂಧದಲ್ಲಿ ರಾಜ್ಯ ಸರ್ಕಾರ ತಳೆದಿರುವ ಮತ್ತೊಂದು ಕನ್ನಡ ಪರ ನಿಲುವೆಂದರೆ ಎಲ್ಲಾ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕಾನೂನುಗಳನ್ನು ನಿರ್ಣಯಗಳನ್ನು ಅಧಿಕೃತವಾಗಿ ಕನ್ನಡದಲ್ಲಿ ಲಭ್ಯವಾಗುವಂತೆ ಮಾಡುವುದು. ಸಂವಿಧಾನದ ಕನ್ನಡ ಅನುವಾದದ ಜೊತೆಗೆ ಶಿಕ್ಷಾ ಸಂಹಿತೆಯನ್ನು ಕೂಡ ಅನುವಾದಿಸಿ ಅಧಿಕೃತಗೊಳಿಸಿದೆ.

ಈ ಮೂರು ವಲಯಗಳಲ್ಲದೆ ಭಾಷಾ ನೀತಿಯ ನೇರವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ಜಾರಿಗೆ ಬರುವ ವಲಯವೆಂದರೆ ಸಮೂಹ ಮಾಧ್ಯಮಗಳು ಈ ವಲಯದಲ್ಲಿ ಕನ್ನಡ ಅಧಿಕೃತ ಭಾಷೆಯಾಗಿರುವುದು ಸಾಮಾಜಿಕ ಸಂದರ್ಭದ ಪರಿಣಾಮವೇ ಹೊರತು ಸರ್ಕಾರದ ಭಾಷಾ ನೀತಿಯ ಪರಿಣಾಮವಲ್ಲ. ಇಲ್ಲಿ ಹೆಚ್ಚೆಂದರೆ ಸರ್ಕಾರ ಸಮೂಹ ಮಾಧ್ಯಮಗಳ ಕನ್ನಡ ಪರ ನಿಲುವಿಗೆ ಕಾರ್ಯಕ್ರಮಕ್ಕೆ ಒತ್ತಾಸೆಯಾಗುವಂತೆ ತನ್ನ ನಿರ್ಣಯಗಳನ್ನು ಮಾಡುತ್ತದೆ.

ಆಡಳಿತ ಕನ್ನಡ ಅನುಷ್ಠಾನ

ಈ ಹಿಂದೆಯೇ ಹೇಳಿದಂತೆ 1963ರ ಅಕ್ಟೋಬರ್ 10 ರಂದು ಕರ್ನಾಟಕ ರಾಜ್ಯ ಭಾಷಾ ಅಧಿನಿಯಮವನ್ನು ರಾಜ್ಯ ಪತ್ರದಲ್ಲಿ ಪ್ರಕಟಿಸಲಾಯಿತು. ಅಂದರೆ ಏಕೀಕರಣದ ಅನಂತರದ ಸರಿಸುಮಾರು 7 ವರ್ಷಗಳ ನಂತರ ಈ ಅಧಿನಿಯಮ ಜಾರಿಗೆ ಬಂತು. ಈ ಅಧಿನಿಯಮವನ್ನು ಕೊಂಚ ವಿವರವಾಗಿ ಪರಿಶೀಲಿಸುವ ಅಗತ್ಯವಿದೆ.

ಈ ಅಧಿನಿಯಮದ ಪ್ರಕಾರ ಸರ್ಕಾರಿ ಉದ್ದೇಶಗಳಿಗಾಗಿ ಬಳಸಬೇಕಾದ ಭಾಷೆ ಕನ್ನಡವೆಂದೂ, ರಾಜ್ಯ ವಿಧಾನ ಮಂಡಲದ ವ್ಯವಹಾರದ ನಿರ್ವಹಣೆಗೆ ಬಳಸಬೇಕಾದ ಭಾಷೆ ಇಂಗ್ಲಿಶ್ ಎಂದು ಉಪಬಂಧಿಸಲಾಗಿದೆ. ಸರ್ಕಾರಿ ಉದ್ದೇಶಗಳು ಎಂದರೇನು ಮತ್ತು ಏಕೆ ಇಂಗ್ಲಿಶ್‌ನ್ನು ಮಾತ್ರ ವಿಧಾನ ಮಂಡಲದ ವ್ಯವಹಾರಕ್ಕಾಗಿ ಬಳಸಬೇಕು ಎಂಬ ಬಗ್ಗೆ ವಿವರಣೆಯೂ ನಮಗೆ ಲಭ್ಯವಾಗುವುದಿಲ್ಲ. ಮುಂದುವರೆದು ಈ ಅಧಿನಿಯಮವು ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಅಧಿನಿಯಮವನ್ನು ಕನ್ನಡದಲ್ಲಿ ಭಾಷಾಂತರಿಸಿ ಪ್ರಕಟಿಸಲು ಅವಕಾಶ ಕಲ್ಪಿಸುತ್ತದೆ ಮತ್ತು ಹೀಗೆ ಪ್ರಕಟಗೊಂಡ ಕನ್ನಡ ಅನುವಾದದ ಪಾಠವನ್ನು ಅಧಿಕೃತವೆಂದು ಸೂಚಿಸುತ್ತದೆ. ಈ ಕನ್ನಡ ಅನುವಾದದ ಪಾಠ ಅಧಿಕೃತಗೊಳಿಸುವ ಮಾತು ಎರಡು ನೆಲೆಯಲ್ಲಿ ವ್ಯಾಖ್ಯಾನಕ್ಕೆ ಒಳಗಾಗಬಹುದು. 1) ಇಂಗ್ಲಿಶ್ ಮತ್ತು ಕನ್ನಡ ಪಾಠಗಳಲ್ಲಿ ಅರ್ಥವಿವರಣೆಗೆ ಸಂಬಂಧಿಸಿದಂತೆ ಯಾವುದಾದರೂ ಗೊಂದಲಗಳು ಉಂಟಾದರೆ ಆಗ ಕನ್ನಡ ಪಾಠವನ್ನು ಅಧಿಕೃತ ಎಂದು ಭಾವಿಸುವುದು 2) ರಾಜ್ಯ ಪಾಲರ ಅನುಮತಿಯನ್ನು ಪಡೆದು ರಾಜ್ಯ ಪತ್ರದಲ್ಲಿ ಪ್ರಕಟಗೊಂಡ ಈ ಕನ್ನಡ ಅನುವಾದವು ಮಾತ್ರ ಅಧಿಕೃತವೇ ಹೊರತು ಹೀಗೆ ಅನುಮತಿ ಪಡೆಯದ ಇನ್ಯಾವುದೇ ಅನುವಾದವು ಬೇರೆ ಯಾವುದೇ ಕಾರಣದಿಂದ ಸಿದ್ಧಗೊಂಡಿದ್ದರೂ ಅದು ಅಧಿಕೃತವಲ್ಲ ಎಂದು ತಿಳಿಯುವುದು. ಈ ಎರಡು ವ್ಯಾಖ್ಯಾನಗಳಲ್ಲಿ ಎರಡನೆಯದು ಮಾತ್ರ ಸರಿಯೆಂದು ತೋರುತ್ತದೆ ಎಂದರೆ ಮೂಲ ಇಂಗ್ಲಿಶಿನ ಪಾಠಕ್ಕೆ ಕನ್ನಡದಲ್ಲೆ ಹಲವು ಉದ್ದೇಶಿತ ಇಲ್ಲವೇ ಪ್ರಾಸಂಗಿಕ ಅನುವಾದಗಳಿದ್ದರೆ ಅವುಗಳಲ್ಲಿ ಯಾವುದನ್ನು ಅಧಿಕೃತ ಎಂದು ಪರಿಗಣಿಸಬೇಕು ಎಂಬ ಬಗ್ಗೆ ಈ ಅಧಿನಿಯಮವು ಸ್ಪಷ್ಟನೆಯನ್ನು ನೀಡುತ್ತದೆ. ನಾವು ಸಾಧ್ಯವೆಂದು ಹೇಳಿದ ಮೊದಲನೆ ವ್ಯಾಖ್ಯೆಯ ಚರ್ಚೆ ಬಹುಮಟ್ಟಿಗೆ ವಿಧಾನ ಮಂಡಲಗಳಲ್ಲಿ ಮತ್ತು ಉಚ್ಚ ಹಾಗೂ ಉನ್ನತ ನ್ಯಾಯಾಲಯಗಳಲ್ಲಿ ಮಾತ್ರ ಬರುವ ಪ್ರಶ್ನೆ. ಅಲ್ಲೆಲ್ಲಾ ಇಂಗ್ಲಿಶ್ ಮಾತ್ರ ಅಧಿಕೃತ ವ್ಯವಹಾರದ ಭಾಷೆಯೆಂದು ಈಗಾಗಲೇ ಸಿದ್ಧವಾಗಿರುವುದರಿಂದ ಅಲ್ಲಿ

ಅಧಿನಿಯಮಗಳ ಕನ್ನಡ ಅನುವಾದ ಪಾಠದ ಬಳಕೆಯಾಗಲೀ ಅದರ ಅಧಿಕೃತತೆಯಾಗಲೀ ಒಂದು ಪ್ರಶ್ನೆಯಾಗಿ ಬರುವುದು ಸಾಧ್ಯವಿಲ್ಲ. ಎಂದರೆ ಈ ಅಧಿನಿಯಮವು ಕನ್ನಡ ಭಾಷೆಗೆ ಅವಕಾಶ ಕಲ್ಪಿಸುತ್ತಲೂ ತನ್ನ ಅಧಿಕಾರ ವ್ಯಾಪ್ತಿಯ ಕನ್ನಡವನ್ನು ಮಾತ್ರ ಅಧಿಕೃತವೆಂದು ಹೇಳುವ ಪ್ರಯತ್ನ ಮಾಡಿದೆ.

ಈ ಅಧಿನಿಯಮಕ್ಕೆ 1982ರಲ್ಲಿ ಎರಡು ತಿದ್ದುಪಡಿಗಳನ್ನು ಮಾಡಲಾಗಿದೆ. 1963ರವರೆಗೆ ಸುಮಾರು 19 ವರ್ಷಗಳ ಕಾಲ ವಿಧಾನಮಂಡಲದಲ್ಲಿ, ಕನ್ನಡವನ್ನು ಬಳಸಬೇಕೇ, ಬಳಸಿದರೆ ಅದಕ್ಕೆ ಮನ್ನಣೆ ನೀಡಬೇಕೆ ಎಂಬ ಪ್ರಶ್ನೆಗಳು ಮೇಲಿಂದ ಮೇಲೆ ಉದ್ಭವಿಸುತ್ತಲೇ ಬಂದಿವೆ. ರಾಜ್ಯಪಾಲರ ಜಂಟಿ ಅಧಿವೇಶನ ಭಾಷಣ ಸಂದರ್ಭದಲ್ಲಿ, ರಾಜ್ಯದ ಆಯವ್ಯಯ ಮಂಡನೆಯ ಸಂದರ್ಭದಲ್ಲಿ ಇಂಗ್ಲಿಶ್ ಭಾಷೆಯಲ್ಲಿ ಮಂಡನೆಗಳು ನಡೆಯುತ್ತಿದ್ದುದನ್ನು ವಿರೋಧಿಸಿ ವಿಧಾನಮಂಡಲದಲ್ಲಿ ಸದಸ್ಯರು ಪ್ರತಿಭಟಿಸುತ್ತಲೇ ಇದ್ದರು. ಆದರೂ ಬದಲಾವಣೆಯಾಗಲು ಇಷ್ಟು ದೀರ್ಘಾವಧಿ ಬೇಕಾಯಿತು. 1982ರ ತಿದ್ದುಪಡಿಯಲ್ಲೂ ಮುಖ್ಯವಾಗಿ ಮಾಡಿರುವ ಬದಲಾವಣೆ ಹೀಗಿದೆ. ರಾಜ್ಯ ವಿಧಾನ ಮಂಡಲದ ವ್ಯವಹಾರದ ನಿರ್ವಹಣೆಗಾಗಿ ಕನ್ನಡ ಮತ್ತು ಹಿಂದಿಯ ಜೊತೆಗೆ ಇಂಗ್ಲಿಶ್ ಭಾಷೆಯ ಉಪಯೋಗವನ್ನು ಮುಂದುವರೆಸಬಹುದು. ಈ ತಿದ್ದುಪಡಿಯು ಕನ್ನಡ ಮತ್ತು ಹಿಂದಿಗಳ ಜೊತೆಗೆ ಇಂಗ್ಲಿಶ್ ಭಾಷೆಯನ್ನು ಬಳಸಲು ಅವಕಾಶ ಕಲ್ಪಿಸುತ್ತದೆ. ವಿಚಿತ್ರವೆಂದರೆ ಅಲ್ಲಿಯವರೆಗೂ ಇಂಗ್ಲಿಶ್ ಮಾತ್ರ ಅಧಿಕೃತವಾಗಿ ಬಳಕೆಯಾಗುತ್ತಿತ್ತು. ಆದರೆ ತಿದ್ದುಪಡಿಯು ಕನ್ನಡ ಮತ್ತು ಹಿಂದಿಗಳು ಬಳಕೆಯಾಗುತ್ತಿವೆ ಎಂಬಂತೆಯೂ ಈಗ ಮತ್ತೆಯೂ ಇಂಗ್ಲಿಶನ್ನು ಬಳಸುತ್ತಾ ಹೋಗಲು ಅವಕಾಶ ಕಲ್ಪಿಸುವಂತೆ ತೋರುತ್ತದೆ.

ರಾಜ್ಯ ಸರ್ಕಾರಗಳ ಭಾಷಾ ನೀತಿಯಲ್ಲಿ ಪ್ರಾಂತೀಯ ಭಾಷೆಗಳನ್ನು ನಿರಾಕರಿಸುವ ಧೋರಣೆ ಇರುವುದಿಲ್ಲ. ಆದರೆ ಅದಕ್ಕೆ ತಕ್ಕ ಅವಕಾಶಗಳನ್ನು ಮಾತ್ರ ಕಲ್ಪಿಸುತ್ತಿರುವುದಿಲ್ಲ. ಅಮೂರ್ತ ಅಧಿಕಾರಗಳನ್ನು ಕಲ್ಪಿಸಿಕೊಟ್ಟರೂ ಪ್ರಾಯೋಗಿಕ ನೆಲೆಯ ಸ್ಪಷ್ಟ ಅವಕಾಶಗಳನ್ನು ನಿರ್ಮಿಸುವುದಿಲ್ಲ. ಈ ಮಾತಿಗೆ ಮೇಲಿನ ತಿದ್ದುಪಡಿ ನಿದರ್ಶನವಾಗಿವೆ. ಕನ್ನಡವನ್ನು ಬಳಸಬಾರದು ಎಂದು ಹೇಳುವುದಿಲ್ಲವಾದರೂ ಸದ್ದಿಲ್ಲದೇ ಇಂಗ್ಲಿಶಿನ ಬಳಕೆಯನ್ನು ಮುಂದುವರೆಸುತ್ತಾ ಹೋಗುವ ಮೂಲಕ ಕನ್ನಡಕ್ಕಿರುವ ಅವಕಾಶವನ್ನು ಪರೋಕ್ಷವಾಗಿ ಇಲ್ಲವಾಗಿಸುವ ಪ್ರಯತ್ನ ಇದಾಗಿದೆ.

1982ರಲ್ಲಿ ಇದೇ ಅಧಿನಿಯಮಕ್ಕೆ ಮತ್ತೊಂದು ತಿದ್ದುಪಡಿಯನ್ನು ತರಲಾಗಿದೆ. ಆ ತಿದ್ದುಪಡಿಯ ಕನ್ನಡ ರೂಪ ಹೀಗಿದೆ. "ಕನ್ನಡ ಭಾಷೆಯನ್ನು ಅ) ಮಂಡಿಸಬೇಕಾದ ಯಾವುದೇ ವಿಧೇಯಕದಲ್ಲಿ ಅಥವಾ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಅನುಮೋದಿಸಲಾದ ಯಾವುದೇ ಅಧಿನಿಯಮದಲ್ಲಿ ಅಥವಾ ಆ) ಕರ್ನಾಟಕ ರಾಜ್ಯಪಾಲರಿಂದ ಪ್ರಖ್ಯಾಪಿಸಲಾದ ಯಾವುದೇ ಅಧ್ಯಾದೇಶದಲ್ಲಿ ಅಥವಾ ಇ) ಸಂವಿಧಾನದ ಮೇರೆಗೆ ಅಥವಾ ಸಂಪತ್ತು ಅಥವಾ ಕರ್ನಾಟಕ ರಾಜ್ಯ ವಿಧಾನ ಂಡಲದಿಂದ ಮಾಡಲಾದ ಯಾವುದೇ ಕಾನೂನಿನ ಮೇರೆಗೆ ರಾಜ್ಯ ಸರ್ಕಾರದಿಂದ ಹೊರಡಿಸಲಾದ ಯಾವುದೇ ಆದೇಶ, ನಿಯಮ, ವಿನಿಮಯ ಅಥವಾ ಉಪವಿಧಿಯಲ್ಲಿ

ಸಹ ಬಳಸಬಹುದು". ಇಷ್ಟು ದೀರ್ಘವಾದ ಉಲ್ಲೇಖ ನೀಡಲು ಕಾರಣಗಳಿವೆ. 1) ಈ ಆಡಳಿತ ಕನ್ನಡದಲ್ಲಿ ಬಳಕೆಯಾಗುವ ಕನ್ನಡದ ರೂಪವನ್ನು ಪರಿಚಯಿಸುವುದು. 2) ಇಷ್ಟು ವಿವರವಾದ ತಿದ್ದುಪಡಿಯಲ್ಲಿ ಕನ್ನಡಕ್ಕೆ ಏನು ಅವಕಾಶ ಕಲ್ಪಿಸಲಾಗಿದೆ ಎಂಬುದನ್ನು ತಿಳಿದುಕೊಳ್ಳುವುದು. ಈ ತಿದ್ದುಪಡಿಯು ಎಲ್ಲಿ ಕನ್ನಡವನ್ನು ಬಳಸಬಹುದು ಎಂದು ಸೂಚಿಸುತ್ತದೆ. ಆ ಸಂಬಂಧದ ವಿವರಗಳನ್ನು ನೀಡುತ್ತದೆ. ಅಧಿನಿಯಮದ ಮೂಲ ಪಾಠದಲ್ಲೇ ಸರ್ಕಾರದ ಆಡಳಿತದಲ್ಲಿ ಕನ್ನಡವನ್ನು ಬಳಸಲು ಮತ್ತು ಅಧಿನಿಯಮಗಳನ್ನು ಕನ್ನಡದಲ್ಲಿ ಭಾಷಾಂತರಿಸಿ ಜಾರಿಗೆ ಕೊಡಲು ಅವಕಾಶ ಕಲ್ಪಿಸಲಾಗಿತ್ತು. ಈ ತಿದ್ದುಪಡಿಯೂ ಆಡಳಿತದ ಉದ್ದೇಶಕ್ಕಾಗಿ ಒದಗಿಸುವ ಸರ್ಕಾರದ ತೀರ್ಮಾನಗಳನ್ನು ಕನ್ನಡದಲ್ಲಿ ಸಿದ್ಧಪಡಿಸಲು ಅವಕಾಶ ಕಲ್ಪಿಸುತ್ತದೆ. ಮೊದಲು ಇಂಗ್ಲಿಶಿನಲ್ಲಿ ಸಿದ್ಧಪಡಿಸಿ ಅನಂತರ ಕನ್ನಡದಲ್ಲಿ ಅನುವಾದಿಸುವ ಮತ್ತು ಈ ಅನುವಾದವನ್ನು ಅಧಿಕೃತಗೊಳಿಸುವ ಪರಿಪಾಠವಿತ್ತು. ಈಗ ಮೂಲ ಪಾಠವನ್ನೇ ಕನ್ನಡದಲ್ಲಿ ಸಿದ್ಧಪಡಿಸುವ ಅವಕಾಶ ಕಲ್ಪಿಸಲಾಗಿದೆ. ಆದರೆ ತಿದ್ದುಪಡಿಯು **ಕನ್ನಡವನ್ನು** ಸಹ ಬಳಸಬಹುದು, ಎಂದು ಹೇಳುತ್ತದೆಯೇ ಹೊರತು **ಕನ್ನಡವನ್ನೇ** ಬಳಸಬೇಕು ಎಂದು ಹೇಳುವುದಿಲ್ಲ ಎಂದರೇನಾಯಿತು? ಮೂಲ ಪಾಠಗಳನ್ನು ಕನ್ನಡದಲ್ಲಿಯೂ ಸಿದ್ಧಪಡಿಸಬಹುದು ಅಥವಾ ಇಂಗ್ಲಿಶಿನಲ್ಲಿಯೂ ಸಿದ್ಧಪಡಿಸಿ ಅನಂತರ ಅದನ್ನು ಕನ್ನಡಕ್ಕೆ ಅನುವಾದಿಸಬಹುದು ಎಂಬ ಎರಡು ಸಾಧ್ಯತೆಗಳನ್ನು ಹಾಗೆಯೇ ಉಳಿಸಿಕೊಳ್ಳಲಾಗಿದೆ. ಇದು ಕನ್ನಡ ಬಳಕೆಯ ಅನಿವಾರ್ಯತೆಯನ್ನು ನಿರೂಪಿಸುವುದಿಲ್ಲ. ಇಂಗ್ಲಿಶನ್ನು ಮೂಲಪಾಠ ರಚನೆಗೆ ಬಳಸುವ ಅವಕಾಶವಿರುವುದರಿಂದ ಅದು ಬಳಕೆಯಾಗುತ್ತಲೇ ಹೋಗುತ್ತದೆ. ಕನ್ನಡವನ್ನು ಸಹ ಬಳಸಬಹುದು ಎಂಬುದು ಕನ್ನಡಕ್ಕೆ ಅವಕಾಶ ಕಲ್ಪಿಸುತ್ತದೆ. ಆದರೂ ಒತ್ತಾಯವನ್ನು ಮಾಡುವುದಿಲ್ಲ. ಈ ಹಿಂದೆ ಹೇಳಿದಂತೆ ಅಧಿಕಾರ ಅಮೂರ್ತವಾಗಿದ್ದರೂ ಪ್ರಾಯೋಗಿಕವಾಗಿ ಅವಕಾಶ ನಿರಾಕರಣೆಯಾಗುವುದಕ್ಕೆ ಇದು ಇನ್ನೊಂದು ನಿದರ್ಶನ.

1982 ತಿದ್ದುಪಡಿಯ ನಂತರ ರಾಜ್ಯದ ಆಡಳಿತ ಭಾಷಾ ಅಧಿನಿಯಮಕ್ಕೆ ಯಾವುದೇ ಬದಲಾವಣೆಗಳು ಆಗಿಲ್ಲ. ಎಂದರೆ ಕನ್ನಡವನ್ನು ವಿಧಾನ ಮಂಡಲದ ಅಧಿಕೃತ ಭಾಷೆಯನ್ನಾಗಿ ಮಾಡುವ ಪ್ರಯತ್ನಗಳು ನಡೆದಿಲ್ಲ. ಇಂಗ್ಲಿಶಿನ ಸಹಭಾಷೆಯಾಗಿ ಮಾತ್ರ ಕನ್ನಡಕ್ಕೆ ಅವಕಾಶ ಕಲ್ಪಿಸಲಾಗಿದೆ. ಈ ಪರಿಸ್ಥಿತಿ ಇನ್ನೊಂದು ದಿಕ್ಕಿನತ್ತ ನಾವು ಯೋಚಿಸುವಂತೆ ಮಾಡುತ್ತದೆ. ಕರ್ನಾಟಕ ರಾಜ್ಯ ನಿರ್ಮಾಣಗೊಂಡ ಸಂದರ್ಭದಲ್ಲಿ ವಿಧಾನ ಮಂಡಲಕ್ಕೆ ಸದಸ್ಯರಾಗಿ ಬಂದವರು ಆವರೆಗೆ ಬೇರೆ ಬೇರೆ ಆಡಳಿತ ಪ್ರದೇಶಗಳ ವಿಧಾನಮಂಡಲಗಳಲ್ಲಿ ಆಡಳಿತ ಮಂಡಳಿಗಳಲ್ಲಿ ಸದಸ್ಯರಾಗಿದ್ದವರು. 1957–1962 ಮತ್ತು 1967 ಚುನಾವಣೆಗಳ ನಂತರದಲ್ಲಿ ಈ ವಿಧಾನ ಮಂಡಲಕ್ಕೆ ಕರ್ನಾಟಕ ರಾಜ್ಯದ ಜನ ಸಮುದಾಯದ ಸದಸ್ಯರು ಸೇರಿಕೊಂಡರು. ಈ ತಲೆಮಾರಿನ ಸದಸ್ಯರಲ್ಲಿ ಕನ್ನಡದ ಜೊತೆಗೆ ಇತರ ಭಾರತೀಯ ಭಾಷೆಗಳನ್ನು ಬಲ್ಲವರು ಮತ್ತು ಇಂಗ್ಲಿಶ್‌ನಲ್ಲಿ ವ್ಯವಹರಿಸಲು ಶಕ್ತರಾದ ಸದಸ್ಯರು ಇರುವುದು ಸಾಮಾನ್ಯವಾಗಿತ್ತು. ಇದಕ್ಕೆ ಆ ಹೊತ್ತಿನ ಸಾಮಾಜಿಕ ರಚನೆಯೂ ಕೂಡ ಮುಖ್ಯ ಕಾರಣವಾಗಿದೆ. ಈ ಸದಸ್ಯರು ಶೈಕ್ಷಣಿಕವಾಗಿ ಮಾತ್ರವಲ್ಲದೇ ಸಾಮಾಜಿಕವಾಗಿಯೂ ಮೇಲು ಜಾತಿ ಮತ್ತು ವರ್ಗಗಳಿಗೆ ಸೇರಿದವರಾಗಿದ್ದರು. ಇದರಿಂದಾಗಿ ಇವರ ರಾಜಕೀಯ ಹಿತಾಸಕ್ತಿಗಳು ಯಾವಾಗಲೂ

ಜನಪರ ಆಗಿರಲೇಬೇಕೆಂಬ ಒತ್ತಾಯವಿರಲಿಲ್ಲ. ಸಮಾಜದ ಕೆಳಮಧ್ಯಮ ಜಾತಿ ಮತ್ತು ವರ್ಗಗಳಿಂದ ಸದಸ್ಯರು ಆಯ್ಕೆಯಾಗುವ ಸಾಧ್ಯತೆಗಳು ಹೆಚ್ಚಾದದ್ದು, ಈಗಾಗಲೇ ಖಚಿತವಾಗಿರುವಂತೆ ಹಾವನೂರ ಆಯೋಗದ ವರದಿಯನ್ನು ಕರ್ನಾಟಕ ಸರ್ಕಾರ ಜಾರಿಗೆ ತಂದನಂತರವೇ. ಏಕೆ 1982ರಲ್ಲಿ ರಾಜ್ಯ ಭಾಷಾ ಅಧಿನಿಯಮಕ್ಕೆ ತಿದ್ದಪಡಿ ಮಾಡಬೇಕಾಯಿತು ಎಂಬುದಕ್ಕೆ ಇಲ್ಲಿ ಕಾರಣಗಳಿವೆ. ಹೊಸ ಸ್ವರೂಪದ ಸದಸ್ಯರುಗಳು ಇದ್ದ ವಿಧಾನಮಂಡಲವು ಸಹಜವಾಗಿಯೇ ಕನ್ನಡದಲ್ಲಿ ಆಡಳಿತ ವ್ಯವಹಾರವನ್ನು ನಡೆಸಬೇಕೆಂದು ಒತ್ತಾಯಿಸಿದೆ.

ಈ ಹಿಂದೆಯೂ ಸದಸ್ಯರುಗಳು ವಿಧಾನ ಮಂಡಲದಲ್ಲಿ ಕನ್ನಡದಲ್ಲಿ ವ್ಯವಹರಿಸುತ್ತಿರಲಿಲ್ಲವೆಂದಲ್ಲ. ಆದರೆ ಅಧಿಕೃತ ವ್ಯವಹಾರದ ದಾಖಲೆಗಳು ಇಂಗ್ಲಿಶಿನಲ್ಲಿದ್ದರೆ ಅದಕ್ಕೆ ಸದಸ್ಯರ ಆಕ್ಷೇಪಗಳು ಇರುತ್ತಿದ್ದುದು ಕಡಿಮೆ. ಲೋಹಿಯಾ ವಾದದ ಹಿನ್ನೆಲೆಯಿಂದ ಬಂದ ಸಮಾಜವಾದಿ ತಾತ್ವಿಕತೆಯ ಸದಸ್ಯರು ಮಾತ್ರ ಅಧಿಕೃತ ಲಿಖಿತ ದಾಖಲೆಗಳು ಕನ್ನಡದಲ್ಲಿ ಇರಬೇಕೆಂದು ಒತ್ತಾಯಿಸುತ್ತಿದ್ದರು. ಉಳಿದಂತೆ ಎಲ್ಲಾ ಸದಸ್ಯರಿಗೂ ಕನ್ನಡ ಇಲ್ಲವೇ ಇಂಗ್ಲಿಶಿನ ಮಾತಿನ ರೂಪಗಳು ಒಪ್ಪಿತವಾದರೂ ಬರಹ ರೂಪಮಾತ್ರ ಇಂಗ್ಲಿಶಿನಲ್ಲೇ ಇರಬೇಕಿತ್ತು. ಈ ಅಂಶವನ್ನು ಎಚ್ಚರಿಕೆಯಿಂದ ಗಮನಿಸಬೇಕಾಗುತ್ತದೆ. ಏಕೆಂದರೆ ವಿಧಾನ ಮಂಡಲದ ವ್ಯವಹಾರದ ಈ ಎರಡು ನೆಲೆಯ ನೀತಿ ಇನ್ನೂ ಕೂಡ ಬೇರೆ ಬೇರೆ ಪ್ರಮಾಣದಲ್ಲಿ ಮುಂದುವರೆದಿದೆ. ಮಾತಿನ ನೆಲೆಯಲ್ಲಿ ಅವಕಾಶ ಪಡೆಯುವ ಕನ್ನಡ, ಬರಹದ ಅಧಿಕೃತ ನೆಲೆಗೆ ದಾಟುವಾಗ ಮಾತ್ರ ಈಗಲೂ ಇಂಗ್ಲಿಶಿನ ಸಾಹಚರ್ಯದಲ್ಲಿ ಇರಬೇಕಾಗುತ್ತದೆ.

1980ರ ಅನಂತರದಲ್ಲಿ ಕರ್ನಾಟಕ ವಿಧಾನ ಮಂಡಲದ ಸದಸ್ಯರ ಸಾಮಾಜಿಕ ರಚನೆಯಲ್ಲಿ ಆಗಿದ್ದ ವ್ಯತ್ಯಾಸಗಳು ಏಕೆ ಹೆಚ್ಚು ಕನ್ನಡ ಪರವಾದವು ಎಂಬುದು ಗಮನಿಸಬೇಕಾದ ವಿಷಯ. ಕನ್ನಡದಲ್ಲಿ ಮಾತನಾಡಲು ಸದಸ್ಯರಿಗೆ ಅವಕಾಶವಿದ್ದರೂ ಅವರಿಗೆ ದೊರೆಯುತ್ತಿದ್ದ ಲಿಖಿತ ದಾಖಲೆಗಳು ಇಂಗ್ಲಿಶಿನಲ್ಲಿರುತ್ತಿದ್ದವು. ಈ ದಾಖಲೆಗಳು ಕನ್ನಡದಲ್ಲಿ ದೊರಕಿಸಬೇಕೆಂದು ಸದಸ್ಯರು ಒತ್ತಾಯ ಮಾಡಿದ್ದು ಸಹಜವಾಗಿದೆ.

ಇದೇ ಆಸುಪಾಸಿನಲ್ಲಿ ಕರ್ನಾಟಕ ವಿಧಾನ ಮಂಡಲವು ಆಡಳಿತ ಭಾಷೆಯಾಗಿ ಕನ್ನಡದ ಅನುಷ್ಠಾನ ಹೇಗೆ ನಡೆದಿದೆ ಅದಕ್ಕಿರುವ ಅಡ್ಡಿ ಆತಂಕಗಳೇನು ಎಂಬುದನ್ನು ಪರಿಶೀಲಿಸಲು ಒಂದು ಉನ್ನತ ಅಧಿಕಾರದ ಸಮಿತಿಯನ್ನು ರಚಿಸಿತ್ತು. ಇದನ್ನೇ 'ಕನ್ನಡ ಕಾವಲು' ಸಮಿತಿ ಎಂದು ಕರೆದರು. ಅನಂತರ ಇದು ಕನ್ನಡ ಅಭಿವೃದ್ಧಿ ಪ್ರಾಧಿಕಾರವೆಂದು ಹೆಸರು ಪಡೆಯಿತು. ಈ ಸುಮಾರಿನಲ್ಲೇ ಈ ಸಮಿತಿಯನ್ನು ರಚಿಸಿದ್ದು ಕುತೂಹಲಕಾರಿಯಾಗಿದೆ. ಕರ್ನಾಟಕ ಸರ್ಕಾರ ಭಾಷಾ ನೀತಿಯೂ ಕನ್ನಡ ಭಾಷೆಗೆ ಕಲ್ಪಿಸಿದ ಸ್ಥಾನಮಾನಗಳು ಸರಕಾರದ ನೆಲೆಯಿಂದ ಹುಟ್ಟಿಬಂದದ್ದಾಗಿರದೇ ಜನರ ಅಪೇಕ್ಷೆಗಳ ಒತ್ತಾಯದಿಂದ ರೂಪಗೊಂಡಿದ್ದು ಎಂಬುದನ್ನು ತಿಳಿಯಬೇಕಾಗುತ್ತದೆ.

ಇದೇ ಸುಮಾರಿನಲ್ಲಿ (1981) ಕರ್ನಾಟಕ ಏಕೀಕರಣದ 25 ವರ್ಷಗಳ ಆಚರಣೆಯೂ ನಡೆದಿತ್ತು. ಈ 25 ವರ್ಷಗಳಲ್ಲಿ ಕನ್ನಡ ಪರವಾಗಿ ಏನು ಸಾಧನೆಯಾಗಿದೆ.

ಎಂಬುದನ್ನು ಅವಲೋಕನ ಮಾಡುವ ಅವಕಾಶವು ಆ ಸಂದರ್ಭದಲ್ಲಿ ಒದಗಿತ್ತು. ಆದರೆ ಆಡಳಿತಾತ್ಮಕವಾಗಿ ಅಂತಹ ಯೋಜನೆಯನ್ನು ಸರಕಾರ ರೂಪಿಸಿದಂತೆ ತೋರುವುದಿಲ್ಲ. ಬದಲಿಗೆ ಬದಲಾಗುತ್ತಿದ್ದ ಆಳುವ ವರ್ಗದ ಸಾಮಾಜಿಕ ಸಂರಚನೆಯೂ ಜನಭಾಷೆಯ ಪರವಾಗಿ ಕ್ರಿಯಾಶೀಲವಾಗಿತ್ತು. ಈ ಕ್ರಿಯಾಶೀಲತೆಯ ಪ್ರಭಾವ ಪರಿಣಾಮಗಳು ತಾತ್ಕಾಲಿಕವೇ ಅಥವಾ ನಿರಂತರವೇ ಎಂಬುದನ್ನು ವಿವರವಾಗಿ ಪರಿಶೀಲಿಸಬೇಕಾದ ಅಗತ್ಯವಿದೆ.

ಕನ್ನಡ ವಿಧಾನ ಮಂಡಲದಲ್ಲಿ ಮಾತಿನ ರೂಪದಲ್ಲಿ ಮನ್ನಣೆ ಪಡೆದರೂ ಅದಕ್ಕೆ ಲಿಖಿತ ನೆಲೆಯ ಅಧಿಕೃತತೆ ದೊರೆಯದೆ ಹೋದುದಕ್ಕೆ ಹಲವು ಕಾರಣಗಳನ್ನು ನೀಡಲಾಗಿದೆ. ಅಂತಹ ಕಾರಣಗಳು ತಾಂತ್ರಿಕ ನೆಲೆಯಲ್ಲಿ ಇರುವಂತೆ ತೋರುತ್ತವೆ. ಮುಖ್ಯವಾಗಿ ಕನ್ನಡ ಬಲ್ಲ ಅಧಿಕಾರಿಗಳು ಇಲ್ಲವೆಂಬ ಕೊರತೆ; ಕನ್ನಡದಲ್ಲಿ ದಾಖಲೆಗಳನ್ನು ಸಿದ್ಧಪಡಿಸಲು ಅಗತ್ಯವಾದ ಬೆರಳಚ್ಚುಗಾರರು, ಶೀಘ್ರಲಿಪಿಗಾರರು ಇಲ್ಲವೆಂಬ ಪರಿಸ್ಥಿತಿ; ಬೆರಳಚ್ಚು ಯಂತ್ರಗಳು ಇಲ್ಲದಿರುವ ತಗಾದೆ; ದಾಖಲೆಗಳನ್ನು ಸಿದ್ಧಪಡಿಸಲು ಅಗತ್ಯವಾದ ನಮೂನೆಗಳು ಮಾದರಿಗಳು ಕನ್ನಡದಲ್ಲಿ ಲಭ್ಯವಿಲ್ಲ ಎಂಬ ನೆಪ ಇವೆಲ್ಲವೂ ಅಲ್ಲಲ್ಲಿ ಕೇಳಿ ಬಂದ ಸಂಗತಿಗಳು. ಇವೆಲ್ಲವನ್ನೂ ಸರಕಾರವು ಕೂಡ ಬೇರೆ ಬೇರೆ ಸಂದರ್ಭದಲ್ಲಿ ಒಪ್ಪಿಕೊಂಡ ಪರಿಹರಿಸಲು ಕ್ರಮಕೈಗೊಂಡಿದೆ. ಅಧಿಕಾರಿಗಳಿಗೆ ಕನ್ನಡ ಭಾಷಾ ಕಲಿಯಲು ತರಬೇತಿ ನೀಡುವುದು; ಇಂಗ್ಲಿಶ್ ಬೆರಳಚ್ಚುಗಾರರು, ಶೀಘ್ರ ಲಿಪಿಗಾರರು ಕನ್ನಡದಲ್ಲಿ ವಿಶೇಷ ನೈಪುಣ್ಯ ಪಡೆಯಲು ಅವಕಾಶ ಕಲ್ಪಿಸಿ ಅದಕ್ಕೆ ಅವರಿಗೆ ಆರ್ಥಿಕ ನೆರವು ನೀಡುವುದು; ಕನ್ನಡದಲ್ಲಿ ಆಡಳಿತ ನಡೆಸಲು ಅಗತ್ಯವಾದ ಸಾಮಗ್ರಿಗಳನ್ನು ಸಿದ್ಧಪಡಿಸುವುದು ಇತ್ಯಾದಿ ಕಾರ್ಯಕ್ರಮಗಳು ಅನೂಚಾನವಾಗಿ ನಡೆದು ಬಂದಿವೆ. ಸಮಸ್ಯೆ ಮತ್ತು ಪರಿಹಾರಗಳಿಗೆ ಇರುವ ಸಂಬಂಧವನ್ನು ಸರಿಯಾದ ಚೌಕಟ್ಟಿನಲ್ಲಿ ಪರಿಶೀಲಿಸಬೇಕಾಗುತ್ತದೆ. ಕನ್ನಡದ ಅನುಷ್ಠಾನಕ್ಕೆ ಮೇಲೆ ಹೇಳಲಾದ ಕೊರತೆಗಳು ಎಷ್ಟು ಪರಿಣಾಮಕಾರಿ ಆಗಿದ್ದವು ಎಂಬುದನ್ನು ಆ ಹೊತ್ತಿಗೆ ಪರಿಶೀಲಿಸುವ ಯತ್ನಗಳು ನಡೆದಂತೆ ಕಾಣುತ್ತಿಲ್ಲ.

ಈ ಸಂದರ್ಭದಲ್ಲಿ 1963ರ ರಾಜ್ಯ ಭಾಷಾ ಅಧಿನಿಯಮ ಜಾರಿಗೆ ಬಂದ ಆಸುಪಾಸಿನಲ್ಲಿ ಸರಕಾರ ಒಂದು ಸುತ್ತೋಲೆಯನ್ನು ಹೊರಡಿಸಿದೆ. ತುಂಬಾ ಚಿಕ್ಕ ಸುತ್ತೋಲೆ. ಜೂನ್ 12, 1963ರಲ್ಲಿ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಹೊರಡಿಸಿರುವ ಸುತ್ತೋಲೆ ಇದು. ಈ ಸುತ್ತೋಲೆಯಲ್ಲಿ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು ರಾಜ್ಯದ ವಿವಿಧ ಭಾಗಗಳಲ್ಲಿ ಕೆಲಸ ಮಾಡುತ್ತಿರುವಾಗ ಅಲ್ಲಿಗೆ ಜನರು ಅಹವಾಲನ್ನು ಯಾವ ಭಾಷೆಯಲ್ಲಿ ಬರೆದುಕೊಡಬೇಕು ಅಥವಾ ಯಾವ ಭಾಷೆಯಲ್ಲಿ ಬರೆದರೆ ಅವುಗಳನ್ನು ಸ್ವೀಕರಿಸಬೇಕು ಎಂಬ ಬಗ್ಗೆ ಈ ಸುತ್ತೋಲೆಯಲ್ಲಿ ನಿರ್ದೇಶನಗಳಿವೆ. ಅದರಂತೆ ಒಂದು ಪ್ರದೇಶದಲ್ಲಿ ಶೇಕಡಾ 15ಕ್ಕಿಂತ ಹೆಚ್ಚು ಸಂಖ್ಯೆಯ ಜನರು ಯಾವ ಭಾಷೆಯಲ್ಲಿ ಮಾತಾಡುತ್ತಾರೋ ಆ ಭಾಷೆಯಲ್ಲಿ ತಮ್ಮ ಅಹವಾಲುಗಳನ್ನು ಪತ್ರಗಳನ್ನು ಸರಕಾರಕ್ಕೆ ನೀಡಬಹುದೆಂದೂ ಅವನ್ನು ಸರಕಾರದ ಕಛೇರಿಗಳು ನಿರಾಕರಿಸಬಾರದೆಂದು ಸೂಚಿಸಲಾಗಿದೆ.

ರಾಜ್ಯದ ಭಾಷಾ ಅಲ್ಪಸಂಖ್ಯಾತರ ಸಂವಿಧಾನದತ್ತ ಹಕ್ಕನ್ನು ಸಂರಕ್ಷಿಸಲು ಇಂತಹ ಸೂಚನೆ ಒಂದನ್ನು ನೀಡಿದ್ದರಲ್ಲಿ ಅಸಹಜವಾದುದು ಏನೂ ಇಲ್ಲ. ಆದರೆ ಈ ಸುತ್ತೋಲೆಯನ್ನು ಹೇಗೆ ಅನ್ವಯಿಸಬೇಕು ಎಂಬುದು ಒಂದು ಪ್ರಶ್ನೆಯಾಗುತ್ತದೆ. ಸ್ಥಳೀಯ ಜನಸಂಖ್ಯೆಯಲ್ಲಿ ಶೇ. 15 ಜನಕ್ಕಿಂತ ಹೆಚ್ಚು ಮಾತಾಡುವ ಭಾಷೆ ಎಂಬುದನ್ನು ಹೇಗೆ ನಿರ್ಧರಿಸಬೇಕು? ಯಾವ ಭೌಗೋಳಿಕ ವ್ಯಾಪ್ತಿಯನ್ನು ಸ್ಥಳೀಯ ಎಂದು ತಿಳಿಯಬೇಕು? ಹೋಬಳಿ ಹಂತವೋ, ತಾಲೂಕು ಹಂತವೋ ಅಥವಾ ಜಿಲ್ಲಾ ಹಂತವೋ ಎಂಬುದು ಈ ಸುತ್ತೋಲೆಯಿಂದ ಗೊತ್ತಾಗುವುದಿಲ್ಲ. ಅಲ್ಲದೆ ರಾಜ್ಯದ ಜನರಲ್ಲಿ ಭಾಷಾವಾರು ಹಂಚಿಕೆ ಹೇಗಿದೆ, ಯಾವ ಯಾವ ಪ್ರದೇಶಗಳಲ್ಲಿ ಯಾವ ಯಾವ ಭಾಷಿಕರು ಯಾವ ಪ್ರಮಾಣದಲ್ಲಿ ನೆಲೆಸಿ ಹರಡಿಕೊಂಡಿದ್ದಾರೆ ಸ್ಪಷ್ಟವಾಗಿ ತಿಳಿದಿರಲಿಲ್ಲ. ಅಂತಹ ಮಾಹಿತಿಯನ್ನು ಪಡೆದುಕೊಳ್ಳಲು ಸರಕಾರ ಕೂಡ ಪ್ರಯತ್ನ ತೋರುತ್ತಿಲ್ಲ. 1961ರ ರಾಷ್ಟ್ರ ಜನಗಣತಿಯ ಆಧಾರದ ಮೇಲೆ ಇಂತಹ ನಿರ್ಣಯವನ್ನು ತೆಗೆದುಕೊಳ್ಳಲಾಗಿದೆ ಎಂದು ಹೇಳಲು ಕಾರಣಗಳಿಲ್ಲ. ರಾಜ್ಯದಲ್ಲಿ ಬೇರೆಬೇರೆ ಭಾಷಿಕರು ರೀತಿಯಲ್ಲಿ ಹರಡಿಕೊಂಡಿದ್ದಾರೆ. ಮತ್ತು ಯಾವ ಯಾವ ತಾಲೂಕುಗಳಲ್ಲಿ ಅವರ ಪ್ರಮಾಣ ಎಷ್ಟಿದೆ ಎಂಬುದನ್ನು ಖಚಿತವಾಗಿ ತಿಳಿದು ಈ ಸುತ್ತೋಲೆಯನ್ನು ಜಾರಿಗೆ ಕೊಡುವುದು ಸಾಧ್ಯವಾಗದು. ಏಕೆಂದರೆ ಆಗ ಕನ್ನಡವನ್ನು ರಾಜ್ಯದ ಆಡಳಿತ ಭಾಷೆಯನ್ನಾಗಿ ಬಳಸಬೇಕು ಎಂಬ ನೀತಿಯನ್ನು ಜಾರಿಗೆ ನೀಡುವುದು ಕಷ್ಟವಾಗುತ್ತದೆ. ರಾಜ್ಯದಲ್ಲಿರುವ ಎಲ್ಲ ತಾಲ್ಲೂಕುಗಳಲ್ಲಿ ಒಂದು ಅಂದಾಜಿನಂತೆ ಮೂರನೇ ಒಂದು ಭಾಗಕ್ಕೂ ಹೆಚ್ಚು ತಾಲ್ಲೂಕುಗಳಲ್ಲಿ, 1981ರ ಸುಮಾರಿನಲ್ಲಿ, ಕನ್ನಡದ ಜೊತೆಗೆ ಇತರ ಭಾಷೆಗಳನ್ನು ಬಳಸುವವರು ಹೆಚ್ಚಿನ ಪ್ರಮಾಣದಲ್ಲಿದ್ದರು. ರಾಜ್ಯದ ಸರಾಸರಿಯ ಶೇಕಡಾ 65 ಕನ್ನಡಿಗರ ಜನ ಸಂಖ್ಯೆಯಾದರೆ ಉಳಿದವರು ಮೂರನೇ ಒಂದು ಭಾಗಕ್ಕೂ ಮಿಕ್ಕಿ ಇರುವುದು ಸ್ಪಷ್ಟವಾಗಿದೆ. ತಾಲ್ಲೂಕು ಹಂತದಲ್ಲಿ ಇಂತಹ ಸುತ್ತೋಲೆಯ ಪರಿಣಾಮ ಏನಾಗುತ್ತದೆ ಎಂಬುದು ಊಹಿಸಲು ಸಾಧ್ಯವಿಲ್ಲ.

ಆದರೆ ಮೇಲೆ ಹೇಳಿದ ಸಮಸ್ಯೆಗಳು ಉದ್ಭವಿಸಲಿಲ್ಲ. ಏಕೆಂದರೆ ಕರ್ನಾಟಕದ ಭಾಷಾ ಅಲ್ಪಸಂಖ್ಯಾತರಲ್ಲಿ ಹಲವು ಗುಂಪಿನ ಜನರಿಗೆ ತಾವಾಡುವ ಭಾಷೆಯ ಮೂಲಕ ಸರಕಾರದೊಡನೆ ವ್ಯವಹರಿಸುವುದು ಸಾಧ್ಯವಿಲ್ಲ. ಏಕೆಂದರೆ ಆ ಭಾಷೆಗಳಿಗೆ ಬರೆಯಲು ಲಿಪಿಗಳೇ ಇಲ್ಲ. ತುಳು, ಕೊಡಗು, ಕೊಂಕಣಿ, ಲಂಬಾಣಿ, ಮುಂತಾದವು ಇಂತಹ ಭಾಷೆಗಳು. ಲಿಪಿ ಬದ್ಧ ಭಾಷೆಯನ್ನಾಡುತ್ತಿದ್ದ ಭಾಷಾ ಅಲ್ಪಸಂಖ್ಯಾತರು ಇದ್ದಾರೆ. ಆದರೂ ಕೂಡ ತಮ್ಮ ಭಾಷೆಯ ಮೂಲಕ ಅಹವಾಲನ್ನು ಸಲ್ಲಿಸಲು ಸಾಧ್ಯವಿರಲಿಲ್ಲ. ಉರ್ದು, ತಮಿಳು, ತೆಲುಗು ಮುಂತಾದ ಭಾಷೆಗಳಾಡುವವರು ಇನ್ನೊಂದು ಗುಂಪಿನಲ್ಲಿ ಬರುತ್ತಾರೆ. ಇವರಿಗೆ ತಮ್ಮ ಭಾಷೆಯನ್ನು ಮಾತಿನಲ್ಲಿ ಬಳಸಲು ತಿಳಿದಿತ್ತೇ ಹೊರತು ಆ ಭಾಷೆಗಳಲ್ಲಿ ಅಹವಾಲುಗಳನ್ನು ಬರೆಯುವಷ್ಟು ಅಕ್ಷರಸ್ಥರಾಗಿರಲಿಲ್ಲ. ಹೀಗಾಗಿ ಭಾಷಾ ಅಲ್ಪ ಸಂಖ್ಯಾತರ ಹಿತ ಕಾಯಲು 1963ರಲ್ಲಿ ಹೊರಟ ಸುತ್ತೋಲೆ ಕನ್ನಡದ ಪರಿಸ್ಥಿತಿಗೆ ಹೆಚ್ಚಿನ ಆತಂಕಗಳನ್ನು ಉಂಟುಮಾಡಲಿಲ್ಲ; ಜೊತೆಗೆ ಇತರ ಅಲ್ಪಸಂಖ್ಯಾತ ಭಾಷೆಗಳಿಗೆ ಬೆಂಬಲವಾಗಿ ನಿಲ್ಲಲಿಲ್ಲ.

ಈ ಪರಿಸ್ಥಿತಿಯ ಪರಿಶೀಲನೆ ಏಕೆ ಅಗತ್ಯವಾಯಿತು ಎಂದರೆ ಭಾರತದ ಇತರ ಪ್ರದೇಶಗಳಲ್ಲಿ ಹೀಗೆ ಅಲ್ಪಸಂಖ್ಯಾತರ ಭಾಷೆಯ ಸಂರಕ್ಷಣೆಯ ಕಾರ್ಯ ಯೋಜನೆಯಿಂದಾಗಿ ಆಯಾ ರಾಜ್ಯಗಳಲ್ಲಿ ಎರಡನೆಯ (ಅಥವಾ ಮೂರನೆಯ) ಅಧಿಕೃತ ಭಾಷೆಯಾಗಿ ಪ್ರಾಂತೀಯ ಭಾಷೆಯ ಜೊತೆಗೆ ಅಲ್ಪಸಂಖ್ಯಾತರ ಭಾಷೆಯನ್ನು ಬಳಸುವ ನಿರ್ಣಯವನ್ನು ಕೈಗೊಳ್ಳಬೇಕಾಗಿ ಬಂತು. ಕರ್ನಾಟಕದಲ್ಲೂ ಅಂತಹ ಒತ್ತಾಯಗಳು ಆಗಾಗ ಬಂದಿವೆ. ಆದರೆ ಅವುಗಳು ಯಶಸ್ವಿಯಾಗಿಲ್ಲ. ಈ ವಿವರಣೆ ನೀಡುವಾಗ ಇದನ್ನು ಅಲ್ಪಸಂಖ್ಯಾತರ ಭಾಷೆಯ ಹಿತಾಸಕ್ತಿಗೆ ವಿರುದ್ಧವಾದ ವ್ಯಾಖ್ಯೆ ಎಂದು ತಿಳಿಯಬೇಕಾಗಿಲ್ಲ. ಕರ್ನಾಟಕದಲ್ಲಿ ಕನ್ನಡದ ರೀತಿ ಇತರ ಭಾಷೆಗಳನ್ನಾಡುವ ಜನರು ಯಾವ ಇಕ್ಕಟ್ಟಿನಲ್ಲಿದ್ದಾರೆ ಎಂಬುದನ್ನು ಮಂಡಿಸಲು ಈ ವಿವರಣೆಯನ್ನು ನೀಡಿದೆ. ಮೇಲೆ ಹೇಳಿದಂತೆ ವಿವಿಧ ರಾಜ್ಯಗಳಲ್ಲಿ ಅಲ್ಪಸಂಖ್ಯಾತ ಭಾಷಿಕರು ತಮ್ಮ ಭಾಷೆಗೆ ಸಹ ಆಡಳಿತ ಭಾಷೆಯಾಗಿ ರಾಜ್ಯದಲ್ಲಿ ಮನ್ನಣೆ ನೀಡಬೇಕೆಂದು ಬೇಡಿಕೆ ಮಂಡಿಸಿ ಅನಂತರ ಅದನ್ನೊಂದು ಚಳುವಳಿಯನ್ನಾಗಿಯೂ ಪರಿವರ್ತಿಸಿದ್ದಾರೆ. ಇದರ ಪರಿಣಾಮವಾಗಿಯೇ ಭಾರತ ಒಕ್ಕೂಟದಲ್ಲಿ ಕೆಲವು ಹೊಸ ರಾಜ್ಯಗಳನ್ನು ಅಥವಾ ರಾಜ್ಯದಲ್ಲೇ ಪ್ರತ್ಯೇಕ ಆಡಳಿತವುಳ್ಳ ಪ್ರದೇಶಗಳನ್ನು ನಿರ್ಮಿಸಬೇಕಾಗಿ ಬಂದಿದೆ. ಮತ್ತೆ ಕೆಲವೆಡೆ ಮನ್ನಣೆ ಪಡೆದ ಭಾಷೆಗಳು ತಮ್ಮದೇ ರಾಜ್ಯವಿಲ್ಲದ ಪರಿಸ್ಥಿತಿಯಲ್ಲಿವೆ. ಕೆಲವು ಕಡೆ ಈ ಗೊಂದಲ ದಿನೇ ದಿನೇ ಹಲವು ಗೋಜಲುಗಳಿಗೆ ಕಾರಣವಾಗುತ್ತಿದೆ. ಈ ಬಗೆಯ ಚಲನಶೀಲತೆಗೆ ಕರ್ನಾಟಕ ಒಳಗಾಗಲಿಲ್ಲ.

ಕನ್ನಡವನ್ನು ರಾಜ್ಯದ ಅಧಿಕೃತ ಭಾಷೆಯನ್ನಾಗಿ ಜಾರಿಗೆ ತರುವ ಹೊಣೆ ಹೊತ್ತ ಸರಕಾರ ಈವರೆಗೂ ಅದನ್ನು ಪೂರ್ಣ ಪ್ರಮಾಣದಲ್ಲಿ ನಿರ್ವಹಿಸಿಲ್ಲವೆಂಬ ಮಾತನ್ನು ನಾವು ಮೇಲೆ ಆಗಾಗ ಕೇಳುತ್ತಿರುತ್ತೇವೆ. ಸರಕಾರ ನೂರಾರೂ ಆದೇಶಗಳನ್ನು ಈ ಉದ್ದೇಶಕ್ಕಾಗಿಯೇ ಹೊರಡಿಸಿದರೂ ಅದರ ಪರಿಣಾಮ ಏನು ಆಗಿಲ್ಲ. ಇದು ಸರಕಾರಕ್ಕೆ ಇರುವ ಇಚ್ಛಾಶಕ್ತಿಯ ಕೊರತೆ ಎಂಬ ಟೀಕೆಯನ್ನು ಕೇಳುತ್ತೇವೆ ಆದರೆ ಏಕೆ ಹೀಗೆ ಕನ್ನಡದ ಅನುಷ್ಠಾನ ಪೂರ್ಣ ಪ್ರಮಾಣದಲ್ಲಿ ಆಗಿಲ್ಲ ಎಂಬುದನ್ನು ಸರಿಯಾದ ಚೌಕಟ್ಟಿನಲ್ಲಿ ವಿಶ್ಲೇಷಿಸಿ ತಿಳಿಯಬೇಕಾಗಿದೆ.

ಹಾಗೆ ನೋಡಿದರೆ ಕನ್ನಡದ ಬಳಕೆ ಆಡಳಿತದಲ್ಲಿ ಕಳೆದ 50 ವರ್ಷಗಳಲ್ಲಿ ಹೆಚ್ಚಾಗುತ್ತಿದೆ ಎಂಬುದನ್ನು ಸಮರ್ಥಿಸಲು ಸರಕಾರ ಪ್ರಯತ್ನಿಸಿದೆ. ತಾಲ್ಲೂಕು ಮಟ್ಟದಲ್ಲಿ ಜಿಲ್ಲಾಮಟ್ಟದಲ್ಲಿ ವಿಭಾಗ ಮಟ್ಟದಲ್ಲಿ ಮತ್ತು ರಾಜ್ಯ ಮಟ್ಟದಲ್ಲಿ ಶೇಕಡಾ ಎಷ್ಟು ಪ್ರಮಾಣದಲ್ಲಿ ಕನ್ನಡ ಬಳಕೆಯಾಗುತ್ತಿದೆ ಎಂಬುದನ್ನು ವಿವರಿಸಲು ಶೇಕಡಾವಾರು ಅಂಕಿ ಅಂಶಗಳನ್ನು ಕೂಡ ಒದಗಿಸಲಾಗುತ್ತಿದೆ. ಆ ಪ್ರಕಾರ ಒಂದು ಪಿರಮಿಡ್‌ನ ಚಿತ್ರ ನಮಗೆ ಗೋಚರವಾಗುತ್ತದೆ. ಅದರಂತೆ ಕೆಳ ಹಂತದಲ್ಲಿ ಕನ್ನಡ ವ್ಯಾಪಕವಾಗಿ ಬಳಕೆಯಾಗುತ್ತಿದೆ. ಆಡಳಿತದ ಮೇಲು ಮೇಲಿನ ಹಂತಕ್ಕೆ ಹೋದಂತೆಯೇ ಕನ್ನಡ ಬಳಕೆ ಪ್ರಮಾಣವು ಕಡಿಮೆಯಾಗುತ್ತಾ ಹೋಗಿದೆ. ಅಂದರೆ ರಾಜ್ಯಮಟ್ಟದಲ್ಲಿ ಅದನ್ನೂ ವಿಸ್ತಾರವನ್ನು ಪಡೆದುಕೊಳ್ಳಬೇಕಾಗಿದೆ. ಈ ಪರಿಸ್ಥಿತಿಯನ್ನು ಸರಿಪಡಿಸಲು ಸೂಕ್ತ

ನಿರ್ಧಾರಗಳನ್ನು ತೆಗೆದುಕೊಳ್ಳುವುದಾಗಿ ಮತ್ತು ಅದನ್ನು ಜಾರಿಗೆ ಕೊಡುವುದಾಗಿ ಸರ್ಕಾರ ಹೇಳುತ್ತಲೇ ಇದೆ. ಆದರೆ ಯಶಸ್ಸು ದೊರಕಿಲ್ಲವೆಂಬುದೇ ಕನ್ನಡ ಪರವಾದ ಹಲವರ ಅಳಲು.

ಈ ಅಪಯಶಸ್ಸನ್ನು ಎರಡು ದಿಕ್ಕಿನಿಂದ ವಿಶ್ಲೇಷಿಸಬೇಕಾದ ಅಗತ್ಯವಿದೆ. 1) ಕಾರ್ಯಕ್ರಮ ಯಶಸ್ಸು ಪಡೆಯದಿರಲು ಅದರ ಹಿಂದಿನ ಯೋಜನಾ ತಂತ್ರಗಳು ಕೊರತೆಯಿಂದ ಕೂಡಿರಬೇಕು ಅಥವಾ, ಅನುಷ್ಠಾನದ ಹಂತದಲ್ಲಿ ಹಲವು ಎಡತೊಡರುಗಳಿರಬೇಕು ಈ ದಿಕ್ಕಿನಿಂದ ನೋಡಿದಾಗ ಕನ್ನಡ ಅನುಷ್ಠಾನಕ್ಕೆ ಬೇಕಾದ ಭಾಷಾ ನೀತಿ ಮತ್ತು ಯೋಜನೆಗಳು ರಾಜ್ಯ ಸರ್ಕಾರಕ್ಕೆ ಇಲ್ಲವೆಂಬ ನಿರ್ಣಯಕ್ಕೆ ಬರುವುದು ಸಾಧ್ಯ. ಆದರೆ ಇನ್ನೊಂದು ದಿಕ್ಕಿನಲ್ಲಿ ನೋಡಿದಾಗ ಬೇರೆಯ ಸಾಧ್ಯತೆ ಗೋಚರಿಸುತ್ತದೆ.

ಏಕೆ ಕನ್ನಡ ಆಡಳಿತ ಭಾಷೆಯಾಗಬೇಕು, ಹಾಗೆ ಆಗದಿದ್ದರೆ ಆಗುವ ತೊಂದರೆಗಳೇನು, ಕನ್ನಡ ಬಳಕೆಯಾಗದಿದಲ್ಲಿ ಅದರ ಪ್ರಯೋಜನೆಗಳು ಯಾರಿಗಾದರೂ ಇರುವುದು ಸಾಧ್ಯವೇ ಎಂಬ ಪ್ರಶ್ನೆಗಳು ಮುಖ್ಯ. ಆಡಳಿತ ಭಾಷೆ ಜನರ ಭಾಷೆ ಆಗಬೇಕು ಎಂಬ ಗ್ರಹಿತ ನೆಲೆಯಲ್ಲಿ ನಾವು ಮಾತನಾಡುತ್ತಿರುತ್ತೇವೆ. ಆದರೆ ಆಡಳಿತ ಯಂತ್ರದಲ್ಲಿ ಜನಸಾಮಾನ್ಯರ ಪಾತ್ರವೇನು ಎಂಬ ಬಗ್ಗೆ ಯೋಚಿಸುವುದಿಲ್ಲ. ಜನರು ಆಡಳಿತದಲ್ಲಿ ಭಾಗಿಯಾಗಬೇಕಾದ ಅಥವಾ ಆಡಳಿತದ ನಿರ್ಧಾರಗಳಲ್ಲಿ ತಮ್ಮ ಪಾಲು ಇದೆ ಎಂದು ತಿಳಿಯಬೇಕಾದರೆ ಮುಖ್ಯವಾಗಿ ಎರಡು ಸಂಗತಿಗಳು ಅಗತ್ಯ. ಒಂದು: ಆಡಳಿತ ಯಂತ್ರದ ಉತ್ತರದಾಯಿತ್ವ, ಎರಡು: ಆಡಳಿತ ಯಂತ್ರದ ಪಾರದರ್ಶಕತೆ. ಕಳೆದ 50 ವರ್ಷಗಳ ಚರಿತ್ರೆಯಲ್ಲಿ ಈ ಎರಡು ಸಂಗತಿಗಳು ದೃಢಗೊಳ್ಳುತ್ತಾ ಹೋಗುವ ಬದಲು ಸಡಿಲವಾಗುತ್ತಾ ಬಂದಿವೆ. ಈ ಕಾರಣದಿಂದ ಜನರು ಆಡಳಿತ ಯಂತ್ರದೊಡನೆ ಹೊಂದಿರುವ ಸಂಬಂಧ ಅತ್ಯಂತ ಕನಿಷ್ಠ ಪ್ರಮಾಣದ್ದಾಗಿದೆ. ಹಾಗೆ ಉಳಿದಿರುವ ಸಂಬಂಧದಲ್ಲೂ ಅವರ ಅಪೇಕ್ಷೆಗಳು, ದೃಷ್ಟಿಕೋನಗಳು ಮಾನ್ಯವಾಗುವುದಿಲ್ಲ. ಹೀಗಾಗಿ ಜನಭಾಷೆಯೂ ಆಡಳಿತ ಭಾಷೆಯಾಗಿ ನೆಲೆಗೊಳ್ಳುವ ಅವಕಾಶಗಳು ಕಡಿಮೆಯಾಗುತ್ತಿದೆ.

ಈ ವಿವರಣೆಯನ್ನು ಮತ್ತಷ್ಟು ಪುಷ್ಟಿಗೊಳಿಸುವ ಅಗತ್ಯವಿದೆ. ಆಡಳಿತವು ಒಪ್ಪಿಕೊಂಡ ಕಲ್ಯಾಣ ರಾಜ್ಯದ ಕಲ್ಪನೆಯಲ್ಲಿ ಆಳುವವರು ಕೊಡುವವರು, ಜನರು ಪಡೆಯುವವರು ಆಗಿರುತ್ತಾರೆ. ಈ ಅಸಮ ಸಂಬಂಧದಲ್ಲಿ ಕೊಡುವವರ ಕೈಮೇಲಾಗುತ್ತದೆ. ಅವರ ಮಾತಿಗೆ ಹೆಚ್ಚು ಬೆಲೆಬರುತ್ತದೆ. ಭಾಷಾ ಅಧ್ಯಯನಕಾರರು ಇಂತಹ ಸಂದರ್ಭಗಳನ್ನು ಗಮನಿಸಿದ್ದಾರೆ. ಇಂತಹವರಲ್ಲಿ ಯಾವಾಗಲೂ ಮೇಲುಗೈ ಪಡೆದವರ ಭಾಷೆಯನ್ನೇ ಪಡೆಯುವವರು ಒಪ್ಪಿಕೊಳ್ಳಬೇಕಾಗುತ್ತದೆ ಅಥವಾ ಪಡೆಯುವವರಿಗಿಂತ ತಾವು ಭಿನ್ನ ಎಂದು ಸ್ಥಾಪಿಸಲು ಆಳುವವರು ಬೇರೆಯ ಭಾಷೆಯನ್ನೇ ಆಡುತ್ತಿರುತ್ತಾರೆ. ಬಳಸುತ್ತಿರುತ್ತಾರೆ. ಕೊಂಚ ಸಂಕೀರ್ಣವಾದ ಈ ಸಂಬಂಧದಲ್ಲಿ ಕನ್ನಡದ ಸ್ಥಿತಿ ಏನಾಗಿದೆ ಎನ್ನುವುದನ್ನು ಪರಿಶೀಲಿಸಬೇಕು. ಮೇಲು ನೋಟಕ್ಕೆ ಜನ ಪ್ರತಿನಿಧಿಗಳು ಮತ್ತು ನೌಕರ ಶಾಹಿಯ ಜನರು ಜನಸಮುದಾಯದಿಂದಲೇ ಹೊರಬಂದವರೆಂದು ತೋರುತ್ತದೆ. ಆದರೆ ಅಧಿಕಾರದ ಚೌಕಟ್ಟಿನಲ್ಲಿ ಅವರು ಜನರ ಜೊತೆಗಿನ ಸಂಬಂಧದ

ಬದಲು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಜಾಲಸಂಪರ್ಕದಲ್ಲಿ ಸೇರುತ್ತಾರೆ. ಇದರಿಂದ ಅಸಮ ನೆಲೆಯ ಸಂಬಂಧ ಏರ್ಪಡುತ್ತದೆ. ತಾವು ಗುರುತಿಸಿಕೊಂಡ ಜಾಲದ ಅಧಿಕೃತ ಭಾಷೆಯನ್ನೇ ತಮ್ಮ ಭಾಷೆಯನ್ನಾಗಿ ಆಡಳಿತಗಾರರು ಬೆಳೆಸುತ್ತಾರೆ. ನಮ್ಮ ರಾಜಕೀಯ, ಆರ್ಥಿಕ ಪರಿಸ್ಥಿತಿಯ ಈ ವಿನ್ಯಾಸಗಳು ಕನ್ನಡಕ್ಕೆ ಈ ಹೊತ್ತಿಗೆ ಯಾವ ಸ್ಥಾನಮಾನಗಳು ದೊರಕಬೇಕಿತ್ತೋ ಅದು ಲಭ್ಯವಾಗದಂತೆ ಮಾಡಿ ಬಿಟ್ಟಿವೆ.

ಈ ಹಿನ್ನೆಲೆಯಲ್ಲಿ 1980ರ ನಂತರದಲ್ಲಿ ಮಂಡಿತವಾದ ಒಂದು ಮುಖ್ಯ ದಾಖಲೆಯನ್ನು ಪರಿಶೀಲಿಸಬೇಕಾಗಿದೆ. ಇದು ಆಡಳಿತ ಭಾಷೆಯಾಗಿ ಕನ್ನಡ ಸ್ವಾತಂತ್ರ್ಯ ಪೂರ್ವದಲ್ಲೇ ಬಳಕೆಯಾಗುತ್ತಿತ್ತು. ಆಂಗ್ಲರೇ ತಮ್ಮ ಆಡಳಿತದಲ್ಲಿ ಕನ್ನಡವನ್ನು ಯಶಸ್ವಿಯಾಗಿ ಬಳಸುತ್ತಿದ್ದರು ಎಂಬುದನ್ನು ಮಂಡಿಸುವ ದಾಖಲೆ ಲಭ್ಯವಿರುವ ಮಾಹಿತಿಯನ್ನು ಆಧರಿಸಿ ಶ್ರೀ ಮಹಾದೇವ ಬಣಕಾರ ಅವರು ಆಂಗ್ಲರ ಆಡಳಿತ ಕಾಲದಲ್ಲಿ ಕನ್ನಡ ಹೇಗೆ ಬಳಕೆಯಾಗುತ್ತಿತ್ತು ಎಂಬುದನ್ನು ಒಂದು ಗ್ರಂಥ ಮುಖೇನ ಪ್ರಕಟಿಸಿದ್ದಾರೆ. ಕರ್ನಾಟಕ ಸರ್ಕಾರದ ನೆರವಿನಿಂದ ಪ್ರಕಟಿಸಿರುವ ಈ ಕೃತಿಯನ್ನು ಉಲ್ಲೇಖಿಸಿ ಕನ್ನಡ ಪರ ಚಿಂತಕರು ಈ ಹಿಂದೆಯೇ ಕನ್ನಡ ಕರ್ನಾಟಕದ ಸಾರ್ವಭೌಮ ಭಾಷೆಯಾಗಿತ್ತೆಂದು, ಈಗ ಆ ಸ್ಥಾನವನ್ನು ಕನ್ನಡ ಕಳೆದುಕೊಂಡಿದೆ ಎಂದು ವಾದಿಸುತ್ತಾರೆ. ಈ ದಾಖಲೆ ಮತ್ತು ಅದನ್ನು ಆಧರಿಸಿದ ವಾದಗಳನ್ನು ಪರಿಶೀಲಿಸುವುದು ಅಗತ್ಯ.

ಆಂಗ್ಲರು ಕರ್ನಾಟಕವನ್ನು ನೇರವಾಗಿ ಹಲವು ಕಡೆ ಪರೋಕ್ಷವಾಗಿ ಕೆಲವು ಕಡೆ ಆಳುತ್ತಿದ್ದರು. ಅವರ ಅಧಿಕಾರ ವ್ಯಾಪ್ತಿಗೆ ಬಾರದಿದ್ದ ಪ್ರದೇಶಗಳು ಇದ್ದವು. ಅಂತ ಪ್ರದೇಶಗಳಲ್ಲಿ ಕನ್ನಡವಾಗಲೀ ಇಂಗ್ಲಿಶಾಗಲೀ ಮುಂಚೂಣಿಗೆ ಬರುತ್ತಿಲ್ಲ. ಉಳಿದ ಕಡೆಗಳಲ್ಲಿ ಕನ್ನಡಿಗರಿಗೆ ನೇರ ಸಂಬಂಧವಿರುವ ದಾಖಲೆಗಳನ್ನು ಕನ್ನಡದಲ್ಲಿ ಸಿದ್ಧಪಡಿಸಿರುವ ನಿದರ್ಶನಗಳನ್ನೇ ಶ್ರೀ ಬಣಕಾರರವರ ಗ್ರಂಥ ಸಂಗ್ರಹಿಸಿದೆ. ಎಂದರೆ ಜನರು ತಮ್ಮ ಅಹವಾಲುಗಳನ್ನು ಮಂಡಿಸುವುದು ಅದಕ್ಕೆ ಸರ್ಕಾರ ಪ್ರತಿಕ್ರಿಯಿಸುವುದು ಆಡಳಿತದ ಒಂದು ಕನಿಷ್ಠ ಭಾಗ. ಇದರಲ್ಲಿ ಜನರಿಗೆ ತಿಳಿಯಬೇಕಾದ ಆಡಳಿತದ ನಿರ್ಧಾರಗಳು ಸೇರುತ್ತವೆ. ಆಂಗ್ಲರು ಆಡಳಿತ ನಡೆಸುವಾಗ ಅನುಸರಿಸುತ್ತಿದ್ದ ವ್ಯವಸ್ಥೆಯಲ್ಲಿ ತಮ್ಮ ಮತ್ತು ಜನರ ನಡುವೆ ಮಧ್ಯವರ್ತಿಗಳಿಗೆ ತಮ್ಮ ಭಾಷೆಯನ್ನು ಕಲಿಯುವ ಅವಕಾಶವನ್ನು ಕಲ್ಪಿಸಿದರು ಅದರ ಮೂಲಕ ಜನರಿಗೆ ಅಗತ್ಯವಾದ ಮಾಹಿತಿಯನ್ನು ರವಾನಿಸುತ್ತಿದ್ದರು ಈ ಕಿರುವಲಯದಲ್ಲಿ ಕಂಡುಬರುವ ಕನ್ನಡದ ಬಳಕೆಯನ್ನು ಇಡೀ ಆಡಳಿತದಲ್ಲೇ ಕನ್ನಡಕ್ಕೆ ಮಾನ್ಯತೆ ಇತ್ತು ಎಂದು ಬಿಂಬಿಸುವುದು ಸರಿಯಾದ ವ್ಯಾಖ್ಯಾನವಾಗಲಾರದು.

ಅಲ್ಲದೇ ಈ ಆಡಳಿತದ ಹಿಂದಿನ ತಾತ್ವಿಕತೆಯೇ ಇಂದಿನ ಪ್ರಜಾಪ್ರಭುತ್ವದ ತಾತ್ವಿಕತೆಗಿಂತ ಬೇರೆಯಾದುದು. ಇಲ್ಲಿ ಜನರು ತಮ್ಮ ದೈನಂದಿನ ಬದುಕಿನಲ್ಲಿ ಆಡಳಿತಕ್ಕೆ ಯಾವ ಸಂಪರ್ಕವನ್ನು ಇರಿಸಿಕೊಳ್ಳದೇ ಕೇವಲ ತೆರಿಗೆದಾರರಾಗಿ ಅಥವಾ ಸರಕಾರಕ್ಕೆ ಬೇಕಾದ ಸೇವಾವಲಯದಲ್ಲಿ ಸೇವೆಗಳನ್ನು ಸಲ್ಲಿಸುವರಾಗಿ ಇರುತ್ತಿದ್ದರು. ಆಡಳಿತದ ಸಾರ್ವಭೌಮತ್ವವೆಲ್ಲಾ ಜನರ ಪ್ರಜ್ಞೆಯ ಆಚೆಗಿನ ಮಾತಾಗಿತ್ತು. ಎಲ್ಲಾ ಸಾಮಂತಶಾಹಿ ವ್ಯವಸ್ಥೆಗಳಲ್ಲೂ ಕಂಡುಬರುವ ಈ ಸ್ಥಿತಿಯು ಇಲ್ಲಿಯೂ ಮುಂದುವರೆದಿತ್ತು. ಹೀಗಿರುವಾಗ ಆಗಿನ ಆಡಳಿತದಲ್ಲಿ ಕನ್ನಡಕ್ಕೆ ಸಾರ್ವಭೌಮ ಸ್ಥಾನ ದೊರಕುವುದು ಖಂಡಿತ

ಸಾಧ್ಯವಿರಲಿಲ್ಲ. ಜನರಿಗೆ ಅಗತ್ಯವಾದ ಮಾಹಿತಿಗಳನ್ನು ಮಾತು ಇಲ್ಲವೇ ಬರಹಗಳ ಮೂಲಕ ಒದಗಿಸುವ ಸರ್ಕಾರ ಯಾವಾಗಲೂ ಜನರ ಭಾಷೆಯನ್ನೇ ಬಳಸಿಕೊಳ್ಳುತ್ತಿರುತ್ತದೆ. ಇಂತಹ ಬಳಕೆಗಳನ್ನು ನಾವು ಎಲ್ಲಾ ಕಾಲದಲ್ಲೂ ಕಾಣುತ್ತೇವೆ. ನಮ್ಮ ಪ್ರಾಚೀನ ಶಾಸನಗಳು ಕನ್ನಡದಲ್ಲಿ ಇರುವುದಕ್ಕೆ ಇದೇ ಕಾರಣ. ಜನರೊಡನೆ ಅಧಿಕಾರವುಳ್ಳವರು ಮಾತಾಡುವಾಗ ಬಳಸುವ ಭಾಷೆಗೂ ಜನರು ಅಧಿಕಾರವುಳ್ಳವರೊಡನೆ ಮಾತಾಡುವಾಗ ಬಳಸುವ ಭಾಷೆಗೂ ಜನರು ಅಧಿಕಾರವುಳ್ಳವರೊಡನೆ ಮಾತಾಡುವಾಗ ಬಳಸುವ ಭಾಷೆಗೂ ಅಧಿಕಾರವುಳ್ಳವರು ತಮ್ಮತಮ್ಮಲ್ಲೇ ಮಾತಾಡುವಾಗ ಬಳಸುವ ಭಾಷೆಗೂ ಅಗಾಧ ವ್ಯತ್ಯಾಸವಿರುತ್ತದೆ. ಈ ಸನ್ನಿವೇಶದಲ್ಲಿ ನಾವು ಕನ್ನಡದ ಸ್ಥಾನಮಾನಗಳ ಸ್ವರೂಪವನ್ನು ಗ್ರಹಿಸಬೇಕಾಗುತ್ತದೆ.

ಈ ವಿವರಣೆಯ ಉದ್ದೇಶವಿಷ್ಟೇ. ಕನ್ನಡ ನಾಡಿನ ಆಡಳಿತದ ಭಾಷೆಯಾಗುವುದು ಕೇವಲ ಭಾಷಾನೀತಿ ಮತ್ತು ಭಾಷಾಯೋಜನೆಗಳಿಂದ ಸಾಧಿತವಾಗುವುದಲ್ಲ. ಇಡೀ ಆಡಳಿತ ವ್ಯವಸ್ಥೆ, ಅದರ ವಿವಿಧ ಹಂತಗಳು ಜನಪರವಾದ ನೆಲೆಗಳನ್ನು ಪಡೆದುಕೊಂಡಾಗ ಮಾತ್ರ ಅದು ಸಾಧ್ಯವಾಗುತ್ತದೆ. ಆದರೆ ಸದ್ಯದ ಪರಿಸ್ಥಿತಿಯಲ್ಲಿ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಜಾಲಸಂಪರ್ಕಗಳು ಜನಪರತೆಯನ್ನು ಹೊಂದಿಲ್ಲ. ಆ ಭಾಷೆಗಳಲ್ಲಿ ಜನರು ಉಪಕರಣಗಳು ಮಾತ್ರ, ಹಾಗಾಗಿ ಅವರ ಭಾಷೆ ಕೂಡ ಉಪಕಾರಕ ನೆಲೆಯಲ್ಲಿ ನಿಲ್ಲುತ್ತದೆ. ಜಾಲ ಸಂಪರ್ಕದ ಭಾಷೆಗಳಿಗೆ ಅಧಿಕೃತ ಮನ್ನಣೆ ದೊರೆಯುತ್ತದೆ. ಇದು ಹತಾಶೆ ಮತ್ತು ಸಿನಿಕತನ ವಿವರಣೆಯಲ್ಲ, ವಸ್ತು ಸ್ಥಿತಿಯ ಮಂಡನೆ. ಇಲ್ಲಿಂದ ಮುಂದಿನ ದಾರಿ ಏನೆಂಬುದನ್ನು ಅಂದಿನ ಸಮುದಾಯಗಳ ಒಳಗಿನ ಒತ್ತಡಗಳು ಮಾತ್ರ ಬರಲಿರುವ ದಶಕಗಳಲ್ಲಿ ನಿರ್ಧರಿಸಲಿವೆ. ಹಾಗಾಗದಿದ್ದಲ್ಲಿ ಕನ್ನಡ ತನ್ನ ಬಳಕೆಯ ವಲಯವನ್ನು ಕುಗ್ಗಿಸಿಕೊಂಡು ಎದುರಾಳಿಗಳಿಲ್ಲದ ಕಿರುಮನೆಯಲ್ಲಿ ಸಾರ್ವಭೌಮವಾಗಿ ಉಳಿಯುತ್ತದೆ.

ಬೆಸಗರಹಳ್ಳಿ ರಾಮಣ್ಣನವರ ಕಥಾಲೋಕ

(ಕಣಜ: ರಾಮಣ್ಣನವರ ಸಮಗ್ರ ಕಥಾಸಂಪುಟಕ್ಕೆ ಬರೆದ ಮಾತುಗಳು)

ರಾಮಣ್ಣ ಎಲ್ಲ ಅರ್ಥದಲ್ಲೂ ಕತೆಗಾರರು. ಮೊದಮೊದಲು ಕತೆಗಳನ್ನು ಬರೆಯಲು ಅವರಿಗೆ ಹಂಬಲವಿದ್ದರೂ ಅದಕ್ಕೆ ಬೇಕಾದ ಯಾವುದೇ ಒತ್ತಾಸೆಯೂ ಇದ್ದಿಲ್ಲದಿರಬಹುದು. ಆದರೆ ಒಮ್ಮೆ ಕತೆ ಬರೆಯುವ ಹುಲಿಯ ಬೆನ್ನೇರಿದ ರಾಮಣ್ಣ ಅದರಿಂದ ಇಳಿಯಲಾಗಲಿಲ್ಲ. ಅಷ್ಟೇ ಅಲ್ಲ ಆ ಹುಲಿಯ ಬೆನ್ನ ಮೇಲಿಂದ ಅವರು ಇಳಿಯಲು ಬಯಸಲೂ ಇಲ್ಲ. ಕತೆ ಬರೆಯುವುದು ಈ ಕತೆಗಾರರ ಪಾತ್ರದ ಒಂದು ನೆಲೆ ಮಾತ್ರ. ಕತೆ ಕೇಳುವುದು; ಕತೆ ಓದುವುದು ಕೂಡ ಈ ಪಾತ್ರದ ನೆಲೆಗಳೇ. ಇದೆಲ್ಲವನ್ನೂ ರಾಮಣ್ಣ ತಮ್ಮದೇ ಆದ ಬರೆಯಲ್ಲಿ ನಿರ್ವಹಿಸಿದವರು. ಅಲ್ಲದೆ ಲೋಕವನ್ನು ನೋಡುವ ಬರೆಯಲ್ಲೂ ಅವರ ಈ ಕತೆಗಾರನ ಬಗೆ ಮುಂಚೂಣಿಯಲ್ಲಿರುತ್ತಿತ್ತು. ಒಂದು ಕಡೆ ಕತೆಗಾರನಾಗಿ ತಾವು ಆಯ್ದುಕೊಂಡ ಮತ್ತು ಆರೋಪಿಸಿಕೊಂಡ ನೈತಿಕತೆಯ ನೆಲೆಯಲ್ಲಿ ಲೋಕವನ್ನು ನೋಡುತ್ತಿದ್ದರೆ; ಇನ್ನೊಂದು ಕಡೆ ಲೋಕವನ್ನು ಕತೆಯಲ್ಲಿ ಇಳಿಸಿಕೊಳ್ಳಲು ಅನುವಾಗುವಂತೆ ಅಲ್ಲಿನ ಘಡನೆಗ ಮತ್ತು ಪಾತ್ರಗಳನ್ನು ಅವುಗಳ ಚಹರೆಗಳನ್ನು ಹಿಡಿದಿಟ್ಟುಕೊಳ್ಳುತ್ತಿದ್ದರು. ತಾವು ಓದಿದ್ದನ್ನು, ಕಂಡಿದ್ದನ್ನು ಕತೆಯಾಗಿಸುವ ತವಕ ಅವರಲ್ಲಿ ಯಾವಾಗಲೂ ತುಂಬಿಕೊಂಡಿರುತ್ತಿತ್ತು. ಹಾಗೆ ನೋಡಿದರೆ ಕತೆ ಬರೆಯುವುದು ಅವರಿಗೆ ಒಂದು ಲೋಲುಪ ಚಟುವಟಿಕೆಯಾಗಿದ್ದಂತೆ ತೋರುವುದಿಲ್ಲ. ಅವರ ಕತೆಗಳ ಹಿಂದೆ ಇರುವ ನಿಲುವುಗಳನ್ನು ಗಮನಿಸಿದರೆ ಕತೆ ಬರೆಯುವುದು ಅವರಿಗೆ ತಮ್ಮ ಸಾಮಾಜಿಕ ವ್ಯಕ್ತಿತ್ವದ ಹೊಣೆಗಾರಿಕೆಯನ್ನು ನಿಭಾಯಿಸುವ ಬಗೆಯಾಗಿತ್ತೆಂದು ತಿಳಿಯಬಹುದು. ಈ ಎಲ್ಲ ಕತೆಗಳನ್ನು ಅವರು ಬರೆಯದಿದ್ದರೂ ಆ ಎಲ್ಲ ಕತೆಗಳನ್ನು ಅವರು ತಮ್ಮ ಬದುಕಿನ ಭಾಗವನ್ನಾಗಿಯೇ ಮಾಡಿಕೊಂಡಿರುತ್ತಿದ್ದರು ಎಂಬ ಬಗೆಗೆ ಯಾವ ಸಂಶಯವೂ ನನಗಿಲ್ಲ. ಹೀಗೆ ಇಡೀ ಬದುಕನ್ನೇ ಒಬ್ಬ ಕತೆಗಾರನ ನೆಲೆಗೆ ರವಾನಿಸಿಕೊಂಡವರು ಕನ್ನಡದಲ್ಲಿ ಇಲ್ಲವೆನ್ನುವಷ್ಟು ಕಡಿಮೆ. ಇದು ನನ್ನ ತಿಳುವಳಿಕೆ. ರಾಮಣ್ಣನವರಿಗೆ ಕನ್ನಡದ ಹಲವು ಬರೆಹಗಾರರ ಬರವಣಿಗೆ ತುಂಬ ಆಪ್ತವಾಗಿತ್ತು. ಅದರೊಡನೆ ಅವರು ಭಾರತದ ಹಲವು ಲೇಖಕರನ್ನು ಬಹುವಾಗಿ ಮೆಚ್ಚಿಕೊಂಡಿದ್ದರು. ಪ್ರೇಮಚಂದ್, ಶರಶ್ಚಂದ್ರ ಚಟರ್ಜಿ ಆ ಪಟ್ಟಿಯಲ್ಲಿ ಮೊದಲಿಗರು. ಅಲ್ಲದೆ ರಶಿಯಾದ ಕ್ರಾಂತಿಗೂ ಮೊದಲಿನ ಬರಹಗಾರರಾದ ಫಿದೋರ್ ದಾಸ್ತೋವಸ್ಕಿ ಮತ್ತು ಲಿಯಾ ಟಾಲ್‌ಸ್ಟಾಯ್ ಅವರ ಕಥನಗಳನ್ನು ಓದಿಕೊಂಡದ್ದಷ್ಟೇ ಅಲ್ಲದೇ ಆ ಕಥನಗಳಿಂದ ತಮಗೆ ಮೆಚ್ಚಿಗೆಯಾದ

ಭಾಗಗಳನ್ನು ಗೆಳೆಯರೊಡನೆ ನೆನಪಿನಿಂದ ಹೇಳಿ ಸುಖಿಸುತ್ತಿದ್ದರು. ಅಂದರೆ ಅವರ ಸಾಹಿತ್ಯಕ ವ್ಯಕ್ತಿತ್ವ ಕೇವಲ ತಮ್ಮ ಬರವಣಿಗೆಗಳಿಗೆ ಮಾತ್ರ ಸೀಮಿತಗೊಂಡಿರಲಿಲ್ಲ. ಅವರು ತಮ್ಮ ವೃತ್ತಿ ಮತ್ತು ಕೌಟುಂಬಿಕ ಬದುಕಿನೊಡನೆ ಸಾಹಿತ್ಯವನ್ನು ಬೇರ್ಪಡಿಸಲಾಗದಂತೆ ಬೆಸೆದುಕೊಂಡಿದ್ದರು. ಹಾಗಾಗಿ ಅವರೊಬ್ಬ ಕನಸುಣಿಯಂತೆ ಹಲವರಿಗೆ ತೋರಿದ್ದರೆ ಅಚ್ಚರಿಯಲ್ಲ. ನಗೆಗಾರರಂತೆ ಕಾಣುತ್ತಿದ್ದ ರಾಮಣ್ಣನವರು ಹೊಸ ಓದು ಮತ್ತು ಜೀವನ ಕ್ರಮಗಳು ಹಲವರಿಗೆ ತಂದುಕೊಟ್ಟಿದ್ದ ಆಧುನಿಕ ನಡಾವಳಿಗಳಿಂದ ದೂರವೇ ಉಳಿದಿದ್ದರು. ಅವರು ತಮ್ಮ ವೃತ್ತಿಜೀವನದಲ್ಲಿ ಒಮ್ಮೆ ತಾವು ಕೆಲಸ ಮಾಡುತ್ತಿದ್ದ ಆರೋಗ್ಯ ಕೇಂದ್ರದ ಸುತ್ತ ನಳನಳಿಸುವ ಮರಗಳ ತೋಪೊಂದನ್ನು ನಿರ್ಮಿಸಿದ್ದರು. ಅವರ ಅಂತರಂಗದೊಳಗೆ ಅವರ ಓದು ಮತ್ತು ಬರಹಗಳು ಇಂತಹುದೇ ಒಂದು ನಳನಳಿಸುವ ತೋಪನ್ನು ಬೆಳೆಸಿದ್ದವು. ಆ ತೋಪನ್ನು ಅವರು ಸದಾ ನೀರೆರೆದು ಪೋಷಿಸುತ್ತಿದ್ದರು.

ತಮ್ಮ ಹೆಸರಿನೊಡನೆ ಬೆಸಗರಹಳ್ಳಿ ಎಂಬೊಂದು ಭಾಗವನ್ನು ಅವರು ಸೇರಿಸಿಕೊಂಡಿದ್ದರು. ಹೀಗೆ ತಮ್ಮ ಊರಿನ ಹೆಸರನ್ನು ನಿಜ ಹೆಸರಿನ ಹಿಂದೆ ಇಲ್ಲವೆ ಮುಂದೆ ಸೇರಿಸಿಕೊಳ್ಳುತ್ತಿದ್ದ ತಲೆಮಾರಿಗೆ ರಾಮಣ್ಣ ಸೇರಿದ್ದವರು. ಶಾಲೆಗಳಲ್ಲಿ ಒಂದು ಇಂಗ್ಲಿಷ್ ಅಕ್ಷರವಾಗುತ್ತಿದ್ದ ಊರಿನ ಹೆಸರು, ಇಡಿಯಾಗಿ ತಮ್ಮ ಹೆಸರಿನ ಭಾಗವೇ ಆಗಬೇಕೆಂದು ಬಯಸಿದ್ದು ಕೇವಲ ಹೊಸತನಕ್ಕಾಗಿ ಮಾತ್ರ ಇರಲಾರದು. ಆ ಮೂಲಕ ಒಂದು ದೃಷ್ಟಿಕೋನವನ್ನು ತಮ್ಮದನ್ನಾಗಿಸಿಕೊಳ್ಳಲು ಯತ್ನಿಸಿದಂತೆ ತೋರುತ್ತದೆ. ರಾಮಣ್ಣನವರ ಜೊತೆಗಿನ ಬೆಗರಹಳ್ಳಿ ಅವರ ಕತೆಯ ಜಗತ್ತಿನಲ್ಲಿ ಆವರಣವಾಗಿ, ನುಡಿಗಟ್ಟಾಗಿ ಇಲ್ಲವೇ ನಿಲುವಾಗಿ ಸದಾ ನೆಲೆ ನಿಂತುಬಿಟ್ಟಿದೆ.

ಕನ್ನಡ ಕತೆಗಳ ಲೋಕಕ್ಕೆ ಹಳ್ಳಿಗಳು ಬರತೊಡಗಿ ಹಲವು ದಶಕಗಳೇ ಕಳೆದಿವೆ. ಗಾಂಧಿಯವರು ಗ್ರಹಿಸಿದ ಹಳ್ಳಿಗಳ ಮಾದರಿಯನ್ನು ಮಂಡಿಸಲು ಮೊದಮೊದಲು ಹಲವು ಬರೆಹಗಾರರು ಯತ್ನಿಸಿದ್ದಾರೆ. ಆ ಮಾದರಿಯಲ್ಲಿ ಆ ಹಳ್ಳಿಗಳಲ್ಲಿ ರಿಕ್ತತೆಯಿದ್ದರೂ ಹೃದಯವಂತಿಕೆ ಇರುತ್ತದೆ. ವೈವಿಧ್ಯಗಳಿಂದ ತುಂಬಿದ ಸಮುದಾಯಗಳಿರುತ್ತವೆ. ಹಲವು ಸೋಜಿಗಗಳಿರುತ್ತವೆ. ದುಷ್ಟವೆನಿಸಿದ್ದು ಮಣಿಯುವಿಕೆಯತ್ತ ಹೆಜ್ಜೆ ಹಾಕುತ್ತಿರುತ್ತವೆ. ಹಾಗೆ ನೋಡಿದರೆ ದುಷ್ಟವೆನಿಸಿದ್ದೂ ಕೂಡ ಒಳಿತಿನ ಒಂದು ಮುಖಮಾತ್ರ. ಒಳಿತು ತನ್ನ ಗಟ್ಟಿತನವನ್ನು ಸಾಬೀತು ಮಾಡಿಕೊಳ್ಳಲು ಆಗಾಗ ಈ ದುಷ್ಟತನದ ಲೀಲೆಯಲ್ಲಿ ಪಾಲ್ಗೊಳ್ಳುತ್ತಿರುತ್ತದೆ; ಅಲ್ಲಿ ವ್ಯಕ್ತಿ ಮತ್ತು ಸಮುದಾಯದ ನಡುವೆ ಎದ್ದು ಕಾಣುವ ಬಿರುಕುಗಳಿರುವುದಿಲ್ಲ; ಅಷ್ಟಿಷ್ಟು ಬಿರುಕುಗಳಿದ್ದರೂ ಅದನ್ನು ಸರಿಮಾಡುವ ಚೈತನ್ಯವುಳ್ಳವರು ಅ ಸಮುದಾಯಕ್ಕಾಗಿ ತಮ್ಮ ಜೀವನನ್ನು ಮುಡುಪಿಟ್ಟಿರುತ್ತಾರೆ. ದೀಪದ ಬತ್ತಿಯಲ್ಲಿ ಕಟ್ಟಿದ ಕರುಕನ್ನು ಮೆಲ್ಲಗೆ ತೆಗೆದು ಕುಡಿ ಮತ್ತೆ ಚೆನ್ನಾದ ಬೆಳಕು ಚೆಲ್ಲುವಂತೆ ಮಾಡುವ ಹಿರಿಯರು ಆ ಹಳ್ಳಿಗಳಲ್ಲಿ ಒಬ್ಬಿಬ್ಬರು ಇದ್ದೇ ಇರುತ್ತಾರೆ. ಮಾಸ್ತಿಯವರ 'ಉಗ್ರಪ್ಪನ ಉಗಾದಿ', 'ಸುಬೇದಾರರಿಗೆ ಪ್ಯಾದೆಮಾತು', 'ಜ್ಯೋಗೇರ ಅಂಜಪ್ಪನ ಕೋಳಿಕತೆ' ಮುಂತಾದ ಕತೆಗಳನ್ನು ಈನೆಲೆಯಲ್ಲಿ ನೆನಪು ಮಾಡಿಕೊಳ್ಳಬಹುದು.

ಹೊಸ ಬಗೆಯ ಬದುಕು ಹಳ್ಳಿಗಳ ಒಳಗೆ ಕಾಲಿಡಲು ಮೊದಲಾದ ಮೇಲೆ ಹಳ್ಳಿಗಳ ಮನೆಯ ಒಳಗಿನ ಮತ್ತು ಹೊರಗಿನ ಜಗತ್ತು ಬದಲಾಗತೊಡಗಿತು. ಆ ಬಳಿಕ

ಬಂದ ಬರೆಹಗಾರರು ಈ ಬದಲಾವಣೆಯನ್ನು ತಮ್ಮದೇ ಆದ ಬಗೆಯಲ್ಲಿ ತಮ್ಮ ಬರವಣಿಗೆಯಲ್ಲಿ ಮಂಡಿಸುವುದನ್ನು ನೋಡುತ್ತೇವೆ. ದೇವನಿಹನು ವ್ಯೋಮದಲ್ಲಿ ಎಲ್ಲ ಸೌಖ್ಯ ಭೂಮಿಯಲ್ಲಿ ಎಂ ನೆಲೆಗೀಗ ಬೇರುಗಳಿಲ್ಲವೆಂಬುದು ಅರಿವಿಗೆ ಬರುವಂತಾಗಿದೆ. ಹಳ್ಳಿಗಳೀಗ ಮೈತೆರೆದ ಕೆರೆಗಳಂತೆ ಕಾಣತೊಡಗುತ್ತವೆ. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಮಂಡಿಸಿದ ಗ್ರಾಮಭಾರತದ ಮಾದರಿಯ ಹಳ್ಳಿಗಳ ಒಳಗಿನ ಚಹರೆಗಳು ಮರೆಯಾದವು. ಹಳ್ಳಿಗಳು ಹೊಸ ಬೆಳಕಿನಲ್ಲಿ ತಮ್ಮ ಹೊಸ ಚಹರೆಗಳನ್ನು ತೋರುವಂತಾಯಿತು. ಹೊಸ ಬದುಕಿನ ಲಯಗಳು ಆ ಹಳ್ಳಿಗಳಲಿ ತಂದ ಬದಲಾವಣೆಗಳನ್ನು ಕತೆಗಾರರು ಮಂಡಿಸುವತ್ತ ಹೊರಡುವುದನ್ನು ನೋಡುತ್ತೇವೆ. ಹೀಗೆ ಮಂಡಿಸಲು ಮುಂದಾದ ಮೊದಲ ತಲೆಮಾರಿನ ಲೇಖಕರಲ್ಲಿ ರಾಮಣ್ಣ ಒಬ್ಬರು. ಗಾಂಧಿ ಚಿಂತನೆಗಳ ನೆರಳಿನಲ್ಲಿ ಮೊದಮೊದಲು ಲೇಖಕರು ಹಳ್ಳಿಗಳಲ್ಲಿ ಗ್ರಾಮಭಾರತದ ಧಾರಣಾ ಕೇಂದ್ರವಿದೆಯೆಂದು ನಂಬಿ ಬರೆಯುತ್ತಿದ್ದರು. ಈ ಧಾರಣಾ ಕೇಂದ್ರದ ಆಯಸ್ಸು ಕೂಡ ನಶಿಸುತ್ತಿರುವುದನ್ನು ಅಲ್ಲಲ್ಲಿ ಲೇಖಕರು ಹೇಳುವುದನ್ನು ಕಾಣುತ್ತೇವೆಯಾದರೂ ಅದು ಗಟ್ಟಿ ದನಿಯಾಗಿರಲಿಲ್ಲ. ಅದರಲ್ಲೂ ಒಂದು ಸಮುದಾಯವಾಗಿ ಹಳ್ಳಿ ಎಲ್ಲರನ್ನು ಸಂಗೋಪನೆ ಮಾಡುವ ಒಳಕಸುವೊಂದನ್ನು ಪಡೆದಿದೆಯೆಂಬ ನಂಬುಗೆಯ ಬುಡಗಳು ಈಗ ಸಡಿಲಾಗಿವೆ ಎನ್ನುವ ಅರಿವು ಕೆಲವು ಲೇಖಕರಲ್ಲಿ ಮೂಡಿದ್ದಂತೂ ದಿಟ.

ಈ ಹೊಸದು ಎಂಬುದೇನು? ಕೆಲವರಿಗೆ ಅದು ಹೊಸ ಸಾಮಾಜಿಕ ವ್ಯವಸ್ಥೆಯಾಗಿ ಕಾಣುತ್ತದೆ. ಚುನಾವಣೆಗಳು, ರಾಜಕಾರಣ, ಶಾಲೆಗಳು, ಹೊಟೇಲುಗಳು, ಬಸ್ಸು, ರೈಲು, ರೇಡಿಯೋ ಹೀಗೆ ಹತ್ತಾರು ಹೊಸ ಸಂಗತಿಗಳು ಹಳ್ಳಿಗಳ ಸಾವಯವತೆಯನ್ನು ಒಡೆಯುವ ಪರಿಕರಗಳಂತೆ ತೋರಿವೆ. ಮತ್ತೆ ಕೆಲವರಿಗೆ ಮೊದಮೊದಲು ಹಳ್ಳಿಗಳಲ್ಲಿ ಇದೆಯೆಂದು ತಿಳಿದಿದ್ದ ಧಾರಣಾಕೇಂದ್ರವೇ ನೆಲೆಯನ್ನು ನಂಬುವಂತೆ ಮಾಡಿವೆ. ಅಂದರೆ ಭ್ರಮೆಗಳೆಂದು ದಿಟವನ್ನು ಎದುರಿಸಬೇಕಾದ ಕಾಲದಲ್ಲಿ ಇಂತಹ ಕರೆಗಾರರು ಬರೆಯಬೇಕಾಗಿ ಬಂದಿತ್ತು. ರಾಮಣ್ಣ ಮತ್ತವರ ತಲೆಮಾರಿನ ಕತೆಗಾರರು ಈ ಭ್ರಮನಿರಸನದ, ಕನಸೊಡೆದೆದ್ದ ಅವಸ್ಥೆಯನ್ನು ಅನುಭವಿಸುತ್ತಲೇ ಬರೆದವರು.

ರಾಮಣ್ಣನವರ ಕತೆಗಳನ್ನು ಎರಡು ಗುಂಪುಗಳಲ್ಲಿ ಇರಿಸಿ ನೋಡಬಹುದು. ಮೊದಲ ಗುಂಪಿನ ಕತೆಗಳು ಹಳ್ಳಿಗಳಲ್ಲಿ ನಡೆಯುತ್ತವೆ. ಅಲ್ಲದೆ ಅವುಗಳ ನಿರೂಪಕರು ಆ ಹಳ್ಳಿಯ ಬದುಕಿನೊಡನೆ ಇನ್ನೂ ಕರುಳುಬಳ್ಳಿಯ ನಂಟನ್ನು ಇರಿಸಿಕೊಂಡಿರುವಂತಹವರು. ಎರಡನೆಯ ಗುಂಪಿನ ಕತೆಗಳಲ್ಲಿ ನಡೆದರೆ ಮತ್ತೆ ಕೆಲವು ಹೊಸ ಭಾರತ ರೂಪಿಸಿಕೊಂಡ ನಗರ ತಾಲ್ಲೂಕು ಕೇಂದ್ರಗಳಲ್ಲಿ ನಡೆಯುತ್ತವೆ. ಈ ಕತೆಗಳ ನಿರೂಪಕರು ಕತೆಗಳ ಜಗತ್ತಿನ ಭಾಗವಾಗಿರುವುದಿಲ್ಲ, ಹಾಗೆಂದು ಸಾಕ್ಷಿಯಾಗಿ ನೋಡುವವರೂ ಅಲ್ಲ. ಎರಡೂ ಬಗೆಯ ಕತೆಗಳಲ್ಲಿ ಇರುವುದು ದಟ್ಟವಾದ ನೈತಿಕ ಪ್ರಜ್ಞೆ. ಇದು ತುಂಬ ಎಚ್ಚರದಿಂದ ಗಮನಿಸಬೇಕಾದ ಸಂಗತಿಯಾಗಿದೆ. ಹಳ್ಳಿಗಳನ್ನು ಅಲ್ಲಿನ ಬದುಕನ್ನು ಕೇಂದ್ರ ಮಾಡಿಕೊಂಡು ಬರೆದ ಕತೆಗಳಲ್ಲಿ ಸಮುದಾಯದಲ್ಲಿದ್ದ ಕಟ್ಟುವ ಶಕ್ತಿ ಕಳೆದುಹೋಗಿದ್ದರೂ ಅಂತಹ ಕಟ್ಟುವ ಶಕ್ತಿಯೊಂದು ಮನುಷ್ಯರ ಒಳಗೆಲ್ಲೋ

ಅಡಗಿರುತ್ತದೆ ಎನ್ನುವ ನಂಬಿಕೆ ಕೆಲಸ ಮಾಡುತ್ತದೆ. ಸಂಬಂಧಗಳು ಬೇರೆ ಬೇರೆ ಕಾರಣಕ್ಕಾಗಿ ಬಿರುಕುಬಿಡುವ ಹಂತಗಳು ಬಂದಾಗ ಈ ಒಳಗಿನ ಕಟ್ಟುವ ಶಕ್ತಿ ಎಚ್ಚರಗೊಂಡು ಮನುಷ್ಯರು ಹಾದಿ ತಪ್ಪದಂತೆ ಕಾಯುವುದೆಂಬ ನೈತಿಕತೆಯೊಡನೆ ರಾಮಣ್ಣ ಈ ಮೊದಲ ಗುಂಪಿನ ಕತೆಗಳನ್ನು ಬರೆಯುತ್ತಾರೆ.

ಓದಲು ಹಳ್ಳಿಯನ್ನು ಬಿಟ್ಟು ಹೋದ ಹುಡುಗರು ಮರಳಿ ಹಳ್ಳಿಗೆ ಬಂದಾಗ ಆ ಹಳ್ಳಿಗಳೆಲ್ಲ ಸಾಮಾನ್ಯವಾಗಿ ಪಳಯುಳಿಕೆಗಳಂತೆ ತೋರುತ್ತವೆ. ಅವುಗಳು ಬದಲಾವಣೆಗೆ ಸಿದ್ಧಗೊಳ್ಳದ ಹೊರತು ಅಲ್ಲಿನ ಬದುಕಿಗೆ ಹೊರದಾರಿಯೆ ಇಲ್ಲವೆಂದು ಅನಿಸತೊಡಗುತ್ತದೆ. ಆದರೆ ರಾಮಣ್ಣನವರ ಮೊದಲ ಗುಂಪಿನ ಕತೆಗಳು ಹೀಗೆ ಹಳ್ಳಿಗಳನ್ನು ಮತ್ತು ಅಲ್ಲಿನ ಬದುಕನ್ನು ಹೊರಗಿಡುವ ಆಯ್ಕೆಯನ್ನು ಬಿಟ್ಟುಕೊಡುತ್ತವೆ. ಆ ಬದುಕು ಬದಲಾಗಬೇಕೆಂಬ, ಅದನ್ನು ಬದಲಿಸಬೇಕೆಂ ಹಂಬಲ ಅವರ ಕತೆಗಳ ಮುಖ್ಯ ಕಾಳಜಿಯಾಗುವುದಿಲ್ಲ. ತೀರ ಪ್ರಗತಿಪರರೆಂದು ತಿಳಿದುಕೊಂಡವರಿಗೆ ರಾಮಣ್ಣನವರ ಈ ದೃಷ್ಟಿಕೋನ ಹಿಡಿಸದೆಯೂ ಇರಬಹುದು. ಎಣ್ಣೆ ತೀರಿದ ದೀಪದ ಮುಂದೆ ಬತ್ತಿ ಹೊಸೆತುವ ಕಾಯಕದಂತೆ ತೋರಬಹುದು. ಆದರೆ ರಾಮಣ್ಣ ಮನುಷ್ಯರ ಒಳಗಿನ ಒಳಿತನ್ನು ನಂಬಿದವರು. ಅವರ ಮೊದಮೊದಲ ಕತೆಗಳಲ್ಲಿ ಕುಟುಂಬಗಳ ಒಳಗೆ ಸಣ್ಣ ಬಿರುಕೊಂದು ಕಾಣಿಸಿಕೊಳ್ಳುವ ಮತ್ತು ಆ ಬಿರುಕನ್ನು ಕತೆಗಳ ಕೊನೆಗೆ ಮುಚ್ಚುವ ಮಾದರಿಯೊಂದು ಮಂಡಿತವಾಗುತ್ತದೆ. ಈ ಎರಡೂ ಸಂಗತಿಗಳೂ ದಿಡವಾದವುಗಳೆ. ಬಿರುಕು ಬಿಡದಿದ್ದರೆ ಅದು ಬದುಕಲ್ಲ; ಹಾಗೆಯೇ ಹಾಗೆ ಬಿರುಕು ಬಿಟ್ಟಾಗ ಅದನ್ನು ಬೆಳೆಯಲು ಬಿಡದೆ ಮುಚ್ಚುವ ಹಾಗೆ ಮಾಡದಿದ್ದರೂ ಅದು ಬದುಕಲ್ಲ. ಈ ಕತೆಗಳನ್ನು ಬರೆಯುವಾಗ ರಾಮಣ್ಣ ತೀವ್ರ ಆಶಾವಾದಿಯಂತೆ ಕಂಡರೂ ಸತ್ಯವನ್ನು ಎದುರಿಸಲು ಹೆದರುವ ಹೆಂಬೇಡಿಯಂತೆ ತೋರುವುದಿಲ್ಲ. ಅದಕ್ಕೆ ಕಾರಣ ಅವರು ಕತೆಯನ್ನು ಕಟ್ಟುವ ಬಗೆ.

ಇಂತಹ ಕತೆಗಳಲ್ಲಿ ಎರಡು ಬಗೆಯ ನಿಸರ್ಗಗಳು ನಮ್ಮೆದುರು ಕಾಣುತ್ತವೆ. ಒಂದು ಮನುಷ್ಯರು ತಮ್ಮ ದುಡಿಮೆಯಿಂದ ಬೆಳೆದ ಬೆಳೆಯನ್ನು ಹೊತ್ತು ನಿಂತ ನಿಸರ್ಗ. ಇನ್ನೊಂದು ಜನರ ಸ್ವಭಾವದ ನಿಸರ್ಗ. ಎರಡೂ ನೆಲೆಗಳನ್ನು ಒಂದೇ ಸಮನಾದ ಉತ್ಸುಕತೆಯಲ್ಲಿ ಕತೆಗಳು ಬಣ್ಣಿಸುತ್ತವೆ. ಅದರಲ್ಲೂ ಬೆಳೆದು ನಿಂತ ಹೊಲಗದ್ದೆಗಳ ಸಮೃದ್ಧತೆಯನ್ನು ಬಣ್ಣಿಸುವ ರಾಮಣ್ಣನವರ ಭಾಷೆಯನ್ನು ಓದಿಯೇ ನೋಡಬೇಕು. ಅಲ್ಲಿ ಎಲ್ಲಿಯೂ ಅವರು ಕೇವಲ ಮುಗ್ಧತೆಯಿಂದ ಬರೆಯುವುದಿಲ್ಲ. ಆ ಸಮೃದ್ಧ ನಿಸರ್ಗಕ್ಕೆ ಇರುವ ಕಟ್ಟು ಪೊರೆಯುವ ಮತ್ತು ಹೊಸದನ್ನು ಹುಟ್ಟಿ ಹಾಕಲು ಗುಣದಲ್ಲಿ ಅವರಿಗಿರುವ ಶ್ರದ್ಧೆಗೆ ಗಡಿಗಳೇ ಇಲ್ಲವೇನೋ ಎನಿಸುತ್ತದೆ. ಹಸಿರು ಬಣ್ಣದ ಅವರ ಈ ಬಣ್ಣಗಳಲ್ಲಿ ಹಲವು ಛಾಯೆಗಳಲ್ಲಿ ಮೈದಳೆಯುತ್ತದೆ. ಹಾಗೆಂದು ಅವರು, ಮನುಷ್ಯ ಒಬ್ಬ ನೋಟಕನಾಗಿರುವ ನೆಲೆಯಲ್ಲಿ ಇಲ್ಲವೇ ಹೊರಗೆ ನಿಂತು ನೋಡು ಬಗೆಯಲ್ಲಿ ನಿಸರ್ಗವನ್ನು ಬಣ್ಣಿಸುವುದಿಲ್ಲ. ಅಲ್ಲಿ ಹಾರುವ ಹಕ್ಕಿಗಳು ಮನುಷ್ತರಲ್ಲಿ ಅಡಗಿರುವ ಹತ್ತಿಕ್ಕಲಾಗದ ಬಿಡುಗಡೆಯ ಹಂಬಲವನ್ನು ತೋರುವ ಹಕ್ಕಿಗಳಲ್ಲ. ಅವು ಅವನು ಬೆಳೆದ ಬೆಳೆಯನ್ನು ಅವಲಂಬಿಸಿದ ಹಕ್ಕಿಗಳು. ಮನುಷ್ಯರ ಜತೆಯಲ್ಲಿ ಬದುಕಲೆಂದು ಇರುವ ಹಕ್ಕಿಗಳು. ಹಾಗಾಗಿ ಈ ಕತೆಗಳಲ್ಲಿ ಇರುವ

ಬಣ್ಣನೆಗಳಿಗೆ ಒಂದು ವಿಶಿಷ್ಟ ಬಗೆಯ ಕಾಂತಿಯಿದೆ. ಜೊತೆಗೆ ಕನ್ನಡಕ್ಕೆ ವಿಶಿಷ್ಟವಾದ ತಾತ್ವಿಕತೆಯಿದೆ. ಇಂತಹ ಬಣ್ಣನೆಗಳಲ್ಲಿ, ಬಣ್ಣಿಸುವವರು ಹೊರಗಿನವರಂತೆ ತೋರುವುದಿಲ್ಲ. ಅದರೊಡನೆ ಬೆರೆತು ಹೋಗಿರುವವರಂತೆ ತೋರುತ್ತಾರೆ.

ಅವರ ಈ ಬಗೆಯ ಕತೆಗಳಲ್ಲಿ ಬರುವ ಇನ್ನೊಂದು ನಿಸರ್ಗ ಕೂಡ ಹೀಗೆಯೇ ಒಳಗೊಳ್ಳುವ ಬಗೆಯದು. ಇಲ್ಲಿ ಜನರ ನಡುವೆ 'ತಂದಿಕ್ಕುವವರು' ಇದ್ದಂತೆ ಅವರೆಲ್ಲರನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವವರೂ ಇರುತ್ತಾರೆ. ಇಲ್ಲಿಯೂ ಎಲ್ಲವೂ ತಂತಾನೆ ಹುಟ್ಟಿ ಬೆಳೆಯುವುದಿಲ್ಲ. ಉತ್ತುಬಿತ್ತು ಕಳೆ ತೆಗೆದು ಕಾಯ್ದರೆ ಮಾತ್ರ ಸುಗ್ಗಿಯ ಕೊಯ್ಲಿನಲ್ಲಿ ಹೊಟ್ಟೆ ತುಂಬಲು ಕಾಳು ಸಿಗುತ್ತವೆ. ಅಂದರೆ ಮನುಷ್ಯರ ಕಟ್ಟುವ ಸ್ವಭಾವ ಕೂಡ ಹುಟ್ಟಿನಿಂದ ದತ್ತವಾಗಿ ಬಂದುದಲ್ಲ. ಅದನ್ನು ಸರಿಯಾಗಿ ಹಸನು ಮಾಡಿ ಬೆಳೆಸಿಕೊಳ್ಳಬೇಕು. ಇದೂ ಕೂಡ ಒಂದು ಬಗೆಯ ವ್ಯವಸಾಯವೇ ಸರಿ. ಹಾಗಾಗಿ ಇಡಿಯಾಗಿ ಕೆಟ್ಟವರು ಇಲ್ಲವೇ ಇಡಿಯಾಗಿ ಒಳ್ಳೆಯವರು ಎಂಬ ಗೆರೆಯೆಳೆದ ಗುಂಪುಗಳಲ್ಲಿ ಮನುಷ್ಯರನ್ನು ಇರಿಸಲು ಬರುವುದಿಲ್ಲ. ಅವರು 'ಹಾಗೆ ಆಗಲು' ದುಡಿಯುತ್ತಾರೆ ಎನ್ನುವುದಷ್ಟೆ ದಿಟ.

ಈಗ ಆ ಕತೆಗಳನ್ನು ಓದುವಾಗ ಅಲ್ಲಿನ ಹಳ್ಳಿಗಳ ಸಾಮಾಜಿಕ ಬದುಕಿನಲ್ಲಿ ಸಾಮಾಜಿಕ ಸಂಬಂಧಗಳು ಹಿಂದೆ ಸರಿದು ಮನುಷ್ಯ ಸಂಬಂಧಗಳು ಮುನ್ನೆಲೆಗೆ ಬಂದಿವೆ ಎನ್ನಿಸುವುದು ಸಹಜ. ನೆಲದ ಮೇಲಿನ ಒಡೆತನ ಮತ್ತು ದುಡಿಮೆಯನ್ನು ನೆಮ್ಮಿದವರು ಒಂದೆಡೆಯಾದರೆ; ನೆಲದ ಒಡೆಯನವಿಲ್ಲದೆ ದುಡಿಯುವವರು ಇನ್ನೊಂದೆಡೆ ಇದ್ದಾರೆ. ಜೊತೆಗೆ ನೆಲದ ಸಂಬಂಧವಿಲ್ಲದಿದ್ದರೂ ಜೀವನ ನಿರ್ವಹಣೆಯ ಹಾದಿಯನ್ನು ಕೈವಶಮಾಡಿಕೊಂಡವರು ಇದ್ದಾರೆ. ಇವೆರಲ್ಲಿ ಕತೆಗಾರರ ದೃಷ್ಟಿ ಮೊದಲ ಗುಂಪಿನವರಲ್ಲಿ ನೆಲೆಸಿದೆ. ಎರಡನೆಯ ಗುಂಪಿನವರು ಸದಾ ಮುಖಾಮುಖಿ ಆಗುತ್ತಿರುತ್ತಾರೆ. ಕೆಲವೊಂದು ಸವಾಲುಗಳನ್ನೂ ಹಾಕಿವುದುಂಟು. ಆದರೆ ಇವೆಲ್ಲವೂ ಈ ಗುಂಪಿನ ಕತೆಗಳಲ್ಲಿ ಸಂಘರ್ಷಕ್ಕೆ ಕಾರಣವಾಗುವುದಿಲ್ಲ. ಮೊದಲೇ ಹೇಳಿದಂತೆ ಕೊನೆಗೂ ನೆಲೆನಿಂತು ಗೆಲ್ಲುವುದು ಮನುಷ್ಯರ ಒಳ್ಳೆಯಯನವಷ್ಟೆ ಎಂಬುಉದ ನಿರೂಪಕರ ಗಟ್ಟಿ ನಂಬಿಕೆ. ಕನ್ನಡ ಕತೆಗಳ ಲೋಕವೀಗ ರಾಮಣ್ಣನವರ ಈ ನಂಬಿಕೆಯ ನೆಲೆಯಿಂದ ಬಹುದೂರ ಸರಿದಿದೆಯಾದರೂ ಇದರಿಂದ ರಾಮಣ್ಣನವರ ಕತೆಗಳ ಒಳಗಿನ ನಳನಳಿಸುವಿಕೆ ಮಾತ್ರ ಎಂದೂ ಮಾಸದಂತಿದೆ.

ಎರಡನೆಯ ಗುಂಪಿನ ಕತೆಗಳಲಿ ವೈದ್ಯ ರಾಮಣ್ಣನವರಿದ್ದಾರೆ. ವೈದ್ಯರಾಗಿ ಕಂಡ ಬದುಕನ್ನು ಚಿತ್ರಿಸುತ್ತಾರೆ. ವೈದ್ಯರು ದೇಹವನ್ನು ಕೇವಲ ದೇಹರಚನೆಯ ನೆಲೆಯಲ್ಲಿ ಮಾತ್ರ ನೋಡುವವರಲ್ಲ; ಜೊತೆಗೆ ಅಂಗಾಂಗಗಳ ನಡುವಣ ಸಂಬಂಧ ಮತ್ತದರ ಏರುಪೇರುಗಳ ನೆಲೆಯಲ್ಲೂ ನೋಡುವವರು. ಈ ಎರಡೂ ನೆಲೆಗಳನ್ನು ವೈದ್ಯ ರಾಮಣ್ಣನವರು ಕತೆಗಾರ ರಾಮಣ್ಣನವರಿಗೆ ಒದಗಿಸಿದಂತಿದೆ. ಹಾಗೆಯೇ ಅದು ಅವರು ಜೀವನವನ್ನು ನೋಡುವ ದೃಷ್ಟಿಯಲ್ಲೂ ಬದಲಾವಣೆಯನ್ನು ತಂದಿದೆ. ಈ ಬದಲಾವಣೆ ಮತ್ತೆ ಅವರಲ್ಲಿದ್ದ ಆಳವಾದ ನೈತಿಕ ಪ್ರಜ್ಞೆಯ ಸ್ವರೂಪವನ್ನು ಬದಲಾಯಿಸಿದೆ. ಹೊಸ ಬಗೆಯ ಬದುಕು, ಜೀವನ ಮೌಲ್ಯಗಳು ಮನುಷ್ಯರಲ್ಲಿರುವ

ಒಳಗಿನ ಒಳ್ಳೆಯತನವನ್ನು ಹಾಳುಗೆಡಹಿವೆ ಎಂಬ ನೆಲೆಗೆ ನಿರೂಪಕರು ತಲುಪಿದ್ದಾರೆ. ಈ ಕತೆಗಳಲ್ಲೂ ಬಿರುಕು ಬಿಡುವ ಬದುಕಿದೆ. ಆದರೆ ಆ ಬಿರುಕನ್ನು ಮುಚ್ಚುವ ಮನುಷ್ಯರಿಲ್ಲ. ಇರುವವರೂ ಹತಾಶರಾಗಿದ್ದಾರೆ.

ಈ ಗುಂಪಿನ ಕತೆಗಳಲ್ಲೂ ಎರಡು ಬಗೆಯವಿವೆ. ಒಂದು ಬಗೆಯ ಕತೆಗಳು ಬದಲಾದ ಹಳ್ಳಿಗಳಲ್ಲಿ ನಡೆದರೆ ಮತ್ತೊಂದು ಬಗೆಯ ಕತೆಗಳು ರಾಜಕೀಯ ಮತ್ತು ಆರ್ಥಿಕ ಅಧಿಕಾರದ ಕೇಂದ್ರಗಳಲ್ಲಿ ನಡೆಯುತ್ತವೆ. ಹಳ್ಳಿಗಳಲ್ಲಿ ನಡೆಯುವ ಕತೆಗಳಲ್ಲಿ ಈಗ 'ಹೊಂದಿಕೊಂಡು' ಹೋಗುವ ಪರಿಯಿಲ್ಲ. 'ಹರಕೆಯ ಹಣ' ಕತೆಯಲ್ಲಿ ಅಧಿಕಾರ ಕೇಂದ್ರ ಎದುರು ಸೆಡೆದು ನಿಲ್ಲುವ ಪಾತ್ರವಿದೆ. ತನ್ನದೇ ಆದ ಬಗೆಯಲ್ಲಿ ಪಲ್ಲಟಗಳಿಗೆ ಕಾರಣವಾಗುವಂತೆ ಕ್ರಿಯಾವಿಧಾನವನ್ನು ಇಂತಹ ಪಾತ್ರಗಳು ರೂಪಿಸಿಕೊಳ್ಳುತ್ತವೆ. ಜಾತಿಗಳ ನಡುವಣ ವೈರುಧ್ಯವೀಗ ಶತ್ರುತ್ವದ ನೆಲೆಗೆ ತಲುಪಿದೆ. ಎಲ್ಲರೂ ತಮ್ಮ ಫಿರ್ಕಾಗಳನ್ನು ಕಾಯ್ದುಕೊಳ್ಳುವ ಹುನ್ನಾರಗಳನ್ನು ಹುಡುಕುವವರೇ ಆಗಿದ್ದಾರೆ. ರಾಮಣ್ಣ ಬರೆದ ಕೊನೆ ಕೊನೆಯ ಬರಹಗಳಲ್ಲಿ ಒಂದಾದ 'ತೋಳಗಳ ನಡುವೆ' ಎಂಬ ಕಿರುಕಾದಂಬರಿಯಲ್ಲಿ ಈ ನೆಲೆ ಢಾಳಾಗಿ ಮಂಡಿತವಾಗಿದೆ. ಆ ಕೃತಿಯಲ್ಲಿ ಎಲ್ಲರೂ ಯಾವುದೋ ಒಂದು ಆಟದಲ್ಲಿ ಭಾಗಿಯಾದಂತೆ ಯಾರೋ ಬರೆದ ರಂಗಕೃತಿಯ ಪಾತ್ರಗಳಂತೆ ವರ್ತಿಸುತ್ತಾರೆ. ಅಲ್ಲಿ ನೈತಿಕತೆ ಎಂಬುದು ಪಾತ್ರಗಳನ್ನು ನಡೆಸುವ ಶಕ್ತಿಯಾಗಿ ಉಳಿಯುವುದಿಲ್ಲ. ನಿರೂಪಕರ ವ್ಯಂಗ್ಯ, ಒಳ ಕುದಿತಗಳಲ್ಲಿ ಈ ನೈತಿಕತೆ ನೆಲೆಗೊಳ್ಳುತ್ತದೆ. 'ಪ್ರಜಾಪ್ರಭುತ್ವ ಮತ್ತು ಮೂರು ಮಂಗಗಳು' ಮತ್ತು 'ಗಾಂಧಿ' ಕತೆಗಳನ್ನೂ ಈ ಮಾದರಿಯ ಉದಾಹರಣೆಗಳನ್ನಾಗಿ ನೋಡಬಹುದು.

ರಾಮಣ್ಣನವರ ಕತೆಗಳ ಲೋಕದಲ್ಲಿ ಈ ಬದಲಾವಣೆ ಕಾಣಿಸಿಕೊಂಡದ್ದು 1975ರ ಬಳಿಕ ಎಂಬುದನ್ನು ಗಮನಿಸಬೇಕು. ಇದು ಕೇವಲ ಕುತೂಹಲದ ಮಾಹಿತಿಯಲ್ಲ. ಆ ಹೊತ್ತಿನಲ್ಲಿ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆ ಎದುರಿಸುತ್ತಿದ್ದ ಬಿಕ್ಕಟ್ಟು ತುರ್ತು ಪರಿಸ್ಥಿತಿಯ ಘೋಷಣೆಯಲ್ಲಿ ಮೈತಳೆದಿತ್ತು. ಇದು ನಮ್ಮ ಹಲವು ಲೇಖಕರ ಲೋಕದೃಷ್ಟಿಯ ಮೇಲೆ ದಟ್ಟವಾದ ಪರಿಣಾಮವನ್ನು ಬೀರಿದೆ. ಅದೇ ಸರಿ ಸುಮಾರಿಗೆ 'ಸಂಪೂರ್ಣ ಕ್ರಾಂತಿ' ಪರಿಕಲ್ಪನೆ ಮತ್ತು ಚಳುವಳಿ ಕೂಡ ರಾಮಣ್ಣವನರನ್ನು ಸೆಳೆದಿತ್ತು. ಹಾಗಿಲ್ಲದಿದ್ದರೆ ಅವರು ಬಿಹಾರಕ್ಕೆ ಸಿಡುಬು ನಿರ್ಮೂಲನ ತಂಡದ ವೈದ್ಯರಾಗಿ ಕರ್ನಾಟಕದಿಮದ ಹೋಗುವುದಕ್ಕೆ ಮುಂದಾಗುತ್ತಿರಲಿಲ್ಲ. ಅಲ್ಲಿ ಹೋದಾಗ ಅವರು ಬರೆದ 'ಬೇಲಾ' ಕತೆ ಅವರಿಗೆ ಬಹು ಪ್ರಿಯವಾಗಿತ್ತು. ಬಿಹಾರದ ನೆನಪುಗಳನ್ನು ಮೀಡುವ ಕತೆ ರಾಮಣ್ಣನವರ ಕತೆಗಳ ಲೋಕದಲ್ಲಿರುವ ಎರಡು ಮಾದರಿಗಳಿಗೆ ಸೇತುವೆಯಂತೆ ತೋರುತ್ತದೆ. ಅದರಲ್ಲಿ ಎರಡೂ ಮಾದರಿಯ ನೆಲೆಗಳು ಬೆಸೆದುಕೊಂಡಿವೆ. ಅಲ್ಲದೆ ವೈದ್ಯನಾದ ನಿರೂಪಕನಲ್ಲಿರುವ ಸಾಹಿತ್ಯದ ಸೆಳೆವುಗಳು ಕೂಡ ಅದರಲ್ಲಿ ಪ್ರಕಟಗೊಳ್ಳುತ್ತವೆ. ಸಾವಿರಾರು ವರ್ಷಗಳಿಂದ ಹಸರುಕ್ಕಿಸುತ್ತಿದ್ದರೂ ಜನಜೀವನ ರಿಕ್ತವಾಗಿಯೇ ಉಳಿದ ಗಂಗೆಯ ತಟದ ಬದುಕು ಈ ಕತೆಗಾರರ ನಂಬುಗೆಯ ಬಡುವನ್ನು ಬಲವಾಗಿ ಅಲ್ಲಾಡಿಸಿದೆ. ಹಾಗಿದ್ದರೂ ಬೇಲಾ ವಿದಾಯದ ಹೊತ್ತಿನಲ್ಲಿ ನೀಡಿದ ಕುಂಕುಮ ಭರಣಿ ಮತ್ತು ಫಣೀಶ್ವರನಾಥರೇಣು ಅವರ ಮೈಲಾ ಲಂಚರ್ ಕಾದಂಬರಿಯ ಬಣ್ಣನೆಗಳು ಕತೆಗಾರರಲ್ಲಿ ಆಪ್ತ ಚಿತ್ರಗಳಾಗಿ

ಉಳಿದುಕೊಳ್ಳುತ್ತವೆ. ನಿಜವಾದ ಕತೆಗಾರ ರಾಮಣ್ಣ ಮೈತಳೆಯುವುದು ಇಂತಹ ಕಡೆಗಳಲ್ಲಿ ಎಂಬುದು ನನ್ನ ತಿಳುವಳಿಕೆ.

75ರ ಬಳಿಕ ಬರೆದ ಕತೆಗಳಲ್ಲಿ ರಾಮಣ್ಣ ಅಲ್ಲಲ್ಲಿ ಜೀವನದ ಬಗೆಗೆ ಅದರಲ್ಲಿ ಸಂಭವಿಸುತ್ತಿರುವ ಮೌಲ್ಯ ಪಲ್ಲಟಗಳ ಬಗೆಗೆ ಕಹಿ ಮತ್ತು ಕಟಕಿಗಳ ಭಾವವನ್ನು ಹೊಂದಿದಂತೆ ತೋರುತ್ತದೆ. 'ಕರುಣಾಳು ಬಾ ಬೆಳಕೆ' ಮಾದರಿಯ ಕತೆಗಳು ಇಂತಹ ನೆಲೆಯನ್ನು ನಮ್ಮೆದುರೆ ತೋರುತ್ತವೆ. ಒಳಗಿನಿಂದಲೇ ಕುಟ್ಟೆ ಹಿಡಿಯುತ್ತಿರುವ ಮರವನ್ನು ಬಣ್ಣಿಸುವ ನೋವು ಈ ಮಾದರಿಯ ಕತೆಗಳಲ್ಲಿ ಇದೆ. ಹೂಬಿಟ್ಟು ಹಣ್ಣುಗಳನ್ನು ಕೊಡುವ ಮರವೀಗ ದಿನಗಳನ್ನು ಎಣಿಸುತ್ತಿದೆಯೇನೋ ಎಂಬ ಹತಾಶೆಯೂ ಇಣುಕುತ್ತದೆ. ಈ ಹತಾಶೆಯನ್ನು ಮರೆಮಾಡಲು ಅದರಿಂದ ಉಂಟಾದ ಕೊರತೆಯನ್ನು ತುಂಬಿಕೊಳ್ಳಲು ರಾಮಣ್ಣ ಜೀವಸಮೃದ್ಧಿಯ ಕಥಾನಕಗಳ ಮೊರೆ ಹೋಗುತ್ತಿದ್ದರು. ಕಟ್ಟುವ ತವಕವುಳ್ಳ ಏನಾದರೂ ಅವರನ್ನು ಸೆಳೆದುಕೊಳ್ಳುತ್ತಿತ್ತು. ಈ ನೆಲೆಯಿಂದ ಅವರು ಮತ್ತೇನನ್ನು ಕನ್ನಡ ಬರವಣಿಗೆಗೆ ಕೊಡುತ್ತಿದ್ದರೋ ಏನೋ? ಈಗ ಅದು ಕೇವಲ ಊಹೆಯ ಮಾತಷ್ಟೇ ಆಗಬಹುದು. ಕವಿತೆಗಳ ಕಡೆಗೆ ಹೊರಳುತ್ತಿದ್ದ ಅವರಳೊಗೆ ಇದ್ದ ಒಳಕುದಿತ ದೊಡ್ಡದೊಂದನ್ನು ಕಟ್ಟುವ ಹಂಬಲವನ್ನು ಹೊಂದಿತ್ತು ಎಂಬುದಂತೂ ನಿಜ. ಈ ಹಂತದಲ್ಲಿ ಅವರು ಎರಡು ವಿರುದ್ಧ ನೆಲೆಗಳ ಹೊಂದಾಣಿಕೆಯ ಆತಂಕವನ್ನು ಅನುಭವಿಸುತ್ತಿದ್ದಂತೆ ಈಗ ತೋರುತ್ತದೆ. ಕೊಳಲು ಮತ್ತು ಖಡ್ಗಗಳೆರಡೂ ಅಧೀನಗೊಳಿಸುವ ಪರಿಕರಗಳೆ. ಆದರೆ ಅವುಗಳಲ್ಲಿ ಕೊಳಲನ್ನು ತೊರೆದ ಹೊರತು ಖಡ್ಗಕ್ಕೆ ಜಾಗವಿಲ್ಲ. ಹಾಗೆಯೇ ಖಡ್ಗ ಹಿಡಿದ ಕೈ ಕೊಳಲನ್ನು ತೊರೆಯಲೇಬೇಕು. ಭಾಗವತದ ಕೃಷ್ಣ ಈ ಇಕ್ಕಟ್ಟನ್ನು ಪರಿಹರಿಸಿಕೊಂಡಿದ್ದು ಎರಡು ಲೋಕಗಳನ್ನು ಬೇರ್ಪಡಿಸಿಕೊಳ್ಳುವ ಮೂಲಕ. ಗೋಕುಲ ಮತ್ತು ರಾಜಕಾರಣದ ಕೇಂದ್ರವೆನಿಸಿದ ನಗರಗಳು ಬೇರೆ ಬೇರೆ ಲೋಕಗಳೇ ಸರಿ. ಆದರೆ ಈ ಪರಿಹಾರ ನಮ್ಮ ಕಾಲದಲ್ಲಿ ಆಗದೆಂಬ ನೋವು ರಾಮಣ್ಣನವರನ್ನು ಕಾಡುತ್ತಿದ್ದಂತೆ ಈಗ ಅನಿಸುತ್ತಿದೆ. ಕೊಳಲು ಮತ್ತು ಖಡ್ಗಗಳ ನಡುವೆ ಈಗ ಆಯ್ಕೆಗಳಿಲ್ಲ. ಎರಡನ್ನೂ ಹೇಗೆ ಒಟ್ಟಿಗೆ ನಿಭಾಯಿಸಬೇಕೆಂಬುದೇ ಇಂದಿನ ಸವಾಲಾಗಿದೆ.

ರಾಮಣ್ಣನವರ ಕತೆಗಳ ಭಾಷೆಯನ್ನು ಗಮನಿಸಿದ ಯಾರಿಗಾದರೂ ಆ ಕತೆಗಳ ಪಾತ್ರಗಳು ಆಡುವ ಕನ್ನಡ ಬಿಸುಪು ತಟ್ಟದೇ ಇರದು. ಅದು ಯಾವ ಭಾವವನ್ನೇ ಹೊರಹಾಕುತ್ತಿರಲಿ ಆ ನುಡಿಗಳಲ್ಲಿ ಕನ್ನಡದ ಪ್ರಭೇದವೊಂದರ ನೆಲೆಗಳು ಗಟ್ಟಿಯಾಗಿ ಹೆಣೆದುಕೊಂಡುಬಿಟ್ಟಿರುತ್ತವೆ. ಮೇಲುನೋಟಕ್ಕೆ ಮಂಡ್ಯದ ಆಸುಪಾಸಿನ ಕನ್ನಡದ ಮಾದರಿಗಳು ಅವರ ಹಲವು ಕತೆಗಳಲ್ಲಿ ನೆಲೆಕಂಡುಕೊಂಡಿದೆ. ಆದರೆ ಅವರು ವರ್ಣನೆಗಳಲ್ಲಿ ಬಳಸುವ ಕನ್ನಡದಲ್ಲಿ ಈಗ ಜಾಲ್ತಿಯಲ್ಲಿರುವ ಬರವಣಿಗೆಯ ಪ್ರಮಾಣ ಕನ್ನಡದ ಮಾದರಿ ಇದೆ. ಆದರೆ ಅವರ ಕತೆಗಳ ಪಾತ್ರಗಳ ಮಾತುಗಳಲ್ಲಿ ಅವರು ಬದುಕಿನ ಅಡ್ಡಕೊಯ್ತಗಳನ್ನೇ ಮುಂದಿಡುತ್ತಾರೆ. ಆ ಪಾತ್ರಗಳು ತಮ್ಮ ಮಾತನ್ನು ಕತೆಗಾರರಿಗಾಗಿ ಚಿಂತಿಸಿ ನುಡಿಯುವುದಿಲ್ಲ. ಅಂತಹ ಒಳಮುಖಿಯಾದ ನುಡಿಗಳು ರಾಮಣ್ಣನವರ ಕತೆಗಳಲ್ಲಿ ಇಲ್ಲವೇ ಇಲ್ಲ. ಹಾಗೆಂದು ಅವರ ಪಾತ್ರಗಳು ತಮ್ಮ

ಅಂತರಂಗವನ್ನು ಹೊಕ್ಕು ನೋಡಿಕೊಳ್ಳುವುದಿಲ್ಲವೆಂದಲ್ಲ; ಆದರೆ ಅದಕ್ಕಾಗಿ ಈ ಕತೆಗಳಲ್ಲಿ ಅನುಸರಿಸಲಾಗುವ ತಂತ್ರಗಳೇ ಬೇರೆ. ಪಾತ್ರಗಳ ದೈಹಿಕ ಚಹರೆಗಳು ಮತ್ತು ನಡಾವಳಿಗಳನ್ನು ಹಾಗೂ ಪರಿಸರದಲ್ಲಿ ಸಂಭವಿಸುತ್ತಿರುವ ಘಟನೆಗಳನ್ನು ಈ ತುಯ್ದಾಟಗಳನ್ನು ಹೊರಹಾಕಲು ಕತೆಗಾರರು ಬಳಸಿಕೊಳ್ಳುತ್ತಾರೆ. ಅದಕ್ಕಾಗಿ ಅವರ ಮಾತಿನ ಕನ್ನಡವನ್ನು ತಿದ್ದಿ ತೀಡಲು ಹೋಗುವುದಿಲ್ಲ. ಇದೂ ಕೂಡ ಕನ್ನಡ ಕತೆಗಳ ನೆಲೆಯಲ್ಲಿ ಗಮನಿಸಬೇಕಾದ ಸಂಗತಿಯೆಂದು ತಿಳಿಯುತ್ತೇನೆ. ಈ ಹಂತದಲ್ಲಿ ಕನ್ನಡ ಬರಹಗಾರರು ಎದುರಿಸಿದ ಬಿಕ್ಕಟ್ಟೊಂದನ್ನು ರಾಮಣ್ಣ ಹೇಗೆ ನಿರ್ವಹಿಸಿದ್ದಾರೆಂಬ ಬಗೆಗೆ ಕೆಲವು ಮಾತುಗಳನ್ನು ಹೇಳಬೇಕೆನಿಸುತ್ತಿದೆ. ಕತೆಗಳ ನಿರೂಪಣೆಯಲ್ಲಿ ಪಾತ್ರಗಳು ತಮ್ಮೊಳಗೆ ತಾವೇ ಹೊಕ್ಕು ನೋಡಿಕೊಳ್ಳುವ ನೆಲೆ ಬಂದಾಗ ಬಹುಪಾಲು ಕತೆಗಾರರು ಅವರದ್ದೇ ಆದ ಕನ್ನಡ ಶೈಲಿಯೊಂದನ್ನು ಕಟ್ಟಿಕೊಳ್ಳುತ್ತಾರೆ. ಆದರೆ ನಡುಗನ್ನಡದ ಹಲವು ಕವಿಗಳು ಅದರಲ್ಲೂ ಕುಮಾರವ್ಯಾಸನಂತಹ ಕವಿ ಬೇರೊಂದು ಹಾದಿಯನ್ನು ತುಳಿದಿರುವುದು ನಮ್ಮ ಗಮನಕ್ಕೆ ಬರುತ್ತದೆ. ಅದೆಂದರೆ ದೈಹಿಕ ಚಹರೆಗಳು ಮತ್ತು ಆಂಗಿಕ ನೆಲೆಗಳ ಮೂಲಕ ಪಾತ್ರಗಳ ಒಳಜಗತ್ತನ್ನು ಹೊರಗಿಡುವ ಮಾದರಿಯದು. ರಾಮಣ್ಣನವರು ಈ ಹಾದಿಯನ್ನು ಹೆಚ್ಚಾಗಿ ಅವಲಂಬಿಸಿದವರು.

ಹತ್ತಿರದಿಂದ ರಾಮಣ್ಣನವರನ್ನು ಬಲ್ಲವರು ಅವರು ಯಾವುದೇ ಸನ್ನಿವೇಶವನ್ನು ಒಂದು ನಾಟಕೀಯ ಗುಣದಿಂದ ಬದಲಿಸಿಬಿಡುತ್ತಿದ್ದುದನ್ನು ಚೆನ್ನಾಗಿ ತಿಳಿದಿರುತ್ತಾರೆ. ಈ ನಾಟಕೀಯ ಗುಣ ಸನ್ನಿವೇಶದ ಗಹನತೆಯು ಅದು ನಡೆಯುತ್ತಿರುವ ಹೊತ್ತಿನಲ್ಲೇ ಮೈದಳೆಯುವಂತೆ ಮಾಡಬೇಕೆಂಬ ಹಂಬಲದಿಂದ ಹುಟ್ಟಿದ್ದು. ಹಾಗೆ ಮಾಡುವ ರಾಮಣ್ಣನವರಿಗೆ ಅಲ್ಲಿ ತಾವು ಕೇಂದ್ರವಾಗಿ ಮೆರೆಯಬೇಕೆಂಬ ಹಂಬಲ ಇರುತ್ತಿರಲಿಲ್ಲ. ಅವರು ಬದುಕಿದ ಈ ಬಗೆ ಅವರ ಕತೆಗಳಲ್ಲಿ ಮೊಳಕೆಯೊಡೆದಿರುವುದನ್ನು ನಾನು ಕಂಡಿದ್ದೇನೆ.

ರಾಮಣ್ಣನವರ ಎಲ್ಲ ಬರಹಗಳನ್ನು ಒಟ್ಟಾಗಿ ಪ್ರಕಟಿಸುತ್ತಿರುವ ಈ ಹೊತ್ತಿನಲ್ಲಿ ಅವರ ಬರವಣಿಗೆಯನ್ನು ಕುರಿತು ಕೆಲವು ಮಾತುಗಳನ್ನು ಬರೆಯುವ ಅವಕಾಶ ದೊರಕಿದ್ದು ನನಗೆ ಸಂತಸವನ್ನು ತಂದಿದೆ. ಇದು ಆಗುವಂತೆ ಮಾಡಿದವರು, ನೋಡಲು ಎಳೆಯ ಹರೆಯದ ರಾಮಣ್ಣನವರಂತೆ ಕಾಣುವ ಅವರ ಮಗ ಶ್ರೀ ರವಿಕಾಂತೇಗೌಡರು. ಅವರೊಡನೆ ಮಾತನಾಡುವಾಗ ನನಗೆ ಒಬ್ಬ ಹಿರಿಯ ಪೊಲೀಸ್ ಅಧಿಕಾರಿಯೊಡನೆ ಮಾತನಾಡುತ್ತಿದ್ದೇನೆ ಎನ್ನುವ ಭಾವದ ಸುಳಿವೂ ಸಿಗದಂತೆ ಎಚ್ಚರವಹಿಸುವ ಅವರ ಸ್ವಭಾವದಲ್ಲೇ ರಾಮಣ್ಣನವರ ಹಲವು ಗುಣಗಳು ಇಳಿದುಬಂದಿವೆ. ಅದು ಹಾಗಿರಲಿ, ಈ ಬರಹಕ್ಕೆ ಅನುವು ಮಾಡಿಕೊಟ್ಟದ್ದಕ್ಕೆ ರವಿಕಾಂತೇಗೌಡರಿಗೆ ನನ್ನ ನಮಸ್ಕಾರಗಳು.

ಶಂಗಂ ತಮಿಳಗಂ ಮತ್ತು ಕನ್ನಡ ನಾಡು-ನುಡಿ

(ಆರಂಭ ಕಾಲದ ದ್ರಾವಿಡ ಸಂಬಂಧದ ಚಿಂತನೆ)

ಡಾ.ಷ.ಶೆಟ್ಟರ್(2007): ಕೃತಿ ಕುರಿತು

ಡಾ. ಷ. ಶೆಟ್ಟರ್ ಇತಿಹಾಸ ಸಂಶೋಧಕರು. ಇತಿಹಾಸ ರಚನಾಶಾಸ್ತ್ರಜ್ಞರು. ಬಹು ಹಿಂದಿನಿಂದಲೂ ಭಾರತೀಯ ಇತಿಹಾಸ ರಚನೆಯಲ್ಲಿರುವ ಉತ್ತರ ಭಾರತ ಕೇಂದ್ರಿತ ಮಾದರಿಯನ್ನು ಪ್ರಶ್ನಿಸುತ್ತಿರುವವರು. ದಕ್ಷಿಣ ಭಾರತದ ಚರಿತ್ರೆ ಎಂಬುದು ಕೇವಲ ಅನುಬಂಧವಾಗುತ್ತಿರುವ ಬಗೆಯುನ್ನು ಮೇಲಿಂದಮೇಲೆ ಅವರು ನಿರಾಕರಿಸುತ್ತಿದ್ದಾರೆ. ಈ ಅಧ್ಯಯನ ಗ್ರಂಥದಲ್ಲಿ ಅವರು ಈ ಮೇಲೆ ಹೇಳಿದ ನಿಲುವನ್ನು ವಾಚ್ಯವಾಗಿ ಹೇಳದಿದ್ದರೂ ಇಲ್ಲಿಯೂ ತಮ್ಮ ಶೋಧದ ಎಂದಿನ ತಾತ್ವಿಕ ನೆಲೆಗೆ ಬದ್ಧರಾಗಿಯೇ ಇದ್ದಾರೆಂದು ಹೇಳಲಡ್ಡಿಯಿಲ್ಲ.

ಇದು ಸಂಕಲನ (ಸಂ:ಸಿದ್ಧಲಿಂಗ ಪಟ್ಟಣಶೆಟ್ಟಿ) ಪತ್ರಿಕೆಯಲ್ಲಿ ನಿಯತವಾಗಿ ಪ್ರಕಟವಾದ ಬರಹಗಳ ಸಂಕಲನ. ಈ ಬರಹಗಳು ಪ್ರಕಟಗೊಳ್ಳುತ್ತಿರುವಾಗಲೇ ನಾಡಿನ ಚಿಂತಕರಲ್ಲಿ ಹಲವರು ಅವುಗಳಲ್ಲಿರುವ ಹೊಸ ಆಲೋಚನೆಯ ಸೆಳಕುಗಳನ್ನು ಗುರುತಿಸಿದ್ದರು. ಆದರೆ ಆ ಹೊಸತನ ಏನೆಂಬುದು ಪತ್ರಿಕೆಯ ಸನ್ನಿವೇಶದಲ್ಲಿ ಅಷ್ಟು ಸ್ಪಷ್ಟವಾಗುವಂತಿರಲಿಲ್ಲ. ಅನಂತರದಲ್ಲೂ ಈ ಕುರಿತು ಹೆಚ್ಚಿನ ಚರ್ಚೆಗಳು ನಡೆದಿಲ್ಲ. ಈಗ ಅವೆಲ್ಲವನ್ನೂ ಒಟ್ಟುಗೂಡಿಸಿ ಹೊರತರುವ ಮೂಲಕ ಡಾ.ಶೆಟ್ಟರ್ ತಮ್ಮ ಅಜೆಂಡಾವನ್ನು ನಿಖರವಾಗಿ ಹೇಳಲು ಸಾಧ್ಯವಾಗಿದೆ.

ತಮಿಳಿನ ಶಂಗಂ(ಮೊದಲ ಅಕ್ಷರ ಚ ಕೂಡ ಇರಬಹುದು) ಸಾಹಿತ್ಯ ರಾಶಿ ಮತ್ತು ತಮಿಳು ವಿದ್ವಾಂಸ ಪರಂಪರೆ ಕಲ್ಪಿಸಿಕೊಂಡಿರುವ ತಮಿಳಗಂ(ಬೃಹದ್ ತಮಿಳು ನಾಡು) ಇವುಗಳಿಗೂ ಈಗ ನಾವು ಗುರುತಿಸಿಕೊಂಡಿರುವ ಕನ್ನಡ ನಾಡು-ನುಡಿಗಳಿಗೂ ಇದ್ದರಬಹುದಾದ ಸಂಬಂಧವನ್ನು ಪುನಾರಚಿಸುವುದು ಈ ಅಧ್ಯಯನದ ಮುಖ್ಯ ಗುರಿ. ಈ ಅಧ್ಯಯನಕ್ಕೆ ನೀಡಿರುವ ಉಪ ಶೀರ್ಷಿಕೆಯಲ್ಲಿ ಆರಂಭಕಾಲದ ದ್ರಾವಿಡ ಸಂಬಂಧದ ಚಿಂತನೆ ಎಂದಿರುವುದು ಕುತೂಹಲದ ವಿಷಯ. ಏಕೆಂದರೆ ದ್ರಾವಿಡ ಸಂಬಂಧ ಎಂದು ಹೇಳುವಾಗ ಅದು ಸಂಸ್ಕೃತಿ,ದೇಶ,ಭಾಷೆ ಮತ್ತು ರಾಜಕೀಯ ಹೀಗೆ ಹಲವು ನೆಲೆಗಳಲ್ಲಿ ಆಕಾರ ತಳೆಯಬಹುದಷ್ಟೆ. ಶೆಟ್ಟರ್ ಅವರು ಇವೆಲ್ಲವನ್ನು ಒಟ್ಟಾಗಿಸುವ ಗುರಿಯನ್ನು ಹೊಂದಿಲ್ಲ. ಮುಖ್ಯವಾಗಿ ಆರಂಭ ಕಾಲದ ಭೌಗೋಳಿಕ-ರಾಜಕೀಯವನ್ನು(ಜಿಯೋ-ಪಾಲಿಟಿಕ್ಸ್) ಪುನಾರಚಿಸುವುದು ಅವರ ಗುರಿಯಾಗಿದೆ.

ಡಾ.ಶೆಟ್ಟರ್ ಅವರು ಈ ಅಧ್ಯಯನಕ್ಕಾಗಿ ಶಂಗಂ ಬರಹ,ಶಾಸನ ಮತ್ತು ಇತರ ಕೆಲವು ಆನುಷಂಗಿಕ ಹಾಗೂ ಪೂರಕ ಆಕರಗಳನ್ನು ಬಳಸಿದ್ದಾರೆ. ಸಾಹಿತ್ಯಕ ಆಕರಗಳನ್ನು ಬಳಸುವಾಗ ಇತಿಹಾಸಕಾರರು ಈ ಆಕರಗಳನ್ನು ಬಳಸುವ ಮಾದರಿಯನ್ನೇ ಇಲ್ಲಿಯೂ ಅನುಸರಿಸಲಾಗಿದೆ. ಸಾಹಿತ್ಯ ಮೀಮಾಂಸಕರು ಇತಿಹಾಸಕಾರರ ಈ ಮಾದರಿಯನ್ನು ಒಪ್ಪುವುದಿಲ್ಲವಾದರೂ ಸಾಹಿತ್ಯರಚನೆಗಳಲ್ಲಿ ಐತಿಹಾಸಿಕ ಅಂಶಗಳನ್ನು ದಾಖಲಾತಿಯಂತೆ ನೋಡುವ ಇತಿಹಾಸಕಾರರ ಮಾದರಿಯ ಜನಪ್ರಿಯತೆಗೆ ಇದರಿಂದ ಧಕ್ಕೆಯೇನೂ ಆದಂತಿಲ್ಲ. ಕನ್ನಡ ನಾಡು-ನುಡಿಗಳ ಮೂಲಚೂಲಗಳ ಶೋಧದಲ್ಲಿಯೂ ಈ ಮಾದರಿಯ ಅನುಸರಣೆ ಅಗಾಧ ಪ್ರಮಾಣದಲ್ಲಿ ಆಗಿದೆ.

ಕವಿರಾಜ ಮಾರ್ಗದ 'ಕಾವೇರಿಯಿಂದಮಾ ಗೋದಾವರಿವರಮಿರ್ದ' ಕನ್ನಡ ನಾಡಿನ ಉಲ್ಲೇಖದಿಂದಲೇ ಈ ಅಧ್ಯಯನ ಮೊದಲಾಗಿದೆ. ಇಲ್ಲಿ ಹೆಸರಿಸಿದ ಕಾವೇರಿ ಯಾವುದು ಎಂಬ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳಲು ಹೊರಟು ಅದಕ್ಕೆ ಅಗತ್ಯವಾದ ಇತರ ಆಕರಗಳನ್ನು ಶೆಟ್ಟರ್ ಅವರು ಶೋಧಿಸಿದ್ದಾರೆ. ಆ ಆಕರಗಳಲ್ಲಿ ಸಿಗುವ ಸಾಮಗ್ರಿಗಳನ್ನು ಜೋಡಿಸಿದ್ದಾರೆ. ಆ ಜೋಡಣೆಯಿಂದ ಲಭಿಸುವ ಅರ್ಥದ ಕಡೆಗೆ ಗಮನ ಸೆಳೆದಿದ್ದಾರೆ. ಈ ಯತ್ನದಲ್ಲಿ ಅಧ್ಯಯನವು ಈವರೆಗಿನ ಒಂದು ಪ್ರಮುಖ ಚಿಂತನಾಕ್ರಮದ ಗೋಡೆಯಲ್ಲಿ ಇರುವ ಬಿರುಕುಗಳನ್ನು ತೋರಿಸುವ ಕಡೆಗೆ ಚಲಿಸುತ್ತದೆ. ಈ ನೆಲೆಯನ್ನು ಹೀಗೆ ಹೇಳಬಹುದು.

ದಕ್ಷಿಣ ಏಸಿಯಾವನ್ನು ಒಂದು ಭೌಗೋಳಿಕ-ರಾಜಕೀಯ-ಸಾಂಸ್ಕೃತಿಕ ಘಟಕವನ್ನಾಗಿ ಪುನಾರಚಿಸುವ ಪ್ರಯತ್ನ ಹಲವು ದಶಕಗಳಿಂದ ಪಶ್ಚಿಮದ ವಿಶ್ವವಿದ್ಯಾಲಯಗಳಲ್ಲಿ ನಡೆಯುತ್ತಿದೆ. ಇದೊಂದು ಬಹುಮುಖಿಯಾದ ಪ್ರಯತ್ನ. ಇದರ ಉದ್ದೇಶಗಳನ್ನು ಆಗಾಗ ಅಲ್ಲಲ್ಲಿ ಪ್ರಶ್ನಿಸಿದ್ದರೂ ಯಾವುದೇ ಹಿಂಜರಿಕೆಯಿಲ್ಲದೆ ಈ ಅಧ್ಯಯನಗಳು ನಡೆಯುತ್ತಲೇ ಇವೆ. ಐತಿಹಾಸಿಕ ದಕ್ಷಿಣ ಏಸಿಯಾವನ್ನು ಪುನಾರಚಿಸುವಾಗ ಈ ಪ್ರಯತ್ನದಲ್ಲಿ ತೊಡಗಿರುವ ವಿದ್ವಾಂಸರು ಸಂಸ್ಕೃತ ಭಾಷೆಯನ್ನು ಕೇಂದ್ರದಲ್ಲಿರಿಸಿಕೊಂಡು ತಮ್ಮ ಚಿಂತನೆಗಳನ್ನು ಬೆಳೆಸುತ್ತಾರೆ. ಸಂಸ್ಕೃತ ಭಾಷೆಯೊಡನೆ ಈ ಭೌಗೋಳಿಕ ಪ್ರದೇಶದ ಭಾಷೆಗಳು ನಡೆಸಿದ ಅನುಸಂಧಾನವನ್ನು ಮುಖ್ಯವಾಗಿ ಐರೋಪ್ಯ ಭಾಷೆಗಳು ಗ್ರೀಕ್-ಲ್ಯಾಟಿನ್ ಗಳೊಡನೆ ನಡೆಸಿದ ಅನುಸಂಧಾನದ ಮಾದರಿಯಲ್ಲಿ ನೋಡಿದ್ದಾರೆ. ಈ ಮಾದರಿಗೆ ಪರ್ಯಾಯ ಮಾದರಿಯೊಂದು ಇಲ್ಲಿ ಇರಬಹುದೇ ಎಂಬ ತರ್ಕದೊಡನೆ ಹೊರಡುವವರೂ ಕೂಡ(ಉದಾ.ಗೆ ಶೆಲ್ಡನ್ ಪೊಲಾಕ್) ಸಂಸ್ಕೃತ ಮತ್ತು ದೇಶ ಭಾಷೆಗಳ ನಡುವೆ ರೂಪುಗೊಂಡ ಸಾಹಚರ್ಯದೊಡನೆ ಸ್ವಾಯತ್ತತೆ ಎಂಬ ಒಪ್ಪಂದವನ್ನು ಸ್ಥಾಪಿಸುತ್ತಾರೆ. ಕನ್ನಡ ವಿದ್ವತ್ ಪರಂಪರೆ ಕೂಡ ಇದೇ ನಿಲುವನ್ನು ಹಿಂದಿನಿಂದಲೂ ತನಗೇ ಗೊತ್ತಿಲ್ಲದಂತೆ ಒಪ್ಪಿಕೊಂಡು ಬಂದಿದೆ. ಶೆಟ್ಟರ್ ಅವರ ಈ ಅಧ್ಯಯನವು ದಕ್ಷಿಣ ಏಸಿಯಾ ಎಂಬ ವಲಯದೊಳಗೇ ಇರುವ ಸಂಸ್ಕೃತ ಕೇಂದ್ರಿತವಲ್ಲದ ಹಾಗಾಗಿಯೇ **ಸಾಹಚರ್ಯದೊಡನೆ ಸ್ವಾಯತ್ತತೆ** ಎಂಬ ಪರಿಕಲ್ಪನೆಯ ಹಂಗಿರದ ಭೌಗೋಳಿಕ ರಾಜಕೀಯ ವಲಯವೊಂದನ್ನು ನಮ್ಮೆದುರು ಮಂಡಿಸುತ್ತಾರೆ. ಹಾಗಾಗಿ ಮೊದಲಲ್ಲಿ ಹೇಳಿದಂತೆ ಇದು ಹಲವು ನಿಟ್ಟಿನಲ್ಲಿ ಬಳಕೆಯಲ್ಲಿರುವ ಇತಿಹಾಸ ರಚನೆಯ ನೆಲೆಗಳ ಮಿತಿಗಳನ್ನು ಹೊರಹಾಕುತ್ತಿದೆ.

ಈ ಅಧ್ಯಯನದಲ್ಲಿ ಡಾ.ಶೆಟ್ಟರ್ ಅವರು ಅನುಸರಿಸಿರುವ ವಿಧಾನವನ್ನು ಹೀಗೆ ಸಂಗ್ರಹಿಸೋಣ.

1. ಈವರೆಗೆ ಲಭ್ಯವಿದ್ದ ಮಾಹಿತಿಗಳನ್ನು ಮತ್ತು ಹೊಸ ಮಾಹಿತಿಗಳನ್ನು ತುಂಡುತುಂಡಾಗಿರಿಸುವ ಬದಲು ಅವೆಲ್ಲವನ್ನೂ ಒಟ್ಟಾಗಿಸುವುದು

2. ಈವರೆಗೆ ಲಭ್ಯವಿದ್ದ ಸ್ಥೂಲಚಿತ್ರವನ್ನು ನಿಕಟವಾಗಿ ನೋಡುವ ಮೂಲಕ ಅದರ ಸೂಕ್ಷ್ಮ ನೆಲೆಗಳನ್ನು ಗ್ರಹಿಸುವುದು.ಇದರಿಂದಾಗಿ ಸ್ಥೂಲತೆಯಲ್ಲಿ ಮರೆಮಾಚಿಹೋಗಿದ್ದ ಸಂಗತಿಗಳು ನಿಕಟತೆಯ ನೋಟದಿಂದ ಗೋಚರವಾಗುತ್ತವೆ. ಮತ್ತು

3. ಈವರೆಗೆ ಇಡೀ ಚಿತ್ರವನ್ನು ಯಾವ ದಿಕ್ಕಿನಿಂದ ನೋಡಲಾಗುತ್ತಿತ್ತೋ ಅದನ್ನು ಬದಲಿಸಿ ಬೇರೊಂದು ದಿಕ್ಕಿನಿಂದ ನೋಡುವುದು. ಈ ಮೂರೂ ನೆಲೆಗಳೂ ಒಂದಕ್ಕೊಂದು ಪೂರಕವಾಗಿವೆ. ಮೊದಲ ಸಹಸ್ರಮಾನದ ದಕ್ಷಿಣ ಭಾರತದ ಚರಿತ್ರೆಯನ್ನು ನಾವು ಈವರೆಗೆ ಗ್ರಹಿಸಿರುವ ರೀತಿಯಲ್ಲಿರುವ ಸಾರಾಸಗಟುತನವನ್ನು ಈ ಅಧ್ಯಯನ ವಿಧಾನವು ಬದಲಿಸುತ್ತದೆ. ಏಕೆಂದರೆ ರಾಜಮನೆತನಗಳ ಏಳುಬೀಳುಗಳ ನಿರೂಪಣೆಯಲ್ಲಿ ಮರೆಯಾಗಿ ಹೋಗಿದ್ದ ಹಲವಾರು ಭೌಗೋಳಿಕ ವಿವರಗಳು ಮತ್ತು ಕಡಿಮೆ ದಾಖಲಾತಿಯುಳ್ಳ ಆಳರಸರ ಮಾಹಿತಿಗಳನ್ನು ಇಲ್ಲಿ ಹೊರತೆಗೆದು ಇರಿಸಲಾಗಿದೆ. ಇದರಿಂದಾಗಿ ನಾವೀಗ ತಮಿಳುನಾಡು ಮತ್ತು ಕನ್ನಡ ನಾಡು ಎಂದು ಬೇರೆ ಮಾಡಿ ನೋಡುತ್ತಿರುವ ಪ್ರದೇಶಗಳ ನಡುವೆ ಒಂದು ಹೆಚ್ಚುವರಿ ಪ್ರದೇಶ (ಬಫರ್ ಝೋನ್)ವನ್ನು ಗ್ರಹಿಸುವ ಅಗತ್ಯವನ್ನು ಈ ಅಧ್ಯಯನ ಪ್ರತಿಪಾದಿಸುತ್ತದೆ. ಇಂದಿನ ಕನ್ನಡ ನಾಡಿನಲ್ಲಿ ಹರಿಯುತ್ತಿರುವ ಕಾವೇರಿ ನದಿಯ ದಕ್ಷಿಣಕ್ಕೆ ಈ ಹೆಚ್ಚುವರಿ ಪ್ರದೇಶವಿದ್ದು ಪಶ್ಚಿಮ ಕರಾವಳಿಯವರೆಗೆ ಇದರ ವ್ಯಾಪ್ತಿ ಇರುವಂತಿದೆ. ಈ ಪ್ರದೇಶದಲ್ಲಿ ಹಲವು ರಾಜಮನೆತನಗಳು,ಜನ ಸಮುದಾಯಗಳು ಮೊದಲ ಸಹಸ್ರಮಾನದಲ್ಲಿ ಪ್ರಬಲವಾದ ನೆಲೆಯೊಂದನ್ನು ರೂಪಿಸಿಕೊಂಡಿದ್ದವು. ಈ ವಲಯವು ಕರ್ನಾಟಕವೆಂದು ನಾವು ಕರೆಯುತ್ತಿರುವ ಇಂದಿನ ಭೂಪ್ರದೇಶದಲ್ಲಿ ಇಂದು ಸೇರ್ಪಡೆಯಾದಂತೆ ತೋರುತ್ತಿದ್ದರೂ ಆ ಅವಧಿಯಲ್ಲಿ ತಮಿಳಗಂ ಮತ್ತು ಉತ್ತರದ ಹಲವು ರಾಜಮನೆತನಗಳ ನಡುವೆ ಕೊಡುಕೊಳೆಗಳ ಸ್ವರೂಪವನ್ನು ನಿರ್ಧರಿಸುವಷ್ಟು ಶಕ್ತವಾಗಿತ್ತು.

ಈ ಅಧ್ಯಯನವು ಸ್ಥಾಪಿಸುತ್ತಿರುವ ಈ ಹೆಚ್ಚುವರಿ ಪ್ರದೇಶದ ಜನಸಮುದಾಯದಲ್ಲಿ ಕನ್ನಡವಲ್ಲದೆ ತುಳು ಮತ್ತು ಕೊಡವ ಭಾಷೆಯನ್ನಾಡುವವರಿದ್ದರು. ಕನ್ನಡ ಮಾತಾಡುವ ಪ್ರದೇಶವೆಂದು ನಾವೀಗ ಪರಿಗಣಿಸುವ ಆ ವಲಯದಲ್ಲಿ ಸೋಲಿಗ,ಜೇನುಕುರುಬ, ಬಡಗ, ಆಲುಕುರುಂಬ, ಬೆಟ್ಟ ಕುರುಬ, ಕಾಡುಕುರುಬ, ಕೊರಗ, ಇರುಳ, ತೊದವ, ಕೋತ, ಯರವ ಮುಂತಾದ ನುಡಿಗಳನ್ನಾಡುವ ಜನರಿದ್ದಾರೆ. ಈ ನುಡಿಗಳಲ್ಲಿ ಕೆಲವನ್ನು ಸ್ವತಂತ್ರ ಭಾಷೆಗಳೆಂದು ಪರಿಗಣಿಸಿದ್ದರೆ ಮತ್ತೆ ಕೆಲವನ್ನು ಕನ್ನಡದ

ಪ್ರಭೇದಗಳೆಂದು ಉಳಿದ ಕೆಲವನ್ನು ತಮಿಳಿನ ಪ್ರಭೇದಗಳೆಂದು ವ್ಯವಹರಿಸುವುದು ರೂಢಿಯಲ್ಲಿದೆ. ಭಾಷೆಗೆ ಸಂಬಂಧಿಸಿದ ಈ ಮಾಹಿತಿ ಕುತೂಹಲಕಾರಿಯಾಗಿದೆ. ಈ ಅಂಶವನ್ನು ನಾನು ಮತ್ತೆ ಪರಿಶೀಲನೆಗೆ ಎತ್ತಿಕೊಳ್ಳುತ್ತೇನೆ.

ಮೊದಲಿಗೆ ಈ ಅಧ್ಯಯನ ತೆರೆದಿಡುತ್ತಿರುವ ಹೆಚ್ಚುವರಿ ಪ್ರದೇಶದ ಗ್ರಹಿಕೆಗೆ ಅನುಕೂಲವಾಗುವ ಮಾಹಿತಿ ಲಭಿಸುವುದು **ಈ** ಪ್ರದೇಶದಲ್ಲಿ ಲಭ್ಯವಿರುವ ದಾಖಲೆಗಳಿಂದಲ್ಲ. ಬದಲಿಗೆ ಈ ಪ್ರದೇಶದ ದಕ್ಷಿಣ**ಕ್ಕಿರುವ** ತಮಿಳಗಂನಲ್ಲಿ ರಚನೆಯಾದ ಶಂಗಂ ಬರಹದಿಂದ.ತಮಿಳಗಂ ಮತ್ತು ಶಂಗಂ ಬರಹದ ಬಗೆಗೆ ಇರುವ ಅಗಾಧ ಪ್ರಮಾಣದ ಮಾಹಿತಿ ಮತ್ತು ವಿವಾದಗಳಲ್ಲಿ ಹೆಚ್ಚು 'ಸ್ವೀಕೃತ' ಮತ್ತು ಹೆಚ್ಚು 'ಸಂಭವನೀಯ' ನೆಲೆಗಳನ್ನು ಡಾ.ಶೆಟ್ಟರ್ ಒಪ್ಪಿಕೊಂಡು ತಮ್ಮ ವಿಶ್ಲೇಷಣೆಯನ್ನು ಮುಂದುವರೆಸಿದ್ದಾರೆ. ಕ್ರಿಪೂ 300 ರಿಂದ ಕ್ರಿಶ 300ರವರೆಗೆ ಶಂಗಂ ಬರವಣಿಗೆಯ ಅವಧಿಯೆಂದು ಈ ಅಧ್ಯಯನವು ಒಪ್ಪಿರುವುದರಿಂದ ಈ ಸಾಹಿತ್ಯದಲ್ಲಿ ಬರುವ, ಕನ್ನಡ ನಾಡಿಗೆ ಮತ್ತು ಕನ್ನಡ ನಾಡವರಿಗೆ ಸಂಬಂಧಿಸಿದ ಉಲ್ಲೇಖಗಳು ಈವರೆಗೆ ನಮಗೆ ದೊರಕಿರುವ ಉಲ್ಲೇಖಗಳಿಗಿಂತ ಹಿಂದಿನವು ಎಂಬುದನ್ನು ಗಮನಿಸಬೇಕಾಗುತ್ತದೆ. ಶಂಗಂ ಬರಹಗಳಲ್ಲಿ ದೊರಕುವ ಆಧಾರಗಳನ್ನು ಪರಿಗಣಿಸುವಾಗ ಡಾ.ಶೆಟ್ಟರ್ ಅವರು ಸಾಹಿತ್ಯ ಕೃತಿಗಳನ್ನು ಐತಿಹಾಸಿಕ ವಿವರಗಳಿಗೆ ಆಕರವನ್ನಾಗಿ ನೋಡುವ ಪ್ರಚಲಿತ ಮಾದರಿಯನ್ನು ಅನುಸರಿಸಿದ್ದಾರೆ. ಸಾಹಿತ್ಯ ಕೃತಿಗಳಲ್ಲಿ ಲಭಿಸುವ ವಿವರಗಳು ಎಷ್ಟೋ ವಿವರಗಳು ಆ ಕೃತಿ ರಚನೆ ಮಾಡಿದವರ ಲೋಕ ಗ್ರಹಿಕೆಯ ಮಿತಿಗಳಿಗೆ ಬದ್ಧವೂ ಆಗಿರಬಹುದಷ್ಟೆ. ಈ ಮಿತಿಗೆ ನಿದರ್ಶನಗಳು ಈ ಅಧ್ಯಯನದಲ್ಲಿ ಸೂಚಿತವಾಗಿರುವ ವಿವರಗಳಲ್ಲೇ ದೊರಕುತ್ತವೆ. ಉದಾಹರಣೆಗೆ ಕಾವೇರಿ ನದಿಯನ್ನು ಕುರಿತಂತೆ ಬರಹಗಳಲ್ಲಿ ದೊರಕುವ ವಿವರಗಳು ಈಗಾಗಲೇ ಗುರುತಿಸಿದಂತೆ (ಇಂದಿನ) ಕರ್ನಾಟಕದಲ್ಲಿ ಹರಿಯುವ ನದಿಭಾಗವನ್ನು(ಮೇಲ್ಕಾವೇರಿ) ಗಣನೆಗೆ ತೆಗೆದುಕೊಳ್ಳುವುದೇ ಇಲ್ಲ. (ಇಂದಿನ)ತಮಿಳು ನಾಡಿನಲ್ಲಿ ಅದರಲ್ಲೂ ಮದುರೆಯ ಆಸುಪಾಸಿನಲ್ಲಿ ಹರಿಯುವ ಕೆಳಕಾವೇರಿಯಷ್ಟೆ ಉಲ್ಲೇಖಗೊಳ್ಳುತ್ತಿದೆ. ಇದರಿಂದ ಮೇಲ್ಕಾವೇರಿಯ ಅಸ್ತಿತ್ವನ್ನು ನಾವು ಪ್ರಶ್ನಿಸುವುದಿಲ್ಲ. ಬದಲಿಗೆ ಅದು ಹರಿಯುವ ಪ್ರದೇಶದ ಬಗೆಗೆ ಕೃತಿ ರಚಕರಿಗೆ ಹೆಚ್ಚಿನ ತಿಳುವಳಿಕೆ ಇರಲಿಲ್ಲವೆಂದು ಭಾವಿಸುತ್ತೇವೆ. ಈ ಮಾತು ಶಂಗಂ ಬರಹಗಳಲ್ಲಿ ಕಂಡು ಬರುವ 'ಹೆಚ್ಚುವರಿ ಪ್ರದೇಶ'ದ ಜನಸಮುದಾಯ ಮತ್ತು ರಾಜ ಮನೆತನಗಳಿಗೂ ಅನ್ವಯವಾಗುವ ಸಾಧ್ಯತೆ ಇದೆ. ಅಂದರೆ ಮುಂದಿನ ಶೋಧಗಳಿಂದ ಹೊರಬರಲಿರುವ ಮತ್ತೂ ಹೆಚ್ಚಿನ ಪ್ರಾಥಮಿಕ ಮಾಹಿತಿಯಿಂದಷ್ಟೆ ಚಿತ್ರ ಸ್ಪಷ್ಟಗೊಳ್ಳಬಹುದು.

ಕದಂಬರು ಕರ್ನಾಟಕದ ಮೊದಲ ರಾಜಮನೆತನದವರು ಎಂದು ಚರಿತ್ರೆಯ ಬರಹಗಳು ಹೇಳುತ್ತಿವೆ. ಇವರೊಡನೆ ಕರ್ನಾಟಕ ಚರಿತ್ರೆಯಲ್ಲಿ ಮೊದಲಿಗರ ಜಾಗ ಪಡೆಯುವ ಮತ್ತೂ ಕೆಲವು ರಾಜಮನೆತನಗಳನ್ನು ಈ ಅಧ್ಯಯನ ಅಗೆದು ತೋರಿಸುತ್ತಿದೆ. ಇದಕ್ಕಿಂತ ಮುಖ್ಯವಾಗಿ ಕದಂಬರು ಮತ್ತು ತಮಿಳಗಂನ ಸಾಧ್ಯಮಾನ ಸಂಬಂಧದ ಬಗೆಗೆ ಇಲ್ಲಿ ತೀರಾ ಚಕಿತಗೊಳಿಸುವ ವಿವರಗಳಿವೆ. ಕದಂಬರು ಕಡಲಿನ ಮೂಲಕ ತಮಿಳಗಂ ಜೊತೆಗೆ ಸಂಪರ್ಕವಿರಿಸಿಕೊಂಡದ್ದು ಮತ್ತು ಅವರು

'ಕಡಲ್ಗಳ್ಳ'ರಾಗಿರುವ ಸಾಧ್ಯತೆಯೂ ಇಲ್ಲಿ ಬೆಳಕಿಗೆ ಬಂದಿದೆ. ನರವು ಎಂಬ ಪಟ್ಟಣದ ಬಗೆಗೆ ಹೇಳುತ್ತಾ 'ಪೆರಿಪ್ಲಸ್' ಕರ್ತೃ ಮತ್ತು ಟೋಲಮಿ (ಇದು) 'ಕಡಲ್ಗಳ್ಳರ' ಸ್ವಾಮ್ಯದಲ್ಲಿತ್ತೆಂದು ಹೇಳಿರುವರು. ಈ 'ಕಡಲ್ಗಳ್ಳರು' ಮತ್ತಾರೂ ಆಗಿರದೆ ಸಮುದ್ರಾಧಿಪತಿಗಳೂ ಕನ್ನಡ ನೆಲದವರೂ ಆದ ಕದಂಬರಾಗಿದ್ದರು'(ಪು 119) ಇಲ್ಲಿ ಬಳಸಲಾದ ಕಡಲ್ಗಳ್ಳ ಮತ್ತು ಸಮುದ್ರಾಧಿಪತಿ ಎಂಬ ಪದಗಳು ಮಂಡಿಸುವ ದೃಷ್ಟಿಕೋನ ನಮಗಿಲ್ಲಿ ಮುಖ್ಯ. ಶಂಗಂ ಬರಹಗಳು ಕದಂಬರನ್ನು ಕಡಲ್ಗಳ್ಳರೆಂದೇ ಹೆಸರಿಸುತ್ತವೆ. 'ಕಡಲ್ಗಳ್ಳರಾದ ಕದಂಬರನ್ನು ನಾಶಮಾಡಿದ ಅರಸ(ಶೆಂಗುಟ್ಟುವನ್)ನ ಕೀರ್ತಿ (ಸರ್ವದಿಕ್ಕಿಗೂ) ಹರಡಲಿ' ಎಂದು (ಪು.154) ಶಿಲಪ್ಪದಿಕಾರಂ ಕವಿ ಹೇಳಿದ್ದಾನೆ. ಸಮುದ್ರಾಧಿಪತಿಗಳು ಎಂಬ ಮಾತು ಕದಂಬರ ಚಟುವಟಿಕೆಗಳಿಗೆ ಒದಗಿಸುವ ನೈತಿಕತೆಯನ್ನು ಶಂಗಂ ಬರಹಗಳು ಅಲ್ಲಗಳೆಯುತ್ತವೆ. ಈ ನಿಟ್ಟಿನಲ್ಲಿ ಶಂಗಂ ಬರಹಗಳಲ್ಲಿ ಲಭಿಸುವ ವಿವರಗಳನ್ನು ನೋಡುವ ನೆಲೆಯನ್ನು ಮರಳಿ ಚರ್ಚಿಸಬೇಕಾದ ಅಗತ್ಯವಿದೆಯೆಂದು ತೋರುತ್ತದೆ. ಇದು ಮಾಹಿತಿಗೆ ಸಂಬಂಧಿದ ತಕರಾರಲ್ಲ. ಬದಲಿಗೆ ಈ ಮಾಹಿತಿಯನ್ನು ನೋಡುವ ದೃಷ್ಟಿಕೋನವನ್ನು ನಾವು ಪರಿಶೀಲನೆಗೆ ಒಳಗುಮಾಡುವ ಅಗತ್ಯವಿದೆ. ಅಂದರೆ ಶಂಗಂ ಬರಹಗಳಲ್ಲಿ ದೊರಕುವ ಮಾಹಿತಿಯು ಕೇವಲ ಮಾಹಿತಿಯಾಗಿ ಮಾತ್ರ ಉಳಿಯದೆ ಒಂದು ದೃಷ್ಟಿಕೋನವನ್ನೂ ಹೊಂದಿರುವ ಸಾಧ್ಯತೆಯನ್ನು ಪರಿಗಣನೆಗೆ ತೆಗೆದುಕೊಂಡಾಗ ಮಾತ್ರ ನಮ್ಮೆದುರು 'ಕಳೆದು ಹೋದ ಇತಿಹಾಸ'ದ ಚಿತ್ರ ಹೆಚ್ಚು ಖಚಿತವಾಗಿ ಅನಾವರಣಗೊಳ್ಳಬಲ್ಲುದು.

ಡಾ.ಶೆಟ್ಟರ್ ಅವರ ಮತ್ತೊಂದು ಪ್ರಮೇಯವನ್ನು ಈಗ ಪರಿಗಣಿಸೋಣ. ಸಂಸ್ಕೃತದ ಪ್ರಭಾವಕ್ಕೆ ದೇಶಭಾಷೆಗಳು ಒಳಗಾದ ಚರಿತ್ರೆಯನ್ನು ನಾವೀಗ ಒಪ್ಪಿದ್ದೇವೆ. ಈ ಪ್ರಭಾವದ ಸ್ವರೂಪ ಮತ್ತು ಪರಿಣಾಮಗಳನ್ನು ಕುರಿತಾಗಿ ಮಾತ್ರ ವಾದವಿವಾದಗಳು ನಡೆಯುತ್ತಿವೆ. ಆದರೆ ಸಂಸ್ಕೃತದಂತೆ 'ತಮಿಳು' ಕೂಡ ಇತರ 'ದೇಶ ಭಾಷೆ'ಗಳ ಮೇಲೆ ತನ್ನ ಪ್ರಭಾವವನ್ನು ಬೀರಿರುವ ಸಾಧ್ಯತೆಯನ್ನು ಈ ಅಧ್ಯಯನ ಮುಂದಿಡುತ್ತದೆ. ಅಂದರೆ ತಮಿಳಗಂನ ಅಧಿಕಾರ ಚೌಕಟ್ಟಿನಿಂದ ಹೊರಗಿದ್ದೂ ಅಲ್ಲಿನ ರಾಜ್ಯ ವ್ಯವಸ್ಥೆಯೊಡನೆ ಶತ್ರುತ್ವ ಸಂಬಂಧವನ್ನು ಹೊಂದಿದ್ದ ಹೆಚ್ಚುವರಿ ಪ್ರದೇಶದ ಜನ ಸಮುದಾಯಗಳು ಮತ್ತು ರಾಜಮನೆತನಗಳು ತಮ್ಮ ಆಡಳಿತ ಮತ್ತು ಅಧಿಕಾರದ ಭಾಷೆಯನ್ನಾಗಿ ತಮಿಳನ್ನು ಬಳಸುತ್ತಿದ್ದವೆಂಬ ಸಂಗತಿಯನ್ನು ಇಲ್ಲಿ ಮಂಡಿಸಲಾಗಿದೆ. ಮುಖ್ಯವಾಗಿ ತಮಿಳಗಂನಿಂದ ಹೊರಗಿರುವ ಪ್ರದೇಶದ ಕವಿಗಳು ಕೂಡ ತಮ್ಮ 'ದೇಶಭಾಷೆ'ಗಳಲ್ಲಿ ಬರೆಯದೆ ತಮಿಳಿನಲ್ಲಿ ಬರೆದು ಅವರು ಶಂಗಂ ಬರಹಗಳ ವ್ಯಾಪ್ತಿಗೆ ಸೇರಿ ಹೋಗಿರುವ ಸಂಗತಿಯನ್ನು ವಿವರಿಸಲಾಗಿದೆ. ಜೊತೆಗೆ ಅಧ್ಯಯನಕಾರರು ಇಂತಹ ಕವಿಗಳ ರಚನೆಗಳಲ್ಲಿ ಆಯ್ದು ಕೆಲವನ್ನು 'ಇಂದಿನ' ಕನ್ನಡಕ್ಕೆ ಅನುವಾದಿಸಿ ಕೊಟ್ಟಿದ್ದಾರೆ. ಈ ಕವಿಗಳ ಮೊದಲ ಭಾಷೆ(ದೇಶಭಾಷೆ) ಬೇರೆಯಾಗಿದ್ದರೂ ಅವರು ಸಾಂಸ್ಕೃತಿಕ ಭಾಷೆಯಾಗಿ ತಮ್ಮ ಕಾವ್ಯಾಭಿವ್ಯಕ್ತಿಗೆ ತಮಿಳನ್ನು ಆಯ್ದುಕೊಂಡರೆಂಬುದು ಈ ಅಧ್ಯಯನದ ನಿಲುವು. ತಮಿಳು ಕೂಡ ಸಂಸ್ಕೃತದಂತೆ ಗಡಿಗಳನ್ನು ದಾಟಿ ಬೇರೆ ಭಾಷಾವಲಯಗಳಲ್ಲೂ ತನ್ನ ಆಧಿಪತ್ಯವನ್ನು ಸ್ಥಾಪಿಸಿತ್ತೆಂಬ ಸಂಗತಿ , ಈ ಮೊದಲು ಹೇಳಿದಂತೆ, ದಕ್ಷಿಣ ಭಾರತದ ಇತಿಹಾಸವನ್ನು ಬೇರೊಂದು ನಿಟ್ಟಿನಿಂದ ನೋಡುವ

ಮತ್ತು ಪರ್ಯಾಯ ನೆಲೆಯೊಂದನ್ನು ಕಲ್ಪಿಸುವ ನೆಲೆಗೆ ನಮ್ಮನ್ನು ಒಯ್ಯುತ್ತದೆ. ಈ ಪ್ರಮೇಯಕ್ಕೆ ಪೂರಕವಾಗಿ ಶಂಗಂ ಬರಹಗಳ ಅಗಂ ಕವಿತೆಗಳಲ್ಲಿ ಕಂಡುಬರುವ ಶೃಂಗಾರದ ವರ್ಣನೆಗಳಿಗೂ ಸಂಸ್ಕೃತ ಕಾವ್ಯಪರಂಪರೆಯಲ್ಲಿ ಕಂಡುಬರುವ ಶೃಂಗಾರದದ ವರ್ಣನೆಗಳಿಗೂ ಇರುವ ವ್ಯತ್ಯಾಸಗಳನ್ನು ಡಾ.ಶೆಟ್ಟರ್ ಗುರುತಿಸುತ್ತಾರೆ. ಅದರಲ್ಲೂ ಹೆಣ್ಣಿನ ದೇಹದ ಬಣ್ಣನೆಯ ನೆಲೆಯಲ್ಲಿ ಈ ಎರಡೂ ಪರಂಪರೆಗಳು ಬೇರೆ ಬೇರೆ ನೆಲೆಗಳಲ್ಲಿವೆಯೆಂದು ತೋರಿಸುವ ವಿವರಗಳನ್ನು ನೀಡಿದ್ದಾರೆ. ಇದರಿಂದ ತಮಿಳಿನ ತೊಲ್‌ಕಾಪ್ಪಿಯಂ ಪ್ರಣೀತ ಮೀಮಾಂಸೆ ಮತ್ತು ಶಂಗಂ ಬರಹಗಳ ಕಾವ್ಯ ಮಾದರಿ ಇವೆರಡೂ ಅಖಿಲ ಭಾರತದ ಮಾದರಿ ಎಂದು ತಿಳಿಯಲಾಗಿರುವ ಸಂಸ್ಕೃತದ ಮಾದರಿಗಳಿಗಿಂತ ಭಿನ್ನವಾಗಿವೆ ಎಂದು ತಿಳಿಸುತ್ತಾರೆ.

ಈ ಅಧ್ಯಯನವು ಭೌಗೋಳಿಕವಾಗಿ ತಮಿಳಗಂ ಅನ್ನು ಒಪ್ಪುತ್ತದೆ ಮತ್ತು ಶಂಗಂ ಬರಹಗಳ ರಚನೆಯ ಕಾಲಾವಧಿಯ ಬಗೆಗೆ ಒಂದು ನಿರ್ಧಾರವನ್ನು ಮಾಡಿಕೊಂಡಿದೆ. ಸದ್ಯ ತಮಿಳು ಮತ್ತು ಇತರ ದ್ರಾವಿಡ ಭಾಷೆಗಳ ಸಂಬಂಧದ ನೆಲೆಯಿಂದ ಇಡೀ ಪ್ರಸಂಗವನ್ನು ಬೇರೊಂದು ರೀತಿಯಲ್ಲಿ ನೋಡುವುದು ಸಾಧ್ಯವಿಲ್ಲವೇ ಎಂದು ಈಗ ನೋಡೋಣ. ನಾವೀಗ ಹಲವು ದ್ರಾವಿಡ ಭಾಷೆಗಳನ್ನು ನೋಡುತ್ತಿದ್ದೇವೆ. ಇವೆಲ್ಲವೂ ಒಂದೇ ಮೂಲ ಭಾಷೆಯಿಂದ ಕವಲೊಡೆದು ಬಂದವೆಂದು ತಿಳಿದಿದ್ದೇವೆ; ಒಪ್ಪಿದ್ದೇವೆ. ಇವುಗಳಲ್ಲಿ ಕೆಲವನ್ನು ತೆಂಕು ಕವಲಿಗೆ ಸೇರಿದ ಭಾಷೆಗಳೆಂದು ಗುರುತಿಸಲಾಗಿದೆ. ನಮ್ಮ ನೆರೆಯ ಭಾಷೆಗಳಾದರೂ ತುಳು ಮತ್ತು ಕೊರಗ ಭಾಷೆಗಳು ಈ ತೆಂಕು ಕವಲಿಗೆ ಸೇರುವುದಿಲ್ಲ. ಈ ಎರಡು ಭಾಷೆಗಳು ಮೊದಮೊದಲಿಗೆ ಮೂಲ ಭಾಷೆಯಿಂದ ಕವಲೊಡೆದು ಬೇರೆಯಾದವು. ಆ ಬಳಿಕ ಉಳಿದ ತೆಂಕು ಕವಲಿನ ಭಾಷೆಗಳು ರೂಪುಗೊಂಡಿವೆ. ಇದೆಲ್ಲವೂ ಯಾವ ಕಾಲಾವಧಿಯಲ್ಲಿ ನಡೆಯಿತೆಂದು ಖಚಿತವಾಗಿ ಹೇಳುವುದು ಸಾಧ್ಯವಿಲ್ಲ. ಹೆಚ್ಚೆಂದರೆ ಈ ತೆಂಕು ಕವಲಿನ ಭಾಷೆಗಳಲ್ಲಿ ಯಾವ ಭಾಷೆ ಮೊದಲು ಬೇರೆಯಾಯಿತು;ಯಾವುದು ಅನಂತರ ಬೇರೆಯಾಯಿತು ಎಂದು ಹೇಳುವುದು ಸಾಧ್ಯ. ಹೀಗಿರುವಾಗ ಶಂಗಂ ಬರಹಗಳು ರಚನೆಯಾದ ಹೊತ್ತಿನಲ್ಲಿ ಈ ತೆಂಕು ಕವಲಿನ ಭಾಷೆಗಳೆಲ್ಲವೂ ತಮಿಳಿನಿಂದ **ಸಂಪೂರ್ಣವಾಗಿ** ಬೇರೆಯಾಗಿದ್ದವೆಂದು ಹೇಳುವುದು ಸಾಧ್ಯವೇ? ಈ ವಾಕ್ಯದಲ್ಲಿ **ಸಂಪೂರ್ಣ** ಎಂಬ ಪದವನ್ನು ಬೇಕೆಂತಲೇ ಬಳಸಿದ್ದೇನೆ. ಮೂಲಭಾಷೆಯಿಂದ ಭಾಷೆಗಳು ಕವಲೊಡೆಯುವುದು ತಟಕ್ಕನೆ ಸಂಭವಿಸುವ ಸಂಗತಿಯಲ್ಲ. ಹಲವಾರು ಶತಮಾನಗಳು ಇದಕ್ಕೆ ಅಗತ್ಯ. ಈ ಕವಲೊಡೆಯುವ ಅವಧಿಯಲ್ಲಿ ಕವಲೊಡೆದು ಹೊರಬರುತ್ತಿರುವ ಭಾಷೆಗಳು 'ಸಂಪೂರ್ಣ'ವಾಗಿ ಬೇರೆ ಬೇರೆಯಾಗಿರುವುದಿಲ್ಲ. ಮೂಲ ಭಾಷೆಯ ಒಳನುಡಿ (ಉಪಭಾಷೆ)ಗಳಾಗಿರುತ್ತವೆ. ಅಂದರೆ ಅವುಗಳಲ್ಲಿ ಒಂದು ಒಳನುಡಿಯನ್ನಾಡುವ ಜನರಿಗೆ ಇನ್ನೊಂದು ಒಳನುಡಿ ಅರ್ಥವಾಗುತ್ತಿರುತ್ತದೆ. ಕೆಲವೊಮ್ಮೆ ಎರಡೂ ಒಳನುಡಿಗಳನ್ನು ಬಳಸಲು ಆ ಜನಸಮುದಾಯದ ಹಲವರು ಶಕ್ತರಾಗಿರುತ್ತಾರೆ. **ಶಂಗಂ ಬರಹಗಳು ತಮಿಳು ಸಂಪೂರ್ಣವಾಗಿ ಸ್ವತಂತ್ರ ಭಾಷೆಯಾಗಿ ರೂಪುಗೊಂಡ ಮೇಲೆ ರಚನೆಯಾದವು ಎಂದು ಒಪ್ಪುವುದು ಸಾಧ್ಯವಾಗದೇ ಹೋದರೆ ಆ ಬರಹಗಳನ್ನು ಇತರ ತೆಂಕು ಕವಲಿನ ದ್ರಾವಿಡ ಭಾಷೆಗಳ ಮೂಲ ಬರಹಗಳು ಎಂದೂ ವಾದಿಸಲು ಬರುತ್ತದೆಯಲ್ಲವೇ?** ಇದು ಕೇವಲ

ವಾದಕ್ಕಾಗಿ ಆಡುತ್ತಿರುವ ಮಾತಲ್ಲ. ಶಂಗಂ ಬರಹಗಳು ಈಗ ನಮಗೆ ಲಭಿಸಿರುವ ಶಾಬ್ದಿಕ ಆಕಾರದಲ್ಲಿಯೇ ರಚನೆಯಾದವು ಎಂದು ಹೇಳುವುದು ಕಷ್ಟ. ರಚನೆಯಾದ ಹಲವು ಶತಮಾನಗಳ ಅನಂತರದಲ್ಲಿ ಬರೆದ ಹಸ್ತಪ್ರತಿಗಳಲ್ಲಿ ಲಭಿಸುತ್ತಿವೆ. 9ನೆಯ ಶತಮಾನದ ಹೊತ್ತಿಗೆ ಶಂಗಂ ಬರಹಗಳು ಸಂಕಲನ ರೂಪದಲ್ಲಿ ಸಿದ್ಧಗೊಂಡವು ಎನ್ನುವ ಅಭಿಪ್ರಾಯವನ್ನು ಈ ಅಧ್ಯಯನದಲ್ಲಿ ಒಪ್ಪಲಾಗಿದೆ. (ಪು. 21) ಈ ನಡುವಣ ಅವಧಿಯಲ್ಲಿ ಅವುಗಳ ಶಾಬ್ದಿಕ ರೂಪಗಳು ಹೆಚ್ಚು ತಮಿಳಿಗೆ ಹತ್ತಿರವಾಗುವಂತೆ ಬದಲಾಗಿರುವುದು ಒಂದು ಸಾಧ್ಯತೆ. ಅಲ್ಲದೆ ಹಳೆಯ ತಮಿಳಿನ ಕೆಲವು ವಿದ್ವಾಂಸರು ಗುರುತಿಸುವಂತೆ ಶಂಗಂ ಬರಹಗಳಲ್ಲಿ ದೊರೆಯುವ ಎಷ್ಟೋ ಪದಗಳು ಈಗಿನ ತಮಿಳಿನಲ್ಲಿ ಬಳಕೆಯಲ್ಲಿಲ್ಲ. ಆದರೆ ಆ ಪದಗಳು ತೆಂಕು ಕವಲಿನ ದ್ರಾವಿಡ ನುಡಿಗಳಲ್ಲಿ ಇಂದೂ ಬಳಕೆಯಲ್ಲಿವೆ. ಇವೆಲ್ಲ ಸಂಗತಿಗಳನ್ನು ಗಮನಿಸಿದರೆ ಶಂಗಂ ಬರಹಗಳು ಬೇರೆಬೇರೆಯಾದ ಭಾಷೆಗಳನ್ನಾಡುತ್ತಿದ್ದ ಭೂಪ್ರದೇಶದಲ್ಲಿ ರಚನೆಯಾದವು ಎಂದು ತಿಳಿಯುವುದು ಕಷ್ಟವಾಗುತ್ತದೆ. ಮತ್ತು ತಮಿಳಗಂನಿಂದ ಬೇರೆಯಾಗಿದ್ದ ಭೂಪ್ರದೇಶಗಳಲ್ಲಿ ತಮಿಳಿಗಿಂತ ಸಂಪೂರ್ಣವಾಗಿ ಬೇರೆಯೇ ಆಗಿದ್ದ ಭಾಷೆಗಳನ್ನಾಡುತ್ತಿದ್ದರೆಂದು ವಾದಿಸುವುದೂ ಕಷ್ಟ. ಈಗ ಹೆಚ್ಚು ಖಚಿತವಾಗಿ ತಿಳಿಯಲಾಗಿರುವಂತೆ ಶಂಗಂ ಬರಹಗಳ ರಚನೆಯ ಕಾಲಾವಧಿಯ ಹೊತ್ತಿಗಂತೂ ತಮಿಳು ಮತ್ತು ಮಲೆಯಾಳಂಗಳು ಬೇರೆ ಬೇರೆ ಭಾಷೆಗಳಾಗಿ ಒಡೆದುಕೊಂಡಿರಲಿಲ್ಲ. ಇದೂ ಅಲ್ಲದೆ ಶಂಗಂ ಬರಹಗಳು ತಮಿಳಗಂನಿಂದ 'ಹೊರಗಿರುವ' ಪ್ರದೇಶಗಳಲ್ಲಿ ಜನರಾಡುತ್ತಿದ್ದ ನುಡಿಗಳನ್ನು 'ಅಶುದ್ಧ' (ನೆಡುಮೊಳಿ) ನುಡಿಗಳೆಂದು ಗುರುತಿಸುತ್ತವೆ. ಕೊನೆಯ ಪಕ್ಷ ಈ ಅಶುದ್ಧ ನುಡಿಗಳ ಕಲ್ಪನೆ ಅನ್ವಯಿಸುವ ಭೂಪ್ರದೇಶಗಳಲ್ಲಾದರೂ ತಮಿಳಿನಿಂದ ಸಂಪೂರ್ಣವಾಗಿ ಬೇರ್ಪಟ್ಟ ತೆಂಕು ಕವಲಿನ ದ್ರಾವಿಡ ನುಡಿಗಳು ಬಳಕೆಯಲ್ಲಿರಲಿಲ್ಲವೆಂದು ತಿಳಿಯಬೇಕಾಗುತ್ತದೆ.

ಈ ಮೇಲೆ ಹೇಳಿದ ವಿವರಣೆಯನ್ನು ಲಿಪಿ ಸಂಬಂಧದ ಚರ್ಚೆಯಲ್ಲಿ ಮತ್ತಷ್ಟು ವಿಸ್ತರಿಸಿಕೊಳ್ಳಲು ಸಾಧ್ಯವಿದೆ. ತಮಿಳಗಂ ಬ್ರಾಹ್ಮಿಯನ್ನು ಒಪ್ಪಿಕೊಳ್ಳದೇ ಹೋದದ್ದು ಮತ್ತು ತಮಿಳು ಬ್ರಾಹ್ಮಿಯೆಂಬ ಲಿಪಿ ವ್ಯವಸ್ಥೆಯನ್ನು ರೂಪಿಸಿಕೊಂಡದ್ದು ಈಗಾಗಲೇ ವಿದ್ವಾಂಸರು ಹೆಚ್ಚಾಗಿ ಒಪ್ಪಿರುವ ಸಂಗತಿ. ಈ ಲಿಪಿ ವ್ಯವಸ್ಥೆಯನ್ನು ಬ್ರಾಹ್ಮೀ ಲಿಪಿ ವ್ಯವಸ್ಥೆಯ ಚೌಕಟ್ಟಿನಲ್ಲೇ ಹೆಸರಿಸಿ ವ್ಯವಹರಿಸಬೇಕೋ ಬೇಡವೋ ಎಂಬುದು ವಾದದ ವಿಷಯ. ಅದು ಒತ್ತಟ್ಟಿಗಿರಲಿ. ಆದರೆ ತಮಿಳು ಬ್ರಾಹ್ಮಿಯನ್ನು ಬಳಸಿ ಶಂಗಂ ಬರಹಗಳ ರಚನೆಯ ಕಾಲಾವಧಿಯಲ್ಲಿ ನೆಲೆಗೊಂಡ ಶಾಸನ ಬರಹಗಳು ಗಮನಿಸಬಹುದಾದಷ್ಟು ಸಂಖ್ಯೆಯಲ್ಲಿದ್ದರೂ ಆ ಶಾಸನಗಳು ಬಹು ದೀರ್ಘ ರಚನೆಗಳಾಗಿರಲಿಲ್ಲ. ಕೆಲವು ಅಕ್ಷರಗಳಿಗಷ್ಟೇ ಮಿತಗೊಂಡಿದ್ದವು. 'ಸುದೀರ್ಘ ಶಾಸನವೆನಿಸಿಕೊಳ್ಳುವ ಮಂಗಳಂ ಶಾಸನ 56 ಅಕ್ಷರಗಳನ್ನು ಮಿಕ್ಕಿಲ್ಲ'(ಪು.89) ಕ್ರಿ.ಶ ನಾಲ್ಕನೆಯ ಶತಮಾನದ ಹೊತ್ತಿಗೆ ಅಂದರೆ ಶಂಗಂ ಬರಹಗಳ ರಚನೆಯ ಅವಧಿ ಮುಗಿದ ಮೇಲೆ ತಮಿಳಗಂ ಹೊರಗಿನ ಶಕ್ತಿಯಾದ (ಬಹುಶಃ ಕನ್ನಡ ನಾಡಿನವರಾದ) ಕಳಭ್ರರ ವಶಕ್ಕೆ ಬಂದಿತು. ಅನಂತರ ಅವರು ರೂಢಿಗೆ ತಂದ ವಟ್ಟೆಳತ್ತು ಲಿಪಿ ಮತ್ತು ಆ ಬಳಿಕ ರೂಢಿಸಿಕೊಂಡ ಗ್ರಂಥ ಲಿಪಿಯ ಬಳಕೆ– ಈ ಬದಲಾವಣೆಯು ನಡೆದ ಮೇಲೆ ಮಾತ್ರ ತಮಿಳಿನಲ್ಲಿ ಬಹು ದೀರ್ಘವಾದ ಲಿಖಿತ ದಾಖಲೆಗಳು ಸಿದ್ಧಗೊಳ್ಳುವುದು ಸಾಧ್ಯವಾಯಿತು. ಈ

ಅಧ್ಯಯನವೂ ಈ ಅಂಶವನ್ನು ಒಪ್ಪಿಕೊಳ್ಳುತ್ತದೆ. ನಮಗಿಲ್ಲಿ ಇದರಿಂದ ಗೊತ್ತಾಗುವ ಸಂಗತಿಯೆಂದರೆ ಶಂಗಂ ಬರಹಗಳು ರಚನೆಯಾದ ಕಾಲಾವಧಿಯಲ್ಲಿ ತಮಿಳಿಗೆ ಬರೆಯಲು ಅನುಕೂಲವಾದ ಲಿಪಿಯಿರಲಿಲ್ಲವಾದ್ದರಿಂದ ಆ ಕಾಲಾವಧಿಯ ರಚನೆಗಳು ಬಾಯ್ದೆರೆಯ ರಚನೆಗಳಾಗಿದ್ದವೆಂದು ತಿಳಿಯುವುದು ಸರಿಯಾಗುತ್ತದೆ. ಇದು ಹೊಸ ವಿಚಾರವೆಂದು ತೋರದಿದ್ದರೂ ಈ ಬಾಯ್ದೆರೆಯ ರಚನೆಗಳು ಲಿಪಿ ರೂಪದಲ್ಲಿ ದಾಖಲಾತಿ ಪಡೆಯುವ ಹೊತ್ತಿಗೇ ತಮ್ಮ ಬಾಯ್ದೆರೆಯ ರೂಪದಲ್ಲೇ ಬದಲಾಗಿರುವ ಸಾಧ್ಯತೆಯನ್ನು ಮತ್ತು ಆ ಅವಧಿಯಲ್ಲಿ ತಮಿಳು ಭಾಷೆಯಲ್ಲಿ ಆದ ಬದಲಾವಣೆಗಳ ಪ್ರಭಾವಕ್ಕೆ ಒಳಗಾಗಿರುವುದನ್ನು ಅಲ್ಲಗಳೆಯಲು ಬರುವುದಿಲ್ಲ. (ಈ ಟಿಪ್ಪಣಿಯ ಉದ್ದಕ್ಕೂ ಶಂಗಂ ಬರಹಗಳು ಎಂದು ಬಳಸಿರುವುದನ್ನು ದಯವಿಟ್ಟು ಗಮನಿಸಿ. ಇವು ಬರಹಗಳಾದದ್ದು ರಚನೆಯವಧಿಯಲ್ಲಿ ಅಲ್ಲ; ಅನಂತರ ಹಲವು ಶತಮಾನಗಳು ಕಳೆದ ಮೇಲೆ ಎನ್ನುವುದನ್ನು ಮರೆಯುವಂತಿಲ್ಲ.)

ತೊಲ್ಕಾಪ್ಪಿಯಂನಲ್ಲಿ ಮಂಡಿತವಾಗುವ ತಿಣೈ ಸಿದ್ಧಾಂತವನ್ನು ಕುರಿತು ಈ ಅಧ್ಯಯನದಲ್ಲಿ ವಿವರಗಳನ್ನು ನೀಡಲಾಗಿದೆ. ತಮಿಳಗಂನ ಭೂಪ್ರದೇಶವನ್ನು ಐದು ವಲಯಗಳಲ್ಲಿ ಈ ಸಿದ್ಧಾಂತವು ವಿಂಗಡಿಸಿಕೊಳ್ಳುತ್ತದೆ. ಅವುಗಳಲ್ಲಿ ಮರುಭೂಮಿಯನ್ನು ಸೂಚಿಸುವ 'ಪಾಲೈ'ಯನ್ನು ಹೊರತುಪಡಿಸಿ ಉಳಿದ ನಾಲ್ಕರ ಲಕ್ಷಣಗಳಿಗೆ ಅನುಗುಣವಾದ ಭೂಪ್ರದೇಶಗಳನ್ನು ಗುರುತಿಸಲಾಗಿದೆ. 'ಮರುದಂ' ಎಂದು ಗುರುತಿಸಲಾಗುವ ಪ್ರದೇಶ ನದಿ,ಕೆರೆಗಳ ಬಳಿಯಲ್ಲಿರುವಂತಹುದು. ಇದು ಬಹುಮಟ್ಟಿಗೆ ಕೆಳಕಾವೇರಿಯ ಆಸುಪಾಸಿನ 'ತಮಿಳುನಾಡಿನ ತಿರುಚರಾಪಳ್ಳಿ ಮದುರೈವರೆಗಿನ, ಸೇಲಂನಿಂದ ಕೊಯಮತ್ತೂರುವರೆಗಿನ (ಪು 39)ಪ್ರದೇಶವಾಗಿದೆ. ಕೃಷಿ ವಲಯವಾಗಿ ಇದನ್ನು ಗುರುತಿಸಬಹುದು. ಉಳಿದ ಮೂರೂ ವಲಯಗಳು ಆಹಾರ ಸಂಗ್ರಹಣೆ,ಬೇಟೆ,ಮೀನುಗಾರಿಕೆ ಮತ್ತು ಪಶುಪಾಲನೆಯನ್ನು ಆಧರಿಸಿದ ಜನ ಸಮುದಾಯಗಳಿರುವ ಪ್ರದೇಶಗಳಾಗಿವೆ. ಈ ವಿವರಗಳು ನಮಗೆ ಮುಖ್ಯ. ಏಕೆಂದರೆ ತಮಿಳಗಂ ಅನ್ನು ವಿವರಿಸಿಕೊಳ್ಳುವಾಗ ಅದರ ಆರ್ಥಿಕ ಚಟುವಟಿಕೆಗಳ ಸ್ವರೂಪವನ್ನು ತಿಳಿಯಲು ಇದರಿಂದ ಅನುಕೂಲವಾಗುತ್ತದೆ. ಅಲ್ಲದೆ 'ಹೆಚ್ಚುವರಿ ಪ್ರದೇಶದ' ಅಂದರೆ ತಮಿಳಗಂನ ವಾಯುವ್ಯ ಭಾಗದಲ್ಲಿದ್ದ ಜನ ಸಮುದಾಯದ ಆರ್ಥಿಕ ಚಟುವಟಿಕೆಗಳ ಬಗೆಗೂ ಹೆಚ್ಚಿನ ಮಾಹಿತಿಯನ್ನು ಹೊರತೆಗೆಯ ಬೇಕಾಗಿದೆ. ಈಗಲೂ ಇಲ್ಲಿರುವ ತೆಂಕು ಕವಲಿನ ದ್ರಾವಿಡ ನುಡಿಗಳನ್ನಾಡುವ ಜನ ಸಮುದಾಯಗಳು ಪೂರ್ಣ ಪ್ರಮಾಣದ ಕೃಷಿಕರಾಗಿ ಬದಲಾಗಿಲ್ಲ. (ಬಡಗರು ವಿನಾಯತಿ ಎಂದು ತೋರಿದರೂ ಇಲ್ಲಿ ಕೃಷಿಕರಾಗಿರುವ ಬಡಗರು ಅಲ್ಲಿನ ಮೂಲವಾಸಿಗಳೇ ಅಥವಾ ಎರಡನೇ ಸಹಸ್ರಮಾನದಲ್ಲಿ ಕನ್ನಡನಾಡಿನಿಂದ ವಲಸೆ ಹೋದ ಕೃಷಿಕರೇ ಎಂಬುದು ಇನ್ನೂ ಗೊತ್ತಾಗದಿರುವ ಸಂಗತಿ) ಸೋಲಿಗರು,ತೊದವರು, ಆಲು ಕುರುಂಬರು,ಜೇನು ಕುರುಬರು, ಇರುಳರು,ಕಾಡುಕುರುಬರು ಇವರೆಲ್ಲ ಮೊದಲ ಸಹಸ್ರಮಾನದಿಂದಲೂ ಆ ಪ್ರದೇಶದಲ್ಲೇ ಇದ್ದವರೇ ಆಗಿದ್ದಾರೆ. ಹೀಗಿರುವಾಗ 'ಹೆಚ್ಚುವರಿ ಪ್ರದೇಶ'ದ ಬಗೆಗೆ ಶಂಗಂ ಬರಹಗಳಲ್ಲಿ ಬರುವ ವಿವರಗಳನ್ನು ನಾವು ಯಾವ ನಿಟ್ಟಿನಲ್ಲಿ ಗ್ರಹಿಸಬೇಕೆಂಬುದು ಬಗೆಹರಿಯಲಾಗದ ಪ್ರಶ್ನೆಯಾಗಿದೆ.

ಈ ಟಿಪ್ಪಣಿಯಲ್ಲಿ ಚರ್ಚಿಸದೇ ಬಿಟ್ಟ ಹಲವು ವಿಚಾರಗಳಿವೆ. ಇವುಗಳಲ್ಲಿ ದಕ್ಷಿಣ ಭಾರತವನ್ನು ಬೆಸೆದ ಬ್ರಾಹ್ಮೀ ಲಿಪಿ ಮತ್ತು ಕಾವೇರಿ ಕುರಿತ ಅಧ್ಯಾಯಗಳಿವೆ. ಪ್ರಾಸಂಗಿಕವಾಗಿ ಈ ಅಧ್ಯಾಯಗಳ ವಿವರಗಳನ್ನು ಗಮನಿಸಲಾಗಿದೆಯಾದರೂ ಇನ್ನೂ ಹೆಚ್ಚಿನ ಚರ್ಚೆಯನ್ನು ಈ ನಿಟ್ಟಿನಲ್ಲಿ ಬೆಳೆಸಬಹುದಾಗಿದೆ.

ಡಾ.ಶೆಟ್ಟರ್ ಅವರ ಈ ಆಧ್ಯಯನವನ್ನು ಅದರ ತಾತ್ವಿಕ ನೆಲೆಗಟ್ಟುಗಳನ್ನು ಇನ್ನೂ ಹೆಚ್ಚಿನ ವ್ಯಾಪ್ತಿಯಲ್ಲಿ ಚರ್ಚಿಸುವ ಅಗತ್ಯವಿದೆ. ಇಲ್ಲಿ ಅನಾವರಣಗೊಂಡಿರುವ ಅಪಾರ ಪ್ರಮಾಣದ ಮಾಹಿತಿಯನ್ನು ಆಧರಿಸಿ, ಅಧ್ಯಯನದ ಉದ್ದಕ್ಕೂ ಸೂಚಿಸಿರುವ ಸಮಸ್ಯೆಗಳನ್ನು ಬಿಡಿಸಬೇಕಾಗಿದೆ. ಇದು ಕನ್ನಡ ವಿದ್ವತ್ ವಲಯದ ಹೊಣೆಗಾರಿಕೆಯಾಗಿದೆ. ಇದಕ್ಕೂ ಮೊದಲು ನಡೆಯಬೇಕಾದ ಕೆಲಸವೊಂದಿದೆ. ಅದೆಂದರೆ ಈ ಅಧ್ಯಯನದ ಮಂಡನೆಗಳನ್ನು ಇಲ್ಲಿನ ಅಧ್ಯಯನ ಪರಿಕರಗಳನ್ನು ನಮ್ಮ ಶೈಕ್ಷಣಿಕ ಶಿಸ್ತಿನ ಭಾಗವನ್ನಾಗಿಸಬೇಕಾಗಿದೆ. ಕನ್ನಡ ನಾಡಿನ ಚರಿತ್ರೆಯನ್ನು ಅಭ್ಯಾಸ ಮಾಡುವ ವಿದ್ಯಾರ್ಥಿಗಳು ಈ ಅಧ್ಯಯನವನ್ನು ತಮ್ಮ ಓದಿನ ಭಾಗವನ್ನಾಗಿ ಮಾಡಿಕೊಳ್ಳುವಂತೆ ಮಾಡಬೇಕಿದೆ. ಇದರಿಂದ ಇಂತಹ ಮಹತ್ವದ ಮಂಡನೆಗಳು ಕೇವಲ ವಿದ್ವತ್ ದ್ವೀಪಗಳಾಗದಂತೆ ನೋಡಿಕೊಳ್ಳುವುದು ಸಾಧ್ಯವಾಗುತ್ತದೆ. ಆದರೆ ಈವರೆಗೆ ನಮ್ಮ ಶೈಕ್ಷಣಿಕ ವಲಯ ಇಂತಹ ಪ್ರಯತ್ನಗಳನ್ನು ನಿರ್ಲಕ್ಷ್ಯದಿಂದಲೇ ನೊಡುತ್ತಿದೆ. ಅದು ಕೇವಲ ವಿದ್ವಾಂಸರ ವಲಯಕ್ಕೆ ಸೇರಿದ್ದೆಂಬಂತೆ ದೂರವಿರಿಸುತ್ತಲೇ ಬಂದಿದೆ. ವಿದ್ವತ್ ವಲಯವೂ ಕೂಡ ಎಷ್ಟೋ ವೇಳೆ ಚರ್ಚೆಯನ್ನು ವಿಸ್ತರಿಸದೆ ಮೌನವಹಿಸಿಬಿಡುತ್ತದೆ. ಈ ಪರಿಸ್ಥಿತಿಯನ್ನು ಬದಲಿಸಬೇಕಿದೆ. ಇದಕ್ಕಿಂತಲೂ ಹೆಚ್ಚಿನ ಅಪಾವೊಂದಿದೆ. ಅದೆಂದರೆ ಇಂತಹ ಅಧ್ಯಯನಗಳು ನಡೆದಾಗ ಪ್ರಯತ್ನಗಳನ್ನು ಹೊಗಳಿಕೆಗೆ ಸೀಮಿತಗೊಳಿಸಿ ಚರ್ಚೆಯನ್ನು ಪರೋಕ್ಷವಾಗಿ ಕೊಂದುಬಿಡುವುದೂ ಉಂಟು. ಕಳೆದ ಒಂದೆರಡು ದಶಕಗಳಲ್ಲಿ ಹಲವು ಅಧ್ಯಯನಗಳನ್ನು ಹೀಗೆ ಮುಖ್ಯಧಾರೆಯಿಂದ ಹೊರಗಿರಿಸಲಾಗಿದೆ. ಈ ಅಧ್ಯಯನಕ್ಕೆ ಈ ಅಪಾಯ ಒದಗಬಾರದು. ಹಾಗಾಗದಂತೆ ನೋಡಿಕೊಳ್ಳುವ ಹೊಣೆ ನಮ್ಮೆಲ್ಲರ ಮೇಲಿದೆ.

ಕನ್ನಡ ಲಿಪಿಯ ರಚನೆ

(ಡಾ. ಷ. ಶೆಟ್ಟರ್ ಅವರು ಕಪ್ಪೆ ಅರಭಟ್ಟನ ಬಾದಾಮಿ ಶಾಸನ ಕೃತಿಗೆ ಬರೆದ ಮಾತುಗಳು)

ಬಾದಾಮಿಯ ಕಪ್ಪೆಅರಭಟ್ಟನನ್ನು ಹೆಸರಿಸುವ ಕಲ್ಬರಹವನ್ನು ಓದಿ ಬಣ್ಣಿಸಿರುವ ಹಲವು ಬರಹಗಳು ಕನ್ನಡದಲ್ಲಿವೆ. ಈ ಕಲ್ಬರಹವು ಕನ್ನಡ ಕಲ್ಬರಹಗಳ ಚರಿತ್ರೆಯನ್ನು, ಕನ್ನಡ ಸಾಹಿತ್ಯದ ಚರಿತ್ರೆಯನ್ನು ಕಟ್ಟುವಲ್ಲಿ ನೀಡುವ ನೆರವನ್ನು ಈ ಬರಹಗಳು ಬಣ್ಣಿಸಿವೆ. ಆದರೆ ಕನ್ನಡ ಬರವಣಿಗೆಯು ಬೆಳೆದ ಬಗೆಯನ್ನು ಕಾಣುವಲ್ಲಿ ಇದಕ್ಕಿರುವ ಹೆಚ್ಚಳವನ್ನು ಈವರೆಗೆ ಹೆಚ್ಚು ಮಂದಿ ಕಂಡುಕೊಂಡಿಲ್ಲ. ಈ ನಿಟ್ಟಿನಲ್ಲಿ ಡಾ.ಷ.ಶೆಟ್ಟರ್ ಅವರ ಈ ಬರಹ ಗಮನ ಹರಿಸಿದೆ. ಬಾದಾಮಿಯ ಈ ಕಲ್ಬರಹ ಚರಿತ್ರೆಯನ್ನು ಅರಿಯುವವರಿಗೆ ,ಸಾಹಿತ್ಯವನ್ನು ಓದುವವರಿಗೆ, ಕನ್ನಡ ನಾಡಿನ ಹಿರಿಮೆ ಗರಿಮೆಗಳನ್ನು ಬಣ್ಣಿಸುವವರಿಗೆ ಬಗೆಬಗೆಯಲ್ಲಿ ಆಕರವಾಗಿದೆ. ಕನ್ನಡಿಗರ ಚಹರೆಯನ್ನು ಹೊಂದಿರುವಾತನನ್ನು ಈ ಕಲ್ಬರಹ ಬಣ್ಣಿಸುವುದೆಂದು ಹೇಳುವುದುಂಟು.ಅದೇನೇ ಇದ್ದರೂ ಈ ಕಲ್ಬರಹದ ಕಾಲ, ಇದರಲ್ಲಿ ಹೆಸರಿಸಲಾದವನ ಹಿನ್ನೆಲೆ ಮುಂತಾದವು ಬಲ್ಲವರ ಚರ್ಚೆಗೆ ಅನುವು ಮಾಡಿಕೊಟ್ಟಿವೆ. ಈ ಕಲ್ಬರಹದ ಹಲವು ಓದುಗಳನ್ನು ಈ ಬರಹದ ಮೊದಲಲ್ಲಿ ಕೂಡಿಸಿ ಕೊಡಲಾಗಿದೆ.ಅಂತಹ ಬರಹಗಳನ್ನು ಒಗ್ಗೂಡಿಸಿ ಬೇರೆ ಹೊತ್ತಗೆಯೊಂದನ್ನು ಈಗಾಗಲೇ ಡಾ. ಶೆಟ್ಟರ್ ಅವರು ಹೊರತಂದಿದ್ದಾರೆ.

ಡಾ.ಷ.ಶೆಟ್ಟರ್ ಅವರು ಈ ಕಲ್ಬರಹವನ್ನು ಬೇರೆಯ ಕಾರಣಗಳಿಗಾಗಿ ಓದಿಗೆ ಎತ್ತಿಕೊಂಡಿದ್ದಾರೆ. ಕನ್ನಡ ಬರವಣಿಗೆಯ ಒಂದು ಹಂತವನ್ನು ಕಂಡುಕೊಳ್ಳುವುದು ಅದಕ್ಕೆ ಕಾರಣನಾಗಿರಬಹುದಾದ ಶ್ರೀಅಕ್ಷರಮೇರು ಎಂಬ ಬಿರುದುಳ್ಳವನ ಕೊಡುಗೆಗಳನ್ನು ಗುರುತಿಸುವುದು ಈ ಓದಿನ ಗುರಿಯಾಗಿದೆ.ಇದರೊಡನೆ ಇನ್ನೂ ಒಂದು ಗುರಿ ಈ ಓದಿಗೆ ಇದೆ.ಈಗ ಇರುವಂತೆ ಕಲ್ಬರಹಗಳನ್ನು ಓದುವುದು ಮತ್ತು ಅವುಗಳನ್ನು ತಿಳಿಯುವುದು ಕೆಲವರು ಬಲ್ಲವರ ಚಳಕವಾಗಿದೆ. ಇದರಿಂದ ಕೆಲವು ತೊಂದರೆಗಳು ಕಾಣತೊಡಗಿವೆ. ಹೀಗೆ ಓದುವವರು ತಮ್ಮ ತಿಳುವಳಿಕೆ ಮತ್ತು ಬಯಕೆಗಳ ನೇರಕ್ಕೆ ಓದುವವರಾದ್ದರಿಂದ ಕೆಲವೊಮ್ಮೆ ಬೇಡದ ಚರ್ಚೆಗಳು ನಡೆಯುತ್ತವೆ. ಅಲ್ಲದೆ ಯಾರು ಬೇಕಾದರೂ ಓದಿ ತಿಳಿಯಲಾಗದೇ ಇರುವುದರಿಂದ ಅಂತಹ ಕಲ್ಬರಹಗಳನ್ನು ಓದಿ ತಿಳಿಯುವ ಬಯಕೆಯನ್ನೇ ಚಿಕ್ಕವರು ಬಿಟ್ಟುಕೊಟ್ಟಿದ್ದಾರೆ.ತಿಳಿವಿನ ಹರವು ಹೆಚ್ಚುವುದಕ್ಕೆ ಇವೆರಡೂ ಅಡ್ಡಿಗಳೇ ಆಗಿವೆ. ಇದನ್ನು ಬದಿಗೆ ತಳ್ಳಲು ಈ ಓದಿನಲ್ಲಿ ದಿಟ್ಟ ಹೆಜ್ಜೆಗಳನ್ನು ಇಡಲಾಗಿದೆ.ಅದಕ್ಕಾಗಿ ಹೊಸ ತಂತ್ರಜ್ಞಾನವನ್ನು ಬಳಸುವ ಇರಾದೆಯೂ ಈ ಓದಿನಲ್ಲಿ ಇದೆ.

ಈಗ ನಾವು ಬರೆಯುವ ಇಲ್ಲವೇ ಓದುವ ಬರವಣಿಗೆಯಲ್ಲಿ ಲಿಪಿಗುರುತುಗಳ ಜೊತೆಗೆ ಅವುಗಳನ್ನು ಜೋಡಿಸುವ ಬಗೆಯ ಕಟ್ಟಲೆಗಳು ಇವೆ. ಒಂದು ತಡೆಯುಲಿ(=ವ್ಯಂಜನ)ದ ಜೊತೆಗೆ ತೆರೆದ ಉಲಿ(=ಸ್ವರ) ಬರುವುದಾದರೆ ನಾವು ಆ ತೆರೆದ ಉಲಿಯ ಗುರುತಿನ ಬದಲಿಗೆ ಅದರ ಚಿಕ್ಕ ಗುರುತೊಂದನ್ನು ತೆರದ ಉಲಿಯ ಗುರುತಿಗೆ ಸೇರಿಸಿ ಬರೆಯುತ್ತೇವೆ. **ಕೊ**ಎನ್ನುವಾಗ**ಕ್** ಮತ್ತು ಒ ಒಂದರ ಬಳಿಕ ಇನ್ನೊಂದು ಬಂದಿವೆ. ಬರೆಯುವಾಗ ಒ ಉಲಿಗೆ ಇರುವ ಗುರುತಿನ ಬದಲು ಅದರ ಚಿಕ್ಕ ಗುರುತನ್ನು **ಕ್** ಗೆ ಸೇರಿಸ ಅದನ್ನು **ಕೊ** ಎಂದು ಬರೆಯುತ್ತೇವೆ. ಈಗ ಇದು ಬಲು ಸುಳುವಾದ ಬಗೆ ಎನಿಸಿದರೂ ಕನ್ನಡ ಬರವಣಿಗೆ ಇದನ್ನು ಕಟ್ಟಿಕೊಂಡದ್ದು ಹೇಗೆ? ಈ ಕೇಳ್ವಿಯನ್ನು ನಾವು ಮುಂದಿಟ್ಟುಕೊಂಡು ಕನ್ನಡ ಬರವಣಿಗೆಯ ಚರಿತ್ರೆಯನ್ನು ಕಾಣಲು, ಕಟ್ಟಲು ಮುಂದಾಗಿಲ್ಲ.

ಇದಲ್ಲದೆ ಎರಡು ತಡೆಯುಲಿಗಳು ಒಂದಾದ ಮೇಲೆ ಒಂದರಂತೆ ಬರುವುದಾದರೆ ಬರವಣಿಗೆಯಲ್ಲಿ ಆ ಎರಡೂ ತಡೆಯುಲಿಗಳನ್ನು ತೋರಿಸುವುದಕ್ಕೆ ಕನ್ನಡ ಆರಿಸಿಕೊಂಡ ದಾರಿ ಯಾವುದು? ಮೊದಲು ಬರುವ ತಡೆಯುಲಿಯನ್ನು ಇಡಿಯಾಗಿ ಬರೆದು ಎರಡನೆಯ ತೆರೆದ ಉಲಿಯ ಚಿಕ್ಕ ಗುರುತನ್ನು ಅದಕ್ಕೆ ಸೇರಿಸುವುದು ಒಂದು ದಾರಿ. ಎರಡೂ ತೆರೆ ಉಲಿಗಳೂ ಒಂದೇ ಆಗಿದ್ದಲ್ಲಿ ಈ ದಾರಿ ಹೆಚ್ಚು ಗೋಜಲನ್ನು ತರುವುದಿಲ್ಲ. ಎತ್ತುಗೆಗಾಗಿ **ಪ್ಪ** ಎಂಬ ಉಲಿಗುಂಪಿನಲ್ಲಿ ಮೊದಲಿಗೆ **ಪ್** ಮತ್ತು **ಪ್** ಎಂಬ ಎರಡು ತಡೆಯುಲಿಗಳಿವೆ. ಇವುಗಳನ್ನು ನಾವು ಬರೆದಿರುವ ಬಗೆಯಲ್ಲಿ ಯಾವ **ಪ್** ಉಲಿಯ ಚಿಕ್ಕ ಗುರುತನ್ನು ಬಳಸಿದ್ದೇವೆ ಎಂಬುದು ನಮ್ಮಲ್ಲಿ ಯಾವ ಗೋಜಲನ್ನೂ ತರುವುದಿಲ್ಲ. ಆದರೆ **ಕ್ರ** ಎಂಬ ಉಲಿಗುಂಪಿನಲ್ಲಿ **ಕ್** ಮತ್ತು **ರ್** ಎಂಬ ಎರಡು ತಡೆಯುಲಿಗಳಿವೆ. ಉಲಿಯಲ್ಲಿ ಮೊದಲ ಬರುವ **ಕ್** ತಡೆಯುಲಿಯ ಇಡಿ ಗುರುತನ್ನು ಬರವಣಿಗೆಯಲ್ಲಿ ಉಳಿಸಿಕೊಂಡಿದ್ದೇವೆ. ಆದರೆ ಬಳಿಕ ಬರುವ **ರ್** ಉಲಿಯ ಚಿಕ್ಕ ಗುರುತನ್ನು ಬರೆಯುತ್ತಿದ್ದೇವೆ. (ಇಂಗ್ಲಿಶ್ ಇಲ್ಲವೇ ತಮಿಳಿನ ಬರವಣಿಗೆಯ ಬಗೆಯೊಡನೆ ಹೋಲಿಸಿದರೆ ಕನ್ನಡ ಆಯ್ದುಕೊಂಡಿರುವ ದಾರಿಯು ಹೇಗೆ ಬೇರೆ ಎನ್ನುವುದು ಗೊತ್ತಾಗುತ್ತದೆ.) ಕನ್ನಡ ಈ ದಾರಿಯನ್ನು ಆರಿಸಿಕೊಂಡದ್ದೇಕೆ?ಯಾವ ಬರವಣಿಗೆಯ ಮಾದರಿಯು ಈ ಆಯ್ಕೆಯ ಕಡೆಗೆ ಕನ್ನಡವನ್ನು ಸೆಳೆಯಿತು?ಅಲ್ಲದೆ ಈಗ ನಾವೇನೋ ಎರಡೂ ಗುರುತುಗಳೂ ಕಣ್ಣಿಗೆ ಕಾಣುವಂತೆ ಬೇರ್ಪಟ್ಟಂತೆ ಬರೆಯುತ್ತಿದ್ದೇವೆ. ಆದರೆ ಕಲ್ಬರಹಗಳಲ್ಲಿ ಒಂದೇ ಗುರುತಿನೊಳಗೆ ಇವೆರಡೂ ಗುರುತುಗಳು ಸೇರುವಂತೆ ಬರೆಯ ಬೇಕಿತ್ತು. ಈ ಸೇರ್ಪಡೆಯನ್ನು ಕನ್ನಡವನ್ನು ಬರೆದವರು ಹೇಗೆ ಕಟ್ಟಿಕೊಂಡರು? ಎತ್ತುಗೆಗಾಗಿ ಬಾದಾಮಿಯ ಹೆಸರಾಂತ ಕಲ್ಬರಹದಲ್ಲೇ ಇಪ್ಪತ್ತೈದು ಇಂತಹ ಕೂಡುಗುರುತುಗಳಿರುವುದನ್ನು ಶೆಟ್ಟರ್ ಅವರು ಗುರುತಿಸಿದ್ದಾರೆ. ಈ ಎಲ್ಲವುಗಳಲ್ಲೂ ಎರಡೂ ತಡೆಯುಲಿಗಳ ಗುರುತುಗಳು ಒಂದರೊಡನೆ ಇನ್ನೊಂದು ಸೇರಿಕೊಂಡೇ ಇವೆ (ತಂ,ನಂ ಮತ್ತು ದುಃ ಎಂಬ ಲಿಪಿಗುರುತುಗಳಲ್ಲಿ ಮಾತ್ರ ಈ ಹರಿವು ಮುರಿದಿದೆ. ಚುಕ್ಕೆ ಇಲ್ಲವೇ; ಚಿಕ್ಕ ಗುರುತುಗಳು ಪಕ್ಕದಲ್ಲಿ ಹೊರಗೆ ನಿಂತಿವೆ) ಎಲ್ಲಿ ಒಂದು ತಡೆಯುಲಿಯ ಗುರುತು ಕೊನೆಯಾಗಿ ಎಲ್ಲಿ ಇನ್ನೊಂದು ತಡೆಯುಲಿ ಗುರುತು ಮೊದಲಾಗುವುದು ಎಂಬುದನ್ನು ನಿಕ್ಕಿಯಾಗಿ ಹೇಳುವುದು ಆಗದಂತೆ

ಸೇರಿಕೊಂಡಿವೆ. (ಬರೆಯುತ್ತಿದ್ದುದು ಕಲ್ಲಿನ ಮೇಲೆ ಮತ್ತು ಲೋಹದ ಉಳಿಗಳಿಂದ ಕಂಡರಿಸುತ್ತಿದರಿಂದ ಹೀಗೆ ಒಂದೇ ಓಟದ ಗುರುತುಗಳು ಮೈದಳೆದಿರಬೇಕು ಎಂದು ಹೇಳಬಹುದು. ಆದರೆ ಹೀಗೆ ಕೂಡಿಸುವ ಬಗೆಯನ್ನು ಕಟ್ಟಿಕೊಂಡದ್ದು ಯಾರು, ಯಾವಾಗ ಇದು ಮೊದಲಾಯಿತು, ಇದಕ್ಕೆ ಬೇರೆ ಮಾದರಿಗಳಿದ್ದವೇ ಎಂಬೆಲ್ಲ ಕೇಳ್ವಿಗಳು ಹಾಗೇ ಉಳಿಯುತ್ತವೆ.)

ಈ ಮೇಲಿನ ಮಾತುಗಳೆಲ್ಲವನ್ನೂ ಡಾ.ಶೆಟ್ಟರ್ ಅವರ ಈ ಓದಿನ ಹಿನ್ನೆಲೆಯಲ್ಲಿ ನೋಡಬೇಕಿದೆ. ಎರಡು ನೆಲೆಗಳು ಈ ಓದಿನಲ್ಲಿ ಮುಂಚೂಣಿಗೆ ಬಂದಿವೆ. ಒಂದು: ಬಾದಾಮಿಯ ಕಲ್ಬರಹ ಮೈದಳೆಯುವ ಹೊತ್ತಿಗೆ ಕನ್ನಡದ ಬರವಣಿಗೆಯಲ್ಲಿ ಲಿಪಿಗುರುತುಗಳನ್ನು ಕಂಡರಿಸುವ ದಾರಿಯನ್ನು ಒಂದು ನಿಟ್ಟಿಗೆ ತಂದಿರುವ ಶ್ರೀಅಕ್ಷರ ಮೇರು ಎಂಬ ಬಿರುದುಳ್ಳವನ ಹೆಜ್ಜೆಗಳನ್ನು ದಾಖಲಿಸುವುದು ಎರಡು: ಈ ಲಿಪಿಗುರುತಗಳ ಕಟ್ಪೋಣವನ್ನು ಬಿಡಿಸಿ ನೋಡಿ ಆ ಮೂಲಕ ಹೊಸ ತಂತ್ರಜ್ಞಾನದ ನೆರವಿನಿಂದ 'ಎಲ್ಲರೂ ಓದಬಹುದಾದ' ದಾರಿಯೊಂದನ್ನು ಕಂಡುಕೊಳ್ಳುವುದು. ಇವೆರಡೂ ನೆಲೆಗಳಲ್ಲಿ ಮೊದಲನೆಯನ್ನು ಈ ಓದು ಪೂರೈಸಿದೆ.ಎರಡನೆಯ ನೆಲೆಗೆ ಬೇಕಾದ ಹಿನ್ನೆಲೆಯನ್ನು ಕಟ್ಟಿಕೊಟ್ಟಿದೆ. ಇದನ್ನು ಮುಂದಿನ ಓದುಗಳು ಮತ್ತು ಯತ್ನಗಳು ಇನ್ನಷ್ಟು ಬಲವಾಗಿ ಬೆಳೆಸಬೇಕಿದೆ.

ಕಲ್ಬರಹಗಳು ಮೈದಳೆಯುವ ಮೂರು ಹಂತಗಳನ್ನು ಗುರುತಿಸಬಹುದು.ಮೊದಲು ಬರೆಯಬೇಕಾದ ಮಾತುಗಳನ್ನು ಬರಹ ರೂಪದಲ್ಲಿ ಒಂದು ಕಡೆ ಬರೆಯುವ ಹಂತ. ಇದಕ್ಕೆ ಯಾವ ಆಕರವನ್ನು ಬಳಸುತ್ತಿದ್ದರೆಂಬುದು ನಮಗಿನ್ನೂ ಗೊತ್ತಿಲ್ಲ. ಕೇವಲ ಊಹೆಗಳನ್ನು ಮಾಡಬಹುದು. ಬಳಿಕ ಈ ಲಿಪಿ ರೂಪವನ್ನು ಕಲ್ಬರಹವು ಮೂಡ ಬೇಕಾದ ಕಲ್ಲಿನ ಮೇಲೆ ಬರೆಯುವುದು ಎರಡನೆಯ ಹಂತ.ಕೊನೆಯ ಹಂತವೆಂದರೆ ಹೀಗೆ ಬರೆದದ್ದನ್ನು ಹತ್ಯಾರುಗಳ ನೆರವಿನಿಂದ ಕೊರೆಯುವುದು.ಈ ಮೂರೂ ಹಂತಗಳಲ್ಲೂ ಒಬ್ಬರೇ ಇರಬಹುದು.ಇಲ್ಲವೇ ಎರಡೂ ಮತ್ತು ಮೂರನೆಯ ಹಂತದಲ್ಲಿ ಒಬ್ಬರಿದ್ದು ಮೊದಲ ಹಂತದಲ್ಲಿ ಒಬ್ಬರಿರಬಹುದು. ಹಾಗೆಯೇ ಮೊದಲ ಮತ್ತು ಎರಡನೆಯ ಹಂತದ ಕೆಲಸವನ್ನು ಒಬ್ಬರು ಮಾಡಿ ಮುಗಿಸಿದ ಮೇಲೆ ಮೂರನೆಯ ಹಂತವನ್ನು ಮತ್ತೊಬ್ಬರೂ ಪೂರೈಸಿರಬಹದು. ಹಾಗಿಲ್ಲದೆ ಮೂರೂ ಹಂತಗಳಲ್ಲನ್ನೂ ಬೇರೆಬೇರೆಯವರೇ ಮಾಡಿರಬಹುದು. ಈ ಮಾತುಗಳು ನಮಗೇಕೆ ಬೇಕೆಂದರೆ ಬರಹದಂತಹ ಚಳಕವನ್ನು ಬಲ್ಲವರು ಬೆರಳೆಣಿಕೆಯಲ್ಲಿದ್ದ ಕಾಲದಲ್ಲಿ ಮೊದಲ ಹಂತದ ಚಳಕಕ್ಕೆ ಹೆಚ್ಚಿನ ಮನ್ನಣೆ ಬಂದೊದಗುತ್ತದೆ. ಎರಡನೆಯ ಹಂತ ನಕಲೆತ್ತುವುದು. ಇದೂ ಕೂಡ ಒಂದು ಚಳಕವೇ ಸರಿ.ಮೂರನೆಯ ಹಂತ ತಾಳ್ಮೆ ಮತ್ತು ದುಡಿಮೆಯನ್ನು ಕೇಳುತ್ತದೆ. (ಇಂದಿನ ದಿನಗಳಲ್ಲಿ ಬರೆಯುವವರು,ಲಿಪಿ ಜೋಡಿಸುವವರು ಮತ್ತು ಮುದ್ರಕರು ಎಂಬ ಮೂರು ಹಂತಗಳಿರುವುದಕ್ಕೆ ಇದು ಹೋಲುವುದಲ್ಲವೇ?)

ಬಾದಾಮಿಯ ಕಲ್ಬರಹ ಇಡಿಯಾಗಿ ಒಂದೆಡೆ ಸಿಗುತ್ತಿರುವಂತೆ ಅದರ ಬೇರೆ ಬೇರೆ ಸಾಲುಗಳು ಆಸುಪಾಸಿನಲ್ಲಿ ಮೂರು ಬೇರೆ ಬೇರೆ ಕಡೆಗಳಲ್ಲಿ ಕಂಡುಬಂದಿವೆ. ಅಂದರೆ ಇಡೀ ಬರಹದ ಸಾಲುಗಳಲ್ಲಿ ಕೆಲವನ್ನು ಬೇರೆ ಬೇರೆ ಕಡೆಗಳಲ್ಲಿ ಬರೆದಿರುವುದು

ಕಂಡುಬಂದಿದೆ. ಹೀಗೆ ಬೇರೆ ಬೇರೆ ಕಡೆ ಬರೆಯಲು ಸಾಲುಗಳನ್ನು ಆಯ್ದುಕೊಳ್ಳುವಾಗ ಯಾವುದೇ ಕ್ರಮವನ್ನು ಪಾಲಿಸಿಲ್ಲ. ಒಂದೆಡೆ ಸಂಸ್ಕೃತ ಶ್ಲೋಕವನ್ನು ಮರಳಿ ಬರೆದಿದ್ದರೆ, ಮತ್ತೊಂದೆಡೆ ಈಗ ನಾವು ಓದುವ ಕಲ್ಬರಹದ ಎರಡನೆಯ ಸಾಲನ್ನು ಮರಳಿ ಬರೆಯಲಾಗಿದೆ. ಮಗದೊಂದೆಡೆ ಬೇರೆ ಬೇರೆ ಮೂರು ಸೊಲ್ಲುಗಳನ್ನು ಒಂದೆಡೆ ತಂದು ಬರೆಯಲಾಗಿದೆ. ಕಲ್ಬರಹಗಳನ್ನು ಮರಳಿ ಬರೆಯುವುದು, ನಕಲು ಮಾಡುವುದು ಕನ್ನಡನಾಡಿನಲ್ಲಿ ಅಲ್ಲಲ್ಲಿ ಕಂಡು ಬರುವುದಾದರೂ ಅದಕ್ಕೆ ಗೊತ್ತಾದ ಕಾರಣಗಳನ್ನು ತಿಳಿದವರು ಹೇಳುತ್ತಾರೆ. ಹಿಂದೆ ಬರೆದ ಕಲ್ಬರಹ ಅಳಿದು ಹೋದೀತು ಎಂಬ ದಿಗಿಲಿನಿಂದ ಅದನ್ನು ಮುಂದೆ ಯಾರೋ ಬೇರೆ ಕಡೆ ಬರೆಸಿರುವುದುಂಟು. ಆದರೆ ಬಾದಾಮಿಯ ಈ ಕಲ್ಬರಹದ ಸಾಲುಗಳನ್ನು ಏಕೆ ಹೀಗೆ ಬೇರೆ ಬೇರೆ ಕಡೆ ತುಂಡುತುಂಡು ಮಾಡಿ ಬರೆಯಲಾಗಿದೆ ಎಂಬುದನ್ನು ವಿವರಿಸಿ ಹೇಳುವುದು ಆಗದ ಮಾತು.ಆದರೆ ಹೀಗೆ ಬರೆದದ್ದರಿಂದ ಕನ್ನಡ ಬರೆವಣಿಗೆಯು ಬೆಳೆದು ಬಂದ ಬಗೆಯನ್ನು ತಿಳಿಯಲು ನೆರವಾಗಿದೆ.

ಈ ತುಂಡು ಬರಹಗಳ ಜೊತೆಗೆ ಕಲ್ಬರಹವನ್ನು ಬರೆದವರು ಹೆಸರುಗಳೂ ಕಂಡು ಬಂದಿವೆ. ಶೆಟ್ಟರ್ ಅವರು ಈ ಮಾಹಿತಿಯ ಮೂಲಕ ಈ ಬರಹಗಳನ್ನು ನಮಗೆ ನೀಡಿದವನನ್ನು ಶ್ರೀಅಕ್ಷರಮೇರು ಎಂದು ಗುರುತಿಸಿದ್ದಾರೆ.ಶೆಟ್ಟರ್ ಅವರು ಈ ಶ್ರೀಅಕ್ಷರಮೇರುವೇ ಬಾದಾಮಿಯ ಕಲ್ಬರಹದ ಲಿಪಿಕಾರನೆಂದು ಗುರುತಿಸಿದ್ದು ಮತ್ತು ಅವನು ಕಟ್ಟಿಕೊಟ್ಟ ಲಿಪಿಗುರುತು ಮತ್ತು ಅವುಗಳ ಜೋಡಣೆಯ ಮಾದರಿಯನ್ನು ಮರಳಿ ಕಂಡುಕೊಂಡದ್ದು ಅವರ ಈ ಬರಹದ ತುದಿಗುರುತಾಗಿದೆ.ಕಲ್ಬರಹಗಳ ನುಡಿಮೈಯನ್ನು ಕಟ್ಟಿಕೊಟ್ಟವರ ಬಗೆಗೆ ನಮಗೆ ಅಲ್ಲಲ್ಲಿ.ಮಾಹಿತಿ ದೊರಕುವುದುಂಟು. ಶಾಸನ ಕವಿಗಳೆಂದು ಅವರನ್ನು ಗುರುತಿಸುವುದಿದೆ.ಜನ್ನ, ಬೊಪ್ಪಣ ಪಂಡಿತ ಮುಂತಾದವರು ಈ ಸಾಲಿನಲ್ಲಿದ್ದಾರೆ. ಆದರೆ ಕಲ್ಬರಹಗಳ ಲಿಪಿ ಮೈಯನ್ನು ಕಟ್ಟಿಕೊಟ್ಟವರ ಬಗೆಗೆ ನಮಗೆ ತಿಳಿದಿರುವುದು ಇಲ್ಲವೆನ್ನುವಷ್ಟು ಕಡಿಮೆ. ಹಾಗಾಗಿ ಶ್ರೀಅಕ್ಷರಮೇರುವನ್ನು ಮರಳಿ ಹುಡುಕಿಕೊಟ್ಟ ಗರಿಮೆ ಶೆಟ್ಟರ್ ಅವರಿಗೇ ಸಲ್ಲಬೇಕು. ಇದು ಇವನ ದಿಟವಾದ ಹೆಸರೋ ಇಲ್ಲವೇ ಬಿರುದೋ ಎಂಬುದು ಗೊತ್ತಾಗುತ್ತಿಲ್ಲ. ಸರಿಸುಮಾರು ನೂರು ಲಿಪಿಗುರುತುಗಳನ್ನು ಬರೆದ ಹಿರಿಮೆ ಈತನಿಗೆ ಸಲ್ಲುತ್ತದೆ. ಅಲ್ಲದೆ ಒಂದೆ ಕಲ್ಬರಹದ ಬೇರೆ ಬೇರೆ ತುಂಡುಗಳನ್ನು ಬೇರೆಬೇರೆ ಕಡೆ ಬರೆದಿರುವುದು ಮತ್ತು ಒಂದೇ ಲಿಪಿಗುರುತು ಕಲ್ಬರಹದ ಬೇರೆ ಬೇರೆ ಕಡೆ ಬಂದಿರುವುದು ಇವೆಲ್ಲವನ್ನೂ ಕುಡಿಸಿ ನೋಡಿದಾಗ ಲಿಪಿಗುರುತು ಮೂಡುವ ನೆಲೆಯನ್ನು ಕಂಡುಕೊಳ್ಳಲು ಒಳನೋಟಗಳು ಸಿಗುತ್ತವೆ. ಎತ್ತುಗೆಗಾಗಿ ನೋಡಿದರೆ ನ್/ನ ಉಲಿಯ ಇಪ್ಪತ್ತೆರಡು ಮಾದರಿಗಳು ಈ ಕಲ್ಬರಹಗಳಲ್ಲಿ ದೊರಕುತ್ತವೆ. (ಇವೆಲ್ಲದರ ಪಟ್ಟಿಯನ್ನು ವಿವರವಾಗಿ ತಯಾರಿಸಿ ಈ ಬರಹದಲ್ಲಿ ಶೆಟ್ಟರ್ ಅವರು ಒದಗಿಸಿದ್ದಾರೆ) ಈ ಬಗೆಗಳಲ್ಲಿ ಯಾವುದು ನೆಲೆನಿಂತಿತು ಹಾಗೂ ಮುಂದುವರೆಯಿತು ಎಂಬುದನ್ನು ಅರಿಯಲು ಬೇರೆ ಬೇರೆ ಕಾಲಮಾನದ ಕಲ್ಬರಹಗಳನ್ನು ಒಟ್ಟಿಗೆ ಇರಿಸಿನೋಡಬೇಕಾಗುತ್ತದೆ. ಇದೆಲ್ಲ ಮುಂದೆ ನಡೆಯಬೇಕಾದ ಕೆಲಸಗಳು.

ಎಲ್ಲಕ್ಕಿಂತ ಹೆಚ್ಚಾಗಿ ಶೆಟ್ಟರ್ ಅವರು ಕನ್ನಡ ಲಿಪಿ ಗುರುತುಗಳನ್ನು ಗಣಕವು ಓದಲು ನೆರವಾಗುವಂತೆ ಅವುಗಳನ್ನು ಒಡೆದು ನೋಡುವ ಒಂದು ಹಾದಿಯನ್ನು ಇಲ್ಲಿ ತೆರೆದಿದ್ದಾರೆ.ಲಿಪಿಯ ಗುರುತನ್ನು ಎಡಬಲ, ಮೇಲೆಕೆಳಗೆ ಹೀಗೆ ನಾಲ್ಕು ತುಂಡುಗಳನ್ನಾಗಿ ಮಡುವುದುಒಂದು ಹಂತ. ಬಳಿಕ ಸೇರ್ಪಡೆಯಗುವ ಚಿಕ್ಕ ಗುರುತಗಳ ಆಕಾರವನ್ನು ಏರಿಕೆ,ಇಳಿಕೆ,ಬಾಗು,ಚಾಚು ಹೀಗೆ ಹಲವು ಬಗೆಯಲ್ಲಿ ಬಣ್ಣಿಸುವುದು ಇನ್ನೊಂದು ಹಂತ, ಹೀಗೆ ಮಾಡುವುದರಿಂದ ಗಣಕ ಕಾರ್ಯವಾಹಿಯನ್ನು ಬರೆಯುವವರಿಗೆ ಸುಳುವಾದ ದಾರಿಯನ್ನು ಹುಡುಕಿದಂತಾಗಿದೆ. ಆಂದರೆ ಕಲ್ಬರಹದ ಅಚ್ಚನ್ನು ಗಣಕಕ್ಕೆ ತೋರಿಸಿದರೆ,ಉಣಿಸಿದರೆ ಅದು ಲಿಪಿಗುರುತುಗಳನ್ನು ನಾವು ಓದುವ ಕನ್ನಡದ ಲಿಪಿಗುರುತುಗಳನ್ನಾಗಿ ಬದಲಿಸಿ ತೋರಿಸಿಕೊಡಬಲ್ಲುದು. ಇದು ತಪ್ಪುಗಳಾಗದ ನೆಲೆ ಎಂದೇನೂ ಅಲ್ಲ. ಆದರೆ ಸಾಕಷ್ಟು ಹೆಚ್ಚಿನ ಮಾದರಿಗಳನ್ನು ಗಣಕಕ್ಕೆ ಉಣಿಸುವ ಮೂಲಕ ಮೊದಲಿದ್ದ ಲಿಪಿಯೊಂದನ್ನು ಗುರುತಿಸುವುದನ್ನು ಅದಕ್ಕೆ ಕಲಿಸಬಹುದಾಗಿದೆ. ಇಂಡಿಯಾದ ಲಿಪಿಗಳನ್ನು ಹೀಗೆ ಗಣಕಗಳ ಮೂಲಕ ಓದುವ ಕಾರ್ಯವಾಹಿಯನ್ನು ತಯಾರಿಸುವ ಕೆಲಸ ಹಲವೆಡೆ ನಡೆಯುತ್ತಿದೆ. ಟೋಕಿಯೋ ವಿಶ್ವವಿದ್ಯಾಲಯದಲ್ಲಿ ಈ ನಿಟ್ಟನಲ್ಲಿ ಡಾ. ಪೆರಿ ಭಾಸ್ಕರ್‌ರಾವ್ ಅವರು ಮಾಡಿರುವ ಕೆಲಸ ಈಗಾಗಲೇ ಪರಿಚಿತವಾಗಿದೆ. ಆದರೆ ಕನ್ನಡ ಲಿಪಿಯ ಮಾಹಿತಿಗಳು ಆ ಕೆಲಸಕ್ಕೆ ತಕ್ಕಷ್ಟು ದೊರೆತಿಲ್ಲ.

ಶೆಟ್ಟರ್ ಅವರು ಲಿಪಿಗುರುತುಗಳನ್ನು ಬಿಡಿಗೊಳಿಸಿರುವುದೇಕೆ?ಆ ಮೂಲಕ ಬೇರೆ ಬೇರೆ ತುಂಡುಗಳನ್ನು ಓದಿ ಗಣಕ ಲಿಪಿಗುರುತನ್ನು ಮರಳಿ ಕಟ್ಟುವ ಸಲುವಾಗಿ ತಾನೇ?ಈ ಬಿಡಿ ಗುರುತುಗಳು ಬೇರೆ ಬೇರೆ ಲಿಪಿಗುರುತುಗಳಲ್ಲಿ ಮತ್ತೆಮತ್ತೆ ಕಾಣಿಸಿಕೊಳ್ಳುವುದರಿಂದ ಗಣಕವು ಲಿಪಿಯ ಕಟ್ಟೋಣವನ್ನು ಅರಿಯಬಲ್ಲುದು.ಎತ್ತುಗೆಗಾಗಿ ಉ ಉಲಿಯ ಚಿಕ್ಕಗುರುತು ಬೇರೆಬೇರೆ ತಡೆಯುಲಿಗಳಿಗೆ ಸೇರುವಾಗ ಏನಾಗುತ್ತದೆ.ಇಂದು ನಮಗೆ ಅದು ಕೊಂಬು(ು) ಎಂಬ ಚಿಕ್ಕ ಗುರುತಿನೊಡನೆ ಬಳಕೆಗೆ ಬಂದಿದೆ.ಆದರೆ ಇದನ್ನು ಎಲ್ಲ ಕಡೆಯೂ ಒಂದೇ ರೀತಿಯಲ್ಲಿ ಇಲ್ಲವೇ ಅಷ್ಟಿಷ್ಟು ಬದಲಾವಣೆಗಳೊಡನೆ ಲಿಪಿಕಾರರು ಬಳಸಿದ್ದಾರೆ. ಈ ವಿನ್ಯಾಸವನ್ನು ಮತ್ತು ಅದರ ವಿಕಲ್ಪಗಳನ್ನು ಗುರುತಿಸಿದರೆ ಆಗ ಒಟ್ಟು ಬರಹವನ್ನು ಗಣಕವು ಓದುವಂತೆ ಮಾಡಬಹುದು.

ಕನ್ನಡ ಲಿಪಿಯ ಬರವಣಿಗೆಯಲ್ಲಿ ಇರುವ ಇಕ್ಕಟ್ಟೊಂದನ್ನು ಈಗ ನೋಡೋಣ. ಬೇರೆಬೇರೆ ಉಲಿಗಳ ಗುರುತುಗಳನ್ನು ಬರೆಯುವಾಗ ಕೈಚಲನೆಯು ಒಂದೆ ದಿಕ್ಕಿನಲ್ಲಿ ಚಲಿಸುವುದಿಲ್ಲ. ಎತ್ತುಗೆಗಾಗಿ ಅ ಉಲಿಯನ್ನು ಬರೆಯುವಾಗ ಕೈ ಚಲನೆ ಎಡಕ್ಕೆ (ಅಪ್ರದಕ್ಷಿಣೆ= ಆಂಟಿ ಕ್ಲಾಕ್ ವೈಸ್) ನಡೆದರೆ ಇ ಉಲಿಯನ್ನು ಬರೆಯುವಾಗ ಕೈ ಚಲನೆ ಬಲಕ್ಕೆ (ಪ್ರದಕ್ಷಿಣೆ= ಕ್ಲಾಕ್ ವೈಸ್) ಚಲಿಸುತ್ತದೆ. ಇಂಗ್ಲಿಶ್ ಕೈ ಬರಹದ ಲಿಪಿಗಳನ್ನು (ಕರ್ಸಿವ್ ರೈಟಿಂಗ್) ಗಮನಿಸಿ. ಅಲ್ಲಿ ಕೈ ಚಲನೆ ಒಂದೇ ದಿಕ್ಕಿನ ಕಡೆಗೆ ಓಡುತ್ತದೆ. ಆದರೆ ಕನ್ನಡ ಬರಹ ಹಾಗಿಲ್ಲ. ಈಗ ಇದು ದಿಟ. ಆದರೆ ಹಿಂದೆಯೂ ಅಂದರೆ ಬಾದಾಮಿಯ ಕಲ್ಬರಹಗಳು ಹುಟ್ಟಿದ ಹೊತ್ತಿನಲ್ಲೂ ಹೀಗೇ ಇತ್ತೇ?ಇದನ್ನು ತಿಳಿಯಲು ದಾರಿಗಳಿದ್ದಂತಿಲ್ಲ. ಕಲ್ಲಿನ ಮೇಲೆ ಲಿಪಿಗುರುತುಗಳನ್ನು ಕೆತ್ತುವಾಗ ಬೇಕಾಬಿಟ್ಟಿ ಕೆತ್ತಿರಲಾರರು. ಎಲ್ಲಿಂದ ಮೊದಲು ಮಾಡಬೇಕು ಎನ್ನುವುದಕ್ಕೆ ಕೆಲವು ಕಟ್ಟಳೆಗಳು

ಇದ್ದಿರಬೇಕು. ಅದನ್ನು ಈಗ ಹುಡುಕಿ ತೆಗೆಯುವುದು ಆಗದ ಮಾತೆಂದು ತೋರುತ್ತದೆ. (ಈಗಲೂ ಕನ್ನಡ ಬರವಣಿಗೆಯನ್ನು ಕಲಿಯುವವರು ಕೈಚಲನೆಯು ಒಂದೇ ದಿಕ್ಕಿನಲ್ಲಿ ಓಡದೇ ಇರುವುದರಿಂದ ಹಲವು ಅಡಚಣೆಗಳನ್ನು ಎದುರಿಸುತ್ತಾರೆ. ಆದರೆ ಹೊಸ ತಂತ್ರಜ್ಞಾನದ ನೆರವಿನಿಂದ ಕೈಚಲನೆಯ ದಿಕ್ಕು ಈಗ ಮುಂಚೂಣಿಗೆ ಬರುವುದೇ ಇಲ್ಲವಲ್ಲ. ಕೀಲಿ ಒತ್ತಿದರೆ ಲಿಪಿಗುರುತು ಮೂಡಿಬಿಡುತ್ತದೆ) ಗಣಕಗಳು ಕಲ್ಬರಹದ ಬರವಣಿಗೆಯ ಲಿಪಿಗುರುತುಗಳನ್ನು ಓದುವಂತೆ ಮಾಡಲು ಕೈಚಲನೆಯ ದಿಕ್ಕಿನ ಅರಿವು ಬೇಕೋ ಬೇಡವೋ ನನಗೆ ಗೊತ್ತಿಲ್ಲ.

ಶ್ರೀ ಅಕ್ಷರಮೇರು ಬರೆದ ಲಿಪಿಗುರುತುಗಳಲ್ಲಿ ಒಂದೆರಡು ನಮ್ಮ ಚರ್ಚೆಗೆ ದಾರಿ ಮಾಡಿಕೊಡುವಂತಿವೆ. ಒಂದಕ್ಕಿಂತ ಹೆಚ್ಚು ತಡೆಯುಲಿಗಳು ಒಂದಾದ ಮೇಲೆ ಒಂದರಂತೆ ಬರುವ ಉಲಿಗುಂಪುಗಳ ಮಾತನ್ನು ಮೊದಲಲ್ಲಿ ಹೇಳಿದೆನಷ್ಟೆ. ಈ ಉಲಿಗುಂಪಿನಲ್ಲಿ **ರ್** ಉಲಿಯು ಮೊದಲ್ಲಿ ಬಂದರೆ ಆಗ ಅದನ್ನು ಬರೆಯಲು ಈಗ ಕನ್ನಡದಲ್ಲಿ ಎರಡು ದಾರಿಗಳಿವೆ. ಒಂದು: **ರ್** ಉಲಿಯ ಲಿಪಿಗುರುತನ್ನೇ ಬಳಸುವುದು. ಎರಡು: ಅರ್ಕಾರೊತ್ತು ಎಂದು ಕರೆಯಲಾಗುವ **ರ್** ಉಲಿಯ ಚಿಕ್ಕ ಗುರುತನ್ನು ಬಳಸುವುದು. **ಸೂರ್ಯ** ಮತ್ತು **ಸೂರ್ಯ** ಎಂಬ ಪದಗಳ ಬರಹ ರೂಪಗಳನ್ನು ನೋಡಿದರೆ ಇದು ತಿಳಿಯುತ್ತದೆ.ಶ್ರೀಅಕ್ಷರಮೇರು ತನ್ನ ಬರಹದಲ್ಲಿ ಮೊದಲನೆಯ ದಾರಿಯನ್ನೇ ಆಯ್ದುಕೊಂಡಿದ್ದಾನೆ. **ರ್** ಉಲಿಯ ಚಿಕ್ಕ ಗುರುತನ್ನು ಲಿಪಿ ಗುರುತಿನ ಮೇಲೆಬಲಬದಿಗೆ(ಓದುವವರ ಬಲಬದಿ) ಇರಿಸಿದ್ದಾನೆ. (**ರ್ಯ, ರ್ಯಂ, ಮತ್ತು ರ್ಕ**ಉಲಿಗುಂಪುಗಳ ಕಲ್ಬರಹದ ಲಿಪಿಗುರುತುಗಳನ್ನು ನೋಡಿ. ಇದು ಹೊತ್ತಗೆಯ ಕೊನೆಯಲ್ಲಿರುವ ಪಟ್ಟಿಕೆಯಲ್ಲಿದೆ.) ಇದು ಇಂದು ದೇವನಾಗರಿ ಲಿಪಿಯ ಬರವಣಿಗೆಯಲ್ಲಿ ಬಳಸುವ ಬಗೆ. ಅಂದರೆ ಶ್ರೀಅಕ್ಷರಮೇರು ಕಟ್ಟಿದ ಲಿಪಿಗುರುತಗಳಲ್ಲಿ ತಡೆಯುಲಿಗಳ ಕೂಡುಬರವಣಿಗೆಗೆ ಒಂದು ಮಾದರಿ ಇದ್ದಂತೆ ತೋರುತ್ತದೆ. ಈ ಬಗೆಗೆ ಹೆಚ್ಚಿನ ಹುಡುಕಾಟ ಬೇಕಾಗಿದೆ.

ಹೀಗಿದ್ದರೂ ಶ್ರೀಅಕ್ಷರಮೇರು **ರ್** ಉಲಿ (ಇದು ತಡೆಯುಲಿ) ಮತ್ತು **ಋ** ಉಲಿಗಳ (ಇದು ತೆರೆದ ಉಲಿ) ಗುರುತುಗಳಿಗೆ ಬೇರೆ ಬೇರೆ ಚಿಕ್ಕಗುರುತುಗಳನ್ನು ಇರಿಸಿಕೊಂಡಿದ್ದನೇ ಇಲ್ಲವೇ ಒಂದೇ ಗುರುತನ್ನು ಬಳಸಿದ್ದನೇ ಎಂಬುದನ್ನು ಮತ್ತಷ್ಟು ಹುಡುಕಿನೋಡಬೇಕಾಗಿದೆ. ಡಾ.ಶೆಟ್ಟರ್ ಅವರು ಇವೆರಡಕ್ಕೂ ಬೇರೆಬೇರೆ ಎನಿಸುವ ಚಿಕ್ಕಗುರುತುಗಳನ್ನು ಬಳಸಿದ್ದಾನೆ ಎಂಬಂತೆ ಗುರುತಿಸುತ್ತಾರೆ. ಇದ್ದೀತು.ಆದರೆ ಮುಂದೆ ಕನ್ನಡ ಕಲ್ಬರಹಗಳ ಲಿಪಿಗುರುತುಗಳು ಬೆಳೆದು ಬಂದ ಬಗೆಯ ಹಿನ್ನೆಲೆಯಲ್ಲಿ ಈ ಕೇಳ್ವಿಯನ್ನು ಇನ್ನೂ ಬಗೆದು ನೋಡಬಹುದಾಗಿದೆ.

ಬಾದಾಮಿಯ ಹೆಸರಾದ ಕಲ್ಬರಹವನ್ನು ನೆಲೆಯಾಗಿರಿಸಿಕೊಂಡ ಈ ಬರಹ ಹಲವು ಹೊಸ ಬಗೆಯ ಓದುಗಳಿಗೆ, ಅರಿವಿನ ನೆಲೆಗಳಿಗೆ ದಾರಿಯಾಗಬಲ್ಲುದು. ಅದನ್ನು ಬಲ್ಲವರು ಮುಂದುವರೆಸಬೇಕಾಗಿದೆ. ಕನ್ನಡದ ಅರಿಮೆಯ ವಲಯದಲ್ಲಿ ಹೊಸದನ್ನು ಗಮನಸಿದರೂ ಅದನ್ನು ಬೆಳೆಸುವ ,ಕಲಿಕೆಯ ವಲಯದಲ್ಲಿ ಅದನ್ನು ಇರಿಸಿ ತಿಳಿಸಿಕೊಡುವ ಕೆಲಸ ನಾವು ಬಯಸಿದ ಬಗೆಯಲ್ಲಿ ಆಗುತ್ತಿಲ್ಲ. ಇದರಿಂದ

ಹಲವು ಕೊರತೆಗಳು ಉಂಟಾಗಿವೆ. ಹೆಚ್ಚಿನ ಕಲಿಕೆಯಲ್ಲಿ ತೊಡಗಿಕೊಳ್ಳುವವರು ಹೇಳಿದ್ದನ್ನೇ ಹೇಳುವ ಗಿಳಿಗಳಾಗಿ ಬಿಡುತ್ತಿದ್ದಾರೆ. ಇನ್ನಾದರೂ ಇದು ಬದಲಾಗಬೇಕು.ಡಾ.ಶೆಟ್ಟರ್ ಅವರ ಈ ಕೆಲಸವನ್ನು ಬೇರೆಯವರು ಮುಂದುವರೆಸಬೇಕು; ಕನ್ನಡ ಕಲ್ಬರಹಗಳ ಓದಿನ ವಲಯಕ್ಕೆ ಚಿಕ್ಕವರು ಎದೆಗುಂದದೆ ಒಳಬಂದು ತಮ್ಮ ತಿಳಿವನ್ನು ಹೆಚ್ಚಿಸಿಕೊಳ್ಳುವಂತೆ ಆಗಬೇಕು.

ಈ ಬರವಣಿಗೆಯನ್ನು ಓದಿ ನನ್ನ ಕೆಲವು ಮಾತುಗಳನ್ನು ಬರೆಯಲು ಹೇಳಿ ಡಾ. ಶೆಟ್ಟರ್ ಅವರು ನನ್ನ ಹೊಣೆಯನ್ನು ಹೆಚ್ಚಿಸಿದ್ದಾರೆ. ಜೊತೆಗೆ ಹೀಗೆ ಮಾಡಿ ಮನ್ನಣೆಯನ್ನೂ ನೀಡಿದ್ದಾರೆ. ಅದಕ್ಕಾಗಿ ಅವರಿಗೆ ನನ್ನ ನನ್ನಿಗಳು ಸಲ್ಲುತ್ತವೆ.

ನ್ಯಾಮತಿ ಪ್ರಭಣ್ಣನವರ ಕನ್ನಡ ಪದಕೋಶ

ಕನ್ನಡ ಪದಕೋಶಗಳನ್ನು ಹತ್ತಿರದಿಂದ ಬಲ್ಲವರಿಗೆ ನ್ಯಾಮತಿ ಪಂಡಿತ ಪ್ರಭಣ್ಣನವರ ಹೆಸರು ಗೊತ್ತಿರುತ್ತದೆ. ಅದರಲ್ಲೂ ಕನ್ನಡ ಸಾಹಿತ್ಯ ಪರಿಷತ್ತು ಹೊರತಂದಿರುವ ಕನ್ನಡ-ಕನ್ನಡ ನಿಘಂಟಿನ ಸಂಪುಟಗಳನ್ನು ನೋಡಿರುವವರು ಅವರ ಹೆಸರನ್ನು ಬಲ್ಲವರಾಗಿರುತ್ತಾರೆ. ಏಕೆಂದರೆ ಪರಿಷತ್ತು ತನ್ನ ಯೋಜನೆಯನ್ನು ಕೈಗೆತ್ತಿಕೊಳ್ಳುವ ಹೊತ್ತಿಗೆ ಪ್ರಭಣ್ಣನವರು ತಮ್ಮದೇ ಆದ ಪದಕೋಶವೊಂದನ್ನು ತಯಾರು ಮಾಡಿದ್ದರು ಮತ್ತು ಅದನ್ನು ಹೊರತರಲು ಆ ಹೊತ್ತಿಗೆ ಪರಿಷತ್ತಿನ ನೆರವನ್ನು ಕೂಡ ಕೋರಿದ್ದಂತೆ ತೋರುತ್ತದೆ. ಅವರ ಪದಕೋಶದ ಮೊದಲ ಪ್ರತಿ ಎನ್ನಬಹುದಾದ್ದು ಪರಿಷತ್ತಿನಲ್ಲೇ ದೊರಕಿದೆ. ಆದರೆ ಪರಿಷತ್ತಿನ ಪದಕೋಶ ರಚನೆ ಮೊದಲಾಗುವ ಹೊತ್ತಿಗೆ ಪ್ರಭಣ್ಣನವರು ತೀರಿಕೊಂಡಿದ್ದರಿಂದ ಅವರ ನೆರವು ಈ ಯೋಜನೆಗೆ ದೊರೆಯುವುದು ಆಗಲಿಲ್ಲ. ಆದರೆ ಅವರು ತಯಾರಿಸಿದ ಪದಕೋಶದ ನೆರವು ಮಾತ್ರ ಈ ಸಂಪುಟಗಳ ರಚನೆಗೆ ದೊರಕಿದೆ.

ಹತ್ತೊಂಬತ್ತನೆಯ ಶತಮಾನದ ಕೊನೆ ಮತ್ತು ಇಪ್ಪತ್ತನೆಯ ಶತಮಾನದ ಮೊದಲಲ್ಲಿ ಕನ್ನಡ ಕಲಿಸುವ ಕೆಲಸದಲ್ಲಿ ತೊಡಗಿದ್ದ ಹಲವು ಮೇಸ್ತ್ರುಗಳು ಪದಕೋಶದ ರಚನೆಗೆ ಮನಸ್ಸು ಮಾಡಿದ ಹಲವು ಉದಾಹರಣೆಗಳು ದೊರೆಯುತ್ತವೆ. ಇವರಲ್ಲಿ ಕೆಲವರು ಶಾಲೆಗಳಲ್ಲಿ ಕಲಿಸುತ್ತಿದ್ದವರು; ಮತ್ತೆ ಕೆಲವರು ಕಲಿಸುವವರಿಗೆ ತರಬೇತಿ ನೀಡುತ್ತಿದ್ದವರು. ಅದರಲ್ಲೂ ಹಳೆಗನ್ನಡ ಮತ್ತು ನಡುಗನ್ನಡದ ರಚನೆಗಳನ್ನು ಓದಲು ನಿಗದಿ ಪಡಿಸುತ್ತಿದ್ದ ಹೊತ್ತಿನಲ್ಲಿ ಕಲಿಸುವವರಿಗೆ ಪದಕೋಶಗಳ ನೆರವು ಹೆಚ್ಚಾಗಿ ಬೇಕಾಗುತ್ತದೆಂಬುದು ಇವರೆಲ್ಲರ ತಿಳುವಳಿಕೆಯಗಿತ್ತು. ಇದು ಸರಿಯಾಗಿಯೇ ಇದೆ. ಕಿಟೆಲ್ ತನ್ನ ಕನ್ನಡ-ಕನ್ನಡ-ಇಂಗ್ಲಿಶ್ ಪದಕೋಶವನ್ನು ತಯಾರು ಮಾಡಿಕೊಟ್ಟಿದ್ದರೂ ಹಳಗನ್ನಡ- ನಡುಗನ್ನಡದ ಹತ್ತಾರು ರಚನೆಗಳನ್ನು ಆ ಹೊತ್ತಿಗೆ ತನ್ನ ಪದಕೋಶದ ರಚನೆಗೆ ಬಳಸಿಕೊಳ್ಳಲು ಆಗಿರಲಿಲ್ಲ. ಅಲ್ಲದೆ ಆತನಿಗೆ ಕನ್ನಡ ಆಡುನುಡಿಯ ಬಗೆಗಳ ಬಗೆಗೆ ಹೆಚ್ಚಿನ ಕುತೂಹಲ ಇದ್ದಂತೆ ತೋರುತ್ತದೆ. ಹಾಗಾಗಿ ತನ್ನ ಪಂಡಿತ ಪಡೆಯನ್ನು ಜನರಾಡುವ ನುಡಿಗಳಿಂದ ಮಾದರಿಗಳನ್ನು ಕೂಡಿ ಹಾಕಲು ಜನ ಒಂದೆಡೆ ಸೇರುವ ಸಂತೆ, ಜಾತ್ರೆಗಳಿಗೆ ಕಳಿಸುತ್ತಿದ್ದಂತೆ ತೋರುತ್ತದೆ. ಹಾಗಾಗಿ ಹಳಗನ್ನಡ, ನಡುಗನ್ನಡ ರಚನೆಗಳನ್ನು ಕಲಿಸುತ್ತಿದ್ದವರಿಗೆ ಕಿಟೆಲ್ ಪದಕೋಶದ ನೆರವು ಕಡಿಮೆ ಎನಿಸಿದ್ದಿರಬೇಕು; ಅದಕ್ಕಾಗಿ ತಮಗೆ ನೆರವಾಗುವ ಪದಕೋಶವೊಂದನ್ನು ಕಟ್ಟಿಕೊಳ್ಳಬೇಕು ಎಂದು ಕೆಲವರಾದರೂ ಮುಂದಾಗಿದ್ದಾರೆ. ಅಂತವರಲ್ಲಿ ನ್ಯಾಮತಿ ಪ್ರಭಣ್ಣನವರ ಹೆಸರು

ಮುಂಚೂಣಿಯಲ್ಲಿ ನಿಲ್ಲುತ್ತದೆ. (ಪ್ರೊ. ಎಂ. ಮರಿಯಪ್ಪ ಭಟ್ಟರು ಮದರಾಸು ವಿಶ್ವವಿದ್ಯಾಲಯುದ ವತಿಯಿಂದ ಕಿಟೆಲ್ ಪದಕೋಶವನ್ನು ಮರಳಿ ಅಚ್ಚಿಗೆ ತಯಾರಿಸುವಾಗ ಅದರಲ್ಲಿದ್ದ ಈ ಕೊರೆಯನ್ನು ಸರಿಪಡಿಸಲು ಹೆಚ್ಚು ಕೆಲಸ ಮಾಡಿದ್ದಾರೆ)

1928ರ ಹೊತ್ತಿಗಾಗಲೇ ತಯಾರಾಗಿದ್ದ ಈ ಪದಕೋಶ ಅಚ್ಚಾಗಿರಲಿಲ್ಲ. ಅದನ್ನೀಗ ಹಲವು ವರುಶಗಳ ದುಡಿಮೆಯ ಮೂಲಕ ಬಿದರಹಳ್ಳಿ ನರಸಿಂಹಮೂರ್ತಿ ಮತ್ತವರ ಗೆಳೆಯರು ಅಚ್ಚಿಗೆ ತಯಾರು ಮಾಡಿದ್ದಾರೆ. ಅದಕ್ಕಾಗಿ ಅವರು ಪಟ್ಟಿರುವ ಪಡಿಪಾಟಲುಗಳನ್ನು ಪ್ರಸ್ತಾವನೆಯ ಮಾತುಗಳಲ್ಲಿ ತಿಳಿಸಿದ್ದಾರೆ. ಪ್ರಭಣ್ಣನವರ ಬಗೆಗಿನ ಹೆಮ್ಮೆ ಮತ್ತು ಅವರು ಮಾಡಿದ ಕೆಲಸದ ಹಿರಿಮೆಯ ಅರಿವು ಇರುವುದರಿಂದಲೇ ಇಂತ ಹೊಣೆಯನ್ನು ಹೊರಲು ಆಗಿದೆ. ಈ ಬಗೆಯ ಕೆಲಸಗಳಿಗೆ ಬೇಕಾದ ತಾಳ್ಮೆ ಇರುವುದರಿಂದಲೇ ಈ ಕೆಲಸ ಮುಗಿಸುವುದಕ್ಕೆ ಆಗಿದೆ. ಇದು ಇದ್ದ ಕೈಬರಹದ ಪ್ರತಿಯನ್ನು ಅಚ್ಚಿಗೆ ತಯಾರು ಮಾಡುವ ಕೆಲಸವಾಗಿರಲಿಲ್ಲ. ದೊರಕಿದ ಪ್ರತಿಯನ್ನು ಸರಿಪಡಿಸುವುದು, ಕೊರೆಬಿದ್ದ ಕಡೆಗಳನ್ನು ತುಂಬಿಕೊಳ್ಳುವುದು, ಪ್ರಭಣ್ಣನವರು ಅನುಸರಿಸಿದ ಪದಕೋಶ ಕಟ್ಟುವ ಬಗೆಯನ್ನು ಮರಳಿ ಕಂಡುಕೊಳ್ಳುವುದು ಇವೇ ಮೊದಲಾದ ಕೆಲಸಗಳನ್ನು ತುಂಬ ಅಚ್ಚುಕಟ್ಟಾಗಿ ಮಾಡಿದ್ದಾರೆ.

ಪದಕೋಶವನ್ನು ಕಟ್ಟುವ ಹಲವು ಬಗೆಗಳಿವೆ. ಪದವನ್ನು ನೀಡಿ ಅದರ ತಿರುಳನ್ನು ಗುರುತು ಮಾಡುವುದು ಮಾತ್ರವೇ ಪದಕೋಶದ ಕೆಲಸವಲ್ಲ. ಪದ ಎಂದರೇನು ಎಂಬುದು ಈಗಲೂ ನಿಕ್ಕಿಯಾಗಿ ಹೇಳಲು ಆಗುತ್ತಿಲ್ಲ. ಪದಕೋಶದಲ್ಲಿ ಮೂಲ ನಮೂದಾಗಿ ಒಂದು ಪದ ಇರಬೇಕು ಎನ್ನುತ್ತೇವೆ. ಅದು ತಿರುಳು ಇರುವ ಪದವಾಗಿರ ಬಹುದು ಇಲ್ಲವೇ ಪದವನ್ನು ಕಟ್ಟುವ ಕೆಲಸದಲ್ಲಿ ನೆರವಾಗುವ ಪ್ರತ್ಯಯಗಳಾಗಿರ ಬಹುದು. ಇವೆಲ್ಲವೂ ಮೂಲ ನಮೂದುಗಳಾಗಿಯೇ ಬರುತ್ತವೆ. ಇದನ್ನು ಪ್ರಭಣ್ಣನವರು ತಿಳಿದವರಾಗಿದ್ದರು. ಅದರೆ ಪದಕ್ಕಿಂತ ದೊಡ್ಡ ರಚನೆಗಳಲ್ಲಿ ಕೂಡುಪದ (=ಸಮಾಸ) ಮತ್ತು ಪದಕಂತೆಗಳ ನಡುವೆ ಗೆರೆ ಎಳೆದುಕೊಳ್ಳುವುದು ಪದಕೋಶ ಕಟ್ಟುವವರಿಗೆ ಸವಾಲಿನ ಕೆಲಸ. ಉದಾಹರಣೆಗೆ ಪ್ರಭಣ್ಣನವರ ಕೋಶದಲ್ಲಿರುವ **ಕನಸುಕಾಣದರ್ ಪಿರಿಯ** (=ಬ್ರಹ್ಮ) ಎಂಬ ನಮೂದು. ಇದೊಂದು ಪದಕಂತೆ. ಪದಕೋಶಗಳು ಹೀಗೆ ಪದಕಂತೆಗಳಿಗಳನ್ನು ನಮೂದುಗಳನ್ನಾಗಿ ನೀಡುವುದಿಲ್ಲ. ಹೀಗೆಯೇ ಪದರೂಪಗಳನ್ನು ಗುರುತು ಮಾಡುವಾಗ ಕೂಡ ಕೆಲವು ಸಮಸ್ಯೆಗಳನ್ನು ಪಂಡಿತ ಪ್ರಭಣ್ಣನವರು ಎದುರಿಸಿದಂತಿದೆ. ಅದಕ್ಕಾಗಿಯೇ ಅವರು ಕೆಲವು ಕಡೆ ನಮೂದುಗಳಿಗೆ ತಿರುಳನ್ನು ನೀಡದೇ ಬಿಟ್ಟಿರುವುದೂ ಉಂಟು. ಒಂದಿದೆ, ಇದು ಕೂಡುಪದವಾಗಿರದೆ ಒಂದು ಪದಕಂತೆಯಾಗಿದೆ. ಈ ಬಗೆಯ ಗೋಜಲುಗಳು (ಇವನ್ನು ಗೋಜಲು ಎಂದು ಕರೆಯುವುದು ಸರಿಯಾಗಲಾರದು.ಇರಲಿ) ಇಂದಿನ ಪದಕೋಶಗಳಲ್ಲೂ ತಲೆಹಾಕುತ್ತಿವೆ. ಎಂಬತ್ತು ವರುಶಗಳ ಹಿಂದಿನ ಪದಕೋಶದಲ್ಲಿ ಕಂಡದ್ದಕ್ಕೆ ಈಗ ಕೊರಗುವುದು ಸರಿಯಲ್ಲ. ಒಟ್ಟರೆ ಕನ್ನಡದ ಹಳೆಯ ರಚನೆಗಳನ್ನು ಕಲಿಯುತ್ತಿರುವವರಿಗೆ ನೆರವಾಗ ಬೇಕು ಎನ್ನುವುದು ಪ್ರಭಣ್ಣನವರ ಪದಕೋಶದ ಮೂಲ ಗುರಿ. ಅದನ್ನು ನಿರ್ವಹಿಸಲು ಯಾವ ದಾರಿ ಹಿಡಿಯಬೇಕೋ ಅದನ್ನು ಅವರು ಮಾಡಿದ್ದಾರೆ.

ಪದಕೋಶದ ನಮೂದುಗಳನ್ನು ಕಂಡುಕೊಳ್ಳಲು ಪ್ರಭಣ್ಣನವರು ನೋಡಿರುವ ಆಕರಗಳು ಅವರ ಓದಿನ ಹರವನ್ನು ತೋರಿಸುತ್ತವೆ. ಆ ಎಲ್ಲ ಆಕರಗಳನ್ನು ನೋಡಿ ನಮೂದುಗಳನ್ನು ಆಯ್ದು, ಆ ನಮೂದುಗಳು ಇರುವ ಉಲ್ಲೇಖಗಳನ್ನು ಪಟ್ಟಿ ಮಾಡಿ ಬಳಿಕ ತಿರುಳನ್ನು ಗುರುತು ಮಾಡುವ ಕೆಲಸವನ್ನು ಮಾಡಿದ್ದಾರೆ. ನಮೂದುಗಳಿಗೆ ಇರುವ ಹಲವಾರು ತಿರುಳುಗಳನ್ನು ಪಟ್ಟಿ ಮಾಡಿದ್ದಾರೆ. ತದ್ಭವ ರೂಪಗಳಾಗಿದ್ದರೆ ಅವುಗಳ ತತ್ಸಮಗಳನ್ನು ಹೇಳಿದ್ದಾರೆ. ಇದೆಲ್ಲವೂ ನುಡಿಯ ಒಳ ಹರವಿನ ಆಳವಾದ ಅರಿವಿರುವವರಿಗೆ ಮಾತ್ರ ಆಗುವ ಕೆಲಸ; ಜೊತೆಗೆ ದಣಿವಿಲ್ಲದ ದುಡಿಮೆಯೂ ಬೇಕಾಗುತ್ತದೆ. ಇವೆಲ್ಲವನ್ನೂ ಪ್ರಭಣ್ಣನವರು ಹೊಂದಿದ್ದರು ಎಂಬುದಕ್ಕೆ ಅವರ ಈ ಕೋಶದ ಪುಟಪುಟಗಳೂ ಪುರಾವೆ ನೀಡುತ್ತವೆ.

ಈಗಣ ನಮ್ಮ ತಿಳಿವಿನ ಹಿನ್ನೆಲೆಯಲ್ಲಿ ಪ್ರಭಣ್ಣನವರು ಪದಕೋಶದ ಕೊರತೆಗಳನ್ನು ಪಟ್ಟಿ ಮಾಡುವುದು ಸುಲಭ. ಅದರೆ ಅದು ಈಗ ಆಗಬೇಕಾದ ಕೆಲಸವಲ್ಲ. ಹಾಗೆ ನೋಡಿದ್ದರೆ ಪ್ರಭಣ್ಣನವರು ತಯಾರಿಸಿದ್ದ ಪದಕೋಶದಲ್ಲಿ ಇದ್ದ ಹಲವು ಕೊರತೆಗಳನ್ನು ಈಗಿನ ಸಂಪಾದಕರು ಕಡಿಮೆ ಮಾಡುವುದಕ್ಕೆ ದುಡಿದಿದ್ದಾರೆ. ಗೊತ್ತಿಲ್ಲದಿದ್ದ ಆಕರಗಳನ್ನು ಹುಡುಕಿ ತೆಗೆಯುವುದು, ಕೈ ಬರಹದ ತಪ್ಪುಗಳನ್ನು ಸರಿಪಡಿಸುವುದು, ತಿರುಳುಗಳನ್ನು ನೀಡುವಲ್ಲಿ ಉಳಿದಿದ್ದ ಕೊರೆಗಳನ್ನು ತುಂಬುವುದು ಇವೇ ಮೊದಲಾದ ಕೆಲಸಗಳನ್ನು ಸರಿಪಡಿಸಿದ್ದಾರೆ. ಇದು ಹೆಚ್ಚೂ ಕಡಿಮೆ ಹೊಸ ಪದಕೋಶವೊಂದನ್ನು ಕಟ್ಟುವಷ್ಟೇ ದುಡಿಮೆಯನ್ನು ಬೇಡುವ ಕೆಲಸ.

ಪ್ರಭಣ್ಣನವರ ಪದಕೋಶ ಪರಿಷತ್ತಿನ ಪದಕೋಶದ ಆಕರಗಳ ಪಟ್ಟಿಯಲ್ಲಿ ಒಂದಾಗಿ ಸೇರಿದೆ. ಆದರೆ ಅವರು ಅನುಸರಿಸಿದ ಪದಕೋಶ ಕಟ್ಟುವ ಬಗೆಯನ್ನು ನೆನೆದಂತೆ ತೋರುವುದಿಲ್ಲ. ಇದಕ್ಕೆ ಯಾರನ್ನಾದರೂ ಹೊಣೆ ಮಾಡುವುದು ನನ್ನ ಮಾತಿನ ಗುರಿಯಲ್ಲ. ಪರಿಷತ್ತಿನ ಪದಕೋಶ ಆಕರಗಳ ಪಟ್ಟಿಕೆಗಳಲ್ಲಿ ನೂರರಲ್ಲಿ ಮೂವತ್ತು ಮಾತ್ರ ಈಗಿನ ಅಚ್ಚಿನ ಪ್ರತಿಗಳಲ್ಲಿ ಬಳಕೆಯಾಗಿವೆ ಎಂದೂ ಉಳಿದ ಎಪ್ಪತ್ತರಷ್ಟು ಬಳಕೆಯಾಗದೆ ಉಳಿದಿವೆ ಎಂದೂ ಕೇಳಿಬಲ್ಲೆ. ಪರಿಷತ್ತಿನ ಪದಕೋಶ ಬಳಸದಿರುವ ಉಲ್ಲೇಖಗಳು ಪ್ರಭಣ್ಣನವರ ಈ ಪದಕೋಶದಲ್ಲಿ ಇರಲೂ ಬಹುದು. ಇದನ್ನು ಹುಡುಕಿ ತೆಗೆಯುವ ಕೆಲಸವನ್ನು ಮುಂದೆ ಬರುವ ಅರಿಮೆಗಾರರು ಮಾಡಬೇಕಿದೆ.

ಈಗ ನ್ಯಾಮತಿ ಪಂಡಿತ ಪ್ರಭಣ್ಣನವರ ಈ ಪದಕೋಶವನ್ನು ಅಚ್ಚು ಮಾಡಿ ಹೊರತರಲಾಗಿದೆ. ಈಗ ಇದರ ಬಳಕೆದಾರರು ಯಾರು? ಹೊಸ ಪದಕೋಶಗಳು ಬೇಕೆನಿಸುತ್ತಿರುವ ಈ ಹೊತ್ತಿನಲ್ಲಿ ಹಿಂದಿನ ಪದಕೋಶಗಳನ್ನು ಬಳಸಲು ಯಾರು ಮುಂದಾಗುತ್ತಾರೆ? ದಿಟ, ಈಗ ಪರಿಷತ್ತಿನ ಪದಕೋಶದ ಬಳಕೆ ಕೂಡ ನಾನು ಬಲ್ಲ ಮಟ್ಟಿಗೆ ತುಂಬ ಕಡಿಮೆ. ಏಕೆಂದರೆ ಯಾರು ಪದಕೋಶವನ್ನು ಬಳಸುತ್ತಾರೋ ಅದು ಅವರಿಗೆ ಕೈಪಿಡಿಯ ರೂಪದಲ್ಲಿ ದೊರಕುವಂತಿರಬೇಕು. ಹಾಗಲ್ಲದೆ ನುಡಿಯ ಚರಿತ್ರೆಯನ್ನು ಅರಿಯ ಬಯಸುವವರಿಗೆ ಪದಕೋಶಗಳು ಹೆಚ್ಚಿನ ನೆರವನ್ನು ನೀಡಬಲ್ಲವು.

ಆದರೆ ಕನ್ನಡದಲ್ಲಿ ಈ ಬಗೆಯ ಓದುಗಳು ನಡೆಯುತ್ತಲೇ ಇಲ್ಲ. ಇನ್ನಾದರು ಈ ಪದಕೋಶದ ಪ್ರಕಟನೆಯೊಂದಿಗೆ ಪದಕೋಶಗಳ ನೆರವಿನಿಂದ ಕನ್ನಡ ನುಡಿಯ ಬೆಳವಣಿಗೆಯನ್ನು ಅರಿಯಲು ಮುಂದಾಗುವ ಈದು ಹೆಚ್ಚಾಗಲಿ ಎಂದು ಬಯಸಬೇಕಿದೆ.

ಬಿದರಹಳ್ಳಿ ನರಸಿಂಹ ಮೂರ್ತಿಯವರು ವರುಶದ ಹಿಂದೆಯೇ ಈ ಕೆಲಸವನ್ನು ಮಾಡಿ ಪೂರೈಸಿದ್ದರೆಂದು ಬಲ್ಲೆ. ಅದನ್ನವರು ನೇರ್ಪುಗೊಳಿಸುತ್ತಲೇ ಬಂದಿದ್ದಾರೆ. ಬಿದಹಳ್ಳಿಯವರು ಈ ಕೋಶಕ್ಕೆ ಬರೆದಿರುವ **ಪ್ರಸ್ತಾವನೆ** ಅವರ ಕೆಲಸದ ಹರವನ್ನು ತಿಳಿಸುವುದರ ಜೊತೆಗೆ ಪದಕೋಶದ ಕಟ್ಟೋಣದ ಬಗೆಗೆ ಅವರು ಪಡೆದುಕೊಂಡಿರುವ ತಿಳಿವನ್ನು ನಮ್ಮೆದುರು ತೆರೆದಿಡುತ್ತದೆ. ಅವರ ನೆರವಿಗೆ ಅವರ ಗೆಳೆಯರು ಒತ್ತಾಸೆಯಾಗಿ ನಿಂತಿದ್ದಾರೆ. ಇದಕ್ಕಾಗಿ ಕನ್ನಡ ನಾಡಿನ ಪಂಡಿತ ಪಡೆಯನ್ನು ಅವರು ಈ ಕೆಲಸಕ್ಕಾಗಿ ನೆಮ್ಮಿ ಮುನ್ನಡೆದಿಲ್ಲ. ತಾವೆ ತಮ್ಮ ದಾರಿಯನ್ನು ಕಂಡುಕೊಂಡಿದ್ದಾರೆ. ಅದು ಸರಿಯಾದ ದಾರಿಯೇ ಆಗಿದೆ. ಪ್ರಭಣ್ಣನವರ ಪದಕೋಶ ನಮೂದಿಸದೇ ಬಿಟ್ಟ ಪದಗಳ (ಅದರಲ್ಲೂ ನ್ಯಾಮತಿಯ ಪರಿಸರದ ವಾಣಿಜ್ಯದ ನಂಟಿರುವ ಪದಗಳ) ಕೋಶವೊಂದನ್ನು ತಯಾರಿಸುವ ಉಮೇದು ಈ ಗೆಳೆಯರಿಗೆ ಇದ್ದಂತಿದೆ. ಸರಿಯೇ. ಅದೂ ಅದೀತು. ಆದರೆ ಅದು ಈಗಿನದಕ್ಕಿಂತ ಹೆಚ್ಚಿನ ದುಡಿಮೆ ಮತ್ತು ಎಚ್ಚರವನ್ನು ಬಯಸುವ ಕೆಲಸ ಎಂದು ಮಾತ್ರ ಹೇಳಬಲ್ಲೆ. ಅದೇನೇ ಇರಲಿ. ಈಗ ಮಾಡಿರುವ ಕೆಲಸಕ್ಕೆ ಈ ಎಲ್ಲರಿಗೆ ನಮ್ಮೆಲ್ಲರ ನನ್ನಿಗಳನ್ನು ಹೇಳುವ ಹೊಣೆ ಮತ್ತು ಅವಕಾಶ ನನ್ನದಾಗಿದೆ.

'ಬೈಗುಳಗಳು' ಹೊತ್ತಗೆಗೆ ಪ್ರವೇಶ

ಹಿರಿಯ ಗೆಳೆಯ ಸಿ.ಪಿ.ನಾಗರಾಜ್ ಬೈಗುಳಗಳ ವಲಯಕ್ಕೆ ತಲೆಯಿರಿಸಿ ಮೂರೂವರೆ ದಶಕಗಳು ಕಳೆದಿವೆ. ಯಾರಿಗಾದರೂ ಎಂದಾದರೂ ಬೈದು ಗೊತ್ತಿರದ ನಾಗರಾಜ್ ಅವರ ಈ ಬೈಗುಳಗಳ ಓದು ಅವರನ್ನು ಬಲ್ಲವರ ವಲಯದಲ್ಲಿ ಹಲವರು ಚಿಟ್ಟೆಕತೆಗಳಿಗೆ ಅನುವು ಮಾಡಿಕೊಟ್ಟಿದೆ. ಒಂದೆಡೆ ಬೈಗುಳಗಳನ್ನು ಕೂಡಿ ಹಾಕಲು ನಾಡಿನ ಹಲವು ಊರುಗಳನ್ನು ಸುತ್ತಿದ್ದಾರೆ. ಬೈಗುಳಗಳನ್ನು ಬಳಸುವ ಹೊತ್ತಿನಲ್ಲೆ ಇದ್ದು ಬೈಯುತ್ತಲೇ ಇರುವವರಿಗೆ ಗೊತ್ತಾಗದಂತೆ ಹಲವಾರು ಗಂಟೆಗಳ ಸಂಗ್ರಹವನ್ನು ಮಾಡಿದ್ದಾರೆ. ಇನ್ನೊಂದೆಡೆ ಬೈಗುಳಗಳನ್ನು ಹೇಗೆ ವಿವರಿಸಿಕೊಳ್ಳ ಬೇಕು ಎಂಬುದನ್ನು ಅರಿಯಲು ಹತ್ತಾರು ಮೂಲಗಳಿಂದ ಬರಹಗಳನ್ನು ಕೂಡಿಹಾಕಿ ಓದನ್ನು ಬೆಳೆಸಿಕೊಂಡಿದ್ದಾರೆ. ಅವರ ಹುಡುಕಾಟ ಮುಗಿದಿದೆ ಎಂದು ನಾನು ತಿಳಿದಿಲ್ಲ. ಈ ನಿಟ್ಟಿನಲ್ಲಿ ಅವರಿಗೆ ಇರುವ ತಾಳ್ಮೆ ನನಗೆ ಅಚ್ಚರಿ ತಂದಿದೆ.

ಕನ್ನಡ ನುಡಿಯನ್ನಾಡುವವರು ಬೈಗುಳ (ಬಯ್ಗುಳ, ಬೆಯ್ಗುಳ,ಬೋಗಳ,ಬೋಗುಳ) ಎಂಬ ಪದರಚನೆಗಳನ್ನು ತಮ್ಮ ತಿಳಿವಿನ ಪದ ನೆರಿಕೆಯಲ್ಲಿ ಹೊಂದಿರುತ್ತಾರೆ. ಆದರೆ ಅವರ ಬಳಕೆಯ ಪದನೆರಿಕೆಗೆ ಈ ಬೈಗುಳಗಳು ಬರುವುದು ಕಡಿಮೆ. ಎಂದರೇನಾಯ್ತು? ಯಾರಾದರೂ ಬೈಗುಳಗಳನ್ನು ಬಳಸಿದರೆ ನಮಗೆ ಅದು ಬೈಗುಳ ಎಂದು ಗೊತ್ತಾಗುತ್ತದೆ. ಆದರೆ ನಾವೇ ಆ ಪದರಚನೆಗಳನ್ನು ಬಳಸಲು ಮುಂದಾಗುವುದಿಲ್ಲ. ಮಕ್ಕಳು ಅಂತಹ ಪದಗಳನ್ನು ಬಳಸಿದ್ದನ್ನು ಕಂಡರೆ ತಾಯಂದಿರು ದುಗುಡಕ್ಕೆ ಒಳಗಾಗುತ್ತಾರೆ. ಬೆಳೆಯುತ್ತ ಬಂದಂತೆ ಬೈಗುಳಗಳು ಕಿವಿಯ ನೆಲೆಯಲ್ಲಿ ದಿಟವಾಗುತ್ತವೆಯೇ ಹೊರತು, ನುಡಿಯಲ್ಲಿ, ಬಾಯಿಯಲ್ಲಿ ಮೈ ತಳೆಯುವುದಿಲ್ಲ. ನುಡಿಯನ್ನಾಡುವ ಸಮುದಾಯಗಳು ಕಾಲ ಸರಿದಂತೆ ಬೈಗುಳಗಳೆಂಬ ರಚನೆಗಳನ್ನು ತಮ್ಮ ಪದನೆರಿಕೆಯಿಂದ ಅಳಿಸಿಹಾಕಲೂ ಬಹುದು. ಅದರಲ್ಲೂ ಯಾರಿಗಾದರೂ ಏನಾದರೂ ಕೆಡುಕಾಗಲಿ ಎಂದು ಬಯಸುವ ಬೈಗುಳಗಳು ಹೀಗೆ ಅಳಿಸಿ ಹೋಗುತ್ತವೆ ಎನ್ನಬಹುದು. ಆದರೆ ಯಾರನ್ನಾದರೂ ಬಣ್ಣಿಸುವ ಮಾದರಿಯ ಬೈಗುಳಗಳ ಪಟ್ಟಿಗೆ ಹೊಸ ಸೇರ್ಪಡೆಗಳಾಗುತ್ತಲೇ ಇರುತ್ತವೆ.

ಕೆಡುಕಾಗಲಿ ಎಂದು ಹೇಳುವ ಅದನ್ನು ಬಯಸುವ ಬೈಗುಳಗಳ ನುಡಿ ಕಟ್ಟೋಣದಲ್ಲಿ ಗಮನಿಸ ಬೇಕಾದ ಸಂಗತಿಯೊಂದಿದೆ. ಈ ಮಾದರಿಯ ಬೈಗುಳಗಳೆಲ್ಲ ಒಂದು ಗೊತ್ತಾದ ಬಗೆಯಲ್ಲೇ ಕೊನೆಗೊಳ್ಳುತ್ತವೆ. ಬಾಯಿಗೆ ಮಣ್ಣಾಕ, ಬರಬರಾದ್ಬರ, ನೆಗೆದುಬೀಳ ಇವೇ ಮುಂತಾದ ಬೈಗಳಗಳ ಕೊನೆಯಲ್ಲಿ ಕೆಲಸ ಪದವು ಅರೆಬರೆಯಾಗಿ ಇರುವಂತೆ

ತೋರುತ್ತದೆ. ದಿಟವಾಗಿ ಅಲ್ಲೆಲ್ಲಾ ಅಲಿ ಎಂಬುದು ಇರುತ್ತದೆ. ನುಡಿಯುವಾಗ ಅದನ್ನು ಹೇಳುವುದಿಲ್ಲ. ಅಲಿ ಎಂದು ಕೊನೆಗೊಳಿಸಿದ ಕೆಲಸಪದವು ಮುಂದೆ ನಡೆಯ ಬೇಕಾದುದನ್ನು ಹೇಳುತ್ತದೆ. ಹೋಗಲಿ,ಬರಲಿ, ತಿನ್ನಲಿ, ಕೊಡಲಿ ಮುಂತಾದ ಕೆಲಸ ಪದಗಳನ್ನು ನೋಡಿ. ಇಂತಹ ರಚನೆಗಳು ಬೈಗುಳಗಳಲ್ಲಿ ಮಾತ್ರವೇ ಕಂಡುಬರುತ್ತವೆ. ಇದು ಕನ್ನಡ ನುಡಿರಚನೆಯ ಒಂದು ಚಹರೆ ಎಂಬಂತೆ ತೋರುತ್ತಿದೆ.

ಬೈಗುಳಗಳ ತಿರುಳನ್ನು ತಿಳಿಸುವುದು ಮತ್ತು ಅವುಗಳ ಮೂಲವನ್ನು ಹುಡುಕುವುದು ಈ ಹೊತ್ತಗೆಯಲ್ಲಿ ಇರುವ ಟಿಪ್ಪಣಿಗಳ ಗುರಿಯಾಗಿದೆ. ಇದಲ್ಲದೆ ಬೈಗುಳಗಳಿಗೆ ಸಾಮಾಜಿಕವಾದ ಒಂದು ಚೌಕಟ್ಟು ಕೂಡ ಇರುತ್ತದೆ. ಅದನ್ನು ತಿಳಿಯಬೇಕಾದರೆ ಅವುಗಳನ್ನು ಬಳಸುವ ಬಗೆಗಳನ್ನು ಬಳಸುವವರ ಹಿನ್ನೆಲೆಗಳನ್ನು ಯಾರನ್ನು ಕುರಿತು ಈ ಬೈಗುಳಗಳು ಬಳಕೆಯಾಗಿವೆಯೋ ಅವರ ಸಾಮಾಜಿಕ ಹಿನ್ನೆಲೆಗಳನ್ನು ಗೊತ್ತುಮಾಡಿಕೊಳ್ಳಬೇಕಾಗುತ್ತದೆ. ನಾಗರಾಜ್ ಈ ದಿಕ್ಕಿನಲ್ಲಿ ಹೆಚ್ಚಿನ ತಿಳುವಳಿಕೆಯನ್ನು ಪಡೆದಿದ್ದಾರೆ. ಈ ಹೊತ್ತಗೆಯ ಟಿಪ್ಪಣಿಗಳಲ್ಲಿ ಅದೆಲ್ಲವನ್ನೂ ಹೇಳಹೋಗಿಲ್ಲ.

ಬೈಗುಳಗಳು ಬರಹರೂಪದಲ್ಲಿ ಕತೆಕಾದಂಬರಿಗಳನ್ನು ಬಿಟ್ಟರೆ ಬೇರೆ ಕಡೆಗಳಲ್ಲಿ ಕಾಣಸಿಗುವುದಿಲ್ಲ. ಇವು ನಮ್ಮ ನುಡಿಯಲ್ಲಿ ಬಳಕೆಯಲ್ಲಿದ್ದು ಈಗ ಕಳೆದು ಹೋಗಿರುವ ಪದಗಳನ್ನು, ನಮ್ಮ ನಡಾವಳಿಗಳಲ್ಲಿ ಬಳಕೆಯಲ್ಲಿದ್ದ ಆದರೆ ಈಗ ಮರೆಯಾಗಿರುವ ಹಲವಾರು ಸಂಗತಿಗಳನ್ನು ಅಡಗಿಸಿ ಇಟ್ಟುಕೊಂಡಿರುತ್ತವೆ. ಹಾಗಾಗಿ ಇವುಗಳನ್ನು ಕೂಡಿಟ್ಟು ಅರಿಯಲು ತೊಡಗಬೇಕಾಗುತ್ತದೆ. ಈ ನಿಟ್ಟಿನಿಂದ ಈ ಕೂಡಣವನ್ನು ನೋಡಬೇಕಾಗಿದೆ.

ಹಾಗೆ ನೋಡಿದರೆ ಬೈಗುಳಗಳನ್ನು ನುಡಿ ಸಮುದಾಯ ದೂರವಿರಿಸುತ್ತಿರುವಂತೆ ಅದನ್ನು ಬೇರೆ ಬಗೆಯಲ್ಲೂ ನೋಡುತ್ತಿರುವುದು ನುಡಿಗಟ್ಟುಗಳನ್ನು ಗಮನಿಸಿದರೆ ತಿಳಿಯುತ್ತದೆ, 'ಅವನಿಗೆ ಕೊಂಚ ಬೈದು ಬುದ್ದಿ ಹೇಳು' ಎನ್ನುತ್ತೇವೆ. 'ಬೈಯುವವರು ಬದುಕೋಕೆ ಹೇಳಿದರು' ಎನ್ನುತ್ತೇವೆ. ಹೊಗಳಿಕೆಗೆ ಉಬ್ಬಿದರೂ ಅದನ್ನು ದೂರವಿರಿಸಬೇಕೆಂಬ ತಿಳುವಳಿಕೆಯೂ ಜನರಲ್ಲಿದೆ. ಈ ಎಲ್ಲ ಕಾರಣಗಳಿಂದ ಬೈಗುಳಗಳ ಓದು ಇನ್ನೂ ಹೆಚ್ಚಾಗಿ ಆಗ ಬೇಕಿದೆ. ನಾಗರಾಜ್ ಅವರ ಕೆಲಸವನ್ನು ಅವರ ಜೊತೆ ಸೇರಿ ಬೇರೆಯವರು ಕೂಡ ಮುಂದುವರೆಸಬೇಕಿದೆ.

ಚರಿತ್ರೆಯ ಕಪ್ಪುಕುಳಿಗೆ ಸಿಲುಕದ ಮಲೆಗಳಲ್ಲಿ ಮದುಮಗಳು

ಕಾದಂಬರಿಯೊಂದನ್ನು ನಾಟಕವನ್ನಾಗಿ ಬದಲಿಸಿಕೊಳ್ಳುವುದು ಕನ್ನಡಕ್ಕೆ ಹೊಸದೇನೂ ಅಲ್ಲ. ಕಾದಂಬರಿಯೊಳಗೊಂದು ನಾಟಕ ಹುದುಗಿರುತ್ತದೆಂಬುದು ಕುವೆಂಪು ಅವರ ನಂಬಿಕೆಯೂ ಆಗಿತ್ತೆಂದು ತೋರುತ್ತದೆ. ಆದರೆ ಕತೆಯನ್ನು, ಅದರೊಳಗಿನ ನಾಟಕವನ್ನು ನಮಗೆ ತೋರಿಸುವ ಕಾದಂಬರಿಯ ನಿರೂಪಕರ ಮೇಲುಗೈಗೆ ಸಾಟಿಯಾಗಿ ನಿಲ್ಲಬೇಕೆಂದಾಗ (ಅದರಲ್ಲೂ ಮಲೆಗಳಲ್ಲಿ ಮದುಮಗಳು ಮಾದರಿಯ ಕಾದಂಬರಿಗಳ ನೆಲೆಯಲ್ಲಿ) ಹೆಚ್ಚು ಹೆಚ್ಚು ಎಚ್ಚರ ಬೇಕಾಗುತ್ತದೆ. ಜತೆಗೆ ಅದೊಂದು ಸವಾಲೇ ಸರಿ. ನಮಗೆ ಗೊತ್ತಿರುವ ನಾಟಕಗಳಲ್ಲಿ ನೋಡುವವರು ನಾಟಕದ ಯಾವುದಾದರೊಂದು ಪಾತ್ರದೊಡನೆ ತಮ್ಮನ್ನು ತಾವು ಗುರುತಿಸಿಕೊಳ್ಳುತ್ತಾರೆ. ಆ ಪಾತ್ರದ ಮೂಲಕ ನಾಟಕವನ್ನು ಅರಿಯಲು, ಅದರ ತಿರುಳನ್ನು ಪಡೆದುಕೊಳ್ಳಲು ಮುಂದಾಗುತ್ತಾರೆ. ಮಲೆಗಳಲ್ಲಿ ಮದುಮಗಳು ಕಾದಂಬರಿಯ ರಂಗರೂಪದಲ್ಲಿ ಯಾವ ಪಾತ್ರದೊಡನೆಯೂ ಹಾಗೆ ಗುರುತಿಸಿಕೊಳ್ಳುವುದಾಗಲೀ ಯಾವುದೇ ಪಾತ್ರದ ಮೂಲಕ ನಾಟಕದ ತಿರುಳನ್ನು ಅರಿಯಲು ಹೊರಡುವುದು ಆಗದ ಮಾತು. ಈ ನಾಟಕವನ್ನು ನೋಡುತ್ತಿದ್ದಾಗ ನನಗೆ ಇಲ್ಲಿನ ಯಾವುದಾದರೊಂದು ಪಾತ್ರವಾದರೂ ನೋಡುತ್ತಿರುವ ನಮ್ಮೊಡನೆ ಮಾತನಾಡಲು ಆದೀತೇ ಎಂದು ಯೋಚಿಸುತ್ತಿದ್ದೆ. ಅಂತಹ ಒಂದು ಕೊಂಡಿ ದೊರಕುವುದು ಗುತ್ತಿಯಲ್ಲಿ ಮಾತ್ರ. ಅದೂ ಕೂಡ ಒಂದು ಹೊಳಹು. ನಾಟಕ ನಡೆಯುತ್ತಿರುವ ಮುಚ್ಚಿದ ಲೋಕದಿಂದ ಹೊರಬೀಳುವ ಗುತ್ತಿ ಅಲ್ಲಿಂದ ನಮ್ಮ ನಡುವೆ ಬಂದು ಸೇರಿರಲೂಬಹುದು.

ಕಾದಂಬರಿಯರಂಗರೂಪವನ್ನು ಹೆಣೆಯುವಾಗ ನಮ್ಮಕಣ್ಣೆದುರಿಗೆ ನಡೆಯುವ ಹಲವು ನೋಟಗಳ ನಡುವೆ ನಂಟು ಬೆಳೆಸಲು ನಾಟಕಕಾರರು ಹಲವು ಬಗೆಯ ನಿರೂಪಕರನ್ನು ಕರೆತಂದಿದ್ದಾರೆ. ಇವರೆಲ್ಲಜನಪದರ ಬದುಕಿನಲ್ಲಿ ಯಾವುದೋ ಕಾಲದ ಕತೆಗಳನ್ನು ನಮ್ಮೆದುರು ಮರಳಿ ಹೇಳುವವರು. ಅಲ್ಲದೆ ನಾಟಕ ನಡೆಯುವ ಲೋಕಕ್ಕೆ ಹೊರಗಿನವರು. ನಮ್ಮಂತೆ ಅವರೂ ನೋಡುತ್ತಿರುವವರು. ನೋಡುತ್ತಲೇ ನಮಗೂ ತೋರಿಸುತ್ತಿರುವವರು. ಈ ಬಗೆಯಲ್ಲಿ ಕತೆಯನ್ನು ಹೇಳುವಿಕೆ ಮತ್ತು ಕತೆಯನ್ನು ತೋರಿಸುವಿಕೆಯನ್ನು ನಿಭಾಯಿಸಲು ಈ ಜನಪದ ನಿರೂಪಕರನ್ನು ಕರೆತರಲಾಗಿದೆ. ಇವರು ಕತೆಯ ಕಾಲದೇಶಗಳಿಂದ ನಮ್ಮ ಕಾಲದೇಶಕ್ಕೆ ಓಡಾಡುತ್ತಿರುತ್ತಾರೆ. ಅವರ ನುಡಿಗಟ್ಟೂ ಕೂಡ ಎರಡೂ ಬಗೆಯಲ್ಲಿ ಇರುವುದನ್ನು ನೋಡಬಹುದು. ಕಾದಂಬರಿಯ ಮಾತುಗಳನ್ನು, ಅಲ್ಲಿನ ನಿರೂಪಕರ ಮಾತುಗಳನ್ನು ಇರುವಂತೆಯೇ ಹೇಳುವುದರ

ಜೊತೆಗೆ ನಮ್ಮೊಡನೆ ಮಾತನಾಡಲು ನಮಗೆ ಹತ್ತಿರವೆನಿಸುವ ನುಡಿಗಟ್ಟನ್ನು ಬಳಸುತ್ತಾರೆ. ಇಲ್ಲಿ ಆಗಿರುವ ಒಂದು ಪಲ್ಲಟವನ್ನು ಗಮನಿಸಲೇಬೇಕು. ಯಾವುದು ಕಾದಂಬರಿಯ ಮೊದಲ ಪುಟದ ಮಾತಾಗಿದೆಯೋ ಅದು ನಾಟಕದಲ್ಲಿ ಕೊನೆಯ ಮಾತಾಗಿದೆ. ಇದು ಓದುಗರ ಲೋಕದಿಂದ ನೋಡುವವರ ಲೋಕಕ್ಕೆ ಬರುವಾಗ ಆಗಿರುವ ಬದಲಾವಣೆ. ನೀರೆಲ್ಲವೂ ತೀರ್ಥ ಎಂಬ ಕಾದಂಬರಿಯ ಮಾತಿನ ಜೊತೆಗೆ ತೀರ್ಥವೂ ಕೂಡ ನೀರೇ ಎಂದು ಸೇರಿಸಿರುವುದು ನಾಟಕ ನೀಡಿರುವ ಹೊರಚಾಚು ಆಗಿದ್ದೀತು.

ಮಲೆಗಳಲ್ಲಿ ಮದುಮಗಳು ಮೊದಲಾಗುವುದು ಇಳಿಹೊತ್ತಿನಲ್ಲಿ. ಕೊನೆಯಾಗುವುದು ಮುಂಜಾವಿನಲ್ಲಿ. ಈ ಕಾದಂಬರಿಯ ರಂಗರೂಪವೂ ಇರುಳೆಲ್ಲ ನಡೆದು ಮುಂಜಾವಿನಲ್ಲಿ ಮುಗಿಯುತ್ತದೆ. ಸಂಜೆ ಎಂದರೆ ದುಡಿಮೆ ಮುಗಿದು ಮೈಮನಗಳು ಬಿಡುವನ್ನು ಪಡೆಯ ಬಯಸುವ ಹೊತ್ತು. ಮುಂಜಾವು ಎಂದರೆ ಎಲ್ಲ ದುಡಿಮೆಗಳಿಗೂ ಮುಂದಾಗುವ ಹೊತ್ತು. ಆದರೆ ಈ ಕಾದಂಬರಿಯಲ್ಲಿ ಗುತ್ತಿಯಿಂದ ಮೊದಲಾಗುವ ಸಂಜೆಯು ಸಮರಕ್ಕೆ ಸೆಟೆದು ನಿಲ್ಲುವ ಬಗೆಯಲ್ಲಿದೆ. ಕೊನೆಯಲ್ಲಿ ಬರುವ ಮುಂಜಾವು ದುಡಿಮೆಯಿಂದ ಕೊಂಚ ಬಿಡುಗಡೆ ದೊರೆತು ನಿದ್ದೆಯ ಸವಿಯನ್ನು ಸವಿಯಲು ಹೆಂಗಳೆಯರಿಗೆ ಅನುವು ಮಾಡಿಕೊಟ್ಟಿದೆ. ಇಡೀ ಕಾದಂಬರಿಯಲ್ಲಿ ಇರುಳುಗಳು ಹಲವು ಬಗೆಯಲ್ಲಿ ಮೈದೆರೆದುಕೊಳ್ಳುವುದನ್ನು ಕಾಣುತ್ತೇವೆ. ಆ ಹೊತ್ತಿನಲ್ಲಿ ದಿಟಸಟೆಗಳ ನಡುವಣ ಗೆರೆ ತೆಳುವಾಗುತ್ತ ಹೋಗುತ್ತದೆ. ಕಾಲದೇಶಗಳ ಕಟ್ಟು ಪಾಡು ಸಡಿಲವಾಗುತ್ತದೆ. ಪಾತ್ರಗಳ ಮನಸ್ಸಿನ ಪದರಗಳು ಕೂಡ ತೋರಿಕೆಯ ನೆಲೆಯಿಂದ ಬದಲಾಗಿ ಹುದುಗಿರುವ ಪದರಗಳು ತೆರೆದುಕೊಳ್ಳುವತ್ತ ಸಾಗುವುದನ್ನು ನೊಡುತ್ತೇವೆ. ಇದು ಕಾದಂಬರಿಯಲ್ಲಿ ಅಡಗಿರುವ ಬೀಜ. ಅದನ್ನಿಲ್ಲಿ ಕಣ್ಣಿಗೆ ಕಟ್ಟುವ ಹಾಗೆ ತೊರಿಸಲು ಬೇಕಾದ ಪರಿಕರಗಳನ್ನು ಒದಗಿಸಲಾಗಿದೆ.

ಹಗಲುಗಳಲ್ಲೂ ಹೀಗೆ ದಿಟಸಟೆಗಳು ಮಗ್ಗಲು ಬದಲಿಸಿದರೂ ಅದು ಒಂದು ಬಯಕೆಯಂತೆ ತೋರುತ್ತದೆ. ಐತ ಪೀಂಚಲು ಇಬ್ಬರೂ ಅನಾದಿ ಕಾಲದ ವಿಹಾರಿಗಳಂತೆ ಮುಕುಂದಯ್ಯನಿಗೆ ಕಂಡರೆ ಅದು ಅವನ ಮನಸ್ಸಿನ ಬಯಕೆಯ ಜಗಿತವಾಗಿ ತೋರುತ್ತದೆ. ಆದರೆ ಐತ ಪೀಂಚಲುಗಳಿಗೆ ಅವರಲ್ಲೇ ಉಂಟಾದ ಪಲ್ಲಟವಾಗಿ ಕಾಣುವುದಿಲ್ಲ. ಆದರೆ ತಿಮ್ಮಿ ಕಾಣುವ ಮಂಜಿನ ಸೊಬಗು, ಹಳೆಗಾಲದ ಕುದುರೆಯೇರಿದ ರಾಜಕುಮಾರ ಇವೆಲ್ಲವೂ ಅವಳ ಅರಿವಿನಲ್ಲೇ ನಡೆಯುವ ಪಲ್ಲಟಗಳಾಗಿದ್ದು ಅವು ಹಗಲಿನಲ್ಲಿ ನಡೆಯದೇ ಇರುಳಿನಲ್ಲಿ ನಡೆಯುತ್ತವೆ. ಈ ಪಲ್ಲಟ ಏರುವಿಕೆಯಾಗಿರುವಂತೆ ಇಳಿಯುವಿಕೆಯೂ ಆಗಬಹುದು. ದೇಯಿ, ಚೀಂಕ್ರ, ಪಿಜಣರ ಕತೆಯಲ್ಲೀ ಈ ಇಳಿಯುವಿಕೆಯ ನೆಲೆಯನ್ನು ನೋಡುತ್ತೇವೆ.

ಮಲೆಗಳಲ್ಲಿ ಮದುಮಗಳು ಕಾದಂಬ ರಿಒಂದು ಮುಚ್ಚಿದ ಲೋಕ. ಆ ಕಾಡಿನ ಮುಚ್ಚಿದ ಲೋಕಕ್ಕೆ ಅಂತಕ್ಕನ ಕಾಪಿ ಹೋಟೆಲ್, ಬೈಸಿಕಲ್ಲು, ಪೋಲಿಸು, ಕ್ರೈಸ್ತಮತ, ಯುದ್ಧದ ಸುದ್ದಿ ಮುಂತಾದವು ಒಳನುಗ್ಗಿ ಬಂದರೂ ಅಲ್ಲಿರುವ ಯಾರೂ, ಯಾವುದೂ ಹೊರಬರಲು ಸಿದ್ಧವಿಲ್ಲ. ನಿಲ್ಲದ ಪಯಣಕ್ಕೆ ಮೊಗಮಾಡಿದ ಗುತ್ತಿಯೊಬ್ಬ ನಮ್ಮ ಕಾಲಕ್ಕೆ ನಡೆದು ಬರಬಲ್ಲನೇನೋ ಅಲ್ಲವೇ? ಅದಿರಲಿ.

ಚಿನ್ನಮ್ಮ ಕಗ್ಗತ್ತಲಿನಲ್ಲಿ ಮಿನುಗು ದೀಪದ ಮುಂದೆ ದೇವಿಯ ಬೊಂಬೆಯ ಮುಂದೆ ಅಡ್ಡಬಿದ್ದಿರುವುದನ್ನು ದೂರದ ದಕ್ಷಿಣೇಶ್ವರದ ಕಾಲಿಯ ದೇಗುಲದಲ್ಲಿ ಸನ್ಯಾಸಿಗಳು 'ಕಂಡ'ರೆಂದು ಕಾದಂಬರಿ ನಂಟುಕಟ್ಟುತ್ತದೆ. ಆದರೆ ಒಂದು ಇನ್ನೊಂದನ್ನು ಹೇಳುವ ಬಗೆಯೇ ಇಲ್ಲಿ ಹಿಡಿಸದು. ಎಲ್ಲವೂ ತಂತಮ್ಮಲ್ಲೇ ಇಡಿ. ಬಿಡಿಯಾದುದನ್ನು ಹಿಡಿದಿಡುವ ಬೇರೇನೋ ಇದೆ ಎಂಬ ಹಂಗಿನ ಕತೆ ಇಲ್ಲಿ ಸಲ್ಲುವುದಿಲ್ಲ. ಹಾಗಾಗಿ ಇಂದು ನಿನ್ನೆ ಮತ್ತು ನಾಳೆಗಳು ಹೆಣೆದುಕೊಳ್ಳುವ ಚರಿತ್ರೆಯ ಬಲೆಯೊಳಗೆ ಈ ಕತೆಯ ಲೋಕ ಸಿಲುಕುವುದೇ ಇಲ್ಲ. ಎಲ್ಲರೂ ಅದರಿಂದ ಹೊರಬಂದವರೇ ಆಗಿದ್ದಾರೆ. ಹುಲಿಕಲ್ಲು ಗುಡ್ಡದ ದಾರಿಯಲ್ಲಿ ಸುಬ್ಬಣ್ಣ ಹೆಗ್ಗಡೆಯವರು ತಳುವಿದ ಕಡೆ ನೂರಾರು ವರುಷಗಳಿಂದ ಎಲ್ಲವನ್ನೂ 'ನೋಡುತ್ತ' ಇದ್ದ ಮಸೆ ಕಲ್ಲಿನಂತೆ ಈ ಲೋಕದಲ್ಲಿ ಎಲ್ಲರೂ ಎಡೆಬಿಡದೆ ತೊಡಗಿಕೊಂಡಿದ್ದರೂ ಅದು ಬೇರೆ ಯಾವುದಕ್ಕೋ ಆಗಿರದೆ ಎನ್ನ ಪಾಡಿಗೆ ತಾನು ಇರುವ ಹಾಗಿದೆ; ಹಾಗಾಗಿ ನಮಗೆ ಬೆನ್ನು ಮಾಡಿದಂತಿದೆ.

ಈಗ ಈ ಕಾದಂಬರಿಯನ್ನು 'ತೋರಿಸುವ' ಕೆಲಸ ನಡೆದಿದೆ. ನಾಟಕಗಳು ಈಗ ಮತ್ತು ಇಲ್ಲಿ ನಡೆಯುವ ಮಾಯಕವನ್ನು ನೋಡುವವರಲ್ಲಿ ಹುಟ್ಟಿ ಹಾಕಬೇಕು. ನಾವು ನೋಡುತ್ತಿರುವ ಕತೆ ಯಾವ ಕಾಲದ್ದಿರಲಿ, ಯಾವ ದೇಶದ್ದಿರಲಿ ನೋಡುವ ನಮ್ಮಲ್ಲಿ ಅದು ನಮ್ಮ ಕಾಲದ್ದೆಂದು ಅನ್ನಿಸುವ ಹಾಗೆ ಬೇರುಬಿಟ್ಟುಕೊಳ್ಳಬೇಕು. ಆದರೆ ಈ ಕಾದಂಬರಿಯನ್ನು 'ನೋಡುವುದು' 'ನೋಡುವಂತೆ ಮಾಡುವುದು' ಹೇಗೆ? ಇದು ಬೆಳಕು ನುಸುಳಲು ತಿಣಕಾಡಬೇಕಾದ ಹೆಗ್ಗಾಡು. ಒಳಗೆ ಬಾ ಎಂದು ಕರೆಯುವವರು ಇಲ್ಲಿ ಯಾರೂ ಇಲ್ಲ. ನಮ್ಮ ನೋಟಕ್ಕೆ, ಆ ನೋಟದ ಮೂಲಕ ಕಟ್ಟಿಕೊಳ್ಳಬೇಕಾದ ಚಿತ್ತಾರಕ್ಕೆ ಒಂದು ತಿರುಳಿರಬೇಕು ನಮಗೆ ಎನಿಸಿದ್ದರೆ ನಮಗೆ ಸೋಲು ಕಟ್ಟಿಟ್ಟಿದ್ದು. ಅಂದರೆ ಇದನ್ನು ನಮ್ಮ ಕಾಲದ ಕತೆಯನ್ನಾಗಿ ಬದಲಿಸಿಕೊಳ್ಳುವುದು ಆಗದ ಮಾತು. ಎಲ್ಲ ಕಾಲಕ್ಕೂ ಸಲ್ಲುವ ಪುರಾಣವನ್ನಾಗಿ ಬದಲಿಸ ಹೊರಟರೆ ಇಲ್ಲಿರುವ ಬದುಕಿನ ದಟ್ಟ ತೊಡಗುವಿಕೆ ಅದಕ್ಕೆ ಅಡ್ಡಿಯಾಗುತ್ತದೆ. ಹಾಗಾಗಿ ಇದು ಕತ್ತಿಯಲುಗಿನ ಮೇಲಿನ ಪಯಣ. ಕೊನೆಗೂ ನನಗೆ ಹೊಳೆಯುವ ಹೋಲಿಕೆ ಒಂದೇ. ಈ ಕಾದಂಬರಿಯನ್ನು ನೋಡಲು ಹೊರಡುವ ನಮಗೆ ಹುಲಿಕಲ್ಲು ಗುಡ್ಡದ ಮೇಲೆ ಕಾಯುತ್ತ ಕುಳಿತು ಅರೆನಿದ್ದೆಗೆ ಜಾರಿದ್ದ ತಿಮ್ಮಿಗೆ ಬಿದ್ದ ಕನಸಿನಂತೆ ಈ ಕಾದಂಬರಿಯೂ ಕೂಡ ನಮಗೆ ಕಾಣತೊಡಗುತ್ತದೆ. ಇದೆಲ್ಲದರ ತಿರುಳೇನು ಎಂದು ಚಿಂತಿಸುವ ಹೊತ್ತಿಗೆ ಎಲ್ಲ ಕರಗಿ ಹೋಗಿರುತ್ತದೆ. ಕನಸು ಕಂಡದ್ದಷ್ಟೇ ದಿಟ. ಅಂದರೆ ಒಂದರ ಮೂಲಕ ಇನ್ನೊಂದನ್ನು ನೋಡುವುದನ್ನು, ಒಂದನ್ನು ಇನ್ನೊಂದನ್ನಾಗಿ ಬದಲಿಸಿ ತಿಳಿಯಲು ಮುನ್ನುಗ್ಗುವ ಪರಿಪಾಟವನ್ನು ಚರಿತ್ರೆ ನಮಗೆ ಕಲಿಸಿದೆ. ಆದರೆ ನಮ್ಮ ಈ ಬಗೆಯ ಬಲೆಗೆ ಸಿಲುಕದೆ ಚರಿತ್ರೆಯ ಕಪ್ಪುಕುಳಿಯೊಳಗೆ ಕರಗಿ ಹೋಗದೆ ಈ ಕಾದಂಬರಿ ದಾಟಿ ಮುಂದೆ ಸಾಗುತ್ತದೆ. ಹೌದಲ್ಲವೇ?

ಕಾದಂಬರಿಯು ಚರಿತ್ರೆಯನ್ನು ಕಡೆಗಣ್ಣಿನಿಂದ ನೋಡುವ ಈ ಬಗೆಯನ್ನು ನಾಟಕ ಬೇರೊಂದು ಬಗೆಯಲ್ಲಿ ಬಳಸಿಕೊಂಡಿದೆ. ನೋಡುಗರನ್ನು ಅವರ ಕಾಲದಿಂದ ಕತೆಯ ಕಾಲದೇಶಗಳಿಗೆ ರವಾನಿಸಲು ಬೇಕಾದ ಮಾಯಕದ ನೆಲೆಗಳು ಈ ನಾಟಕದ

ಹಾಡುಗಳಲ್ಲಿವೆ. ಹಾಡುಗಳು ಕತೆಯನ್ನು ಚುಟುಕಿನಲ್ಲಿ ಹೇಳಲು ಮಾತ್ರವೇ ಬಳಕೆಯಾಗುವುದಿಲ್ಲ. ಕತೆಯನ್ನು, ಪಾತ್ರಗಳ ಒಳಗನ್ನು ನಾಟಕವನ್ನು ನೋಡುತ್ತಿರುವವರ ಅರಿವಿಗೆ ತರಲು ಈ ಹಾಡುಗಳು ಬಳಕೆಯಾಗಿವೆ. ರಂಜಕತೆ, ಇಲ್ಲವೇ ನಟನೆಗೆ ಹೊಸ ನೆಲೆಗಳನ್ನು ಕಟ್ಟಿಕೊಡುವುದು ಮಾತ್ರ ಹಾಡುಗಳ ಕೆಲಸವಾಗಿ ಉಳಿಯದೆ ಕಾದಂಬರಿಯ ರಂಗರೂಪವನ್ನು ಕಾಲದೇಶಗಳಿಂದ ಬಿಡಿಸುವುದಕ್ಕೂ ಬಳಕೆಯಾಗಿವೆ.

ಹಾಡುಗಳ ಈ ನೆಲೆಯನ್ನು ನಾಟಕದ ನಿರೂಪಣೆಗೆ ಆಯ್ದುಕೊಂಡಿರುವ ಜನಪದ ನಿರೂಪಕರ ನಿಟ್ಟಿನಿಂದಲೂ ನೋಡಬಹುದು. ಈ ನಿರೂಪಕರು ನೆಪವಾದ ಉಂಗುರ ತೆರೆಯುವ ನೆನಪುಗಳ ಜಾಡು ಹತ್ತಿ ನಮಗೊಂದು ಕತೆಯನ್ನು ಹೇಳಹೊರಡುತ್ತಾರೆ. ಈ ಕತೆ ಅವರು ಕಂಡದ್ದು ಇಲ್ಲವೇ ಉಂಗುರ ತೆರೆದು ತೋರಿಸಿದ್ದು; ಹೀಗೆ ಯಾವುದಾದರೂ ಆದೀತು. ಹಾಗಾಗಿ ಅದು ದಿಟದ ನೆಲೆಗೆ ಗಂಟು ಬೀಳಲು ಹೆಣಗುವುದಿಲ್ಲ. ನಾಟಕದ ರಂಗರೂಪ ಅನುಸರಿಸಿರುವ ಈ ಮಾದರಿ ಹಲವು ಚರ್ಚೆಗಳಿಗೆ ಅನುವು ಮಾಡಿಕೊಟ್ಟೀತು. ಅದರಲ್ಲೂ ಸಮಾಜದ ಚಲನಶೀಲತೆಯ ನೆಲೆಗಳ ಬೆಂಬತ್ತಿರುವ ಚಿಂತಕರು ಬೇಕೆಂತಲೇ ನಾಟಕ ಈ ಹೊಣೆಯಿಂದ ಬಿಡುಗಡೆ ಬಯಸಿದೆಯೇ ಎಂಬ ಮಾತನ್ನು ಎತ್ತಿ ಚರ್ಚೆಗೆ ತೊಡಗಬಹುದು. ಅಂತಹ ಚರ್ಚೆಯೊಂದು ನಡೆಯಬೇಕಿದೆ. ಅದರಿಂದ ಈ ರಂಗರೂಪದ ಕಣ್ನೋಟದ ಮಾಯಕತೆಯ ಒಳಗೆ ಅಡಕವಾಗಿರುವ ಹಲವು ಹೊರಚಾಚುಗಳು ಕಾಣತೊಡಗುತ್ತವೆ. ಹಾಗೆ ನೋಡಿದರೆ ಇದು ಹಲವು ನೋಡುಗರು ತಿಳಿಯುತ್ತಿರುವಂತೆ ಮಾಯಕದ ಲೋಕಕ್ಕೆ ಒಯ್ದು ಮರುಳು ಮಾಡುವ ಹಂಬಲವನ್ನು ಹೊಂದಿಲ್ಲ. ಬದಲಿಗೆ ನಮ್ಮೊಳಗೇ ಇರುವ ನಮ್ಮನ್ನು ಕಂಡುಕೊಳ್ಳಲು ಬೇಕಾದ ದಾರಿಗಳನ್ನು ತೋರಿಸಿಕೊಡುತ್ತಿದೆ. ಇದನ್ನು ಈ ರಂಗರೂಪ ಮತ್ತು ರಂಗವಾಚಿಕಗಳ ಚರ್ಚೆಯಲ್ಲಿ ಮುಂಚೂಣಿಗೆ ತರಬೇಕಾಗಿದೆ ಎಂದು ತಿಳಿಯುತ್ತೇನೆ.

ಕೆವ್ವೈ ನಾರಾಯಣ ಸ್ವಾಮಿ ಮತ್ತವರ ಗೆಳೆಯರು ಈ ರಂಗವಾಚಿಕವನ್ನು ಕಟ್ಟಿದರು ಅದನ್ನು ಬಸವಲಿಂಗಯ್ಯ ಮತ್ತವರ ಗೆಳೆಯರು ರಂಗರೂಪವನ್ನಾಗಿ ಬದಲಿಸಿದರು.ಇವೆಲ್ಲ ಈಗಾಗಲೇ ಕತೆಯಾಗಿ ಹೋಗಿವೆ. ಈಗ ಈ ನಾಟಕದ ಅಚ್ಚುರೂಪ ಹೊರಬರುವಾಗ ಈ ಮೇಲಿನ ಕೊಸರು ಮಾತುಗಳನ್ನಾಡಲು ಅನುವು ಮಾಡಿಕೊಟ್ಟು ನನ್ನನ್ನೂ ಆಟಕ್ಕೆ ಸೇರಿಸಿಕೊಂಡಿದ್ದಾರೆ.

'ಅರ್ಧಕಥಾನಕ' ಕುರಿತು

ಕನ್ನಡ ವಿಶ್ವವಿದ್ಯಾಲಯದಲ್ಲಿನನ್ನ ಸಹೋದ್ಯೋಗಿಯಾಗಿದ್ದ ಡಾ.ಉಷಾ ಅವರು ತಾವು ಹಿಂದಿಯಿಂದ ಕನ್ನಡಕ್ಕೆ ಅನುವಾದಿಸಿರುವ ಬನಾರಸಿದಾಸನ ಆತ್ಮಕತೆ 'ಅರ್ಧಕಥಾನಕ'ದ ಹಸ್ತಪ್ರತಿಯನ್ನು ಕಳುಹಿಸಿ ಓದಲು ಹೇಳಿ ನನಗೆ ಏನು ಅನ್ನಿಸುವುದೋ ಅದನ್ನು ಬರೆಯಲು ಹೇಳಿದ್ದಾರೆ. 16-17ನೆಯ ಶತಮಾನದ ನಡುವೆ ಐವತ್ತೈದು ವರ್ಷ ಬದುಕಿದ್ದ ಬನಾರಸಿದಾಸನೆಂಬಾತ ಬರೆದ ಕಥಾನಕವಿದು. ಮನುಷ್ಯನ ವಯಸ್ಸು ನೂರ ಹತ್ತು ವರ್ಷಗಳು ಎಂಬ ನಂಬಿಕೆ ಇದ್ದ ಕಾಲದಲ್ಲಿ ಐವತ್ತೈದು ವರ್ಷ ಬದುಕನ್ನು ಕಳೆದಾತ ತನ್ನ ಆತ್ಮಕತೆಗೆ ಅರ್ಧಕಥಾನಕವೆಂದು ಕರೆದದ್ದು ಸರಿಯಾಗಿಯೇ ಇದೆ. ಬರೆದ ಬಳಿಕ ಅವನು ತೀರಿಕೊಂಡದ್ದರಿಂದ ಇದು ಅರ್ಧಕ್ಕೆ ಉಳಿದ ಕಥಾನಕವೂ ಹೌದು. ತನಗೆ ಕಂಡದ್ದನ್ನು ಮಾತ್ರ ಇಲ್ಲಿ ಆತ ಹೇಳುತ್ತಿರುವುದರಿಂದ ಇನ್ನೊಂದು ನೆಲೆಯಲ್ಲಿಯೂ ಇದು ಅರ್ಧಕಥಾನಕ.

ಕಳೆದ ಶತಮಾನದಲ್ಲಿ ಮಧ್ಯಕಾಲೀನ ಬರಹಗಳ ಬಗೆಗೆ ಹುಟ್ಟಿಕೊಂಡ ಆಸಕ್ತಿಯಿಂದಾಗಿ ಈ ಬರಹವು ಇಂಗ್ಲಿಶ್ ಭಾಷೆಗೆ ಅನುವಾದಗೊಂಡಿದೆ. ಹಿಂದಿಯಲ್ಲಿಯೂ ವಿಪುಲ ಚರ್ಚೆಗೆ ಗುರಿಯಾಗಿದೆ. ಉಷಾ ಅವರು ಅರ್ಧಕಥಾನಕದ ಮೂಲ ಮತ್ತು ಇಂಗ್ಲಿಶ್ ಅನುವಾದವನ್ನು ಆಧರಿಸಿ ತಮ್ಮ ಈ ಕನ್ನಡ ಅನುವಾದವನ್ನು ಸಿದ್ಧಮಾಡಿದ್ದಾರೆ.

ಬನಾರಸಿದಾಸನು ಒಬ್ಬ ವರ್ತಕನಾಗಿದ್ದನು, ಜೈನಧರ್ಮದ ಅನುಯಾಯಿಯಾಗಿದ್ದ ಆತ ಹಲವಾರು ಜೈನ ಧರ್ಮಗ್ರಂಥಗಳನ್ನು (ಬಹುಪಾಲು ಸ್ತೋತ್ರಗಳು) ಕೂಡ ರಚಿಸಿದ್ದಾನೆ. ಈ ಕಥಾನಕದಲ್ಲಿ ಆತ ತನ್ನ ಕಾಲದ ಕೆಲವು ಮುಖ್ಯ ಚಾರಿತ್ರಿಕ ಸಂಗತಿಗಳನ್ನು ದಾಖಲು ಮಾಡುವುದಲ್ಲದೆ, ಅಂದಿನ ತನ್ನ ಪರಿಸಲರ ಕೆಲವು ವ್ಯಾವಹಾರಿಕ ಆಚರಣೆಗಳ ಮಾಹಿತಿಯನ್ನೂ ಒದಗಿದ್ದಾನೆ. ಈ ನಿರೂಪಣೆಯ ಜೊತೆಗೆ ಅವನ ಜೀವನದ ವಿವರಗಳು ಹೆಣೆದುಕೊಂಡಂತೆ ಅವನ ಕತೆ ಸಾಗುತ್ತದೆ. ಆತ ರಾಜಕೀಯವಾಗಿ ತಲ್ಲಣಗಳು ತುಂಬಿದ್ದ ಮತ್ತು ಧಾರ್ಮಿಕವಾಗಿ ಆತಂಕಗಳು ಆವರಿಸಿದ್ದ ವಾತಾವರಣದಲ್ಲಿ ತನ್ನ ದಿನಗಳನ್ನು ಕಳೆದಿದ್ದಾನೆ. ಅವನ ಜೀವಿತಾವಧಿಯಲ್ಲೇ ಮೂವರು ಮೊಘಲ್ ರಾಜರು ಆಗಿ ಹೋಗಿದ್ದಾರೆ. ಜೈನಧರ್ಮದ ಆಚರಣೆಗಳು ಆ ಸಾಮಾಜಿಕ ಸಂದರ್ಭದಲ್ಲಿ ಎದುರಿಸುತ್ತಿದ್ದ ಬಿಕ್ಕಟ್ಟಿನಲ್ಲಿ ಹಳೆಯದನ್ನು ಉಳಿಸಿಕೊಳ್ಳುವುದೋ ಅಥವಾ ಹೊಸ ದಾರಿಯನ್ನು ತುಳಿಯುವುದೋ ಎಂಬ ಇಕ್ಕಟ್ಟಿನಲ್ಲಿ ಜನರಿದ್ದ ಕಾಲ. ಬನಾರಸಿದಾಸ ಇದೆಲ್ಲವನ್ನೂ ತನ್ನ ನಿರೂಪಣೆಯಲ್ಲಿ ಹಿಡಿದಿಟ್ಟಿದ್ದಾನೆ.

ಕಥೆ ಮತ್ತು **ಆಖ್ಯಾಯಿಕಾ** ಎಂಬ ಎರಡು ಸಾಹಿತ್ಯ ಪ್ರಕಾರಗಳನ್ನು ಸಂಸ್ಕೃತ ಆಲಂಕಾರಿಕರು ಹೆಸರಿಸುತ್ತಾರೆ. ಇವೆರಡೂ ನಿರೂಪಣೆಗಳೇ ಆದರೂ ನಿರೂಪಕರು ಬೇರೆಯವರ ಕತೆಯನ್ನು ಹೇಳುವುದು ಒಂದು ಬಗೆಯಾದರೆ ತಾನೇ ಒಂದು ಪಾತ್ರವಾಗಿ ನಿರೂಪಿಸುವುದು ಇನ್ನೊಂದು ಬಗೆ. ಹೊಸ ಪರಿಭಾಷೆಯಲ್ಲಿ ಹೇಳುವುದದರೆ ಇವು ಜೀವನಚರಿತ್ರೆ ಮತ್ತು ಆತ್ಮಕತೆಗಳ ಮಾದರಿಯನ್ನು ಹೋಲುತ್ತವೆ. ಆದರೆ ನೀರೂಪಣೆಯಲ್ಲಿ ತಾನೆ ಹೇಳುವಂತೆ ಇರಬೇಕೋ ಇಲ್ಲವೇ ಯಾರದೋ ಕಥೆಯನ್ನು ತಾನು ಹೇಳುವಂತೆ ಇರಬೇಕೋ ಎಂಬ ಆಯ್ಕೆ ಮಧ್ಯಕಾಲೀನ ರಚನಕಾರರನ್ನು ಬಹುವಾಗಿ ಕಾಡಿದಂತೆ ತೋರುತ್ತದೆ. ಹಾಗಾಗಿ ತನ್ನ ಮಾತನ್ನೇ ಹೇಳುತ್ತಿದ್ದರೂ ಯಾರೋ ಹೇಳುತ್ತಿರುವಂತೆ ನಿರೂಪಿಸುವ ಬಗೆಯನ್ನು ಆ ಕಾಲದ ರಚನಕಾರರು ಅನುಸಿರಿದ್ದಾರೆ. ಕಬೀರನೇ ಹೇಳುತ್ತಿದ್ದರೂ ಕಬೀರ ಹೀಗೆ ಹೇಳುತ್ತಾನೆ ಎಂಬ ಬಗೆಯ ಸಾಲುಗಳನ್ನು ತಮ್ಮ ರಚನೆಗಳಲ್ಲಿ ಅವರು ಸೇರಿಸುತ್ತಾರೆ. ಬನಾರಸಿದಾಸನೂ ಅದೇ ದಾರಿಯನ್ನು ಹಿಡಿದಿದ್ದಾನೆ. ತನ್ನಕತೆಯಲ್ಲೇ ತಾನು ಒಂದು ಪಾತ್ರ ಎಂಬಂತೆ ನಿರೂಪಿಸುವ ಶೈಲಿ ಅವನದು. ಈ ಅರ್ಧಕಥಾನಕವನ್ನು ನೋಡಿರುವ ಹೊಸ ಕಾಲದ ನಿರೂಪಕರು, ಬೇರೆ ಭಾಷೆಗಳಿಗೆ ಅನುವಾದಿಸಿರುವವರು ನಿರೂಪಣೆಯಲ್ಲಿರುವ ಉತ್ತಮ ಪುರುಷ ಮತ್ತು ಪ್ರಥಮ ಪುರುಷ ನೆಲೆಗಳ ಬಗೆಗೆ ತಮ್ಮದೇ ಆದ ಆಯ್ಕೆಗಳನ್ನು ಮಾಡಿಕೊಂಡಂತೆಕಾಣುತ್ತದೆ.

ಈ ಬಗೆಯ ಕಥಾನಕಗಳಲ್ಲಿ ನಮ್ಮ ಆಸಕ್ತಿ ಯಾವ ಬಗೆಯದ್ದಾಗಿರಬೇಕು? ಇದೊಂದು ಸಾಂಸ್ಕೃತಿಕ ದಾಖಲೆ ಎಂಬಂತೆ ನೋಡುವುದು ಒಂದು ಬಗೆ. ಅನುವಾದ ಮಾಡಿರುವ ಡಾ. ಉಷಾ ಅವರೂ ತಮ್ಮದೂ ಇದೇ ದೃಷ್ಟಿ ಎಂದು ಹೇಳಿದ್ದಾರೆ. ಒಂದು ನಿರೂಪಣೆಯನ್ನು ಸಾಂಸ್ಕೃತಿಕ ದಾಖಲೆಯನ್ನಾಗಿ ನೊಡಬೇಕಾದರೆ ಅಗತ್ಯವಾದ ನೆಲೆಗಳು ಮಾತ್ರ ನಮ್ಮಲ್ಲಿ ಇನ್ನೂ ಖಚಿತವಾಗಿಲ್ಲ. ವಿವರಗಳನ್ನು ಇರುವಂತೆಯೇ ತೆಗೆದುಕೊಳ್ಳಬೇಕೋ ಇಲ್ಲವೇ ಅದನ್ನೊಂದು ದೃಷ್ಟಿಕೋನವೆಂದು ಗ್ರಹಿಸಬೇಕೋ ಎನ್ನುವುದೂ ಕೂಡ ಸ್ಪಷ್ಟಗೊಂಡಿಲ್ಲ. ಇಂತಹ ಹಲವು ಸಮಸ್ಯೆಗಳು ಬಗೆಹರಿಯುವವರೆಗೆ ಇಂತಹ ಕೃತಿಗಳನ್ನು ಸಾಂಸ್ಕೃತಿಕ ದಾಖಲೆಗಳನ್ನಾಗಿ ಪರಿಗಣಿಸುವುದನ್ನು ಎಚ್ಚರಿಕೆಯಿಂದಲೇ ನೋಡಬೇಕಾಗುತ್ತದೆ. ಆದರೆ ಬನಾರಸಿದಾಸ ಒಬ್ಬ ವ್ಯಕ್ತಿಯಾಗಿ ಏನೆಲ್ಲ ತಳಮಳಗಳನ್ನು ಅನುಭವಿಸಿದನೋ ಅದೆಲ್ಲವೂ ನಿರ್ಬಿಡೆಯಿಂದಇಲ್ಲಿ ಮಂಡಿತವಾದಂತೆ ತೋರುತ್ತದೆ. ಹಾಗಾಗಿ ಇದನ್ನು ಒಂದು ಆತ್ಮಕತೆಯ ಮಾದರಿಯನ್ನಾಗಿ ನೋಡಲು ಬೇಕಾದ ಪರಿಕರಗಳೆಲ್ಲವೂ ಇದರೊಳಗೇ ಅವಿತಿವೆ.

ಎಲ್ಲಕ್ಕಿಂತ ಹೆಚ್ಚಾಗಿ ಬನಾರಸಿದಾಸ ತನ್ನ ನಿರೂಪಣೆಗೆ ತನ್ನ ಕಾಲದ ಛಂದೋಪ್ರಕಾರಗಳನ್ನು ಆಯ್ದುಕೊಂಡಿದ್ದಾನೆ. ಅದನ್ನೊಂದು ಗದ್ಯಕಥನವನ್ನಾಗಿಸದೆ ಪದ್ಯದ ಎಲ್ಲ ಚಹರೆಗಳನ್ನೂ ಕಾಯ್ದುಕೊಂಡಂತೆ ತೋರುತ್ತದೆ. ಈ ಕಥಾನಕದ ವಿವರಗಳಲ್ಲಿ ಮಾತ್ರ ಆಸಕ್ತಿ ಹೊಂದಿರುವ ಈ ಅನುವಾದಕರು ಮೂಲದ ನಿರೂಪಣೆಯ ಮಾದರಿಯನ್ನು ಬಿಟ್ಟುಕೊಟ್ಟಿದ್ದಾರೆ. ಇದು ಸರಿಯೋ ತಪ್ಪೋ ಎಂಬುದು ಪ್ರಶ್ನೆಯಲ್ಲ. ಆದರೆ ಮೂಲದಲ್ಲಿ ಇದ್ದಿರಬಹುದಾದ ಪದ್ಯರಚನೆಯ ಹಲವಾರು ಭಾಷಿಕ ನೆಲೆಗಳು ಈ ಅನುವಾದದಲ್ಲಿ ಉಳಿಯುವುದು ಸಾಧ್ಯವಾಗಿಲ್ಲ. ಇದನ್ನೊಂದು ಕೊರತೆ

ಎನ್ನುವುದಕ್ಕಿಂತ ಅರ್ಧಕಥಾನಕದ ಇನ್ನೊಂದು ಅನುವಾದಕ್ಕೆ ಇರುವ ಅವಕಾಶ ಎಂದೂ ಪರಿಗಣಿಸಬಹುದು.

ಭಾರತೀಯ ಭಾಷಾ ಸಾಹಿತ್ಯದಲ್ಲಿ 'ನಾನು' ಎಂಬುದು ಕೇಂದ್ರಕ್ಕೆ ಬಂದುದು ಆಧುನಿಕತೆಯ ಹಿನ್ನೆಲೆಯಲ್ಲಿ ಎಂಬ ತಿಳುವಳಿಕೆಯ ಬುಡ ಭದ್ರವಾಗಿಲ್ಲ ಎಂಬುದು ಈ ಕಥಾನಕವನ್ನು ಓದಿದವರಿಗೆ ಗೊತ್ತಾಗುತ್ತದೆ. ಹಾಗೆ ನೋಡಿದರೆ ಭಕ್ತಿ ಪರಂಪರೆಯ ರಚನಕಾರರಲ್ಲಿ ಮೈದಳೆಯುವ ನಾನು ಎಂಬುದಕ್ಕೆ ಆಧುನಿಕ ನೆಲೆಯ ಅರ್ಥಗಳನ್ನು ಆರೋಪಿಸಲು ನಾವು ಹಿಂಜರಿಯುತ್ತೇವೆಯಾದರೂ ಹೆಣ್ಣುಜಗತ್ತನ್ನು ಮಂಡಿಸುವ ಅಕ್ಕ, ಮೀರಾ ಮುಂತಾದವರಲ್ಲಿ ಮಾತ್ರ ನಾನು ಎಂಬುದನ್ನು ಹೊಸಕಾಲದ ನೆಲೆಗೆ ಒಯ್ಯಲು ನಮಗೆ ಹಿಂಜರಿಕೆಇಲ್ಲ. ಅಂದರೆ ಕಥನ ಮಾಡುವವರ ಒಳ ಜಗತ್ತಿನ ಅನಾವರಣವೆಂಬುದು ಎರಡನೆಯ ಸಹಸ್ರಮಾನದ ಸಾಹಿತ್ಯದಲ್ಲಿ ಆಗಲೇ ನೆಲೆಗೊಂಡಿತ್ತು. ಇದಕ್ಕೆ ಬನಾರಸಿದಾಸನ ಈ ಕಥಾನಕವೂ ಒಂದು ನಿದರ್ಶನವೆಂದು ತೋರುತ್ತದೆ.

ಈ ಕೆಲವು ಮಾತುಗಳನ್ನು ಬರೆಯಲು ಡಾ. ಉಷಾ ಅವರು ಅನುವು ಮಾಡಿಕೊಟ್ಟಿದ್ದಾರೆ. ಅವರಿಗೆ ವಂದನೆಗಳು.

ಹೋರಾಟಗಳ ಬಗ್ಗೆ

(ಕೆ. ವೆಂಕಟೇಶ್ ಸಂಪಾದಿಸಿದ ಹೊತ್ತಗೆಗೆ ಬರೆದ ಮಾತು)

ಚಳವಳಿ, ಹೋರಾಟ, ಪ್ರತಿಭಟನೆ ಇವೆಲ್ಲವೂ ಇಪ್ಪತ್ತನೆಯ ಶತಕ ನಮಗೆ ತೆರೆದಿಟ್ಟ ಹಾದಿಗಳು. ದಂಗೆಗಳು ಅದಕ್ಕೂ ಹಿಂದೆಯೂ ಇದ್ದವಾದರೂ ತಿರುಗಿ ಬೀಳುವ ಬಗೆ ಮತ್ತು ಅವುಗಳ ಗುರಿ ಈಗ ಬೇರೆಯೇ ಆಗಿ ತೋರತೊಡಗಿದವು. ಆಳುವವರ ಎದುರು ಗುಂಪುಗಳು ಮುಂದಾಳುವಿನ ನೆರವಿನೊಡನೆ ದಂಗೆ ಏಳುತ್ತಿದ್ದುದು ಗೊತ್ತಿದೆ. ಅಂತಹ ದಂಗೆಗಳಿಗೂ ಇಂದಿನ ನಮ್ಮ ಹೋರಾಟ, ಚಳವಳಿಗೂ ಹೋಲಿಕೆಗಳು ಕಡಿಮೆ. ಜನ ಸಿಡಿದೆದ್ದ ಎತ್ತುಗೆಗಳು ಅಲ್ಲಲ್ಲಿ ದೊರೆಯುತ್ತವೆ. ಆಳುವವರ ನಡೆಗಳು ಜನರಿಗೆ ಹಿತವಾಗಿ ಕಾಣದಿದ್ದಾಗ, ಆ ನಡೆಗಳನ್ನು ಸಹಿಸಿ ಬದುಕುವುದು ಆಗದೆಂದು ತೋರಿದಾಗ ಜನರು ಹಲವು ಬಗೆಗಳಲ್ಲಿ ತಿರುಗಿಬಿದ್ದಿದ್ದಾರೆ. ಜನರ ನಡುವೆ ಇರುವ ಹಲವು ಆಚರಣೆಗಳು ನಡಾವಳಿಗಳು ಕೂಡ ಇಂತಹ ತಿರುಗುಬೀಳುವಿಕೆಯನ್ನು ಹೇಳುವಂತಿವೆ. ಎದುರಾಳಿಗಳು ಗೆದ್ದಾಗ ಸೋತವರ ಹೆಂಗಸರು ಗುಂಪಾಗಿ ಬೆಂಕಿಗೆ ಬೀಳುತ್ತಿದ್ದುದು, ಈ ಬದುಕು ಬೇಡವೆಂದು ಉಪವಾಸ ಮಾಡಿ ಸಾಯುತ್ತಿದ್ದುದು ಇವೆಲ್ಲವೂ ಒಂದಲ್ಲ ಒಂದು ಬಗೆಯ ತಿರುಗಿಬೀಳುವಿಕೆಗಳೇ ಆಗಿವೆ.

ಕಳೆದ ನೂರು ನೂರಿಪ್ಪತ್ತು ವರುಶಗಳಲ್ಲಿ ನಡೆದಿರುವ ಚಳವಳಿ, ಹೋರಾಟಗಳು ಗೊತ್ತಾದ ಗುರಿಯನ್ನು ಹೊಂದಿ ಮೊದಲಾದಂತೆ ಕಂಡರೂ ಅವುಗಳ ಹಿಂದೆ ಗುರುತಿಸಬಹುದಾದ ಚಿಂತನೆಯೊಂದು ಕೆಲಸ ಮಾಡುತ್ತಿರುವುದನ್ನು ಕಾಣಬಹುದು; ಅಲ್ಲದೆ ಈ ಹೋರಾಟಗಳು ಮುಗಿದ ಮೇಲೂ ಅವು ಬೇರೊಂದು ಬಗೆಯಲ್ಲಿ ಜನರ ಬದುಕಿನಲ್ಲಿ ನೆಲೆ ನಿಂತಿರುವುದೂ ಗೊತ್ತಾಗುವಂತಿರುತ್ತದೆ. ಅಂದರೆ ಚಳವಳಿ, ಹೋರಾಟಗಳು ಬಿಡಿಬಿಡಿಯಾಗಿದ್ದರೂ ಅವೆಲ್ಲವನ್ನೂ ಒಗ್ಗೂಡಿಸುವ ನೆಲೆಯೊಂದು ಇರುತ್ತದೆ. ಅದರಿಂದಲೇ ಚಳವಳಿಗಳು ತೀರಿದವೆಂದು, ಅವು ತಮ್ಮ ಗುರಿಯನ್ನು ತಲುಪಿದವೊ ಇಲ್ಲವೇ ತಲುಪಲಿಲ್ಲ ಎಂದು ಲೆಕ್ಕ ಹಾಕಲು ಬರುವುದಿಲ್ಲ. ಕೆಲವೊಮ್ಮೆ ತಪ್ಪು ಗುರಿಯನ್ನು ಹೊಂದಿದ ಇಲ್ಲವೆ ತಪ್ಪುದಾರಿಯನ್ನು ತುಳಿದ ಹೋರಾಟಗಳನ್ನು ಕಾಣಬಹುದಾದರೂ ಅವೂ ಕೂಡ ಒಟ್ಪಾರೆ ಚಿತ್ರದಲ್ಲಿ ತಮ್ಮ ಅಚ್ಚನ್ನು ಉಳಿಸಿರುತ್ತವೆ.

ಇಪ್ಪತ್ತೊಂದನೆಯ ಶತಮಾನದಲ್ಲಿ ಚಳವಳಿಗಳಿಗೆ ಜಾಗವಿಲ್ಲ ಎಂದು ಹೇಳುವವರೂ ಉಂಟು.ಏಕೆಂದರೆ ಹೋರಾಟ ಯಾವುದೇ ಇರಲಿ ಅದನ್ನು ಹತ್ತಿಕ್ಕುವ, ಅದರ ದಾರಿ ತಪ್ಪಿಸುವ ನೆಲೆಗಳು ಈಗ ಬಲವಾಗಿ ಬೆಳೆದಿರುವುದರಿಂದ ಹೋರಾಟಗಳು ಹುಸಿಯಾಗುತ್ತವೆ ಎನ್ನುವವರಿದ್ದಾರೆ.ಅಲ್ಲದೆ ಹೋರಾಟಗಳಿಂದ ಪಡೆಯ ಬಹುದಾದ್ದನ್ನು ಪಡೆಯಲು ಈಗ

ಹೊಸ ದಾರಿಗಳಿರುವುದರಿಂದ ಆ ಹೊಸ ದಾರಿಗಳು ನೆಲೆ ಪಡೆಯುತ್ತವೆಯೇ ಹೊರತು ಹೋರಾಟಗಳಲ್ಲ ಎನ್ನುವವರೂ ಇದ್ದಾರೆ. ಹೋರಾಟ, ಚಳವಳಿಗಳನ್ನು ನಾವು ಹೇಗೆ ವಿವರಿಸಿಕೊಳ್ಳುತ್ತೇವೆ ಎನ್ನುವುದರ ಮೇಲೆ ಮೇಲಿನ ಮಾತು ದಿಟವೋ ಸಟೆಯೋ ಎಂಬುದು ನಿಂತಿದೆ. ಬೀದಿ ಜಗಳವನ್ನು, ಉರುಬಿನ ಕೂಗಾಟವನ್ನು ಚಳವಳಿ ಎನ್ನುವುದಾರೆ ಅಂತಹ ಚಳವಳಿಗಳ ಕಾಲ ಮುಗಿದಿದೆ. ಎನ್ನಬೇಕು ಆದರೆ ಬದುಕಿನ ಅರೆಕೊರೆಗಳನ್ನು ತಿದ್ದುವ, ತುಂಬುವ ಅದಕ್ಕಾಗಿ ಬೇಕಾದದಾರಿ ಸವೆಸುವ ನೆಲೆಯನ್ನೇ ಹೋರಾಟಎನ್ನುವುದಾದರೆ ಈ ಕಾಳದಲ್ಲಿಯೂ ಅವುಗಳಿಗೆ ಜಾಗವಿದೆ ಎಂದು ಒಪ್ಪಬೇಕಾಗುವುದು.

ಹೋರಾಟಗಳ ಬೆಳವಣಿಗೆಯನ್ನು ಗುರುತಿಸುವವರು ಗುರಿ ಮತ್ತು ದಾರಿಗಳ ನಂಟನ್ನು ಕಾಣಲು ಮುಂದಾಗುತ್ತಾರೆ. ಚಳವಳಿಗೆ ಗುರಿ ಇರುವಂತೆ ದಾರಿಯೂ ಇರುವುದು ತಾನೆ. ಸರಿಯಾದ ಗುರಿಗೆ ಸರಿಯಾದ ದಾರಿಯೂ ಇರಬೇಕೆಂದು ಹೇಳುವುದುಂಟು. ಆದರೆ ಸರಿ ಎಂದರೇನು? ಸರಿ ಎನ್ನುವುದನ್ನು ಗೊತ್ತು ಮಾಡುವವರು ಯಾರು? ಒಂದು ಎತ್ತುಗೆಯನ್ನು ನೋಡೋಣ. ಬೆಳೆಯುವ ಜಮೀನಿದೆ. ಈ ಜಮೀನನ್ನು ಸರಕಾರ ಕೊಂಡುಕೊಂಡು ಉದ್ದಿಮೆಗಳನ್ನು ನೆಲೆಗೊಳಿಸುವವರಿಗೆ ಕೊಡುತ್ತದೆ ಎಂದುಕೊಳ್ಳಿ. ಇದರಿಂದ ಬೇರು ಕಿತ್ತವರಂತಾಗುವ ಜನರು ಏನು ಮಾಡಬೇಕು? ಜಮೀನನ್ನು ಮಾರುವುದಿಲ್ಲ ಎಂದು ಹೋರಾಟ ನಡೆಸುತ್ತಾರೆ ಎಂದುಕೊಳ್ಳಿ. ಈ ಹೋರಾಟಕ್ಕೆ ಯಾವುದು ಸರಿಯಾದ ದಾರಿ? ಇದನ್ನು ಕಂಡುಕೊಳ್ಳುವವರು ಕಳೆದುಕೊಳ್ಳುವ ಜನರೋ ಇಲ್ಲವೇ ಪಡೆದುಕೊಳ್ಳುವ ಸರಕಾರ/ ಉದ್ದಿಮೆದಾರರೋ? 'ಮಾತುಕತೆ' ಸರಿಯಾದ ದಾರಿ ಎಂದು ಸರಕಾರ ಹೇಳುತ್ತದೆ; ಜನ ಅದನ್ನು ಒಪ್ಪದೇ ಹೋಗಬಹುದು. ಜಮೀನನ್ನು ನೀಡುವುದಿಲ್ಲ ಎಂದು ಅನ್ನನೀರು ಬಿಟ್ಟೋ, ಸರಕಾರದ ಮಂದಿಯನ್ನು ಹೊಡೆದು ಬಡಿಯುವ ದಾರಿಯನ್ನು ಜನ ಹಿಡಿದರೆ ಅದು ಸರಿಯಾದ ದಾರಿ ಅಲ್ಲ ಎಂದು ಸರಕಾರ ಹೇಳುತ್ತದೆ. ಹೀಗಾಗಿ ಈ ದಾರಿ ಸರಿ ಇಲ್ಲವೇ ಈ ದಾರಿ ಸರಿಯಲ್ಲ ಎಂದು ಗೊತ್ತುಮಾಡಲು ನಿಗದಿಯಾದ ನೆಲೆಗಳಿಲ್ಲ. ಹಾಗಾಗಿ ಹೋರಾಟದ ಗುರಿ ಮತ್ತು ದಾರಿಗಳ ನಂಟನ್ನು ಕಾಣುವವರು ಯಾರು ಹೋರಾಡುತ್ತಿರುವವರು ಮತ್ತು ಯಾರ ಎದುರಿಗೆ ಅವರು ನಿಂತಿದ್ದಾರೆ ಎಂಬುದನ್ನು ಕಾಣದೇ ಹೋದರೆ ಅವರ ವಿವರಣೆಗಳು ತಪ್ಪಾಗುತ್ತವೆ.

ಜನ ಕಾನೂನಿನ ಮೊರೆ ಹೋಗುವುದು ಸರಿಯಾದ ದಾರಿಯೇ ಹೊರತು ಹೋರಾಟದ ದಾರಿಯನ್ನು ತುಳಿಯುವುದಲ್ಲ ಎಂಬ ಚಿಂತನೆ ಈಗ ಬಲವಾಗಿ ಬೇರೂರಿದೆ. ಕಲಿತವರು, ಉಳ್ಳವರು ಇದನ್ನೇ ನಂಬಿದ್ದಾರೆ. ಹೊಳೆಯ ನೀರನ್ನು ಹೇಗೆ ಹಂಚಿಕೊಳ್ಳಬೇಕು ಎಂಬುದನ್ನು ಹೇಳಲು ಕೋರ್ಟುಗಳ ಮೊರೆಹೋಗಬೇಕು ಮತ್ತು ಕೋರ್ಟು ಏನನ್ನು ಹೇಳುವುದೋ ಅದನ್ನು ಒಪ್ಪಬೇಕು ಎಂದು ಈಗ ನಂಬಿಸಲಾಗುತ್ತದೆ. ಇದಲ್ಲದೆ ಬೇರೆ ಯಾವ ದಾರಿಯನ್ನು ತುಳಿದರೂ ಅದು ಸರಿಯಲ್ಲ ಎಂದೇ ಹೇಳಲಾಗುತ್ತದೆ.

ಇದಲ್ಲದೆ ಗುರಿ ಮತ್ತು ದಾರಿಗಳ ನಂಟನ್ನು ಬಣ್ಣಿಸಲು ಹೊರಡುವವರಿಗೆ ಇನ್ನೊಂದು ಕೊರಕು ಕೂಡ ಈಗ ಕಾಣತೊಡಗಿದೆ. ಅದೆಂದರೆ ಗುರಿಯೇ ಸರಿಯಲ್ಲ ಎಂದು ಹೇಳುವುದು. ಈಗ ಎಲ್ಲವನ್ನೂ ಒಂದಕ್ಕೊಂದು ಎದುರಾಗಿ ನಿಂತ ನೆಲೆಯಲ್ಲೆ ಗುರುತಿಸತೊಡಗಿದ್ದೇವೆ. ಅಣೆಕಟ್ಟುಗಳು ಸರಿಯೋ ತಪ್ಪೋ? ಅಣುವಿದ್ಯುತ್ತು ಬೇಕೋ

ಬೇಡವೋ? ನಗರಗಳು ಬೆಳೆಯಬೇಕೋ ಬೇಡವೋ? ತಾಂತ್ರಿಕತೆ ಬೇಕೋ ಬೇಡವೋ? ಸಮಾನತೆ ಎನ್ನುವುದು ದಿಟವೋ ಸಟೆಯೋ? ಹೀಗೆ ನಮ್ಮ ಸುತ್ತ ಇರುವ ನೂರಾರು ಕೇಳ್ವಿಗಳನ್ನು ಒಂದಕ್ಕೊಂದು ಎದರು ಬದರಾಗಿ ನಿಲ್ಲುವ ಬದಲುಗಳ ಮೂಲಕ ಟಿಲ್ಲಿಸುವ ಬಗೆ ಈಗ ಬಲವಾಗಿ ಬೇರೂರಿದೆ. ಅಂದರೆ ಹೋರಾಟದ ಗುರಿ ಸರಿಯೋ ತಪ್ಪೋ ಎಂಬುದನ್ನು ಕಂಡುಕೊಳ್ಳಲಾಗದೆ ಗೊಂದಲದಲ್ಲಿ ಬೀಳುವಂತೆ ಮಾತಿಣವುದು ಈಗಿನ ಬಗೆಯಾಗಿದೆ. ಕನ್ನಡ–ಇಂಗ್ಲಿಶ್‌ಗಳ ನಂಟನ್ನು ಕಲಿಕೆಯ ನೆಲೆಯಲ್ಲಿ ವಿವರಿಸುತ್ತಿರುವ ಬಗೆಯನ್ನು ಇದಕ್ಕೆ ಒಂದು ಎತ್ತುಗೆಯನ್ನಾಗಿ ನಿಡಬಹುದು. ಯಾವ ಮಾತನ್ನಾಡಿದರೂ ಅದಕ್ಕೆ ಎದುರಾಗಿ ಇನ್ನೊಂದನ್ನು ತಂದು ನಿಲ್ಲಿಸಿ ಬಾಯಿ ಕಟ್ಟುವುದು ಈಗ ಸುಳುವಾಗಿಬಿಟ್ಟಿದೆ. ಇದರಿಂದಲೂ ಹೋರಾಟಗಳಿಗೆ ಇನ್ನುಜಾಗವಿಲ್ಲ ಎಂದು ನಂಬಿಸಲಾಗುತ್ತಿದೆ.

ಅಂದರೆ ಈ ಕಾಲದಲ್ಲಿ ಚಳವಳಿಗಳಿಗೆ ಜಾಗವಿಲ್ಲ ಎಂದು ನಂಬೋಣವೇ? ಚಳವಳಿಗೆ ಒಂದು ಗೊತ್ತಾದ ಗುರಿ ಇರುವುದೆಂದು ತಿಳಿದಾಗ ಮತ್ತು ಆ ಗುರಿಯನ್ನು ತಲುದರೆ ಸಾಕು ಎಂದು ತಿಳಿದರೆ ಮಾತ್ರ ಈ ಮಾತನ್ನು ಒಪ್ಪಬೇಕಾಗುತ್ತದೆ. ಆದರೆ ಹೋರಾಟ ಎನ್ನುವುದು ಬದುಕಿನ ಒಂದು ನೆಲೆ; ಒಂದು ಹೋರಾಟದ ಗುರಿಯನ್ನು ತಲುಪಲಿ ಬಿಡಲಿ ಅದು ಹಲವು ಹೋರಾಟಗಳ ಸರಣಿಯ ಕೊಂಡಿ ಎಂದು ತಿಳಿದರೆ ಆಗ ಮೇಳಿನ ವಾದವನ್ನು ಒಪ್ಪಬೇಕಿಲ್ಲ. ಹೋರಾಟಗಳಿಗೆ ಬದಕನ್ನು ನೇರ್ಪುಗೊಳಿಸುವ ದೊಡ್ಡ ಗುರಿಯೊಂದು ಇರುತ್ತದೆ. ಹಾಗೆ ನೆರವಾಗುವ ಬಗೆ ತುಂಡು ತುಂಡಾಗಿ ಕಾಣಬಹುದೇ ಹೊರತು ಇಡಿಯಾಗಿ ಅಲ್ಲ. ಹಾಗಾಗಿ ಒಂದು ಗುರಿ ತಲುಪಿದ ಕೂಡಲೆ ತಳುವಿ ನಿಲ್ಲಲಾಗುವುದಿಲ್ಲ. ಅಲ್ಲಿಂದ ಮುಂದಿನ ಗುರಿಯತ್ತ ಸಾಗಬೇಕಾಗುತ್ತದೆ. ಈ ಮಾತನ್ನು ಒಪ್ಪುವವರೂ ಕೂಡ ಚಳವಳಿಯ ದಾರಿಗಳು ಬದಲಗುತ್ತಿರುವುದನ್ನು ಕಾಣುತ್ತಿದ್ದಾರೆ. ಇದು ಸರಿಯೇ ಸರಿ. ಇದು ಎಲ್ಲ ಕಾಲದಲ್ಲೂ ಇದ್ದದ್ದೇ ಸರಿ. ಜನರು ಯಾವ ಗುರಿಯತ್ತ ಸಾಗುತ್ತಿದ್ದಾರೆ ಎಂದು ಕಂಡುಕೊಳ್ಳಲು ಹಲವಾರು ದಿನಗಳೆ ಬೇಕಾಗುತ್ತಿದ್ದ ಕಾಲದದಿಂದ ನಾವೀಗ ಕಣ್ಣು ಮಿಟುಕಿಸುವುದರೊಳಗೆ ಕಾಲ ದೇಶಗಳ ನಂಟನ್ನು ಕಟ್ಟಬಹುದಾಗಿದೆ. ಇದು ಹೋರಾಟಗಳ ಹರವನ್ನು ಹೆಚ್ಚಿಸಲು ನೆರವಾಗುತ್ತದೆ. ಜತೆಗೆ ಗುರಿಯ ಬಗೆಗಿನ ತಿಳಿವಿನಲ್ಲಿ ಕೊರತೆಗಳೂ ತಲೆಎತ್ತುವ ಅಪಾಯವಿರುತ್ತದೆ. ಇದನ್ನು ಸರಿಪಡಸಿಕೊಳ್ಳುವುದು ಹೇಗೆ ಎಂಬುದು ಈ ಕಾಲದ ಸವಾಲಾಗಿದೆ.

ನಾಯಕರು ಬೇಕೇ ಬೇಡವೇ ಎಂಬುದು ಇನ್ನೊಂದು ಕೇಳ್ವಿ. ಈ ಹೊತ್ತಿನ ಗೊತ್ತುಗುರಿಗಳನ್ನು ನೋಡಿದರೆ ನಾಯಕರ ಕಾಲ ಮುಗಿದಂತೆ ತೋರುತ್ತದೆ. ಇಲ್ಲವೇ ಅದನ್ನು ಹೀಗೂ ಹೇಳಬಹುದು. ನಾಯಕರೆನಿಸಿಕೊಂಡವರು ಈಗ ಮುನ್ನಡೆಸುವ, ಜನರನ್ನುತಮ್ಮತ್ತ ಸೆಳೆಯುವ ಜಾದುವನ್ನು ತೋರುವ ಜಾಣರಾಗಿರುವುದು, ತಮ್ಮಕಾಲದ ಬೇಕುಗಳನ್ನು ಪೂರೈಸಲು 'ಇಳಿದು' ಬಂದವರಂತೆ ನಡೆಯುಕೊಳ್ಳುವ ಕಾಲ ಮುಗಿದಿದೆ. ಆದರೆ ಹೋರಾಟದಲ್ಲಿ ತೊಡಗಿರುವವರ ನಡುವೆ ಸೇತುವೆಗಳಾಗಿ ಕೆಲಸ ಮಾಡುವ, ಎಚ್ಚರವನ್ನು ಕಾಯ್ದುಕೊಳ್ಳುವ ಹೊಣೆಯುಳ್ಳವರು ಈಗಲೂ ಬೇಕಾಗಿದ್ದಾರೆ. ಅಂದರೆ ನಾಯಕರೆನಿಸಿಕೊಂಡವರ ಕೆಲಸವೀಗ ಬೇರೆಯಾಗಬೇಕಿದೆ.

ಕುವೆಂಪು ಸಾಹಿತ್ಯದ ವೈಚಾರಿಕತೆ

ಈ ಮಾತುಗಳನ್ನು ಆರಂಭ ಮಾಡುವ ಮೊದಲು ನನ್ನ ಎಳವೆಯಲ್ಲಿ ನಡೆದ ಒಂದು ಘಟನೆ ನೆನಪು ಮಾಡಿಕೊಳ್ಳುತ್ತೇನೆ. ಆಗ ನಾನು ನನ್ನ ಚಿಕ್ಕ ಹಳ್ಳಿಯ ಶಾಲೆಯಲ್ಲಿ ಐದನೆಯ ತರಗತಿಯಲ್ಲಿ ಓದುತ್ತಿದ್ದ ನೆನಪು. ಒಂದು ದಿನ ಬೆಳಿಗ್ಗೆ ಶಾಲೆಗೆ ಹೋಗುವಾಗ ಇಡೀ ಊರಿನಲ್ಲಿ ಒಂದು ಗಂಭೀರವಾದ ವಾತಾವರಣ ಕಂಡು ಬಂದಿತು. ಜನ ಗುಂಪುಗುಂಪಾಗಿ ಸೇರಿ ಮಾತನಾಡಿಕೊಳ್ಳುತ್ತಿದ್ದರು. ಹಿಂದಿನ ದಿನ ರಾತ್ರಿ ನಮ್ಮ ಊರಿನ ಒಬ್ಬರು ಹಿರಿಯರು ತೀರಿಕೊಂಡಿದ್ದರು. ಊರಿನ ಹಿರಿಯರು ತೀರಿಕೊಂಡರೆ ಊರಿಗೇ ಒಂದು ಶೋಕ ಆವರಿಸುತ್ತದೆ. ದೊಡ್ಡವರ ಶೋಕದ ಪರಿಣಾಮ, ಶಾಲೆಗೆ ಬಂದಿದ್ದರೂ ಕೂಡ ನಮಗೂ, ನಮಗಿಂತ ಚಿಕ್ಕವರಿಗೂ ದಿಗಿಲಿನ ರೂಪದಲ್ಲಿ ಆವರಿಸಿಕೊಂಡಿತ್ತು. ನಾನು ಶಾಲೆಗೆ ಬಂದಾಗ ಅಲ್ಲಿ ಒಬ್ಬ ಹುಡುಗ, ಅವನ ಹೆಸರು ಮಹದೇವ ಎಂದು ನೆನಪಿದೆ. ಕಥೆಗಳನ್ನು ಹೇಳುವುದರಲ್ಲಿ ಬಹಳ ನಿಸ್ಸೀಮನಾದ, ಸ್ವಲ್ಪ ಎತ್ತರದ ವ್ಯಕ್ತಿಯಾದ ಅವನ ಸುತ್ತ ಹುಡುಗರೆಲ್ಲ ಸುತ್ತುವರೆದಿದ್ದರು. ಸಂದಿಯೊಳಗಡೆ ಅವನ ಮುಖ ನೋಡಿ ನಾನು ಅಲ್ಲಿಗೆ ಹೋದೆ. ನಾವೆಲ್ಲ ಅವನ ಮಾತು ಕೇಳುತ್ತಾ ಇದ್ದೆವು. ಅವನ ಮಾತುಗಳಲ್ಲಿ ಬಂದ ಒಂದು ವಾಕ್ಯ ಏನೆಂದರೆ : ಉಂಡು ಮಲಗೋ ಹೊತ್ತಿಗೆ ಚಿಕ್ಕೆ ಬಿತ್ತು, ಬೆಳಗು ಹರಿಯೋ ಹೊತ್ತಿಗೆ ಪ್ರಾಣ ಹೋಯ್ತು.

ಆ ವಾಕ್ಯ ಕೇಳಿದಾಗಿನಿಂದ ನನಗೆ ಡೆತ್ ಅಂದರೆ ಏನೆಂದು ಅರಗಿಸಿಕೊಳ್ಳುವುದಕ್ಕೆ ಆಗಿಲ್ಲ. ಅನಂತರದ ದಿನಗಳಲ್ಲಿ ನಕ್ಷತ್ರಗಳು ಬೀಳುವುದಿಲ್ಲ, ಅವು ಕಾಸ್ಮಿಕ್‌ಡಸ್ಟ್ ಅಥವಾ ಕಾಮೆಟ್‌ಗಳೋ ಇನ್ನೇನೋ ಇರುತ್ತವೆ ಎಂದು ಗೊತ್ತಾದರೂ ಈಗಲೂ ರಾತ್ರಿ ಹೊತ್ತು ಆಕಾಶದಲ್ಲಿ ಚುಕ್ಕಿಗಳು ಅಥವಾ ಆಕಾಶಕಾಯಗಳೇನಾದರೂ ನೆಲದ ಕಡೆ ಬಂದರೆ ಯಾರಿಗೆ ಏನಾಗುವುದೋ ಎಂಬ ಆತಂಕ ಶುರುವಾಗುತ್ತದೆ. ಯಾಕೆ ಈ ಮಾತನ್ನು ಹೇಳಿದೆ ಎನ್ನುವುದನ್ನು ನನ್ನ ಮುಂದಿನ ಮಾತಿನ ಯಾವುದೋ ಒಂದು ಘಟ್ಟಕ್ಕೆ ಕನೆಕ್ಟ್ ಮಾಡಿಕೊಳ್ಳುತ್ತೇನೆ.

ನಾನು ಈಗ ಚರ್ಚಿಸುತ್ತಿರುವ ವಿಷಯ 'ಕುವೆಂಪು ಸಾಹಿತ್ಯದಲ್ಲಿ ವೈಚಾರಿಕತೆ'. ಅದು ಕುವೆಂಪು **ಸಾಹಿತ್ಯದ ವೈಚಾರಿಕತೆಯೋ** ಅಥವಾ **ಸಾಹಿತ್ಯದಲ್ಲಿ ವೈಚಾರಿಕತೆಯೋ** ಅನ್ನುವುದು ದೊಡ್ಡ ಪ್ರಶ್ನೆ. ಕನ್ನಡ ವಿಮರ್ಶೆ ಬೇಕಾಗಿಯೋ ಬೇಡವಾಗಿಯೋ 40–50 ವರ್ಷಗಳಿಂದ ಈ ವೈಚಾರಿಕತೆ ಅನ್ನುವ ಪ್ರಶ್ನೆಯನ್ನ ತನ್ನ ಮೇಲೆ ಹಾಕಿಕೊಂಡಿದೆ. ಅರವತ್ತರ ದಶಕದ ಕೊನೆಯಲ್ಲಿ ಸಾಹಿತ್ಯದಲ್ಲಿ ವೈಚಾರಿಕತೆ ಅಂತನ್ನುವ ತಲೆಬರಹದ ಮನ್ವಂತರ ವಿಶೇಷಾಂಕವೊಂದು ಪ್ರಕಟವಾಯಿತು. ನನ್ನ ತಲೆಮಾರಿನವರಿಗೆ ಅದೊಂದು

ಟೆಕ್ಸ್ಟ್‌ಬುಕ್ ತರಹ ಇತ್ತು. ನಾನು ಎಂ.ಎ. ಓದುವಾಗ ಗುಂಗು ಹತ್ತಿಸಿದ ಪುಸ್ತಕ ಅದು. ಅದರಲ್ಲಿ ಕನ್ನಡದ ಬಹಳ ಅದ್ಭುತವಾದ ಲೇಖನವೊಂದನ್ನು ರಾಜೀವ್ ತಾರಾನಾಥ್ ಬರೆದಿದ್ದಾರೆ. ಅವರು ಬರೆದ ಅತ್ಯಂತ ಶ್ರೇಷ್ಠಲೇಖನ ಅದು ಎಂದು ನಾನು ಭಾವಿಸಿದ್ದೇನೆ. ಕನ್ನಡದ ಆ ಕಾಲದ ಬಹುಪಾಲು ಮುಖ್ಯ ಬರಹಗಾರರೆಲ್ಲರೂ ಆ ವಿಶೇಷಾಂಕದಲ್ಲಿ ಬರೆದಿದ್ದಾರೆ. ದ.ರಾ.ಬೇಂದ್ರೆ, ಕುರ್ತಕೋಟಿ ಇವರೆಲ್ಲ ಬರೆದಿದ್ದಾರೆ.

ಆಗಿನಿಂದ ವೈಚಾರಿಕತೆಯ ಪ್ರಶ್ನೆಯನ್ನು ಕನ್ನಡ ವಿಮರ್ಶೆ ಮೇಲಿಂದ ಮೇಲೆ ಮೇಲಿಂದ ಮೇಲೆ ಕೇಳಿಕೊಳ್ಳುತ್ತಿದೆ. ವಿಚಾರ ಎನ್ನುವ ಪದದಿಂದ ವೈಚಾರಿಕತೆ ಬರುತ್ತದೆ.

ಈ ವಿಚಾರವೆಂದರೆ ಏನು?
ಒಂದು ಹೇಳಿಕೆಯೇ?
ಬದುಕಿನ ಬಗೆಗೊಂದು ದೃಷ್ಟಿಕೋನವೇ?
ಬದುಕುವುದಕ್ಕೆ ಬೇಕಾದಂತಹ ದಾರಿದೀಪದ ಮಾತುಗಳೇ?
ಬೇಕೆಂದಾಗ ಉಲ್ಲೇಖಿಸ ಬಲ್ಲ ಮಾತುಗಳೇ?
ಒಂದು ಚಿಂತನಾ ಕ್ರಮವೇ?
ಆ ಚಿಂತನಾಕ್ರಮ ಆ ಲೇಖಕರದ್ದೇ? ಅಥವಾ
ಅದನ್ನು ಲೇಖಕರು ಒಪ್ಪಿಕೊಂಡಂತದ್ದೇ? ಅಥವಾ

ಲೇಖಕರು ತಮ್ಮ ಬರಹಗಳಲ್ಲಿ ಅದರ ಸತ್ಯಾಸತ್ಯತೆಗಳನ್ನು ಪರೀಕ್ಷೆ ಮಾಡುತ್ತಿರುತ್ತಾರೆಯೇ?

ಈ ರೀತಿಯ ಪರೀಕ್ಷೆಗೆ ಒಳಗಾಗುವ ವಿಚಾರಗಳು ಜಾಗತಿಕವಾಗಿ ಹಲವಾರು ಬಗೆಯಲ್ಲಿ ಚರ್ಚೆಗೆ ಒಳಗಾಗಿವೆಯೇ?

ಇವೆಲ್ಲವೂ ಕೂಡ ಬಹಳ ದೊಡ್ಡ ಪ್ರಶ್ನೆಗಳು.

'ವಿಚಾರವಾದ' ಎನ್ನುವಂತಹ ಮಾತನ್ನು ಮೊದಲನೇ ಸಲ ಕನ್ನಡದಲ್ಲಿ ಬಳಸಿದವರು ಗೌರೀಶ ಕಾಯ್ಕಿಣಿಯವರು ಎಂದು ನಾನು ತಿಳಿದಿದ್ದೇನೆ. ಅವರು ಇದೇ ಹೆಸರುಳ್ಳ ಒಂದು ಚಿಕ್ಕಪುಸ್ತಕವನ್ನು ಬರೆದರು. ಅದರಲ್ಲಿ ರ್‍ಯಾಶನಲಿಸಂ ಅನ್ನುವ ಪದಕ್ಕೆ ಸಾಟಿಯಾಗಿ 'ವಿಚಾರವಾದ' ಎನ್ನುವ ಪದವನ್ನು ಬಳಸಿದರು. ಈ ವೈಚಾರಿಕತೆ ಅನ್ನುವುದು ರ್‍ಯಾಶನಲಿಸಂಗೆ ಸಂಬಂಧಪಟ್ಟಿರುವುದಾ? ಇರ್‍ಯಾಶನಲ್ ಆಗಿರುವಂತದ್ದನ್ನೆಲ್ಲಾ ಅವೈಚಾರಿಕತೆ ಎನ್ನುತ್ತೇವೆಯೇ ನಾವು? ಮೇಲಿಂದ ಮೇಲೆ ಈ ಪ್ರಶ್ನೆಗಳು ಕಾಡುತ್ತಿರುತ್ತವೆ. ಹೋಗಲಿ ಅವೈಚಾರಿಕವಾದದ್ದೆಲ್ಲಾ ಸಾಹಿತ್ಯದಲ್ಲಿ ನಗಣ್ಯವೇ ಅಥವಾ ತಿರಸ್ಕಾರವೇ? ವೈಚಾರಿಕವಾದದ್ದು ಮಾತ್ರ ಮಾನ್ಯವಾಗುತ್ತದೆಯೇ ಎಂಬುದೂ ಕೂಡ ಚರ್ಚೆಗೆ ಒಳಗಾಗಬೇಕಾಗಿದೆ.

ಈ ಚರ್ಚೆಗಳನ್ನೆಲ್ಲ ತಿಳಿದುಕೊಳ್ಳುತ್ತಿರುವ ಹೊತ್ತಿನಲ್ಲೇ ಸಂಸ್ಕೃತ ಕಾವ್ಯ ಮೀಮಾಂಸೆಯನ್ನೂ ಓದುತ್ತಿದ್ದ ನಮಗೆ ಅಲ್ಲಿ **'ವಿಚಾರಿತ ಸುಂದರ'** ಮತ್ತು **'ಅವಿಚಾರಿತ**

ರಮಣೀಯ' ಎಂಬೆರಡು ಪದಗಳು ಒಟ್ಟೊಟ್ಟಿಗೆ ಕೇಳಸಿಗುತ್ತಿದ್ದವು. 'ವಿಚಾರಿತ ಸುಂದರ' ಮತ್ತು 'ಅವಿಚಾರಿತ ರಮಣೀಯ' ಎಂಬೆರಡೂ ಸಾಹಿತ್ಯದಲ್ಲಿ ಇರುತ್ತವೆ. ಅವಿಚಾರಿತ ಎಂಬ ನೆಲೆಗಳಿಂದ ಅವೈಚಾರಿಕ ನೆಲೆಗಳು ಮೈತಳೆಯುವುದಾದರೆ, (ಅವೈಚಾರಿಕತೆಯನ್ನ ಇರ್‍ರ್ಯಾಶನಲಿಸಂ ಎಂದು ಕರೆಯುವುದಾದರೆ) ಮತ್ತು ರ್‍ಯಾಶನಾಲಿಟಿಯನ್ನ ಮಾತ್ರ ನಾವು ಒಪ್ಪುವುದಾದರೆ (ಅವೈಚಾರಿಕವಾದುದನ್ನು ನಿರಾಕರಿಸಿದರೆ) ಆಗ ಸಾಹಿತ್ಯವನ್ನು ಹೇಗೆ ಅರಿಯುವುದು? ಅದನ್ನು ಒಪ್ಪಲು ಯಾವ ನೆಲೆಗಳನ್ನು ನೆಮ್ಮಬೇಕು? ನಮ್ಮ ಸಾಹಿತ್ಯವಿಮರ್ಶೆಯಲ್ಲಿ ವೈಚಾರಿಕತೆ ಎಂಬುದು ತಂತಾನೇ ನೆಲೆಗೊಳ್ಳುತ್ತದೆ ಎಂದು ತಿಳಿದಿಲ್ಲ. ಬರಹಗಾರರು ಎಚ್ಚರದಿಂದ ಅದನ್ನು ನೆಲೆಗೊಳಿಸಬೇಕು ಮತ್ತು ಅವೈಚಾರಿಕವಾದುದನ್ನು ದೂರವಿರಿಸಬೇಕು ಎಂದು ತಿಳಿಯಲಾಗಿದೆ. ಹೀಗಾಗಿ ನಾವು ಇನ್ನೂ ಬಹಳಷ್ಟು ಬೇರಿನ ಪ್ರಶ್ನೆಗಳನ್ನು, ಬೇರಿನ ಮಾತುಗಳನ್ನು ಇನ್ನೂ ಬಿಡಿಸಿಕೊಂಡಿಲ್ಲ.

ಕುವೆಂಪು ಅವರ ಸಾಹಿತ್ಯ ಎಂದಾಗ ಅವರ ಗದ್ಯ ಬರಹಗಳು, ನಾಟಕಗಳು, ಕಾದಂಬರಿಗಳು, ಕಾವ್ಯ ಎಲ್ಲವನ್ನೂ ಒಟ್ಟಿಗೆ ಸೇರಿಸುವುದಾದರೆ ಅವುಗಳಲ್ಲೇ ಒಂದು ಬಗೆಯ ಚಿಂತನೆಗಳು ಕೊಂಡಿಗಳ ಬಗೆಯಲ್ಲಿ ಹರಡಿಕೊಂಡಿರುವಂತೆ ತೋರುತ್ತದೆ. ಅವರ ಎಚ್ಚರದ ಆಯ್ಕೆಗಳು ಎಂಬ ಕಾಣಿಸುತ್ತದೆ. ಅವರೇ ಇದರ ಬಗ್ಗೆ ಮಾತನಾಡಿದ್ದರು. 1964ರಲ್ಲಿ ನೆಹರೂ ಅವರು ತೀರಿಕೊಂಡ ಸಂದರ್ಭದಲ್ಲಿ ನಾನು ಪಿ.ಯು.ಸಿ. ಓದಿ ರಜೆಗೆ ಊರಿಗೆ ಹೋಗಿದ್ದೆ. ಆ ಚಿಕ್ಕ ವಯಸ್ಸಿನವರಿಗೆ ಆಗ ನೆಹರೂ ಅವರ ಬಗ್ಗೆ ಒಂದು ವಿಚಿತ್ರವಾದ ಇಮೇಜ್ ಇತ್ತು. ನೆಹರೂ ಅವರ ಮರಣ ನನ್ನನ್ನು ಬಹಳವಾಗಿ ಅಲ್ಲಾಡಿಸಿಬಿಟ್ಟಿತ್ತು. ಆರು ಪುಟಗಳ ಒಂದು ದೀರ್ಘವಾದ ಪತ್ರವನ್ನು ನನ್ನ ಬೆಂಗಳೂರಿನ ಗೆಳೆಯರಿಗೆ ಬರೆದಿದ್ದೆ. ಆಮೇಲೆ ಒಂದು ವರ್ಷ ಆ ಪತ್ರವನ್ನ ಇಟ್ಟುಕೊಂಡು ಅವರೆಲ್ಲ ನನ್ನನ್ನು ತಮಾಷೆ ಮಾಡುತ್ತಿದ್ದರು. ಗೇಲಿ ಮಾಡುತ್ತಿದ್ದರು. ಹಾಗೆ ತಮಾಷೆ ಮಾಡುತ್ತಿದ್ದ ಗೆಳೆಯರಲ್ಲೊಬ್ಬ ಟಿ.ಎನ್.ಸೀತಾರಾಮ್. ಅದನ್ನೆಲ್ಲ ಈ ಉಪನ್ಯಾಸದ ಸಂದರ್ಭದಲ್ಲಿ ಪ್ರಸ್ತಾಪಿಸಲು ಕಾರಣ, ಕುವೆಂಪು ಆ ಸಂದರ್ಭದಲ್ಲಿ ಮೈಸೂರಿನಲ್ಲಿ ಸಿಎಫ್‌ಟಿಆರ್‌ಐ ಸಂಸ್ಥೆಯಿಂದ ಪ್ರಕಟವಾಗುತ್ತಿದ್ದ 'ಆಹಾರವಿಜ್ಞಾನ' ಪತ್ರಿಕೆಗೆ ಬರೆದ ಲೇಖನವೊಂದರಲ್ಲಿ **ವೈಚಾರಿಕತೆ** ಮತ್ತು **ವಿಜ್ಞಾನಬುದ್ಧಿ** ಎನ್ನುವ ಎರಡು ಪದಗಳನ್ನು ಬಳಸುತ್ತಾರೆ. ನಮ್ಮೂರಿನ ವಯಸ್ಕರ ಶಿಕ್ಷಣ ಲೈಬ್ರರಿಗೆ 'ಆಹಾರವಿಜ್ಞಾನ' ಪತ್ರಿಕೆ ಬರುತ್ತಿದ್ದಾಗ ಆ ಲೇಖನ ಓದಿದ್ದೆ ನಾನು. ಮೇಲಿಂದ ಮೇಲೆ ಮತ್ತೆ ಆ ಲೇಖನ ಓದುತ್ತಿರುವಾಗ ವೈಚಾರಿಕತೆ ಮತ್ತು ವಿಜ್ಞಾನಬುದ್ಧಿ ಎಂಬ ಪದಗಳು ನನ್ನನ್ನು ಆಗಿನಿಂದಲೂ ಕಾಡುತ್ತಿವೆ. ಇವು ಬೇರೆ ಬೇರೆ ಮಾತುಗಳೋ ಅಲ್ಲವೋ ಎಂಬುದೇ ನಾವು ಬಿಡಿಸಬೇಕಾದ ಪ್ರಶ್ನೆ.

ಕುವೆಂಪು ವೈಚಾರಿಕತೆ ಅನ್ನುವ ಪದವನ್ನು ಬಳಸುತ್ತಾರೆ ಮತ್ತು ವಿಜ್ಞಾನ ಬುದ್ಧಿ, ವಿಜ್ಞಾನ ವಿಚಾರ, ವೈಜ್ಞಾನಿಕತೆ ಅನ್ನುವ ಮಾತನ್ನೂ ಬಳಸುತ್ತಾರೆ. ಆ ಲೇಖನವನ್ನು ಓದಿದಾಗ ಇವೆರಡೂ ಪದಗಳನ್ನು ಅವರು ಒಂದಕ್ಕೊಂದು ಎದುರುಬದುರಾಗಿ ಇರಿಸಿ ಮಾತಾಡುತ್ತಿದ್ದಾರೆ ಎಂದು ತಿಳಿಯುತ್ತದೆ. ಆದರೆ ಒಂದು ಇದ್ದರೆ ಇನ್ನೊಂದೂ ಇರುತ್ತದೆ ಎಂದು ತಿಳಿಯಬೇಕಾಗಿಲ್ಲ. ವೈಚಾರಿಕತೆ ಇದ್ದರೆ ಮಾತ್ರ ವೈಜ್ಞಾನಿಕತೆ ಇರುತ್ತದೆ. ವೈಜ್ಞಾನಿಕವಾಗಿದ್ದರೆ ಅದು ವೈಚಾರಿಕವಾಗಿ ಸರಿ ಇರುತ್ತದೆ ಎಂದೂ

ಹೇಳಲು ಆಗುವುದಿಲ್ಲ. ಇವೆರಡೂ ಬೇರೆ ಬೇರೆ. ಕುವೆಂಪು ಅವರು ಈ ಕುರಿತು ಹಲವಾರು ಉದಾಹರಣೆಗಳನ್ನು ಕೊಡುತ್ತಾರೆ. ಈ ಹೊತ್ತಿನಲ್ಲಿ ನೀವು 'ಆಹಾರವಿಜ್ಞಾನ' ಪತ್ರಿಕೆಯ ಲೇಖನವನ್ನು ಓದಿದರೆ ಭಾರತದ ಆಗಿನ ರಾಜಕಾರಣದ ಹಲವಾರು ವ್ಯಕ್ತಿಗಳ ನಡವಳಿಕೆಗಳ ಬಗೆಗೆ ಬಳಸು ದಾರಿಯಲ್ಲಿ ತಿಳುವಳಿಕೆ ದೊರಕುವಂತಿದೆ.ಆದರೆ ಆ ಲೇಖನದಲ್ಲಿ ಕುವೆಂಪು ಅವರು ನೆಹರೂ ಮತ್ತು ವಿನೋಬಾ ಈ ಇಬ್ಬರ ಹೊರತು ಯಾರ ಹೆಸರನ್ನೂ ಕೂಡಾ ಹೇಳುವುದಿಲ್ಲ. ನನಗೆ ನೆನಪಿರುವ ಹಾಗೆ ಗಾಂಧಿ ಹೆಸರನ್ನು ಕೂಡಾ.

60ರ ದಶಕದ ನಂತರದ ಸಂದರ್ಭದಲ್ಲಿ ಕುವೆಂಪು ಅವರಿಗೆ ಭಾರತದ ರಾಜಕಾರಣದ ಬಗೆಗೆ ಇದ್ದ ನಿಲುವುಗಳು, ರಾಜಕಾರಣಿಗಳ ನಡವಳಿಕೆಗಳ ಬಗೆಗೆ ಇದ್ದ ತಿಳಿವಳಿಕೆ, ನಂಬಿಕೆ ಏನೆಂದು ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ. ಆ ಲೇಖನದಲ್ಲಿ ಕುವೆಂಪು ಅವರು ವೈಚಾರಿಕತೆ ಮತ್ತು ವೈಜ್ಞಾನಿಕತೆ ಎರಡನ್ನೂ ಉಳ್ಳವರು ಮಾತ್ರ ನಮಗೆ ಯೋಗ್ಯರು ಎಂದು ಹೇಳಿದ್ದಾರೆ. ಕುವೆಂಪು ಅವರಿಗೆ ಈ ವಿಷಯದಲ್ಲಿ ನೆಹರೂ ಮಾದರಿ ವ್ಯಕ್ತಿಯಾಗಿ ತೋರುತ್ತಾರೆ.

ಆದರೆ ವೈಚಾರಿಕ ನೆಲೆಯಲ್ಲಿದ್ದು ವಿಜ್ಞಾನಬುದ್ಧಿ ಇಲ್ಲದಿರುವಂತಹ ದೊಡ್ಡ ದೊಡ್ಡ ಆಧ್ಯಾತ್ಮಿಕ ವ್ಯಕ್ತಿಗಳ ಹೆಸರು ಅವರ ಗಮನದಲ್ಲಿದೆ.ಅಂಥವರು ದೊಡ್ಡ ದೊಡ್ಡ ವಿಚಾರಗಳನ್ನು ತಲೆಯಲ್ಲಿ ಹೊತ್ತುಕೊಂಡಿರಬಹುದು, ದೊಡ್ಡದೊಡ್ಡ ಶಾಸ್ತ್ರಗಳನ್ನೆಲ್ಲಾ ಅರ್ಥಮಾಡಿಕೊಂಡಿರಬಹುದು, ತಿಳಿದುಕೊಂಡಿರಬಹುದು, ಅದನ್ನು ಅವರು ನಿಮಗೆ ಹೇಳಲೂಬಹುದು. ಆದರೆ ಅವರು ವೈಜ್ಞಾನಿಕ ಮನೋಭಾವವನ್ನು ಹೊಂದಿಲ್ಲದೇ ಇರುವವರು. ಇದರ ತಲೆಕೆಳಗು ನೆಲೆ ಕೂಡಾ ಸಾಧ್ಯ. ವೈಜ್ಞಾನಿಕ ಮನೋಭಾವವನ್ನು ಹೊಂದಿದ್ದರೂ ಕೂಡಾ ವೈಚಾರಿಕತೆಯನ್ನು ಹೊಂದಿಲ್ಲದೇ ಇರುವಂತಹ ಅನೇಕ ಪ್ರಾಧ್ಯಾಪಕರುಗಳನ್ನು, ವಿಜ್ಞಾನಿಗಳನ್ನು ಅವರು ಗಮನದಲ್ಲಿಟ್ಟುಕೊಂಡು ಮಾತಾಡುತ್ತಾರೆ. ವೈಚಾರಿಕತೆ ಮತ್ತು ವೈಜ್ಞಾನಿಕತೆ ಒಟ್ಟೊಟ್ಟಿಗೆ ಇರಬೇಕು ಎನ್ನುವುದು ಅವರ ಬಲವಾದ ನಿಲುವು. ಈ ಎರಡೂ ನೆಲೆಗಳನ್ನು ದೂರ ದೂರ ಇರಿಸಿಕೊಳ್ಳದೆ ಒಗ್ಗೂಡಿಸುವುದು ಹೇಗೆ ಎನ್ನುವುದು ಆಗ ಅವರ ಸಮಸ್ಯೆ ಆಗಿದ್ದಂತೆ ತೋರುತ್ತದೆ. ಆ ದಾರಿ ದೊರೆತರೆ ಮಾತ್ರ ನಾವು ಹೇಗೆ ಮುಂದೆ ಸಾಗ ಬೇಕು ಎನ್ನುವುದು ಗೊತ್ತಾಗುತ್ತದೆ ಎನ್ನುವುದು ಕುವೆಂಪು ಅವರ ಬಹಳ ವರ್ಷಗಳ ಚಿಂತನೆ ಇದ್ದ ಹಾಗೆ ಕಾಣಿಸುತ್ತದೆ.

ಹಲವಾರು ಸಂದರ್ಭಗಳಲ್ಲಿ ಕುರಿತು ಮೇಲಿಂದ ಮೇಲೆ ಬೇರೆ ರೀತಿಗಳಲ್ಲಿ ಅವರು ಈ ಚಿಂತನೆಯನ್ನು ವ್ಯಕ್ತಪಡಿಸುತ್ತಾರೆ. 'ವಿಚಾರಕ್ರಾಂತಿಗೆ ಆಹ್ವಾನ' ಭಾಷಣ ಮಾಡಿದ್ದಿರಬಹುದು, 'ಸಾಹಿತಿ ಮತ್ತು ಕಲಾವಿದರ ಬಳಗ'ದ ಉದ್ಘಾಟನೆಯಲ್ಲಿ ಮಾಡಿದ ಭಾಷಣ ಇರಬಹುದು, ಮೈಸೂರಿನಲ್ಲಿ 1974ರಲ್ಲಿ ಮಾಡಿದ ಭಾಷಣ ಅಥವಾ ಹಿಂದೆ ಹೋಗಿ ನೋಡಿದರೆ 'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ' ಎನ್ನುವ ಉಪನ್ಯಾಸ ಮಾಡಿದಾಗ ಇರಬಹುದು. ಈ ಎಲ್ಲ ಸಂದರ್ಭಗಳಲ್ಲೂ ಅವರು ಒಂದಲ್ಲ ಒಂದು ರೀತಿಯಲ್ಲಿ ಈ ಎರಡು ಚಿಂತನೆಗಳನ್ನು ಒಟ್ಟಿಗೆ ತರುವುದು ಹೇಗೆ ಮತ್ತು ಹಾಗೆ

ತರುವುದು ಸಾಧ್ಯವಾದಾಗ ಮಾತ್ರ ಒಂದು ಸೂಕ್ತ ಆಕಾರ ಬರುತ್ತದೆ ಅಂತನ್ನುವುದು ಅವರ ಮನಸ್ಸಿನಲ್ಲಿ ಇದ್ದ ಹಾಗೆ ಕಾಣಿಸುತ್ತದೆ.

ಕುವೆಂಪು ಅವರು ನೇರವಾಗಿ ಇದರ ಬಗ್ಗೆ ಏನು ಮಾತನಾಡಿದ್ದಾರೆ ಎನ್ನುವುದನ್ನು ಈ 1964ರ 'ಆಹಾರವಿಜ್ಞಾನ' ಪತ್ರಿಕೆಯ ಲೇಖನದಿಂದ ವಿವರಿಸಲು ಪ್ರಯತ್ನ ಪಡುತ್ತಿದ್ದೇನೆ. ಕನ್ನಡ ಸಾಹಿತ್ಯದ ನೆಲೆಯಲ್ಲಿ ವೈಚಾರಿಕತೆ ಅನ್ನುವುದು ಸಾಹಿತ್ಯದಲ್ಲಿ ಇರುತ್ತದೆ ಎಂದು ಹೇಳಬೇಕೊ ಅಥವಾ ಆಗುತ್ತದೆ ಎಂದು ಹೇಳಬೇಕೊ?ಅದು ಒಂದು ಅನುಭವವೇ? ಅದು ಒಂದು ತಿಳಿವಳಿಕೆಯೇ? ಈ ತಿಳಿವಳಿಕೆಯಾಗಿ ಬದಲಾಗುವಂತದ್ದು, ಪರಿವರ್ತನೆ ಹೊಂದುವಂತದ್ದು, ರೂಪುಗೊಳ್ಳುವಂತದ್ದು, ಬೆಳೆಯುವಂತದ್ದು ಸಾಹಿತ್ಯದ ಅನುಭವದ ಭಾಗವೇ ಆಗಿರುತ್ತದಾ? ಈ ಪ್ರಶ್ನೆಯನ್ನು ಕನ್ನಡ ಸಾಹಿತ್ಯ ಬೇರೆ ಬೇರೆ ಕಾಲಘಟ್ಟಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಬೇರೆ ಬೇರೆ ಮಾದರಿಗಳಲ್ಲಿ ನಮ್ಮೆದುರು ಮಂಡಿಸಿದೆ. ಅಂತಹ ಕೆಲವು ಪ್ರಸಂಗಗಳನ್ನು ನಾನಿಲ್ಲಿ ಉಲ್ಲೇಖಿಸುತ್ತೇನೆ.

ಶ್ರವಣಬೆಳಗೊಳದ ಬಹಳ ಪ್ರಖ್ಯಾತವಾದ ಹಳೆಯ ಶಾಸನಪದ್ಯವೊಂದರ ಉಲ್ಲೇಖ ಇದು.ಅಲ್ಲೊಬ್ಬ ನಂದಿಸೇನ ಅನ್ನುವವನು ಇರುತ್ತಾನೆ. ಅವನು ಜೈನಮತದವನು. ಅವನು ಸಲ್ಲೇಖನ ವ್ರತ (ಅಂದರೆ ಅದೆಷ್ಟೋ ದಿನಗಳ ನಿರಂತರ ಉಪವಾಸ ಮಾಡುವುದು) ಮಾಡಿ ತನ್ನ ಪ್ರಾಣತ್ಯಾಗ ಮಾಡುತ್ತಾನೆ. ಇದು ನಡೆದ ಘಟನೆ. ಆ ಘಟನೆಯನ್ನು ಹೇಳುವ ನಾಲ್ಕು ಸಾಲಿನ ಪದ್ಯ ಆ ಶಾಸನದಲ್ಲಿದೆ. ಕನ್ನಡದಲ್ಲಿ ಈಗ ನಮಗೆ ಲಭ್ಯವಿರುವ, ಬಹಳ ಅಕ್ಷರಗಳು ಸವೆದು ಹೋಗಿರುವ ಹಳೆಯ ಪದ್ಯ ಅದು.

ಸುರಚಾಪಂಬೋಲೆ ವಿದ್ಯುಲ್ಲತೆಗಳ ತೆರವೋಲ್ ಮಂಜುವೋಲ್ ತೋರಿ
ಪಿರಿಗುಂ ಶ್ರೀರೂಪಲೀಲಾಧನ ವಿಭವ ಮಹಾರಾಶಿಗಳ್ ನಿಲ್ಲವಾರ್ಗಂ
ಪರಮಾರ್ಥಂ ಮೆಚ್ಚಿ ನಾನೀ ಧರೆಯೊಳ್ ಇರವಾನ್ ಎಂದು ಸನ್ಯಸನಂ ಗೆ
ಯ್ದುರುಸತ್ವನ್ ನಂದಿಸೇನ ಪ್ರವರ ಮುನಿವರನ್ ದೇವಲೋಕಕ್ಕೆ ಸಂದಾನ್

ಈ ಪದ್ಯದಲ್ಲಿ ಮೂರು ಜನ ಇದ್ದಾರೆ. ಅಂದರೆ ಮೂರು ದನಿಗಳಿವೆ: ಒಬ್ಬ ನಂದಿಸೇನ ಮುನಿ, ಇನ್ನೊಬ್ಬ ಈ ವೃತ್ತವನ್ನು ರಚಿಸಿದ ಕವಿ, ಮತ್ತೊಬ್ಬ ಇದನ್ನು ಓದುತ್ತಿರುವ 21ನೇ ಶತಮಾನದ ನಾನು ಇಲ್ಲವೇ ನೀವು. ನಂದಿಸೇನ ಮುನಿ ಉಪವಾಸ ಮಾಡಿ ಸತ್ತ ಅನ್ನುವುದು ಒಂದು ಸಂಗತಿ. ಅವನು ಸಲ್ಲೇಖನವನ್ನು ಮಾಡಿದ ಎಂದು ಘಟನೆ ಹೇಳಿದೆ. ಯಾಕೆ ಸಲ್ಲೇಖನವನ್ನು ಮಾಡಿದ? ಶ್ರೀರೂಪಲೀಲಾಧನ ವಿಭವ ಮಹಾರಾಶಿಗಳ್ ನಿಲ್ಲವಾರ್ಗಂ- ಎಂದರೆ ಸಂಪತ್ತು, ಚೆಲುವು,ವೈಭವ ಅನ್ನುವಂತದ್ದೆಲ್ಲ ಎಂದಿಗೂ ಶಾಶ್ವತವಲ್ಲ, ಹಾಳಾಗುತ್ತದೆ. ಅವುಗಳು ಇಲ್ಲದೇ ಹೋಗುವ ಈ ಜಗತ್ತಿನಲ್ಲಿ-ಈ ಧರೆಯೊಳ್ ನಾನ್ ಇರವಾನ್-ನಾನು ಇರುವುದಿಲ್ಲವೆಂದು ಹೇಳಿ ಪ್ರಾಣತ್ಯಾಗ ಮಾಡಿದ ವಿಷಯವನ್ನು ಹೇಳುತ್ತಿರುವವನು ಯಾರು? ಕವಿ. ಅದನ್ನು ನಂದಿಸೇನ ಮುನಿ ಹೇಳಿದ್ದನಾ?ನಮಗೆ ಗೊತ್ತಿಲ್ಲ. ಅದಕ್ಕೆ ಇನ್ನೂ ಒಂದು ಬಾಲ ಸೇರಿಸುತ್ತಾರೆ ನೋಡಿ. ನಂದಿಸೇನಮುನಿಗೂ ಗೊತ್ತಾಗಿದ್ದು ಹೇಗೆ ಎಂದರೆ: ಸುರಚಾಪಂಬೊಲೆ ವಿದ್ಯುಲ್ಲತೆಗಳವೋಲ್ ಮಂಜುವೋಲ್ ತೋರಿ

ಪಿರಿಗುಂ. ಈ ಮೂರು ಎಕ್ಸ್‌ಪೀರಿಯನ್ಸ್‌ಗಳು: ಕಾಮನಬಿಲ್ಲಿನ ಎಕ್ಸ್‌ಪೀರಿಯನ್ಸ್, ಮಿಂಚಿನ ಎಕ್ಸ್‌ಪೀರಿಯನ್ಸ್, ಮಂಜಿನ ಎಕ್ಸ್‌ಪೀರಿಯನ್ಸ್ ಯಾರದ್ದು? ನಂದಿಸೇನ ಮುನಿಯದ್ದಾ? ಈ ಕವಿತೆಯನ್ನು ಬರೆದವನದ್ದಾ? ಅಥವಾ ಇದು ನಿಮ್ಮದಾಗಬೇಕು ಎಂದು ಹೇಳುತ್ತಿದ್ದಾನಲ್ಲ ಅವನದ್ದಾ? ಈ ಪದ್ಯದಲ್ಲಿ ತಿಳಿದ, ಲೋಕದ ನಶ್ವರತೆಯ ಅರಿವು ನಮಗೆ ಉಂಟಾಗುವುದು ಹೇಗೆ? ಈ ಪ್ರಶ್ನೆ ನಮ್ಮನ್ನು ಕಾಡುತ್ತದೆ.

ಈ ಲೋಕ ನಾನಿರುವುದಕ್ಕೆ ಯೋಗ್ಯವಿಲ್ಲ, ನಾನು ಇದನ್ನು ಬಿಟ್ಟು ಹೋಗುತ್ತಿದ್ದೇನೆ ಎಂದು ನೇರವಾಗಿ ಅವನು ಹೇಳಿದ ಸ್ಟೇಟ್‌ಮೆಂಟ್ ಇಲ್ಲ. ಅವನು ಉಪವಾಸ ಮಾಡಿ ಸತ್ತ. ಉಪವಾಸ ಮಾಡಿ ಸತ್ತದ್ದಕ್ಕೆ ಒಬ್ಬನು ಕವಿತೆ ಬರೆದ. ಲೋಕ ನಶ್ವರವೆಂದು ತಿಳಿದುಕೊಂಡ ನಂದಿಸೇನಮುನಿ ಪ್ರಾಣತ್ಯಾಗ ಮಾಡಿದ ಎಂಬುದಾಗಿ ಕವಿ ಬರೆದಿದ್ದಾನೆ. ಲೋಕ ನಶ್ವರವೆಂದು ತಿಳಿದುಕೊಳ್ಳುವುದಕ್ಕೆ ನಂದಿಸೇನಮುನಿಗೆ ಆದ ಅನುಭವವೇನು ಎಂಬುದು ಪದ್ಯದ ಮೂಲಕ ನಮ್ಮೆದುರಿಗಿದೆ. ಬದುಕು ನಶ್ವರ ಎಂಬ ಹೇಳಿಕೆಯು ಈ ಪದ್ಯದಲ್ಲಿ ಮುಖ್ಯವೋ ಅಥವಾ ಆ ಹೇಳಿಕೆಯನ್ನು ನಮ್ಮ ಅನುಭವದ ಭಾಗವನ್ನಾಗಿ ಮಾಡುತ್ತಿರುವ ಬಗೆ ಮುಖ್ಯವೋ? ಅಂದರೆ ವಿಚಾರವನ್ನು "ಆಗಿಸುವ' ಬಗೆ ಮುಖ್ಯವೇ ಹೊರತು ತಂತಾನೇ ವಿಚಾರವೇ ಅಲ್ಲ ಅಲ್ಲವೇ?

ಒಂದು ಸಾಹಿತ್ಯಕೃತಿ ನಮಗೆ ಅನುಭವವನ್ನು ತಂದುಕೊಡುವಾಗ ಯಾವ ಮಾರ್ಗವನ್ನು ಅನುಸರಿಸುತ್ತದೆ ಎನ್ನುವುದಕ್ಕೆ ಬಹಳ ಶ್ರೇಷ್ಠವಾದ ಮಾದರಿಯೊಂದನ್ನು ಕನ್ನಡ ಸಾಹಿತ್ಯದ ಆದಿಭಾಗದಲ್ಲಿ ಬರುವ ಪಂಪನ ಸಾಹಿತ್ಯದಲ್ಲಿಯ ಎರಡು ಪ್ರಸಂಗಗಳಲ್ಲಿ ಅರಿಯಬಹುದು. ಎರಡು ಪ್ರಸಂಗಗಳಲ್ಲಿ ಒಂದು ಆದಿಪುರಾಣದಲ್ಲಿ ಬರುವ ನೀಲಾಂಜನೆಯ ನೃತ್ಯಪ್ರಸಂಗ, ಇನ್ನೊಂದು ಅದೇ ಕಾವ್ಯದಲ್ಲಿನ ಭರತ–ಬಾಹುಬಲಿಯರ ಯುದ್ಧಪ್ರಸಂಗ.

ನೀಲಾಂಜನೆಯ ನೃತ್ಯ ಪ್ರಸಂಗದಲ್ಲಿ ಇಂದ್ರನ ಆಸ್ಥಾನದಲ್ಲಿ ನೀಲಾಂಜನೆ ನೃತ್ಯ ಮಾಡುತ್ತಿರುತ್ತಾಳೆ. ಅದನ್ನು ನೋಡುವುದಕ್ಕೋಸ್ಕರ ಆದಿನಾಥ ಬಂದಿರುತ್ತಾನೆ. ಬಹಳ ಸೊಬಗಿ, ಅಪ್ಸರೆಯಾದ ನೀಲಾಂಜನೆ ನೃತ್ಯವನ್ನು ಮಾಡುತ್ತಿದ್ದಾಗ ಅವಳ ಆಯಸ್ಸು ಮುಗಿದುಹೋಗುತ್ತದೆ. ಆಯಸ್ಸು ಮುಗಿದು ಅವಳ ದೇಹ ಕುಸಿದುಬೀಳುವಾಗ ಉಂಟಾಗುವ ರಸಭಂಗವನ್ನು ನಿವಾರಿಸುವ ಸಲುವಾಗಿ ಇಂದ್ರ ಕ್ಷಣಾರ್ಧದೊಳಗೆ ಇನ್ನೊಬ್ಬ ನೀಲಾಂಜನೆಯನ್ನು ಅಲ್ಲಿ ಸೃಷ್ಟಿಸಿ, ಅದು ಗೊತ್ತಾಗದೇ ಇರುವ ತರದಲ್ಲಿ ನೃತ್ಯ ಮುಂದುವರಿಯುವಂತೆ ಮಾಡುತ್ತಾನೆ. ಆದರೆ ಅದು ಆದಿನಾಥನಿಗೆ ಗೊತ್ತಾಗುತ್ತದೆ ಮತ್ತು ಆ ಕ್ಷಣದಲ್ಲಿ ಈ ಲೋಕದ ಬಗೆಗೆ ಭ್ರಮನಿರಸನವಾಗುತ್ತದೆ. ಯಾವುದನ್ನು ಅತ್ಯಂತ ಶಾಶ್ವತ, ಶ್ರೇಷ್ಠ, ಉತ್ತಮ, ಆಹ್ಲಾದಮಯ ಎಂದು ತಿಳಿದುಕೊಂಡಿರುತ್ತೇವೋ ಅದು ಯಾವಾಗ ಬೇಕಾದರೂ ಕಳೆದುಹೋಗಬಹುದು. ನಶ್ವರವಾಗಬಹುದು. ಉಳಿದವರೆಲ್ಲರಿಗೂ ಅಲ್ಲಿ ಆದ ಬದಲಾವಣೆ ಗೊತ್ತಾಗದೇ ಹೋಗುತ್ತದೆ. ಅಂದರೆ ಎರಡು ಫ್ರೇಮ್‌ಗಳ ನಡುವೆ ಇರುವ ಕಪ್ಪುಗೆರೆ ಕಾಣದೇ ಹೋದ ಹಾಗೆ, ಚಲನಚಿತ್ರದಲ್ಲಿ ಇಪ್ಪತ್ನಾಲ್ಕು ಫ್ರೇಮ್‌ಗಳು ಓಡುತ್ತಿರುವಾಗ ಮಧ್ಯದ ಕಪ್ಪುಗೆರೆಗಳು ನಮಗೆ

ಕಾಣಿಸುವುದಿಲ್ಲವಲ್ಲ ಹಾಗೆ ನೀಲಾಂಜನೆ ಬದಲಾದದ್ದು ತಿಳಿಯದಂತೆ ಘಟಿಸುತ್ತದೆ. ಇಂದ್ರನ ಆಸ್ಥಾನದ ನೀಲಾಂಜನೆಯ ನೃತ್ಯ. ಬದಲಾವಣೆ ಗೊತ್ತಾದದ್ದು ಇಬ್ಬರಿಗೆ ಮಾತ್ರ. ಒಂದು ಇಂದ್ರನಿಗೆ ಮತ್ತೊಂದು ಆದಿನಾಥನಿಗೆ. ಇಂದ್ರನಿಗೆ ಏನೂ ಆಗಲಿಲ್ಲ. ಅದು ಅವನಿಗೆ ತನ್ನ ಚಮತ್ಕಾರ. ಐಂದ್ರಜಾಲಿಕ. ತನ್ನ ಚಮತ್ಕಾರವನ್ನು ಅವನು ಮೆಚ್ಚಿಕೊಂಡಿರುವುದು. ಬದಲಾವಣೆಯಾದರೂ ಕೂಡ ನಾನು ಈ ಜನರಿಗೆ ಗೊತ್ತಾಗದೇ ಇರುವ ತರಹದಲ್ಲಿ ಎಷ್ಟು ಚೆನ್ನಾಗಿ ಮಾಡಿದೆ ಎಂದು. ಆದರೆ ಆದಿನಾಥನಿಗೆ ಈ ಬದಲಾವಣೆ ಗೊತ್ತಾಗುತ್ತದೆ.

ಈ ಪ್ರಸಂಗದಿಂದ ನಾವು ತಿಳಿಯಲು ಹೊರಟಿರುವುದು ಏನೆಂಬುದು ಎರಡನೇ ಪ್ರಸಂಗವನ್ನು ವಿವರಿಸಿದಾಗ ಸ್ಪಷ್ಟವಾಗುತ್ತದೆ. ಭರತ ಬಾಹುಬಲಿಯರ ಯುದ್ಧದ ಸಂದರ್ಭದ ಕಥೆ ನಿಮಗೆಲ್ಲ ಗೊತ್ತಿದೆ. ಒಂದು ತುಂಡು ಭೂಮಿ ಬಾಹುಬಲಿಯ ಹತ್ತಿರವಿರುತ್ತದೆ. ಭರತನಿಗೆ ಅದು ಸಿಗುವವರೆಗೂ ಅವನು ಚಕ್ರಾಧಿಪತಿಯಾಗಲು ಸಾಧ್ಯವಿರುವುದಿಲ್ಲ. ಭರತನ ಉಳಿದ ತಮ್ಮಂದಿರೆಲ್ಲ ಅವರ ಭೂಮಿಯನ್ನು ಕೊಟ್ಟು ಹೊರಟುಹೋಗಿರುತ್ತಾರೆ. ಆ ತುಂಡು ಭೂಮಿಯನ್ನು ಕೊಡು ಎಂದು ಭರತ ಕೇಳುತ್ತಾನೆ. ಬಾಹುಬಲಿ ಮಾತ್ರ ಭೂಮಿಯನ್ನು ಕೊಡುವುದಿಲ್ಲ ಬೇಕಾದರೆ ಕಿತ್ತುಕೋ ನೋಡೋಣ ಎಂದು ಹೇಳುತ್ತಾನೆ. ಅನಂತರ ಯುದ್ಧ ಮಾಡುತ್ತಾರೆ. ಬಾಹುಬಲಿಯ ಶಕ್ತಿಯ ಎದುರು ಭರತ ಸೋಲುತ್ತಾನೆ. ಸೋತ ಭರತನ ದೇಹವನ್ನು ಇನ್ನೇನು ನೆಲಕ್ಕೆ ಕುಕ್ಕಬೇಕೆನ್ನುವ ಸಂದರ್ಭದಲ್ಲಿ ಬಾಹುಬಲಿಯ ಮನಸ್ಸಿನಲ್ಲಿ ಏನಾಗುತ್ತದೆ ಎನ್ನುವುದನ್ನು ನಾಲ್ಕೈದು ಕಂದಪದ್ಯಗಳಲ್ಲಿ ಪಂಪ ವಿವರಿಸುತ್ತಾನೆ.

ಆ ಪದ್ಯಗಳಲ್ಲಿ ಪಂಪ ಹಲವು ಉದಾಹರಣೆಗಳನ್ನು ಕೊಡುತ್ತಾನೆ. ಈ ಐಶ್ವರ್ಯ, ಸಂಪತ್ತು ಎನ್ನುವುದೆಲ್ಲ ಹೇಗೆ? ಇವೆಲ್ಲವೂ ಮೊದಲು ಸಂತಸವನ್ನು ತಂದರೂ ಕೊನೆಗೆ ನಂಜಿನ ಹನಿಗಳೇ ಆಗುತ್ತವೆ; ಎಲ್ಲ ಭಾವ ಸಂಬಂಧಗಳನ್ನು ಮುರಿದು ಹಾಕುತ್ತವೆ. ಲೋಕದ ಸುಖವನ್ನು ಹೀಗೆ ಬಾಹುಬಲಿ ತಿಳಿ ಹೇಳಿದರೆ. ಆದಿನಾಥ ಅಂದುಕೊಂಡದ್ದೇನು? ತಾನು ಹಲವು ಭವಗಳಲ್ಲಿ ಸುಖದ ಸಾಗರದಲ್ಲಿ ಮಿಂದೆದ್ದರೂ ಭೋಗದ ಬಯಕೆ ತಗ್ಗಿಲ್ಲ. ಹೀಗಿರುವಾಗ ಈ ಭವದಲ್ಲಿರುವ ಸುಖ ಹುಲ್ಲಿನ ದಳಗಳ ಮೇಲೆ ಇರುವ ಮಂಜಿನ ಹನಿಗಳ ತರಹದಲ್ಲಿದೆ. ಈ ಪನಿಮುಲ್ಲಂನಕ್ಕೆ (ನಕ್ಕೆ ಅಂದರೆ ನೆಕ್ಕಿದರೆ) ಪೇಳ್ ತೃಷ್ಣೆ ಪೊದಪುದೇ ಎನ್ನುತ್ತಾನೆ.ಸಾಗರದಲ್ಲಿ ಮಿಂದೆದ್ದರೂ ಆರದ ಬಾಯಾರಿಕೆ ಈ ಹನಿಗಳನ್ನು ಕುಡಿದರೆ ತಣಿಯದು ಎಂದುಕೊಳ್ಳುತ್ತಾನೆ.

ಈ ಎರಡು ಪ್ರಸಂಗಗಳಲ್ಲಿ ಬಹಳ ಇಂಟ್‌ರೆಸ್ಟಿಂಗ್ ಎಂದರೆ ಆದಿನಾಥನಿಗೆ ವಾಸ್ತವದಲ್ಲಿ ಒಂದು ಘಟನೆ, ಒಂದು ಎಕ್ಸ್‌ಪೀರಿಯನ್ಸ್ ಆಯಿತು. ಈ ಘಟನೆಯಿಂದ ಒಂದು ವಿಚಾರ ಅವನ ಮನಸ್ಸಿನಲ್ಲಿ ಮೂಡಿ ತಿಳಿವಳಿಕೆ ಬಂದಿತು. ಆದರೆ ಭರತ–ಬಾಹುಬಲಿಯರ ಪ್ರಸಂಗದಲ್ಲಿ ಏನಾಗುತ್ತದೆ ಎಂದರೆ ತಿಳಿವಳಿಕೆ ಬರುತ್ತದೆ. ಬಾಹುಬಲಿಯು ತನಗೆ ಸಿಗುವಂತಹ ಈ ಐಶ್ವರ್ಯ ಶಾಶ್ವತವಲ್ಲ;ಇದೂ ಕೂಡ ಹಾಳಾಗುತ್ತದೆ.ಎಂದಾದರೂ ನಶ್ವರವಾಗುತ್ತದೆ ಎನ್ನುವ ತಿಳಿವಳಿಕೆಯಿದೆ. ಆ ತಿಳಿವಳಿಕೆಯನ್ನು ಸ್ಪಷ್ಟಪಡಿಸಿಕೊಳ್ಳಲು ಆತ ತನ್ನ ತಿಳುವಳಿಕೆಯನ್ನು ಬೇರೊಂದು ಬಗೆಯಲ್ಲಿ ಮಂಡಿಸುತ್ತಾನೆ. ಭಟಖಡ್ಗಮಂಡಲೋತ್ಪಲವನವಿಭ್ರಮಭ್ರಮರಿಯಾದ ರಾಜ್ಯ ಲಕ್ಷ್ಮಿ ಎಲ್ಲೂ ನೆಲೆ

ನಿಲ್ಲುವವಳಲ್ಲ ಎಂದು ತನ್ನ ಅಣ್ಣನಿಗೆ ಸೂಚಿಸುತ್ತಾನೆ. ಆಕೆ ನಿನ್ನ ವಕ್ಷದಲ್ಲಿ ನಿಶ್ಚಲವಾಗಿ ನೆಲೆಸಲಿ ಎಂದು ಹೇಳುವಲ್ಲಿ ಕಟಕಿ ಇದೆ.

ಆದಿನಾಥನ ಪ್ರಸಂಗದಲ್ಲಿ ಇದು ರಿವರ್ಸ್ ಅಗುತ್ತದೆ ಅಂದರೆ ಒಂದು ಘಟನೆಯನ್ನು ಮೊದಲು ನಡೆದ ಹಾಗೆ ನಿರೂಪಿಸಿ ಅದರಿಂದ ತಿಳಿವಳಿಕೆ ಹುಟ್ಟುವ ಹಾಗೆ ಮಾಡಿದ್ದು. ಅಂದರೆ ನಮ್ಮ ಸಾಹಿತ್ಯ ಕೃತಿಗಳು ತಿಳಿವಳಿಕೆಯನ್ನು ಅಥವಾ ವಿಚಾರವನ್ನು/ ವೈಚಾರಿಕತೆಯನ್ನು ನೇರವಾಗಿ ನಮ್ಮೆದುರು ಮಂಡಿಸುವುದಿಲ್ಲ. ಅನುಭವವಾಗುವ ಹಾಗೆ ಮಾಡುತ್ತವೆ. ಯಾರಿಗೆ ಅನುಭವವಾಗುವ ಹಾಗೆ ಮಾಡುತ್ತವೆ? ಓದುತ್ತಿರುವ ನಮಗೂ ಆಗಬೇಕು ಹಾಗೂ ಅಲ್ಲಿ ಬಂದಿರುವಂತಹ ಪಾತ್ರಗಳಿಗೂ ಕೂಡ ಅದು ಆಗಬೇಕು. ಪಾತ್ರಗಳಿಗೂ ಕೂಡ ಅದು ಆಗಬೇಕು. ಪಾತ್ರಗಳಲ್ಲಿ ಆಗುವಿಕೆ ಮುಖ್ಯವೇ ಹೊರತು ಇರುವಿಕೆ ಅಲ್ಲ. ಸಂಭೂತಿ ಮುಖ್ಯವೇ ಹೊರತು ಸತ್ತ್ವವಲ್ಲ. ಸತ್ತ್ವ ಅಂದರೆ ತಿಳಿವಳಿಕೆ. ಆಗುವಿಕೆ ಅನ್ನುವುದು ಸಾಹಿತ್ಯಕೃತಿಗೆ ಬಹಳ ಮುಖ್ಯ. ಇರುವುದಕ್ಕಿಂತ ಆಗುವುದು ಮುಖ್ಯ ಎನ್ನವುದು ಕನ್ನಡಸಾಹಿತ್ಯ ನಮಗೆ ಕಲಿಸಿಕೊಟ್ಟಿರುವಂತಹ ಬಹಳ ದೊಡ್ಡ ಪಾಠ. ನಮ್ಮ ಎಲ್ಲ ಕವಿಗಳು ಕೂಡ ಆ ಪರಂಪರೆಯಲ್ಲಿ ಬಂದಿರುವಂತವರು. ಅದು 20ನೇ ಶತಮಾನದ ಮಹಾನ್ ಕವಿಗಳು ಇರಬಹುದು. 21ನೇ ಶತಮಾನದಲ್ಲಿ ಬರೆಯುತ್ತಿರುವ ಕವಿಗಳು ಇರಬಹುದು. ಇವರೆಲ್ಲರೂ ಈ ಪರಂಪರೆಯೊಡನೆ ತಮ್ಮ ನಂಟು ಬೆಳೆಸಿಕೊಂಡಿದ್ದಾರೆ.

ಈ ಕುವೆಂಪು ಸಾಹಿತ್ಯದ ಸಂದರ್ಭದಲ್ಲಿ ವೈಚಾರಿಕತೆಯ ಪ್ರಶ್ನೆಯನ್ನು ಎತ್ತಿದಾಗ 'ಕುವೆಂಪು ಸಾಹಿತ್ಯದಲ್ಲಿ ವೈಚಾರಿಕತೆ' ಅನ್ನುವುದರ ಕುರಿತು ಒಂದು ಸಾವಿರ ಪುಟದಷ್ಟಾದರೂ ಬರವಣಿಗೆ ಸಿಗುತ್ತದೆ. ಈ ಬರವಣಿಗೆಗಳಿಂದ ಅವರ ಶಿಕ್ಷಣ ವಿಚಾರಗಳೇನು? ರಾಜಕೀಯದ ವಿಚಾರಗಳೇನು? ಸಮಾಜದ ಬಗ್ಗೆ ಅವರಿಗಿದ್ದ ತಿಳಿವಳಿಕೆ ಏನು? ಆರ್ಥಿಕ ವಿಚಾರಗಳೇನು? ಹೀಗೆ ವೈಚಾರಿಕ ವಿಶ್ಲೇಷಣೆಗಳನ್ನು ಪಟ್ಟಿ ಮಾಡಿ ತೋರಿಸಲಾಗಿದೆ.

ಈ ವಿಶ್ಲೇಷಣೆಗಳನ್ನು ಸಾಹಿತ್ಯಕೃತಿಯಿಂದ ಹೆಕ್ಕಿ ತೆಗೆಯಲಾಗಿದೆ. ಸಾಹಿತ್ಯಕೃತಿಯಿಂದ **ಹಿಂಡಿ** ತೆಗೆದದ್ದಲ್ಲ. ಸಾಹಿತ್ಯಕೃತಿಯಿಂದ **ಹೆಕ್ಕಿ** ತೆಗೆಯಲಾಗಿದೆ. ಇವೆರಡೂ ಬೇರೆ ಬೇರೆ ರೀತಿಯದ್ದು. ವೈಚಾರಿಕತೆ ಎನ್ನುವಂತದ್ದು ಸಾಹಿತ್ಯದ ಚೌಕಟ್ಟಿನೊಳಗೆ ಎಲ್ಲೋ ಒಂದು ಕಡೆ ಇರುತ್ತದೆ. ಸಾಹಿತ್ಯದಿಂದ ವೈಚಾರಿಕತೆಯನ್ನು ಹೆಕ್ಕಿ ತೆಗೆಯಲು ಸಾಧ್ಯ. ಆಯ್ದು ಕೊಳ್ಳಲು ಸಾಧ್ಯ. ಸಾಹಿತ್ಯದಿಂದ ವೈಚಾರಿಕತೆಯನ್ನು ಹಣ್ಣಿನಿಂದ ತಿರುಳು ಬಿಡಿಸಿದ ರೀತಿಯಲ್ಲಿ ಬಿಡಿಸಲು ಸಾಧ್ಯ ಎನ್ನುವ ಕಲ್ಪನೆ ಬಹಳ ಜನರಲ್ಲಿ ಇದ್ದಂತಿದೆ. ಇದು ತಪ್ಪಿಲ್ಲದೆಯೂ ಇರಬಹುದು. ಈ ರೀತಿ ಹೆಕ್ಕಿ ತೆಗೆಯುವುದರಿಂದ ಏನಾಗುತ್ತದೆ ಎನ್ನುವುದನ್ನ ಮುಂದೆ ವಿವರಿಸುತ್ತೇನೆ.

ಕುವೆಂಪು ಅವರ ಬಹಳ ಸರಳವಾದ ಗೀತೆಗಳನ್ನು ಉದಾಹರಿಸುವುದಾದರೆ, ಅವರ ಒಂದು ಹಾಡಿನ ಅರ್ಥ ಹೀಗಿದೆ: ಮಳೆಬಿಲ್ಲು ಮೂಡುತ್ತದೆ. ಮಳೆಬಿಲ್ಲು ನೋಡಿದಾಗ ಅದು ಯಾರೋ ಹಾಕಿಕೊಂಡಿರುವ ಸರದ ತರಹದಲ್ಲಿ ಕವಿಗೆ ಕಾಣಿಸುತ್ತದೆ.

ಮುಂದುವರಿಕೆಯಾಗಿ ಮಳೆಬಿಲ್ಲಿನಂತೆ ಬಾಳು ಕ್ಷಣಿಕವಾಗದೆ, ಮಳೆಬಿಲ್ಲಿನಂತದು ಮಧುರತಮವಲ್ಲವೇ ಎಂದು ಕೊನೆಯಾಗುತ್ತದೆ. ಮಳೆಬಿಲ್ಲು ಕಂಡು ಮಾಯವಾಗುತ್ತದೆ. ಅದಕ್ಕೆ ಖಿನ್ನತೆ ಬೇಕಾಗಿಲ್ಲ. ಮಳೆಬಿಲ್ಲಿನಂತದು ಮಧುರತಮವಲ್ಲವೇ ಎಂಬರ್ಥ ಧ್ವನಿಸುತ್ತದೆ. ಮಳೆಬಿಲ್ಲು ಮಾಯವಾಯಿತು ಎಂದು ಕೊರಗುವುದಲ್ಲ, ನಿಮಗಾದ ಎಕ್ಸ್‌ಪೀರಿಯನ್ಸ್ ಮುಖ್ಯ.

ಇನ್ನೊಂದು ಬಹಳ ಕ್ಲಾಸಿಕ್ ಎಕ್ಸಾಂಪಲ್ ಎಂದರೆ, ಕುವೆಂಪು ಅವರ : ದೋಣಿ ಸಾಗಲಿ ಮುಂದೆ ಹೋಗಲಿ ದೂರ ತೀರವ ಸೇರಲಿ... ಕವಿತೆಯಲ್ಲಿ ಮುಂದುವರಿಕೆಯಾಗಿ ಕೊನೆಗೆ,

ದೂರಬೆಟ್ಟದ ಮೇಲೆ ಆಡುವ ಬಿಳಿಯ ಮೋಡವ ನೋಡಿರಿ
ಅದನೆ ಹೋಲುತ ಅಂತೆ ಆಡುವ ದೋಣಿಯಾಟವನಾಡಿರಿ
ನಾವು ಲೀಲಾ ಮಾತ್ರ ಜೀವರು ನಮ್ಮ ಜೀವನ ಲೀಲೆಗೆ
ಇಂದು ಇಂದಿಗೆ ನಿನ್ನೆ ನಿನ್ನೆಗೆ ಇರಲಿ ನಾಳೆಯು ನಾಳೆಗೆ.

ಹಾಗಾದರೆ ಈ ಕವಿತೆಯಿಂದ ನಾವು ತೆಗೆದುಕೊಳ್ಳಬಹುದಾದ ವೈಚಾರಿಕತೆ ಏನು? "ನಾವು ಲೀಲಾ ಮಾತ್ರ ಜೀವರು ನಮ್ಮ ಜೀವನ ಲೀಲೆಗೆ" ಇದು ಬಹಳ ಸುಲಭವಾಗಿ ಯಾರಾದರೂ ಕೂಡ ಕಾಲೇಜ್‌ಗಳಲ್ಲಿ ಆಟೋಗ್ರಾಫ್ ಪುಸ್ತಕದಲ್ಲಿ ಸೈನ್ ಹಾಕುವಾಗ ಬಳಸುತ್ತಿದ್ದ ಸಾಲುಗಳು. ಈ ಕಾಲದಲ್ಲೆಲ್ಲ ಬರೆಯುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ಅಂದರೆ ಇಂತಹ ಸಾಲುಗಳನ್ನು ಹೆಕ್ಕಿ ತೆಗೆಯಬಹುದು; ಸುಭಾಷಿತಗಳಂತೆ ಬರೆಯಬಹುದು. ಕುವೆಂಪು ಅವರ ಇಂತಹ ಉಕ್ತಿಗಳನ್ನು ಹೆಕ್ಕಿ ತೆಗೆದು ಅವರ ವಿಚಾರಗಳೇನು ಎನ್ನುವುದನ್ನು ಮಂಡಿಸುವ ಪ್ರಯತ್ನವನ್ನು ಬಹಳಷ್ಟು ಜನ ಮಾಡಿದ್ದಾರೆ.

ವೈಚಾರಿಕತೆ ಎನ್ನುವುದು ಈ ತರಹದಲ್ಲಿ ಕವಿತೆಯಲ್ಲಿ ಹೆಕ್ಕಿತೆಗೆಯಬಹುದಾದ ರೀತಿಯಲ್ಲಿ ಇರುತ್ತದೆಯೇ ಎನ್ನುವುದು ಬಹಳ ದೊಡ್ಡ ಪ್ರಶ್ನೆ. ಕನ್ನಡ ವಿಮರ್ಶೆ ಒಂದು ಕಾಲಘಟ್ಟದಲ್ಲಿ ಸಾಹಿತ್ಯದಲ್ಲಿ ಈ ಬಗೆಯ ವೈಚಾರಿಕತೆಯನ್ನು ಪ್ರಶ್ನೆ ಮಾಡುತ್ತಿತ್ತು. ಬಹಳ ವಿಚಿತ್ರ ಎಂದರೆ ಈ ತರಹದಲ್ಲಿ ಪ್ರಶ್ನೆ ಮಾಡಿದವರೆಲ್ಲರೂ ಕೂಡಾ ಯಾವ್ಯಾವುದೋ ಕಾರಣಕ್ಕೆ ಸಾಹಿತ್ಯದಲ್ಲಿ ವೈಚಾರಿಕತೆ ಹೇಗೆ ಇರಬಾರದು ಎನ್ನುವುದಕ್ಕೆ ಕುವೆಂಪು ಅವರನ್ನು, ಅವರ ಕಾವ್ಯವನ್ನು ಉದಾಹರಣೆಯಾಗಿ ಕೊಡುತ್ತಿದ್ದರು. ಈ ಕುರಿತು ದೊಡ್ಡದಾಗಿ ಬಹಳಷ್ಟು ಚರ್ಚೆಗಳು ನಡೆದಿವೆ. ಅವುಗಳೆಲ್ಲ ಸಾಹಿತ್ಯದ ವಿದ್ಯಾರ್ಥಿಗಳಿಗೆ ಪರಿಚಿತವಾಗಿದೆ.

ಆದರೆ ಕುವೆಂಪು ದೊಡ್ಡ ಕ್ಯಾನ್ವಾಸ್ ನಲ್ಲಿ ಬರೆದ ಲೇಖಕರು. ಅವರ ಗೀತೆಗಳು, ಕಾವ್ಯ, ನಾಟಕ ಇವೆಲ್ಲ ದೊಡ್ಡ ಕ್ಯಾನ್ವಾಸ್‌ನ ಭಾಗವಾಗಿದೆ. ಅವುಗಳನ್ನು ಬಿಡಿಬಿಡಿಯಾಗಿ ಓದಿ ಇದು ಕುವೆಂಪು ನಮ್ಮ ಕೈಗೆ ಸಿಕ್ಕಿದ್ದಾರೆ ಎಂದು ಹೇಳಲು ಬರುವುದಿಲ್ಲ. ಆ ರೀತಿ ಹೇಳುವುದು ಭಾರೀ ತಪ್ಪು. ಕುವೆಂಪು ಅವರನ್ನು ಒಂದು ಸಮಗ್ರತೆಯಲ್ಲಿ ನೋಡಬೇಕಾಗುತ್ತದೆ.

ಸಮಗ್ರತೆಯ ದೃಷ್ಟಿಯಿಂದ ಕುವೆಂಪು ಅವರ 'ಕಾನೂರು ಹೆಗ್ಗಡಿತಿ' ಕಾದಂಬರಿಯಿಂದ ಎರಡು ಪ್ರಸಂಗಗಳನ್ನು ವಿವರಿಸುತ್ತೇನೆ. 'ಕಾನೂರು ಹೆಗ್ಗಡಿತಿ' ಎತ್ತಿಕೊಳ್ಳುವ ಹಲವಾರು ಪ್ರಶ್ನೆಗಳಲ್ಲಿ ಈ ಉಪನ್ಯಾಸದ ಪ್ರಾರಂಭದಲ್ಲೇ ಹೇಳಿದ ವೈಚಾರಿಕತೆ,ಅವೈಚಾರಿಕತೆ,ವೈಜ್ಞಾನಿಕತೆ,ಅವೈಜ್ಞಾನಿಕತೆಗಳ ಕುರಿತೂ ಪ್ರಶ್ನೆಗಳು ಏಳುತ್ತವೆ. 36-37ರಲ್ಲಿ ಬರೆದ ಕಾದಂಬರಿ ಆದರೂ ಕೂಡ ಕುವೆಂಪು ಅವರಿಗೆ ಆ ಸಂದರ್ಭದಲ್ಲಿ ಅವರನ್ನು ಬಹಳ ಕಾಡಿಸಿರಬಹುದಾದ ಪ್ರಶ್ನೆಗಳು ಇಲ್ಲಿ ಕೆಲವು ಪಾತ್ರಗಳ ಮೂಲಕ ವ್ಯಕ್ತವಾಗಿದೆ. ಕನ್ನಡ ಸಾಹಿತ್ಯದ ವಿದ್ಯಾರ್ಥಿಗಳಿಗೆ ಮತ್ತು 'ಕಾನೂರು ಹೆಗ್ಗಡಿತಿ' ಓದಿದವರಿಗೆ ಆ ಕಾದಂಬರಿ ಬರೆಯುವಾಗ ಕುವೆಂಪು ಅವರು ವಿಶ್ವಸಾಹಿತ್ಯದ ಎರಡು ಮಹಾನ್ ಕಾದಂಬರಿಗಳನ್ನು ಓದುತ್ತಿದ್ದರು ಎಂಬುದು ತಿಳಿದಿದೆ. ಒಂದು ರಶಿಯಾದ ಲಿಯೋ ಟಾಲ್‌ಸ್ಟಾಯ್‌ನ ಅನಾಕರೆನೀನಾ ಮತ್ತೊಂದು ಥಾಮಸ್ ಹಾರ್ಡಿ ಬರೆದ ಇಂಗ್ಲಿಶ್ ಕಾದಂಬರಿ 'ರಿಟರ್ನ್ಸ್ ಆಫ್ ದ ನೇಟಿವ್'.ಈ ವಿಷಯವನ್ನು ಅವರು ದಾಖಲು ಮಾಡಿದ್ದಾರೆ. ಈ ಎರಡು ಕಾದಂಬರಿಗಳು 'ಕಾನೂರು ಹೆಗ್ಗಡಿತಿ' ಕಾದಂಬರಿಯ ಜೊತೆಗೆ ಯಾವ ರೀತಿಯ ಸಂಬಂಧವನ್ನು ಹೊಂದಿತು ಎಂಬುದು ಓದುಗರಿಗೆ ತಿಳಿದಿದೆ.

ಅನಾಕರೆನೀನಾದಲ್ಲಿ ಇರುವ ಲೆವಿನ್ ಎಂಬ ಪಾತ್ರ ಈ ಹೂವಯ್ಯನ ಪಾತ್ರದೊಳಗೆ ಬಂದು ಸೇರಿದೆ ಎಂದು ವಿಮರ್ಶಕರು ಗುರುತಿಸುತ್ತಾರೆ. ಅಂದರೆ ನಾನಿಲ್ಲಿ ಪ್ರಭಾವವನ್ನು ಕುರಿತು, ಕೃತಿಚೌರ್ಯವನ್ನು ಕುರಿತು ಹೇಳುತ್ತಿಲ್ಲ. ದಯವಿಟ್ಟು ಯಾರೂ ತಪ್ಪು ತಿಳಿಯಬಾರದು. ಓದುಗರಿಗೆ ಮಾತ್ರವಲ್ಲ ಬರೆಯುವವರಿಗೂ ಕೃತಿಗಳ ನಡುವಣ ಸಂಬಂಧ ಹೇಗೆ ರೂಪುಗೊಳ್ಳುತ್ತದೆ ಎನ್ನುವುದನ್ನಷ್ಟೇ ಇಲ್ಲಿ ಹೇಳುತ್ತಿದ್ದೇನೆ.

'ಕಾನೂರು ಹೆಗ್ಗಡಿತಿ'ಯಲ್ಲಿ ಹೂವಯ್ಯ ಇಡೀ ವಾತಾವರಣದ ಒಳಗೆ ಒಂದಾಗಲಿಕ್ಕೆ ಸಾಧ್ಯವಾಗದೇ ಇರುವ ಕಾರಣಗಳಲ್ಲಿ ಮುಖ್ಯವಾದದ್ದು 'ಅವಿಚಾರಿತ ರಮಣೀಯತೆ'. ಇಡೀ ಲೋಕ ಅವಿಚಾರಿತ ರಮಣೀಯವಾಗಿದೆ ಇದರಲ್ಲಿ ಸೀತೆಯೂ ಸೇರಿದ್ದಾಳೆ. ಸೀತೆ ಎಷ್ಟು ಅವಿಚಾರಿತ ರಮಣೀಯಳಾಗಿದ್ದಾಳೆ ಎಂದರೆ, ಅವಳು ಗೋಡೆಯ ಮೇಲೆ ಯಾರಿಗೂ ಕಾಣಿಸದ ಜಾಗದಲ್ಲಿ 'ಹೂವಯ್ಯ ಭಾವನ್ನೇ ಮದುವೆಯಾಗ್ತೇನೆ' ಎಂದು ಬರೆದಿರುತ್ತಾಳೆ. ಹಾಗೆ ಬರೆದದ್ದನ್ನು ಹೂವಯ್ಯನೇ ಓದುತ್ತಾನೆ. ಆಕೆಗೆ ನಾಚಿಕೆಯಾಗುವುದಿಲ್ಲ, ಆದರೆ ಬೇರೆಯವರು ಓದಿದರೆ ಎಂದು ಹೂವಯ್ಯನಿಗೆ ಸಂಕೋಚವಾಗುತ್ತದೆ. ಸೀತೆ ಬರೆದದ್ದನ್ನು ಬೆರಳಲ್ಲಿ ಉಜ್ಜಿ ಅಳಿಸಿಬಿಡುತ್ತಾನೆ.ಹೂವಯ್ಯ ವಿಚಾರಿತ ಸುಂದರ ನೆಲೆಯವನು. ಈ ಅವಿಚಾರಿತ ರಮಣೀಯ ಲೋಕದೊಳಗಡೆ ವಿಚಾರಿತ ಸುಂದರ ನೆಲೆಯ ಹೂವಯ್ಯ ಪ್ರವೇಶ ಮಾಡಿದಾಗ ಏನಾಗುತ್ತದೆ ಎಂಬುದಕ್ಕೆ ಹತ್ತಾರು ಘಟನೆಗಳು ಬರುತ್ತವೆ.

ಹೂವಯ್ಯ ಉಳುಮೆ ಮಾಡಲು ಹೋಗುವ ಪ್ರಸಂಗ ಇರಬಹುದು. ಅನಾಕರೆನೀನಾದಲ್ಲಿ ಲೆವಿನ್ ಗೋಧಿ ಬೆಳೆಯ ತೆನೆಗಳನ್ನು ಕೊಯ್ಲು ಮಾಡುವ ಪ್ರಸಂಗ ಒಂದು ಬರುತ್ತದೆ. ಈ ಘಟನೆಯಲ್ಲಿ ಲೆವಿನ್ ಗೋಧಿ ತೆನೆಯನ್ನು ಕತ್ತರಿಸಲು ಅದಕ್ಕಾಗೇ ಮಾಡಿದ ಕತ್ತಿಯನ್ನು ಹಿಡಿದಾಗ ಅವನಿಗೆ ಅದನ್ನು ಬಳಸಲು ಗೊತ್ತಿರುವುದಿಲ್ಲ.

ಹಾಗಾಗಿ ಅದನ್ನು ಬೀಸುವುದಕ್ಕೆ ಆಗುವುದಿಲ್ಲ. ಹಾಗೆ ಬೀಸುವುದನ್ನು ಅವನು ಕಲಿತಿಲ್ಲ. ಟಾಲ್‌ಸ್ಟಾಯ್ ಈ ಘಟನೆಯನ್ನು ವಿವರವಾಗಿ ವರ್ಣಿಸುತ್ತಾನೆ.'ಕಾನೂರು ಹೆಗ್ಗಡಿತಿ'ಯಲ್ಲಿ ಹೂವಯ್ಯನಿಗೆ ಉಳುಮೆ ಮಾಡುವುದಕ್ಕೆ ಆಗುವುದಿಲ್ಲ. ಬಿಳಿಪಂಚೆಯನ್ನು ಮಂಡಿಗಿಂತ ಕೆಳಗೆ ಉಟ್ಟುಕೊಂಡರೆ ಎತ್ತುಗಳು ದಿಕ್ಕಾಪಾಲಾಗಿ ಓಡಿಹೋಗುತ್ತವೆ.ಹೂವಯ್ಯ ಕೆಲಗೆ ಬಿದ್ದು ಅಲ್ಲಿದ್ದವರ ನಗೆಗೆ ಪಕ್ಕಾಗುತ್ತಾನೆ. ಎತ್ತುಗಳಿಗೆ ಆದ ಗಾಯದ ಹಾನಿ ಕಂಡು ಚಂದ್ರೇಗೌಡರು ಕೋಪ ಮಾಡಿಕೊಳ್ಳುತ್ತಾರೆ. ಅವಿಚಾರಿತ ರಮಣೀಯವಾದ ಜಗತ್ತಿನಲ್ಲಿ ವಿಚಾರಿತ ಸುಂದರವಾದದ್ದಕ್ಕೆ ಜಾಗವಿಲ್ಲ.

ಬಲೀಂದ್ರ ಹೋತದ ಪ್ರಕರಣದಲ್ಲಿ, ಜನರೆಲ್ಲಾ ಆ ಹೋತವನ್ನು ಬಲಿ ಕೊಟ್ಟು, ರಾತ್ರಿಗೆ ಅದನ್ನೆಲ್ಲ ಊಟ ಮಾಡಿ ಮುಗಿಸಬೇಕು ಎಂದುಕೊಳ್ಳುತ್ತಾ ಸಂತೋಷದಿಂದ ಕುಣಿಯುತ್ತಿರುತ್ತಾರೆ.ಆದರೆ ಅದು ತಪ್ಪಿಸಿಕೊಂಡು ಓಡಿಹೋಗಿ ಹೂವಯ್ಯನ ಮನೆ ಹತ್ತಿರ ಬರುತ್ತದೆ. ಹೂವಯ್ಯ ಬಲೀಂದ್ರನನ್ನು ಬಲಿ ಕೊಡಲು ಬಿಡುವುದಿಲ್ಲ. ಅನಂತರ ಹೂವಯ್ಯ ಕೆಳಕಾನೂರಿಗೆ ಹೋದಾಗ ಬಲೀಂದ್ರ ಹೋತ ಅಲ್ಲಿಗೆ ಬರುತ್ತದೆ.ಅದನ್ನು ಕದ್ದುಕೊಂಡು ಹೋಗಲು ಬಾಡುಗಳ್ಳ ಸೋಮ ಬರುತ್ತಾನೆ. ಈ ಪ್ರಸಂಗದಿಂದ ನಮಗೆ ತಿಳಿಯುವಂತಹ ಅಂಶವೆಂದರೆ, ಹೂವಯ್ಯ ಬಲೀಂದ್ರ ಹೋತ ಪ್ರಕರಣವನ್ನು ಅವೈಚಾರಿಕ, ಮೂಢನಂಬಿಕೆ ಎಂದು ಹೇಳುತ್ತಾನೆ. ಆದರೆ ಆ ಲೋಕದೊಳಗೆ ವಿಚಾರಿತ ಸುಂದರ ಹೂವಯ್ಯ ಪ್ರವೇಶ ಮಾಡಬೇಕಾಗಿ ಬರುತ್ತದೆ. ಅಂದರೆ ಹೂವಯ್ಯ ಎರಡೂ ಲೋಕದಲ್ಲೂ ಸಹಯಾತ್ರಿಕನಾಗಿ ಇರಬೇಕಾಗಿ ಬರುತ್ತದೆ. ವಿಚಾರಿತ ಸುಂದರವಾದದ್ದು ಮತ್ತು ಅವಿಚಾರಿತ ರಮಣೀಯವಾದದ್ದು ಬೇರೆ ಬೇರೆಯಾಗಿರಲು ಆಗುವುದಿಲ್ಲ. ಇವೆರಡೂ ಜೊತೆಜೊತೆಯಲ್ಲಿ ಬಾಳುವೆ ಮಾಡಬೇಕು. ಒಂದು ಇನ್ನೊಂದರೊಡನೆ ಬದುಕಬೇಕಾಗುತ್ತದೆ. ಅವುಗಳ ನಡುವೆ ನಿರಂತರವಾದ ತಿಕ್ಕಾಟ ನಡೆಯಲೇಬೇಕಾಗುತ್ತದೆ.

ಕೆಳಕಾನೂರಿನಲ್ಲಿ ನಡೆಯುವಂತಹ ಇನ್ನೊಂದು ಪ್ರಸಂಗ. ತಾಯಿ ಒಂದು ದಿವಸ ಬೆಳಿಗ್ಗೆ ಎದ್ದು ಮಗನನ್ನು ಕರೆದು ಅವನ ಭುಜದ ಮೇಲೆ ನೀಲಿಗೆರೆ ಕಾಣಿಸುತ್ತಿರುವುದನ್ನು ತೋರಿಸುತ್ತಾಳೆ. ಆ ನೀಲಿಗೆರೆ ಕಾಣಿಸುತ್ತಿರುವುದಕ್ಕೆ ವೈದ್ಯಕೀಯ ನೆಲೆಯಲ್ಲಿ ಏನೋ ಹೇಳಬಹುದು. ನಾಗಮ್ಮ ಮಗನ ಬಳಿ ತನ್ನ ಸಾವು ಹತ್ತಿರ ಬಂದಿದೆ. ಸಾವಿನ ನಿಯಂತ್ರಕ ದೈವ ಯಾರನ್ನು ಕರೆದೊಯ್ಯಬೇಕು ಎನುವುದನ್ನು ಸಲುವಾಗಿ ಭೂತ ಮೂಸಿಕೊಂಡು ಹೋಗಿದೆ; ಅದಕ್ಕೋಸ್ಕರ ಈ ನೀಲಿಗೆರೆ ಬಂದಿದೆ ಎನ್ನುತ್ತಾಳೆ. ಅದನ್ನು ಕೇಳಿ ಹೂವಯ್ಯ ನಗುತ್ತಾ ಗೇಲಿ ಮಾಡುತ್ತಾನೆ. ಆದರೆ ನಾಗಮ್ಮ ಆ ಘಟನೆಯನ್ನು ನಂಬಿಕೊಂಡೇ ಇರುತ್ತಾಳೆ.

ಈ ಉಪನ್ಯಾಸದ ಪ್ರಾರಂಭದಲ್ಲಿ ಹೇಳಿದ ಬೀಳುವ/ಕಾಣುವ ಆಕಾಶಕಾಯಗಳಿಗೂ ಸಾವಿಗೂ ಒಂದು ಸಂಬಂಧವಿದೆ ಎನ್ನುವ ಮಹದೇವ ಹೇಳಿದ ಘಟನೆಯೊಡನೆ ನಾನು ಬದುಕುತ್ತಿರುವಂತೆಯೇ, ನಾಗಮ್ಮ ತನ್ನದೇ ತಿಳಿವಳಿಕೆಯೊಡನೆ ಬದುಕಿದಂತೆಯೇ, ನಾವೆಲ್ಲರೂ ಇಂತಹ ಘಟನೆಗಳೊಡನೆ ಬದುಕಬೇಕಾಗಿ ಬರುತ್ತದೆ. ಈ ಲೋಕದಲ್ಲಿ. ರಸಲ್‌ಹೇಳಿದ ಲೋಕವೊಂದಿದೆಯಲ್ಲ, ಅದರಂತೆ ವೈಚಾರಿಕತೆ ಎನ್ನುವುದು ಈ

ಲೋಕದಲ್ಲಿ ನೂರಕ್ಕೆ ನೂರರಷ್ಟು ನೆಲೆಗೊಳ್ಳುತ್ತದೆ ಎಂದು ನಾವು ತಿಳಿದುಕೊಂಡರೆ ಅದು ತಪ್ಪು. ವೈಚಾರಿಕತೆ ಮತ್ತು ವೈಜ್ಞಾನಿಕತೆ ನಿರಂತರವಾಗಿ ಆಗಿರುತ್ತದೆ ಎನ್ನುವುದನ್ನು ಕುವೆಂಪು ತಮ್ಮದೇ ರೀತಿಯಲ್ಲಿ ಮಂಡಿಸುತ್ತಾರೆ. ಆದರೆ ನೇರವಾಗಿ ಎಲ್ಲಿಯೂ ಹೇಳುವುದಿಲ್ಲ.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯನ್ನು ವಿಮರ್ಶೆ ಮಾಡಿದವರೆಲ್ಲರೂ ಕೂಡ ಅಲ್ಲಿರುವ ವೈಚಾರಿಕತೆ ಮತ್ತು ವೈಜ್ಞಾನಿಕತೆಯ ತಾಕಲಾಟಗಳನ್ನು ಬಹಳ ತೀವ್ರವಾಗಿ ನಿರಾಕರಿಸಲು ಪ್ರಯತ್ನ ಪಡುತ್ತಾರೆ. ಎಲ್ಲವೂ ಸರಿ ಆದರೆ ಆ ಗಡ್ಡದಯ್ಯನ ಪ್ರಸಂಗವನ್ನು ಏಕೆ ಹಾಗೆ ಮಾಡಿದರು ಎಂಬ ಪ್ರಶ್ನೆ ಕೇಳುತ್ತಾರೆ. ನಮ್ಮ ಹುಡುಗರಿಗೆ ಪಾಠ ಮಾಡುವಾಗ ಅವರುಗಳೂ ಕೂಡ, ಎಲ್ಲ ಸರಿ ಕುವೆಂಪು, ಎಲ್ಲ ಸರಿ ಓಕೆ ನೋ ಪ್ರಾಬ್ಲಮ್, ಆದರೆ...ಆ ಪುನರ್ಜನ್ಮದ ಕಥೆಬರುತ್ತದಲ್ಲ ಅದು ಹೇಗೆ? ಆ ಚಿನ್ನಮ್ಮ ಮಾರಿಗುಡಿ ವಿಗ್ರಹದ ಎದುರು ಬಿದ್ದಾಗ, ದಕ್ಷಿಣೇಶ್ವರದ ಯಾರೋ ಇಬ್ಬರು ಸನ್ಯಾಸಿಗಳು ಚಿನ್ನಮ್ಮನ ಉದರದಲ್ಲಿ ಜನಿಸುವ ಮಗುವಿನ ಮಗು ಮುಂದೆ ಇಲ್ಲಿ ದೀಕ್ಷೆಯನ್ನು ಪಡೆಯುತ್ತಾನೆ ಎಂದು ಮಾತನಾಡುತ್ತಾರಲ್ಲ ಇವೆಲ್ಲ ಅವೈಜ್ಞಾನಿಕ,ಅವೈಚಾರಿಕ,ಅಸಂಭಾವ್ಯ ಅಲ್ಲವೇ ಎಂಬ ಪ್ರಶ್ನೆಗಳನ್ನು ಇಡುತ್ತಾರೆ. ನಮ್ಮ ವಿಮರ್ಶೆಗಳೂ ಸಹ ಈ ಪ್ರಶ್ನೆಗಳನ್ನು ಕೇಳುತ್ತವೆ.

ವಿಚಾರಗಳು/ವೈಚಾರಿಕತೆ ಅನ್ನುವುದು ಹೇಳಿಕೆಗಳ ರೂಪದಲ್ಲಿ ಇರುತ್ತವೆ, ಉಲ್ಲೇಖ ಮಾಡಲು ಸಾಧ್ಯ ಎಂಬುದನ್ನು ಬದಿಗಿಟ್ಟು ನೋಡಿದರೆ, ಕೃತಿಯಲ್ಲೇ ಒಂದು ಜೀವನ ನೋಟ, ಬದುಕಿನ ಬಗೆಗಿನ ತಿಳಿವಳಿಕೆ ಹೇಗೆ ಮೂಡುತ್ತದೆ, ಹೇಗೆ ಮೂಡಬೇಕು ಎನ್ನುವುದಕ್ಕೆ ಕೃತಿಗಳು ನಮಗೆ ಸೂಚನೆ ಕೊಡುತ್ತಿರುತ್ತವೆ ಎನ್ನುವುದನ್ನು ಹೇಳುತ್ತಿದ್ದೇನೆ. ಇಂತಹ ಸೂಚನೆಗಳನ್ನು ಬಿಟ್ಟು ಕೃತಿಯನ್ನು ವರದಿಯ ರೀತಿಯಲ್ಲಿ ಓದಲು ಶುರು ಮಾಡಿದಾಕ್ಷಣ, ಹೇಳಿಕೆಗಳನ್ನು ತೆಗೆದು ಹೊರಗಿಟ್ಟು ತೋರಿಸಲು ಮೊದಲು ಮಾಡಿದಾಗ ಬಹುಪಾಲು ಸಂದರ್ಭಗಳಲ್ಲಿ ನಮಗೆ ಚಿನ್ನಮ್ಮನ ಪ್ರಸಂಗದ ತರಹದ ಅವೈಚಾರಿಕ,ಅವೈಜ್ಞಾನಿಕ, ಅಸಂಭಾವ್ಯತೆಯ ತಿಳಿವಳಿಕೆಗಳು, ಹೇಳಿಕೆಗಳು, ನಂಬಿಕೆಗಳು, ಕಾಣಸಿಗುತ್ತವೆ.

ಹಾಗಾಗಿ ಕುವೆಂಪು ಕಾದಂಬರಿ, ಕವಿತೆಗಳನ್ನು ಬರೆಯುತ್ತಿದ್ದ ಸಂದರ್ಭದಲ್ಲಿ ವೈಚಾರಿಕತೆಯನ್ನು ಮೈಮೇಲೆ ಆಹ್ವಾನಿಸಿಕೊಂಡು ಬರೆಯುತ್ತಿದ್ದರು ಎಂದರೆ ತಪ್ಪಾಗುತ್ತದೆ. ಸುಮಾರು 80ರ ದಶಕದಲ್ಲಿ ಕನ್ನಡ ಸಾಹಿತ್ಯ ವಿಮರ್ಶೆಯ ಬರಹಗಳು, ಲೇಖಕರು ಒಂದು ಬಗೆಯ ವೈಚಾರಿಕತೆಗೆ ತಮ್ಮನ್ನು ಬದ್ಧವಾಗಿಸಿಕೊಳ್ಳಬೇಕು, ತೊಡಗಿಸಿಕೊಳ್ಳಬೇಕು ಎಂಬ ಶರತ್ತು ಹಾಕುತ್ತಿತ್ತು. ಹಾಗೆ ವೈಚಾರಿಕವಾಗಿ ಬದ್ಧವಾಗಿರಬೇಕು ಎಂಬುದು ತಪ್ಪಲ್ಲ. ಆದರೆ ಆ ಬದ್ಧತೆ ಸಾಹಿತ್ಯ ಕೃತಿಯಲ್ಲಿ ಹೇಗೆ ಬರಬೇಕು ಎನ್ನುವ ವಿಚಾರದಲ್ಲಿ ಸಮಸ್ಯೆ ಉದ್ಭವವಾಗುತ್ತದೆ.

ಪ್ರಸ್ತುತ ಕುವೆಂಪು ಅವರ ತಾತ್ವಿಕ ನೆಲೆಗಳನ್ನು ವೈಚಾರಿಕವಾಗಿ ಯಾವ ಚೌಕಟ್ಟಿನೊಳಗೆ ವ್ಯಾಖ್ಯಾನ ಮಾಡಲಾಗುತ್ತಿದೆಯೋ, ಆ ತಾತ್ವಿಕ ನೆಲೆಯೇ ಕುವೆಂಪು ಅವರ ಜೀವನ ದೃಷ್ಟಿಯಾಗಿದ್ದರೆ ಖಂಡಿತ ಅವರು ಒಂದು ಕವಿತೆಯನ್ನೂ ಬರೆಯಲು

ಸಾಧ್ಯವಿರಲಿಲ್ಲ. ನನ್ನ ತಿಳಿವಳಿಕೆ ಪ್ರಕಾರ ಈ ಜಗತ್ತಿನಲ್ಲಿ ಎರಡು ಬಗೆಯ ಸಿದ್ಧಾಂತಗಳು ಸಾಹಿತ್ಯ ಸೃಷ್ಟಿಗೆ ಅವಕಾಶ ಮಾಡಿಕೊಡುವುದಿಲ್ಲ.ಒಂದು ಅದ್ವೈತ ಮತ್ತೊಂದು ಫ್ಯಾಸಿಸಂ. ಈ ಎರಡೂ ಸಿದ್ಧಾಂತಗಳೂ ಕೂಡ ಬೇರೊಂದು ಸಿದ್ಧಾಂತವನ್ನು ಒಪ್ಪದೇ ಇರುವುದರಿಂದ ಮತ್ತು ಎಲ್ಲವೂ ಅವೇ ಆಗಿರುವುದರಿಂದ ಸಾಹಿತ್ಯಕೃತಿಯನ್ನು ಸೃಷ್ಟಿಸಲು ಅವಕಾಶ ಮಾಡಿಕೊಡುವುದಿಲ್ಲ. ಇದು ಅದ್ವೈತ ತತ್ವವನ್ನು ಹೇಳುವ ಒಳ್ಳೆಯ ಸಾಹಿತ್ಯಕೃತಿ, ಇದು ಒಳ್ಳೆಯ ಕೃತಿ ಎಂದು ತೋರಿಸುವುದಕ್ಕೆ ಬರುವುದಿಲ್ಲ. ಈ ಭಜಗೋವಿಂದಂ, ಸೌಂದರ್ಯಲಹರಿ ಇವೆಲ್ಲ ಸೃಷ್ಟಿಯಾಗಬೇಕಾದರೆ ಏನಾಗಿದೆ ಎಂದು ಶಂಕರಾಚಾರ್ಯರಿಗೂ ಗೊತ್ತಿದೆ. ಅವರಿಗೆ ಗೊತ್ತಿದೆ ಎಂಬುದು ನಮಗೂ ತಿಳಿದಿದೆ

ಅದ್ವೈತಕ್ಕೆ ಹಲವಾರು ಕವಲುಗಳಿವೆ. ಅದರಲ್ಲಿ ಹಲವು ಬಗೆಗಳಿವೆ. ಅವುಗಳಲ್ಲಿ ಪ್ರತ್ಯಭಿಜ್ಞಾನ ಎಂಬುದು ಶ್ರೇಷ್ಠ ಸಾಹಿತ್ಯ ಕೃತಿಗೆ ಕಾರಣವಾಯಿತು. ಅಭಿಜ್ಞಾನ ಶಾಕುಂತಲವೇ ನಮ್ಮೆದುರಿಗೆ ಇದೆ. ನಾವೀಗ ಆ ಕುರಿತು ಚರ್ಚಿಸುತ್ತಿಲ್ಲ. ಅದ್ವೈತ ಎಂದು ನಾವು ಯಾವುದನ್ನು ತಿಳಿದುಕೊಂಡಿರುತ್ತೇವೋ ಅದು ಕುವೆಂಪು ಅವರಿಗೆ ನಂಬಿಕೆಯಾಗಿದ್ದಿದ್ದರೆ ವಾಸ್ತವವಾಗಿ ಅವರು ಇಂತಹ ಕೃತಿಗಳನ್ನು ಬರೆಯುವುದಕ್ಕೆ ಸಾಧ್ಯವಿರಲಿಲ್ಲ. ಇದರರ್ಥ ಅವರ ತಿಳಿವಳಿಕೆಯ ಭಾಗವಾಗಿ ಈ ಸಿದ್ಧಾಂತ ಇರಬಾರದು ಎಂದೇನಲ್ಲ.

ನೀವು ದ್ವೈತಿಗಳಾಗಿರುತ್ತೀರೋ, ಅದ್ವೈತಿಗಳಾಗಿರುತ್ತೀರೋ, ವಿಶಿಷ್ಟಾದ್ವೈತಿಗಳಾಗಿರುತ್ತೀರೋ ಅಥವಾ ಮಾರ್ಕ್ಸಿಸ್ಟ್ ಗಳಾಗಿರುತ್ತೀರೋ ಅದು ಇಂಪಾರ್ಟೆಂಟ್ ಅಲ್ಲ. ನಿಮ್ಮ ಈ ತಿಳುವಳಿಕೆಗಳು ಸಾಹಿತ್ಯಕೃತಿಗಳೊಳಗೆ ಯಾವ ರೀತಿಯಾಗಿ ಆಕಾರ ತಳೆಯುತ್ತದೆ ಮತ್ತು ಓದುಗರಿಗೆ ಅವು ಯಾವ ರೂಪದಲ್ಲಿ ಲಭ್ಯವಾಗುತ್ತದೆ ಎನ್ನುವುದು ಮುಖ್ಯ. ಈ ಸಿದ್ಧಾಂತಗಳನ್ನು ಒಂದು ಸಾಹಿತ್ಯಕೃತಿಯಿಂದ, ಅದನ್ನು ಸಿದ್ಧಗೊಂಡ ಹೇಳಿಕೆಯಂತೆ ತೆಗೆಯಲು ಸಾಧ್ಯವೇ, ಅಥವಾ ರಸವನ್ನು ಹಿಂಡಿದ ರೀತಿ ಕೃತಿಯಿಂದ ಬೇರ್ಪಡಿಸಲು ಸಾಧ್ಯವೇ ಅಥವಾ ಆ ತಿಳುವಳಿಕೆ ಓದುವವರ ನೋಡುವವರ ಅನುಭವಕ್ಕೆ ದಕ್ಕಬಹುದೇ? ಅಲ್ಲಮನ ವಚನದಲ್ಲಿ ತಿಳುವಳಿಕೆ ಹೇಗೆ ಒಂದು ಅನುಭವವಾಗುತ್ತದೆ ಎನ್ನುವುದಕ್ಕೆ ಒಂದು ಉದಾಹರಣೆಯನ್ನು ನೋಡಿ. ಮಂಜಿನ ಶಿವಾಲಯಕ್ಕೆ ಬಿಸಿಲ ಕಳಶವುಂಟೇ ಎಂದು ಹೇಳುತ್ತಾನೆ. ಮಂಜಿನ ಶಿವಾಲಯಕ್ಕೆ ಬಿಸಿಲ ಕಳಶವುಂಟೇ? ಈ ಸಾಲು ತೆಗೆದುಕೊಂಡು ಕನ್ನಡಿಗರು ಏನು ಮಾಡಬೇಕು? ಏನು ಸಿಗುತ್ತದೆ ನಮಗೆ ಈ ಸಾಲಿನೊಳಗೆ? 'ಶೂನ್ಯ ಸಂಪಾದನೆ'ಗೆ ಹೋದರೆ ಅಲ್ಲಿ "ಮಂಜಿನ ಶಿವಾಲಯಕ್ಕೆ ಬಿಸಿಲ ಕಳಶವುಂಟೇ..." ಎಂಬ ವಚನವನ್ನು ಒಂದು ಸಂದರ್ಭಕ್ಕೆ ಅಲ್ಲಮನ ಪ್ರತಿಕ್ರಿಯೆ ಎಂಬಂತೆ ಇರಿಸಿಬಿಟ್ಟಿದ್ದಾರೆ. ಅಲ್ಲಮ ಯಾವುದೋ ಒಂದು ಸಂದರ್ಭದಲ್ಲಿ ಯಾವುದೋ ಮಾತಿಗೆ ಉತ್ತರವಾಗಿ ಈ ವಚನವನ್ನು ಹೇಳಿದ್ದಾನೆ ಎಂದು ಈ ಸಾಲುಗಳಿಗೆ ಕಾರ್ಯಕಾರಣ ಸಂಬಂಧಗಳನ್ನು ಕೊಟ್ಟುಬಿಟ್ಟಿದ್ದಾರೆ. ಹಾಗಾಗಿ ನೀವು ಕನ್ನಡ ಸಾಹಿತ್ಯ ಪರಂಪರೆಯ ತಿಳುವಳಿಕೆಯನ್ನು ಗಮನಿಸಿದರೆ ವೈಚಾರಿಕತೆಯನ್ನು ಕಳೆದ ಇಪ್ಪತ್ತು ವರ್ಷಗಳಿಂದ ವಿಮರ್ಶಾ ವಿವೇಕ ಯಾವ ರೀತಿಯಲ್ಲಿ ಗ್ರಹಿಸುತ್ತಿದೆಯೋ, ಆ ರೀತಿ ಗ್ರಹಿಸಲು ಹೊರಟರೆ ಕೆಲವು ಸಮಸ್ಯೆಗಳು ಉಂಟಾಗುತ್ತವೆ. ಆದ್ದರಿಂದ ನಾವೀಗ ಇನ್ನೊಂದು ಹಂತಕ್ಕೆ ದಾಟಬೇಕಾಗಿದೆ.

ಕುವೆಂಪು ಅವರ ಸಾಹಿತ್ಯಸೃಷ್ಟಿ ಕುರಿತು ಮಾತ್ರವಲ್ಲ ಅವರ ಸಮಕಾಲೀನರಲ್ಲೂ ಉದಾಹರಣೆಗೆ ಪು.ತಿ.ನ. ಅವರಲ್ಲಿ ಭಾಗವತ ಪ್ರಜ್ಞೆ ಕೆಲಸ ಮಾಡುತ್ತಿದೆ, ಅವರು ಭಾಗವತ ಪ್ರಜ್ಞೆಯ ಕವಿ ಎಂದು ಹೇಳಿ, ಅದಕ್ಕೆ ಕೆಲವು ಉದಾಹರಣೆಗಳನ್ನು ಕೊಟ್ಟುಬಿಡುತ್ತಾರೆ. ಆ ತರಹ ಹೇಳಿಕೆಗಳನ್ನು ಕೊಡುವುದು ಬಹಳ ಕಷ್ಟ ಇನ್ನೊಂದು ನಿಟ್ಟಿನಲ್ಲಿ ನೋಡಿದರೆ ತುಂಬಾ ಸುಲಭ. ಭಾಗವತ ಓದಿದಾಗ ಆಗುವ ಅನುಭವಕ್ಕೂ ಪು.ತಿ.ನ. ಅವರ ಕವಿತೆಗಳನ್ನು, ನಾಟಕಗಳನ್ನು, 'ಶ್ರೀಹರಿಚರಿತೆ' ಯನ್ನು ಓದಿದಾಗ ಅನುಭವವೂ ಒಂದೇ ಆಗುತ್ತದೆಯೇ? ಆಗುವಿಕೆಯನ್ನು ನಾವು ಸಾಹಿತ್ಯ ಕೃತಿಯು ನೀಡುವ ಅನುಭವವನ್ನಾಗಿ ಬದಲಿಸಿಕೊಳ್ಳದಿದ್ದರೆ ಸಾಹಿತ್ಯಕೃತಿಗಳು ಯಾಕೆ ಬೇಕು?ರೀಡರ್ಸ್‌ಡೈಜೆಸ್ಟ್ ಅವರ ಕೋಟೆಬಲ್ ಕೋಟ್ಸ್ ಇಲ್ಲವೇ ಮಾಣಿಕ್ಯ ಮಾಣಿಕ್ಯ ಕೋಶಗಳು ನಮಗೆ ಸಾಕು. ಅವುಗಳನ್ನು ಇಟ್ಟುಕೊಂಡು ಜೀವನದ ಬಗೆಗೆ ಬೇಕಾಗಿರುವಂತಹ ತಿಳಿವಳಿಕೆಗಳನ್ನು ಪಡೆದುಕೊಳ್ಳಬಹುದು.

ಕುವೆಂಪು ಅವರು ಒಂದು ಕಡೆ ಕವಿತೆಯೊಳಗೆ ಬೆಳಗನ್ನು ಕುರಿತು ವಿವರಿಸುತ್ತಿರುತ್ತಾರೆ. ಇದ್ದಕ್ಕಿದ್ದಂತೆ ಲೋಕದಲ್ಲಿ ಏನಿದೆ ಎಂದು ಅನಿಸಲು ಶುರುವಾಗುತ್ತದೆ.ಕೊನೆಯ ಎರಡು ಸಾಲುಗಳಲ್ಲಿ ಹೀಗೆ ಬರೆಯುತ್ತಾರೆ. "ಅರಿವಾಸೆಯ ಬಿಡು, ಇರುವಾಸೆಯ ತೊಡು". ಇದು ಕುವೆಂಪು ಅವರ ಫಿಲಾಸಫಿಯಾಗಿತ್ತು, ವೈಚಾರಿಕತೆಯಾಗಿತ್ತು ಎಂದು ಭಾವಿಸೋಣವೇ? "ಅರಿವಾಸೆಯ ಬಿಡು, ಇರುವಾಸೆಯ ತೊಡು" ಎಂಬುದು ಕುವೆಂಪು ಅವರ ವೈಚಾರಿಕತೆಯಾಗಿದ್ದಿದ್ದರೆ ಅವರು 'ಮಲೆಗಳಲ್ಲಿ ಮದುಮಗಳು' ಬರೆಯತ್ತಲೇ ಇರಲಿಲ್ಲ, ಬರೆಯಬೇಕಾಗಿರಲಿಲ್ಲ. ಓದುಗರು ಮಾತ್ರ ಈ ಕಾದಂಬರಿಯಲ್ಲಿ ಪ್ರವೇಶ ಮಾಡಿಲ್ಲ. ನೆನಪಿನ ಲೋಕದೊಳಗಡೆ ನುಗ್ಗಿ ಎಲ್ಲವನ್ನೂ ಬರೆದಿದ್ದಾರಲ್ಲ,ಕಾದಂಬರಿಯನ್ನು ಬರೆಯುವ ಕ್ರಿಯೆಯೇ ಕುವೆಂಪು ಅವರಿಗೇ ಬಹಳ ದೊಡ್ಡ ಆಗುವಿಕೆಯ ಎಕ್ಸ್‌ಪೀರಿಯನ್ಸ್ ಆಗಿರುತ್ತದೆ. ಇವತ್ತಿಗೂ ಕೂಡ ಕಾದಂಬರಿಯನ್ನು ಓದುತ್ತಿದ್ದರೆ ನಮಗೆ ಆ ಆಗುವಿಕೆಯ ಎಕ್ಸ್‌ಪೀರಿಯನ್ಸ್ ಆಗುತ್ತದೆ.

ಆದ್ದರಿಂದ ಕನ್ನಡ ಸಾಹಿತ್ಯ ವಿಮರ್ಶೆಯ ಕೆಲವು ಗೊಂದಲಗಳನ್ನು ಇಟ್ಟುಕೊಂಡೇ ಕುವೆಂಪು ಸಾಹಿತ್ಯದಲ್ಲಿ ವೈಚಾರಿಕತೆ ಎನ್ನುವ ಪ್ರಶ್ನೆಯನ್ನು ನಾನು ಚರ್ಚೆ ಮಾಡುತ್ತಿದ್ದೇನೆ. ನಮಗೆ ಮಾದರಿಗಳಿವೆ.ಕನ್ನಡ ಸಾಹಿತ್ಯವನ್ನು ಅಲಾಯದವಾಗಿ ನೋಡಿದರೆ ಎಲ್ಲ ಕಾಲದಲ್ಲೂ, ಎಲ್ಲ ಬಗೆಯ ಸಾಹಿತ್ಯದಲ್ಲೂ ಸಾಕಷ್ಟು ಉದಾಹರಣೆಗಳಿವೆ. ಹಾಗೆ ನೋಡಿದರೆ ಅದನ್ನೇ ನಮ್ಮ ಶ್ರೇಷ್ಠ ಸಾಹಿತ್ಯ ಎಂದು ಹೇಳುವಂತೆ ಇರುವುದು. ಆ ಶ್ರೇಷ್ಠ ಸಾಹಿತ್ಯವನ್ನೇ ಮಾದರಿಯನ್ನಾಗಿ ಹೇಳುತ್ತಿರುವುದು. ಆದರೆ ಈ ಇಪ್ಪತ್ತನೆಯ ಶತಮಾನದಲ್ಲಿ ವೈಚಾರಿಕತೆಯ ಕುರಿತು ಹಾಕಿಕೊಂಡಂತಹ ಪ್ರಶ್ನೆಗಳನ್ನು, ಹೊರೆಯನ್ನು ನಾವು ನಿಭಾಯಿಸಿದ್ದರ ಕುರಿತು ಯೋಚಿಸಿದರೆ ನನಗೆ ಸ್ವಲ್ಪ ಮಟ್ಟಿಗೆ ಖಿನ್ನತೆಯಾಗುತ್ತದೆ. ವೈಚಾರಿಕತೆಯ ಪ್ರಶ್ನೆಯನ್ನು ಹಾಕಿಕೊಂಡಾಗ ಕೆಲವು ಕಡೆ ನಾವೇ ಇಕ್ಕಟ್ಟುಗಳನ್ನು ಕ್ರಿಯೇಟ್ ಮಾಡಿಕೊಂಡಿದ್ದೇವೆ ಎನಿಸುತ್ತದೆ. ಇಷ್ಟು ಉಪನ್ಯಾಸ ಸಾಕು ಎನಿಸುತ್ತದೆ.

(ಈ ಮಾತುಗಳು ಮುಗಿದ ಮೇಲೆ ಅಲ್ಲಿ ನೆರೆದಿದ್ದ ಕೇಳುಗರ ಜೊತೆ ನಡೆಸಿದ ಮಾತುಕತೆಯ ಕೊಂಚ ಭಾಗ ಮುಂದೆ ಇದೆ.)

ಪ್ರಶ್ನೆ: 'ಆಹಾರವಿಜ್ಞಾನ' ಪತ್ರಿಕೆಯ ಲೇಖನದಲ್ಲಿ ಬಂದ ವೈಚಾರಿಕತೆ ಮತ್ತು ವೈಜ್ಞಾನಿಕತೆಯ ಕುರಿತು ಸ್ವಲ್ಪ ವಿವರಿಸಿ

ಇದು ಕುವೆಂಪು ಮಾಡಿಕೊಂಡ ಆಯ್ಕೆ ಮತ್ತು ವಿಭಜನೆ. ನಾನು ಮತ್ತೆ ಮತ್ತೆ 'ಆಹಾರವಿಜ್ಞಾನ' ಪತ್ರಿಕೆಯ ಲೇಖನವನ್ನು ಓದುತ್ತಿರುತ್ತೇನೆ. ಈ ಉಪನ್ಯಾಸದ ಸಲುವಾಗಿ ಮತ್ತೆ ಮತ್ತೆ ಓದಿದೆ. ಕುವೆಂಪು ಅವರ ಸಮಗ್ರ ಗದ್ಯದ ಎರಡನೆಯ ಸಂಪುಟದಲ್ಲಿದೆ. ಈಗಲೂ ಆ ಲೇಖನವನ್ನು ಓದಿದರೆ ಕುವೆಂಪು ಅವರು ಕಾದಂಬರಿ, ಕವಿತೆ, ನಾಟಕಗಳನ್ನು ಬರೆಯುತ್ತಿದ್ದಾಗ ಅವರು ಮನಸ್ಸು ಕೆಲಸ ಮಾಡುತ್ತಿದ್ದ ರೀತಿಗೂ, ವೈಚಾರಿಕ ಗದ್ಯವನ್ನು ಬರೆಯುತ್ತಿದ್ದಾಗ ಅವರು ಯೋಚನೆ ಮಾಡುತ್ತಿದ್ದ ರೀತಿಗೂ ಫರಕಿಲ್ಲ ಅನಿಸುತ್ತದೆ.

ಇತರರಿಗಿಂತ ನೆಹರೂ ಭಿನ್ನ ಎಂದು ತಿಳಿಸಲು ಹಾಗೂ ಆ ಕಾಲದ ವೈಚಾರಿಕರು ಮತ್ತು ವೈಜ್ಞಾನಿಕರು ಇವರಿಬ್ಬರ ನಡುವೆಯೂ ನೆಹರೂ ಉತ್ತಮ ಎಂದು ತೋರಿಸುವುದಕ್ಕಾಗಿ ಕುವೆಂಪು ಅವರು ಮಾಡಿಕೊಂಡ ವಿಭಜನೆಯಂತೆ ಇದು ಕಾಣಿಸುತ್ತದೆ. ನೆಹರೂ ಅವರದ್ದು ವೈಜ್ಞಾನಿಕತೆ ಮತ್ತು ವೈಚಾರಿಕತೆಗಳೆರಡೂ ಮೇಳೈಸಿದ ವ್ಯಕ್ತಿತ್ವ ಎನ್ನುವುದನ್ನು ತೋರಿಸುವ ಪ್ರಯತ್ನವನ್ನು ಆ ಕಾಲದಲ್ಲಿ ಕುವೆಂಪು ಮಾಡಿದ್ದರು. ವೈಜ್ಞಾನಿಕತೆ ಮತ್ತು ವೈಚಾರಿಕತೆ ಇವೆರಡರ ನಡುವೆ ಗೆರೆ ಎಳೆಯಬಹುದು ಎಂದು ನನಗೆ ಅನಿಸುವುದಿಲ್ಲ.ವೈಜ್ಞಾನಿಕತೆ ಮತ್ತು ವೈಚಾರಿಕತೆ ಇವೆರಡೂ ಸಾಹಿತ್ಯಕೃತಿಯಲ್ಲಿ ಹೇಗೆ ಇರುತ್ತದೆ? ವೈಜ್ಞಾನಿಕತೆ ಎನ್ನುವುದು ತಿಳಿವಳಿಕೆಯಾಗಿ,ಮಾಹಿತಿಯಾಗಿ ಇರುತ್ತದೆಯೇ?

ಮಿತ್ರರಾದ ಕುಂ.ವೀರಭದ್ರಪ್ಪ ಅವರು ಹಕ್ಕಿಗಳ ಕುರಿತಾದ ಒಂದು ಕಾದಂಬರಿ ಬರೆದಿದ್ದಾರೆ. ಅದರಲ್ಲಿ ಪ್ರತೀ ವಾಕ್ಯದಲ್ಲೂ ಸಹ ಒಂದು ಹಕ್ಕಿಯ ಉಲ್ಲೇಖವಿದೆ. ಲೋಕದಲ್ಲಿರುವಷ್ಟೂ ಹಕ್ಕಿಗಳು ಏನು ಮಾಡುತ್ತವೆ ಎನ್ನುವುದನ್ನು ಅವರು ತಿಳಿದುಕೊಂಡಂತಿದೆ. ಆ ಕಾದಂಬರಿ ಬಂದಾಗ ಇಂಟರ್‌ನೆಟ್ ಇರಲಿಲ್ಲ. ಅದೇ ಕಾದಂಬರಿ ಈಗಿನ ಕಾಲದಲ್ಲೇನಾದರೂ ಬಂದಿದ್ದರೆ ಗಾತ್ರ ಇನ್ನೂ ಹೆಚ್ಚಿನದಾಗಿರುತ್ತಿತ್ತು. ಎಲ್ಲ ಹಕ್ಕಿಗಳ ಬಗ್ಗೆ ಈಗಿನ ಕಾಲದಲ್ಲಿ ಎನ್‌ಸೈಕ್ಲೋಪೀಡಿಯಾದಲ್ಲಿ ಬಹಳಷ್ಟು ಮಾಹಿತಿ ಸಿಗುತ್ತದೆ.

ವೈಜ್ಞಾನಿಕ ತಿಳಿವಳಿಕೆ ಬಂದ ತಕ್ಷಣ ಅಂದರೆ ಮಾಹಿತಿಯ ದೃಷ್ಟಿಯಿಂದ ಉದಾಹರಿಸುವುದಾದರೆ: ಪರೀಕ್ಷೆಯಲ್ಲಿ, ಸೂರ್ಯನ ಸುತ್ತ ಭೂಮಿ ಸುತ್ತುತ್ತಿದೆ ಎಂದು ಬರೆದ ಮಾತ್ರಕ್ಕೆ ಓಹ್ ಸರಿಯಾದ ಉತ್ತರ ಎಂದು ಒಂದು ಅಂಕ ಕೊಡಲು ಬರುವುದಿಲ್ಲ. ಅದಕ್ಕೆ ಪೂರಕವಾದ ವಿವರವಾದ ಮಾಹಿತಿಗಳನ್ನು ಬರೆದಿರಬೇಕಾಗುತ್ತದೆ.

ವೈಜ್ಞಾನಿಕವಾಗಿ ರಿಲೇಟಿವಿಟಿ ಥಿಯರಿ, ನ್ಯೂಟನ್‌ನ ಸ್ಥಿರ ಜಗತ್ತಿನ ಮಾದರಿ ಅಥವಾ ದೇಹ ರಚನೆಯ ಬಗ್ಗೆ ಯಾರೋ ಮಂಡಿಸಿದ ಥಿಯರಿಗಳೆಲ್ಲ ಲೇಖಕರಿಗೆ ಗೊತ್ತಾಗಿದೆ ಎಂದ ಮಾತ್ರಕ್ಕೆ, ಥಿಯರಿಯಲ್ಲಿರುವುದಕ್ಕೂ ಮತ್ತು ಅವುಗಳ ಕುರಿತು ಬರೆದ ಲೇಖನಗಳಿಗೂ ಹೊಂದಾಣಿಕೆಯಾಗುತ್ತಿದೆ ಎಂದ ಮಾತ್ರಕ್ಕೆ ಈ ವಿಷಯಗಳು

ಅಂದರೆ ಅಂಗಾಂಗಿ ಸಂಬಂಧ ಎಂದು ಹೇಳಬಹುದು.ಅಂಗಾಂಗಿ ಸಂಬಂಧ ಎಂದರೆ ಈ ಅಂಗವನ್ನು ಬೇರ್ಪಡಿಸಬಹುದು, ಅಂದರೆ ವೈಚಾರಿಕತೆ ಎಂಬ ಒಂದು ಅಂಗವಿದೆ, ಅದನ್ನು ತೆಗೆದು ತೋರಿಸಬಹುದು ಎಂದು. ನಾನು ಅಂಶಾಂಶಿ ಸಂಬಂಧವೊಂದನ್ನು ಹೇಳಲು ಪ್ರಯತ್ನ ಪಡುತ್ತೇನೆ. ಬಹಳ ಹಳೆಯ ಉದಾಹರಣೆ ಕೊಡುವುದಾದರೆ : ಪಾನಕದಲ್ಲಿ ಸಕ್ಕರೆ ಬೆರೆತಿದ್ದರೆ, ಸಕ್ಕರೆ ಎಲ್ಲಿದೆ ಎಂದು ಹೇಳುವುದು?ಎಲ್ಲಿದೆ ಸಕ್ಕರೆ? ಸಕ್ಕರೆ ಇದ್ದದ್ದು ನಿಜ, ಸಕ್ಕರೆ ಇಲ್ಲದೆ ಪಾನಕದಲ್ಲಿ ಸಿಹಿ ಬರಲು ಸಾಧ್ಯವಿಲ್ಲ. ಆದರೆ ಸಕ್ಕರೆ ಅಲ್ಲಿದೆ ಎಂದರೆ ಅದು ನಿಜವೇ? ಹೇಗೆ ನಿಜವಾಗುತ್ತದೆ ಅದು? ಅದು ನಮ್ಮ ನಾಲಗೆ ಮೇಲೆ ನಿಜವಾಗುತ್ತದೆ. ಯಾವ ಹನಿಯಲ್ಲಿ ನಿಜವಾಗುತ್ತದೆ ಅದು? ನೂರು ಹನಿಗಳನ್ನು ಕುಡಿದಿರಬಹುದು. ಯಾವ ಹನಿಯಲ್ಲಿ ಸಿಹಿಯ ಅನುಭವವಾಗುತ್ತದೆ ನಿಮಗೆ?

ಪ್ರವಚನಕಾರನ ಧಾಟಿಯಾಯಿತಾ? ಸ್ವಲ್ಪ ಈ ತರಹ ಗೇಲಿ ಮಾಡಿಕೊಳ್ಳದೇ ಇದ್ದರೆ ನಾವು ಎಲ್ಲೆಲ್ಲಿಗೋ ಹೋಗಿಬಿಡುತ್ತೇವೆ. ಪ್ರವಚನಕಾರನ ಧಾಟಿಯಿಂದ ಸ್ವಲ್ಪ ಹೊರ ಬರುವ ಪ್ರಯತ್ನ ಮಾಡುತ್ತೇನೆ.

ಅನುಭವ ಮತ್ತು ಅನುಭಾವದ ಬಗ್ಗೆ ಸಂಸ್ಕೃತ ಕಾವ್ಯಮೀಮಾಂಸೆಯಲ್ಲಿ ಬಹಳ ದೊಡ್ಡ ಚರ್ಚೆ ನಡೆದಿದೆ. ಈ ಚರ್ಚೆಗೊಂದು ಷರಾ ಬರೆದವನು ಭಾರತ ಸೃಷ್ಟಿಸಿದ ಶ್ರೇಷ್ಠ ಮನಸ್ಸುಗಳಲ್ಲಿ ಒಂದಾದ ಅಭಿನವ ಗುಪ್ತ. ತಾನು ಯಾರಿಗೆ ಟೀಕೆ ಬರೆದನೋ ಅವರಿಗಿಂತ ಅಭಿನವ ಗುಪ್ತ ಶ್ರೇಷ್ಠ. ಈ ಬಗೆಗೆ ಬಹಳ ಅದ್ಭುತವಾಗಿ ಬರೆಯುತ್ತಾ ಈ ರೀತಿ ಹೇಳಿದ್ದಾನೆ: ಸಾಹಿತ್ಯದಲ್ಲಿ ಯಾವ ವಿಷಯಗಳು ಇದೆ ಎಂದು ತಿಳಿಯುತ್ತೀರೋ ಅದು ಯಾವುದೂ ಅಲ್ಲಿರುವುದಿಲ್ಲ. ಅದು ನಿಮ್ಮಲ್ಲಿಯೇ ಇರುತ್ತದೆ. ಅದು ನಿಮ್ಮಲ್ಲಿ ಮತ್ತೆ ಜಾಗ್ರತವಾಗುತ್ತದೆ. ನೀವು ಯಾವುದನ್ನು ರಸ ಎಂದು ಹೇಳುತ್ತಿದ್ದೀರೋ ಅದು ಸಾಹಿತ್ಯ ಕೃತಿಯಲ್ಲಿ ಇರುವುದಿಲ್ಲ. ಅದು ಇರುವುದು ನಿಮ್ಮಲ್ಲಿ. ಸಾಮಾಜಿಕರಲ್ಲಿ ಸ್ಥಾಯಿಗಳು ಜಾಗೃತವಾದಾಗ ಯಾವ ಅನುಭವ ಆಗುತ್ತದೋ ಅದನ್ನು ರಸ ಎಂದು ಹೇಳುತ್ತಾರೆ. ನಾನು ಆಗಲೇ ಹೇಳಿದೆನಲ್ಲ ಆಗುವಿಕೆಯ ಅನುಭವ ಅದೇ ರಸ.

ರಸ ಎನ್ನುವುದು ಸಾಹಿತ್ಯ ಕೃತಿಯಲ್ಲಿ ಇರುವುದಿಲ್ಲ ಎನ್ನುವುದನ್ನೇ ಅಭಿನವ ಗುಪ್ತ ಹೇಳಿದ್ದಾನೆ. ಅವನ ಹಿಂದಿನವರು ಮೂರ್‍ನಾಲ್ಕು ಜನ ಅದು ಸಾಹಿತ್ಯಕೃತಿಯಲ್ಲಿ ಇರುತ್ತದೆ ಎಂದು ಹೇಳಿದ್ದಾರೆ. ಅವರು ಏನೇನೋ ಕಥೆ ಹೇಳುತ್ತಾರೆ. ಬಹಳ ದೊಡ್ಡ ಡಿಬೇಟ್ ಅದು. ಸಾಹಿತ್ಯದ ವಿದ್ಯಾರ್ಥಿಗಳು ಸಂಸ್ಕೃತ ಕಾವ್ಯಮೀಮಾಂಸೆ ಓದಿದವರು ದಿನ ಬೆಳಗಾದರೆ ಅದನ್ನು ಉರು ಹೊಡೆಯುತ್ತಿರುತ್ತಾರೆ.

ವೈಚಾರಿಕತೆ, ಆಧ್ಯಾತ್ಮಿಕ ಇವೆಲ್ಲಾ ಗೊಂದಲಗಳು ಇರುವುದು ಕುವೆಂಪು ಅವರಲ್ಲಲ್ಲ, ಲೋಕದಲ್ಲಿ. ಇತ್ತೀಚೆಗೆ ಯಾರೋ ಒಬ್ಬರು ಬರೆದ ಪುಸ್ತಕದೊಳಗೆ/ಲೇಖನದೊಳಗೆ (ಅಲ್ಲಿ ಇದ್ದುದನ್ನು ರಾಜೇಂದ್ರ ಚೆನ್ನಿ ಉಲ್ಲೇಖಿಸಿ ಹೇಳುತ್ತಾರೆ) ಕುವೆಂಪು ಅವರ ಎಲ್ಲ ಅಪರಾಧಗಳನ್ನು ಆ ಲೇಖನದಲ್ಲಿ ಪಟ್ಟಿ ಮಾಡಿದ್ದಾರಂತೆ.. ಕುವೆಂಪು ಹಾಜರ್ ಹೊ! ಏನು ಈ ತರಹ ಹೇಳಿದ್ದೀರಾ ಇಲ್ಲಿ, ಬನ್ನಿ ಉತ್ತರ ಕೊಡಿ. ಡಿಫೆನ್ಸ್‌ಗೆ ನಿಮ್ಮ ಲಾಯರ್‌ನ ಕರೆದುಕೊಂಡು ಬನ್ನಿ ಎಂದು. ನಾನಂತೂ ಅವರ ಲಾಯರ್ ಅಲ್ಲ,ಇಷ್ಟಕ್ಕೂ

ಗೊಂದಲ ಎಲ್ಲಿಲ್ಲ? ನಾನು ಅದಕ್ಕೆ ಪ್ರಾರಂಭದಲ್ಲಿ ಹೇಳಿದ್ದು :ನಾವೆಲ್ಲ ಈ ಕಾಲದ ಗೊಂದಲದಲ್ಲಿ ಮುಳುಗಿದ್ದೇವೆ. ಅಲ್ಲಿ ಆಕಾಶದಲ್ಲಿ ಯಾವುದೋ ಒಂದು ಆಕಾಶ ಕಾಯ ಕೆಳಗೆ ಬಿದ್ದಾಗ ನನಗೆ ಆ ಪತನಕ್ಕೂ ಯಾರದೋ ಸಾವಿಗೂ ನಂಟು ಇದೆಯೆಂಬ ಭಾವ ಕಾಡಿಸುತ್ತದೆ.. ಅದು ಸುಳ್ಳು ಎಂದು ನನಗೆ ಗೊತ್ತಿದೆ. ಆದರೆ ಈ ಗೊಂದಲವೇ ನಮ್ಮ ದಿಟವಾದ ಅಸ್ತಿತ್ವ. ಅದೆಲ್ಲವನ್ನೂ ಬಿಟ್ಟುಕೊಟ್ಟವರು ಯಾರಿಗೂ ಉತ್ತರದಾಯಿಗಳಲಾಗಿರುವುದಿಲ್ಲ. ಇವತ್ತಿಗೂ ಕೂಡಾ ಸತ್ತವರು ಚಿಕ್ಕೆಗಳಾಗುತ್ತಾರೆ ಎನ್ನುವುದು ಇದೆ. ಯಾರಾದರೂ ಸತ್ತರೆ ಮಾರನೇ ದಿವಸ ಹೊಗಿ ಆಕಾಶ ನೋಡುತ್ತಾರೆ, ಅದು ಇರಬಹುದಾ ಇದು ಇರಬಹುದಾ ಅಂತ ಚಿಕ್ಕೆಗಳನ್ನು ಹುಡುಕುತ್ತಾ ಇರುತ್ತೇವೆ. ನಾವು ಬದುಕಿರುವುದೇ ಹಾಗಲ್ಲವೇನು?

ವಿಚಾರಗಳು ಎನ್ನುವುದು ಟಾಬ್ಲೆಟ್‌ಗಳೇ? ಟಾಬ್ಲೆಟ್‌ಗಳಾ ಅಂತ? ನಮ್ಮ ಜೀವನಕ್ಕೆ ಬೇಕಾದಂತಹ ಎಲ್ಲ ಸಾಮಗ್ರಿಗಳು, ಅಂದರೆ ಪೌಷ್ಟಿಕ ಆಹಾರ, ಸಮತೋಲನದ ಆಹಾರ ಇವೆಲ್ಲವುಗಳನ್ನ ಟಾಬ್ಲೆಟ್‌ಗಳನ್ನಾಗಿ ಮಾಡಿ ಅವುಗಳನ್ನ ನುಂಗಿಬಿಡಬೇಕು. ಆಗ ರೋಗ ಏನೇ ಆಗಿರಲಿ ಆರೋಗ್ಯವಂತರಾಗಿ ಇದ್ದುಬಿಡಬಹುದು, ಆರಾಮವಾಗಿ ಇರಬಹುದು. ಆ ತರಹದ ಒಂದು ಲೋಕವನ್ನು ಕಲ್ಪಿಸಿಕೊಳ್ಳುತ್ತೀರಾ?

ಬಸವಣ್ಣ ಏನು ಹೇಳಿದರು? ಉಳ್ಳವರು ಶಿವಾಲಯವ ಮಾಡುವರು, ನಾನೇನು ಮಾಡಲಿ ಬಡವನಯ್ಯ, ದೇಹವೇ ದೇಗುಲ, ಶಿರ ಹೊನ್ನ ಕಳಶ ಎಂದೆಲ್ಲ ಹೇಳಿದರು. ಚಾರಿತ್ರಿಕವಾಗಿ ಬಸವಣ್ಣ ಈ ವಚನ ಬರೆದ ಸಮಯದಲ್ಲಿ ಇಡೀ ಕರ್ನಾಟಕದಲ್ಲಿ, ಕರ್ನಾಟಕದ ಚರಿತ್ರೆಯಲ್ಲೇ ಹೆಚ್ಚಿನ ಪ್ರಮಾಣದ ದೇಗುಲಗಳನ್ನು ಕಟ್ಟುತ್ತಿದ್ದರು. ಬಸವಣ್ಣ ಅಷ್ಟೇ ರಿಯಲ್ ಅಲ್ಲ, ಬಸವಣ್ಣ ಇದ್ದ ಲೋಕವೂ ರಿಯಲ್ ಅಲ್ಲವೇ? ಅಲ್ಲ ನಾಳೆಯಿಂದ ಬಸವಣ್ಣನವರನ್ನು ಹೇಗೆ ಪರಿಗಣಿಸುತ್ತೀರಿ ನೀವು? ಬಸವಣ್ಣನಿಗೆ ಇಬ್ಬರು ಹೆಂಡತಿಯರಿದ್ದರು. ಬಿಜ್ಜಳ ಇದ್ದ. ಬಸವಣ್ಣನ ವಿರುದ್ಧ ಕತ್ತಿ ಮಸೆಯುತ್ತಿದ್ದ ಇಬ್ಬರು ಕಾಶ್ಮೀರದಿಂದ ಬಂದ ಆಡಳಿತಗಾರರಿದ್ದರು. ಬಸವಣ್ಣ ಒಬ್ಬರೇ ರಿಯಾಲಿಟಿ ಮಾತನಾಡುತ್ತಾರೇನು? ಬಸವಣ್ಣ ನಮ್ಮ ನಾಯಕ ಇರಬಹುದು ಆದರೆ ಅವರೂ ಚಾರಿತ್ರಿಕ ವಾಸ್ತವದಲ್ಲಿ ಇದ್ದಿದ್ದು ಅಲ್ಲವೇ? ಅವನ ಕಾಲದಲ್ಲಿ ಉಳ್ಳವರು ಶಿವಾಲಯವ ಮಾಡಿದರೆ, ಈಗ ನಮ್ಮ ಕಾಲದಲ್ಲಿ ಏನಾಗುತ್ತಿದೆ ನೋಡಿ ನಮ್ಮ ಜನಪ್ರತಿನಿಧಿಗಳು ದೇವಾಲಯಗಳಿಗೆ ಕೋಟಿಗಟ್ಟಲೆ ಕೊಡುತ್ತಿದ್ದಾರೆ ಅಲ್ಲವೇ? ಅಂದರೆ ರಿಯಾಲಿಟಿ ಎನ್ನುವುದು ಒಂದು ರೀತಿ ಬಹಳ ಕಾಂಪ್ಲೆಕ್ಸ್ ಆದ ಸಂಗತಿ. ಒಂದು ಪದ್ಯವನ್ನೋ, ವಚನವನ್ನೋ ತೆಗೆದುಕೊಂಡು ಅದರಿಂದ ವೈಚಾರಿಕತೆಯನ್ನು, ನಮಗೆ ಫಲವನ್ನು ಬೇಕಾದ ರೀತಿಯಲ್ಲಿ ಹೆಚ್ಚಿ ತಿನ್ನುವ ತರದಲ್ಲಿ ಬೇರ್ಪಡಿಸಲು ಬರುವುದಿಲ್ಲ ಎನ್ನುವುದನ್ನು ನಾನಿಲ್ಲಿ ಹೇಳಲು ಪ್ರಯತ್ನ ಪಡುತ್ತಿದ್ದೇನೆ.

ಪ್ರಶ್ನೆ: ಕುವೆಂಪು ಅವರು ಪಾರಮಾರ್ಥಿಕ ಮತ್ತು ಪ್ರಾಪಂಚಿಕಗಳನ್ನು ಎರಡನ್ನೂ ಒಟ್ಟಿಗೆ ತೆಗೆದುಕೊಂಡು ಹೋಗುತ್ತಾರೆ ಎಂದು ಅಂದುಕೊಂಡರೆ ತೊಂದರೆ ಆಗುತ್ತದೆಯೇ?

ಏನೂ ತೊಂದರೆ ಇಲ್ಲ, ನನಗೇನೂ ತೊಂದರೆ ಇಲ್ಲ. ಅವರು ಹಾಗೆ ಎರಡನ್ನೂ ಒಟ್ಟಿಗೆ ತೆಗೆದುಕೊಂಡದ್ದಕ್ಕೆ, ಹೊಸ ಕಾರು ಮನೆಗೆ ಬಂದಾಗ 'ಚತುಶ್ಚಕ್ರ ಚರಣೆಗೆ ಸ್ವಾಗತ...' ಎಂದು ಪದ್ಯ ಬರೆಯಲು ಸಾಧ್ಯವಾದದ್ದು.

ಪ್ರಶ್ನೆ : ನೀವು ಹೇಳಿ ಎಂದು ಒತ್ತಾಯ ಮಾಡುತ್ತಿಲ್ಲ, ಆದರೆ ನೀವು ಕುವೆಂಪು ಅವರ ಬಗ್ಗೆ ಬಂದ ವಿಮರ್ಶಾ ಲೋಕ ಇದೆಯಲ್ಲ, ಉದಾಹರಣೆಗೆ, ಕುರ್ತಕೋಟಿ ಹೀಗೆನ್ನುತ್ತಾರೆ ಅನ್ನುವುದನ್ನು ಹೇಳಿ, ಆನಂತರ, ನನಗೆ ಅವರೇನು ಹೇಳುತ್ತಾರೆ ಎನ್ನುವುದು ಮುಖ್ಯವಲ್ಲ, ಸಾಹಿತ್ಯ ತತ್ವವನ್ನು ಇಟ್ಟುಕೊಂಡು ಚರ್ಚೆ ಮಾಡುತ್ತೇನೆ ಎನ್ನುತ್ತೀರಿ. ನೀವು ಎಷ್ಟೊಂದು ವಿಷಯಗಳನ್ನು ಹೇಳುವಾಗ ಇದರ ಮಧ್ಯೆ ನಾರಾಯಣ್ ಏನು ಹೇಳಲು ಬಯಸುತ್ತಾರೆ ಎಂಬುದು ಎಂಬುದು ತಿಳಿಯುತ್ತಿಲ್ಲ. ಹೇಳಬೇಕೆಂಬ ಒತ್ತಾಯವಲ್ಲ, ಆದರೆ ನೀವು ಇಷ್ಟೊಂದು ಜನರ ವಿಮರ್ಶೆಗಳನ್ನು ಉಲ್ಲೇಖ ಮಾಡಿ, ಒಂದು ದಿಕ್ಕು ತೋರಿಸಿ ಈ ದಿಕ್ಕಿನಲ್ಲಿ ಹೊಗೋಣ ಬನ್ನಿ ಎಂದಾಗ ನಿಮ್ಮ ನಿಲುವು ಏನು, ಏನನ್ನು ಹೇಳಲು ಬಯಸುತ್ತೀರಿ ಎಂಬುದು ತಿಳಿಯುತ್ತಿಲ್ಲ.

ಒತ್ತಾಯ ಮಾಡಿದರೂ ನಾನು ಹೇಳುವುದಿಲ್ಲ. ದಾರಿಯಲ್ಲಿ ಹೋಗೋಣ ಎನ್ನುವುದನ್ನೇ ನಾನು ಹೇಳುತ್ತಿರುವುದು. ಅದೇ ನನ್ನ ನಿರ್ಧಾರ. ದಾರಿಯಲ್ಲಿ ಮುಂದೆ ಹೋದ ಮೇಲೆ ಏನು ಸಿಗುತ್ತದೆ ಎಂಬುದು ನನಗೂ ಗೊತ್ತಿಲ್ಲ. ನಾವೆಲ್ಲ ಒಂದು ದೊಡ್ಡ ಪ್ರಪಾತದ ಮುಂದೆಯೂ ನಿಲ್ಲಬಹುದು.ಗೊತ್ತಿಲ್ಲ. ಈ ದಾರಿಯಲ್ಲಿ ಹೋಗುತ್ತಿದ್ದೇನೆ.ನೀವು ಬನ್ನಿ ಎಂದು ನಾನು ಹೇಳಬಹುದು ಅಷ್ಟೆ. ಹೀಗೆ ಹೇಳುವುದೆಲ್ಲ ಸರಳ ಹೇಳಿಕೆಗಳ ತರಹ ಅನ್ನಿಸಬಹುದು, ಆದರೆ ಅವರೇನು ಹೇಳುತ್ತಾರೆ, ಇವರೇನು ಹೇಳುತ್ತಾರೆ ಎನ್ನುವುದನ್ನು ಪಟ್ಟಿ ಮಾಡುತ್ತಿರುವಾಗ, ಅದು ಸರಿ ಇಲ್ಲ, ಇದು ಸರಿ ಇಲ್ಲ ಎಂದು ಅವುಗಳ ಬಗೆಗೆ ನಾನು ವ್ಯಾಖ್ಯಾನವನ್ನು ಮಾಡುತ್ತೇನಲ್ಲ, ಅದು ನನ್ನ ತಿಳಿವಳಿಕೆಯೇ ಆಗಿದೆ. ಇದೇ ನನ್ನ ನಿಲುವು ಮತ್ತು ದಾರಿ.

ಮಿತ್ರರೇ ಈ ಅವಕಾಶವನ್ನು ಕಲ್ಪಿಸಿಕೊಟ್ಟದ್ದಕ್ಕಾಗಿ ವಂದನೆಗಳನ್ನು ಹೇಳುತ್ತೇನೆ. ನನ್ನ ಮಾತಿನಲ್ಲಿ ಸ್ವಲ್ಪ ತೇಲಿಸುವ, ಹಗುರವಾದ ಮಾತುಗಳು ಬಂದಿದ್ದರೆ ಮನ್ನಿಸುತ್ತೀರಿ ಎಂದು ಭಾವಿಸಿದ್ದೇನೆ.

ಕನಕದಾಸರು ಒಡ್ಡುವ ಚರ್ಚೆಗಳು

ಸ್ನೇಹಿತರೇ, ಕನಕದಾಸ ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಪ್ರಾರಂಭ ಮಾಡಿರುವ ಈ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಮೊದಲ ಸಮಾರಂಭದಲ್ಲಿ ಉದ್ಘಾಟಕನಾಗಿ ಭಾಷಣ ಮಾಡ್ತಿದ್ದೇನೆ. ಆದ್ದರಿಂದ ಇದು ಮೊದಲನೇ ಉಪನ್ಯಾಸ ಅಂತ ಅಂದ್ಕೋಳ್ಳೋದು ಒಳ್ಳೇದು. ಉಪನ್ಯಾಸಗಳಿಗೆ ಉದ್ಘಾಟನೆ ಅಂತೇನೂ ಇರೊಲ್ಲ. ಅಂದ್ರೆ ನೇರವಾಗಿ ಚರ್ಚೆಗೆ ತೆರೆದಿದೆ ಅಂತ ಹೇಳೋದಕ್ಕೋಸ್ಕರ ಹೇಳ್ತಿದ್ದೀನಿ. ನಾನು ಏನ್ ಮಾತಾಡ್ತಿದೀನಿ ಇದು ಚರ್ಚೆಗೆ ಹೊರತಾದುದಲ್ಲ ಚರ್ಚೆಗೆ ತೆರೆದಿದ್ದು ಅನ್ನೋದನ್ನು ನಿಮ್ಮ ಮುಂದಿಡೋಕೆ ಇಷ್ಟಪಡ್ತೀನಿ.

ಎರಡನೇದು – ಕನಕದಾಸರ ಬಗೆಗೆ ಮಾತಾಡೋದು. ಬಹಳ ಎಚ್ಚರಿಕೆಯಿಂದ ಮಾತಾಡ್ಬೇಕು. ಅಂದ್ರೆ ಎಷ್ಟರ ಮಟ್ಟಿಗೆ ಕನ್ನಡ ಚಿಂತನೆ ಪೊಲಿಟಿಕಲ್ ಕರೆಕ್ಟ್ ಆಗಿರುವ ಹಾದಿ ಹಿಡಿದಿದೆ. ಅಂದ್ರೆ ಅದರಾಚೆಗೆ ಮಾತಾಡ್ಬೇಕಾದ್ರೆ ಬಹಳ ಎಚ್ಚರಿಕೆಯಿಂದಾನೆ ಮಾತಾಡ್ಬೇಕಾಗಿರುತ್ತದೆ. ಬಹಳ ವಿಚಾರಗಳಲ್ಲಿ ಇದು ನಡಿತಾ ಇದೆ; ಪರ–ವಿರೋಧ ಅವುಗಳ ನಡುವೆ ಮೂರನೇ ದಾರಿ ಇರಬಹುದು ಅನ್ನೋ ಕಲ್ಪನೇನೂ ಕೂಡ ಇಲ್ದೆ ಇರುವ ಪ್ರಸಂಗಗಳು ಕೂಡ ನಡೆದಿವೆ. ಅಂದ್ರೆ ಅದು ಎರಡೇ ಪಕ್ಷಗಳಿರೋಕೆ ಸಾಧ್ಯ. ಮೂರನೇದೊಂದು ಸಾಧ್ಯ ಇದೆ ಇನ್ನೋ ಚಿಂತನೆಗಳು ನಮ್ಮ ತಲೆಯಲ್ಲಿ ಬರ್‍ತಾ ಇಲ್ಲ. ಪ್ರಜಾಪ್ರಭುತ್ವದಲ್ಲಿ ಆ ಮೂರನೇ ದಾರಿ ಯಾವುದು ಅಂತ ಅನ್ನೋದು ನಾವು ಹುಡುಕೋಕೆ ಹೋಗೋದೇ ಇಲ್ಲ.

ಪರ ಮತ್ತು ವಿರೋಧಗಳ ನೆಲೆಯಲ್ಲೇ ಕೆಲಸ ಮಾಡ್ತಾ ಇರ್ತೀವಿ. ಅದರಿಂದ ಈ ಚೌಕಟ್ಟಿನೊಳಗಡೆ ನಾನು ಕೆಲವು ವಿಚಾರಗಳನ್ನು ನಿಮ್ಮ ಜೊತೆಗೆ ಹಂಚಿಕೊಳ್ಳೋಕೆ ಇಷ್ಟಪಡ್ತೀನಿ. ಚಿಕ್ಕಣ್ಣನವರು ಈ ಅಧ್ಯಯನ ಕೇಂದ್ರ ಹೇಗೆ ಕೆಲಸ ಮಾಡಬೇಕು. ಅನ್ನೋದರ ಬಗ್ಗೆ ಕೂಡ ಕೆಲವು ಸಲಹೆ ಸೂಚನೆಗಳು ಬೇಕು ಅಂತ ಅಂದ್ರು, ನಾನು ನೇರವಾಗಿ ಅತ ಸೂಚನೆ ಕೊಡ್ತೀನಿ ಅಂತ ಅಲ್ಲ. ನಾವೆಲ್ಲರೂ ಕೂಡಿ ಕೂತು ಮಾತಾಡುವಾಗ ಕೆಲವು ಸೂಚನೆಗಳು ನಿಮಗೆ ಸಿಗಲೂಬಹುದು. ಸಿಗದೇ ಇದ್ರೂನೂ ಅದು ಹುಡುಕಿಕೊಳ್ಳೋಕೆ ಬೇಕಿರೋ ದಾರಿಗಳಾದ್ರೂ ಸಿಗಬಹುದು ಅಂತ ಅಂದ್ಕೊಂಡಿದ್ದೇನೆ.

ಕನಕದಾಸರು ಕನ್ನಡ ಜನರ ಒಳಗಡೆ ಸೇರಿ ಹೋಗಿರುವ ಬಗೆ ಇದೆಯಲ್ಲ ಆ ಬಗೆಯಿಂದ ಕನಕದಾಸರನ್ನು ಅಕ್ಷರಗಳಲ್ಲಿ ಹಿಡಿದಿಟ್ಟು ರಿಕ್ಲೈಮ್ ಮಾಡೋದಕ್ಕೆ ಪ್ರಾರಂಭ ಮಾಡಿ, ಅವರನ್ನು ಮರಳಿ ಪಡೆಯೋದಕ್ಕೆ 140-150 ವರ್ಷಗಳು ಕಳೆದಿವೆ ಅಂತಿಟ್ಕೊಳೋಣ. ಅಂದ್ರೆ 19ನೇ ಶತಮಾನದ ಕೊನೆಯ ಭಾಗದಲ್ಲಿ ಅವರ ಕೆಲವು ಹಾಡುಗಳನ್ನು ಜರ್ಮನ್ ಭಾಷೆಗೆ ಅನುವಾದಿಸಿ ಅವರ ಬಗ್ಗೆ ಟಿಪ್ಪಣಿಯನ್ನು ಬರೆದ ಜರ್ಮನ್ ವಿದ್ವಾಂಸರುಗಳು, ಕಿಟೆಲ್ ಅವರು ಬರೆದಂತಹ ಟಿಪ್ಪಣಿ, 20ನೇ ಶತಮಾನದ ಆರಂಭದಲ್ಲಿ ಕರ್ನಾಟಕದ ಬೇರೆ ಬೇರೆ ಕಡೆಗಳಲ್ಲಿ ಅದರಲ್ಲೂ ಕೂಡ ಉತ್ತರ ಕರ್ನಾಟಕದಲ್ಲಿ ಸಂಗ್ರಹಿಸುವ, ಪ್ರಕಟಿಸುವ, ಅವಕ್ಕೆ ವ್ಯಾಖ್ಯಾನ ಮಾಡತಕ್ಕಂತಹ ಕೆಲಸಗಳು ಪ್ರಾರಂಭವಾದವು. ಒಟ್ಟು ಕನ್ನಡ ಸಾಹಿತ್ಯ ಚರಿತ್ರೆಯೊಳಗೆ ಕನಕಸದಾಸರನ್ನು ಪ್ಲೇಸ್ ಮಾಡುವ ಅಥವಾ ಭಕ್ತಿಪಂಥದ ಚೌಕಟ್ಟಿನೊಳಗೆ ಕನಕದಾಸರನ್ನು ಇಟ್ಟು ನೋಡ್ತಕ್ಕಂಥ ಚಿಂತನೆಗಳು 20ನೇ ಶತಮಾನದ ಮೊದಲ ಭಾಗದಿಂದ ಆರಂಭವಾಗಿ ಬೆಳೆದುಕೊಂಡು ಬರ್‍ತವೆ. ಇಂಗ್ಲಿಷ್‌ನಲ್ಲೂ ಕೂಡ ಕೆಲಸ ನಡೆದಿದೆ. ಕನ್ನಡದಲ್ಲೂ ಕೆಲಸ ನಡೆದುಕೊಂಡು ಬಂದಿದೆ.

20ನೇ ಶತಮಾನದ ಕೊನೆಯ ಭಾಗಕ್ಕೆ ಬಂದ ಮೇಲೆ ಈ 21ನೇ ಶತಮಾನದ ಒಂದು ದಶಕ ಕಳೆದ ಮೇಲೆ ಈಗ ರಿಕ್ಲೈಮ್ ಮಾಡುವ, ಈ ಪ್ರಕ್ರಿಯೆ ಹೇಗೆ ನಡೀಬಹುದು ಅಥವಾ ಇಷ್ಟು ದಿವಸಗಳು ಕಾಲ ನಾವು ಏನು ಮಾಡ್ಕೊಂಡು ಬಂದಿದೀವಿ ಅನ್ನೋದನ್ನು ಸ್ವಲ್ಪ ಯೋಚನೆ ಮಾಡೋದಕ್ಕೆ ಅವಕಾಶಗಳಿವೆ ಅಂತ ನಾನು ತಿಳ್ಕೊಂಡಿದೀನಿ.

ಬಹಳ ಮುಖ್ಯವಾಗಿ ಮೂರು ನೆಲೆಗಳಲ್ಲಿ ಅಥವಾ ಮೂರು ದಿಕ್ಕುಗಳಲ್ಲಿ ಕನಕರನ್ನು ಪಡೆದುಕೊಳ್ಳುವ, ಕಟ್ಟಿಕೊಳ್ಳುವ ಕೆಲಸಗಳು ಕನ್ನಡದಲ್ಲಿ ನಡೆದ ಹಾಗೆ ಕಾಣಿಸ್ತವೆ. ಈ ಮೂರು ದಿಕ್ಕುಗಳಲ್ಲಿ ಒಂದು ಇನ್ನೊಂದರ ಮೇಲೆ ಪ್ರಭಾವ ಬೀರಿದೆಯೇ ಒಂದು ಇನ್ನೊಂದರಿಂದ ಸಂಪೂರ್ಣವಾಗಿ ಭಿನ್ನವೇ; ಒಂದು ಇನ್ನೊಂದನ್ನು ವಿರೋಧಿಸುತ್ತದೆಯೇ, ಒಂದು ಇನ್ನೊಂದಕ್ಕೆ ಪೂರಕವಾಗಿದೆಯೇ ಇವೆಲ್ಲವೂ ಕೂಡ ಚರ್ಚೆಗೆ ತೆರೆದಿಟ್ಟ ಸಂಗತಿಗಳು. ಆದರೆ ಈ ಮೂರು ಯಾವುವು? ಅನ್ನೋದನ್ನ ಮೊದಲು ತಿಳ್ಕೊಳೋಕೆ ಪ್ರಯತ್ನಪಡೋಣ.

ಮೊದಲ್ನೆದು ಚಾರಿತ್ರಿಕ ನೆಲೆ. ಈ ಚಾರಿತ್ರಿಕ ನೆಲೆಯಲ್ಲಿ ಕನಕದಾಸರನ್ನು ಒಬ್ಬ ವ್ಯಕ್ತಿಯಾಗಿ, ಒಬ್ಬ ಸಂತನಾಗಿ, ಒಬ್ಬ ಕವಿಯಾಗಿ, ಒಂದು ಸಾಮಾಜಿಕ ಹಿನ್ನೆಲೆಯಲ್ಲಿ ಕಟ್ಟುವ ಪ್ರಯತ್ನಗಳನ್ನು ಮಾಡಲಾಗಿದೆ. ಅದು ಹೇಗೆ ನಡ್ಕೊಂಡು ಬಂದಿದೆ ಅನ್ನೋದನ್ನ ನಾವು ಮುಂದೆ ನೋಡೋಣ.

ಎರಡನೆಯದು ಜನಪದದ ನೆಲೆ, ಜನಪ್ರಿಯ ನೆಲೆ. ಜನಪ್ರಿಯ ಅನ್ನೋ ಪದವನ್ನು ಹೀನಾರ್ಥದಲ್ಲಿ ಕೆಟ್ಟ ಅರ್ಥದಲ್ಲಿ ಬಳಸ್ತಿಲ್ಲ. ಜನರು ಹೀಗೆ ಕಟ್ತಾ ಇದಾರೆ. ಜನರು ಹೀಗೆ ಕನಕದಾಸರನ್ನು ಕಟ್ಕೊಳೋಕೆ ಪ್ರಯತ್ನಪಟ್ಟಿದ್ದಾರೆ. ಇದು ನಿಂತ ನೀರಾಗಿಲ್ಲ. ನಿಧಾನವಾಗಿ ಬೆಳೀತಾ, ವಿಸ್ತರಿಸ್ತಾ ಹೋಗಿರಬಹುದು. ಹಾಗಾಗಿ ಇದು

ನಿರಂತರವಾಗಿ ನಡ್ಕೊಂಡು ಬಂದಿರ್ತಕ್ಕಂಥದು. ಈ ರೀತಿಯಲ್ಲಿ ಕನಕರನ್ನ ರಿಕ್ಲೈಮ್ ಮಾಡಿರುವ ಬಗೆ ಕೂಡ ಇದೆ.

ಮೂರನೇದು, ಕನಕದಾಸ ವ್ಯಕ್ತಿಯಾಗಿ, ಕನಕರನ್ನ ಕಟ್ಟಿರೋ ಈ ಜನಪದರ ನೆಲೆಯನ್ನು ಹೊರತುಪಡಿಸಿ, ಅವರ ಭಾಷಿಕ ರಚನೆಗಳ ಮುಖಾಂತರವೇ, ಅವರನ್ನ ಕಂಡುಕೊಳ್ಳುವ ಪ್ರಯತ್ನವನ್ನ ಮಾಡಿರೋದು. ಅಲ್ಲಿ ಕನಕದಾಸರಿಗಿಂತ ಅವರ ಭಾಷಿಕ ರಚನೆಗಳ ಮುಖಾಂತರ ಕನಕರನ್ನು ಮರುಕಟ್ಟೋಣಕ್ಕೆ ತಂದುಕೊಳ್ಳುವ ಕೆಲಸಗಳು ನಡೆದಿವೆ.

ಈ ದಿಕ್ಕುಗಳಲ್ಲಿ ನಮ್ಮ ಚಿಂತನೆಗಳು ಹೇಗೆ ನಡೆದಿವೆ ಅನ್ನೋದನ್ನ ಒಂದೊಂದಾಗಿ ನಾನು ನಿಮ್ಮ ಮುಂದೆ ತೆರೆದಿಡೋಕೆ ಪ್ರಯತ್ನಪಡ್ತೀನಿ. ಚಾರಿತ್ರಿಕ ನೆಲೆಯಲ್ಲಿ ಹಲವು ಪ್ರಶ್ನೆಗಳನ್ನು ಎದುರಿಸಲಾಗಿದೆ. ಹಲವು ಗೋಜಲುಗಳು ಒಳಗೊಂಡಿವೆ ಮತ್ತು ಅವುಗಳು ಪ್ರಶ್ನೆಗಳಾಗಿ, ಗೋಜಲುಗಳಾಗಿ ಮತ್ತು ಅವುಗಳು ಪರಿಹಾರ ಆಗದೇ ಇರುವ ನೆಲೆಯಲ್ಲಿ ಕೂಡ ಉಳಿದುಕೊಂಡವುಗಳು. ಅಂತಹ ಐದಾರು ಪ್ರಶ್ನೆಗಳು ಹಾಗೇ ಉಳಿದುಕೊಂಡಿವೆ. ಉದಾಹರಣೆಗೆ ಅವರ ಹೆಸರಿನ ಬಗ್ಗೆ. ಹತ್ತು ವರ್ಷದ ಆಸುಪಾಸಿನ ಟಿಪ್ಪಣಿಯಲ್ಲಿ ಅವರ ಹೆಸರು ಕನಕದಾಸ ಇದ್ದಿರಲಾರದು ಅಂತ ಅನ್ನೊ ಒಂದು ಸಂದೇಹವನ್ನು ಮುಂದಿಟ್ಟವರು ಪ್ರೊ. ಕಲಬುರ್ಗಿಯವರು. ಅವರು ಕನಕ ಅನ್ನುವ ಹೆಸರು ಇರಲಾರದು, ಆತನ ಹೆಸರು ಕನ್ನ ಇರಬಹುದು, ಅದಕ್ಕೆ 'ಕ' ಎನ್ನುವ ಒಂದು ತದ್ಧಿತ ಪ್ರತ್ಯಯ ಅಥವಾ ವ್ಯಕ್ತಿನಾಮ ಸೂಚಕವಾಗಿ ಆಮೇಲೆ ದಾಸ ಬಂದು ಸೇರಿರಬಹುದು. ಕನ್ನ ಅಂತಕ್ಕಂಥದ್ದು ಕನ್ನಡನಾಡಲ್ಲಿ ವ್ಯಕ್ತಿಗೆ ಇರುವ ಹೆಸರುಗಳಲ್ಲಿ ಒಂದು. ಕನ್ನಯ್ಯ, ಕನ್ನಪ್ಪ, ಅದು ಕಣ್ಣ ಕೂಡ ಇರಬಹುದು, ಕೃಷ್ಣನ ರೂಪ ಕೂಡ ಇರಬಹುದು ಅನ್ನೋ ಅಂತ ಊಹೆಯನ್ನು ಮಾಡ್ತಾರೆ. ದ್ರಾವಿಡ ಮೂಲದ ಹೆಸರಿರಬೇಕೆಂದು ಸಂಸ್ಕೃತದ ಹೆಸರಿರಲಾರದು ಅನ್ನೋದರಿಂದ ಹಿಡಿದು, ಕನಕದಾಸ ಆಗೋದಕ್ಕೆ ಮೊದಲಿದ್ದ ಆತನ ಹೆಸರೇನು ಅನ್ನೋದರ ಬಗ್ಗೆ ಸಂದೇಹಗಳೇನೂ ಇಲ್ಲ. ಆ ಹೆಸರು ಯಾವುದು ಅನ್ನೋದು ಈಗಾಗಲೇ ಗೊತ್ತಿರೋ ಸಂಗತಿ. ಅದು ತಿರುಪತಿಯ ದೇವರ ಹೆಸರಲ್ಲಿರ್ತಕ್ಕಂಥ ತಿಮ್ಮಪ್ಪನಾಯಕ ಅಂತನ್ನೋದು ಬಹುಮಟ್ಟಿಗೆ ಒಪ್ಪಿರ್ತಕ್ಕಂಥದು.

ಎರಡನೇದು ಆತನ ಸಾಮಾಜಿಕ ಹಿನ್ನೆಲೆಯ ಬಗೆಗೆ, ಆತನ ಜಾತಿಯ ಬಗೆಗೆ, ಇಲ್ಲೂ ಕೂಡ ಪರಸ್ಪರ ಮುಖಾಮುಖಿ ಮಾಡಿರುವ ಸಂಗತಿಗಳು ಬೇಕಾದಷ್ಟಿವೆ. ಆತನು ಬೇಡ ಕುಲದವನು ಅಂತ ಕರೆಯುವ ಅಥವಾ ಕುರುಬ ಜನಾಂಗಕ್ಕೆ ಸೇರಿದವನು ಅಂತ ಹೇಳಿರುವ ಈ ಚರ್ಚೆಗಳು ಪರಿಹರಿಸಲಿಕ್ಕೆ ಆಗದೇ ಇರುವಂಥ ರೀತಿಯಲ್ಲಿ ಬೆಳೆದುಕೊಂಡು ಬಂದಿವೆ. ಈ ಗೊಂದಲಕ್ಕೆ ಬಹಳ ಮುಖ್ಯವಾದ ಕಾರಣ, ಕರ್ನಾಟಕದ ಎರಡನೆಯ ಸಹಸ್ರಮಾನ ಚರಿತ್ರೆಯ ಬಗೆಗೆ, ಅದು ಮೊದಲ ಸಹಸ್ರಮಾನದಿಂದ ಪ್ರಾರಂಭವಾಗಿ ಎರಡನೇ ಸಹಸ್ರಮಾನದಲ್ಲಿ ನಿಚ್ಚಳಗೊಂಡಂತೆ ಕೆಲವು ಗೋಜಲುಗಳನ್ನು ನಾವು ಸರಿಯಾಗಿ ಗ್ರಹಿಸದೇ ಇರೋದಕ್ಕೆ ಕಾರಣ ಇರಬಹುದು ಅಂತ ಅನ್ನಿಸ್ತದೆ. ಇದನ್ನ ನಿಮ್ಮೆದುರು ಒಂದು ಪ್ರಶ್ನೆಯಾಗಿ ಇಡೋದಕ್ಕೆ ಪ್ರಯತ್ನಪಡ್ತೀನಿ.

ಅದರಲ್ಲೂ ಕರ್ನಾಟಕದ ಮೂರು ಜನಾಂಗಗಳ ಬಗ್ಗೆ - ಒಂದು ಬೇಡರು, ಇನ್ನೊಂದು ಗೊಲ್ಲರು ಮತ್ತು ಇನ್ನೊಂದು ಕುರುಬರು. ಈ ಮೂರು ಜನಾಂಗಗಳ ಬಗೆಗೆ ನೋಡಿದಾಗ ಅವುಗಳ ನಡುವಣ ಗೆರೆಗಳನ್ನು ನಾವು ತಿಳಿದಷ್ಟು ಸುಲಭವಾಗಿ ಎಳೀಲಿಕ್ಕೆ ಬರಲ್ಲ. ಅದನ್ನು ಅಷ್ಟು ಸುಲಭವಾಗಿ ಹೇಳೋಕೆ ಬರದೇ ಇರಬಹುದು. ಸ್ವಲ್ಪ ಅಂತ್ರೋಪಾಲಜಿ - ಮಾನವಶಾಸ್ತ್ರದ ಅದರಲ್ಲೂ ಕೂಡ ಸಾಂಸ್ಕೃತಿಕ ಮಾನವಶಾಸ್ತ್ರದ ವಿದ್ಯಾರ್ಥಿಗಳಾಗಿದ್ದರೆ, ಮನುಷ್ಯ ಸಮಾಜದ ಸಾಮಾಜಿಕ ಬೆಳವಣಿಗೆಯಲ್ಲಿ ಆಹಾರಕ್ಕೆ ಸಂಬಂಧಪಟ್ಟಂತೆ ಅದೊಂದು ಚಟುವಟಿಕೆಯಲ್ಲಿ ಎರಡನೇ ಹಂತವಾಗಿ ಬೇಟೆಯನ್ನು ಮೂರನೇ ಹಂತವಾಗಿ ಪಶುಪಾಲನೆಯನ್ನು ಕೂಡ ನಾವು ನೋಡ್ತೇವೆ. ಮೊದಲನೆ ಹಂತದಲ್ಲಿ ಆಹಾರ ಸಂಗ್ರಹಣೆ ಬರ್ತದೆ. ನಾಲ್ಕನೇ ಹಂತದಲ್ಲಿ ಕೃಷಿ ಬರ್ತದೆ. ಈ ಬೇಟೆ ಮತ್ತು ಪಶುಪಾಲನೆ ಬೇರೆ ಬೇರೆ ಸಮುದಾಯಗಳಲ್ಲಿ ಒಟ್ಟಾಗಿ ಸಂಭವಿಸಿದವು ಅಂತ ಹೇಳೋದು ಕಷ್ಟ. ನಿಜ, ಬೇಟೆ ಇದ್ದದ್ದು ಪಶುಪಾಲನೆಗೆ ಪರಿವರ್ತನೆ ಹೊಂದ್ತದೆ. ಆದರೆ ಯಾವಾಗ ಬೇಟೆ ನಿಂತೋಗ್ತದೆ ಯಾವಾಗ ಪಶುಪಾಲನೆ ಆರಂಭವಾಗ್ತದೆ ಅಂತ ಹೇಳೋದು ಕಷ್ಟ. ಮತ್ತು ಪಶುಪಾಲನೆ ಪ್ರಾರಂಭ ಆದ ಮೇಲೂ ಕೂಡ ಬೇಟೆ ಅನ್ನೊದು ಮುಖ್ಯ ಆರ್ಥಿಕ ಚಟುವಟಿಕೆಯಾಗಿ ಮುಂದುವರೀತದೆ. ಅದರಿಂದಾಗಿ ಇವೆರಡೂ ಬೆರೆತುಕೊಳುತ್ತಾ ಹೋಗ್ತವೆ. ಹೀಗಿರುವಾಗ ಈ ಮೂರು ಜನಾಂಗಗಳನ್ನು ಬೇರ್ಪಡಿಸೋದು ಅದರಲ್ಲೂ ಕೂಡ ಗೊಲ್ಲರು ಮತ್ತು ಕುರುಬರು ಪಶುಗಾಹಿಗಳಾಗಿದ್ದೋರು. ಬೇಟೆ ಒಂದು ಆರ್ಥಿಕ ಚಟುವಟಿಕೆಯನ್ನಾಗಿ ಹೊಂದಿರ್ತಕ್ಕಂಥ ಬೇಡರು, ಈ ಮೂರು ಜನಾಂಗಗಳನ್ನ ಬೇರ್ಪಡಿಸಿ ಇಡೋದು ಬಹಳ ಕಷ್ಟ ಇದೆ. ಅದರಲ್ಲೂ ಕೂಡ ಕರ್ನಾಟಕದ ಸಮಾಜವನ್ನು ಬಹಳ ನಿಕಟವಾಗಿ ನೋಡಿದ್ರೆ ಅವರ ಆಚರಣೆಗಳಲ್ಲಿ, ಅವರ ನಂಬಿಕೆಗಳಲ್ಲಿ, ಅವರ ಜೀವನ ಕ್ರಮಗಳಲ್ಲಿ ಎಷ್ಟರ ಮಟ್ಟಿಗೆ ಬೆರೆತುಹೋಗೋ ಕ್ರಮಗಳಿವೆ ಅಂದ್ರೆ ಅವುಗಳನ್ನು ಬಹಳ ಎಚ್ಚರದಿಂದ ಬೇರ್ಪಡಿಸಬೇಕೇ ಹೊರತು ಸಹಜವಾದ ಕ್ರಮದಲ್ಲಿ ಆ ಮೂರು ಕೂಡ ಬೆರೆತುಕೊಂಡು ಹೋಗಿಬಿಡುತ್ವೆ. ಅದಕ್ಕೆ ಬೇರೆ ಬೇರೆ ಕಾರಣಗಳಿವೆ. ಉದಾ: ಈ ಜನಾಂಗಗಳು ಬೆಳಕೊಂಡು ಬಂದ ಕ್ರಮದಲ್ಲಿ ಬೇಟೆ ಹಂತದಲ್ಲಿ ಇದ್ದುದಕ್ಕಿಂತ, ಪಶುಪಾಲನೆ ಹಂತದಲ್ಲಿ ಕನ್ನಡ ಪಶುಗಾಹಿಗಳು ಬಂದು ಕರ್ನಾಟಕದೊಳಗೆ ಸೇರಿಕೊಂಡದ್ದು ಬಹಳ ಮುಖ್ಯವಾದ ಕಾಲ.

ಇವರು ಪಶ್ಚಿಮ ಕರಾವಳಿಯಿಂದ ಬಂದ ಪ್ರಾಕೃತವನ್ನು ಮಾತನಾಡುತ್ತಿದ್ದಂತ ಜನಾಂಗಗಳಿರಬಹುದು ಅಥವಾ ಪೂರ್ವ ಕರಾವಳಿಯಿಂದ ಬಂದ ಪ್ರಾಕೃತ ಮಾತಾಡ್ತಿದ್ದಂತ ಜನಾಂಗಗಳಿರಬಹುದು. ಇದನ್ನು ಶಂಬಾರವರು ಅದರಲ್ಲೂ ಕೂಡ ಪಶ್ಚಿಮ ಕರಾವಳಿಯಿಂದ ಬಂದ ಪಶುಗಾಹಿಗಳ ಬಗ್ಗೆ ಹಾಲುಮತ ದರ್ಶನ ಕೃತಿಯಲ್ಲಿ ಬಹಳ ವಿವರವಾಗಿ ನಮ್ಮೆದುರು ವಿಚಾರಗಳನ್ನು ತೆರೆದಿಟ್ಟಿದ್ದಾರೆ. ಪೂರ್ವ ಕರಾವಳಿಯಿಂದ ಬಂದಂಥ ಈ ಪಶುಗಾಹಿಗಳ ನೆಲೆಗಳ ಬಗೆಗೆ ನಮ್ಮಲ್ಲಿ ಇನ್ನೂ ಕೂಡ ಅಧ್ಯಯನಗಳು ನಡೆದಿಲ್ಲ. ಯಾಕೇಂತಂದ್ರೆ, ಅವರು ಕೊನೆಗೆ ಹೋಗಿ ಹಸುಗಳನ್ನು ಸಾಕುವ ಜನಾಂಗಗಳು ಬಂದ್ರು, ಎಮ್ಮೆಗಳನ್ನು ಸಾಕುವ ಜನಾಂಗಗಳು ಬಂದ್ರು, ಕುರಿಗಳನ್ನು ಸಾಕುವ ಜನಾಂಗಗಳು ಬಂದ್ರು ಇವರೆಲ್ಲರೂ ಪ್ರಾಕೃತವನ್ನು ಮಾತಾಡ್ತಿದ್ದೋರು. ಇಲ್ಲಿ ಕನ್ನಡ ಮಾತಾಡ್ತಾ ಇದ್ದ ಅಥವಾ ಕನ್ನಡ ಅಂತ ನಾವು ಇವತ್ತು ಹೇಳ್ತಾ ಇರುವ ಒಂದು

ಭಾಷೆಯ ರೂಪವನ್ನು ಮಾತಾಡ್ತಾ ಇದ್ದಂತಹ ದ್ರಾವಿಡ ಜನಾಂಗಗಳು ಕೂಡ ಇಲ್ಲಿ ಇದ್ದು, ಇದು ಎರಡನೇ ಸಹಸ್ರಮಾನದ ಜೊತೆಗೆ, ಅದ್ರಲ್ಲೂ ಕೂಡ ಕೃಷಿ ಪ್ರಧಾನವಾಗೋ ಹೊತ್ತಿಗೆ ಈ ಮೂರು ಜನಾಂಗಗಳು ಹೇಗೆ ಬೆರೆತುಹೋಗ್ತವೆ ಅಂತ ಅಂದ್ರೆ, ಇವತ್ತು ನಾವು ಹೇಗೆ ಹೆಸರುಗಳಲ್ಲಿ ಅವನ್ನು ಬೇರ್ಪಡಿಸ್ತೀವಿ ಹಾಗೆ ಹೆಸರುಗಳಲ್ಲಿ ಬೇರ್ಪಡಿಸೋದಕ್ಕೆ ಸಾಧ್ಯ ಆಗೋದಿಲ್ಲ. ಆದ್ದರಿಂದ ಈ ಪ್ರಶ್ನೆ ಅವರು ಬೇಡರೋ ಕುರುಬರೋ ಅನ್ನೋ ಅಂತಾದ್ದನ್ನ ಬಹುಶಃ 21ನೇ ಶತಮಾನದಲ್ಲಿ ಬಿಡಿಸಲಾಗದ ಅಥವಾ ಬಿಡಿಸೋದಕ್ಕೆ ಹೋಗಬಾರದ ಪ್ರಶ್ನೆಯಾಗಿ ಇದೆ ಅಂತ ನಾನು ತಿಳ್ಕೊಳ್ತೀನಿ. ಚರ್ಚೆಗೆ ಇದನ್ನು ನಾನು ನಿಮ್ಮೆದುರು ಇಡ್ತಾಇದೀನಿ.

ಮೂರನೆಯ ಪ್ರಶ್ನೆ-ಅವರ ಹೆಸರು ಮತ್ತು ಜಾತಿ ಬಗ್ಗೆ ಅಲ್ಲದೇನೆ, ಅವರ ಎರಡು ನೆಲೆಗಳೇನು ಇವೆ ಅವರು ಸೈನ್ಯಾಧಿಕಾರಿಯಾಗಿದ್ದಿದ್ದು; ಆಡಳಿತಾಧಿಕಾರಿ ಆಗಿದ್ದಿದ್ದು; ಪಾಳೆಪಟ್ಟನ ಅಧಿಪತಿ ಆಗಿದ್ದದ್ದು ಮತ್ತು ಅವರು ಸಂತರಾಗಿದ್ದಿದ್ದು; ದಾಸರಾಗಿದ್ದಿದ್ದು; ದಾಸ ಪರಂಪರೆಗೆ ಬಂದು ಸೇರಿದ್ದು. ಈ ಬದಲಾವಣೆಗೆ ಕಾರಣಗಳು ಕೂಡ ಚಾರಿತ್ರಿಕವಾಗಿ ನಿಖರವಾಗಿವೆ ಅಂತ ನನಗನಿಸಿಲ್ಲ ಅಥವಾ ಅದರ ಬಗ್ಗೆ ಖಚಿತವಾಗಿ ಹೇಳೋಕೆ ಆಗ್ತಾ ಇಲ್ಲ. ಅವರ ಕೀರ್ತನೆಗಳು ಅಥವಾ ಹಾಡುಗಳ ಮುಖಾಂತರಾನೇ ಒಂದೆರಡು ಸೂಚನೆಗಳನ್ನು ಪಡೆದುಕೊಳ್ಳುವ ಕೆಲಸವನ್ನು ವಿದ್ವಾಂಸರು ಮಾಡಿದಾರೆ. ಆದ್ರೆ ಅದು ಅಷ್ಟೊಂದು ಗಟ್ಟಿಯಾದ ನೆಲೆ ಅಂತ ಅನಿಸ್ತಾ ಇಲ್ಲ. ಅದರ ಬಗ್ಗೆ ನಾನು ಮತ್ತೆ ಎರಡನೆಯ ದಿಕ್ಕಿನ ಚಿಂತನೆಗಳ ಬಗ್ಗೆ ಮಾತಾಡುವಾಗ ಹೇಳ್ತೀನಿ. ಕರ್ನಾಟಕದಲ್ಲಿ ನೆಲೆಗೊಂಡಿರುವ ಭಕ್ತಿ ಪಂಥದ ಮೂರು ನೆಲೆಗಳಲ್ಲಿ, ಭಕ್ತಿ ಪಂಥಕ್ಕೆ ನೇರವಾಗಿ ಸಂಬಂಧಪಟ್ಟಿದ್ದು ಎರಡು ನೆಲೆಗಳು; ಅಷ್ಟೊಂದು ಭಕ್ತಿ ಪಂಥಕ್ಕೆ ನಂಟನ್ನು ಬೆಳೆಸಿಕೊಳ್ಳದೇ ಇರುವ ಮೂರನೆಯ ನೆಲೆ ಒಂದಿದೆ. ಈ ಮೂರು ಕೂಡ ವೈದಿಕ ನೆಲೆಯಿಂದ ಬಂದಿವೆ. ಅದ್ವೈತ, ದ್ವೈತ ಮತ್ತು ವಿಶಿಷ್ಟಾದ್ವೈತ ಈ ಮೂರು ನೆಲೆಗಳಲ್ಲಿ ಕನಕದಾಸರು ಮೊದಲು ವಿಶಿಷ್ಟಾದ್ವೈತ ಅಥವಾ ಅವರು ಕೊನೆಯವರೆಗೂ ವಿಶಿಷ್ಟಾದ್ವೈತ ಪಂಥದ ಅನುಯಾಯಿಗಳಾಗಿದ್ದರೇ ಅಥವಾ ಅವರು ಶ್ರೀವೈಷ್ಣವರು ಅಥವಾ ಮಾಧ್ವಮತದ ಅನುಯಾಯಿಗಳಾದರೇ ಎಂಬುದು ಕಲ್ಬುರ್ಗಿಯವರು ಎತ್ತುತಾ ಇರುವ ಪ್ರಶ್ನೆ ಅಂದರೆ ಅವರ ಹೆಸರ್‍ನಲ್ಲಿ ನೆಲೆಗೊಳಿಸ್ತಾ ಇರುವಂತ ಮತ ಏನಿದೆ ಅದು ಶಂಕರ ಸಿದ್ಧಾಂತ, ಅದ್ವೈತ ಸಿದ್ಧಾಂತಕ್ಕೆ ಸಂಬಂಧ ಪಡುತ್ತೆ. ಇಲ್ಲಿ ಅದ್ವೈತ ಸಿದ್ಧಾಂತ ಭಕ್ತಿ ಪಂಥದೊಡನೆ ಹಾಗೆ ನಿಕಟವಾಗಿ ಸಂಪರ್ಕವನ್ನು ಪಡೆದುಕೊಳ್ಳಲಿಲ್ಲ. ಕರ್ನಾಟಕದಲ್ಲಿ ಕನಕದಾಸರನ್ನು ಈ ಮೂರರಲ್ಲಿ ಯಾವುದರೊಡನೆ ನಂಟನ್ನು ಕಾಣಬೇಕು ಅನ್ನುವ ಪ್ರಶ್ನೆಗಳು ಕೂಡ ಪರಿಹಾರ ಆಗ್ದೇನೆ ಉಳಿದುಕೊಂಡಿವೆ ಅಂತ ಅನ್ನೋದು. ಇದು ಕೂಡ ಬಹಳ ದೊಡ್ಡ ಪ್ರಶ್ನೆಯಾಗಿ ಉಳಿದುಕೊಂಡಿದೆ.

ಆದರೂ ಕೂಡ ಪುರಂದರ ಹಾಗೂ ಕನಕ ಇವರಿಬ್ಬರು ಎಷ್ಟರ ಮಟ್ಟಿಗೆ ಬೆಸೆದು ಕೊಂಡು ಬಿಟ್ಟಿದ್ದಾರೆ ಅಂದ್ರೆ ಕರ್ನಾಟಕ ಸರ್ಕಾರ ಕೂಡ ಅವರನ್ನ ಬೇರ್ಪಡಿಸಲಿಕ್ಕಾಗದೆ ಅವರ ಪ್ರಶಸ್ತಿಯನ್ನು ಕನಕಪುರಂದರ ಪ್ರಶಸ್ತಿ ಅಂತ್ಲೆನೆ ಒಟ್ಟಿಗೆ ಸೇರಿಸಿ ಇಟ್ಟು ಬಿಟ್ಟಿದೆ. ಜಗಳವೇ ಬೇಡ ಅಂದ್ಕೊಂಡು ಕನಕ-ಪುರಂದರ ಇಬ್ಬರ ಹೆಸರಲ್ಲೂ ಪ್ರಶಸ್ತಿಯನ್ನು ಇಟ್ಟಿತ್ತು. ಈಗ ಬದಲಾಗಿದೆ. ಕೀರ್ತನೆಗಳಲ್ಲಿ ಯಾವುದು

ಕನಕದಾಸರದ್ದು, ಯಾವುದು ಪುರಂದರದಾಸರದ್ದು, ಯಾರು ಯಾವಾಗ ಯಾರ ನಾಮಾಂಕಿತಗಳನ್ನು ಪಲ್ಲಟ ಮಾಡಿ ಯಾರ ಹೆಸರಲ್ಲಿ ಯಾವ ಕೀರ್ತನೆಗಳನ್ನು ಪ್ರಚಾರದಲ್ಲಿಡಲಾಗಿದೆ, ಇದರ ಬಗ್ಗೆನೂ ವಾದ-ವಿವಾದಗಳು ನಡ್ಕೊಂಡು ಹೋಗ್ತಾ ಇವೆ.

ಇದು ಚಾರಿತ್ರಿಕ ನೆಲೆಯಲ್ಲಿ, ಯಾವುದು ಅಧಿಕೃತ, ಯಾವುದು ನಿಜ ಅನ್ನೋದನ್ನ ಕಟ್ಟುವ ಪ್ರಯತ್ನ, ಈ ಮರುಕಟ್ಟೋಣದ ಪ್ರಯತ್ನಗಳಿಗೆ ನಂದೇ ಆದ ಸಂದೇಹಗಳಿವೆ. ಈಗಾಗಲೇ ನಿಮ್ಗೆ ಗೊತ್ತಿರೋ ಹಾಗೆ. ಈ ಪ್ರಶ್ನೆಗಳನ್ನ ನಮ್ಮೆದುರು ಇಡಬಹುದೇ ಹೊರತು ಎಂದಾದರೂ ಕೂಡ ನಾವು ಬಿಡಿಸಬಹುದೇ, ಹಾಗೆ ಬಿಡಿಸೋದರಿಂದ ಕನಕದಾಸರ ಬಗ್ಗೆ ನಮಗೆ ತಿಳಿವಳಿಕೆ ಹೆಚ್ಚಾಗುತ್ತದೆಯೇ ಅನ್ನೋದರ ಬಗ್ಗೆ ನನಗೆ ಸಂದೇಹಗಳಿವೆ. ವಿದ್ವಾಂಸರು ಆ ಪ್ರಶ್ನೆಗಳನ್ನು ಬಿಡಿಸಲೂಬಹುದು. ಈ ಪ್ರಶ್ನೆಗಳನ್ನು ಹಾಕಬೇಕೆ, ಅವುಗಳ ಬೆನ್ನು ಹತ್ತಬೇಕೆ ಅನ್ನೋದರ ಬಗ್ಗೆ ನನಗೆ ಪ್ರಶ್ನೆಗಳಿವೆ. ಇದೂ ಕೂಡ ನಿಮ್ಮ ಚರ್ಚೆಗೆ ತೆರೆದಿಟ್ಟಿದೆ. ಈ ಚಾರಿತ್ರಿಕ ವ್ಯಕ್ತಿ ಅಥವಾ ಚಾರಿತ್ರಿಕ ಕನಕದಾಸರನ್ನು ಕಟ್ಟುವ ಪ್ರಯತ್ನದಲ್ಲಿ ಬಹಳ ಮುಖ್ಯವಾದ ಆಕರಗಳು ದಾಖಲೆಗಳು. ಒಂದಷ್ಟು ಶಾಸನಗಳು, ಹಸ್ತಪ್ರತಿಗಳು ಅಲ್ಲಿ ಇಲ್ಲಿ ಸಿಕ್ಕಿರ್ತಕ್ಕಂತಾದ್ದು ಇವುಗಳನ್ನು ಮಾತ್ರ ಆಧರಿಸಿ ಕೆಲಸ ಮಾಡಲಾಗಿದೆ. ಎರಡನೇದು ಜನಪ್ರಿಯ ಅಥವಾ ಜನಪದದ ನೆಲೆಯಲ್ಲಿ ಕನಕದಾಸರನ್ನು ಕಟ್ಟಿರೋದು, ಹತ್ತಾರು ಕಥೆಗಳನ್ನು ಕನಕದಾಸರ ಬಗ್ಗೆ ಜನ ಕಟ್ಟಿಕೊಂಡಿರೋದು ಅವುಗಳನ್ನು ನಂಬಿರೋದು, ಬಾಯಿಂದ ಬಾಯಿಗೆ ಅವುಗಳನ್ನು ಪ್ರಚಾರ ಮಾಡಿರೋದು. ಇವುಗಳನ್ನು ನೋಡ್ತೀವಿ. ಕರ್ನಾಟಕದಲ್ಲಿ ಇದು ಬಹಳ ದೊಡ್ಡ ಪ್ರಮಾಣದಲ್ಲಿ ನಡೆದಿದ್ರೂ ಕೂಡ ಅದಕ್ಕೊಂದು ಅಧಿಕೃತ ದಾಖಲೆ ದೊರೆತಿದ್ದು ಸುಮಾರು 60ನೇ ದಶಕದಲ್ಲಿ. 60ರ ದಶಕದಲ್ಲಿ ಕನಕದಾಸರ ಹೆಸರಿನಲ್ಲಿ ಭಕ್ತ ಕನಕದಾಸ ಚಲನಚಿತ್ರ ತಯಾರಾದಾಗ, ನಾನು ಅದನ್ನು ನೋಡಿದ್ದು ಬಹಳ ಚಿಕ್ಕವನಾಗಿದ್ದಾಗ. ನಿನ್ನೆ ಯೂಟ್ಯೂಬ್‌ನಲ್ಲಿ ಆ ಚಲನಚಿತ್ರವನ್ನು ಮತ್ತೆ ನೋಡಿದೆ, ಅಲ್ಲಿ ಕನಕದಾಸರನ್ನು ಮತ್ತು ಮರು ಕಟ್ಟೋಣದಲ್ಲಿ ಆ ಜನಪ್ರಿಯ ನೆಲೆಯ ಸಂಗತಿಗಳೇನಿವೆ ಅವುಗಳನ್ನು ಮಂಡಿಸಲಾಗಿದೆ. ಅವರ ಹಾಡುಗಳಿಗೂ ಆತನ ಬದುಕಿಗೂ ಇರುವ ಸಂಬಂಧಗಳು, ಆತನ ಬದುಕಿನ ಕೆಲವು ಘಟನೆಗಳೂ ಆತನ ಜೀವನದಲ್ಲಿ ಆಗಿರ್ತಕ್ಕಂಥ ಸಂಗತಿಗಳೂ, ಇವುಗಳಿಗೆ ಒಂದು ತಾರ್ಕಿಕವಾದ ಸಂಬಂಧವನ್ನು ಕಟ್ಕೊಂಡು ಹೋಗಿರ್ತಕ್ಕಂಥದು. ಅದು ಬೇರೆ ಬೇರೆ ಹಂತಗಳಲ್ಲಿ ಹೇಗಾಗ್ತ ಬಂತು, ಜೀವನದ ಕೊನೆಯ ಘಟ್ಟದಲ್ಲಿ ಅದು ಹೇಗೆ ಬರ್ತದೆ, ವೈದಿಕ-ಅವೈದಿಕ ಪ್ರಶ್ನೆ, ಜಾತಿಯ ಪ್ರಶ್ನೆ, ಇವೆಲ್ಲವೂ ಕೂಡ ಅದರೊಳಗೆ ಬೆರೆತುಕೊಂಡು ಬಿಟ್ಟಿವೆ. ಇದು ಒಂದು ರೀತಿ ಜನಮಾನಸಕ್ಕೆ ಕನಕದಾಸರನ್ನು ಮರಳಿ ಕಟ್ಟಿಕೊಡುವ ಬಹಳ ದೊಡ್ಡ ಪ್ರಯತ್ನ. ಕನಕದಾಸರನ್ನು ಜನ ಹೇಗೆ ಕಟ್ಟಿಕೊಂಡಿದ್ದಾರೆ ಅಂತ ಅನ್ನೋದಕ್ಕೆ ಆ ಚಲನಚಿತ್ರವನ್ನು ದೊಡ್ಡ ದಾಖಲೆಯನ್ನಾಗಿ ನಾವು ನೋಡಲೇಬೇಕಾಗ್ತದೆ.

ಯಾಕೆ ಅಂತಂದ್ರೆ ಒಂದು ನಾಯಕನ ಸೃಷ್ಟಿಗೆ ಇವೆಲ್ಲವೂ ಕೂಡ ಬಹಳ ದೊಡ್ಡ ಕೆಲಸವನ್ನು ಮಾಡ್ತವೆ. ಅಲ್ಲಿ ಕನಕದಾಸರನ್ನ ಆ ಪಾತ್ರವನ್ನು ಅಭಿನಯಿಸಿ ತೋರ್ಸುವಾಗ, ರಾಜಕುಮಾರ್ ಅವರ ಆಹಾರ್ಯ ಅಂದ್ರೆ ಉಡುಪುಗಳನ್ನು ನಾನು

ಗಮನಿಸಿದೆ. ಹೇಗೆ ಅವರಿಗೆ ಉಡುಪುಗಳನ್ನು ಹಾಕಲಾಗಿದೆ ಅಂತ. ಸಾಮಾನ್ಯವಾಗಿ ಸಂತರುಗಳನ್ನು ಹೇಗೆ ಚಿತ್ರಿಸಲಾಗ್ತದೆ. ಆ ಸಂತರುಗಳಿಗೆ ಇರಬಹುದಾದ ಉಡುಪಿನ ಕ್ರಮವನ್ನೇ ಅವರಿಗೆ ಕೊಡಲಾಗಿದೆ. ಇದು ಯಾಕೆ ಈ ರೀತಿ ಆಯ್ತು ಅನ್ನೋದು ಬಹಳ ಕುತೂಹಲಕಾರಿ ಸಂಗತಿ. ಇವತ್ತು ಪ್ರಚಲಿತವಾಗಿರೋ ಕನಕದಾಸರ ಚಿತ್ರ ಏನಿದೆ ಆ ಚಿತ್ರವನ್ನು ಯಾರು ಬರೆದರು ಅಥವಾ ಯಾವಾಗ ಕ್ರಿಯೇಟ್ ಮಾಡಿದರು ಅಂತ ಅನ್ನೋದು, ಅದನ್ನ ಮತ್ತೆ ನಾವೀಗ ಅಗೆದು ತೇಗೀಬೇಕಾಗಿರೋದು, ಯಾರು ಅದನ್ನು ರೂಪಿಸಿದರು ಅನ್ನೋದನ್ನ. ಗಡ್ಡ ಬಿಟ್ಟುಕೊಂಡಿರುವ ಹೆಗಲ ಮೇಲೆ ಕಂಬಳಿ ಹಾಕಿಕೊಂಡಿರುವ ಒಬ್ಬ ವ್ಯಕ್ತಿಯ ಚಿತ್ರ. ಈ ಚಿತ್ರವನ್ನು ಕ್ರಿಯೇಟ್ ಮಾಡೋಕೆ ಇದ್ದ ಕಾರಣ ಏನು? ದಾಸರುಗಳಿಗೆ ಬಹುಮಟ್ಟಿಗೆ ಇದ್ದಿರಬಹುದಾದ, ಆದರೆ ಕನಕದಾಸರಿಗೆ ಮಾತ್ರ ಕೊಡದೆ ಇರ್ತಕ್ಕಂಥ, ಒಂದು ಅಂಶ ಏನಿದೆ ಆ ಚಲನಚಿತ್ರದ ಆಹಾರ್ಯದಲ್ಲಿ ಅಂತಂದ್ರೆ ಮುಂಡಾಸು. ತಲೆಗೆ ಬಟ್ಟೆ ಇಲ್ಲ. ಬರಿದಲೆಯವರು ಕನಕದಾಸರು. ಆದರೆ ಬೇರೆ ದಾಸರುಗಳನ್ನು ಚಿತ್ರಿಸುವಾಗ ಹಾಗಿರೋದಿಲ್ಲ, ಪುರಂದರದಾಸರಿಗೆ ಮೊದಲಾಗಿ. ಯಾಕೆ ಈ ರೀತಿ ಕ್ರಿಯೇಟ್ ಮಾಡಲಾಯ್ತು, ಅದರ ಹಿಂದೆ ಯಾವ ಒತ್ತಡಗಳು ಕೆಲಸ ಮಾಡಿದವು, ಜನಪ್ರಿಯ ಚಿಂತನೆಗಳು ಹೇಗೆ ನಡೀತಾ ಇದ್ವು, ಈ ಬರಿದಲೆಯ ಕನಕದಾಸರನ್ನು ಯಾರು ಕಲ್ಪಿಸಿದರು. ಈ ರೂಪಣದಲ್ಲಿ ಇವೆಲ್ಲ ಬಹಳ ದೊಡ್ಡದಾಗಿ ಕೆಲಸ ಮಾಡ್ತಾ ಇರ್ತವೆ. ಈಚೆಗೆ ನಮ್ಮ ಮಿತ್ರರೊಬ್ಬರು, ಇದು ಸ್ವಲ್ಪ ಬೇರೆ ವಿಚಾರ ಆಯ್ತು. ಆದರೆ ಇದನ್ನು ನಿಮಗೆ ಹೇಳ್ಬೇಕು. ಈ ವಿಶುವಲ್ ಆಗಿ ಒಂದು ಐಕಾನಿಕ್ ಕ್ರಿಯೇಶನ್ ಹೇಗೆ ನಡೆಯುತ್ತೆ ಅನ್ನೋದರ ಬಗ್ಗೆ ಅವರು ಒಂದು ರಿಸರ್ಚ್ ಮಾಡ್ತಾ ಇದ್ದು ಕನ್ನಡ ಭುವನೇಶ್ವರಿಯನ್ನು ಹೇಗೆ ಕನ್ನಡ ಜನತೆ ಕ್ರಿಯೇಟ್ ಮಾಡಿ ಕೊಂಡಿದ್ದಾರೆ, ಅಥವಾ ಅವರು ಅದನ್ನು ಒಪ್ಪಿಕೊಳ್ಳೋ ಹಾಗೆ ಮಾಡಲಾಗಿದೆ, ಕನ್ನಡ ಭುವನೇಶ್ವರಿಯನ್ನು ಆಕೆಯ ಸೀರೆಯ ಬಣ್ಣ ಇರಬಹುದು, ಆಕೆ ಹಾಕಿಕೊಳ್ಳುವ ಆಭರಣಗಳಿರಬಹುದು, ಆಕೆಯ ದೇಹ ಸೌಷ್ಠವ ಇರಬಹುದು, ಹೈಟ್ ಇರಬಹುದು. ಇವುಗಳೆಲ್ಲವೂ ಕೂಡ ಯಾವ ರೀತಿ ಒಂದು ಜನ ಮಾನಸಕ್ಕೆ ಕಟ್ಟಿಕೊಡುವ ಪ್ರಯತ್ನವನ್ನು ಮಾಡಿದಾರೆ. ಯಾರೋ ಒಬ್ಬ ಆರ್ಟಿಸ್ಟ್ ಮಾಡ್ತಕ್ಕಂಥ ಕೆಲಸ ಇದು. ಶಿವಕಾಶಿಯಲ್ಲಿದ್ದಂತ ಒಬ್ಬ ಕ್ಯಾಲೆಂಡರ್ ಆರ್ಟಿಸ್ಟ್ ಮಾಡಿದ್ದು ಅದನ್ನ. ಆತ ಇದನ್ನು ಹೇಗೆ ಮಾಡಿದ, ತೆಲುಗು ತಲ್ಲಿಯನ್ನ ಕ್ರಿಯೇಟ್ ಮಾಡ್ದೋರು ಯಾವ ರೀತಿ ಕೆಲಸ ಮಾಡ್ತಾ ಇದ್ರು ಅನ್ನೋ ಬಗ್ಗೆ ರಿಸರ್ಚ್ ಮಾಡ್ತಾ ಇದ್ದಾರೆ. ಹಾಗೆ ಈ ಕನಕದಾಸರನ್ನು ಈ ಕನ್ನಡ ಜನಮಾನಸ ಕ್ರಿಯೇಟ್ ಮಾಡಿತು ಅಂತ ಅಲ್ಲ, ಕ್ರಿಯೇಟ್ ಮಾಡಿ ಅವರಿಗದನ್ನ ನಿಕಟಗೊಳಿಸಿ ಒಪ್ಪಿಕೊಳ್ಳೋ ಹಾಗೆ ಮಾಡಲಾಗಿದೆ. ಬಾಯ್ದೆರೆಯ ಕಥನಗಳಿರಬಹುದು. ಅಂದ್ರೆ ದಾಸ ಕೂಟದಲ್ಲಿ ನಡೆದಂತಹ ಕೆಲವು ಘಟನೆಗಳಿರಬಹುದು, ಯಾರೂ ಇಲ್ದೆ ಇರೋ ಕಡೆ ಹೋಗಿ ಬಾಳೆಹಣ್ಣು ತಿಂದ್ಬಿಟ್ಟು ಬಾ ಅಂತ ಹೇಳಿದ್ದು, ಎಲ್ಲರೂ ಮರೆ ಮರೆಯಲ್ಲಿ ಹೋಗಿ ತಿಂದು ಬಂದಿದ್ದು. ಈತ ತಿನ್ನದೇ ಬಂದಿದ್ದು. ಈ ಕತೆಗಳೆಲ್ಲ ನೀವು ಕೇಳಿರ್ತೀರಿ. ಆ ಮೇಲೆ ಯಾರು ಸ್ವರ್ಗಕ್ಕೆ ಹೋಗಬಹುದು ಅಂತ ಕೇಳಿದಾಗ ಕನಕದಾಸರ ಉತ್ತರ ಏನಾಗಿತ್ತು ಅದಕ್ಕೆ ಇಂತಹ ಹತ್ತಾರು ಕತೆಗಳು ಕನಕದಾಸರ ಬಗೆಗೆ ಬಂದಿವೆ.

ಎರಡನೇದು-ಆತನ ಜೀವನದ ಘಟನಾವಳಿಗೂ ಆತನ ಹಾಡುಗಳಿಗೂ ಸಂಪರ್ಕ ಕಲ್ಪಿಸಿರೋದು. ಇವು ಎಲ್ಲ ಸಂತರ ಬಗ್ಗೆಯೂ ನಡೆದಿವೆ. ಅಕ್ಕನ ಬಗೆಗೂ ನಡೆದಿದೆ. ಬಸವಣ್ಣನವರ ಬಗೆಗೂ ನಡೆದಿದೆ. ಕನಕದಾಸರ ಬಗ್ಗೆ, ಪುರಂದರ ದಾಸರ ಬಗೆಗೂ ನಡೆದಿದೆ. ಯಾರ‍್ಯಾರು ಅವರ ಕಥನವನ್ನು ದೃಶ್ಯ ರೂಪದಲ್ಲಿ ಮಂಡಿಸೋದಕ್ಕೆ ಪ್ರಯತ್ನ ಪಡ್ತಿದ್ದಾರೆ ಅವರೆಲ್ಲರೂ ಕೂಡ ಈ ಕೆಲಸವನ್ನು ಮಾಡಿದ್ದಾರೆ. ಅಂದ್ರೆ ಅವರ ಭಾಷಿಕ ರಚನೆಗಳಿಗೂನು, ಅವರ ಜೀವನದಲ್ಲಿ ನಡೆದಿರೋ ಘಟನೆಗಳಿಗೂನು ಒಂದು ಕೊಂಡಿಯನ್ನು ಕಲ್ಪಿಸುವ ಪ್ರಯತ್ನವನ್ನು ಮಾಡಲಾಗಿದೆ. ಇದು ಒಂದು ರೀತಿ ಜನಪದ ಸೃಷ್ಟಿ ಆದರೆ ಅವುಗಳಿಗೆ ಆಧಾರವನ್ನು ಹೇಳೋಕೆ ಬರಲ್ಲ, ಆದ್ರೆ ಜನ ಒಪ್ಪುವ ರೀತಿಯಲ್ಲಿ ಇದನ್ನು ಕ್ರಿಯೇಟ್ ಮಾಡಿಕೊಡಲಾಗ್ತದೆ. ಇದು ಕೇವಲ ಕರ್ನಾಟಕದಲ್ಲಿ ಮಾತ್ರ ನಡೆದಿದೆ ಅಂತಲ್ಲ. ಮೀರಾ ಬಗ್ಗೆಯೂ ಕೂಡ ಇದನ್ನು ನೋಡಬಹುದು. ಬಹಳ ಪ್ರಖ್ಯಾತವಾದ ಮೀರಾ ಭಜನ್‌ಗಳ ಒಂದು ಆಲ್ಬಂ ಲತಾ ಮಂಗೇಶ್ಕರ್ ಹಾಡಿರುವ ಮತ್ತು ಹೃದಯನಾಥ ಮಂಗೇಶ್ಕರ್ ಸಂಗೀತ ನೀಡಿರುವ ಎರಡು ಎಲ್‌ಪಿಗಳನ್ನು ಕೇಳಿದ್ರೆ ಗೊತ್ತಾಗ್ತದೆ. ಹೇಗೆ ಒಂದಾದ ಮೇಲೆ ಒಂದನ್ನು ಜೋಡಣೆ ಮಾಡಿರೋ ರೀತಿನಲ್ಲೇನೆ, ಆ ಕೊನೆಯೇ ಚಾಲವಾಹಿ ದೇಶ್ ಅಂತ್ಹೇಳಿ ಅವಳು ತನ್ನ ತಂಬೂರಿಯನ್ನು ತೊರೆದು ಹೊರಟು ಹೋಗುವಂಥ ಒಂದು ಹಾಡಿದೆ. ಕೊನೆ ಹಾಡು ಅಂದ್ರೆ ಬದುಕಿನ ಬೇರೆ ಬೇರೆ ಹಂತಗಳಲ್ಲಿ ಅವಳು, ಮದುವೆಯಾಗಿದ್ದಿರಬಹುದು ಮದುವೆಯ ಬಂಧವನ್ನು ಬಿಟ್ಟು ಕನ್ಹಯ್ಯನನ್ನು ಹುಡುಕ್ಕೊಂಡು ಹೊರಟಿದ್ದು ಇರಬಹುದು, ಆಮೇಲೆ ಮರುಭೂಮಿಯಲ್ಲಿ ವಿಲೀನವಾಗಿ ಹೋಗುವ ಕತೆ ಇದೆಯಲ್ಲ ಅದನ್ನು ಮತ್ತು ಆಕೆಯ ಭಜನ್‌ಗಳನ್ನು ಒಂದು ರೀತಿಯ ಸಂಪರ್ಕ ಕಲ್ಪಿಸುವ ಪ್ರಯತ್ನವನ್ನು ಎಲ್ಲಾ ವಿಶುವಲ್ ಮೀಡಿಯಾ ನೆರೇಶನ್ ಅಥವಾ ಓರಲ್ ನೆರೇಶನ್‌ನಲ್ಲಿ ತೊಡಗಿದ ಪ್ರತಿಯೊಬ್ಬರೂ ಕೂಡ ಮಾಡಿದಾರೆ. ಕನಕದಾಸರ ಬಗ್ಗೇನೂ ಈ ರೀತಿಯ ಪ್ರಯತ್ನವನ್ನು ಮಾಡಲಾಗಿದೆ. ಆದರೆ ಇದಕ್ಕೆ ನೀವು ಇದೇ ಆಧಾರ ಅಂತ ಹೇಳೋಕೆ ಬರಲ್ಲ. 'ಬದುಕಿದೆನು ಬದುಕಿದೆನು ಭವ ಎನಗೆ ಹಿಂಗಿತು' ಅಂತ ಅನ್ನೋ ಕೀರ್ತನೆ ಅದು ಯಾವಾಗ ಹಾಡಿರಬಹುದು. 'ಬಾಗಿಲನು ತೆರೆದು ಸೇವೆಯನು ಕೊಡೊ ಹರಿಯೇ' ಹಾಡನ್ನ ಯಾವಾಗ ರಚನೆ ಮಾಡಿರಬಹುದು? ಇವುಗಳನ್ನು ಕುರಿತು ಒಂದು ಕಥನವನ್ನು ಕಟ್ಟಿಕೊಳ್ಳಲಾಗ್ತದೆ. ಅದನ್ನು ನೀವು ಹೀಗೆ ಆಯ್ತು ಅಂತ ಪ್ರೂವ್ ಮಾಡೋಕೆ ಬರಲ್ಲ.

ಎರಡನೆಯ ಚಿತ್ರ ಇದು. ಎರಡನೆಯ ದಿಕ್ಕಿನಲ್ಲಿ ಕನಕರನ್ನು ಕಟ್ಟಿಕೊಳ್ಳುವ ಚಿತ್ರ ಇದು. ಮೊದಲನೆಯದಕ್ಕಿಂತ ಬಹಳ ಬಲವಾಗಿದೆ. ಇದು ಮತ್ತು ಜನರಿಗೆ ನಿಕಟವಾಗಿರುವ ಕನಕರು ಇವರೇನೇ. ಮೊದಲನೆ ಕನಕರಿಗಿಂತ ಎರಡನೇ ಕನಕರು ಬಹಳ ನಿಟಕವಾಗಿರೋರು.

ಈಗ ಮೂರನೇದಕ್ಕೆ ಬರ್ತೀನಿ. ಮೂರನೇದಕ್ಕೆ ಬಂದು ಮತ್ತೆ ನಾನು ಎರಡನೇದಕ್ಕೆ ಹೋಗಲು ಪ್ರಯತ್ನ ಪಡ್ತೀನಿ. ಇದು ಭಾಷಿಕ ರಚನೆಗಳ ಮುಖಾಂತರವೇ ಕನಕರನ್ನು ಮರು ಕಟ್ಟುವಿಕೆಗೆ ಅಥವಾ ಮರುಗಳಿಕೆಗೆ ನಡೆಸಿರ್ತಕ್ಕಂಥ ಪ್ರಯತ್ನಗಳು. ಅಂದ್ರೆ ಇಲ್ಲಿ

ಕನಕ ಒಬ್ಬ ವ್ಯಕ್ತಿ ಅಥವಾ ಕನಕದಾಸರು ಅನ್ತಕ್ಕಂಥ ರಚನಕಾರರು ಅಂತ ಬೇರ್ಪಡಿಸೋಕೆ ಆಗಲ್ಲ. ಬೇರ್ಪಡಿಸಿ ಕನಕರನ್ನು ಕೇವಲ ನುಡಿರಚನೆಗಳ ನಿರ್ಮಾತೃ ಅಂತ ಮಾತ್ರ ನೋಡೋಕೆ ಬರಲ್ಲ. ಇದು ಬಹುಮಟ್ಟಿಗೆ ಭಾಷಿಕ ರಚನೆಗಳನ್ನು ಅವಲಂಬಿಸಿದ ಚಿಂತನೆಗಳು ಅನ್ನೋಬಹುದು. ಕನಕದಾಸರು ಈ ರೀತಿ ನುಡಿ ರಚನೆಗಳನ್ನು ಕೊಟ್ಟ ಕನ್ನಡದ, ಕನ್ನಡ ಪರಂಪರೆಯಲ್ಲಿ ಒಂದು ವಿಶಿಷ್ಟ ರೀತಿ ವ್ಯಕ್ತಿ. ಯಾಕೆ ಅಂದ್ರೆ ದಾಸರ ಪರಂಪರೆಯಲ್ಲಿ ಮಾತ್ರ ಅಲ್ಲ, ಇಡೀ ನಾಡಿನ ಯಾವ ಪರಂಪರೆಗೆ ಹೋಗಿ ನೋಡಿದ್ರೂ ಕೂಡ ಈ ಎರಡು ಬಗೆಯ ರಚನೆಗಳನ್ನು ಒಬ್ಬನೇ ವ್ಯಕ್ತಿ ಕೊಟ್ಟಿರ್‍ತಕ್ಕಂಥದು ಬಹಳ ಅಪರೂಪ. ಅತ್ಯಂತ ಹತ್ತಿರದ ಉದಾಹರಣೆ ಸಿಕ್ತಕ್ಕಂಥದು ಹರಿಹರನದೊಬ್ಬಂದೇ. ನಮಗೆ ಅವನು ಗಿರಿಜಾ ಕಲ್ಯಾಣವನ್ನು ಬರೆದ ಮತ್ತು ಶಿವಶರಣ ರಗಳೆಗಳನ್ನು ಕೂಡ ಬರೆದ. ಕನಕರು ಮೋಹನ ತರಂಗಿಣಿ, ನಳಚರಿತ್ರೆ, ರಾಮಧಾನ್ಯ ಚರಿತೆ ಹಾಗೂ ಹರಿಭಕ್ತಿಸಾರ ಈ ಕೃತಿಗಳ ಜೊತೆಗೆ ಮತ್ತೊಂದು 'ನೃಸಿಂಹಸ್ತವ' ಅನ್ನೋ ಕೃತಿ–ಅದರ ಬಗ್ಗೆ ಚರ್ಚೆ ಇದೆ, ನೃಸಿಂಹಸ್ತವ ಅವರದ್ದೋ ಅಲ್ಲವೋ ಅಂತ– ಉಳಿದ ನಾಲ್ಕು ಕೃತಿಗಳಂತೂ ನಿರ್ವಿವಾದವಾಗಿ ಅವರದೇ ರಚನೆಗಳು. ಇವುಗಳನ್ನು ಈಗ ನಂಬಿರುವ ರೀತಿಯಲ್ಲಿ ಈ ನಾಲ್ಕನ್ನು ಅವರು ಮೊದಲು ಬರೆದರು, ಅನಂತರ ಅವರು ಹಾಡುಗಳನ್ನು ಬರೆದರು ಅಂತ ತಿಳಿಯಲಾಗಿದೆ. ಅದನ್ನು ಒಪ್ಪದೇ ಇರೋಕೆ ನಮ್ಮಲ್ಲಿ ಕಾರಣಗಳು ಇಲ್ದೇ ಇದ್ರೂ ಕೂಡ ಒಪ್ಪೋಕೂ ಕಾರಣಗಳು ಇಲ್ಲ ನಮ್ಮಲ್ಲಿ. ಆದ್ದರಿಂದ ಯಾವುದನ್ನು ಒಪ್ಪೋಬೇಕು, ಯಾವುದನ್ನು ಒಪ್ಪಬಾರದು ಅನ್ನೋದನ್ನ ಹೇಳೋದು ಕಷ್ಟ. ಈ ನಾಲ್ಕನ್ನ ಬರೆದು ಮುಗಿಸಿ ಆದ ಮೇಲೆ ಅವರು ದಾಸರಾದರು. ಆಮೇಲೆ ಹಾಡುಗಳನ್ನು ಬರೆದರೋ ಅಥವಾ ಅವರು ಯಾವುದೋ ಹಂತದಲ್ಲಿ ಯಾವುದೋ ಕಾರಣದಿಂದಾಗಿ ನಾಲ್ಕು ಕೃತಿಗಳನ್ನು ಅಂದ್ರೆ ಹರಿಭಕ್ತಿಸಾರವನ್ನು ಬಿಟ್ರೆ ಉಳಿದವನ್ನು ಯಾವಾಗ ಬರೆದ್ರು ದಾಸರಾಗಿದ್ದಾಗ ಬರೆದರಾ, ದಾಸರಾಗೋಕಿಂತ ಮೊದಲು ಬರೆದ್ರಾ, ಈ ಅನುಕ್ರಮಣಿಕೆಯನ್ನು ಒಪ್ಪಿ ಅದನ್ನೇ ಸಾಧಿಸೋದಕ್ಕೂ ಕೂಡ ಬಹಳ ಕಷ್ಟ ಇದೆ. ಒಟ್ಟಾರೆ ಇವೆಲ್ಲ ಅವರ ರಚನೆಗಳು. ಅವುಗಳನ್ನು ಇಟ್ಕೊಂಡು ನೋಡಿದ್ರು ಕೂಡ ಕನಕದಾಸರನ್ನು ಹಲವು ರೀತಿಗಳಲ್ಲಿ ನಮ್ಮೆದುರು ರಿಕ್ರಿಯೇಟ್ ಮಾಡಲಾಗಿದೆ. ಅದರಲ್ಲೂ ಕೂಡ ಬಹಳ ಜನಪ್ರಿಯವಾದ, ಜನಪ್ರಿಯ ಅನ್ನೋದಕ್ಕಿಂತ ಬಹಳ ಮನ್ನಣೆಯನ್ನು ಪಡೆದಿರ್‍ತಕ್ಕಂಥ ಒಂದು ಚಿಂತನಾ ಕ್ರಮ ಅಂತಂದ್ರೆ, ಒಂದು ವೈದಿಕ ಮತ್ತು ಅವೈದಿಕ ತಿಕ್ಕಾಟ– 60ರ ದಶಕದಿಂದೀಚೆಗೆ ಕರ್ನಾಟಕದ ಸಾಹಿತ್ಯ ವಿಮರ್ಶೆ, ಸಂಸ್ಕೃತಿ ವಿಮರ್ಶೆಯಲ್ಲಿ ಬಹಳ ನೆಲೆಯೂರ್‍ತಾ ಬಂದಿತು. ವೈದಿಕ ಚಿಂತನೆಗಳು ಮತ್ತು ಅವೈದಿಕ ಚಿಂತನೆಗಳು ಇವುಗಳ ನಡುವಣ ಮುಖಾಮುಖಿಯಲ್ಲಿ ಕನ್ನಡ ಸಾಹಿತ್ಯವನ್ನು, ಪರಂಪರೆಯನ್ನು ನೋಡುವಂಥ ಒಂದು ಚಿಂತನಾ ಕ್ರಮ ಏನು ಬಂತು ಅದಕ್ಕೆ ಅನುಸಾರವಾಗಿ ಕನಕದಾಸರ ಕೀರ್ತನೆಗಳನ್ನು, ರಚನೆಗಳನ್ನು ಬಳಸಿಕೊಳ್ಳುವ ಕ್ರಮವನ್ನು ನಾವು ನೋಡ್ತೀವಿ.

1967ರಲ್ಲಿ ಪ್ರಕಟವಾದ 'ಪರಿಶೀಲನ'ದಲ್ಲಿ ಜಿ.ಎಸ್. ಶಿವರುದ್ರಪ್ಪನವರು ಕೀರ್ತನೆಗಳನ್ನು ಹೊರತುಪಡಿಸಿ, ಉಳಿದ ರಚನೆಗಳನ್ನು ಅವುಗಳ ಸಾಹಿತ್ಯಕ ಮೌಲ್ಯದ ದೃಷ್ಟಿಯಿಂದ ನಳಚರಿತ್ರೆಗೆ ಮೊದಲ ಜಾಗವನ್ನು, ಮೋಹನ ತರಂಗಿಣಿಗೆ ಎರಡನೆ

ಜಾಗವನ್ನು ಮತ್ತು ರಾಮಧಾನ್ಯ ಚರಿತೆಗೆ ಮೂರನೆ ಸ್ಥಾನವನ್ನು ಕೊಡ್ತಾರೆ. ಅವರ ಪ್ರಕಾರ ರಾಮಧಾನ್ಯ ಚರಿತ್ರೆ ಬರೆಯೋದಕ್ಕೆ ಯಾವ ಕಾರಣಗಳೂ ಇರಲಿಲ್ಲ. ಕೊನೆಯ ಪಕ್ಷ ನಳಚರಿತ್ರೆಯನ್ನು ಮೊದಲು ಇರಿಸಿದ್ದಕ್ಕೆ ಕಾರಣಗಳನ್ನು ಕೊಡಬಹುದು. ಅವರ ಪ್ರಕಾರ ಅತ್ಯಂತ ಒಳ್ಳೆಯ ಕಾವ್ಯ ಅದು. ಮೋಹನ ತರಂಗಿಣಿ ಅವರ ಪ್ರಕಾರ ಅಷ್ಟು ಒಳ್ಳೆಯ ಕಾವ್ಯ ಅಲ್ಲ. ಈ ಮಾತು ಹೇಳುವಾಗ ಶಿವರುದ್ರಪ್ಪನೋರು ಯಾವ ಬಗೆಯ ವಿಮರ್ಶೆಯ ಪರಿಕರಗಳನ್ನು ಬಳಸ್ತಾ ಇದ್ದರೋ ಮತ್ತು ಆಗ ಪ್ರಚಲಿತದಲ್ಲಿದ್ದ ವಿಮರ್ಶೆ ಪರಿಕರಗಳ ನೆಲೆಯಲ್ಲಿ ಅವರ ಮಾತುಗಳು ಸರಿ ಅಂತ ಅನಿಸುತ್ತೆ. ಆದ್ರೆ ಇಡೀ ಕನ್ನಡ ವಿಮರ್ಶೆಯ ಪರಿಕರಗಳು ಬದಲಾದ ಪರಿಸರದಲ್ಲಿ ರಾಮಧಾನ್ಯ ಚರಿತ್ರೆ ಮೆಲುಗೈಯನ್ನು ಪಡೆದುಕೊಂಡುಬಿಡ್ತು. ಆಮೇಲೆ ಮೋಹನ ತರಂಗಿಣಿ ಕಾವ್ಯವನ್ನು ಒಂದು ಪ್ರತ್ಯೇಕ ಕಾವ್ಯವನ್ನಾಗಿ ನೋಡದೆ, ಎರಡನೆ ಸಹಸ್ರಮಾನದಲ್ಲಿ ಬಂದ ನಿರೂಪಣೆಗಳ ಜೊತೆಯಲ್ಲಿ ಅದನ್ನಿಟ್ಟುಕೊಂಡು ನೋಡುವ ಪರಂಪರೆ ಬಂದಿದೆ. ಯಾಕೆಂದ್ರೆ ಮೋಹನ ತರಂಗಿಣಿಯ ಕಥೆ ಇದೆಯಲ್ಲ ಈ ಕಥೆ ಕನ್ನಡ ಕವಿಗಳು ಮತ್ತೆ ಮತ್ತೆ ಪರೀಕ್ಷೆ ಮಾಡಿರುವ ಕಥೆ. ಬೇರೆ ಬೇರೆ ಕವಿಗಳು ಬೇರೆ ಬೇರೆ ರೀತಿಯಲ್ಲಿ ಆ ಕಥೆಯನ್ನು ಹೇಳ್ಕೊಂಡು ಬಂದಿದ್ದಾರೆ. ಯಾಕೆ ಆ ಕತೆಯನ್ನು ಹೇಳಿಕೊಂಡು ಬಂದರು? ಇದುವರೆಗೆ ಅದನ್ನು ಸಾಂಸ್ಕೃತಿಕ ಚೌಕಟ್ಟಿನಲ್ಲಿ ಇಡೋದಕ್ಕೆ ಸಾಧ್ಯ ಆಗಿಲ್ಲ. ಅಂದ್ರೆ ಆ ಪ್ರಶ್ನೇನ ಇನನೂ ನಾವು ಮೈಮೇಲೆ ಹಾಕೊಂಡಿಲ್ಲ.

ಈ ಕೃತಿಗಳನ್ನು ವಿಮರ್ಶೆ ಚೌಕಟ್ಟಿನಲ್ಲಿ ಅವುಗಳ ಮೌಲ್ಯಮಾಪನ ಮಾಡಿರುವ, ಅವುಗಳ ಮಹತ್ವವನ್ನು ವಿವರಿಸುವ ಒಂದು ಪರಂಪರೆ ಬಹಳ ದೀರ್ಘಕಾಲ ಅಲ್ಲದಿದ್ರೂನು ಒಂದು ಇಪ್ಪತ್ತು ವರ್ಷಗಳ ಕಾಲ ನಡೆದುಕೊಂಡು ಬಂದ ಹಾಗೆ ಕಾಣಿಸ್ತದೆ. ಆ ಕಾಲದ ಸಾಹಿತ್ಯ ಚರಿತ್ರೆಗಳನ್ನು ಗಮನಿಸಿದರೆ, ಸಾಹಿತ್ಯ ವಿಮರ್ಶೆಯ ಲೇಖನಗಳನ್ನು ಗಮನಿಸಿದರೆ, ಈ ಅಂಶ ನಮಗೆ ಗೊತ್ತಾಗ್ತದೆ. ಆ ಕಾಲದ ಒಂದೇ ಪ್ರಾತಿನಿಧಿಕ ಸಾಹಿತ್ಯ ಚರಿತ್ರೆ ರಂ.ಶ್ರೀ.ಮುಗಳಿಯವರ ಕನ್ನಡ ಸಾಹಿತ್ಯ ಚರಿತ್ರೆ. ಕನ್ನಡ ಸಾಹಿತ್ಯದ ಚರಿತ್ರೆಗಳು ಆ ಚೌಕಟ್ಟನ್ನು ಬಿಟ್ಟು ಬೆಂಗಳೂರು ವಿಶ್ವವಿದ್ಯಾಲಯ ಕನ್ನಡ ಸಾಹಿತ್ಯ ಚರಿತ್ರೆ ಕೂಡ ಅನಂತರದ ಕಾಲದಲ್ಲಿ ಬಂದಿದ್ದಾದ್ದರಿಂದ ಅದರಲ್ಲಿ ಕನಕದಾಸರನ್ನು ಗ್ರಹಿಸಿಕೊಂಡಿರುವ ಕ್ರಮಗಳು ಸಂಪೂರ್ಣವಾಗಿ ಬೇರೆಯಾಗ್ತವೆ. ಒಪ್ಪಿರುವ ಚಿಂತನಾ ಕ್ರಮಗಳಿಗಿಂತ ಬೇರೆಯದೇ ಆದ ಕ್ರಮದಲ್ಲಿ ಅವುಗಳನ್ನು ನೊಡಲಾಗಿದೆ.

ಕನ್ನಡ ಕಾವ್ಯ ವಿಮರ್ಶೆಯಲ್ಲೇನೆ, ಇಡೀ ಕನ್ನಡ ಕಾವ್ಯ ಪರಂಪರೆಯನ್ನು ಬೇಂದ್ರೆಯವರು ಎರಡು ನೆಲೆಗಳಲ್ಲಿ ಬೇರ್ಪಡಿಸಿ ನೋಡಿದರು. ಒಂದು ಕಾವ್ಯ ಕವಿಗಳ ಪರಂಪರೆ ಮತ್ತೊಂದು ಭಕ್ತ ಕವಿಗಳ ಪರಂಪರೆ. ಇವರಿಬ್ಬರಲ್ಲಿ ಬೇಂದ್ರೆಯವರು ಹೆಚ್ಚು ಅಂಕಗಳನ್ನು ಕೊಡ್ತಕ್ಕಂಥದು ಭಕ್ತ ಕವಿಗಳ ಪರಂಪರೆಗೆ. ಕನ್ನಡ ಕಾವ್ಯ ಪರಂಪರೆಯಲ್ಲಿ ಕಾವ್ಯ ಕವಿಗಳಿಗಿಂತ ಮೇಲುಗೈಯನ್ನು ಪಡೆದವರು ಭಕ್ತ ಕವಿಗಳು. ಕನಕದಾಸರ ಬಗೆಗೆ ಹಾಗೂ ಅವರ ಮುಂಡಿಗೆಗಳ ಬಗೆಗೆ ಬೇಂದ್ರೆಯವರು ಲೇಖನವೊಂದನ್ನು ಬರೆದಿದ್ದಾರೆ. ಬೇಂದ್ರೆಯವರನ್ನು ಕನ್ನಡ ಸಾಹಿತ್ಯ ವಿಮರ್ಶಕರನ್ನಾಗಿ ನಾವಿನ್ನೂ ಪೂರ್ತಿಯಾಗಿ ಗ್ರಹಿಸಿಲ್ಲ. ಯಾಕೆ ಅಂತಂದ್ರೆ ಅವರು ತಮ್ಮ ಚಿಂತನೆಗಳನ್ನು

ಹೇಳೋದರ ಜೊತೆಗೆ ಅವರೆಗೂ ಪ್ರಕಟ ಆಗ್ತಾ ಇದ್ದ ಸಾಹಿತ್ಯ ಚಿಂತನೆಗಳೆಲ್ಲವನ್ನು ಬುಡಮೇಲು ಮಾಡ್ತಾ ಇದ್ರು. ತಲೆಕೆಳಗು ಮಾಡ್ತಾ ಇದ್ರು. ಅದರಲ್ಲೂ ಕೂಡ ಮೈಸೂರು ವಿಶ್ವವಿದ್ಯಾಲಯದಲ್ಲಿ ನೆಲೆಗೊಂಡಿದ್ದಂತಹ ಚಿಂತನಾ ಪರಂಪರೆಗೆ ಎಲ್ಲೆಲ್ಲಿ ತೊಡರುಗಾಲುಗಳನ್ನು ಕೊಡಬೇಕೋ ಅಲ್ಲೆಲ್ಲಾ ಕೊಟ್ಟಿದ್ದಾರೆ ಬೇಂದ್ರೆಯವರು. ಅದನ್ನು ಬುಡಮೇಲು ಮಾಡ್ಲಿಕ್ಕೆ ಏನೇನು ಮಾಡ್ಬೇಕೋ ಅದನ್ನೆಲ್ಲಾ ಮಾಡಿದ್ದಾರೆ. ಮೈಸೂರಿನ ಈ ಚಿಂತನಾ ಪರಂಪರೆ ಬಗ್ಗೆ ಬಹಳ ತೀವ್ರವಾದ ವಿರೋಧ ಮಂಗಳೂರಿನಲ್ಲೂ ವ್ಯಕ್ತವಾಗುತ್ತಿತ್ತು ಮತ್ತು ಧಾರವಾಡದಲ್ಲೂ ವ್ಯಕ್ತವಾಗ್ತಾ ಇತ್ತು. ಈ ವಿದ್ವಾಂಸರ ಪರಂಪರೆಗೆ ಆ ಕಡೆ ಕರಾವಳಿಯವರು ಈ ಕಡೆ ಉತ್ತರ ಕರ್ನಾಟಕದಲ್ಲಿ ಬೇಂದ್ರೆಯವರು ಬಹಳ ತಾತ್ವಿಕವಾದ ಪ್ರತಿರೋಧವನ್ನು ಒಡ್ಡಿದ್ದಾರೆ. ಆದರೆ ನಮ್ಮ ಈ ಕಡೆಯ ಚಿಂತಕರು ಬೇಂದ್ರೆಯವರನ್ನು ಆ ರೀತಿಯಾಗಿ ನೋಡದೆ, ಕಾವ್ಯ ಕವಿಗಳು ಮತ್ತು ಭಕ್ತ ಕವಿಗಳ ಈ ಪರಂಪರೆಯನ್ನು ಯಾಕೆ ಮಾಡಿದರು ಮತ್ತು ಭಕ್ತ ಕವಿಗಳಿಗೆ ಯಾಕೆ ಹೆಚ್ಚು ಅಂಕಗಳನ್ನು ಕೊಟ್ರು ಅನ್ನೋ ಬಗ್ಗೆ ನಾವಿನ್ನೂ ಪೂರ್ತಿಯಾಗಿ ಅರ್ಥ ಮಾಡ್ಕೊಂಡಿಲ್ಲ ಅಂತ ಅನ್ಸುತ್ತೆ. ಆ ದೃಷ್ಟಿಯಿಂದ ನೋಡಿದ್ರೆ ಕನಕದಾಸರನ್ನು ನೋಡೋದಕ್ಕೆ ನಮಗೆ ಬೇರೆಯದೇ ಪರಿಕರಗಳು ಸಿಗಬಹುದು ಅಂತ ಅನ್ನಿಸ್ತಾ ಇದೆ.

ಎಲ್ಲಕ್ಕಿಂತ ಮುಖ್ಯವಾಗಿ ನಾನು ಇದುವರೆಗೂ ಕೀರ್ತನೆ ಅನ್ನುವ ಮಾತನ್ನು ಬಳಸಿಲ್ಲ. ಅದು ಸರಿಯಾದ ಬಳಕೆಯಲ್ಲ. ಕನಕದಾಸರ ಮಟ್ಟಿಗೆ ಕೀರ್ತನೆ ಅನ್ನೋ ಪದ – ಯಾಕೆಂದ್ರೆ ಆ ರೀತಿ ರಚನೆಗಳನ್ನು ಮಾಡ್ತೋರು ವಾಗ್ಗೇಯಕಾರರು. ಅವರು ಬೇರೆ ರೀತಿಯವರು. ತ್ಯಾಗರಾಜರ ತರದವರು, ಅನ್ನಮಯ್ಯನ ತರದವರು, ಕ್ಷೇತ್ರಯ್ಯನ ತರದವರು, ಆ ತರದವರೆಲ್ಲ ಸಂಗೀತ ಪರಂಪರೆಗೆ ಅನುಕೂಲಕರವಾಗಿರೋರು. ಆದರೆ ಇವರು ಯಾರೂ ಆ ತರದವರಲ್ಲ. ಕೀರ್ತನೆ ಅನ್ನೋ ಪದ ಇನ್ನೊಂದು ರೀತಿಯಲ್ಲಿ ಕೂಡ ಬಳಸೋದಕ್ಕೆ ಇಷ್ಟ ಪಡೋದಿಲ್ಲ. ಯಾಕೆ ಅನ್ನೋದು ನಿಮಗೆ ಮುಂದೆ ಗೊತ್ತಾಗ್ತದೆ. ಇವುಗಳನ್ನು ಹಾಡುಗಳು ಅಂತ ಇಟ್ಕೊಳ್ಳೋಣ. ಅವರು ಹಾಡುಗಳನ್ನು ಬರೆದಿದ್ದಾರೆ. ಹಾಡೋದಕ್ಕೆ ತಕ್ಕಂತೆ ರಚನೆಗಳನ್ನು ಬರೆದಿದ್ದಾರೆ. ಕನಕದಾಸರು ಲಿಖಿತ ಪರಂಪರೆಯಲ್ಲಿ ಬರೆದಿರ್ತಕ್ಕಂಥ ಅಥವಾ ಬರಹಗಳಲ್ಲಿ ಇಳಿಸಿರಬಹುದಾದ ಕೃತಿಗಳು ಯಾವುದಿವೆ, ಅವುಗಳಲ್ಲಿ ಮಾಡಿರುವ ಛಂದಸ್ಸಿನ ಪ್ರಯೋಗಗಳಿಗೂ (ಉದಾ: ಸಾಂಗತ್ಯದ ಅಂಶ ಲಯದ ಓಟ) ಮತ್ತು ಉಳಿದ ಕೃತಿಗಳಲ್ಲಿ ಕಂಡು ಬರುವ ಷಟ್ಪದಿಯ ಲಯ ಏನಿದೆ, ಮಾತ್ರಾಲಯದ ಛಂದಸ್ಸನ್ನು ಬಳಸಿರುವ ಲಯ ಏನಿದೆ, ಮತ್ತು ಕೀರ್ತನೆಗಳಲ್ಲಿ ಅಥವಾ ಹಾಡುಗಳಲ್ಲಿ ಅವರು ಬಳಸಿರುವ ಲಯಗಳು ಇವುಗಳಲ್ಲಿ ಬಹಳ ದೊಡ್ಡ ಪ್ರಯೋಗಗಳನ್ನು ಮಾಡಿದ ಹಾಗೆ ಕಾಣಿಸ್ತದೆ. ಯಾಕೆ ಅಂತಂದ್ರೆ ಈ ಹಾಡುಗಳಲ್ಲಿ ಅವರು ಕನ್ನಡ ಭಾಷೆಗೆ ಸಹಜವಾಗಿರ್ತಕ್ಕಂಥ ಒಂದು ಮ್ಯೂಸಿಕ್ ಅನ್ನು, ಭಾಷೆಗೆ ಸಹಜವಾದ, ಭಾಷೆಯ ಒಳಗಿರುವ ಲಯಗಾರಿಕೆಯನ್ನು, ನಾದ ಶಕ್ತಿಯನ್ನು ತಿಳಿಯೋದಕ್ಕೆ ಪ್ರಯತ್ನ ಪಟ್ಟಂತೆ ಕಾಣಿಸ್ತದೆ. ಈ ಮಾತುಗಳನ್ನು ಬೇಂದ್ರೆಯವರು ಕೂಡ ಅವರ ಮುಂಡಿಗೆಗಳ ಬಗ್ಗೆ ಬರೆದಂತಹ ಲೇಖನದಲ್ಲಿ ಹೇಳೋಕೆ ಪ್ರಯತ್ನಪಡ್ತಾರೆ. ಅದನ್ನು ಹೆಚ್ಚು ವಿವರಿಸಿಲ್ಲ. ಆದ್ರೆ ಈ ದಿಕ್ಕಿನಲ್ಲಿ ಆಲೋಚನೆ ಮಾಡಿದ್ರೆ, ಕನಕದಾಸರ ಈ ಹಾಡುಗಳ ಬಗೆಗೆ ಅವು ಕೇವಲ ಏನೋ ಒಂದು ವಿಚಾರವನ್ನು ಹೇಳೋಕೆ

ಇವುಗಳನ್ನು ಬಳಸ್ತಾ ಇದ್ರು ಅಂತ ಹೇಳೋದಕ್ಕಿಂತ ಭಾಷೆಯ ಲಯಗಾರಿಕೆಯನ್ನು ಅದು ಕೇವಲ ಅಲಂಕಾರಿಕವಾದದ್ದಲ್ಲ. ಭಾಷೆಯಲ್ಲೇ ಇರುವ ಈ ನಾದಮಯತೆಯನ್ನು ಲಯಗಾರಿಕೆಯನ್ನು ಹಿಡಿಯೋ ಪ್ರಯತ್ನವನ್ನು, ತಿಳಿಯೋ ಪ್ರಯತ್ನವನ್ನು ಮಾಡಿರುವ ಸೂಚನೆಗಳು ನಮಗೆ ಕಾಣಿಸ್ತವೆ ಅಂತ ಅನ್ನೋ ಮಾತನ್ನ ಬೇಂದ್ರೆಯವರು ಹೇಳ್ತಾರೆ. ಆ ದಿಕ್ಕಿನಲ್ಲಿ ಕನಕದಾಸರ ಈ ಹಾಡುಗಳನ್ನು ನಾವು ಮತ್ತೊಮ್ಮೆ ನೋಡಬೇಕಾದ ಪ್ರಸಂಗ ಇದೆ ಅಂತ ಕಾಣಿಸುತ್ತೆ.

ಎರಡನೇದು, ಅವರ ಭಕ್ತಿ ಪಂಥದ ಬಗೆಗೆ ಕನ್ನಡದಲ್ಲಿ ಮತ್ತು ಭಾರತದಲ್ಲೇನೆ ಎರಡು ಬಗೆಯ ಚಿಂತನೆಗಳು ಕಂಡು ಬಂದಿವೆ. ಎರಡು ಕೂಡ ಬಹಳ ವಿಚಿತ್ರ ಅಂದ್ರೆ ಎಡಪಂಥೀಯ ಚಿಂತನೆಗಳಿಂದಲೇ ರೂಪುಗೊಂಡಿರ್‍ತಕ್ಕಂಥವು. ಒಂದು ಬಗೆಯ ಎಡಪಂಥೀಯ ಚಿಂತನೆ ಒಂದು ವಿಧಿ ವಾದವನ್ನು ನಂಬಿರುವ ಚಿಂತನೆಗಳಿಂದ ಬಂದಿರ್‍ತಕ್ಕಂಥಾದ್ದು. ಅವರು ಪ್ರಕಾರ ದಾಸಪಂಥದಲ್ಲಿ ಮಂಡನೆಯಾದ, ಭಕ್ತಿ ಪಂಥದ ಕವಿಗಳು ಮಂಡಿಸುತ್ತಾ ಇರುವ ಚಿಂತನೆಗಳ ಕ್ರಮಗಳೆಲ್ಲವೂ ಕೂಡ ಜೀವವಿರೋಧಿ ಯಾಗಿರ್‍ತಕ್ಕಂಥವು ಅದನ್ನ ನಿರಾಕರಿಸುವ, ತೊಡಗಿಕೊಳ್ಳುವಿಕೆಗೆ ವಿರೋಧವನ್ನು ವ್ಯಕ್ತಪಡಿಸುವ, ವೈರಾಗ್ಯವನ್ನು ಬೋಧಿಸುವ ನೆಲೆಯಲ್ಲಿ ಕೆಲಸ ಮಾಡ್ತಾ ಇವೆ. ಅದರಿಂದ ಅವು ಜನರಿಗೆ ಬೇಕಾದ ನೆಲೆಯಲ್ಲಿಲ್ಲ. ಜನರಿಗೆ ವಿರೋಧಿಯಾದ ನೆಲೆಯಲ್ಲಿವೆ. ಕನ್ನಡದಲ್ಲೂ ಕೂಡ ಈ ಬಗೆಯಲ್ಲಿ ತೀವ್ರವಾದ ವಾದಗಳನ್ನು ಮಂಡಿಸುವಂತಹ ಚಿಂತನೆಗಳಿದ್ದಾವೆ. ಭಜನೆ ಮಾಡ್ತಾನೆ ಅಂತ ಯಾರಾದ್ರೂ ಹೇಳಿದ್ರೆ, ಅವನಿಗೆ ಬೇರೆ ಕೆಲಸ ಇಲ್ದೆ ಇರೋದರಿಂದ ಹಾಗೆ ಏನು ಹೇಳಿದಾನೆ ಮಾಡ್ತಾ ಇದಾನೆ ಅಂತ. ವಿಮರ್ಶಕರು ಕೂಡ ಈ ರೀತಿ ಮಾತಾಡ್ತಾರೆ. ಏನಯ್ಯ ಆ ಕನಕದಾಸ, ಪುರಂದರದಾಸ ಏನು ಹೇಳಿದಾನೆ ಮಹಾ ಅನ್ನೋ ಧಾಟಿ.

ಇನ್ನೊಂದು ಎಡಪಂಥೀಯ ಚಿಂತನೆ ಬೇರೊಂದು ರೀತಿಯಲ್ಲಿದೆ. ಇವರನ್ನು ಎಡಪಂಥೀಯ ಚಿಂತನೆಗಳಲ್ಲಿ ಪರಿಷ್ಕರಣವಾದಿಗಳು ಅಂತನ್ನಬೇಕೋ, ಪುನರುತ್ಥಾನವಾದಿಗಳು ಅಂತನ್ನಬೇಕೋ, ಏನನ್ನಬೇಕೋ ನಂಗೆ ಗೊತ್ತಿಲ್ಲ ಅವರ ಪ್ರಕಾರ ಭಕ್ತಿ ಪಂಥ ಅಂತ ಅನ್ನೋದು, ಎರಡನೇ ಸಹಸ್ರಮಾನದಲ್ಲಿ ರಾಜತ್ವಕ್ಕೆ ಅಥವಾ ಊಳಿಗಮಾನ್ಯ ಪದ್ಧತಿಗೆ ಪ್ರತಿರೋಧವನ್ನು ಪ್ರತಿಭಟನೆಯನ್ನು ಸೂಚಿಸಿದ ಪರಂಪರೆ. ಶಕ್ತಿ ಕೇಂದ್ರಗಳನ್ನು ನಿರಾಕರಿಸಿ ಕನ್ನಡ ಭಕ್ತಿ ಪಂಥವನ್ನು ಈ ಚೌಕಟ್ಟಿನಲ್ಲಿ ವಿವರಿಸುವ ಪ್ರಯತ್ನಗಳು ಕಡಿಮೆ ನಡೆದಿವೆ. ಆದರೆ ಭಾರತದ ಇಡೀ ಭಕ್ತಿ ಪರಂಪರೆಯನ್ನು ಅದ್ರಲ್ಲೂ ಕೂಡ ಉತ್ತರ ಭಾರತದ ಹಿಂದಿ ಪ್ರದೇಶದಲ್ಲಿ ಬಂದ ಭಕ್ತಿ ಪಂಥದ ಚಿಂತಕರನ್ನು ಈ ರೀತಿಯಲ್ಲಿ ವಿವರಿಸೋ ಪ್ರಯತ್ನಗಳು ಬಹಳವಾಗಿ ನಡೆದಿವೆ. ತಮಿಳುನಾಡಿನ ಭಕ್ತಿಪಂಥ, ಕರ್ನಾಟಕದ ಹಾಗೂ ಆಂಧ್ರದ ಭಕ್ತಿ ಪಂಥದ ಚಿಂತಕರನ್ನು ಈ ಚೌಕಟ್ಟಿನಲ್ಲಿ ಅಲ್ಲಲ್ಲಿ ವಿವರಿಸುವ ಪ್ರಯತ್ನಗಳಿವೆಯೇ ಹೊರತು ಅವುಗಳು ಎಷ್ಟರಮಟ್ಟಿಗೆ ಈ ಚೌಕಟ್ಟಿಗೆ ಹೊಂದಿಕೊಳ್ಳುವ ಚಿಂತನೆಗಳು-ಅವು ವಚನಕಾರರು ಮತ್ತು ಕನಕದಾಸರಂತಹ ದಾಸ ಪರಂಪರೆಯ ಚಿಂತನೆಗಳನ್ನು ಎಷ್ಟರಮಟ್ಟಿಗೆ ಆ ಚೌಕಟ್ಟಿನಲ್ಲಿಟ್ಟು ನೋಡಬಹುದು ಎನ್ನುವ ಬಗ್ಗೆ ಬಹಳ ಕಡಿಮೆ

ಪ್ರಮಾಣದಲ್ಲಿ ಚಿಂತನೆಗಳು ನಡೆದಿವೆ ಅಂತ ಕಾಣುತ್ತೆ. ಅಂದ್ರೆ ಅವುಗಳ ಉಗಮ, ಹುಟ್ಟಿನಲ್ಲೇ ಜೀವವಿರೋಧಿ ಅಲ್ಲ-ಅವು ಒಂದು ರೀತಿ ಅಧಿಕಾರ ವಿರೋಧಿ, ಅಧಿಕಾರ ಕೇಂದ್ರಗಳನ್ನು ಪ್ರತಿರೋಧಿಸುವ, ಪ್ರತಿಭಟಿಸುವ, ಅದಕ್ಕೆ ಎದುರಾಳಿಯಾಗಿ ನಿಲ್ಲುವ ಕೆಲಸಗಳನ್ನು ಮಾಡಿಕೊಂಡಿವೆ. ದಾಸಪಂಥದವರು ಅಧಿಕಾರ ಕೇಂದ್ರವನ್ನು ಒಪ್ತಾರೆ ಆದರೆ ರಾಜನನ್ನ, ಪಾಳೇಗಾರನನ್ನ ನಿರಾಕರಿಸುತ್ತಾರೆ. ಸೈನ್ಯವನ್ನು ಒತ್ತಾಯಗಳನ್ನು ನಿರಾಕರಿಸುತ್ತಾರೆ. ಬಹಳ ವಿಚಿತ್ರ ಅಂದ್ರೆ ಕನ್ನಡ ನಾಡಿನಲ್ಲಿ ಈ ಬಗೆಯ ಚಿಂತನೆಗಳು ಕೂಡ ಬಹಳ ಮಿಂಚಿನ ತರದಲ್ಲಿ ಬಂದು ಬೇರೆ ಬೇರೆ ರೀತಿಯಲ್ಲಿ ಮಾಯವಾಗಿ ಹೋಗಿ ಬಿಟ್ಟಿವೆ. 1960ರ ಆಸುಪಾಸಿನಲ್ಲಿ ಪ್ರಜಾವಾಣಿಯ ಒಂದು ಲೇಖನದಲ್ಲಿ ಇತಿಹಾಸಕಾರ ಶ್ರೀಕಂಠ ಶಾಸ್ತ್ರಿಗಳು ಒಂದು ಮಾತು ಬರೆದರು. ವಿಜಯನಗರದ ಪತನಕ್ಕೆ ಪುರಂದರದಾಸರು ಕಾರಣರು ಅಂತ. ಅವಾಗ ಇದ್ದಕ್ಕಿದ್ದಂತೆ ದೊಡ್ಡ ಗಲಾಟೆ ಆಯ್ತು-ಅಂದ್ರೆ ವಾಚಕರ ವಾಣಿಯಲ್ಲಿ-ಅಲ್ಲಿ ಇಲ್ಲಿ. ವಿಜಯನಗರ ಪತನಕ್ಕೆ ಕಾರಣರಾದವರು ಅವರು ಅಂದರೆ ವಿಜಾಪುರದ ಸುಲ್ತಾನರೊಡನೆ ಕೈಜೋಡಿಸಿದರು ಅಂತ ಅಲ್ಲ. ಅಂದ್ರೆ ಅವರು ರೂಪಿಸಿದ ಚಿಂತನಾ ಕ್ರಮಗಳೇ ಯಾವ ರೂಪದಲ್ಲಿ ಇದ್ದವು ಅಂದ್ರೆ ಸಾಮ್ರಾಜ್ಯ ಸ್ಥಾಪನೆಯ ನಿಲುವಿಗೇನೆ ವಿರುದ್ಧವಾಗಿದ್ದವು ಅಂತ. ಆದ್ದರಿಂದಾನೆ ಅವರು ಪರೋಕ್ಷವಾಗಿ ಸಾಮ್ರಾಜ್ಯ ಪತನಕ್ಕೆ ಕಾರಣರಾದರು ಅಂತ. ಇದು ಕೋಸಾಂಬಿಯವರಂಥ ಚಿಂತಕರನ್ನು ಓದಿದರೆ ಅಥವಾ ರೋಮಿಲಾ ಥಾಪರ್ ಅಂತವರನ್ನು ಓದಿದರೆ ಕರ್ನಾಟಕದ ಬಗೆಗಿನ ಚಿಂತನೆಗಳು ಸಿಗದಿದ್ದರೂ ಒಟ್ಟಾರೆಯಾಗಿ ಭಕ್ತಿ ಪಂಥದ ಬಗ್ಗೆ ಇಂಥ ಚಿಂತನೆಗಳು ಸಿಗುತ್ತವೆ.

ಕರ್ನಾಟಕದಲ್ಲಿ ಯಾಕೋ ಈ ಚಿಂತನೆಗಳು ದಟ್ಟವಾಗಿ ಬೆಳೆದಂತಿಲ್ಲ. ನಾನು ಕೊನೆ ಹಂತಕ್ಕೆ ಬರ್ತಾ ಇದೀನಿ. ಅದು ಏನು ಅಂಥ ಅಂದ್ರೆ ಯಾವ ರೀತಿಯಲ್ಲಿ ಕನಕದಾಸರ ಹಾಡುಗಳು ಇತರ ದಾಸರ ಹಾಡುಗಳಿಗಿಂತ ಬೇರೆಯಾಗಿವೆ ಎಂಬುದು. ಎರಡು ಬಗೆಯ ರಚನೆಗಳನ್ನು ನಾವು ಕನ್ನಡದಲ್ಲಿ ನೋಡಬಹುದು. ಒಂದು **ಕಂಡದ್ದನ್ನು ಹೇಳುವ** ರಚನೆಗಳು, ಇನ್ನೊಂದು **ಕಾಣುವ ದಾರಿಗಳನ್ನು** ಹೇಳುವ ರಚನೆಗಳು. ಕಾಣುವ ದಾರಿಗಳನ್ನು ಹೇಳಿದಾಗ ಕಂಡುಕೊಳ್ಳುವ ಜವಾಬ್ದಾರಿ ಹೇಳುವವರಿಗೂ ಇರ್ತದೆ. ಅದನ್ನು ಕೇಳಿ ಅವರ ಜೊತೆಯಲ್ಲಿ ಹೋಗುವವರಿಗೂ ಇರ್ತದೆ. ಅಂದ್ರೆ ಒಂದು ರೀತಿಯಲ್ಲಿ ಸಹಯಾತ್ರಿಕರ ಥರ. ನಾನು ಕನಕದಾಸರನ್ನು ಎರಡನೆ ಬಗೆಯ ಹಾಡುಗಾರರು ಅಂತ ಹೇಳೋಕೆ ಪ್ರಯತ್ನ ಪಡ್ತೀನಿ. ಮೊದಲನೆ ಬಗೆಯ ಹಾಡುಗಾರರು ಸ್ವಲ್ಪ ಮಟ್ಟಿಗೆ ತಾವು ತಿಳಿದು ಕೊಂಡದ್ದನ್ನು ಜನ ಬದುಕಬೇಕು ಅಂತ ಮರಳಿ ಅವರಿಗೆ ತಿಳಿಹೇಳ್ತಾ ಇರ್ತಕ್ಕಂಥವರು. ಇದು ಸತ್ಯ. ಈ ಹಾದಿಯಲ್ಲಿ ನೀವು ಬದುಕಿದರೆ ನಿಮ್ಮ ಜೀವನ ಉದ್ಧಾರ ಆಗ್ತದೆ. ನಾನು ಹೇಳ್ತಾ ಇರೋದರ ಬಗ್ಗೆ ನನಗೆ ಸಂದೇಹಗಳಿಲ್ಲ. ಈ ತರದ್ದಕ್ಕೆ ಕನ್ನಡದಲ್ಲಿ ಉದಾಹರಣೆಗೆ ಮಂಕುತಿಮ್ಮನ ಕಗ್ಗ. ಅಲ್ಲಿ ಪ್ರಶ್ನೆಗಳಿಲ್ಲ ತೀರ್ಮಾನಗಳಿವೆ. 'ಬದುಕು ಜಟಕಾ ಬಂಡಿ ವಿಧಿಯದರ ಸಾಹೇಬ' ಅಂತ ಹೇಳಿದರೆ, ಪದ ಕುಸಿಯೆ ನೆಲವಿಹದು, ಅವನು ಯಾವ ಕಡೆ ಹೋಗು ಅಂತಾನೋ ಆ ಕಡೆ ಹೋಗಬಹುದು. ನಾವು ಹೋಗಲ್ಲ ಅಂತೇಳಿದ್ರೆ ನೆಲದ ಮೇಲೆ ಬಿದ್ದು ಬಿಡ್ತೀವಿ. ಆದ್ದರಿಂದ ಆ ಕಡೆ ಹೋಗ್ಬೇಕು. ಇಂಥಾ ನೂರಾರು ಉದಾಹರಣೆಗಳಿವೆ. ಹಿಂದೆ

ಡಿಬೇಟ್‌ಗಳಿಗೆ ಹೋಗೋರೆಲ್ಲ ಬಹಳ ಭಯ ಭಕ್ತಿಯಿಂದ ಓದ್ತಾ ಇದ್ದ ಪುಸ್ತಕ ಯಾವುದು ಅಂದ್ರೆ ಮಂಕುತಿಮ್ಮನ ಕಗ್ಗ. ಮಂಕುತಿಮ್ಮನ ಕಗ್ಗವನ್ನು ಯಾರು ಹೇಳ್ತಿದ್ರೋ ಅವರಿಗೇ ಬಹುಮಾನಗಳು ಬರ್ತಾ ಇದ್ವು ಯಾಕೆಂದ್ರೆ ಅದರಲ್ಲಿ ಸಂದೇಹಗಳು ಇರ್ತಾ ಇರ್ಲಿಲ್ಲ. ನಮ್ಮ ದಾಸ ಪರಂಪರೆಯಲ್ಲಿರುವ ಹಾಡುಗಳಲ್ಲೂ ಈ ರೀತಿಯ ತೀರ್ಮಾನಗಳು ರುತ್ತವೆ. ಕನಕದಾಸರ ಹಾಡುಗಳಲ್ಲಿ ಈ ಬಗೆಯ ತೀರ್ಮಾನಗಳಿಲ್ಲ. "ಎಲ್ಲರೂ ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ" ಅನ್ನೋದು ತೀರ್ಮಾನದ ತರ ಕಾಣುತ್ತೆ. ತೀರ್ಮಾನ ಅಲ್ಲ ಅದು. ಆದ್ರೆ ಮುಂದಕ್ಕೆ ಅವರ ರಚನೆಗಳನ್ನು - "ತಲ್ಲಣಿಸದಿರು ಕಂಡ್ಯ ತಾಳು ಮನವೆ" ಎಲ್ಲರನು ಸಲಹುವನು ಇದಕ್ಕೆ ಸಂಶಯವಿಲ್ಲ" ತೀರ್ಮಾನದ ತರ ಕಾಣುತ್ತೆ. ಆದರೆ ಇಡೀ ರಚನೆ ಯಾವುದನ್ನು ನಮ್ಮ ಎದುರು ಇಡುತ್ತದೆ ಅಂದ್ರೆ ಎರಡು ಪಕ್ಷಗಳನ್ನು ಕಟ್ಟುತ್ತೆ. ಒಂದು ಕಾಯುವಾತ, ಇನ್ನೊಂದು ಆರ್ತತೆಯಿಂದ ಮೊರೆಯಿಡುವಾತ. ದೈವ ಮಾನವ ಸಂಬಂಧದಲ್ಲಿ ದೈವ ಅಂತಕ್ಕಂಥಾದ್ದು ಕಾಯೋದು. ಇನ್ನೊಂದು ಮನುಷ್ಯ ಆರ್ತನಾದದಲ್ಲಿ ಮೊರೆಯಿಡೋದು. ರಿಯಲ್ ಯಾವುದು ಅಂತ ಅಂದ್ರೆ ಕನಕದಾಸರ ಪ್ರಕಾರ ಆರ್ತನಾದವೇ. ಮೊರೆ ಇಡೋದೇನೆ ನಿಜ. ಮೊರೆ ಇಡಬೇಕಾಗಿ ಬಂದಿರುವ ಮನುಷ್ಯನ ಪ್ರಿಡಿಕೆಮೆಂಟ್ ಇದೆಯಲ್ಲ, ಅಸ್ತಿತ್ವದ ಪ್ರಶ್ನೆಗಳಿವೆಯಲ್ಲ ಅವು ನಿಜ. ಕಾಯ್ತಾನೆ ಅನ್ನುವ ನಂಬಿಕೆ ನಿಮ್ಮನ್ನು ಕಾಯ್ತಾ ಇರಬಹುದು. ನಿಮ್ಮ ಜೊತೆಗಿರಬಹುದು. ಆದ್ರೆ ಕಾಯ್ತಾನೆ ಅನ್ನುವ ನಂಬಿಕೆಯಿಂದ ನೀವು ಆರ್ತನಾದವನ್ನು ಮಾಡ್ದೇ ಇರೋಕಾಗೋದಿಲ್ಲ. ಸಂಕಷ್ಟಗಳನ್ನು ಅನುಭವಿಸ್ದೇ ಇರೋಕಾಗಲ್ಲ. ಏಕೆ ನಿರ್ದಯನಾದೆಯೋ ಹರಿಯೇ ಅಂತ ಪ್ರಶ್ನೆ ಹಾಕಿದಾಗ ಅವರ್ನೆಲ್ಲ ಕಾದೆ ನೀನು, ಅವ್ನ್ಯಾರೋ ಅಜಾಮಿಳನನ್ನ, ವಿಭೀಷಣನನ್ನು ಕಾಯ್ದೆ, ಅವ್ರೇನ್ ದೊಡ್ಡಪ್ಪ ಚಿಕ್ಕಪ್ಪನ ಮಕ್ಕಳಾ, ನಾನೇನೂ ಅಲ್ವಾ ನಿನಗೆ ಅವರೆಲ್ಲಾ ಹಿತರೇನೋ, ನಾನಿನಗೆ ಅಹಿತನೋ, ಅವ್ರೆಲ್ಲಾರ್ನೂ ಕಾಯ್ದುಬಿಟ್ಟೆ ಆದ್ರೆ ನನ್ನನೇಕೆ ಕಾಯೋದಿಲ್ಲ ಅನ್ನೋದು! ನನ್ನನ್ಯಾಕೆ ಕಾಯ್ತಾಯಿಲ್ಲ ಅಂತ ಅನ್ನೋದಿದ್ಯಲ್ಲ ಅದು ಮನುಷ್ಯನ ಪ್ರಿಡಿಕಮೆಂಟ್! ಕಾಯ್ತಾನೆ ಅನ್ನೋ ನಂಬಿಕೆಯಿಂದ- ಇದು ಸ್ತೋತ್ರದ ಭಾವ.

ಕನ್ನಡದಲ್ಲಿ ಈ ಬಗೆಯ ಸ್ತೋತ್ರದ ಭಾವ ಇರುವ ರಚನೆಗಳು ಬಹಳ ಇವೆ. ಸ್ತೋತ್ರದ ಭಾವದಲ್ಲಿ ಆರ್ತತೆ ಇರೋದಿಲ್ಲ; ನಂಬಿಕೆ ತೀವ್ರವಾಗಿರುತ್ತದೆ. ರಕ್ಷಿಸು ನಮ್ಮ ಅನವರತ ಅಂತ ಅವರು ಬರೆದಿರುವ ಷಟ್ಪದಿಯನ್ನು ಎಂಡ್ ಮಾಡಿರುವ ರೀತಿಯನ್ನು ನೋಡಿದ್ರೆ ಎರಡು ಬಗೆಯ ರಚನೆಗಳು ಅವುಗಳೊಳಗಿವೆ. ಒಂದು ಬಗೆಯ ರಚನೆ ಅವು ಸ್ತೋತ್ರದ ಮಾದರಿಯಲ್ಲಿವೆ. ಇನ್ನೊಂದು ಬಗೆಯ ರಚನೆಗಳಲ್ಲಿ ಸ್ತೋತ್ರ ಇಲ್ಲ. ಅವುಗಳನ್ನು ಎಚ್ಚರಿಕೆಯಿಂದ ಗಮನಿಸಿದರೆ ಈ ರೀತಿಯ ರಿಯಾಲಿಟಿ ಯಾವುದು? ಒಂದು ರಕ್ಷಿಸುವ ಅಥವಾ ಪೊರೆಯುವಾತ, ಇದಾನೆ ಅನ್ನುವ ನಂಬಿಕೆಯಲ್ಲಿ ಪ್ರಪತ್ತಿಯನ್ನು, ವಿಶಿಷ್ಟಾದ್ವೈತ ಹೇಳುವ ನಂಬಿಕೆಯನ್ನು ಖಂಡಿತ ಪ್ರಪೋಸ್ ಮಾಡ್ತಾ ಇಲ್ಲ ಕನಕದಾಸರು. ಪ್ರಪತ್ತಿ ಮಾರ್ಗದಲ್ಲಿ ಪು.ತಿ.ನ ಅವ್ರನ್ನ ಓದ್ತಾ ಇದ್ರೆ ಈ ರೀತಿಯ ನಂಬಿಕೆಯ ಜಗತ್ತು ಯಾವ ರೀತಿ ಇರ್ತದೆ ಅಂತ ಅನ್ನೋದು ಬಹಳ ಸ್ಪಷ್ಟ ಗೊತ್ತಾಗುತ್ತೆ. ಅದರರ್ಥ ನಾನು ಪು.ತಿ.ನ ಅವರನ್ನು ಡಿಗ್ರೇಡ್ ಮಾಡ್ತಾ ಇಲ್ಲ. ಅವರನ್ನು ಅರ್ಥ

ಮಾಡ್ಕೋಳೊ ಕ್ರಮಾನೇ ಬೇರೆ ಇದೆ. ಅದು ಬೇರೆ ಮಾತು. ಈ ದಾಸ ಪರಂಪರೆಯ ರಚನೆಗಳು ಕೀರ್ತನೆಗಳು ಅಥವಾ ಹಾಡುಗಳು ಜನರಲ್ಲಿ ಒಂದು ವೈರಾಗ್ಯವನ್ನು ಅಥವಾ ದೈವದಲ್ಲಿ ನಂಬಿಕೆಯನ್ನು ಬೆಳೆಸಿಕೊಂಡು ತಮ್ಮ ಕ್ರಿಯಾಶೀಲತೆಯನ್ನು ಕಳೆದುಕೊಳ್ಳಬೇಕು ಅಂತ ಒತ್ತಾಯ ಮಾಡ್ತವೆ ಅಂತ ಚಿಂತನೆಗಳಿವೆ ಅದನ್ನು ನಾನು ಒಪ್ಪೋದಿಲ್ಲ. ಹಾಗೆ ಒಪ್ಪಿದರೆ ನಾವು ಕನಕದಾಸರ ಹಾಡುಗಳನ್ನು ತಪ್ಪಾಗಿ ಓದ್ತಿದೀವಿ ಅಂತ. ಅದಕ್ಕೋಸ್ಕರವಾಗಿಯೇ ನಳಚರಿತ್ರೆಯನ್ನು ಬರೆಯುವಾಗಾಗ್ಲಿ, ಮೋಹನ ತರಂಗಿಣಿಯನ್ನು ಬರೆಯುವಾಗಾಗ್ಲಿ ಕನಕದಾಸರು ಬೇರೆ ಬೇರೆಯವರಾಗಿದ್ರು ಅಂತ ನನಗನ್ನಿಸೋದಿಲ್ಲ. ಅದು ಒಂದೇ ಒಂದು ವ್ಯಕ್ತಿತ್ವದ ಬೇರೆ ಬೇರೆ ಭಾಗಗಳಾಗಿ ನನಗೆ ಕಾಣ್ತುತ್ತೆ. ಇದು ನಾನು ನಿಮಗೆ ಪ್ರಪೋಸ್ ಮಾಡ್ತಾ ಇರುವ ಥೀಸಿಸ್. ಇದರ ಬಗ್ಗೆ ನೀವು ಚರ್ಚೆ ಮಾಡಬಹುದು.

ಈ ಮೂರು ದಿಕ್ಕುಗಳಲ್ಲಿ ಕನಕರನ್ನು ಕ್ಲೈಮ್ ಮಾಡಿರುವ ಪ್ರಯತ್ನಗಳು 21ನೆ ಶತಮಾನದ ಈ ಘಟ್ಟದಲ್ಲಿ ಯಾವ್ಯಾವ ರೀತಿಯಲ್ಲಿ ಮುಂದಕ್ಕೆ ಹೋಗಬಹುದು ಗೊತ್ತಿಲ್ಲ. ಆದ್ರೆ ಮೊದಲ್ನೇದರ ಬಗ್ಗೆ ನನಗೆ ನನ್ನದೇ ಆದ ಸಂದೇಹಗಳಿವೆ. ಎರಡನೆಯದು ಬಹಳ ಅದ್ಭುತವಾದದ್ದು–20ನೇ ಶತಮಾನದಲ್ಲಿ ಆದ್ರೆ ಈಗ ಮಾಧ್ಯಮಗಳ ಭರಾಟೆಯಲ್ಲಿ ಕನಕದಾಸರನ್ನು ಯಾವ್ರೀತಿ ರೀಕ್ಲೇಮ್ ಮಾಡ್ತೀವೋ ನನಗೆ ಗೊತ್ತಿಲ್ಲ. ಮೂರ್ನೇದರ ಬಗ್ಗೆ ನಮಗೆ ಹೆಚ್ಚು ಅವಕಾಶಗಳಿವೆ. ಅದ್ರಿಂದ ಈ ಮೂರರಲ್ಲಿ ಅವುಗಳನ್ನು ಬೇರ್ಪಡ್ಸೋದರ ಜೊತೆಗೆ ಯಾವುದು ನನ್ನ ಆಯ್ಕೆ ಅನ್ನೋದನ್ನು ಪರೋಕ್ಷವಾಗಿ ನಿಮಗೆ ಬದಲಿ ಮಾರ್ಗದಲ್ಲಿ ತಿಳ್ಸಿದೀನಿ. ಇದರ ಬಗ್ಗೆ ಚರ್ಚೆಗೆ ತೆರೆದಿದೆ. ನಮ್ಮ ಬಂಜಗೆರೆ ಮತ್ತು ಚಿಕ್ಕಣ್ಣನವರು ಏನ್ ಹೇಳ್ತಾರೆ ಅನ್ನೋದರ ಮೇಲೆ ಮುಂದಿನ ಮಾತುಗಳಿರ್ತವೆ ನಮಸ್ಕಾರ.

'ದೇಸಿ' ಚಿಂತನೆ ಕುರಿತು

(ಡಾ ಪುರುಷೋತ್ತಮ ಬಿಳಿಮಲೆಯವರ ಬರಹಕ್ಕೆ ಪ್ರತಿಕ್ರಿಯೆ)

ನಿಮ್ಮ ಅಂಕಣ ಬರಹವನ್ನು ಓದಿದೆ. ಮೊದಲ ಓದಿಗೆ ಅಲ್ಲಿನ ವಿವರಗಳು ನಿಮ್ಮ ಮಾತಿಗೆ ಒಪ್ಪಿಗೆ ನೀಡಲು ಒತ್ತಾಯಿಸುತ್ತವೆ. ಈಚೆಗೆ ಕನ್ನಡದಲ್ಲಿ ನಡೆಯುತ್ತಿರುವ ಚರ್ಚೆಯ ಜತೆ ಹೆಜ್ಜೆ ಹಾಕುವ ನಿಮ್ಮ ಈ ಬರಹವನ್ನು ಓದಿದ ಮೇಲೆ ಅನಿಸಿದ ಕೆಲವು ಮಾತುಗಳನ್ನು ಇಲ್ಲಿ ಬರೆದಿದ್ದೇನೆ.

ಕನ್ನಡವೆಂಬುದು ಕನ್ನಡತನ ಎಂಬುದು ತಿರುಳೆಂದು ಏಕೆ ತಿಳಿಯಬೇಕು? ಅದು ಬಗೆ, ಇಲ್ಲವೇ ಬಗೆಯುವ ಪರಿ. ಹಾಗಾಗಿ ನಿರುಳ್ಳಿಯನ್ನು ಸುಲಿಯುತ್ತ ಹೋದಂತೆ ಏನೂ ಉಳಿಯುವುದಿಲ್ಲ ಎಂಬುದು ಹೇಗೋ ಹಾಗೇ ಕನ್ನಡ ಬದುಕಿನಲ್ಲಿ **'ಅನ್ಯ'**ವಾದುದನ್ನು ಹೊರಗಿಡುತ್ತ ಹೋದಂತೆ ಏನೂ ಉಳಿಯುವುದಿಲ್ಲ ಎನ್ನುವ ನಿಮ್ಮ ಅನಿಸಿಕೆ ಕನ್ನಡವೆಂಬ ತಿರುಳನ್ನು ಹುಡುಕುವವರಿಗೆ ದಿಟವೆಂದು ತೋರಬಹುದು. ಆದರೆ ನೀರುಳ್ಳಿ ಸುಲಿಯುವಾಗ ಬರುವ ಕಂಪು ಮತ್ತು ಕಣ್ಣೀರು ದಿಟವಲ್ಲವೇ? ಅದೆ ಅದರ ಬಗೆಯಲ್ಲವೇ?

ಒಂದು ವೇಳೆ ಕನ್ನಡ ಬದುಕು ಹೊರಗಿನಿಂದ(ಹಾಗೆಂದು ತಿಳಿಯೋಣ) ಬಂದುದರಿಂದಲೇ ಕಟ್ಟಿದ್ದು ಎಂದು ತಿಳಿಯುವುದಾದರೆ ನನಗೆ ಅಂತಹ ಕನ್ನಡ ಬದುಕು ಕಾನೂರು ಹೆಗ್ಗಡತಿಯ ವಾಸುವಿನ ಚೀಲದಂತೆ ತೋರುತ್ತದೆ. ಅಲ್ಲಿ ಹತ್ತಾರು ಕೂಡಿ ಹಾಕಿದ ಸರಕುಗಳಿವೆ. ಗೋಲಿ, ಗಜ್ಜುಗ, ಹಣ್ಣು, ಹಕ್ಕಿ ಗರಿ, ಬಳಪ, ಪೆನ್ಸಿಲ್, ಚಾಟರ್ ಬಿಲ್ಲು ಹೀಗೆ ಒಂದರೊಡನೊಂದು ಸೇರದ, ಬೆರೆಯದ ಸರಕುಗಳು ಅವು. ಮಾಸಿವೆ, ಹಳತಾಗಿವೆ. ಕನ್ನಡ ಬದುಕು ಹೀಗೆ ಇದೆಯೆಂದು ತಿಳಿಯೋಣವೇ? ಪಡೆದದ್ದನ್ನು ತನ್ನದನ್ನಾಗಿ ಮಾಡಿಕೊಳ್ಳುವ ಬಗೆಯೊಂದು ಇದೆಯಲ್ಲವೇ? ಹಾಗಿಲ್ಲದೇ ಇದ್ದಲ್ಲಿ **'ಅನ್ಯ'**ವನ್ನು ಪಡೆದ ಎಲ್ಲ ಬದುಕುಗಳು ಈ ನಾಡಿನಲ್ಲಿ ಒಂದೇ ಬಗೆಯಲ್ಲಿ ಇರಬೇಕಿತ್ತು. ಅಲ್ಲದೆ ಪಡೆದುಕೊಂಡದ್ದು ಇಡಿಯಾಗಿ ಕನ್ನಡ ಬದುಕಿನೊಳಗೆ ಇಳಿದಿದೆಯೇ? ಹಾಗಿಲ್ಲದಿದ್ದಲ್ಲಿ ಬಂದದ್ದು ಹರಡುವ ಬಗೆಯನ್ನು ಯಾರು, ಹೇಗೆ ಕಟ್ಟಿಹಾಕಿದರು? ಇದೆಲ್ಲವನ್ನೂ ನೋಡಬೇಕಲ್ಲವೇ?

ದೇಡಿ ಎಂಬುದು ಕೆಲವೊಮ್ಮೆ ತಿರುಳು ಎಂಬ ನೆಲೆಯಲ್ಲಿ ಬಳಕೆಯಾಗುತ್ತದೆ. ಅದನ್ನು ನಾವು ಯಾವಾಗಲೂ **'ಅಲ್ಲದ್ದು'** ಎಂಬ ನೆಲೆಯಲ್ಲೇ ಕಟ್ಟಿಕೊಂಡಿದ್ದೇವೆ.

ಮಾರ್ಗವಲ್ಲದ್ದು ದೇಸಿ ಎನ್ನುತ್ತೇವೆ. ಮಾರ್ಗದ ಚೌಕಟ್ಟಿಗೆ ಸಿಗದುದು ದೇಸಿ ಎನಿಸಿ ಬಿಡುತ್ತದೆ. ಆದರೆ ದೇಸಿ ಎನ್ನುವುದನ್ನು ನಾವು ಇನ್ನೂ ಬಗೆವ ಪರಿ ಎಂಬಂತೆ ನೋಡೇ ಇಲ್ಲ. ದೇಸಿ ಎಂಬ ತಿರುಳನ್ನು ಹುಡುಕಲು ಹೊರಟರೆ ಕೊನೆಗೆ ಏನೂ ದೊರೆಯದೇ ಹೋಗಬಹುದು. ಆದರೆ ಕನ್ನಡದ ನೆಲೆಯನ್ನು, ಕನ್ನಡ ಬದುಕಿನ ಬಗೆವ ಪರಿಯನ್ನು ಹುಡುಕದೇ ಬೇರೆ ದಾರಿಯೇ ಇಲ್ಲ. ತಿಳಿ ಕದಡುವುದೆಂದು ಕೊಳವನ್ನು ಕಲಕದೇ ಇರುವುದು ಹೇಗೆ? ಕೊಳವನ್ನು ಕಲಕದೇ ಹಕ್ಕಿಗಳಿಗೆ ಬೇರೆ ದಾರಿಯೇ ಇಲ್ಲ.

ಡಬ್ಬಿಂಗ್ ಕುರಿತು

ಪ್ರಜಾವಾಣಿಯ ಇಂದಿನ ಸಂಗತದಲ್ಲಿರುವ ಶ್ರೀ ರಘುನಾಥ ಚ ಹ ಅವರ ಬರಹವನ್ನು ಓದಿ ಈ ಮಾತುಗಳನ್ನು ಬರೆಯುತ್ತಿದ್ದೇನೆ. ನನ್ನ ಈ ಮಾತುಗಳು ಕನ್ನಡ ಚಿತ್ರಲೋಕಕ್ಕೆ ಡಬ್ಬಿಂಗ್ ಬೇಕೆ ಬೇಡವೇ ಎನ್ನುವುದನ್ನು ಕುರಿತಾಗಿ ಇಲ್ಲ. ರಘುನಾಥ ಅವರು ಡಬ್ಬಿಂಗ್ ಬೇಡವೆಂದು ಹೇಳಲು ಆಯ್ದುಕೊಂಡ ಒಂದು ತಾತ್ವಿಕ ಚೌಕಟ್ಟನ್ನು ಗಮನಿಸಿ ಈ ಮುಂದಿನ ಮಾತುಗಳಿವೆ. ಡಬ್ಬಿಂಗ್ ಪರವಾಗಿರುವವರು ಎಲ್ಲವೂ ಕನ್ನಡದ ಮೂಲಕವೇ ದೊರಕಬೇಕೆಂದು ಬಯಸುತ್ತಾರೆಂದೂ ಹಾಗೆ ಎಲ್ಲವೂ ಕನ್ನಡಲ್ಲೇ ಒದಗಿ ಬರಬೇಕೆಂದು ಹೇಳುವುದು ಕನ್ನಡಿಗರಿಗೆ ಇರುವ ಅವಕಾಶಗಳನ್ನು ಕಿತ್ತುಕೊಳ್ಳುವ ನೆಲೆಯಲ್ಲಿದೆಯೆಂದು ರಘುನಾಥ ಹೇಳುತ್ತಾರೆ. ಆದರೆ ದಿಟವಾಗಿ ನೋಡಿದರೆ ಇನ್ನೊಂದು ನುಡಿಯಲ್ಲಿರುವ ಚಲನಚಿತ್ರಗಳನ್ನು ನೋಡುತ್ತಿರುವ ಕನ್ನಡಿಗರು ತಮ್ಮ ಕನ್ನಡದ ಮೂಲಕವೇ ಆ ಚಿತ್ರವನ್ನೂ ಅರಿತುಕೊಳ್ಳುತ್ತಿರುತ್ತಾರೆ. ತಮಿಳು ಚಿತ್ರವನ್ನು ನೊಡುವವರು ತಮಿಳನ್ನು ಕಲಿತು ನೋಡುವುದಿಲ್ಲ. ಕೇಳುವುದು ತಮಿಳು ನುಡಿ, ನೋಡುವುದು ತಮಿಳು ಬದುಕು ಆಗಿದ್ದರೂ ನೋಡುವ ಕನ್ನಡಿಗರು ತಮ್ಮ ಕನ್ನಡ ನುಡಿ ಮತ್ತು ಕನ್ನಡ ಬದುಕುಗಳ ಅರಿವಿನ ಮೂಲಕವೇ ಅದನ್ನು ಕಟ್ಟಿಕೊಳ್ಳುತ್ತಿರುತ್ತಾರೆ. ಹಲವಾರು ದಶಕಗಳಿಂದ ತಮಿಳು, ತೆಲುಗು, ಹಿಂದಿ ಇಂಗ್ಲಿಶ್ ಚಲನಚಿತ್ರಗಳನ್ನು ನೊಡುತ್ತಿರುವ ಕನ್ನಡಿಗರು ದಿಟದಲ್ಲಿ ಹೆಚ್ಚು ಎಚ್ಚರದಿಂದ ತಮ್ಮ ಕನ್ನಡ ತಿಳುವಳಿಕೆಗಳನ್ನು ಬಳಸಿಕೊಳ್ಳುತ್ತಿದ್ದಾರೆ. ಒಂದು ನುಡಿಯನ್ನು ಮಾತ್ರ ಬಲ್ಲವರು ಇನ್ನೊಂದು ನುಡಿಯನ್ನು ಮತ್ತು ಆ ನುಡಿಯ ಬದುಕನ್ನು ಅರಿಯಲು ತಮ್ಮ ನುಡಿಯನ್ನೇ ಮೊರೆ ಹೋಗುತ್ತಿರುತ್ತಾರೆ. ಅವರಿಗೆ ಅನುವಾದಿಸುವವರ, ದುಬಾಶಿಗಳ ನೆರವು ಬೇಕಿಲ್ಲ. ಹಾಗೆಯೇ ಒಂದಕ್ಕಿಂತ ಹೆಚ್ಚು ನುಡಿಗಳನ್ನು ಬಲ್ಲ ಕನ್ನಡಿಗರೂ (ಮೊದಲ ನುಡಿ ಕನ್ನಡ ಆಗಿರುವವರು) ಇನ್ನೊಂದು ನುಡಿ ಮತ್ತು ಬದುಕನ್ನು ಕನ್ನಡದ ಮೂಲಕವೇ ಅರಿಯುತ್ತಿರುತ್ತಾರೆ. ಹಾಗಾಗಿ ಎಲ್ಲವೂ ಕನ್ನಡದಲ್ಲೇ ನೆಲೆಗೊಳ್ಳಬೇಕೆಂದು ತಿಳಿಯುವುದು ಹೊಸದೇನೂ ಅಲ್ಲ. ಈಗಾಗಲೇ ಕನ್ನಡಿಗರ ತಿಳುವಳಿಕೆ ಕೆಲಸ ಮಾಡುತ್ತಿರುವ ಬಗೆಯೇ ಹಾಗಿದೆ. ಅಂದರೆ ಎಲ್ಲವೂ ಕನ್ನಡದ ಮೂಲಕವೇ ದಿಟಗೊಳ್ಳಬೇಕೆನ್ನುವುದು ಡಬ್ಬಿಂಗ್ ಪರವಾಗಿರುವವರಿಗೆ ನೆರವಾಗುವ ಮಾತಲ್ಲ. ಅದು ಬೇಡ ಎನ್ನುವವರ ನೆರವಿಗೆ ಬರುವ ತಿಳುವಳಿಕೆಯಾಗಿದೆ.

ಜನರು ಇನ್ನೊಂದು ನುಡಿಯನ್ನು ಮತ್ತು ಅದನ್ನಾಡುವ ಜನರ ಬದುಕನ್ನು

ಅರಿಯಲು ಲಾಗಾಯ್ತಿನಿಂದಲೂ ತಮ್ಮದೇ ಆದ ಬಗೆಯೊಂದನ್ನು ಕಟ್ಟಿಕೊಂಡು ಬಂದಿದ್ದಾರೆ. ಇದು ಒಳಗೊಳ್ಳುವ ಬಗೆ; ಮೂಲದಲ್ಲಿಯೇ ಎಲ್ಲವೂ ಕನ್ನಡದಲ್ಲೇ ಇರಬೇಕೆಂದು ಹೇಳುವುದು ಮತ್ತು ಅದು ಮಾತ್ರ ಕನ್ನಡಿಗರ ನೆಲೆ ಎಂದು ಹೇಳುವುದು ಎಲ್ಲವನ್ನೂ ಹೊರಗಿರಿಸುವ ಬಗೆ. ಅಲ್ಲದೆ ಎಲ್ಲವನ್ನೂ ಕನ್ನಡದಲ್ಲಿ ಕಟ್ಟಿಕೊಟ್ಟರೆ ಮತ್ರ ಕನ್ನಡಿಗರ ಅರಿವಿನ ಅಳವಿಗೆ ಅದು ಒದಗುವುದೇ ಹೊರತು ಬೇರೆ ದಾರಿಯೇ ಇಲ್ಲವೆಂದು ತಿಳಿಯುವುದು ಕನ್ನಡಿಗರು ನೂರಾರು ವರುಶಗಳಿಂದ ಲೋಕವನ್ನು ತಮ್ಮ ಅಳಿವಿಗೆ ತಂದು ಕೊಳ್ಳುತ್ತಿರುವ ರೀತಿಯನ್ನು ಅರಿಯದಿರುವವರ ಮಾತೆಂದು ತೋರುತ್ತದೆ. ಈ ಎಲ್ಲ ಮಾತುಗಳನ್ನೂ ಆಡುಮಾತಿನ ಲೋಕವನ್ನು ಗಮನಿಸಿ ಹೇಳೀದ್ದೇ ಹೊರತು ಬರಹಗಳ ನೆಲೆಯನ್ನಲ್ಲ. ಆ ನಿಟ್ಟಿನಲ್ಲೇ ಬೇರೆಯ ಮಾತುಗಳೇ ಬೇಕಾಗುತ್ತವೆ.

ಆರಂಭ ಕಾಲದ ಕನ್ನಡ ಭಾಷೆ ಮತ್ತು ಲಿಪಿ: ಮರು ಚಿಂತನೆ

(ಡಾ. ಷ. ಶೆಟ್ಟರ್ ಅವರ 'ಹಳಗನ್ನಡ' ಕೃತಿಯ ಓದಿಗೆ ಹಿನ್ನೆಲೆಯಾಗಿ ಈ ಟಿಪ್ಪಣಿ)

ಒಂದು

ಕನ್ನಡ ನುಡಿಯ ಬೆಳವಣಿಗೆಯನ್ನು ಕುರಿತ ಕೆಲವು ನಂಬಿಕೆಗಳು:

1. **ಪೂರ್ವದ ಹಳಗನ್ನಡ ಎಂಬ ಒಂದು ಹಂತ ಇತ್ತು.** ಇದು ಕಳೆದ ಎಪ್ಪತ್ತು ಎಂಬತ್ತು ವರುಶಗಳಿಂದ ನೆಲೆಗೊಂಡಿರುವ ನಂಬಿಕೆ.

ಅ) ಕಿಟೆಲ್ 1903ರ ತನ್ನ ವ್ಯಾಕರಣದಲ್ಲಿ ಕನ್ನಡ ಚಾರಿತ್ರಿಕ ಬೆಳವಣಿಗೆಯನ್ನು ಮೂರು ಹಂತಗಳಲ್ಲಿ ಪರಿಗಣಿಸಿದ್ದನು. ಅದು ಹಳಗನ್ನಡ ಎಂಬ ಬಗೆಯಿಂದ ಶುರು ಆಗುತ್ತದೆ.

ಆ) ಶ್ರೀವಿಜಯನ ಕವಿರಾಜ ಮಾರ್ಗದಲ್ಲಿ **'ಆಗಮಗಳನ್ನು ಅರಿಯದವರು ಪಳಗನ್ನಡವನ್ನು ಪೊಲೆಗೆಡಿಸಿ ನುಡಿಯುತ್ತಿದ್ದಾರೆ** ' ಎಂಬ ಹೇಳಿಕೆಯನ್ನು ಅನುಸರಿಸಿ ಅವನಿಗಿಂತ ಹಿಂದೆ ಒಂದು ಬಗೆಯ ಕನ್ನಡ ಇದ್ದಿರಬೇಕು ಹಾಗೂ ಅದು ಪೂರ್ವದ ಹಳಗನ್ನಡ ಎಂದು ತಿಳಿಯುವುದು ಮೊದಲಾಯಿತು.

ಇ) ಮೊದಲ ಸಹಸ್ರಮಾನದ ಮೊದಮೊದಲ ಶಾಸನಗಳಲ್ಲಿ – ಎಂಟನೆಯ ಶತಮಾನದವರೆಗೆ– ಕಾಣಸಿಗುವ ಕನ್ನಡದಲ್ಲಿ **ಹಳಗನ್ನಡದ ರಚನೆಯ ಕಟ್ಟಲೆಯ ಮೂಲಕ ವಿವರಿಸಲು ಆಗದ ಕೆಲವು ಪ್ರಯೋಗಗಳು** ಇವೆ. ಹಾಗಾಗಿ ಆ ಪ್ರಯೋಗಗಳು ಪೂರ್ವದ ಹಳಗನ್ನಡವನ್ನು ಸೂಚಿಸುತ್ತವೆ ಎಂದು ತಿಳಿಯಲಾಗಿದೆ.

ಈ) ಮೊದಲ ಸಹಸ್ರಮಾನದ (ಅಂದರೆ ಹತ್ತನೆಯ ಶತಮಾನದ ಕೊನೆಯವರೆಗೆ) ಶಾಸನಗಳ ಪದಪಟ್ಟಿಯಲ್ಲಿ ಸರಿಸುಮಾರು 50.000 ಪದಗಳಿವೆ. ಅವುಗಳಲ್ಲಿ ನಾವೀಗ ಪೂರ್ವದ ಹಳಗನ್ನಡದ ರೂಪಗಳು ಎಂದು ಪರಿಗಣಿಸುತ್ತಿರುವ ಪ್ರಯೋಗಗಳ ಸಂಖ್ಯೆ 500 ಕ್ಕೂ ಕಡಿಮೆ ಇವೆ.

ಉ) ಈ ಪ್ರಯೋಗಗಳೂ ಕೂಡ ಗೊತ್ತಾದ ಮಾದರಿಯಲ್ಲಿವೆ.

ದ್ವಿತೀಯಾ ವಿಭಕ್ತಿ ಪ್ರತ್ಯಯ	**–ಆನ್**
ಷಷ್ಠೀ ವಿಭಕ್ತಿ ಪ್ರತ್ಯಯ	**– ಅ**
ತೃತೀಯ ಪುರುಷ ಆಖ್ಯಾತ ಪ್ರತ್ಯಯ	**–ಆನ್/–ಆರ್**

(ಈ ಮೂರೂ ರೂಪಗಳು ಹಳಗನ್ನಡದಲ್ಲಿ ಕ್ರಮವಾಗಿ **–ಅ,–ಅನ್ ಮತ್ತು –ಅನ್/ಆರ್** ಎಂದಿವೆ)

ಸಪ್ತಮೀ ವಿಭಕ್ತಿ ಪ್ರತ್ಯಯ **–ಉಳ್**

ಕ್ರಿಯಾನಾಮ ಸಾಧಕ ಪ್ರತ್ಯಯ **–ಓನ್/ಓರ್**

ಇವೆಲ್ಲದರ ಜೊತೆಗೆ ಸಿಗುವ **ವೆಳೆಯಾದೆ** ಎಂಬ ಒಂದು ನಿಷೇಧ ರೂಪ.

2. ಇಷ್ಟು ವಿವರಗಳಿಂದ ಪೂರ್ವದ ಹಳಗನ್ನಡ ರೂಪ ಎಂಬುದೊಂದು ಇತ್ತು ಎಂದು ಕಲ್ಪಿಸುವುದು ಸರಿಯಾದೀತೇ? ಇಲ್ಲವೇ ಈ ವಿಕಲ್ಪಗಳನ್ನು ವಿವರಿಸಲು ಬೇರೆ ದಾರಿಗಳಿವೆಯೇ ಎಂಬುದನ್ನು ನೋಡೋಣ.

ಈಗ ಹಳಗನ್ನಡ ಎಂದು ನಾವು ವಿವರಿಸುತ್ತಿರುವ ಮತ್ತು ಮುಂದಿನ ವ್ಯಾಕರಣಕಾರರು ಪರಿಗಣಿಸಿರುವ ನಿದರ್ಶನಗಳೆಲ್ಲ ಕವಿರಾಜಮಾರ್ಗ ಮತ್ತು ಆ ಬಳಿಕ ಬಂದ **ಬರಹ ರೂಪ ಕೃತಿಗಳಿಂದ** ಆಯ್ದುದು.

ಆದರೆ ಪೂರ್ವದ ಹಳಗನ್ನಡ ಎಂದು ಪರಿಗಣಿಸುತ್ತಿರುವ ರೂಪಗಳು **ಕಲ್ಬರಹಗಳಲ್ಲಿ** ಕಾಣಸಿಗುವಂತಹವು. ಈ ಪ್ರಯೋಗಗಳಿರುವ ಶಾಸನಗಳ ಭೌಗೋಳಿಕ ಪ್ರಸಾರವನ್ನು ಪರಿಗಣಿಸಿದರೆ ಇವೆಲ್ಲವೂ ಬಹುಮಟ್ಟಿಗೆ ಇಂದಿನ ಕನ್ನಡ ಕನ್ನಡ ನಾಡಿನ ತೆಂಕು ಬಯಲು ಸೀಮೆಗೆ ಸೇರಿವೆ. ಹಾಗೆ ನೋಡಿದರೆ ಮೊದಲ ಸಹಸ್ರಮಾನದ ಎಂಟನೆಯ ಶತಕದವರೆಗಿನ ಕನ್ನಡ ಶಾಸನಗಳೆಲ್ಲ ಕೆಲವು ವಿನಾಯತಿಗಳನ್ನು ಹೊರತು ಪಡಿಸಿದರೆ ಈ ತೆಂಕು ಬಯಲು ಸೀಮೆಯಲ್ಲಿಯೇ ದೊರೆತಿವೆ. ಈ ಅಂಶವನ್ನು ಗಮನದಲ್ಲಿರಿಸೋಣ.

ಕಳೆದ ಶತಮಾನದ ನಡುಭಾಗದಲ್ಲಿ ಚಾಲ್ತಿಯಲ್ಲಿದ್ದ ಚಾರಿತ್ರಿಕ ಭಾಷಾಶಾಸ್ತ್ರದ ತಿಳುವಳಿಕೆಯ ನೆಲೆಯಲ್ಲಿ ನೋಡಿದಾಗ ಒಂದು ಭಾಷೆಯ ಮೂಲ ರೂಪ ಟಿಸಿಲಾಗಿ ಒಡೆದು ಅದರ ಒಳನುಡಿಗಳು ಹುಟ್ಟಿಕೊಳ್ಳುತ್ತವೆ. ಹೀಗಾಗಲೂ ಭೌಗೋಳಿಕ, ಸಾಮಾಜಿಕ, ರಾಜಕೀಯ ಕಾರಣಗಳನ್ನು ಗುರುತಿಸಲಾಗುತ್ತದೆ. ಆದರೆ ಟಿಸಿಲಾಗುವಿಕೆಯು **ಮ್ಯಾಪೆಲ್** ವೃಕ್ಷದ ಮಾದರಿಯಲ್ಲಿದೆ. (ರಿಚರ್ಡ್ ಲೆನೊಯ್ ನ ಸ್ಪೀಕಿಂಗ್ ಟ್ರೀ ಕೃತಿಯ ಹಿಂದಿನ ತಿಳುವಳಿಕೆಯ ವಿವರಣೆ ಮಾಡುವಾಗ ವಿಮರ್ಶಕರು ಈ ಮಾತನ್ನು ಬಳಸುತ್ತಾರೆ.) ಆದರೆ ನುಡಿಯ ಬೆಳವಣಿಗೆಯನ್ನು ಗುರುತಿಸಲು ಇದಕ್ಕಿಂತ **ಆಲದ** ಮರದ ಮಾದರಿ ಹೆಚ್ಚು ಸೂಕ್ತ ಎಂಬ ತಿಳುವಳಿಕೆ ಇದೆ. ಮೊದಲ ಕಾಂಡದಿಂದ ಬಂದ ಟಿಸಿಲುಗಳು ಬಿಳಲುಗಳಾಗಿ ಬೇರುಬಿಟ್ಟು ತಾವೇ ಬೇರೆ ಕಾಂಡಗಳಂತೆ ವರ್ತಿಸ ತೊಡಗುತ್ತವೆ. ಭಾಷೆಗೂ ಒಳನುಡಿಗಳಿಗೂ ಇರುವ ನಂಟನ್ನು ನಾವೀಗ ಈ ಮಾದರಿಯಲ್ಲಿ ಗುರುತಿಸಬೇಕಾಗಿದೆ.

ಕನ್ನಡದ ಒಳನುಡಿಗಳನ್ನು **ಕರಾವಳಿ, ತೆಂಕು ಬಯಲು ಮತ್ತು ಬಡಗ ಬಯಲು** ಎಂದು ಪರಿಗಣಿಸುವುದು ಸರಿಯಾದ ದಾರಿ. ಇವೆಲ್ಲವೂ ಮೊದಲ ಸಹಸ್ರಮಾನದಲ್ಲಿ ಜೊತೆಜೊತೆಯಾಗಿಯೇ ಇದ್ದವು. ಹಾಗಾಗಿ **ನಾವೀಗ ಪೂರ್ವದ ಹಳಗನ್ನಡ** ಎಂದು

ಗುರುತಿಸುವ ಬಗೆಯು ತೆಂಕು ಬಯಲು ಸೀಮೆಯ ಕನ್ನಡ ಒಳನುಡಿಯನ್ನು ಸೂಚಿಸುತ್ತಿದೆ ಎಂದು ತಿಳಿಯುವುದೇ ಸರಿಯಾದುದು. ಈ ಪ್ರಮೇಯವನ್ನು ಸರಿಯೆಂದು ತಿಳಿಯಲು ಇನ್ನೂ ಹಲವಾರು ಉದಾಹರಣೆಗಳನ್ನು ಶಾಸನಗಳ ಬರಹಗಳಿಂದಲೇ ಆಯ್ದುಕೊಡಬಹುದು. ಪದಾದಿಯ ಬಕಾರದ ಬದಲು ವಕಾರ ಬಳಕೆಯಗುವುದು ಇಂತಹ ಒಂದು ಉದಾಹರಣೆ.(ಪದಾದಿಯಲ್ಲಿ ವಕಾರ ಇರಬೇಕಾದಲ್ಲಿ ಬಕಾರ ಬರುವ ಹತ್ತಾರು ಉದಾಹರಣೆಗಳೂ ಸಿಗುತ್ತವೆ; ವಾರಣಾಸಿಗೆ ಬದಲು ಬಾರಣಾಸಿ ಎನ್ನುವುದು) ಇದಲ್ಲದೆ ಪದದ ಮೊದಲ ಉಲಿಕಂತೆಯ ಸ್ವರ ದೀರ್ಘವಾಗಿದ್ದಾಗ ಮುಂದೆ ಸಜಾತೀಯ ದ್ವಿತ್ವ ವ್ಯಂಜನ ಬರುವುದು. ಅದೂ ಅನುನಾಸಿಕದೊಡನೆ. ಉದಾ; **ತೋಟ್ಟ. ತೋಂಟ್ಟ** ಮುಂ

ಇದಕ್ಕೆ ಪೂರಕವಾದ ಅಂಶವೊಂದಿದೆ. ಯಾವುದನ್ನು ಪೂರ್ವದ ಹಳಗನ್ನಡದ ಚಹರೆ ಎನ್ನುತ್ತೇವೆಯೋ ಅದರ ಪಳೆಯುಳಿಕೆಗಳು ಇಂದಿನ ತೆಂಕು ಬಯಲು ಮತ್ತು ಬೆಟ್ಟದ ಕನ್ನಡದ ಒಳನುಡಿಗಳಲ್ಲಿ ಕೇಳ ಸಿಗುತ್ತವೆ.

ಈ ಪ್ರಮೇಯವನ್ನು ಒಪ್ಪಿ ಮುಂದುವರೆದರೆ ಮೂಲಕನ್ನಡ ನುಡಿಯನ್ನು ಪುನಾರಚಿಸುವ ಕೆಲಸಕ್ಕೆ ತೊಡಗಬಹುದು. ಈಗ ನಾವು ತೆಂಕು ನಾಡಿನ ಬೆಟ್ಟಗಳಲ್ಲಿರುವ ಬುಡಕಟ್ಟು ಕನ್ನಡಗಳನ್ನು ಕನ್ನಡದ ಒಳನುಡಿಗಳೆಂದು ತಿಳಿಯುತ್ತಿದ್ದೇವೆ. ಬದಲಿಗೆ ಅವುಗಳನ್ನು ಮೂಲಕನ್ನಡದ ಹಂತಗಳೆಂದು ತಿಳಿದು ಮುಂದುವರೆದರೆ ನಮಗೆ ಕನ್ನಡ ಬೆಳೆದ ದಾರಿಯನ್ನು ಗುರುತಿಸಲು ಹಲವಾರು ಸುಳುವುಗಳು ಸಿಗುತ್ತವೆ. ಬಡಗ ಮತ್ತು ಆಲುಕುರುಂಬ (**ಆಲು** ಕುರುಂಬರ ಹೆಸರಿನಲ್ಲೇ ಇರುವ ಆಲು ಪದವು ನಾವೀಗ ತೆಂಕ ಬಯಲಿನ ಕನ್ನಡದಲ್ಲಿ ನಡೆದಿದೆ ಎನ್ನುತ್ತಿರುವ ಪದಾದಿಯ ಹಕಾರದ ಲೋಪದ ಬಗೆಗೆ ಬೇರೆಯೇ ಸುಳಿವನ್ನು ನೀಡುತ್ತದೆ) ಬುಡಕಟ್ಟುಗಳ ನುಡಿಗಳ ಬಗೆಗೆ ಕನ್ನಡ ಭಾಷಾಶಾಸ್ತ್ರದಲ್ಲಿ ಇರುವ ಗೊಂದಲಗಳನ್ನು ಗಮನಿಸೋಣ. ಬಡಗರು ಕನ್ನಡನಾಡಿನಿಂದ ನಾಲ್ಕು ನೂರು ವರುಶದ ಹಿಂದೆ ವಲಸೆ ಹೋದವರು ಎಂದು ತಿಳಿದಿದ್ದೇವೆ. ಇದು ನಿಜವಿದ್ದರೆ ಕನ್ನಡದಲ್ಲಿ ಇರುವ ಕಾಲಸೂಚಕ ಪ್ರತ್ಯಯ **ಉವ್** ಬಡಗ ಕನ್ನಡದಲ್ಲಿ ಏಕಿಲ್ಲ? ನಾವು ಪೂರ್ವದ ಹಳಗನ್ನಡದ್ದೆಂದು ಗುರುತಿಸಲಾದ ನಿಷೇಧರೂಪ **ವೆಳೆಯಾದೆ** ಎಂಬ ಮಾದರಿಯ ರಚನೆಗಳು ಬಡಗದಲ್ಲಿ ಇಂದಿಗೂ ಇವೆ. ಈ ನುಡಿಯನ್ನು ಆಳವಾಗಿ ಅಧ್ಯಯನ ಮಾಡಿದ ಪೈಲಟ್-ರಾಯ್ಬೂರ್ ಮತ್ತು ಬಾಲಕೃಷ್ಣನ್ ಅವು ಕಂಡುಕೊಂಡಿರುವ ಸಂಗತಿಗಳನ್ನು ನೋಡಿದರೆ ಬಡಗ, ಸೋಲಿಗ,ಜೇನುಕುರುಬರ ನುಡಿಗಳನ್ನು ಬಳಸಿ ಮೂಲ ಕನ್ನಡದ ಚಹರೆಗಳನ್ನು ಕಾಣಲು ದಾರಿಗಳನ್ನು ಕಂಡುಕೊಳ್ಳಬೇಕಿದೆ ಎನ್ನಿಸುತ್ತದೆ.

ಮೊದಮೊದಲ ಕನ್ನಡದ ಬರಹ ಕೃತಿಗಳು ಬಡಗ ಬಯಲಿನಲ್ಲಿ ಹುಟ್ಟಿದವು. ಶ್ರೀವಿಜಯನಾಗಲೀ, ಪಂಪನಾಗಲಿ ತಂತಮ್ಮ ಕಾಳದ ಶಿಷ್ಟ (ತಿರುಳ್ಗನ್ನಡ) ಕನ್ನಡವನ್ನು ತಾವಿದ್ದ ಸೀಮೆಯ ದೂರ ಪಡುವಣದಲ್ಲಿ ಗುರುತಿಸಿದ್ದು ಒಂದು ಸೋಜಿಗವೇ ಸರಿ. ಅದೀಗ ನಮ್ಮ ಚರ್ಚೆ ವಿಷಯವಲ್ಲ.

ಎರಡು

ನಾವೀಗ ಕನ್ನಡ ಬರವಣಿಗೆಯ ಮಾತಿಗೆ ಬರೋಣ. ನಾನು ಲಿಪಿಯ ವಿಕಾಸದ ಮಾತನ್ನು ಹೆಚ್ಚು ಗಮನಿಸುವುದಿಲ್ಲ. ನುಡಿಯುವ ಬಗೆಗೂ ಬರೆಯುವ ಬಗೆಗೂ ನಂಟು ಬೆಳೆದದ್ದನ್ನು ನೋಡೋಣ. ನುಡಿಯುವ ಬಗೆಯಲ್ಲಿ ಬಿಡಿಬಿಡಿ ದನಿಗಳಿದ್ದರೂ ಬರೆಯುವಾಗ ಆ ದನಿಗಳನ್ನು ಹಾಗೆ ಬಿಡಿಬಿಡಿಯಾಗಿ ಬರೆಯುವ ಬಗೆ ಕನ್ನಡದಲ್ಲಿ ನೆಲೆಗೊಂಡಿಲ್ಲ. ವ್ಯಂಜನಗಳು ಮತ್ತು ಸ್ವರಗಳು ಜತೆಯಾಗುವ ಬಗೆ ಒಂದು ನೆಲೆ ಮತ್ತು ವ್ಯಂಜನಗಳು ಒಂದಾದ ಮೇಲೊಂದರಂತೆ ಬರುವ ಬಗೆ ಇನ್ನೊಂದು ನೆಲೆ. ಎರಡನೆಯದರಲ್ಲಿ ಒಂದೇ ಬಗೆಯ ವ್ಯಂಜನಗಳು ಜತೆಯಾಗುವುದು ಒಂದು ಬಗೆಯಾದರೆ ಬೇರೆ ಬಗೆಯ ವ್ಯಂಜನಗಳು ಜತೆಯಾಗುವುದು ಇನ್ನೊಂದು ಬಗೆ. ಪ್ರಾಕೃತ ನುಡಿಯ ಶಾಸನಗಳನ್ನು ಕನ್ನಡದ್ದೆಂದು ನಾವು ತಿಳಿದಿರುವ ಲಿಪಿಯಲ್ಲಿ ಬರೆದಿರುವ ಶಾಸನಗಳಲ್ಲಿ ಮೊದಲ ಎರಡು ಬಗೆಗಳು ಕಾಣಸಿಗುತ್ತವೆ. ಮೂರನೆಯ ಬಗೆ(ಬೇರೆ ಬೇರೆ ಬಗೆಯ ವ್ಯಂಜನಗಳು ಒಟ್ಟಾಗಿ ಬರುವುದು) ಅಲ್ಲಿ ಕಾಣುವುದಿಲ್ಲ. ಅದು ಪಾಕೃತ ನುಡಿಯ ಕಟ್ಟಲೆಗೆ ಸಂಬಂಧಿಸಿದ ಸಂಗತಿ.

ನಮ್ಮ ಸಮಸ್ಯೆ ಮೊದಲಾಗುವುದು ಇಲ್ಲಿಂದಲೇ. ವ್ಯಂಜನಗಳ ಬಳಿಕ ಸ್ವರಗಳು ಬರುವಾಗ ಅವುಗಳನ್ನು ಒಂದೇ ಲಿಪಿ ಚಿಹ್ನೆಯಲ್ಲಿ ಗುರುತಿಸಲು ಮೊದಲು ಮಾಡಿದ್ದಾರೆ. ಹೀಗೆ ಮಾಡುವಾಗ ವ್ಯಂಜನ ಮತ್ತು ಸ್ವರದ ಉಪಚಿಹ್ನೆಗಳನ್ನು ಬೇರೆ ಬೇರೆಯಾಗಿ ಗ್ರಹಿಸಿದ್ದರೋ ಇಲ್ಲವೇ ಇಡಿಯಾಗಿ ಒಂದೆ ಚಿಹ್ನೆಯಾಗಿ ಗುರುತಿಸಲಾಗುತ್ತಿತ್ತೋ. ಲಿಪಿಗಳ ಚಹರೆಗಳನ್ನು ಗಮನಿಸದರೆ ಎರಡನೆಯ ಊಹೆಯೇ ಸರಿ ಎಂದು ತೋರುತ್ತದೆ (ಲೆಟರ್ ಪ್ರೆಸ್ ಇದ್ದ ಕಾಲದಲ್ಲಿ ಮೊಳೆಗಳನ್ನು ಅಚ್ಚುಕೂಟದಲ್ಲಿ ಇರಿಸಿಕೊಳ್ಳುತ್ತಿದ್ದ ಬಗೆಯನ್ನು ನೆನಪಿಗೆ ತಂದುಕೊಳ್ಳಬಹುದು) ನಿಡುಗಾಲದ ಬಳಿಕ ಸ್ವರಗಳ ಉಪಚಿಹ್ನೆಗಳನ್ನು ಬೇರೆ ಮಾಡಲು ಸಾಧ್ಯವಾಗಿದೆ.

ಎರಡನೆಯ ಬಗೆಯಲ್ಲಿ ಒಂದೇ ಬಗೆಯ ವ್ಯಂಜನಗಳು ಒಟ್ಟಿಗೆ ಬರುವುದನ್ನು ಅವುಗಳ ಬಳಿಕ ಬರುವ ಸ್ವರದ ಸೂಚನೆಯೊಡನೆ ಬರೆಯಲಾಗುತ್ತಿತ್ತು. ಇಲ್ಲಿ ಒಂದೇ ವ್ಯಂಜನ ಎರಡು ಬಾರಿ ಬರುತ್ತಿದ್ದುದರಿಂದ ಗೋಜಲುಗಳು ಕಡಿಮೆ ಇದ್ದವು. ಆದರೆ ವ್ಯಂಜನಗಳನ್ನು ಒಂದರ ಅಡಿಯಲ್ಲಿ ಇನ್ನೊಂದನ್ನು ಬರೆಯಲು ತೊಡಗಿದ್ದನ್ನು ಗಮನಿಸಬೇಕು.

ಮೂರನೆಯ ಬಗೆಯಲ್ಲಿ ಬೇರೆ ಬೇರೆ ವ್ಯಂಜನಗಳು ಜೊತೆಯಲ್ಲಿ ಬರುವಾಗ ಮೊದಲ ವ್ಯಂಜನವನ್ನು ಆ ಬಳಿಕ ಬರುವ ಸ್ವರದೊಡನೆ ಬರೆದು ಅದಕ್ಕೆ ಅಂಟಿಕೊಂಡ ಹಾಗೆ ಎರಡನೆಯ ವ್ಯಂಜನದ ಗುರುತನ್ನು ಕೆಳಗೆ ಗುರುತಿಸುವ ಬಗೆ ಬರವಣಿಗೆಯಲ್ಲಿ ನೆಲೆಗೊಂಡದ್ದೇಕೆ? ಕನ್ನಡ ಬರವಣಿಗೆ ಈಗಲೂ ನುಡಿವ ಬಗೆ ಮತ್ತು ಬರೆವ ಬಗೆಗಳ ನಡುವೆ ಉಳಿಸಿಕೊಂಡಿರುವ ಕಂದರ ಆರಂಭ ಕಾಲದಲ್ಲೆ ನೆಲೆಯೂರಿ ಬಿಟ್ಟಿದೆ. ಇಲ್ಲಿ ಸಂಸ್ಕೃತ ನುಡಿಯನ್ನು ಬರೆಯಲು ಬಳಸುತ್ತಿದ್ದ ಮಾದರಿಯನ್ನು ಕನ್ನಡ ನಕಲು ಮಾಡಿದಂತೆ ತೋರುತ್ತದೆ.

ಗಣಕ ಬರಹಗಳು ನೆಲೆಯೂರಿರುವ ಈ ಕಾಲದಲ್ಲಿ ಅಷ್ಟೇನೂ ಮುಖ್ಯ ಎನಿಸದಲೊಂದು ಮಾತನ್ನು ಗಮನಿಸೋಣ. ಲಿಪಿಗಳನ್ನು ಅಪ್ರದಕ್ಷಿಣಾಕಾರದಲ್ಲಿ ಬರೆಯಲಾಗುತ್ತಿತ್ತೋ, ಅಪ್ರದಕ್ಷಿಣಾಕಾರದಲ್ಲಿ ಬರೆಯಲಾಗುತ್ತಿತ್ತೋ ಇಲ್ಲವೇ ಎರಡೂ ಬಗೆಯಲ್ಲೂ ಬೇರೆ ಬೇರೆ ಲಿಪಿಗಳನ್ನು ಬರೆಯಲಾಗುತ್ತಿತ್ತೋ? ಗಣಕಗಳು ನೆಲೆಯೂರುವವರೆಗಿನ ಕತೆಯನ್ನು ನೋಡಿದರೆ ಎರಡೂ ಬಗೆಯಲ್ಲಿ ಬರೆಯುತ್ತಿದ್ದುದು ಕಂಡುಬರುತ್ತಿದೆ. ಇದು ಕನ್ನಡ ಬರವಣಿಗೆಯ ವೇಗವನ್ನು ಕುಗ್ಗಿಸುವ ಕಾರಣವೂ ಆಗಿತ್ತೆಂಬುದನ್ನು ಮರೆಯಬಾರದು. ಇದೂ ಕೂಡ ಆರಂಭ ಕಾಲದ ಕನ್ನಡ ಬರವಣಿಗೆಯಲ್ಲಿ ಅನುಸರಿಸಿದ ಹಾದಿಯ ಕೊಡುಗೆಯೇ ಇದ್ದೀತು.

ಜಿ.ಎಸ್.ಎಸ್. ಕುರಿತು

ಸುಮಾರು ನಲವತ್ತು ಮೂರು ನಲವತ್ತು ನಾಲ್ಕು ವರುಷಗಳ ಹಿಂದೆ ಇವರನ್ನು ಮೊದಲ ಬಾರಿ ನೋಡಿದ್ದು. ಮಹಾರಾಜ ಕಾಲೆಜಿಗೆ ಉಸ್ಮಾನಿಯಾ ವಿಶ್ವವಿದ್ಯಾಲಯದಿಂದ ಹಿಂದಿರುಗಿ ಬಂದಿದ್ದರು. ಪಕ್ಕದ ಯುವರಾಜಾ ಕಾಲೆಜಿನಲ್ಲಿ ನಾನು ಓದುತ್ತಿದ್ದೆ. ಮತ್ತೆ ಯಾವುದೋ ಕಾಲೆಜಿನ ವಿದ್ಯಾರ್ಥಿ ಕವಿಗಳ ಗಡಣದಲ್ಲಿ ನಾನು ಸೇರಿ ನನ್ನ ಕವಿತೆ(?)ಯೊಂದನ್ನು ಓದಿದ್ದೆ. ಅಲ್ಲಿ ಇವರು ಅಧ್ಯಕ್ಷರು. ಕೃಷ್ಣ ಆಲನಹಳ್ಳಿ ಬೆಳಗನ್ನು ಕುರಿತ ತನ್ನ ಹೆಸರಾಂತ ಪದ್ಯವನ್ನು ಅಲ್ಲೇ ಓದಿದ್ದು. ಈ ಅಧ್ಯಕ್ಷರು ತಮ್ಮ ಮಾತಿನಲ್ಲಿ ಅಲ್ಲಿ ಓದಿದ ಹಲವರ ಕವಿತೆಗಳ ಸಾಲನ್ನು ಉಲ್ಲೇಖಿಸಿದರೂ ನನ್ನ ಕವಿತೆಯ ಸಾಲು ಅಲ್ಲಿ ಬರಲಿಲ್ಲ. ಆದ್ದರಿಂದ ನಾನು ಕವಿಯಾಗುವ ಆಸೆಗೆ ಕಲ್ಲು ಬಿತ್ತು. ಮುಂದೆ 1969ರಲ್ಲಿ ಕನ್ನಡ ಎಂಎ ಓದಲೆಂದು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಬಂದು ಒಂದು ಸೀಟು ಕೊಡಿರೆಂದು ಕೇಳಲು ಇವರ ಕನ್ನಡ ವಿಭಾಗದ ರೂಮಿಗೆ ಹೋದೆ. ಪದವಿ ತರಗತಿಯಲ್ಲಿ ಕನ್ನಡವನ್ನು ಭಾಷೆಯನ್ನಾಗಿ ಓದಿ ಶಬ್ದಮಣಿ ದರ್ಪಣವನ್ನು ಓದುವುದಿರಲಿ ನೋಡದೆಯೂ ಎಂಎ ಓದಲು ಬಂದಿರುವ ನನ್ನಂತಹವರನ್ನು ಬಳಿಯಲ್ಲಿ ನಿಂತಿದ್ದ ತಮ್ಮ ಹಿರಿಯ ವಿದ್ಯಾರ್ಥಿಯ ಬಳಿ (ಅವರೇ ಶ್ರೀನಿವಾಸ ರಾಜು ಎಂದು ಗೊತ್ತಾದದ್ದು ಬಳಿಕ) ಟೀಕಿಸಿದರು. ಇಲ್ಲೂ ಜಾಗ ಖಾಲಿ ಮಾಡಬೇಕಾಗುವುದೇನೋ ಎಂದುಕೊಂಡೆ. ಆದರೆ ಹೇಗೋ ನನಗೂ ಸೀಟು ಸಿಕ್ಕಿತು. ಇವರ ವಿದ್ಯಾರ್ಥಿಯಾದೆ.

ಈಗ ಇವರಿಂದ ನಾನು ಕಲಿತಿದ್ದೇನು ಎಂದು ಕೇಳಿಕೊಳ್ಳುತ್ತಿದ್ದೇನೆ. ಅವರು ಚಂದವಾಗಿ ಮಾಡುತ್ತಿದ್ದ ತರಗತಿಯ ಪಾಠಗಳು ಮರೆವಿಗೆ ಸಂದಿವೆ. ಟಿ.ಎಸ್.ಎಲಿಯಟ್‌ನ ವೇಸ್ಟ್ ಲ್ಯಾಂಡ್ ಪದ್ಯವನ್ನು (ಅಚ್ಚರಿ ಬೇಡ. ಆಗ ಕನ್ನಡ ಎಂಎ ಓದುವವರು ಹೀಗೆ ಇಂಗ್ಲಿಶಿನ ಸವಾರಿಗೆ ಬೆನ್ನೊಡ್ಡುವುದು ಸಹಜವೇ ಆಗಿತ್ತು) ವಿವರಿಸುತ್ತ April is the cruelest month ಎಂಬ ಸಾಲನ್ನು ನಮಗೆ ಮನದಟ್ಟು ಮಾಡಲು ಕಷ್ಟಪಟ್ಟಿದ್ದು ನೆನಪಿದೆ. ಸೆಂಟ್ರಲ್ ಕಾಲೆಜಿನ ಅಂದಿನ ಆವರಣದಲ್ಲಿ ಏಪ್ರಿಲ್ ತಿಂಗಳ ಮೊದಲ ಮಳೆಯ ಬಳಿಕ ಬರುವ ಹಿತವಾದ ಬಿಸಲಿನಲ್ಲಿ ಮರಗಳ ನೆರಳನ್ನು ತುಂಬಿಕೊಳ್ಳುತ್ತಿದ್ದ ನಮಗೆ ಎಲಿಯಟ್ಟನ್ನ ಆ ಸಾಲು ಒಳಗಿಳಿಯಲು ಹಲವು ವರುಷಗಳೇ ಬೇಕಾದವು. ಅದು ಬೇರೆ ಮಾತು. ಕುವೆಂಪು ಅವರ 'ಪಕ್ಷಿಕಾಶಿ' ಮತ್ತು ಅಡಿಗರ 'ನಡೆದು ಬಂದ ದಾರಿ' ಸಂಕಲನಗಳೆರಡನ್ನೂ ಒಟ್ಟೊಟ್ಟಿಗೆ ನಮಗೆ ಪಾಠಮಾಡಿದರು. ಆಗ ಅದು ಹಗ್ಗದ ಮೇಲಿನ ನಡಿಗೆ ಎಂದು ನಮಗೆ ಅನ್ನಿಸುತ್ತಿದ್ದರೂ, ಈಗ ಆ ಪಾಠಗಳಿಂದಾಗಿಯೇ ನಮ್ಮೊಳಗೆ ಸಾಹಿತ್ಯದ ಓದು ಕಲಿಸುವ ತಾಳಿಕೊಳ್ಳುವಿಕೆ ಮೈಗೂಡಿತೆಂದು ತೋರುತ್ತಿದೆ.

ಎಂಎ ಓದುವಾಗ ವಿಭಾಗದ ಗೆಳೆಯರು 'ಸಂಕೀರ್ಣ' ಎಂಬೊಂದು ನಿಯತ ಕಾಲಿಕೆಯನ್ನು ಹೊರತರುತ್ತಿದ್ದರು. ಅದರಲ್ಲಿ ಎಸ್.ಎಲ್. ಭೈರಪ್ಪನವರ "ವಂಶವೃಕ್ಷ' ಕಾದಂಬರಿ ಕುರಿತು ಬರೆದೆ. ಇವರು ಓದಿ ನನ್ನನ್ನು ಕೊಠಡಿಗೆ ಕರೆದು ಟೀಕೆಯ ಮಾತುಗಳನ್ನು ಬಿರುಸಾಗಿ ಹೇಳುವುದು ತರವಲ್ಲವೆಂದು ಹೇಳಿದರು. ಆದರೆ ಟೀಕೆ ಮಾಡಬೇಡವೆಂದು ಹೇಳಲಿಲ್ಲ. ಇದೊಂದು ದೊಡ್ಡ ಪಾಠ. ಅಂದಿನ ಎಳೆಯ ವಯಸ್ಸಿಗೆ ಬಿರುಸಾಗಿ ನುಡಿಯುವುದೇ ಸರಿ ಎನಿಸಿದ್ದರೂ ಅವರೇ ಬೇರೊಂದು ಕಡೆ ಹೇಳಿರುವಂತೆ 'ಭಿನ್ನವಿದ್ದೂ ಬೆರೆಯಬಹುದು' ಎಂಬುದೇ ಬದುಕಿನ ಸರಿಯಾದ ಹಾದಿ ಎಂದು ನನಗೀಗ ಗಟ್ಟಿಯಾಗಿದೆ.

ಕಿರಿಯರನ್ನು ಜತೆಗೆ ಕರೆದೊಯ್ಯುವುದು ಇವರು ಕಲಿಸಿದ ಇನ್ನೊಂದು ಪಾಠ. ಕಿರಿಯರನ್ನು ನಂಬಬೇಕು; ಅವರಿಗೆ ತಕ್ಕ ಅವಕಾಶಗಳನ್ನು ನೀಡಿ ಬೆಳೆಯಲು ಅನುವು ಮಾಡಿಕೊಡಬೇಕು ಎಂಬುದನ್ನು ಅವರು ದಿಟ್ಟವಾಗಿ ಆಚರಿಸಿ ತೋರಿಸಿದ್ದಾರೆ. ಎಲ್ಲರ ಅವಕಾಶಗಳನ್ನು ಕಿತ್ತುಕೊಳ್ಳುವುದು; ಅವಕಾಶಗಳು ಸಿಗದಂತೆ ನೋಡಿಕೊಳ್ಳುವುದು ದೊಡ್ಡವರ ಬಗೆಯಾಗಿದ್ದ (ಈಗಲೂ ಆಗಿರುವ) ದಿನಮಾನಗಳಲ್ಲಿ ಇವರು ತುಳಿದ ಹಾದಿಯಲ್ಲಿ ನಾನೂ ನನ್ನಂತಹ ಹಲವರು ನಿರಾಳವಾಗಿ ನಡೆದುಬಂದಿದ್ದೇವೆ.

ನಾನು ಬರೆಯುವ ಕನ್ನಡವನ್ನು ಇವರು ಒಪ್ಪುತ್ತಿರಲಿಲ್ಲ. ನನಗೆ ಕನ್ನಡ ಬರೆಯುವುದು ತಿಳಿದಿಲ್ಲವೆಂದು ಆಗಾಗ ಬರೆಯೆಳೆಯುತ್ತಿದ್ದ ಲಂಕೇಶರಂತಲ್ಲದಿದ್ದರೂ ನನ್ನ ಕನ್ನಡವನ್ನು ಒಪ್ಪದಿದ್ದರೂ ಇವರು ಸಹಿಸಿಕೊಂಡರು. ಆ ಕನ್ನಡಕ್ಕೆ ಟೆಲಿಗ್ರಾಫಿಕ್ ಕನ್ನಡವೆಂದು ಹೆಸರಿಸಿದರು. ಬರೆದದ್ದಕ್ಕಿಂತ ಬರೆಯದೇ ಬಿಟ್ಟ ಪದಗಳೇ ಹೆಚ್ಚು ಎಂಬುದು ಇವರ ವಿವರಣೆ. ಜೊತೆಗೆ ನಾನು ಇಂಗ್ಲಿಶಿನಲ್ಲಿ ಯೋಚಿಸಿ ಕನ್ನಡದಲ್ಲಿ ಬರೆಯುತ್ತೇನೆ ಎಂಬುದು ಇನ್ನೊಂದು ಕೊಸರು ಮಾತು. ಇವೆರಡೂ ಮಾತುಗಳನ್ನು ಒಪ್ಪುವ ಮನಸ್ಸು ಆಗ ನನ್ನದಾಗಿರಲಿಲ್ಲ. ಈಗ ಮೂರೂವರೆ ದಶಕಗಳು ಕಳೆದ ಮೇಲೆ ಇವರು ಹೇಳಿದ್ದರಲ್ಲಿ ದಿಟವಿದೆಯೆಂದು ಗೊತ್ತಾಗುತ್ತಿದೆ. ಕನ್ನಡದಲ್ಲಿ ಬರೆಯುವವರ ಕಣ್ಣುಗಳನ್ನು ಇಂಗ್ಲಿಶ್ ಎಷ್ಟು ತನ್ನ ಹಿಡಿತದಲ್ಲಿ ಇರಿಸಿಕೊಂಡಿದೆ ಎನ್ನುವುದು ಈಗ ಢಾಳಾಗಿ ತಿಳಿಯುತ್ತಿದೆ. ಹೊರಬರುವ ದಾರಿಗಳಿಗಾಗಿ ತಡಕಾಡುತ್ತಿದ್ದೇವೆ.

ಈಗ ಎಲ್ಲ ನಿಚ್ಚಳವಾಗ ತೊಡಗುತ್ತಿದೆ. ಚಿಕ್ಕವರನ್ನು ನಂಬಿ ಹೊಣೆ ಹೊರಿಸಿ ಮುನ್ನುಗ್ಗಿ ಎಂದು ಹೇಳಿ ನನ್ನಂತಹವರಿಗೆ ಸವಾಲುಗಳನ್ನು ಇವರು ಎಸೆಯದೇ ಹೋಗಿದ್ದರೆ, ಅದಕ್ಕೂ ಮಿಗಿಲಾಗಿ ಹೇಳಬೇಕಾದ್ದನ್ನು ಹಿಂಜರಿಯದೇ ಹೇಳುವುದನ್ನು ಕಲಿಸದೇ ಹೋಗಿದ್ದರೆ ಏನಾಗುತ್ತಿತ್ತು ಎಂದು ಆಗಾಗ ಯೋಚಿಸುತ್ತೇನೆ. ಹೀಗೆ ತರಗತಿಗಿಂತ ಹೆಚ್ಚಾಗಿ ತರಗತಿಯ ಹೊರಗೆ ತಮ್ಮ ನಡೆಗಳಿಂದ ಇವರು ಕಲಿಸಿದ ಪಾಠಗಳು ಹೆಚ್ಚು. ನನ್ನ ಬದುಕಿನ ಎಷ್ಟೊಂದು ಹಂತಗಳಲ್ಲಿ ಇವರ ಒತ್ತಾಸೆ ಜತೆಗಿತ್ತು ಎಂಬುದನ್ನು ಪಟ್ಟಿ ಮಾಡುವುದು ಕಷ್ಟ. ನನ್ನ ಒಡನೋದಿಯ ಜೊತೆಗೆ ನಡೆದ ನನ್ನ ಮದುವೆಗೆ ಬಂದು ಸಾಕ್ಷಿಯಾಗಿ ರುಜು ಹಾಕಿದ್ದರಿಂದ ಹಿಡಿದು ಪಟ್ಟಿ ಮೊದಲಾಗುತ್ತದೆ. ಕೊನೆಯಾಗುವುದೇ ಇಲ್ಲವೇನೋ. ಏನೇ ಇರಲಿ ನಾನು ಬೆಳಗಾಗ ಎದ್ದು ನೆನೆಯಬೇಕಾದ ಜೀವಿಗಳಲ್ಲಿ ನನ್ನನ್ನು ಹೆತ್ತವರ ಬಳಿಕ ಬರುವ ನಾಲ್ಕೈದು ಹೆಸರುಗಳಲ್ಲಿ ಇವರದೂ ಒಂದು ಎಂಬುದಂತೂ ದಿಟ.

ದಿಟ ಸಟೆಗಳ ನಡುವೆ

ಈಗ ಎಂ.ಎಂ. ಕಲಬುರ್ಗಿ ಅವರ ಬಗೆಗೆ ಬರೆಯುವುದು ಎಂದರೆ ಅವರ ತಿಳಿವಿನ ನೆಲೆಗಳನ್ನು ಅರಿಯುವುದೇ? ಇಲ್ಲವೇ ಅವರ ದನಿಯುಡಿಗಿಸಿದ ಪರಿಯನ್ನು ಕುರಿತು ಚಿಂತಿಸುವುದೇ, ಇಲ್ಲವೇ ನ್ಯಾಯಕ್ಕಾಗಿ ಹಪಹಪಿಸುವುದೇ? ಯಾವುದು ಈಗ ನಮ್ಮ ಕಾಳಜಿಯಾಗಬೇಕು. ಇಲ್ಲವೇ ಇವೆಲ್ಲವೂ ಒಟ್ಟಾಗಿ ನಮ್ಮನ್ನು ಕಾಡಿಸಬೇಕೆ? ಬರೆಯಲು ಕುಳಿತಿರುವ ನನಗೆ ಯಾವುದೂ ನಿರಾಳದ ದಾರಿ ಎನಿಸುತ್ತಿಲ್ಲ.

ಇಪ್ಪತ್ತನೆಯ ಶತಮಾನದ ಎರಡನೆಯ ಅರ್ಧದ ಕನ್ನಡ ತಿಳಿವಿನ ಒಂದು ಮಾದರಿಯನ್ನು ಡಾ. ಕಲಬುರ್ಗಿ ಪ್ರತಿನಿಧಿಸುತ್ತಾರೆ. ಇದು ಭೂತಕಾಲವನ್ನು ಮರುರೂಪಿಸುವ ಮಾದರಿ. ಹೀಗೆ ರೂಪಿಸುವಾಗ 'ದಿಟ'ವಾಗಿ ಇದ್ದುದೇನು ಎಂದು ತಿಳಿಯುವ ಹಂಬಲ ಮುಂಚೂಣಿಗೆ ಬರುತ್ತದೆ. ದಿಟ(<ದೃಷ್ಟಿ)ವಾದುದು ನಮಗೆ ಕಾಣುತ್ತಿರುತ್ತದೆ. ಆದರೆ 'ಸಟೆ'(<ಸೃಷ್ಟಿ) ಜನರ ನಂಬಿಕೆಯಾಗಿಬಿಟ್ಟಿರುತ್ತದೆ. ಸಟೆ ಎಂದರೆ ಸುಳ್ಳು ಎಂದುಕೊಳ್ಳುತ್ತೇವೆ. ಸರಿಯೇ. ಆದರೆ ಭೂತಕಾಲದ ದಿಟ ಮತ್ತು ಇಂದಿನ ಬದುಕಿನ ನಂಬಿಕೆಯಾಗಿರುವ ಸಟೆಗಳ ನಡುವೆ ತಿಕ್ಕಾಟಗಳು ಸದಾ ಕಲಬುರ್ಗಿಯವರ ಬೆನ್ನು ಹತ್ತಿದ್ದವು. ದಿಟವನ್ನು ಕಾಣುವ ಹಂಬಲವಿದ್ದ ಅವರಿಗೆ ಸಟೆಗಳು ಏಕೆ ಹುಟ್ಟಿಕೊಳ್ಳುತ್ತಿವೆ,ಅವುಗಳ ಹಿಂದಿರುವ ರಾಜಕಾರಣವೇನು ಎಂಬುದನ್ನು ತಿಳಿಯುವ ಬಯಕೆ ಇರಲಿಲ್ಲ. ಅಥವಾ ಅವರ ಶೋಧ ಪರಿಕರಗಳು ಈ ಪ್ರಶ್ನೆಗಳನ್ನು ಮೈಮೇಲೆ ಎಳೆದುಕೊಳ್ಳುತ್ತಿರಲಿಲ್ಲ. ಒಂದು ವೇಳೆ ಬಾಯ್ದೆರೆಯ ಚರಿತ್ರೆಯ ಬಗೆಗೆ ಕಲಬುರ್ಗಿಯವರಿಗೆ ಆಸಕ್ತಿ ಇದ್ದಿದ್ದರೆ ಅವರು ನಾನು ಮೇಲೆ ಹೇಳಿದ ತಿಳಿವಿನ ನೆಲೆಗೆ ದಾಟುತ್ತಿದ್ದರೋ ಏನೋ. ಅವರಿಗೆ ಕಣ್ಣಿಗೆ ಕಾಣುವ ಪುರಾವೆಗಳ ಬಗೆಗೆ ಇದ್ದಷ್ಟು ಒಲುವೆ ಕಿವಿಗೆ ಕೇಳುವ ಪುರಾವೆಗಳ ಬಗೆಗೆ ಇರಲಿಲ್ಲ. ಇದೆಲ್ಲವನ್ನೂ ಇಲ್ಲಿ ವಿವರಿಸುವುದು ಆಗದು ಮಾತು.

ಎರಡನೆಯ ಸಹಸ್ರಮಾನದ ಕನ್ನಡ ಬದುಕಿನ ನೆಲೆಗಳಲ್ಲಿ 'ಕಾಣದೆ' ಹುದುಗಿ ಹೋಗಿದ್ದ ಹತ್ತಾರು ಎಳೆಗಳನ್ನು ಅವರು ತೆಗೆದು ತೋರಿಸಿದ್ದಾರೆ. ಮಾರ್ಗ–4 ಸಂಪುಟದ ಬರಹಗಳನ್ನು ಓದಿದರೆ ಇದು ಗೊತ್ತಾಗುತ್ತದೆ. ಈ ಎಳೆಗಳಲ್ಲಿ ಕೆಲವು ಗಂಟುಗಳನ್ನು ಬಿಡಿಸುತ್ತಿರುವಂತೆ ತೋರುತ್ತವೆ; ಮತ್ತೆ ಕೆಲವು ಇಂದಿನ ನಂಬಿಕೆಗಳ ಬುಡವೇ ಗಟ್ಟಿ ಇಲ್ಲದಿರುವುದನ್ನು ಎತ್ತಿ ಹೇಳುತ್ತವೆ. ವರ್ತಮಾನದ ಬದುಕನ್ನು ಅಧ್ಯಯನಕಾರರ ನಿಟ್ಟಿನಲ್ಲಿ ಹೊರಗಿನಿಂದ ನೋಡುವವರಿಗೆ ಕಲಬುರ್ಗಿಯವರು

ಹೊರಪಡಿಸಿದ ತಿಳಿವು ಕೇವಲ ಮಾಹಿತಿಯಾಗಿ ಕಂಡರೆ ವರ್ತಮಾನದ ಬದುಕನ್ನು ನಂಬಿಕೆಗಳ ಮೂಲಕವೇ ನಿರ್ವಹಿಸುತ್ತಿರುವವರಿಗೆ ಅವರ ಶೋಧಗಳು 'ಅಪಾಯಕಾರಿ'ಯಾಗಿ ತೋರುತ್ತಿದ್ದವು. ದಿಟ, ಸಟೆಗಳ ನಡುವೆ ಇರುವ ತಿಕ್ಕಾಟವನ್ನು ಗ್ರಹಿಸಲು ಬೇಕಾದ ತಾತ್ವಿಕತೆಯ ಕೊರತೆ ಶಂಬಾ ಜೋಶಿಯವರಿಂದ ಮೊದಲಾಗಿ ಕನ್ನಡ ತಿಳಿವನ್ನು ಶೋಧಿಸಲು ಹೊರಟ ಬಹುಪಾಲು (ಕೊಂಚ ವಿಸ್ತರಿಸಿ ಹೇಳುವುದಾದರೆ ಹಿಂದಿನ ಎಲ್ಲ) ಚಿಂತಕರಲ್ಲಿ ಕಂಡು ಬರುತ್ತದೆ. ಶೋಧಗಳಿಗೆ ಇರಬೇಕಾದ ಬದ್ಧತೆ ಮತ್ತು ಅದರಲ್ಲಿರುವ ತಾತ್ವಿಕತೆಯ ಕೊರತೆ ಇವೆರಡೂ ಬೇರೆ ಬೇರೆ.

ಮೇಲಿನ ಮಾತನ್ನು ಹೇಳುವಾಗ ಶರಶ್ಚಂದ್ರ ಚಟರ್ಜಿಯವರ 'ಅಧಿಕಾರ' ಕಾದಂಬರಿಯ ಪ್ರಸಂಗವೊಂದನ್ನು ನೆನಪು ಮಾಡಿಕೊಳ್ಳಬೇಕೆನಿಸುತ್ತದೆ. ರಂಗೂನಿನಲ್ಲಿ ತಲೆಮರೆಸಿಕೊಂಡಿದ್ದ ಡಾಕ್ಟರ್ ಬಾಬು ಮತ್ತು ಕತೆಯ ನಾಯಕ ಅಪೂರ್ವನ ನಡುವೆ ನಡೆಯುವ ಮಾತುಕತೆಯ ಪ್ರಸಂಗವಿದು. ಅಲ್ಲಿ ಸತ್ಯದ ಸನಾತನತೆಯ ಪ್ರಶ್ನೆಯನ್ನು ಎತ್ತಿಕೊಂಡು ಡಾಕ್ಟರ್ ಬಾಬು ಹೇಳುವುದಿಷ್ಟು, 'ಸತ್ಯ ಸನಾತನವಲ್ಲ. ಅದನ್ನು ಕಟ್ಟ ಬೇಕಾಗುತ್ತದೆ. ನಮ್ಮ ಬೇಕು ಬೇಡಗಳಿಗೆ ಅನುಗುಣವಾದ ಸತ್ಯವನ್ನು ನಮ್ಮ ಕಾಲದೇಶದಲ್ಲಿ ನಾವು ಕಟ್ಟಿಕೊಳ್ಳಬೇಕಾಗುತ್ತದೆ' ಡಾಕ್ಟರ್ ಬಾಬು ಹೇಳುವ ಈ ಮಾತುಗಳು ನಮ್ಮ ಶೋಧ ಜಗತ್ತಿಗೆ ಇರಬೇಕಾದ ಎಚ್ಚರವನ್ನು ಸೂಚಿಸುತ್ತವೆ.

ಈ ಎಲ್ಲ ಮಾತುಗಳನ್ನು ಹೇಳುವಾಗ ಕಲಬುರ್ಗಿಯವರು ಕಂಡ ದಾರುಣ ಕೊನೆಯನ್ನು ಬದಿಗಿರಿಸಿಲ್ಲ. ಆದರೆ ಒಂದು ಸಂಗತಿ ನಡೆದಾಗ ಅದನ್ನು ನಾವು ನೋಡುವ ನೆಲೆಗಳು ಹಲವು ಇರುತ್ತವೆ. ಏಕೆ ಆ ಸಂಗತಿ ನಡೆಯಿತು ಎಂದು ಚಿಂತಿಸುವುದು ಒಂದು ನೆಲೆ. ಇಂತಹ ಸಂಗತಿ ನಡೆಯಬಾರದಿತ್ತು ಎಂದು ಹಪಹಪಿಸುವುದು ಇನ್ನೊಂದು ನೆಲೆ. ಆ ಸಂಗತಿ ನಡೆದ ಮೇಲೆ ಅದರ ಪರಿಣಾಮಗಳನ್ನು ಕಂಡುಕೊಳ್ಳುವ ಮತ್ತು ಅದರ ದಿಕ್ಕನ್ನು ತಮಗೆ ಬೇಕಾದಂತೆ ಕಟ್ಟುವ ನೆಲೆ ಮತ್ತೊಂದು. ಈ ಎಲ್ಲ ನೆಲೆಯ ಪ್ರತಿಕ್ರಿಯೆಗಳನ್ನು ನಾವು ದಿನವೂ ನೋಡುತ್ತಿದ್ದೇವೆ.

ನಾವೀಗ ಇದೆಲ್ಲವನ್ನು ಅರಗಿಸಿಕೊಳ್ಳಬೇಕಾದ ದಿಕ್ಕಿನಲ್ಲಿ ಮುಂದಡಿಯಿಡಬೇಕಾಗಿದೆ. ಇಂದಿಗೂ ನಾವು ತಿಳುವಳಿಕೆಯನ್ನು ಮತ್ತು ಆ ತಿಳಿವನ್ನು ಪಡೆದುಕೊಂಡ, ಹೊಂದಿರುವ ವ್ಯಕ್ತಿಯನ್ನು ಬೇರೆ ಮಾಡುವುದನ್ನು ಕಲಿತಿಲ್ಲ. ಇದರಿಂದಾಗಿ ವ್ಯಕ್ತಿಯ ಗೈರುಹಾಜರನ್ನು ತಿಳಿವಿನ ಗೈರು ಹಾಜರು ಎಂದೇ ತಿಳಿಯುತ್ತೇವೆ. ಒಂದು ಹಂತದವರೆಗೆ ಇದು ಸರಿ. ಆದರೆ ಜನರ ಬದುಕು ಈ ನಿಟ್ಟಿನಲ್ಲಿ ಸಾಗುವುದಿಲ್ಲ. ಯಾವುದೇ ಘನವಾದ ತಿಳಿವಾಗಿರಲಿ ಅದು ಜನರ ನಡುವೆ ನೆಲೆಯೂರದಿದ್ದರೆ, ಜನ ಆ ತಿಳಿವು ನಮಗೆ ಬೇಕಾದುದು ಎಂದು ಜನ ತಿಳಿಯದಿದ್ದರೆ ಆ ತಿಳಿವಿನ ವಯೋಮಾನ ಕಡಿಮೆಯೇ ಸರಿ. ಅಂದರೆ ನಮ್ಮ ತಿಳಿವು ಜನರ ಬದುಕಿನಲ್ಲಿ ಬೆರೆಯ ಬೇಕಾಗುತ್ತದೆ. ಮೊದಲಲ್ಲಿ ಹೇಳಿದ ದಿಟ ಸಟೆಗಳ ತಿಕ್ಕಾಟದ ನೆಲೆಗಳನ್ನು ಶೋಧಕರು ಗ್ರಹಿಸದೇ ಹೋದರೆ ಉಂಟಾಗುವ ಕಂದರವನ್ನು ತುಂಬುದು ಕಷ್ಟ. ಆಗಲೇ ತಿಳಿವಿಗರು ಒಬ್ಬಂಟಿಯಾಗುತ್ತಾರೆ. ಸತ್ಯದ ಹಾದಿ ಹುಡುಕಿ ಹೊರಟವರು ಎಂದಿಗೂ ಒಬ್ಬಂಟಿ ಎಂಬತಹ ಮಾತುಗಳು ಚಲಾವಣೆಗೆ ಬರುತ್ತವೆ.

ಡಾ. ಕಲಬುರ್ಗಿ ಯವಾಗಲೂ ಚಡಪಡಿಸುತ್ತಿದ್ದವರು; ತಮ್ಮ 'ಕಾಣ್ಕೆ'ಗಳನ್ನು ಹಂಚಿಕೊಳ್ಳಲು ಅವರು ಎಂದು ತಡಮಾಡುತ್ತಿರಲಿಲ್ಲ. ಆದರೆ ಅವರಿಗೆ ಗುರಿ ಕಾಣುತ್ತಿತ್ತೇ ಹೊರತು ದಾರಿಯಲ್ಲ. ಅಂದರೆ ತಾವು ಕಾಣುತ್ತಿರುವ 'ದಿಟ'ದ ಬಗೆಗೆ ಇದ್ದ ಕಾಳಜಿ ಆ ದಿಟ ಮತ್ತು ಜನರ ಬದುಕುಗಳ ಇರಬಹುದಾದ ನಂಟನ್ನು ಕುರಿತು ಅವರು ಚಿಂತಿಸಲಿಲ್ಲ. ಅವರು ಮಾಡಿದ ಕೆಲಸವನ್ನು ನಾವು ಹೊಗಳುವುದು ಸರಿಯೇ ಸರಿ. ಕಲಿತವರ ಲೋಕದಲ್ಲಿ, ಶೋಧಕರ ಲೋಕದಲ್ಲಿ ಅವರು ಏಕಾಂಗಿಯಾದುದನ್ನು ಗಮನಿಸಿ ತಮಗೆ ಸರಿ ಎನಿಸಿದ್ದನ್ನು ಹೇಳುವ ದಿಟ್ಟತನವನ್ನು ಉಳಿಸಿಕೊಂಡದನ್ನು ಮೆಚ್ಚುವುದೂ ಸರಿಯೇ. ಆದರೆ ಇದೆಲ್ಲವೂ ಏಕೆ ಹೀಗಾಯ್ತು ಎಂದು ಯೋಚಿಸಿದ ಕೂಡಲೆ ನಮ್ಮ ಯೋಚನೆಗಳೆಲ್ಲ ಹೊರಗಿನ ಎದುರಾಳಿಗಳನ್ನು ಕಟ್ಟಿಕೊಳ್ಳಲು ಮೊದಲು ಮಾಡುತ್ತದೆ. ಇಂತಹ ಎದುರಾಳಿಗಳು ಇರುವುದಿಲ್ಲ ಎಂದಲ್ಲ. ಇರುತ್ತಾರೆ. ಅದರೆ ಶೋಧನೆಯ ಹಾದಿಯಲ್ಲಿ ಕಂಡುಕೊಂಡ ತಿಳಿವುಗಳು ಜನರ ನಂಬುಗೆಯ ಜಗತ್ತಿನಲ್ಲಿ ಬೇರು ಬಿಡುತ್ತಿಲ್ಲ ಎಂಬುದನ್ನು ಕಾಣದೇ ಹೋಗುವ ಪರಿಯನ್ನು ನಾವು ಗುರುತಿಸಿಕೊಳ್ಳಬೇಕು. ಇದು ಈಗ ಅತ್ಯಗತ್ಯ.

ಈ ಹತ್ಯೆಗೆ ಕಾರಣರಾದವನ್ನು, ಕಾರಣವನ್ನು ಮುಂದಿನ ದಿನಗಳಲ್ಲಿ ಹುಡುಕಿ ತೆಗೆಯಲೂ ಬಹುದು. ಈ ಕೆಲಸ ಮಾಡಿದವರಿಗೆ ನ್ಯಾಯಾಲಯಗಳು ದಂಡನೆಯನ್ನು ನೀಡಬಹುದು. ಇಲ್ಲವೆ ಇವು ಯಾವುವೂ ಆಗದೆಯೂ ಹೋಗಬಹುದು. ದಿನ ಕಳೆದಂತೆ ಎಲ್ಲ ಗಾಯಗಳೂ ಮಾಯುತ್ತವೆ. ಇಂತಹ ಹತ್ಯೆಗಳು ನಡೆಯದಂತೆ ಮುನ್ನೆಚ್ಚರಿಕೆಯ ಕ್ರಮಗಳನ್ನೂ ತೆಗೆದುಕೊಳ್ಳಬಹುದು. 'ಇಂದವನ್, ನಾಳೆ ನಾನ್' ಎಂಬ ಧೀರನುಡಿಗಳನ್ನೋ, ಹತಾಶೆಯ ಮಾತುಗಳನ್ನೋ ಆಡಬಹುದು. ಆದರೆ ಸತ್ಯದ ಹುಡುಕಾಟದಲ್ಲಿ ತೊಡಕಿಕೊಂಡವರು ಏಕಾಂಗಿಗಳಾಗುವ ಪರಿಸ್ಥಿತಿ ಮಾತ್ರ ಮುಂದುವರೆಯುತ್ತದೆ. ಅದಕ್ಕೆ ಶೋಧಗಳಿಗೆ ಇರಬೇಕಾದ ಹೊಣೆಗಾರಿಕೆಯನ್ನು ಕನ್ನಡ ತಿಳಿವಿನ ಲೋಕ ಇನ್ನೂ ಕಂಡುಕೊಳ್ಳದಿರುವುದೇ ಕಾರಣ. ಎಳೆಯರು, ಕನ್ನಡ ಬದುಕನ್ನು ಕಟ್ಟುವವರು ಮುಂದಿನ ದಿನಮಾನಗಳಲ್ಲಿ ನಮ್ಮ ತಿಳಿವಿನ ಲೋಕದ ಈ ಕೊರತೆಯನ್ನು ತುಂಬುವತ್ತ ಹೆಜ್ಜೆ ಹಾಕಿದರೆ ಆಗ ಅದು ಅಗಲಿದ ಈ ಚಿಂತಕರಿಗೆ ನೀಡುವ ನಿಜವಾದ ಗೌರವವಾಗುತ್ತದೆ.

ನುಡಿಯರಿಮೆಯ ಕೆಲವು ಪರಿಕಲ್ಪನೆಗಳು

1986 ರ ಸುಮಾರಿನಲ್ಲಿ ಚಾಮ್‌ಸ್ಕಿ 'ಐ' ಲಾಂಗ್ವೇಜ್ (ಅಂತಸ್ಥ ನುಡಿ) ಎಂಬ ಪರಿಕಲ್ಪನೆಯೊಂದನ್ನು ಮುಂದಿಟ್ಟರು. ಆವರೆಗೆ ನುಡಿಯನ್ನು ಕುರಿತು ಚರ್ಚೆಗಳೆಲ್ಲವೂ ಬಹುಮಟ್ಟಿಗೆ ನುಡಿಯ ಬಳಕೆಯನ್ನು ಕುರಿತು ನುಡಿಯುತ್ತಿದ್ದವು. ಇಂಥ ಚರ್ಚೆಗಳೆಲ್ಲವನ್ನೂ ಇ ಲಾಂಗ್ವೇಜ್ ಕುರಿತ ಚರ್ಚೆ ಎಂದು ಹೇಳಲಾಗುತ್ತದೆ. ಇಲ್ಲಿ ವ್ಯಾವಹಾರಿಕವಾಗಿ 'ಐ' ಎಂದರೆ ಇಂಟರ್‌ನಲ್ ಎಂದೂ 'ಇ' ಎಂದರೆ ಎಕ್ಸ್‌ಟರ್‌ನಲ್ ಎಂದೂ ತಿಳಿಯಬಹುದು. ಆದರೆ ಇದು ಅಷ್ಟು ಸರಳವಾದುದಲ್ಲ. ಇದಕ್ಕೂ ಮೂವತ್ತು ವರ್ಷಗಳ ಹಿಂದಿನಿಂದಲೂ ಚಾಮ್‌ಸ್ಕಿ ನುಡಿಯ ಎರಡು ಸ್ತರಗಳನ್ನು ಕುರಿತು ವಿವರಿಸಿದುಂಟು. ಅದನ್ನು 'ನುಡಿ ಕಸುವು' (Competence) ಮತ್ತು 'ನುಡಿ ಬಳಕೆ' (Performance)ಎಂದು ತಿಳಿಯಲಾಗುತ್ತಿತ್ತು. ನುಡಿ ಕಸುವು ಎಂಬುದು ಆ ನುಡಿಯನ್ನಾಡುವ ಎಲ್ಲರಿಗೂ ಸಮಾನವಾದ ಸಾಮರ್ಥ್ಯವಾಗಿದ್ದು, ಈ ಸಾಮರ್ಥ್ಯವು ನುಡಿ ಬಳಕೆಯಲ್ಲಿ ಬಹಿರಂಗಗೊಳ್ಳುತ್ತದೆ. ಹಾಗಾಗಿ, ನುಡಿಯ ರಚನೆಯ ಅಧ್ಯಯನವೆಂದರೆ ನುಡಿ ಬಳಕೆಯ ಅಧ್ಯಯನವೋ ಇಲ್ಲವೆ ಈ ಬಳಕೆಗೆ ಕಾರಣವಾದ ನುಡಿಕಸುವಿನ ಅಧ್ಯಯನವೋ ಎಂಬ ಪ್ರಶ್ನೆ ಉದ್ಭವವಾಗುತ್ತದೆ.

ಈ ಚರ್ಚೆಯನ್ನು ಬೆಳೆಸುತ್ತ ಬಂದ ಚಾಮ್‌ಸ್ಕಿ ಇ ಲಾಂಗ್ವೇಜ್‌ನ ಅಧ್ಯಯನಕಾರರು ಬಳಸುತ್ತಿದ್ದ ತಾತ್ತ್ವಿಕತೆಯನ್ನು ಪೂರ್ಣವಾಗಿ ನಿರಾಕರಿಸುತ್ತಾರೆ. ಆದರೆ ಸಾಮಾನ್ಯ ತಿಳುವಳಿಕೆಯ ಪ್ರಕಾರ ಜನಬಳಕೆಯ ನುಡಿಯೇ ಅದರ ನಿಜವಾದ ರೂಪ. ಇದನು ಜನನುಡಿ ಎನ್ನೋಣ. ಒಂದು ಸಮುದಾಯಲ್ಲಿ ಇರುವ ಎಲ್ಲ ಸದಸ್ಯರಿಗೂ ಇದು ಸಮಾನವಾದ ಆಸ್ತಿ. ಇದನ್ನು ವ್ಯವಸ್ಥಿತವಾಗಿ ಕಲಿಯಬೇಕು. ಈ ಕಲಿಕೆಗೆ ಅದರದ್ದೆ ಆದ ನಿಯಮಗಳಿವೆ. ಈ ಕಲಿಕೆಯಿಂದ ಪಡೆದ ಭಾಷೆಯನ್ನು ಆ ಸಮುದಾಯದ ಜನರು ಪರಸ್ಪರ ಸಂವಹನಕ್ಕಾಗಿ ವ್ಯವಹಾರದಲ್ಲಿ ಬಳಸುತ್ತಾರೆ.

ಈ ಇ ಲ್ಯಾಂಗ್ವೇಜ್ ಅನ್ನು ನಾವು ಮನುಷ್ಯರ ಒಂದು ಸಾಮರ್ಥ್ಯ ಎಂದು ಭಾವಿಸುವುದಾದರೆ ಅದು ಅವರಿಗೆ ದೊರೆತದ್ದು ಎಲ್ಲಿಂದ? ಹುಟ್ಟಿನಿಂದ ಅದು ಅವರಲ್ಲಿ ಇರುವುದಿಲ್ಲವೆಂದಾದರೆ ಎಲ್ಲೋ ಅಮೂರ್ತವಾದ ನೆಲೆಯೊಂದರಿಂದ ಅದು ಅವರಿಗೆ ದೊರೆತಿರಬೇಕು ಹೀಗೆ ಅದನ್ನು ಪಡೆದುಕೊಳ್ಳುವ ಬಗೆ ಯಾವುದು? ಆ ಹೊರಗಿನ ಮೂಲದಲ್ಲಿ ಇರುವ ಇ ಲ್ಯಾಂಗ್ವೇಜ್‌ನ ನಿಯಮಾವಳಿಗಳನ್ನು ಕಲಿಯುವ ವ್ಯಕ್ತಿಗಳು ಪಡೆದುಕೊಳ್ಳುವ ವಿಧಾನ ಯಾವುದು ಈ ಎಲ್ಲ ಪ್ರಶ್ನೆಗಳಿಗೂ ಉತ್ತರ

ಹೇಳುವುದು ಕಷ್ಟ. ಹಾಗಾಗಿ ನುಡಿಯ ಅಧ್ಯಯನವನ್ನು ಕೇವಲ ನುಡಿ ಬಳಕೆಗೆ ಸೀಮಿತಗೊಳಿಸಿಕೊಂಡರೆ ನುಡಿಯ ನಿಜಸ್ವರೂಪ ನಮಗೆ ಗೊತ್ತಾಗುವುದಿಲ್ಲ.

ಈ ಕಾರಣದಿಂದ ಚಾಮ್‌ಸ್ಕಿ ಇ ಲ್ಯಾಂಗ್ವೇಜ್‌ಗೆ ಬದಲಾಗಿ ಐಎಲ್(IL) ಎಂಬ ಪರಿಕಲ್ಪನೆಯನ್ನು ಮುಂದಿಡುತ್ತಾರೆ. IL ಎಂಬುದು ಮನುಷ್ಯರ ಮನಸ್ಸು ಮೆದುಳಿನಲ್ಲಿ ಇರುವ ಕಸುವು. ಅದು ಕಲಿತದ್ದಲ್ಲ. ಹೊರಗಿನಿಂದ ಬಂದದ್ದಲ್ಲ. ವ್ಯಕ್ತಿಗತವಾದದ್ದು, ಅಂತಸ್ಥವಾದದ್ದು. ಅದಕ್ಕೊಂದು ಉದ್ದೇಶವಿದೆ. ಹಾಗಾಗಿ IL ನ ಪರಿಕಲ್ಪನೆಯನ್ನು ಒಪ್ಪಿದರೆ ಆಗ ನುಡಿಯ ಅಧ್ಯಯನವು ಈ ಮಾನಸಿಕ ಸಾಮರ್ಥ್ಯದ ಅಧ್ಯಯನವೆಂದಾಗುತ್ತದೆ. ಸಹಜವಾಗಿಯೇ ಈ ಅಧ್ಯಯನಕ್ಕಾಗಿ ಪ್ರಾಕೃತಿಕ ವಿಜ್ಞಾನದ ಅಧ್ಯಯನದ ವಿಧಾನಗಳನ್ನು ಬಳಸಬೇಕಾಗುತ್ತದೆ. ಈ ವಿಧಾನಗಳು ನಾವು ಬಲ್ಲಂತೆ ತಾವು ಅಧ್ಯಯನ ಮಾಡುತ್ತಿರುವ ವಸ್ತು/ಸಂಗತಿಗಳ ಒಂದು ಆದರ್ಶ ರೂಪವನ್ನು ಕಲ್ಪಿಸಿಕೊಳ್ಳುತ್ತದೆ. ಆದರ್ಶ ರೂಪದ ಸ್ವರೂಪದ ಬಗೆಗೆ ಕೆಲವು ಆಧಾರ ಕಲ್ಪನೆಗಳನ್ನು ಮುಂದಿಡುತ್ತವೆ. ಈ ಆಧಾರ ಕಲ್ಪನೆಗಳನ್ನು ಪ್ರಾಯೋಗಿಕವಾಗಿ ಪರೀಕ್ಷಿಸಲು ಸಾಧ್ಯವಿರುತ್ತದೆ. ಇಂತಹ ಆಧಾರ ಕಲ್ಪನೆಗಳಿಂದಲೇ ತಾತ್ತ್ವಿಕ ನೆಲೆಗಳನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ. IL ಎಂಬುದನ್ನು ಅಧ್ಯಯನ ಮಾಡುವವರಿಗೆ ಒಪ್ಪಿತವಾಗುವ ಆಧಾರ ಕಲ್ಪನೆಯು ಹೀಗಿದೆ.

> **ಪ್ರತಿಯೊಬ್ಬರಲ್ಲೂ ಹುಟ್ಟಿನಿಂದಲೇ ಇರುವ ಜೈವಿಕ ಸಾಮರ್ಥ್ಯವೊಂದು ಗೊತ್ತಾದ ಕಾರಣಗಳಿಂದಾಗಿ ಆಯಾ ವ್ಯಕ್ತಿಯಲ್ಲಿ ಒಂದು ನುಡಿಯಾಗಿ ರೂಪುಗೊಳ್ಳುತ್ತದೆ. ಇದು ಒಬ್ಬ ವ್ಯಕ್ತಿಯಲ್ಲಿ ಹೇಗೆ ರೂಪುಗೊಳ್ಳುತ್ತದೆ ಎಂಬ ಪ್ರಶ್ನೆಗೆ ಉತ್ತರಿಸುವುದಷ್ಟೇ ಅಧ್ಯಯನದ ಗುರಿಯಲ್ಲ. ಹಾಗೆಯೇ ದೇಹದ ಬೆಳವಣಿಗೆಯ ಯಾವ ಹಂತದಲ್ಲಿ ಇದು ಸಂಭವಿಸುತ್ತದೆ ಎಂಬುದನ್ನು ಸಾದರ ಪಡಿಸಿದರಷ್ಟೇ ಸಾಲದು. ಒಟ್ಟಾರೆಯಾಗಿ ಮನುಷ್ಯರ ಮೆದುಳಿನಲ್ಲಿ ಈ ಸಂಬಂಧವಾಗಿ ನಡೆಯುವ ಎಲ್ಲ ಪ್ರಕ್ರಿಯೆಗಳನ್ನು ವಿವರಿಸಬೇಕಾದ ಅಗತ್ಯವಿರುತ್ತದೆ.**

ವ್ಯಕ್ತಿಯಲ್ಲಿ ನುಡಿ ನೆಲೆಗೊಳ್ಳುವ ರೀತಿಯನ್ನು ಜೈವಿಕವಾಗಿ ವಿವರಿಸುವ ಅಗತ್ಯವನ್ನು ಈಗ ಒಪ್ಪಿಕೊಳ್ಳಲಾಗಿದೆ. ಈ ನಿಟ್ಟಿನಲ್ಲಿ ಹುಟ್ಟಿನಿಂದಲೇ ಮಗುವಿನ ಮೆದುಳಿನಲ್ಲಿ ಒಂದು ಪ್ರಾರಂಭಿಕ ಹಂತ ರೂಪುಗೊಂಡಿರುತ್ತದೆ. ಇದನ್ನು ಸದ್ಯ ವೈಶ್ವಿಕ ವ್ಯಾಕರಣ (UG)ಎಂದು ಕರೆಯಲಾಗಿದೆ. ಈ ಪ್ರಾರಂಭಿಕ ಅವಸ್ಥೆಗೆ ಹೊರಜಗತ್ತಿನಿಂದ ದೊರಕುವ ಮಾಹಿತಿ ಮತ್ತು ಇತರ ಜೈವಿಕ ಪ್ರಕ್ರಿಯೆಗಳ ನೆರವಿನಿಂದ IL ರೂಪುಗೊಳ್ಳುತ್ತದೆ. ಹೀಗಾಗಿ IL ಸಂಪೂರ್ಣವಾಗಿ ಮೆದುಳಿನ ಒಳಗೆ ನಡೆಯುವ ಬದಲಾವಣೆಗಳಿಂದ ರೂಪುಗೊಳ್ಳುತ್ತದೆಯೇ ಹೊರತು ಹೊರಜಗತ್ತಿನ ಪ್ರೇರಣೆಗಳಿಂದ ಅಲ್ಲ ಎಂಬುದು ಖಚಿತವಾದಂತಾಯಿತು. ಮೆದುಳಿನಲ್ಲೇ ಇರುವ ಗೊತ್ತಾದ ಜೀವಭೌತಿಕ ಬೆಳವಣಿಗೆಗಳು IL ಗೆ ಕಾರಣವಾಗುತ್ತವೆ. ಹೊರಜಗತ್ತಿನಲ್ಲಿ ಇರುವ ನುಡಿಯ ಪರಿಕರಗಳು ಸಮುದಾಯದ ನುಡಿ ಬಳಕೆಗಳು IL ನ ಬೆಳವಣಿಗೆಗೆ ಯಾವ ನೆರವನ್ನೂ ನೀಡುವುದಿಲ್ಲ.

ನಿಯೋಗ

ನಿಯೋಗ ಎಂಬ ಪದವನ್ನು ಹಲವು ರೀತಿಗಳಲ್ಲಿ ಬಳಸಲಾಗುತ್ತದೆ. ಸಾಮಾನ್ಯ ತಿಳುವಳಿಕೆ ಮತ್ತು ಈ ತಿಳುವಳಿಕೆಗೆ ಲಭ್ಯವಿರುವ ಪರಿಕಲ್ಪನೆಗಳ ನೆರವಿನಿಂದ ವೈಜ್ಞಾನಿಕವಾದ ಚೌಕಟ್ಟನ್ನು ರೂಪಿಸಿಕೊಳ್ಳಲಾಗುತ್ತದೆ. ಆದರೆ ಸಾಮಾನ್ಯ ತಿಳುವಳಿಕೆ ಎಂಬುದು ಯಾವಾಗಲೂ ಅದನ್ನು ಬಳಸುವವರ ಅಗತ್ಯ ಮತ್ತು ಅಪೇಕ್ಷೆಗಳನ್ನು ಪೂರೈಸುವ ಗುರಿಯನ್ನು ಹೊಂದಿರುತ್ತದೆ. ಈ ಕಾರಣದಿಂದಾಗಿ ಸಾಮಾನ್ಯ ತಿಳುವಳಿಕೆ ಮತ್ತು ಅದರಿಂದ ದೊರಕುವ ಪರಿಕಲ್ಪನೆಗಳು ಯಾವಾಗಲೂ ಮಾನವ ಕೇಂದ್ರಿತವೇ ಆಗಿರುತ್ತದೆ. ಪ್ಲೇಟೋನಿಂದ ಮೊದಲುಗೊಂಡು ಎಲ್ಲಾ ತಾತ್ವಿಕ ಚಿಂತಕರೂ ಹೀಗೆ ಮಾನವ ಕೇಂದ್ರಿತ ನೆಲೆಗಳನ್ನೇ ಪ್ರತಿಪಾದಿಸಿದ್ದಾರೆ. ಆದರೆ, ವಿಜ್ಞಾನದ ವಿವಿಧ ಶಾಖೆಗಳು ಅದರಲ್ಲೂ ಗಣಿತಶಾಸ್ತ್ರ ಈ ಬಗೆಯ ಮಾನವ ಕೇಂದ್ರಿತ ನೆಲೆಯಿಂದ ಹೊರಬಂದಿದೆ. ಇದರಿಂದಾಗಿಯೇ ಹದಿನೇಳನೆಯ ಶತಮಾನದಿಂದೀಚೆಗೆ ಹೆಚ್ಚು ವಸ್ತುನಿಷ್ಠವಾದ ವಿಶ್ಲೇಷಣೆಗಳನ್ನು, ವಿವರಗಳನ್ನು ನೀಡಲು ಸಾಧ್ಯವಾಗಿದೆ. ಮತ್ತು ಸಾಮಾನ್ಯ ತಿಳುವಳಿಕೆಯು ನೆಲೆಗೊಳಿಸಿದ ಬಗೆಗಿಂತ ಭಿನ್ನವಾಗಿ ಜಗತ್ತನ್ನು ವಿವರಿಸಲು ಸಾಧ್ಯವಾಗಿದೆ.

ಜೀವಶಾಸ್ತ್ರವು ನುಡಿಯ ಅಧ್ಯಯನದ ದೃಷ್ಟಿಯಿಂದ ಹೆಚ್ಚು ಅಗತ್ಯವಾದ ವಿಜ್ಞಾನ ಶಾಖೆಯಾಗಿದೆ. ಆದರೆ ಇದನ್ನೂ ಸಾಮಾನ್ಯ ತಿಳುವಳಿಕೆಯ ನಂಟನ್ನು ಪೂರ್ಣವಾಗಿ ತೊರೆದಿಲ್ಲ. ಡಾರ್ವಿನ್ ಪ್ರತಿಪಾದಿಸಿದ ಪ್ರಾಕೃತಿಕ ಆಯ್ಕೆಯ ಪರಿಕಲ್ಪನೆಗೆ ಕಟ್ಟುಬಿದ್ದಿದೆ. ಜೀವಿಗಳು ಪರಿಸರಕ್ಕೆ ಹೊಂದಿಕೊಂಡು ಬದುಕುತ್ತವೆ ಎಂಬ ಚಿಂತನೆಯೇ ಇನ್ನೂ ಪ್ರಬಲವಾಗಿದೆ. ಈ ಚೌಕಟ್ಟಿನಿಂದ ಹೊರಬಂದು ಜೀವಜಗತ್ತು ತನ್ನೊಳಗೆ ಬೆಳೆಯುವ ಪರಿವರ್ತನೆ ಹೊಂದುವ ನೆಲೆಯನ್ನು ಹೆಚ್ಚು ವಸ್ತುನಿಷ್ಠವಾಗಿ ವಿವರಿಸಲು ಜೀವಶಾಸ್ತ್ರಕ್ಕೆ ಸಾಧ್ಯವಾಗಿಲ್ಲ.

ಭೌತಶಾಸ್ತ್ರ ಮತ್ತು ರಸಾಯನ ಶಾಸ್ತ್ರಗಳಲ್ಲಿ ನಡೆದಿರುವ ಸಂಶೋಧನೆಗಳು ಹೆಚ್ಚು ವಸ್ತುನಿಷ್ಠ ವಿವರಣೆಯತ್ತ ಸಾಗುತ್ತಿವೆಯಾದರೂ ಜೀವಶಾಸ್ತ್ರವು ಈ ಬದಲಾವಣೆಗೆ ಇನ್ನೂ ಹೊಂದಿಕೊಂಡಿಲ್ಲ. ಉದಾ.ಗೆ ಜೀವಜಗತ್ತಿನಲ್ಲಿ ಯಾವುದು ಉಳಿಯಬೇಕು ಮತ್ತು ಯಾವುದು ಅಳಿಯಬೇಕು ಎಂಬುದನ್ನು ನಿರ್ಧರಿಸುವ ಅಂಶಗಳು ಯಾವುವು ಅವು ಆ ಜಗತ್ತಿನ ಹೊರಗೆ ಇರುತ್ತವೋ ಅಥವಾ ಆ ಜಗತ್ತಿನ ಒಳಗೇ ಇರುತ್ತವೋ ಎಂಬ ಪ್ರಶ್ನೆ ಈಗ ಮುಂಚೂಣಿಗೆ ಬಂದಿದೆ. ಸಾಮಾನ್ಯ ತಿಳುವಳಿಕೆಯು ಎಲ್ಲ ಜೀವಗಳ ರಚನೆಗೆ ಒಂದು ನಿಯೋಗವಿದೆ. ಆ ನಿಯೋಗಕ್ಕೆ ಅನುಗುಣವಾಗಿಯೇ ಅವುಗಳ ಅಳಿವು ಉಳಿವು ನಿರ್ಧಾರವಾಗುತ್ತದೆ ಎಂದು ಪ್ರತಿಪಾದಿಸುತ್ತದೆ. ಆದರೆ ವಸ್ತು ಸ್ಥಿತಿ ಹಾಗಿಲ್ಲ. ಜೀವಿಗಳ ರಚನೆಗೆ ಒಂದು ವಿನ್ಯಾಸ ಇದ್ದರೂ ಅದಕ್ಕೊಂದು ಗೊತ್ತಾದ ನಿಯೋಗ ಇರುವ ಸಾಧ್ಯತೆಯನ್ನು ಈಗ ಒಪ್ಪಲಾಗುತ್ತಿಲ್ಲ.

ನಮ್ಮ ದಿನನಿತ್ಯದ ಬದುಕಿನಲ್ಲಿ ಪ್ರತಿಯೊಂದು ವಸ್ತುವಿಗೆ ವ್ಯವಸ್ಥೆಗೆ ಮತ್ತು ಸಂಸ್ಥೆಗೆ ಒಂದು ಗೊತ್ತಾದ ನಿಯೋಗ ಇರುತ್ತದೆಂದು ನಂಬುತ್ತೇವೆ. ಉದಾಗೆ, ನೀರು, ಇದಕ್ಕೆ ದಾಹ ತಣಿಸುವ ನಿಯೋಗವಿದೆ ಎಂದು ಒಮ್ಮೆ ತಿಳಿದರೆ ಮತ್ತೊಮ್ಮೆ ಬೆಳೆಗಳ

ವೃದ್ಧಿಗೆ ನೆರವಾಗುವ ಇಲ್ಲವೇ ಶುಚಿಗೊಳಿಸುವ ಇಲ್ಲವೇ ದೋಣಿಗಳನ್ನು ತೇಲಿಸುವ ಈಜಲು ಅನುವು ಮಾಡಿಕೊಡುವ ನಿಯೋಗವಿದೆ ಎಂದು ತಿಳಿಯುತ್ತೇವೆ. ಸರ್ಕಾರದಂಥ ಒಂದು ಸಂಸ್ಥೆಗೆ ಕಾನೂನು ಜಾರಿಗೊಳಿಸುವ ನಿಯೋಗವಿದೆ ಎನ್ನುತ್ತೇವೆ. ಜೊತೆಗೆ ಜನರ ಬೇಕುಬೇಡಗಳನ್ನು ಪೂರೈಸುವ, ಅವರ ಹಕ್ಕುಗಳನ್ನು ರಕ್ಷಿಸುವ ಸಾರ್ವಜನಿಕ ಹಿಂಸೆಯನ್ನು ಹತ್ತಿಕ್ಕುವ ನಿಯೋಗವಿದೆಯೆಂದು ಹೇಳುತ್ತೇವೆ. ಹೀಗೆಯೇ ದೇಹದ ಬೇರೆ ಬೇರೆ ಭಾಗಗಳಿಗೂ ಕೂಡಾ ಒಂದಕ್ಕಿಂತ ಹೆಚ್ಚು ನಿಯೋಗಗಳನ್ನು ಗುರುತಿಸಿದ್ದೇವೆ. ಚರ್ಮಕ್ಕೆ ಧೂಳನ್ನು ದೇಹದೊಳಕ್ಕೆ ಬರದಂತೆ ತಡೆಯುವ ನಿಯೋಗವಿದೆ. ಹಾಗೆಯೇ ಸ್ಪರ್ಶಾನುಭವವನ್ನು ಒದಗಿಸುವ ನಿಯೋಗ ಕೂಡಾ ಚರ್ಮಕ್ಕಿದೆ.

ಈ ನಿಟ್ಟಿನಲ್ಲಿ ಚಿಂತಿಸಿದರೆ ಯಾವುದೇ ವಸ್ತುವಿನ ನಿಯೋಗವೆಂದರೆ ಅದರಿಂದ ಯಾವು ಕೆಲಸ ಮಾಡಲು ಸಾಧ್ಯವೋ ಅದು ಎಂದು ಇಲ್ಲವೇ ಆ ವಸ್ತುವು ಯಾವ ಉದ್ದೇಶವನ್ನು ಪೂರೈಸುತ್ತದೋ ಅದೇ ಅದರ ನಿಯೋಗವೆಂದೂ ತೀರ್ಮಾನಿಸ ಬೇಕಾಗುತ್ತದೆ. ಹಕ್ಕಿಯ ರೆಕ್ಕೆಗಳು ಹಾರುವ ಉದ್ದೇಶಕ್ಕಾಗಿ ರೂಪುಗೊಂಡಿವೆ ಎಂದು ತಿಳಿದರೆ ಆಗ ರೆಕ್ಕೆಗಳು ಹಕ್ಕಿಯ ಹಾರುವ ಅಪೇಕ್ಷೆಗಳನ್ನು ಪೂರೈಸಿವೆ ಎಂದು ಹೇಳಬೇಕಾಗುತ್ತದೆ. ಆದರೆ ಹಕ್ಕಿಗಳು ಸಂಗಾತಿಯನ್ನು ಸೆಳೆಯಲು ರೆಕ್ಕೆಗಳನ್ನು ಬಳಸಿ ನರ್ತಿಸುತ್ತಿದ್ದರೆ ಆಗ ರೆಕ್ಕೆಯ ಉದ್ದೇಶ ಬೇರೆಯೇ ಇದೆ ಎಂದು ತೀರ್ಮಾನಿಸ ಬೇಕಾಗುತ್ತದೆ. ಅಂದರೆ ಸಾಮಾನ್ಯ ತಿಳುವಳಿಕೆ ಯಾವಾಗಲೂ ಲೋಕದಲ್ಲಿ ಏನು ಸಂಭವಿಸುತ್ತಿದೆಯೋ ಇಲ್ಲವೋ ಸಂಭವಿಸಬೇಕೆಂದು ಬಯಸಲಾಗುತ್ತಿದೆಯೋ ಅದಕ್ಕೆ ಅನುಗುಣವಾಗಿಯೇ ಯಾವುದೇ ವಸ್ತು ಇಲ್ಲವೇ ಜೀವಿಯ ನಿಯೋಗವನ್ನು ಗುರುತಿಸಲಾಗುತ್ತದೆ. ಇನ್ನೂ ವಿಶದವಾಗಿ ಹೇಳುವುದಾದರೆ ನಿತ್ಯ ಜೀವನದ ಸಮಸ್ಯೆಗಳನ್ನು ನಿವಾರಿಸುವ ಉದ್ದೇಶವೇ ಪ್ರತಿ ವಸ್ತು ಇಲ್ಲವೇ ಜೀವಿಗೆ ಇದೆ ಎಂದು ನಂಬುತ್ತೇವೆ. ಆದರೆ ಇದನ್ನು ಯಾವಾಗಲು ಒಪ್ಪುವುದು ಕಷ್ಟ. ಚಾಮ್ಸ್ಕಿ ಇದಕ್ಕೆ ನೀರು ಎಂಬ ವಸ್ತುವನ್ನು ಉದಾಹರಣೆಗೆ ಎತ್ತಿಕೊಳ್ಳುತ್ತಾರೆ. ನೀರು ಎಂಬುದು ಒಂದು ಪರಿಕಲ್ಪನೆ. ಅದನ್ನು ಪ್ರತಿನಿಧಿಸುವ ವಸ್ತುವೊಂದನ್ನು ನಾವು ಲೋಕದಲ್ಲಿ ನೀರು ಎಂದು ಗುರುತಿಸುತ್ತೇವೆ. ಆದರೆ ಆ ನೀರು ಎಂಬ ವಸ್ತುವಿಗೆ ಟೀ ಪುಡಿಯ ಚೀಲಗಳನ್ನು ಹಾಕಿದ ಕೂಡಲೇ ಅದನ್ನು ನೀರು ಎಂದು ಕರೆಯಲಾಗುವುದಿಲ್ಲ. ಅದು ಕೇವಲ ವೈಜ್ಞಾನಿಕ ವಿವರಣೆಯಂತೆ ಜಲಜನಕ ಮತ್ತು ಆಮ್ಲಜನಕಗಳು ಗೊತ್ತಾದ ಪ್ರಮಾಣದಲ್ಲಿ ಸೇರಿ ಉಂಟಾದ ವಸ್ತು ಮಾತ್ರ. ನಿಜ ಜೀವನದಲ್ಲಿ ನೀರು ಮತ್ತು ಟೀ ಇದೆ ಎಂದು ನಂಬುತ್ತೇವೆ. ನೀರು ಟೀಯಾಗಿ ಬದಲಾಗುವುದನ್ನು ಒಪ್ಪುತ್ತೇವೆ. ಆದರೆ ವಿಜ್ಞಾನಕ್ಕೆ ನೀರು ಇಲ್ಲ ಟೀಯೂ ಇಲ್ಲ.

ಜೀವ ರಚನೆಯಲ್ಲಿ ಇರುವ ವಿನ್ಯಾಸಕ್ಕೆ ಯಾವುದೋ ಒಂದು ಉದ್ದೇಶವನ್ನು ಪೂರೈಸುವ ಗುರಿ ಇದೆ ಎಂದು ನಂಬುವುದೇ ವಾಡಿಕೆಯಲ್ಲಿದೆ. ಮತ್ತು ವಿಕಾಸವಾದವು ಇದನ್ನು ಸಮರ್ಥಿಸುತ್ತಾ ಜೀವಿಯು ಪರಿಸರದ ಒತ್ತಡಗಳಿಗುನುಗುಣವಾಗಿ ತನ್ನ ರಚನೆಯಲ್ಲಿ ಹೊಂದಾಣಿಕೆಗಳನ್ನು ಮಾಡಿಕೊಳ್ಳುತ್ತದೆ ಎಂದು ವಿವರಿಸುತ್ತದೆ. ಆದರೆ ಇತ್ತೀಚಿನ ಚಿಂತನೆಗಳು ಮತ್ತು ಸಂಶೋಧನೆಗಳು ಜೀವ ರಚನೆಯ ವಿನ್ಯಾಸವನ್ನು

ನಿರ್ದಿಷ್ಟ ನಿಯೋಗಕ್ಕಾಗಿ ರೂಪುಗೊಂಡದ್ದು ಎಂಬುದನ್ನು ಒಪ್ಪುವುದಿಲ್ಲ. ಅದರಿಂದಾಗಿ ಆ ರಾಚನಿಕ ವಿನ್ಯಾಸದಲ್ಲಿ ಆಗುವ ಬದಲಾವಣೆಗೆ ಪರಿಸರದ ಒತ್ತಡಗಳಿಗಿಂತ ಒಳಗಿನ ವಿಕಲ್ಪಗಳು ಕಾರಣವಾಗುತ್ತವೆ ಎಂದು ತಿಳಿಯಲಾಗಿದೆ.

ನುಡಿ, ನಿಯೋಗ, ಸಂವಹನ

ಮಾನವ ಪ್ರಕೃತಿಯ ವೈಶಿಷ್ಟ್ಯಗಳಿಗೆ ನುಡಿಯೇ ಕಾರಣವೆಂದು ಒಪ್ಪಲಾಗಿದೆ. ಉಳಿದ ಜೀವಿಗಳಿಗಿಂತ ನಮ್ಮನ್ನು ಬೇರೆ ಎಂದು ಗುರುತಿಸಲು ಅದು ಕಾರಣವಾಗಿದೆ. ನುಡಿ ಎಂಬುದು ಜೈವಿಕ ನೆಲೆಯುಳ್ಳದ್ದು ಎಂದು ಚಾಮ್ಸ್‌ಕಿ ವಾದಿಸುತ್ತಾರೆ. ಅದು ಮನುಷ್ಯ ಜೀವಿ ಹುಟ್ಟಿದಾಗಲೇ ಅದರ ಜಿನೋಂಗಳಲ್ಲಿ ಹುದುಗಿದ್ದು ಮಗುವಿನ ಸಹಜ ಬೆಳವಣಿಗೆಯ ಜೊತೆಗೆ ಕಾಣಿಸಿಕೊಳ್ಳುತ್ತದೆ. ಇದಲ್ಲದೆ ನುಡಿಯು ಮನುಷ್ಯರಿಗೆ ಗ್ರಹಿಸುವ ಸಾಮರ್ಥ್ಯವನ್ನು ದೊರಕಿಸಿ ಕೊಟ್ಟಿದೆ. ಉಳಿದ ಜೀವಿಗಳಲ್ಲಿ ಕಾಣದ ಗ್ರಹಿಕೆಯ ಸಾಮರ್ಥ್ಯಕ್ಕೆ ಮನುಷ್ಯರಲ್ಲಿರುವ ನುಡಿಯ ಕಸುವೇ ಕಾರಣ. ಮನುಷ್ಯರು ವಿಕಾಸದ ಹಂತದಲ್ಲಿ ಪರಸ್ಪರ ಸಂವಹನ ಮಾಡುವ ಅಪೇಕ್ಷೆಯಿಂದಾಗಿ ನುಡಿಯನ್ನು ರೂಪಿಸಿಕೊಂಡರು ಎಂಬ ವಾದವನ್ನು ಮತ್ತು ನುಡಿ ಎಂಬುದು ಹಂತಹಂತವಾಗಿ ವಿಕಾಸಗೊಳ್ಳುತ್ತಾ ಬಂತು ಎಂಬ ತಿಳುವಳಿಕೆಯನ್ನು ಚಾಮ್‌ಸ್ಕಿ ಒಪ್ಪುವುದಿಲ್ಲ. ಹಾಗಾಗಿಯೇ ಮನುಷ್ಯರನ್ನು ಸಮಾಜದ ಸದಸ್ಯರನ್ನಾಗಿ ಪರಿವರ್ತಿಸುವ ನಿಯೋಗ ಭಾಷೆಗೆ ಇದೆ ಎಂಬ ವಾದವೇ ಚಾಮ್‌ಸ್ಕಿಗೆ ಸಮ್ಮತವಲ್ಲ. ಇದನ್ನು ಅವರು ವಿವರಿಸುವ ಬಗೆಯನ್ನು ನೋಡೋಣ.

ನುಡಿಗೆ ಒಂದು ನಯೋಗವಿದೆ ಎಂದು ಹೇಳುವುದಾದರೆ ಈ ನಿಯೋಗ ಎಂಬುದು ಜೈವಿಕವೊ ಮಾನಸಿಕವೋ ಎಂಬುದು ಸ್ಪಷ್ಟವಿಲ್ಲ. ಉದಾ.ಗೆ ಅಸ್ಥಿಪಂಜರದ ನಿಯೋಗವೇನು ಎಂದು ಕೇಳಿದರೆ ಅದು ವ್ಯಕ್ತಿ ನೆಟ್ಟಗೆ ನಿಲ್ಲುವಂತೆ ಮತ್ತು ನೆಲಕ್ಕೆ ಬೀಳದಂತೆ ನೋಡಿಕೊಳ್ಳುವ ನಿಯೋಗವನ್ನು ಹೊಂದಿದೆ ಎನ್ನುತ್ತೇವೆ. ಈ ವಿವರಣೆ ಸುಳ್ಳಲ್ಲ. ಆದರೆ ಅಸ್ಥಿಪಂಜರಕ್ಕೆ ಕ್ಯಾಲ್ಸಿಯಂನ್ನು ಕೂಡಿಟ್ಟಿಕೊಳ್ಳುವ ರಕ್ತ ಕಣಗಳನ್ನು ಉತ್ಪಾದಿಸುವ ನಿಯೋಗವೂ ಇದೆ. ಹಾಗಾಗಿ ದೇಹದ ಅಂಗಾಂಗಗಳಲ್ಲಿ ಇಂಥದೇ ನಿಯೋಗವಿದೆ ಎಂದು ಗುರುತಿಸುವ ನಾವು ಸಾಮಾನ್ಯವಾಗಿ ಆ ಅಂಗಗಳಿಂದ ನಮಗೆ ಯಾವ ಮುಖ್ಯ ಕೆಲಸ ಆಗ ಬೇಕಾಗಿದೆಯೋ ಅದರತ್ತ ಗಮನ ಹರಿಸುತ್ತೇವೆ.

ಈಗ ನುಡಿಯ ವಿಚಾರಕ್ಕೆ ಬರೋಣ. ಯಾವುದೇ ವ್ಯಕ್ತಿಯಲ್ಲಿ ನುಡಿಯ ಬಳಕೆಯ ಶೇ. 99.9 ರಷ್ಟು ಮನಸ್ಸಿನೊಳಗೇ ನಡೆಯುತ್ತಿರುತ್ತದೆ. ನಿಮ್ಮೊಳಗೆ ನೀವು ಮಾತನಾಡಿಕೊಳ್ಳದೆ ಒಂದು ನಿಮಿಷವನ್ನು ಕಳೆಯಲಾರಿರಿ. ನಾನು ನನ್ನೊಳಗೆ ಮಾತನಾಡಿಕೊಳ್ಳುವುದಿಲ್ಲ ಎಂದು ಹಟಹಿಡಿದು ಗೆದ್ದ ವ್ಯಕ್ತಿಯನ್ನು ನಾನು ಕಂಡಿಲ್ಲ. ಹೀಗೆ ಮಾತನಾಡಿಕೊಳ್ಳುವಾಗ ನಾವು ನಿಯಮ ಬದ್ಧವಾದ ವಾಕ್ಯಗಳನ್ನೇನೂ ಬಳಸುವುದಿಲ್ಲ. ತುಂಡುತುಂಡಾದ ವಾಕ್ಯಗಳು ಪದ ಸರಣಿಗಳು ಅಲ್ಲಿ ಬಳಕೆಯಾಗುತ್ತಿವೆ. ಹೀಗಿರುವಾಗ ಇತರರೊಡನೆ ಸಂವಹನ ಮಾಡುವ ಮುಖ್ಯ ನಿಯೋಗವು ನುಡಿಗೆ ಇದೆ ಎಂದು ಒಪ್ಪುವುದಾದರೂ ಹೇಗೆ? ಇನ್ನೂ ಮುಂದುವರಿದು ಹೇಳುವುದಾದರೆ

ಇತರರೊಡನೆ ಸಂವಹನ ಮಾಡಲು ನಾವು ನಿಜವಾಗಿ ನುಡಿಗಿಂತಲೂ ಇನ್ನೂ ಬೇರೆ ಬೇರೆ ಸಂಗತಿಗಳನ್ನು ಬಳಸುತ್ತೇವೆ. ಉದಾ.ಗೆ ನಮ್ಮ ಅಂಗಭಂಗಿಗಳು, ನಡಿಗೆಗಳು ಉಡುಪುಗಳು ಇತ್ಯಾದಿ ಹಾಗಾಗಿ, ಸಂವಹನ ಎಂಬ ಚಟುವಟಿಕೆಯಲ್ಲಿ ನುಡಿಯ ಪಾತ್ರ ಅತ್ಯಲ್ಪವಾದುದು.

ನುಡಿಯ ಬಳಕೆಯನ್ನೇ ಗಮನಿಸುವುದಾದರೆ ಮಾತುಗಳಲ್ಲಿ ಇಲ್ಲವೇ ಬರಹದಲ್ಲಿ ಬರುವ ಅದರ ಪ್ರಮಾಣ ತೀರಾ ಅತ್ಯಲ್ಪ. ಹಾಗೆ ಆಡಿದ ಮಾತುಗಳು ಇಲ್ಲವೇ ಬರವಣಿಗೆ ಕೂಡಾ ಪೂರ್ಣ ಪ್ರಮಾಣದಲ್ಲಿ ಸಂವಹನದ ಉದ್ದೇಶಕ್ಕಾಗಿಯೇ ರೂಪುಗೊಂಡಿರುವುದಿಲ್ಲ. ಏಕೆಂದರೆ ಸಂವಹನವೆಂದರೆ ಇತರರಿಗೆ ಏನನ್ನೋ ತಿಳಿಸುವುದು ಎಂದಾದರೆ ನಮ್ಮ ಮಾತುಗಳಲ್ಲಿ ಎಷ್ಟೊ ವೇಳೆ ಈ ಉದ್ದೇಶ ಇರುವುದೇ ಇಲ್ಲ. ಒಂದು ಜನಸಂದಣಿಯಲ್ಲಿ ನೆರೆದವರು ಮಾತಾಡುತ್ತಿದ್ದಾರೆ ಎಂದುಕೊಳ್ಳಿ. ಅಲ್ಲಿ ಮಾತು ಬಳಕೆಯಾಗುತ್ತಿದ್ದರೂ ಸಂವಹನ ಎಂಬುದು ತುಂಬಾ ಕಡಿಮೆ ಪ್ರಮಾಣದಲ್ಲಿರುತ್ತದೆ. ಹಾಗಾಗಿ ನುಡಿಯು ವಾಸ್ತವವಾಗಿ ಒಳಮುಖಿಯಾದುದು. ಅದರ ಹೊರಮುಖಿ ಬಳಕೆ ಅದರ ನಿಯೋಗವನ್ನು ನಿರ್ಧರಿಸಲಾಗದು.

ಸಂವಹನ ಎಂಬ ಮಾತಿನ ಅರ್ಥವನ್ನು ತಿಳಿದು ಹೇಳುವುದಾದರೆ ನಮ್ಮ ನುಡಿ ಬಳಕೆಯಲ್ಲಿ ಈ ಅರ್ಥದ ಪೂರೈಕೆಯಾಗುವುದು ಕನಿಷ್ಟ ಪ್ರಮಾಣದಲ್ಲಿ ಇರುತ್ತದೆ. ಇದನ್ನು ಮಾನವ ಜೀವಿಗಳು ಸಂವಹನವೆಂಬ ಅಗತ್ಯವನ್ನು ಪೂರೈಸಿಕೊಳ್ಳಲೆಂದು ನುಡಿ ಎಂಬ ವ್ಯವಸ್ಥೆಯನ್ನು ಹಂತಹಂತವಾಗಿ ಬೆಳೆಸಿಕೊಂಡರು ಎಂಬ ವಾದವನ್ನು ಗಮನಿಸೋಣ. ಮನುಷ್ಯನನ್ನು ಬಿಟ್ಟರೆ ಎಷ್ಟೋ ಪ್ರಾಣಿಗಳಲ್ಲಿ ಸಂವಹನ ವ್ಯವಸ್ಥೆ ಇದೆ. ಚಿಕ್ಕ ಇರುವೆಗೂ ಈ ಸಂವಹನದ ಅಗತ್ಯವಿದೆ. ಅದರ ಪೂರೈಕೆಗಾಗಿ ಒಂದು ವ್ಯವಸ್ಥೆಯೂ ಇದೆ. ಆದರೆ ಪ್ರಾಣಿಗಳಲ್ಲಿರುವ ಈ ವ್ಯವಸ್ಥೆಯು ಹಲವು ಗೊತ್ತಾದ ಸಂಖ್ಯೆಯ ಸೂಚಕಗಳ ಮೊತ್ತ ಮಾತ್ರ. ಆ ಸೂಚಕಗಳನ್ನು ಬಳಸಿ ತನ್ನಂಥ ಇನ್ನೊಂದು ಜೀವಿಗೆ ಏನನ್ನೋ ತಿಳಿಸಲು ಬಯಸುತ್ತದೆ. 'ಹದ್ದು ಬಂತು' ಎಂತಲೋ 'ಅಲ್ಲಿ ಹಣ್ಣು ಇದೆ' ಎಂತಲೋ 'ನೀರು ಕಾಣಿಸುತ್ತದೆ' ಎಂತಲೋ ಏನಾದರೂ ಸಂಗತಿಯನ್ನು ಸೂಚಿಸಬಹುದು. ಆದರೆ ಇಂತಹ ಸೂಚಕಗಳ ಸಂಖ್ಯೆಯು ಸೀಮಿತ. ಅವುಗಳಲ್ಲಿ ದೊಡ್ಡ ಪ್ರಮಾಣದ ಬದಲಾವಣೆ ಇಲ್ಲವೇ ಬೆಳವಣಿಗೆ ನಡೆಯುವುದು ಕಡಿಮೆ. ಈ ಸಂಕೇತ ವ್ಯವಸ್ಥೆಗೂ ಮಾನವರ ನುಡಿ ವ್ಯವಸ್ಥೆಗೂ ಯಾವ ಹೋಲಿಕೆಯೂ ಇಲ್ಲ. ಇದರಲ್ಲಿ ಅಚ್ಚರಿ ಏನಿಲ್ಲ. ಮನುಷ್ಯರಿಗೆ ಅತ್ಯಂತ ಹತ್ತಿರದ ಸಂಬಂಧಿಗಳಾಗಿದ್ದು, ಈಗಲೂ ಭೂಮಿಯ ಮೇಲೆ ಜೀವಿಸಿರುವ ಪ್ರಾಣಿಗಳಿವೆ. ಅವುಗಳಿಗೂ ಮನುಷ್ಯರಿಗೂ ವಿಕಾಸದ ಲೆಕ್ಕದಲ್ಲಿ ಒಂದು ಕೋಟಿ ವರ್ಷಗಳ ಅಂತರವಿದೆ. ಹಾಗಾಗಿ ಪ್ರಾಣಿಗಳಲ್ಲಿ ಮನುಷ್ಯರ ನುಡಿಯನ್ನು ಹೋಲುವ ಯಾವ ವ್ಯವಸ್ಥೆಯನ್ನು ಕಾಣಲಾರೆವು.

ಇನ್ನು ಮನುಷ್ಯರ ನುಡಿ ವ್ಯವಸ್ಥೆಗೆ ಬರೋಣ. ಇದು ಅವರಿಗೆ ಎಲ್ಲಿಂದ ದೊರಕಿತು? ಈಗ ಲಭ್ಯವಿರುವ ಪಳೆಯುಳಿಕೆಗಳ ದಾಖಲೆಗಳನ್ನು ನೋಡಿದರೆ ಮನುಷ್ಯರೆಂದು ಗುರುತಿಸಬಹುದಾದ ಜೀವಿಗಳು ಆಫ್ರಿಕಾದ ಯಾವುದೋ ಭಾಗದಲ್ಲಿ

ಕೆಲವು ಲಕ್ಷ ವರ್ಷಗಳ ಹಿಂದೆ ಬದುಕಿದ್ದರು. ಆದರೆ ಮಾನವರ ನುಡಿಗೆ ಅರವತ್ತು ಸಾವಿರ ವರ್ಷಗಳಿಗಿಂತ ಹೆಚ್ಚಿನ ಹಳಮೆ ಇಲ್ಲ. ಅಂದರೆ ಅದಕ್ಕೂ ಮೊದಲು ಇದ್ದ ಮಾನವ ಜೀವಿಗಳಲ್ಲಿ ನುಡಿ ಎಂಬ ವ್ಯವಸ್ಥೆ ಇದ್ದಿರಲಾರದು. ಆಫ್ರಿಕದಲ್ಲಿ ಇದ್ದ ಈ ಜನರು ಅಲ್ಲಿಂದ ಹೊರಟು ಪೆಸಿಫಿಕ್ ಸಾಗರದ ಕೆಲವು ದ್ವೀಪಗಳಲ್ಲಿ ನೆಲಸಿದರು. ಬಳಿಕ ನ್ಯೂಗಿನಿ, ಆಸ್ಟ್ರೇಲಿಯ ಮುಂತಾದ ಕಡೆ ಹೋದರು. ಈಗಲೂ ಈ ಪ್ರದೇಶಗಳಲ್ಲಿ ನಾವು ಆದಿಮ ಜನಾಂಗ ಎಂದು ಗುರುತಿಸಬಹುದಾದ ಸಮುದಾಯಗಳಿವೆ. ವಂಶವಾಹಿಗಳ ಹೋಲಿಕೆಯಿಂದ ನೋಡಿದರೆ ನಮಗೂ ಅವರಿಗೂ ಹೆಚ್ಚಿನ ವ್ಯತ್ಯಾಸಗಳೇನೂ ಇಲ್ಲ. ಅವರು ನಾವಿರುವ ಜಾಗಗಳಲ್ಲಿ ಇದ್ದರೆ ನಮ್ಮಂತೆಯೇ ಆಗುತ್ತಿದ್ದರು. ನಮ್ಮ ನುಡಿಯನ್ನೇ ಆಡುತ್ತಿದ್ದರು. ನಾವು ಅವರಿರುವ ಕಡೆ ಇದ್ದಿದ್ದರೆ ಅವರ ನುಡಿಯನ್ನೇ ಆಡುತ್ತಿದ್ದೆವು. ಅಂದರೆ ಈಗಿರುವ ಮಾನವ ಜನಾಂಗದಲ್ಲಿ ನುಡಿಗೆ ಸಂಬಂಧಿಸಿದ ವಂಶವಾಹಿಯೂ ಹೆಚ್ಚಿನ ವ್ಯತ್ಯಾಸವನ್ನು ಹೊಂದಿಲ್ಲ. ಹಾಗೆ ನೋಡಿದರೆ ಬೇರೆ ಜೀವಿಗಳಿಗೆ ಹೋಲಿಸಿದಾಗ ಮಾನವ ಜನಾಂಗದಲ್ಲಿ ಇರುವ ವಂಶವಾಹಿಗಳ ವ್ಯತ್ಯಾಸ ತುಂಬಾ ಕಡಿಮೆ.

ಹಾಗಾಗಿ ಮಾನವರ ನುಡಿಯು ಅರವತ್ತು ಸಾವಿರ ವರ್ಷಗಳಿಂದೀಚೆಗೆ ಅವರಿಗೆ ದೊರಕಿದ ಹೊಸ ಪರಿಕರ ಎಂದಾಯ್ತು. ಆ ಹಂತದಲ್ಲೂ ಕೂಡಾ ಆಧುನಿಕ ಕಾಲದ ನುಡಿಯ ವ್ಯವಸ್ಥೆಯೇ ಇದ್ದಿತೆಂಬುದಕ್ಕೆ ಪುರಾವೆಗಳಿವೆ. ಅದಕ್ಕಿಂತ ಮೊದಲು ಅರವತ್ತು ಸಾವಿರದಿಂದ ಒಂದು ಲಕ್ಷ ವರ್ಷಗಳ ಅವಧಿಯಲ್ಲಿ ಯಾವುದಾದರೊಂದು ಸಂಕೀರ್ಣ ಸಂಕೇತ ವ್ಯವಸ್ಥೆಯೊಂದು ಇದ್ದಿತೆಂಬುದಕ್ಕೆ ಪುರಾವೆಗಳಿಲ್ಲ. ಆ ಬಳಿಕವೇ ತಟಕ್ಕನೆ ಒಂದು ಸ್ಫೋಟ ಸಂಭವಿಸಿದಂತೆ ತೋರುತ್ತದೆ. ಇದರ ಪರಿಣಾಮವಾಗಿಯೇ ಸಂಕೇತ ವ್ಯವಸ್ಥೆ, ಖಗೋಳ ವ್ಯಾಪಾರಿಗಳ ದಾಖಲೆ, ಸಂಕೀರ್ಣ ಸಾಮಾಜಿಕ ವ್ಯವಸ್ಥೆ ಮುಂತಾದವು ಕಂಡು ಬರುತ್ತವೆ. ಇವೆಲ್ಲವೂ ವಿಕಾಸದ ಹಂತದಲ್ಲಿ ಲೆಕ್ಕ ಹಾಕಿದರೆ ಕ್ಷಣ ಮಾತ್ರದಲ್ಲಿ ಸಂಭವಿಸಿದ್ದು, (ಈ ಕ್ಷಣ ಎಂಬುದಕ್ಕೆ ಇಂದಿನ ಲೆಕ್ಕದಲ್ಲಿ ಸುಮಾರು ಹತ್ತು ಸಾವಿರ ವರ್ಷಗಳು ಎಂದು ಕೊಳ್ಳೋಣ) ಆ ಕ್ಷಣದಲ್ಲಿ ಒಂದು ಬಾರಿ ಜಗಿತ ಭಾರಿ ಮುನ್ನಡೆತ ಆದಂತಿದೆ. ಮನುಷ್ಯರ ಮೆದುಳು ಮಾರ್ಪಾಟಿಗೆ ಒಳಗಾಗಿದೆ. ವಂಶವಾಹಿಗಳಲ್ಲಿ ನಡೆದ ಯಾವುದೋ ಒಂದು ಬದಲಾವಣೆಯು ಮೆದುಳಿನ ಈ ಮರು ವ್ಯವಸ್ಥೆಗೆ ಕಾರಣವಾಯಿತು ಎನ್ನಬೇಕಾಗಿದೆ. ಮೆದುಳಿನ ಈ ಮರು ವ್ಯವಸ್ಥೆಯಿಂದಾಗಿಯೇ ಮಾನವರಿಗೆ ನುಡಿ ಎಂಬ ವಿಶೇಷ ಕಸುವು ದೊರಕಿತು. ಈಗ ಮನುಷ್ಯರಿಗೆ ತಾವೇನು ಯೋಚಿಸುತ್ತಿದ್ದೇವೆ, ಇತರರು ಏನು ಯೋಚಿಸುತ್ತಿದ್ದಾರೆ, ತಾವು ಉದ್ದೇಶಿಸಿದ ಕೆಲಸ ನಡೆಯಬೇಕಾದರೆ ಯಾವ ಯೋಜನೆಗಳನ್ನು ಮಾಡಬೇಕು ಮುಂತಾದ ಸಂಗತಿಗಳನ್ನು ಜಾಗ್ರತವಾಗಿ ಅರಿಯುವ ಸಾಮರ್ಥ್ಯ ಒದಗಿ ಬಂದಿತು. ಇದೆಲ್ಲವೂ ನುಡಿಯ ಕೊಡುಗೆಗಳು ತಾನೇ? ಎಷ್ಟೇ ಹೇಳಿದರೂ ನುಡಿಯ ಕಸುವಿನ ಬಳಕೆ ಒಳಮುಖಿ ಯಾಗಿರುವುದೇ ಹೆಚ್ಚು. ಅದರ ಹೊರಮುಖಿ ಬಳಕೆ ನಗಣ್ಯ.

ಮೆದುಳು ಮರುವ್ಯವಸ್ಥೆಗೆ ಗುರಿಯಾದ ಮಾತಾಡಿದೆವು. ಇದು ಎಲ್ಲ ಮಾನವರಲ್ಲೂ ಸಂಭವಿಸಲಿಲ್ಲ. ವಂಶವಾಹಿಗಳ ವಿಕಲ್ಪಗಳು ಯಾರೋ ಒಬ್ಬರಲ್ಲಿ

ನಡೆಯುತ್ತದೆ. ಇಂಥ ವ್ಯಕ್ತಿ ಆಫ್ರಿಕಾದ ಯಾವುದೋ ಮೂಲೆಯ ಮಾನವ ಜೀವಿಯಾಗಿದ್ದಿರಬೇಕು. ಈ ವಿಕಲ್ಪವೇ ಆ ಬಳಿಕ ಆ ವ್ಯಕ್ತಿಯ ಮುಂದಿನ ತಲೆಮಾರುಗಳಿಗೆ ರವಾನೆಯಾಗುತ್ತಾ ಹೋಗಿದೆ. ಈ ಪರಿವರ್ತನೆಯು ಆ ವ್ಯಕ್ತಿಯ ವಂಶಿಕರಲ್ಲಿ ವ್ಯಾಪಕವಾಗಿ ಹರಡಿರುತ್ತದೆ. ಈ ಗುಂಪು ಇಂತಹ ವಿಕಲ್ಪ ನಡೆಯದ ಉಳಿದ ಮಾನವ ಜೀವಿಗಳಿಗಿಂತ ಭಿನ್ನವಾಗಿ ರೂಪುಗೊಳ್ಳುತ್ತಾ ಹೋಗುತ್ತದೆ.

ವಂಶವಾಹಿಗಳ ವಿಕಲ್ಪದಿಂದ ಆಗಿದ್ದಾದರೂ ಏನು? ಇದನ್ನೇ ನಾವು 'ಸೇರ್ಪಡೆ' ಇಲ್ಲವೇ Merge ಎಂದು ಕರೆಯಬಹುದಾಗಿದೆ. ಸೇರ್ಪಡೆ ಎಂದರೇನು? ಮನಸ್ಸಿನಲ್ಲಿ ಮೂಡಿದ ಇಲ್ಲವೇ ನೆಲೆಗೊಂಡ ಬಿಂಬಗಳನ್ನು ಒಂದರೊಡನೆ ಇನ್ನೊಂದನ್ನು ಕೂಡಿಸಿ ಮತ್ತೊಂದು ದೊಡ್ಡ ಮಾನಸಿಕ ಬಿಂಬವನ್ನು ಕಟ್ಟುವ ಕಸುವೇ ಸೇರ್ಪಡೆ. ಈ ಕಸುವು ದೊರೆತೊಡನೆ ಮಾನಸಿಕ ಜಗತ್ತು ಸಂಪೂರ್ಣವಾಗಿ ಬೇರೆಯಾಗಿ ಬಿಡುತ್ತದೆ.

ಮನುಷ್ಯರಲ್ಲಿ ಸಂವೇದನೆ ಮತ್ತು ದೈಹಿಕ ಪ್ರತಿಕ್ರಿಯೆಗಳ ವ್ಯವಸ್ಥೆಯೊಂದು ಈಗಾಗಲೇ ನೆಲೆಗೊಂಡಿತಷ್ಟೇ. ಈ ವ್ಯವಸ್ಥೆಯನ್ನು ಮನುಷ್ಯರು ಬಳಸುತ್ತಿದ್ದಿರಬೇಕು. ಹೀಗೆ ಸಂವೇದನೆಗಳಿಂದ ದೊರೆತದ್ದನ್ನು ದೈಹಿಕ ಪ್ರಕ್ರಿಯೆಗಳ ಮೂಲಕ ಹೊರ ಹಾಕುವ ಬಗೆ ಬಹಳ ತಡವಾಗಿ ರೂಪುಗೊಂಡಿರಬೇಕು. ಆಗಲೇ ಕಲ್ಲಿನ ಮೇಲೆ ಚಿತ್ರ ಬರೆಯುವ ಅಥವಾ ಮತ್ತಾವುದೋ ಬಗೆಯಲ್ಲಿ ಹೊರಹಾಕುವ ಕೆಲಸಗಳು ನಡೆಯುತ್ತಿದ್ದಿರಬೇಕು. ಈ ಅಭಿವ್ಯಕ್ತಿಯ ಬಗೆಗಳು ಪ್ರಾಣಿಗಳಲ್ಲಿ ಇದ್ದ (ಈಗಲೂ ಇರುವ) ಅಭಿವ್ಯಕ್ತಿ ಕ್ರಮಕ್ಕಿಂತ ಬೇರೆಯೇ ಆಗಿತ್ತು. ಯಾವಾಗ ಮಾನಸಿಕ ಬಿಂಬಗಳನ್ನು ಒಗ್ಗೂಡಿಸಿ ದೊಡ್ಡ ದೊಡ್ಡ ಬೇರೆ ಬೇರೆ ಬಿಂಬಗಳನ್ನು ಕಟ್ಟುವ ಕಸುವು ಮನುಷ್ಯರಿಗೆ ದೊರಕಿತೋ ಆಗ ಅವರ ಜಗತ್ತೇ ಬದಲಾಗಿ ಹೋಯಿತು. ಅವರೀಗ ಯೋಚಿಸ ಬಲ್ಲವರಾದರು; ಮುಂದಾಗುವುದನ್ನು ಗ್ರಹಿಸಬಲ್ಲವರಾದರು; ಕಂಡದ್ದನ್ನು ವಿಶ್ಲೇಷಿಸಬಲ್ಲವರಾದರು. ಈ ಹಂತದಲ್ಲೇ ನಾವು ನುಡಿಕಸುವು ಮನುಷ್ಯರ ಮೆದುಳಿನಲ್ಲಿ ನೆಲೆಗೊಂಡಿತೆಂದು ತಿಳಿಯಬೇಕಾಗಿದೆ. ಮೊದಮೊದಲು ಈ ಕಸುವು ಪಡೆದವರು ಅದನ್ನು ತಮ್ಮೊಳಗೇ ಯೋಚಿಸಲು, ಚಿಂತಿಸಲು ಬಳಸುತ್ತಿದ್ದರು. ಅದನ್ನು ಇನ್ನೊಬ್ಬರಿಗೆ ತಿಳಿಸಿ ಹೇಳುವ ನೆಲೆ ರೂಪುಗೊಂಡದ್ದು ಬಹು ತಡವಾಗಿ, ಈ ಕಾರಣದಿಂದಾಗಿಯೇ ಈ ಕಸುವು ಪಡೆದ ಮೊದಮೊದಲು ಮನುಷ್ಯರಂತೂ ನಾವು ಕೂಡಾ ಇಂದಿಗೂ ಅದನ್ನು ನಮ್ಮೊಳಗೇ ಚಿಂತಿಸಲು, ಯೋಚಿಸಲು ಬಯಸುತ್ತಿದ್ದಿರಬೇಕು. ವಿಕಾಸ ಪಥದ ನಿಟ್ಟಿನಿಂದ ಈ ಅರವತ್ತು ಎಪ್ಪತ್ತು ಸಾವಿರ ವರ್ಷಗಳ ಅವಧಿ ತುಂಬಾ ದೊಡ್ಡದೇನೂ ಅಲ್ಲ. ಹಾಗಾಗಿಯೇ ಆಫ್ರಿಕಾದ ಯಾವುದೋ ಮೂಲೆಯಲ್ಲಿ ಈ ಕಸುವು ಪಡೆದ ಮಾನವರಿಗಿಂತ ನಾವೇನೂ ಹೆಚ್ಚಾಗಿ ಬದಲಾಗಿಲ್ಲ.

ಕೆಲವರು ಬೇರೆ ಬೇರೆ ವಾದಗಳನ್ನು ಮಂಡಿಸುತ್ತಾರೆ. ಮೊದಮೊದಲು ಮನುಷ್ಯರು ಸದ್ದುಗಳನ್ನು ಮಾಡುತ್ತಿದ್ದರು. ಬಳಿಕ ಪದಗಳನ್ನು ಬಳಸಿದರು. ವಂಶವಾಹಿಗಳಲ್ಲಿ ನಡೆದ ವಿಕಲ್ಪದಿಂದಾಗಿ ಅವರೀಗ ಎರಡೆರಡು ಪದಗಳನ್ನು ಕಟ್ಟಿ ಚಿಕ್ಕ ಚಿಕ್ಕ ವಾಕ್ಯಗಳನ್ನು ಮಾಡಬಲ್ಲವರಾದರು. ಹಾಗಾಗಿ ಅವರಿಗೆ ಅಗಾಧ ಸಂಖ್ಯೆಯ ಪದಗಳನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕಾದ ಅಗತ್ಯ ಉಳಿಯಲಿಲ್ಲ. ಆಮೇಲೆ ಮೂರು ಪದಗಳ ವಾಕ್ಯ ಬಳಿಕ

ಹೀಗೆ ದೊಡ್ಡ ದೊಡ್ಡ ವಾಕ್ಯಗಳನ್ನು ಕಟ್ಟಬಲ್ಲವರಾದರು. ಇದು ಒಂದು ವಾದ. ಈ ವಾದವು ನಾವು ಹೇಳಿದ ಸೇರ್ಪಡೆ ಎಂಬ ಪ್ರಕ್ರಿಯೆಯನ್ನು ಒಪ್ಪುತ್ತದೆ. ಆದರೆ ಈ ಸೇರ್ಪಡೆಯೊಡನೆ ಅಭಿವ್ಯಕ್ತಿಯ ನೆಲೆಯನ್ನು ಜೋಡಿಸಿಕೊಂಡಿದೆ. ನಾವು ಬಲ್ಲಂತೆ ಈ ಸೇರ್ಪಡೆಗೂ ಅದರಿಂದ ಮೂಡಿದ ಬಿಂಬಗಳನ್ನು ಅಭಿವ್ಯಕ್ತಿಸುವುದಕ್ಕೂ ಸಂಬಂಧವಿಲ್ಲ. ಏಕೆಂದರೆ, ಈ ಸೇರ್ಪಡೆ ಎಂಬುದು ಈಗಾಗಲೇ ಹೇಳಿದಂತೆ ಯಾರೋ ಒಬ್ಬ ವ್ಯಕ್ತಿಯ ವಂಶವಾಹಿಗಳ ವಿಕಲ್ಪದಿಂದ ಉಂಟಾದದ್ದು. ಹಾಗಾಗಿ ಅಲ್ಲಿ ಅಭಿವ್ಯಕ್ತಿಯ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಇಲ್ಲಿ ನಾವು ಸೇರ್ಪಡೆಯ **ಎರಡು** ಬಗೆಗಳನ್ನು ವಿವರಿಸಿಕೊಳ್ಳಬೇಕು ಒಂದು ಹೀಗಿದೆ. ಒಂದೇ ಬಗೆಯ ಮಾನಸಿಕ ಬಿಂಬಗಳನ್ನು ಒಗ್ಗೂಡಿಸುವ **ಒಳಸೇರ್ಪಡೆ**. ಎರಡನೆಯದು ಬೇರೆ ಬೇರೆ ಬಗೆಯ ಮಾನಸಿಕ ಬಿಂಬಗಳನ್ನು ಒಗ್ಗೂಡಿಸುವ **ಹೊರಸೇರ್ಪಡೆ**. ಸರಳ ಉದಾಹರಣೆಗಳಿಂದ ಈ ವ್ಯತ್ಯಾಸವನ್ನು ವಿವರಿಸಬಹುದು. ಕೋತಿಯ ಹಲವು ಬಿಂಬಗಳನ್ನು ಒಗ್ಗೂಡಿಸಿ ಮನಸ್ಸಿನಲ್ಲೇ ಕೋತಿಯ ಒಂದು ಬಿಂಬವನ್ನು ಕಟ್ಟಿಕೊಳ್ಳುವುದು ಒಳ ಸೇರ್ಪಡೆ. ಹಾರುವ ಹದ್ದು ಮತ್ತು ಹಾರುವ ಪಾರಿವಾಳಗಳನ್ನು ಒಗ್ಗೂಡಿಸಿ ಹಾರುವ ಒಂದು ಜೀವಿಯನ್ನು ರೂಪಿಸಿಕೊಳ್ಳುವುದು ಹೊರ ಸೇರ್ಪಡೆ. ಮನುಷ್ಯರ ಮೆದುಳು ಹೀಗೆ ಬಿಡಿಬಿಡಿಗಳನ್ನು ಬೇರೆ ಬೇರೆ ಬಗೆಗಳಲ್ಲಿ ಜೋಡಿಸುವ ಸಾಮರ್ಥ್ಯವನ್ನು ಪಡೆದುಕೊಂಡ ಹಂತದಲ್ಲೇ ಅವರಿಗೆ ಲೋಕವನ್ನು ಗ್ರಹಿಸುವ ವಿಶಿಷ್ಟ ಬಗೆಯೊಂದು ದೊರಕಿತು.

ಸೇರ್ಪಡೆ ಎಂಬುದು ಕೇವಲ ನುಡಿಯ ಕಸುವಿಗಷ್ಟೆ ಸಂಬಂಧಿಸಿದ ಮತ್ತು ಸೀಮಿತವಾದ ಸಂಗತಿಯಲ್ಲ. ಮನುಷ್ಯರ ತಿಳುವಳಿಕೆಯ ಮೂಲವಾಗಿರುವ ಎಲ್ಲ ವಿಜ್ಞಾನ ಶಾಖೆಗಳೂ ಈ ಸಾಮರ್ಥ್ಯವನ್ನು ಬಳಸಿಕೊಳ್ಳುತ್ತವೆ. ಎಲ್ಲಕ್ಕಿಂತ ಹೆಚ್ಚಾಗಿ ಗಣಿತಶಾಸ್ತ್ರವು ಈ ನೆಲೆಯನ್ನು ಗಟ್ಟಿಯಾಗಿ ಆಧರಿಸಿದೆ.ಭೌತಶಾಸ್ತ್ರ ರಸಾಯನ ಶಾಸ್ತ್ರಗಳು ಸೇರಿದಂತೆ ಎಲ್ಲ ವಿಜ್ಞಾನ ಶಾಖೆಗಳಲ್ಲೂ ಈ ಸೇರ್ಪಡೆಯ ಅಂಶಗಳು ಬೇರೂರಿವೆ. ಚಂದ್ರ, ಸೂರ್ಯರ ಚಲನೆಗಳನ್ನು ಗಮನಿಸುತ್ತಾ ಅದರಿಂದ ಮೂಡಿದ ಬಿಂಬಗಳನ್ನು ಜೋಡಿಸುತ್ತಲೇ ಹೊಸ ಜಗತ್ತಿನ ತಿಳುವಳಿಕೆಯನ್ನು ಕಟ್ಟಿದರು. ಲೋಕದಲ್ಲಿ ಕಂಡದ್ದನ್ನು ವಿವರಿಸುವ ಬಗೆ ಒಂದಾದರೆ ಅದು ಏಕೆ ಸಂಭವಿಸುತ್ತದೆ ಎಂಬುದನ್ನು ಅರಿಯುವ ಬಗೆ ಇನ್ನೊಂದು. ಅದಕ್ಕಾಗಿ ಹೊರಸೇರ್ಪಡೆಯ ಬೇರೆ ಬೇರೆ ಮಾದರಿಗಳನ್ನು ಬಳಸಬೇಕಾಗುತ್ತದೆ. ಸಂಬಂಧವಿಲ್ಲದ ಸಂಗತಿಗಳ ನಡುವೆಯೂ ಇರಬಹುದಾದ ಸಂಬಂಧಗಳನ್ನು ಕಂಡುಕೊಳ್ಳಲು ಬೇರೆ ಬೇರೆ ಬಗೆಯ ಪ್ರಯೋಗಗಳನ್ನು ಮಾಡಬೇಕಾಗುತ್ತದೆ. ಮನುಷ್ಯರ ತಿಳುವಳಿಕೆಯು ಬೆಳೆದು ಬಂದಿರುವ ಬಗೆಯೇ ಹೀಗೆ. ಭಾಷೆಯೂ ಕೂಡಾ ಹೀಗೆ ಲೋಕವನ್ನು ಅರಿಯುವ ಬೇರೆ ಬೇರೆ ಮಾದರಿಗಳನ್ನು ರೂಪಿಸಿಕೊಳ್ಳುತ್ತಾ ಬಂದಿದೆ. ಒಂದು ಮಾದರಿಯು ಇನ್ನೊಂದು ಮಾದರಿಗಿಂತ ತುಂಬಾ ಭಿನ್ನವಾಗಿಯೇ ಬೆಳೆದಿರುವುದೂ ಉಂಟು. ಆಸ್ಟ್ರೇಲಿಯಾದ ಯಾವುದೋ ಒಂದು ಆದಿಮ ಜನಾಂಗದ ಭಾಷೆಯೊಂದನ್ನು ನಾವು ಅಧ್ಯಯನ ಮಾಡಿದರೆ ಅದರ ಮೂಲಕ ಬಿಂಬಿತವಾಗುವ ಲೋಕ ನಮಗೆ ಅಯೋಮಯವಾಗಿ ಕಾಣುತ್ತದೆ.

ಒಂದು ಉದಾ.ಗೆ ಹೇಳುವುದಾದರೆ Warlpiri ಎಂಬ ಆಸ್ಟ್ರೇಲಿಯದ ಆದಿವಾಸಿಗಳ ನುಡಿಯಲ್ಲಿ ಗಣಿತದ ಪರಿಕಲ್ಪನೆಯೇ ಇಲ್ಲ. ಆದರೆ ಅವರ ಸಂಬಂಧ ಸೂಚಕ ಪದಗಳ ಜಾಲ ಅತ್ಯಂತ ಸಂಕೀರ್ಣವಾಗಿದೆ.

ಪ್ರಾಣಿಗಳ ಸಂವಹನ ವ್ಯವಸ್ಥೆಯಲ್ಲಿ ಅತ್ಯಂತ ಸಂಕೀರ್ಣವಾದುದು ಜೇನುಹುಳುಗಳಲ್ಲಿದೆ. ಆದರೂ ಅದು ಮಾನವ ಸಹಜ ಭಾಷೆಗಳಂತಿಲ್ಲ. ಅಲ್ಲದೆ ಆ ಸಂವಹನ ವ್ಯವಸ್ಥೆಗೂ ವಿಕಾಸದ ಬೇರೆ ಹಂತದಲ್ಲಿ ಮೂಡಿಬಂದ ಮನುಷ್ಯದಲ್ಲಿರುವ ನುಡಿ ಕಸುವಿಗೂ ಯಾವುದೇ ನಂಟನ್ನು ಕಲ್ಪಿಸಲಾಗುವುದಿಲ್ಲ. ಅಂದರೆ ಜೇನುಹುಳುಗಳ ಸಂವಹನ ವ್ಯವಸ್ಥೆಯೇ ವಿಕಾಸಗೊಂಡು ಮಾನವರ ನುಡಿಕಸುವಾಗಿ ರೂಪುಗೊಂಡಿತೆಂದು ಹೇಳಲು ಯಾವ ಆಧಾರಗಳೂ ಇಲ್ಲ. ಇನ್ನು ಜೇನುಹುಳುಗಳ ಮಾತಿಗೆ ಬರೋಣ. ಹಲವಾರು ಬಗೆಯ ಜೇನು ಹುಳುಗಳಿಗೆ ಒಂದೊಂದರಲ್ಲೂ ಸಂವಹನ ವ್ಯವಸ್ಥೆಯೊಂದು ಇದ್ದೇ ಇದೆ. ಅವುಗಳು ಆ ವ್ಯವಸ್ಥೆಯನ್ನು ಬೇರೆ ಬೇರೆ ಬಗೆಯಲ್ಲಿ ಬಳಸುತ್ತವೆ. ಕೆಲವು ನರ್ತಿಸಿದೆ, ಮತ್ತೆ ಕೆಲವು ರೆಕ್ಕೆಗಳನ್ನು ಬಡಿಯುತ್ತವೆ. ಆ ಎಲ್ಲ ವ್ಯವಸ್ಥೆಗಳೂ ಆಯಾ ಜಾತಿಯ ಜೇನು ಹುಳುಗಳಿಗೆ ಅಗತ್ಯವಾದ ಸಂವಹನದ ಉದ್ದೇಶವನ್ನು ಪೂರೈಸುತ್ತವೆ. ಆದರೆ ವಿಕಾಸ ಪಥದಲ್ಲಿ ಜೇನು ಹುಳುಗಳ ಸಂವಹನ ವ್ಯವಸ್ಥೆ ರೂಪುಗೊಂಡದ್ದಕ್ಕೂ ಮಾನವರ ನುಡಿಕಸುವು ನೆಲೆಗೊಂಡಿದ್ದಕ್ಕೂ ನಂಟು ಕಲ್ಪಿಸ ಹೊರಡುವುದು ಹಾಸ್ಯಾಸ್ಪದವಾಗಿದೆ.

ನುಡಿಕಸುವಿನ ಹಿಂದಿನ ತಾತ್ತ್ವಿಕತೆ ಅದಕ್ಕೂ ಜೀವ ವಿಜ್ಞಾನಕ್ಕೂ ಇರುವ ಸಂಬಂಧ ಮತ್ತು ಮಾನವರ ಪರಿಕಲ್ಪನೆಗಳ ವಿಶಿಷ್ಟತೆ

ಚಾಮ್‌ಸ್ಕಿಯು ಕಳೆದ ಆರು ದಶಕಗಳಿಂದ ನಿರೂಪಿಸುತ್ತಾ ಬಂದ ನುಡಿಯನ್ನು ಕುರಿತು ಚಿಂತನೆಗಳ ಹಿಂದಿನ ತಾತ್ತ್ವಿಕ ಅಪೇಕ್ಷೆಗಳು ಸ್ಪಷ್ಟವಾಗಿವೆ. ಯಾವುದೇ ತತ್ತ್ವವು ವಿವರಣೆಯೂ ಆಗಿರಬೇಕು ಮತ್ತು ವಿಶ್ಲೇಷಣೆಯೂ ಆಗಿರಬೇಕು. ಅಲ್ಲದೆ ಇವೆರಡೂ ಸಂಗತಿಗಳು ಹಂತಹಂತವಾಗಿ ಸರಳಗೊಳ್ಳುತ್ತಾ ಹೋಗಬೇಕು. ವಿಶೇಷವೆಂದರೆ ಜೀವವಿಜ್ಞಾನದಲ್ಲಿ ತಾತ್ತ್ವಿಕ ಚಿಂತನೆಗಳು ಇದೇ ನಿಟ್ಟಿನಲ್ಲಿ ಸಾಗುತ್ತಾ ಬಂದಿವೆ. ನುಡಿ ಕುರಿತ ಚಿಂತನೆಗಳನ್ನು ಜೀವವಿಜ್ಞಾನದ ಬೆಳವಣಿಗೆಯೊಡನೆ ಬೆಸೆಯುವ ಕೆಲಸ ಇಪ್ಪತ್ತನೆಯ ಶತಮಾನದ ನಡುಗಾಲದಿಂದಲೇ ಆರಂಭವಾಯಿತು. ಚಾಮ್‌ಸ್ಕಿ, ಎರಿಕ್ ಲೆನೆಬರ್ಗ್ ಮತ್ತು ಮಾರಿಸ್‌ಹಾಲ್ ಅವರುಗಳು ಈ ಬೆಸೆಯುವ ಕೆಲಸವನ್ನು ಮೊದಲು ಮಾಡಿದ ಮುಂದಾಳುಗಳು. ಆ ಹೊತ್ತಿನಲ್ಲಿ ನುಡಿಯ ಅಧ್ಯಯನದಲ್ಲಿ ತೊಡಗಿದವರೆಲ್ಲ ಹೆಚ್ಚಾಗಿ ಧ್ವನಿಮಾಗಳ ವಿವರಣೆಯಲ್ಲಿ ಇಲ್ಲವೇ ಆಕೃತಿಮಾಗಳ ವಿವರಣೆಯಲ್ಲಿ ತೊಡಗಿರುತ್ತಿದ್ದರು. ಆದರೆ ಈ ವಿವರಣೆಗಳೆಲ್ಲವೂ ಒಂದಲ್ಲ ಒಂದು ಹಂತದಲ್ಲಿ ಮುಂದೆ ದಾರಿಗಾಣದ ನಿಂತುಬಿಡುತ್ತಿದ್ದವು. ಅಲ್ಲದೆ ಒಂದೊಂದು ನುಡಿಯ ವಿವರಣೆಯಲ್ಲಿ ತೊಡಗಿದವರಿಗೆ ಆ ಒಂದು ನುಡಿ ಮಾತ್ರವೇ ಗುರಿಯಾಗಿರುತ್ತಿತ್ತು. ಹಲವು ನುಡಿಗಳ ವಿವರಣೆಗಳಿಂದ ಬಂದು ಸಾಮಾನ್ಯ ಸ್ವರೂಪವನ್ನು ಗ್ರಹಿಸುವುದು ಅಸಾಧ್ಯ ಎಂದೇ ಎಲ್ಲರೂ ನಂಬಿದ್ದರು. ಪ್ರೇಗ್ ಪ್ರಸ್ಥಾನದ ಚಿಂತಕರಲ್ಲಿ ಕೊಂಚ ಬದಲಾವಣೆ ಕಂಡದ್ದಂಟು. ಅವರು ಧ್ವನಿಮಾ ವ್ಯವಸ್ಥೆಯ ವಿವರಣೆಯಲ್ಲಿ ಪ್ರತಿಯೊಂದು

ಧ್ವನಿಯ ವಿಶಿಷ್ಟ ಅಂಶಗಳನ್ನು ಗುರುತಿಸುವುದನ್ನು ಬಳಕೆಗೆ ತಂದರು. ಈ ವಿಶಿಷ್ಟ ಅಂಶಗಳ ವಿಶ್ಲೇಷಣೆಯಿಂದ ಜಗತ್ತಿನ ಎಲ್ಲ ನುಡಿಗಳ ಕೆಲವು ಸಾಮಾನ್ಯ ಲಕ್ಷಣಗಳನ್ನು ಕಾಣಬಹುದೆಂದು ಅವರು ನಂಬಿದ್ದರು.

ಒಂದು ವೇಳೆ ನುಡಿಯು ಜೈವಿಕ ನೆಲೆಯನ್ನು ಪಡೆದಿದೆ ಎಂದು ತಿಳಿದು ಹೊರಟರೆ ಏನಾದೀತು? ಆಗ ಎಲ್ಲ ನುಡಿಗಳೂ ಒಂದೇ ಬಗೆಯ ವಿವರಣೆಯ ಚೌಕಟ್ಟಿಗೆ ಒಳಗಾಗಲೇಬೇಕಾಗುತ್ತದೆ. ಮೊದಮೊದಲ ಹಂತದಲ್ಲಿ ಅಂತಹ ಒಂದು ಸಾಮಾನ್ಯ ನೆಲೆ ಇರಬೇಕೆಂಬ ನಂಬಿಕೆ ಇದ್ದಿತೇ ಹೊರತು ಆ ಸಾಮಾನ್ಯ ನೆಲೆ ಯಾವುದು ಎಂಬುದನ್ನು ಗುರುತಿಸುವುದು ಸಾಧ್ಯವಿರಲಿಲ್ಲ.

ನುಡಿಯನ್ನು ಜೈವಿಕ ನೆಲೆಯಲ್ಲಿ ಇರಿಸಿ ನೋಡುವುದಾದರೂ ಹೇಗೆ ಎಂಬುದು ಮೂಲಭೂತ ಪ್ರಶ್ನೆ. ಮೊದಲು ನುಡಿ ವ್ಯವಸ್ಥೆಗೆ ಇರುವ ಅದರದ್ದೇ ಆದ ವಿಶಿಷ್ಟ ಚಹರೆಗಳೇನು ಎಂಬುದನ್ನು ನೋಡೋಣ. ಅವು ಮನುಷ್ಯರಲ್ಲಿ ಇರುವ ಮತ್ತು ಅವರಿಗೆ ವಿಶಿಷ್ಟವಾದ ಇತರ ವ್ಯವಸ್ಥೆಗಳಿಗಿಂತ ಹೇಗೆ ಭಿನ್ನವಾದುದು? ನುಡಿ ವ್ಯವಸ್ಥೆಗೆ ವಿಶಿಷ್ಟವಾದ ಚಹರೆಗಳು ಯಾವುವು? ಈ ಪ್ರಶ್ನೆಗಳಿಗೆ ಉತ್ತರಿಸುವುದಕ್ಕೂ ಮೊದಲು ನುಡಿ ವ್ಯವಸ್ಥೆಯನ್ನು ಸರಿಯಾಗಿ ಅರಿತಿರಬೇಕಷ್ಟೇ? ನುಡಿಗಳ ಬಗೆಗೆ ನೀಡುವ ವರ್ಣನೆಗಳು ಯಾವುದೇ ಅಂಶವನ್ನು ಬಿಟ್ಟು ಕೊಡದಷ್ಟು ಪರಿಪೂರ್ಣವಾಗಿರಬೇಕು. ಮತ್ತು ವರ್ಣನೆಗಳಿಗೆ ಸೀಮಿತವಾಗದೆ ಎಲ್ಲ ನುಡಿ ಪ್ರಕ್ರಿಯೆಗಳ ಹಿಂದಿನ ಕಾರಣಗಳನ್ನು ವಿವರಿಸಲು ಸಮರ್ಥವಾಗಿರಬೇಕು. ಅಂದರೆ ವರ್ಣನೆಯ ಮತ್ತು ವಿವರಣೆಯ ಪರಿಕರಗಳು ಮಾನವ ಸಹಜವಾದ ಎಲ್ಲ ಭಾಷೆಗಳಿಗೂ ಹೊಂದಿಕೊಳ್ಳುವಂತಿರಬೇಕು. ಮೊದಲ ಹಂತದಲ್ಲಿ ಇಂತಹ ಒಂದು ಸಾಮಾನ್ಯ ಚೌಕಟ್ಟನ್ನು ರೂಪಿಸುವುದೇ ಅತ್ಯಂತ ಸಂಕೀರ್ಣ ಸಮಸ್ಯೆಯಾಗಿ ಬೆಳೆದು ನಂತಿದೆ.

ಈ ಹಂತದಲ್ಲೇ ನುಡಿಯ ಅಧ್ಯಯನಕಾರರು ನುಡಿಯು ಜೈವಿಕ ನೆಲೆಯನ್ನು ಹೊಂದಿದೆ ಎಂಬ ನಿಲುವನ್ನು ಸಾಧಿಸಲು ವೈಶ್ವಿಕ ವ್ಯಾಕರಣ (UG) ಎಂಬುದೊಂದು ಇದೆ ಎಂದೂ ಅದು ಮಕ್ಕಳು ಹುಟ್ಟುವಾಗಲೇ ಮೆದುಳಿನಲ್ಲಿ ಸ್ಥಿರಗೊಂಡಿರುತ್ತದೆಂದೂ ಕಲ್ಪಿಸಿದರು. ಈ ಕಲ್ಪನೆಗೆ ಆಧಾರವಿದೆ. ಇದನ್ನು ಚಾಮ್‌ಸ್ಕಿ ಬೇರೊಂದು ಸಂದರ್ಭದಲ್ಲಿ ಪ್ಲೇಟೋನ ಸಮಸ್ಯೆ ಎಂದು ಕರೆದಿದ್ದಾರೆ. ಈ ಬಗ್ಗೆ ಕೊಂಚ ವಿವರವಾಗಿ ನೋಡೋಣ. ಪ್ಲೇಟೋನ ಪ್ರಕಾರ ಈ ಜಗತ್ತು ಮೂಲ ಜಗತ್ತಿನ ಬಿಂಬ ಮಾತ್ರ. ಪ್ಲೇಟೋ ಮನುಷ್ಯನನ್ನು ಗುಹೆಯೊಂದರಲ್ಲಿ ಕುಳಿತಿರುವಂತೆ ಚಿತ್ರಿಸಿಕೊಳ್ಳುತ್ತಾನೆ. ಬೆಳಕನ್ನು ಒಳಬರಲು ಬಿಡುವ ಗುಹೆಯ ಬಾಗಿಲಿಗೆ ಬೆನ್ನು ಮನುಷ್ಯ ಕುಳಿತಿದ್ದಾನೆ. ಆತನಿಗೆ ನಿಜ ಜಗತ್ತಿನ ಬಿಂಬಗಳು ಅವನ ಎದುರಿಗಿರುವ ಗುಹೆಯ ಗೋಡೆಯ ಮೇಲೆ ನೆರಳಾಗಿ ಕಾಣಿಸಿಕೊಳ್ಳುತ್ತದೆ. ಪ್ಲೇಟೋ ಚಿತ್ರಿಸುವ ಈ ಸಂದರ್ಭ ನಿಜವೆಂದುಕೊಳ್ಳೋಣ. ಮನುಷ್ಯ ತನಗೆ ಕಾಣಿಸಿರುವ ಚೂರುಪಾರು ನೆರಳಿನ ಚಿತ್ರಗಳ ನೆರವಿನಿಂದ ಮೂಲ ಜಗತ್ತನ್ನು ಹೇಗೆ ಕಟ್ಟಿಕೊಳ್ಳುತ್ತಾನೆ ಎಂಬುದೇ ಸಮಸ್ಯೆ. ಅಂದರೆ ಹೊರಗಿನಿಂದ ಸಿಗುವ ಚೂರುಪಾರು ಮಾಹಿತಿಯಿಂದ ಮೂಲ ಜಗತ್ತಿನ ನಿಜ ಚಿತ್ರವನ್ನು ಕಟ್ಟಲು ನೆರವಾಗುವ ಒಂದು ಕಸುವು ಮನುಷ್ಯರಲ್ಲಿ ಇರಲೇ ಬೇಕು.

ನುಡಿಯ ವಿಷಯದಲ್ಲಿ ಇದೇ ಮಾತು ದಿಟ. ಮೆದುಳಿನಲ್ಲಿ ನುಡಿ ಕಸುವು ಜಾಗ್ರತಗೊಳ್ಳಲು ಬೇಕಾದ ಮಾಹಿತಿ ಹೊರಜಗತ್ತಿನಿಂದ ದೊರೆಯುವ ಪ್ರಮಾಣ ತುಂಬಾ ಕಡಿಮೆ. ಈ ಮಾಹಿತಿಯು ವ್ಯವಸ್ಥಿತವಾಗಿರುವುದಿಲ್ಲ ಮತ್ತು ನಿರ್ದಿಷ್ಟ ಉದ್ದೇಶವನ್ನು ಹೊಂದಿರುವುದಿಲ್ಲ. ಆದರೂ ಮಗುವಿಗೆ ನುಡಿ ಕಸುವು ನೆಲೆಗೊಳ್ಳುತ್ತದೆ. ಅಂದರೆ ನುಡಿಗೆ ಸಂಬಂಧಿಸಿದ ಮಾಹಿತಿ ಚೂರುಪಾರು ಮಾತ್ರವೇ ಹೊರಜಗತ್ತಿನಿಂದ ದೊರೆತರೂ ಅದಷ್ಟರಿಂದಲೇ ಅಚ್ಚುಕಟ್ಟಾದ ನುಡಿ ಕಸುವು ಮೈದಳೆಯಲು ನೆರವಾಗುವ ನೆಲೆಯೊಂದು ಜೈವಿಕವಾಗಿ ಹುಟ್ಟಿನಿಂದಲೇ ದೊರೆತಿರಲೇಬೇಕು. ಇದನ್ನೇ ವೈಶ್ವಿಕ ವ್ಯಾಕರಣ ಎಂದು ಕರೆಯಲಾಯಿತು. ಈ ವೈಶ್ವಿಕ ವ್ಯಾಕರಣವೇ ಪರಿಸರದಿಂದ ದೊರೆಯುವ ಚೂರುಪಾರು ನುಡಿ ಸಾಮಗ್ರಿಯ ನೆರವಿನಿಂದ ಒಂದು ನುಡಿಯಾಗಿ (ಅದು ಮಗುವಿನ ಪರಿಸರದ ನುಡಿ) ರೂಪು ತಳೆಯುತ್ತದೆ.

ಚಾಮ್‌ಸ್ಕಿ ಮತ್ತು ಅವನ ಅನುಯಾಯಿಗಳು ತಮ್ಮ ವಾದವನ್ನು ಮಂಡಿಸುವ ಮೊದಲಿಗೆ ನುಡಿಯ ಅಧ್ಯಯನಕಾರರು ಮನುಷ್ಯರಿಗೆ ನುಡಿಕಸುವು ದೊರೆತದ್ದು ವಿಕಾಸ ಪಥದ ಒಂದು ಬೆಳವಣಿಗೆ ಎಂದೂ ಅದು ಹಂತ ಹಂತವಾಗಿ ಮನುಷ್ಯರಲ್ಲಿ ಬೆಳೆಯುತ್ತಾ ಬಂದಿತೆಂದೂ ವಿವರಿಸುತ್ತಿದ್ದರು. ಈಗಲೂ ಈ ವಾದವನ್ನು ಮಂಡಿಸುವವರಿದ್ದಾರೆ. ಒಪ್ಪುವವರೂ ಇದ್ದಾರೆ.

ಈಗಾಗಲೇ ವಿವರಿಸಿರುವಂತೆ ಮತ್ತು ದೊರಕಿರುವ ಪುರಾವೆಗಳು ಸಾದರ ಪಡಿಸುವಂತೆ ಮನುಷ್ಯರಲ್ಲಿ ನುಡಿ ಕಸುವು ತಲೆ ಎತ್ತಿದ್ದೇ ಒಂದು ಆಕಸ್ಮಿಕ ಮತ್ತು ಅದು ತೀವ್ರ ಗತಿಯಲ್ಲಿ ತನ್ನ ಪೂರ್ಣರೂಪವನ್ನು ಪಡೆದುಕೊಂಡಿತು. ಪೂರ್ಣರೂಪು ಎಂದಾಗ ಒಂದು ವಿವರಣೆ ಅಗತ್ಯ. ಐವತ್ತು ಅರವತ್ತು ಸಾವಿರ ವರ್ಷಗಳ ಹಿಂದೆಯೇ ನುಡಿಕಸುವು ಯಾವ ರೂಪದಲ್ಲಿ ಮನುಷ್ಯರಲ್ಲಿ ಬೆಳೆದಿತ್ತೋ ಅದೇ ರೂಪದಲ್ಲಿ ಇಂದಿಗೂ ಉಳಿದುಕೊಂಡಿದೆ. ನಮ್ಮ ಇಂದಿನ ಗ್ರಹಿಕೆಯ ಪ್ರಕಾರ ಅದು ಪೂರ್ಣರೂಪ.

ಮೊದಮೊದಲು ವೈಶ್ವಿಕ ವ್ಯಾಕರಣವನ್ನು ವಿವರಿಸಿಕೊಂಡದ್ದು ಹೇಗೆ? ಅದರಲ್ಲಿ ಜಗತ್ತಿನ ಎಲ್ಲಾ ಭಾಷೆಗಳಲ್ಲೂ ಇರಬಹುದಾದ ಲಕ್ಷಣಗಳೆಲ್ಲವೂ ಇರುತ್ತದೆಂದೂ ಮಗ ಬೆಳೆಯುವಾಗ ಪರಿಸರದಿಂದ ಯಾವ ನುಡಿಯ ಪರಿಕರಗಳು ದೊರೆಯುತ್ತವೋ ಅವುಗಳಿಗೆ ತಕ್ಕಂತೆ ವೈಶ್ವಿಕ ವ್ಯಾಕರಣದಲ್ಲಿ ನಿರ್ದಿಷ್ಟ ಹೊಂದಾಣಿಕೆಯನ್ನು ಮಾಡಿಕೊಳ್ಳುತ್ತದೆ. ಅಂದರೆ ಪರಿಸರದ ನುಡಿಗೆ ಬೇಕಾದ ಆಯ್ಕೆಗಳನ್ನು ವೈಶ್ವಿಕ ವ್ಯಾಕರಣದಿಂದ ತೆಗೆದುಕೊಳ್ಳಲಾಗುತ್ತದೆ. ಇದನ್ನು **ನುಡಿಗಳಿಕೆ** ಎಂದು ವಿವರಿಸಲಾಗಿದೆ. ಜಗತ್ತಿನ ಎಲ್ಲ ನುಡಿಗಳಿಗೂ ಸಂಬಂಧಿಸಿದ ಲಕ್ಷಣಗಳ ಮೊತ್ತ ಎಂದು UG ಯನ್ನು ವಿವರಿಸಿದರೆ ಅದೊಂದು ಹೊರಲಾರದ ಹೊರೆ ಎಂದೇ ತಿಳಿಯಬೇಕಾಗುತ್ತದೆ. ಹಾಗಾಗಿ ಈ ವಾದವನ್ನು ಮತ್ತಷ್ಟು ಪರಿಷ್ಕರಿಸುವ ಅಗತ್ಯ ನುಡಿ ಚಿಂತಕರಲ್ಲಿ ಕಂಡು ಬಂತು.

ಈ ಹಂತದಲ್ಲೇ ನಿಯಮಗಳು ಮತ್ತು ವಿಕಲ್ಪಗಳು ಎಂಬ ಚೌಕಟ್ಟನ್ನು ಮಂಡಿಸಲಾಯಿತು. ವೈಶ್ವಿಕ ವ್ಯಾಕರಣದಲ್ಲಿ ನಿಯಮಗಳು ಮತ್ತು ವಿಕಲ್ಪಗಳು ಇರುತ್ತವೆ. ಜಗತ್ತಿನ ಎಲ್ಲ ನುಡಿಗಳಿಗೂ ಇರುವ ಸಾಮಾನ್ಯ ಲಕ್ಷಣಗಳೇ ನಿಯಮಗಳು. ಬೇರೆಬೇರೆ

ನುಡಿಗಳಲ್ಲಿ ವಿಶಿಷ್ಟವಾಗಿ ಕಂಡುಬರುವ ಲಕ್ಷಣಗಳೇ ವಿಕಲ್ಪಗಳು. ಮಗುವಿನಲ್ಲಿ ನುಡಿಗಳಿಕೆಯು ನಡೆಯುವಾಗ ವೈಶ್ವಿಕ ವ್ಯಾಕರಣದ ನಿಯಮಗಳು ಯಾವ ಬದಲಾವಣೆಗೂ ಒಳಗಾಗದೆ ಉಳಿಯುತ್ತದೆ. ಏಕೆಂದರೆ ಆ ನಿಯಮಗಳು ಪರಿಸರದ ನುಡಿಯಲ್ಲಿ ಇದ್ದೇ ಇರುತ್ತವಷ್ಟೇ. ಇನ್ನು ವಿಕಲ್ಪಗಳಲ್ಲಿ ಪರಿಸರದ ನುಡಿ ಹೊಂದಿಕೊಳ್ಳುವಂಥವನ್ನು ಮಾತ್ರ ಆಯ್ಕೆ ಮಾಡಿಕೊಂಡರೆ ಸಾಕು ಮಗುವಿಗೆ ಪರಿಸರದ ನುಡಿ ದೊರಕಿದಂತೆಯೇ ಸರಿ.

ತೀರಾ ಅಚ್ಚುಕಟ್ಟಾಗಿ ಇರುವಂತೆ ತೋರವ ಈ ಚೌಕಟ್ಟು ಕೂಡಾ ಸಮಸ್ಯೆಯನ್ನು ಪೂರ್ಣವಾಗಿ ಬಿಡಿಸಲು ಶಕ್ತವಾಗಿಲ್ಲ. ಏಕೆಂದರೆ ಯಾವುದು ಜಗತ್ತಿನ ಎಲ್ಲ ಭಾಷೆಗಳ ಸಾಮಾನ್ಯ ಲಕ್ಷಣ ಎಂಬುದನ್ನು ವಿವರಿಸುವುದು ಹೇಗೆ? ಇನ್ನು ಜಗತ್ತಿನ ಎಲ್ಲ ಭಾಷೆಗಳ ವಿಶಿಷ್ಟ ಲಕ್ಷಣಗಳು ಅಸಂಖ್ಯವಾಗಿವೆಯೇ ಅಥವಾ ಅವುಗಳಲ್ಲಿ ಒಂದು ಗೊತ್ತಾದ ಚೌಕಟ್ಟು ಇದೆಯೋ ಎಂಬುದೂ ಕೂಡಾ ಅಧ್ಯಯನಗಳ ಮೂಲಕವೇ ಖಚಿತ ಮಾಡಬೇಕಾಯಿತು.

ನಿಯಮಗಳು ಮತ್ತು ವಿಕಲ್ಪಗಳು ಎಂಬ ಸಿದ್ಧಾಂತವು ಎಲ್ಲ ಸಮಸ್ಯೆಗಳನ್ನೂ ಪರಿಹರಿಸಿತು ಎಂದಲ್ಲ. ಕೊನೆಯ ಪಕ್ಷ ಆ ಸಿದ್ಧಾಂತ ಮಂಡನೆಯಿಂದ ಎರಡು ಸಂಗತಿಗಳು ಸ್ಪಷ್ಟವಾದವು. ಒಂದು: ಜಗತ್ತಿನ ನುಡಿಗಳ ವ್ಯಾಕರಣಗಳಲ್ಲಿ ಇರುವ ವಿಕಲ್ಪಗಳನ್ನು ಕಂಡು ಹಿಡಿಯುವ ದಾರಿಯಲ್ಲಿ ಮುಂದಿನ ಅಧ್ಯಯನಗಳು ಸಾಗಬೇಕೆಂದು ಖಚಿತವಾಯಿತು. ಎರಡು: ಎಳವೆಯಲ್ಲಿ ಮಗು ನುಡಿಕಸುವನ್ನು ನೆಲೆಗೊಳಿಸಿಕೊಳ್ಳುವಾಗ ಯಾವುದೇ ನುಡಿಯ ವ್ಯಾಕರಣವನ್ನೂ ಕಲಿಯಬೇಕಿಲ್ಲ ಎಂಬುದು ಸ್ಪಷ್ಟವಾಯಿತು.

ಮಾನವರಲ್ಲಿ ಪರಿಕಲ್ಪನೆಗಳು ಮೂಡುವ ಕ್ರಮವನ್ನು ಕುರಿತು ಈಗಾಗಲೇ ಪರಿಶೀಲಿಸಿದ್ದೇವೆ. ವಂಶವಾಹಿಗಳಲ್ಲಿ ನಡೆದ ಯಾವುದೋ ಬದಲಾವಣೆಯಿಂದಾಗಿ ಬಿಂಬಗಳ ಸೇರ್ಪಡೆ ಎನ್ನುವುದು ಮೆದುಳಿನ ಒಂದು ಸಾಮರ್ಥ್ಯವಾಗಿ ರೂಪುಗೊಂಡಿತು. ಈ ಸಾಮರ್ಥ್ಯದಿಂದಾಗಿಯೇ ಮಾನವರಲ್ಲಿ ಪರಿಕಲ್ಪನೆಗಳ ಜಗತ್ತು ರೂಪುಗೊಳ್ಳುವುದು ಸಾಧ್ಯವಾಯಿತು. ಇಲ್ಲಿ ಇನ್ನೊಂದು ಪ್ರಶ್ನೆ ಎದುರಾಗುತ್ತದೆ. ಪ್ರಾಣಿಗಳಿಗೂ ಸಂವೇದನೆ ಎಂಬುದಿದೆ. ಅವುಗಳಲ್ಲಿ ಉಂಟಾಗುವ ಸಂವೇದನೆಗಳು ದೈಹಿಕ ಚರ್ಯೆಗಳಲ್ಲಿ ಹೊರಹೊಮ್ಮುತ್ತದೆ. ನೋವಿನಿಂದ ಕಿರುಚುವುದು, ಭಯದಿಂದ ಓಡುವುದು, ರೋಷದಿಂದ ಮುನ್ನುಗ್ಗುವುದು ಇವೆಲ್ಲವೂ ಪ್ರಾಣಿಗಳಲ್ಲಿ ಸಂವೇದನೆ ಮತ್ತು ದೈಹಿಕ ಚರ್ಯೆಗಳ ನಡುವೆ ಬಂಧವಿದೆ ಎಂಬುದನ್ನು ತಿಳಿಸುತ್ತದೆ. ಮಾನವರಲ್ಲಿ ಈ ಬಂಧದಿಂದಾಗಿಯೇ ಪರಿಕಲ್ಪನೆಗಳ ರಚನೆ ಸಾಧ್ಯವೆಂದಾದರೆ ಪ್ರಾಣಿಗಳಲ್ಲೂ ಇದು ಸಾಧ್ಯವಾಗಬಾರದೇಕೆ?

ಚಾಮ್‌ಸ್ಕಿ ಈ ಪ್ರಶ್ನೆಯನ್ನು ಬಿಡಿಸಲು ಹೊರಡುತ್ತಾರೆ. ಅವರು ಹೇಳುವಂತೆ ಸಂವೇದನೆ ಮತ್ತು ದೈಹಿಕ ಚರ್ಯೆಗಳ ನಡುವೆ ನಂಟು ಇದೆಯಾದರೂ ಅದು ಪರಿಕಲ್ಪನೆಗಳನ್ನು ರೂಪಿಸುವಲ್ಲಿ ವಹಿಸುವ ಪಾತ್ರ ತುಂಬಾ ಕಡಿಮೆ. ಮನುಷ್ಯರಲ್ಲಿ ದನಿಗಳನ್ನು ಉತ್ಪಾದಿಸುವ ಮತ್ತು ದನಿಗಳನ್ನು ಕೇಳಿಸಿಕೊಳ್ಳುವ ಅಂಗಗಳಿವೆ. ಮನುಷ್ಯರ

ತಲೆಬುರುಡೆಯಲ್ಲಿ ವಿಕಾಸದ ಯಾವುದೋ ಹಂತದಲ್ಲಿ ಈ ವ್ಯವಸ್ಥೆ ಮನುಷ್ಯರಲ್ಲಿ ನೆಲೆಗೊಳ್ಳುವಂತೆ ಮಾಡಿದೆ. ಅದರಲ್ಲೂ ನಡುಗಿವಿಯಲ್ಲಿರುವ ಕಾಕ್ಲಿಯಾದ ಮೂರು ಮೂಳೆಗಳು ಈ ವಿಕಾಸಕ್ಕೆ ಒಳ್ಳೆಯ ಉದಾಹರಣೆಗಳು. ಪ್ರಾಣಿಗಳಲ್ಲಿ ಧ್ವನಿ ಉತ್ಪಾದಿಸುವ ಮತ್ತು ದನಿಗಳನ್ನು ಕೇಳಿಸಿಕೊಳ್ಳುವ ಅಂಗಗಳಿದ್ದರೂ ಅವು ಮನುಷ್ಯ ದೇಹದಲ್ಲಿನ ಮಾದರಿಯಲ್ಲಿ ಇಲ್ಲ. ಆದ್ದರಿಂದ ಪ್ರಾಣಿಗಳು ನುಡಿಕಸುವನ್ನು ಹೊಂದಲು ಸಾಧ್ಯವಾಗಲಿಲ್ಲ ಎಂದು ವಾದಿಸಬಹುದು.

ಆದರೆ ಈ ವ್ಯತ್ಯಾಸವಷ್ಟೇ ಪ್ರಾಣಿಗಳಲ್ಲಿ ನುಡಿಕಸುವು ಮೂಡದಿರುವುದಕ್ಕೆ ಕಾರಣವೆಂದು ಪೂರ್ಣವಾಗಿ ತೀರ್ಮಾನಿಸಲು ಬರುವುದಿಲ್ಲ. ಮನುಷ್ಯರಲ್ಲಿ ದನಿಗಳನ್ನು ಉಂಟು ಮಾಡುವ ಮತ್ತು ಕೇಳಿಸಿಕೊಳ್ಳುವ ಅಂಗಗಳಲ್ಲಿ ನ್ಯೂನತೆ ಉಳ್ಳವರು ಇರುತ್ತಾರಷ್ಟೇ? ಆದರೆ ಅವರಲ್ಲಿ ನುಡಿಸುವಿನ ಕೊರತೆ ಕಂಡುಬರುವುದಿಲ್ಲ. ಅವರು ಸನ್ನೆಗಳ ಮೂಲಕ ತಮ್ಮಲ್ಲಿರುವ ಆ ಕಸುವನ್ನು ಬಳಕೆ ಮಾಡಬಲ್ಲರು. ಈ ಮನುಷ್ಯರು ಇಂಥ ಅಂಗನ್ಯೂನತೆಯನ್ನು ಹೊಂದಿದ್ದರೂ ನುಡಿಕಸುವನ್ನು ಪಡೆದದ್ದು ದಿಟವಾಗಿದ್ದರೆ ಪ್ರಾಣಿಗಳೂ ಕೂಡ ಮನುಷ್ಯರಲ್ಲಿ ಕಿವುಡು ಮೂಕರಾದವರು ಬಳಸುವ ಸನ್ನೆನುಡಿಯನ್ನು ರೂಪಿಸಿಕೊಳ್ಳಬೇಕಿತ್ತು. ಆದರೆ ಹಾಗೆ ಆಗಿರುವುದು ಕಂಡುಬಂದಿಲ್ಲ.

ಮನುಷ್ಯರ ಪರಿಕಲ್ಪನೆಗಳ ಜಗತ್ತು ಪ್ರಾಣಿಗಳಲ್ಲಿರಬಹುದಾದ ಬಿಂಬಗಳ ಜಗತ್ತಿಗಿಂತ ಬೇರೆಯೇ ಆಗಿರುತ್ತದೆ. ಪ್ರಾಣಿಗಳಲ್ಲಿ ಮೂಡುವ ಬಿಂಬಕ್ಕೆ ಸಂವಾದಿಯಾದ ವಸ್ತುವೊಂದು ಹೊರಜಗತ್ತಿನಲ್ಲಿ ಇರಲೇಬೇಕಾಗುತ್ತದೆ. ಅಂದರೆ ಬಿಂಬ ಮತ್ತು ಅದಕ್ಕೆ ಕಾರಣವಾಗುವ ವಸ್ತುಗಳ ನಡುವೆ ಬಿಡಿಸಲಾಗದ ಬಂಧವಿರುತ್ತದೆ. ಇಲ್ಲಿ ಬಿಂಬ ಎನ್ನುವ ಮಾತನ್ನು ಕಣ್ಣಿಗೆ ಸಂಬಂಧಿಸಿದ ಅನುಭವವೆಂದೇ ತಿಳಿಯಬೇಕಾಗಿಲ್ಲ. ಅದು ಸ್ಪರ್ಶ, ರುಚಿ, ದನಿ, ವಾಸನೆ ಇವುಗಳಲ್ಲಿ ಯಾವುದು ಬೇಕಾದರೂ ಆಗಿರಬಹುದು. ವಾಸನೆಗಳನ್ನು ಅಸಂಖ್ಯ ಪ್ರಮಾಣದಲ್ಲಿ ಬಿಡಿಬಿಡಿಯಾಗಿ ಇರಿಸಿಕೊಳ್ಳಬಲ್ಲ ಪ್ರಾಣಿಯು ಒಂದು ವಿಶೇಷ ಸಾಮರ್ಥ್ಯವನ್ನು ಪಡೆದಿದೆ ಎಂಬುದು ನಿಜ. ಆದರೆ ಆ ವಾಸನೆಗಳ ಸರಣಿಯನ್ನು ಬಳಸಿ ಪರಿಕಲ್ಪನೆಗಳನ್ನು ರೂಪಿಸಿಕೊಳ್ಳಲು ಆ ಪ್ರಾಣಿಗೆ ಸಾಧ್ಯವಾಗದು. ಅದು ಮನುಷ್ಯರಿಗೆ ಮಾತ್ರ ಸಾಧ್ಯವಿರುವ ಸಾಮರ್ಥ್ಯ. ಪ್ರಾಣಿಗಳು ತಮ್ಮ ಸಂವೇದನೆ ಮತ್ತು ದೈಹಿಕ ಚರ್ಯೆಗಳ ನಂಟನ್ನು ನುಡಿಕಸುವನ್ನಾಗಿ ಮಾರ್ಪಡಿಸಿಕೊಳ್ಳಲಿಲ್ಲ ಎಂಬುದಂತೂ ಖಚಿತ.

ಇನ್ನು ಮಾನವರ ಪರಿಕಲ್ಪನೆಗಳ ಜಗತ್ತಿನ ಸ್ವರೂಪವನ್ನು ನೋಡೋಣ. ನುಡಿಕಸುವು ಮಾನವರಲ್ಲಿ ತಲೆದೋರಿ ಅರವತ್ತು ಎಪ್ಪತ್ತು ಸಾವಿರ ವರ್ಷಗಳಾದವು ಎಂದೆವಷ್ಟೆ. ಈ ಅವಧಿಯಲ್ಲಿ ಅಸಂಖ್ಯ ಪ್ರಮಾಣದಲ್ಲಿ ಮಾನವರು ಈ ಕಸುವನ್ನು ಪಡೆದಿದ್ದಾರೆ. ಬದುಕಿ ನಾಶವಾಗಿದ್ದಾರೆ. ಲಕ್ಷಾಂತರ ಮೈಲುಗಳ ವಿಸ್ತಾರದಲ್ಲಿ ಹರಡಿಹೋಗಿದ್ದಾರೆ. ಒಂದಕ್ಕೊಂದು ನಂಟೇ ಇಲ್ಲದ ಗುಂಪುಗಳಲ್ಲಿ ಬದುಕಿದ್ದಾರೆ. ಹೀಗಿದ್ದರೂ ಮಾನವರಲ್ಲಿ ಪರಿಕಲ್ಪನೆಗಳು ರೂಪುಗೊಳ್ಳುವ ಬಗೆಯಲ್ಲಿ ಯಾವ ವ್ಯತ್ಯಾಸವೂ ಆದಂತೆ ತೋರುವುದಿಲ್ಲ. ಎಲ್ಲೋ ನ್ಯೂಗಿನಿಯಲ್ಲಿ ಇರುವ ಆದಿವಾಸಿಯಾಗಲೀ ನಾಗರಿಕ ಎಂದು ನಾವು ತಿಳಿದಿರುವ ಪ್ರದೇಶದಲ್ಲಿ ವಾಸಿಸುತ್ತಿರುವ ವ್ಯಕ್ತಿಯಾಗಲೀ ಒಂದೇ ಬಗೆಯ

ಪರಿಕಲ್ಪನೆಗಳನ್ನು ರೂಪಿಸಿಕೊಂಡಿದ್ದಾರೆ. ಉದಾಗೆ ನದಿ ಇಲ್ಲವೇ ಮೀನು ಇಲ್ಲವೇ ಮನೆ ಎಂಬ ಪರಿಕಲ್ಪನೆಗಳನ್ನು ಆ ವ್ಯಕ್ತಿಗಳು ಹೇಗೆ ರೂಪಿಸಿಕೊಂಡಿದ್ದಾರೆ ಎಂಬುದನ್ನು ಪರೀಕ್ಷಿಸಿದರೆ ಈ ಸಮಾನಾಂಶ ಗೋಚರವಾಗುತ್ತದೆ (ಈ ಪರೀಕ್ಷೆಯನ್ನು ನಡೆಸುವಾಗ ನದಿ, ಮೀನು, ಮನೆ ಎಂಬ ತಿರುಳನ್ನು ಸೂಚಿಸಲು ಬೇರೆ ಬೇರೆ ಪದಗಳನ್ನು ಅಂದರೆ ಆಯಾ ವ್ಯಕ್ತಿಗಳಿಗೆ ತಿಳಿಯುವ ಪದಗಳನ್ನು ಬಳಸಿದರೂ ಅದಕ್ಕೆ ಅವರು ಕೊಡುವ ವಿವರಣೆಯಲ್ಲಿ ವ್ಯತ್ಯಾಸವಾಗುವುದಿಲ್ಲ. ಆ ವಿವರಣೆಯು ನುಡಿಯ ರೂಪದಲ್ಲಿ ಇರಬಹುದು ಇಲ್ಲವೇ ಸನ್ನೆಗಳ ರೂಪದಲ್ಲಿ ಇರಬಹುದು).

ಮಾನವರಲ್ಲಿರುವ ಪರಿಕಲ್ಪನೆಗಳ ಜಗತ್ತು ಹೇಗೆ ವಿಶಿಷ್ಟ ಎಂಬುದನ್ನು ಮತ್ತು ಅವು ಇತರ ಪ್ರಾಣಿಗಳಲ್ಲಿರುವ ಪರಿಕಲ್ಪನೆಗಳ ಜಗತ್ತಿಗಿಂತ ಭಿನ್ನವೆಂಬುದನ್ನೂ ಈಗ ಒಪ್ಪಿದ್ದೇವೆ. ಪ್ರಾಣಿಗಳು ತಮ್ಮೊಳಗಿರುವ ಯಾವ ಪರಿಕಲ್ಪನೆಯನ್ನಾದರೂ ಅಂದರೆ ಲೋಕ ಜಗತ್ತಿನ ಬಿಂಬವನ್ನಾದರೂ, ಬಳಸುವ ಬಗೆ ಹೇಗೆಂಬುದನ್ನು ನೋಡೋಣ. ಈ ಬಿಂಬವು ಈಗಾಗಲೇ ಹೇಳಿದಂತೆ ಕಣ್ಣಿಗೆ ಮಾತ್ರ ಸಂಬಂಧ ಪಟ್ಟಿದ್ದಾಗಿರದೆ ಕಿವಿ, ನಾಲಿಗೆ, ಚರ್ಮ ಮತ್ತು ಮೂಗಿನ ಮೂಲಕವೂ ದೊರಕಿರುತ್ತದೆ. ಯಾವುದೇ ಪ್ರಾಣಿ ತನ್ನಲ್ಲಿರುವ ಇಂಥ ಬಿಂಬಗಳನ್ನು ಹೊರ ಲೋಕದಲ್ಲಿ ಆ ಬಿಂಬವು ಪ್ರತಿನಿಧಿಸುವ ವಸ್ತು ಇದ್ದಾಗ ಮಾತ್ರವೇ ಬಳಸಬಲ್ಲುದು. ಉದಾ.ಗೆ ನಾಯಿ ಯಾರೋ ಒಬ್ಬ ವ್ಯಕ್ತಿಯ ವಾಸನೆಯನ್ನು ಒಂದು ಬಿಂಬವನ್ನಾಗಿ ಗ್ರಹಿಸಿಟ್ಟುಕೊಂಡಿದ್ದರೆ ಆ ವ್ಯಕ್ತಿಯು ಮತ್ತೆ ಸಮೀಪಕ್ಕೆ ಬಂದಾಗ ಮಾತ್ರವೇ ತಾನು ಗ್ರಹಿಸಿದ್ದ ವಾಸನೆಯ ಬಿಂಬವನ್ನು ಬಳಸಬಲ್ಲುದು. ಆ ವ್ಯಕ್ತಿಯ ಗೈರು ಹಾಜರಿಯಲ್ಲಿ ಆ ಬಿಂಬವನ್ನು ನಾಯಿಯು ಬಳಸಲಾರದು. ಈ ಶರತ್ತನ್ನು ಮಾನವರ ಪರಿಕಲ್ಪನೆಗಳ ಲೋಕಕ್ಕೆ ಅನ್ವಯಿಸಲು ಬರುವುದಿಲ್ಲ. ಅವರು ಪರಿಕಲ್ಪನೆಗಳನ್ನು ಅವು ಪ್ರತಿನಿಧಿಸುವ ಲೋಕ ಸಂವಾದಿ ಸಂಗತಿಗಳ ಗೈರು ಹಾಜರಿಯಲ್ಲೂ ಬಳಸಬಲ್ಲರು.

ನುಡಿಯ ಅಧ್ಯಯನವನ್ನು ಕುರಿತು

ಕಳೆದ ಏಳು ದಶಕಗಳಿಂದ ಚಾಮ್‌ಸ್ಕಿ ನುಡಿ ಕಸುವನ್ನು ಕುರಿತು ಹೊಸ ಚಿಂತನೆಗಳನ್ನು ಮಂಡಿಸುತ್ತಾ ಬಂದಿದ್ದಾರೆ. ಈ ಚಿಂತನೆಗಳು ನುಡಿಯ ಅಧ್ಯಯನಕ್ಕೆ ಹೊಸ ದಿಕ್ಕುಗಳನ್ನು ತೋರಿವೆ. ಆದರೆ ಇದರ ಜೊತೆಗೆ ಲಗಾಯಿತಿನಿಂದ ಚಾಲ್ತಿಯಲ್ಲಿರುವ ನುಡಿಯ ಅಧ್ಯಯನಗಳ ಮಾದರಿಗಳಿಗೆ ಸವಾಲನ್ನು ಎಸೆದಿವೆ. ಹೀಗಾಗಿ ಚಾಲ್ತಿಯ ಮಾದರಿಗಳು ಮತ್ತು ಚಾಮ್‌ಸ್ಕಿ ಚಿಂತನೆಗಳ ನಡುವೆ ಉದ್ದಕ್ಕೂ ಪರಸ್ಪರ ವಿರೋಧ ಏರ್ಪಟ್ಟಿದೆ. ಚಾಲ್ತಿ ಮಾದರಿಯ ಅಧ್ಯಯನಕಾರರು ಚಾಮ್‌ಸ್ಕಿಯ ಚಿಂತನೆಗಳು ನುಡಿಯ ಬಳಕೆಯ ನೆಲೆಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ ಎಂಬ ವಾದವನ್ನು ಮಂಡಿಸುತ್ತಲೇ ಬಂದಿದ್ದಾರೆ. ತಮ್ಮ ಚಿಂತನೆಗಳ ಬಗೆಗೆ ಎದ್ದಿರುವ ವಿವಾದಗಳಿಗೆ ಉತ್ತರ ನೀಡಲೆಂಬಂತೆ ನುಡಿಯನ್ನು ಎರಡು ನೆಲೆಗಳಲ್ಲಿ ಪರಿಗಣಿಸಬಹುದೆಂದು ಚಾಮ್‌ಸ್ಕಿ ವಿವರಿಸುತ್ತಾರೆ. ಅವುಗಳಲ್ಲಿ ಒಂದು ನುಡಿಯನ್ನು ಒಂದು ಕಸುವನ್ನಾಗಿ ಮಾತ್ರ ನೋಡುತ್ತದೆ. ಇನ್ನೊಂದು ನುಡಿ ಕಸುವು ಮತ್ತು ಅದರ ಬಳಕೆಯ ನೆಲೆಗಳನ್ನು ಒಳಗೊಳ್ಳುತ್ತದೆ

ಇಪ್ಪತ್ತನೇ ಶತಮಾನದ ನಡುಭಾಗದಲ್ಲೇ ಚಾಮ್‌ಸ್ಕಿ ಮತ್ತು ಅವರ ಅನುಯಾಯಿಗಳು ನುಡಿ ಕಸುವು ಮತ್ತು ನುಡಿ ಬಳಕೆಗೆ ನಡುವೆ ಇರುವ ನಂಟನ್ನು ಕುರಿತು ವಿವರಣೆಯನ್ನು ನೀಡುತ್ತಿದ್ದರು. ನುಡಿ ಕಸುವನ್ನು x ಎಂದು ತಿಳಿಯೋಣ. ನುಡಿ ಬಳಕೆಯನ್ನು y ಎಂದು ತಿಳಿಸಿದರೆ ಆಗ x ಮತ್ತು y ಗಳ ಸಂಬಂಧವೇನು ಎಂಬ ಪ್ರಶ್ನೆ ಎದುರಾಗುತ್ತದೆ. x ಎಂಬುದು ಬೇರೆ ಬೇರೆ ಸಂದರ್ಭಗಳಲ್ಲಿ y ಆಗಿ ಅವತರಿಸುವ x ನ ಹೊರರೂಪವನ್ನು y_1 y_2 y_3 y_4..... ಎಂದು ತಿಳಿಯೋಣ. ಈ ಹಲವು ಬಗೆಯ yಗಳಲ್ಲಿ ಅಷ್ಟಿಷ್ಟು ವ್ಯತ್ಯಾಸಗಳು ಇರುತ್ತವೆ. ಹಾಗಿದ್ದರೂ ಅವೆಲ್ಲವೂ xನ ಅವತಾರಗಳೆಂದೇ ಪರಿಗಣನೆಗೆ ಒಳಗಾಗುತ್ತವೆ. ಅಂದರೆ x ಎಂಬುದು ಸ್ಥಿರ. ಅದರಲ್ಲಿ ಬದಲಾವಣೆ ಇಲ್ಲ. y ಎಂಬುದು x ನ ಸೂಚಕವಾಗಿ ಹಲವು ಅವತಾರಗಳಲ್ಲಿ ಕಾಣಬಹುದು. ಒಂದೆರಡು ಉದಾ.ಗಳನ್ನು ನೋಡೋಣ ಕ್ ಎಂಬ ದನಿಯನ್ನು ನಾವು ಉಲಿದಾಗ ನಮ್ಮ ನುಡಿಕಸುವಿನಲ್ಲಿರುವ ಕ್ ಎಂಬ ಮೂಲ ರೂಪದ ಕ್ ಎಂಬುದು ಬಹಿರಂಗಗೊಳ್ಳುತ್ತದೆ. ನಾವು ಹತ್ತು ಬಾರಿ ಈ ದನಿಯನ್ನು ಉಲಿದಾಗಲೂ ಅವೆಲ್ಲದರ ನಡುವೆ ಇರುವ ವ್ಯತ್ಯಾಸಗಳು ನಮಗಾಗಲೀ ಅದನ್ನು ಕೇಳಿಸಿಕೊಳ್ಳುವವರಿಗಾಗಲೀ ಗಮನಕ್ಕೆ ಬರುವುದಿಲ್ಲ. ಇನ್ನೊಂದು ಉದಾಹರಣೆ. ಮರ ಎಂಬ ಪರಿಕಲ್ಪನೆಯನ್ನು ಹೊಂದಿರುವ ವ್ಯಕ್ತಿ ತೆಂಗಿನಮರ, ಆಲದಮರ, ಅಡಕೆಯ ಮರ, ಗೋಣಿಯ ಮರ ಇವೆಲ್ಲವನ್ನೂ ಬೇರೆ ಬೇರೆಯಾಗಿ ಕಂಡಾಗ ಅವೆಲ್ಲವನ್ನೂ ಮರ ಎಂದೇ ಗುರುತಿಸುತ್ತಾರೆ. ಆ ಮರಗಳ ನಡುವಣ ವ್ಯತ್ಯಾಸಗಳು ಮರ ಎಂದು ಗುರುತಿಸಿದ್ದರಿಂದ ಪರಿಗಣನೆಗೆ ಬಾರದೆ ಹೋಗುತ್ತದೆ.

ನುಡಿಕಸುವು ನುಡಿಬಳಕೆಗೆ ಕಾರಣವಾಗುತ್ತದೆ. ನುಡಿಕಸುವನ್ನು ಬಳಕೆಯ ನೆಲೆಗೆ ತರುವಾಗ ಹಲವು ಆಂತರಿಕ ಪರಿವರ್ತನೆಗಳು ನಡೆಯುತ್ತಿರುತ್ತವೆ. ಇವೆಲ್ಲವನ್ನು ಕಳೆದ ಶತಮಾನದ ಕೊನೆಕೊನೆಯ ದಶಕಗಳಲ್ಲಿ ತುಂಬಾ ವಿಸ್ತಾರವಾಗಿ ಅಧ್ಯಯನ ಮಾಡಿದ್ದಾರೆ.

ನುಡಿಯ ಅಧ್ಯಯನದಲ್ಲಿ ಅದರ ಬಳಕೆಯನ್ನು ಒಳಗೊಳ್ಳುವುದನ್ನು ಹೆಚ್ಚು ಚಾಲ್ತಿಯಲ್ಲಿರುವ ಅಧ್ಯಯನ ವಿಧಾನಗಳು ಬಳಸುತ್ತವಷ್ಟೇ. ಈ ಬಗೆಯ ಅಧ್ಯಯನಗಳು ವರ್ಣನಾತ್ಮಕವಾಗಿರುತ್ತವೆ. ವಿಶ್ಲೇಷಣೆಯನ್ನು ಒದಗಿಸುತ್ತವೆ. ಆದರೆ ನುಡಿ ಬಳಕೆಯು ಹಾಗೆ ಇರುವುದಕ್ಕೆ ಕಾರಣವೇನು ಎಂಬುದನ್ನು ಹುಡುಕಲು ತೊಡಗುವುದಿಲ್ಲ. ಅಂಥ ಅಧ್ಯಯನಗಳಿಗೆ ಒಂದು ಮಿತಿ ಇರುತ್ತದೆ. ಆ ಮಿತಿಯನ್ನು ಅವು ದಾಟಲಾರವು. ಉದಾಗೆ ಒಂದು ನುಡಿಯ ಧ್ವನಿ ವ್ಯವಸ್ಥೆಯನ್ನು ವಿವರಿಸುವ ಅಧ್ಯಯನವನ್ನು ನೋಡೋಣ. ಇಂಥ ಅಧ್ಯಯನಗಳು ಆ ನುಡಿಯಲ್ಲಿರುವ ದನಿಗಳ ವಿವರಣೆ ಅವುಗಳ ಸಂಯೋಜನೆಯ ನಿಯಮಗಳು ಮುಂತಾದವುಗಳನ್ನು ವಿವರಿಸಿದರೆ ಮುಗಿಯಿತು. ಅದರಾಚೆಗೆ ದಾಟಿ ಹೋಗಲಾರದು. ಈ ವಿವರಣೆಯನ್ನೇ ಆ ನುಡಿಯ ಚಹರೆ ಎಂದು ತಿಳಿದರೆ ನಿಜವಾಗಿ ಆ ನುಡಿಯನ್ನಾಡುವ ವ್ಯಕ್ತಿಯುಲ್ಲಿರುವ ನುಡಿಕಸುವನ್ನು ವಿವರಿಸಿದಂತೆ ಆಗುವುದಿಲ್ಲ.

ಒಂದು ವೇಳೆ ಬೇರೆಬೇರೆ ನುಡಿಗಳ ಧ್ವನಿ ವ್ಯವಸ್ಥೆಗಳನ್ನು ಪರಸ್ಪರ ಹೋಲಿಸಿ ಮಾನವ ನುಡಿಗಳ ಒಂದು ಸಾಮಾನ್ಯ ಲಕ್ಷಣವನ್ನು ಕಂಡುಹಿಡಿಯುವುದು ಸಾಧ್ಯ ಎಂದು ವಾದಿಸಬಹುದು. ಆದರೆ ಇದು ಹಲವು ಕಾರಣಗಳಿಂದ ಅಸಾಧ್ಯ. ಏಕೆಂದರೆ ಮಾನವ ಸಹಜ ಭಾಷೆಗಳೆಲ್ಲವನ್ನೂ ಅಧ್ಯಯನ ಮಾಡಿ ಮುಗಿಸುವ ಯೋಜನೆಯನ್ನು ಆರಂಭಿಸಬಹುದೇ ಹೊರತು ಪೂರೈಸುವುದು ಕಷ್ಟ. ಲೋಕದಲ್ಲಿ ಎಷ್ಟು ನುಡಿಗಳಿವೆ ಎಂಬುದನ್ನೇ ಇನ್ನೂ ಖಚಿತವಾಗಿ ಗುರುತಿಸಲಾಗಿಲ್ಲವಷ್ಟೇ. ಹೋಲಿಸುವ ಕೆಲಸವನ್ನೂ ಮೊದಲು ಮಾಡಿದೆವೆಂದೇ ತಿಳಿಯೋಣ. ಆಗಲೂ ಮಾನವ ಸಹಜ ನುಡಿಗಳ ಮೂಲ ಕಸುವನ್ನು ಕಂಡು ಹಿಡಿಯುವುದು ಆಗದ ಮಾತು. ಏಕೆಂದರೆ ನಮಗೆ ನುಡಿ ಬಳಕೆಯಲ್ಲಿ ದೊರಕುವುದು ನುಡಿಕಸುವಿನ ಒಂದು ಆವಿಷ್ಕಾರ ಮಾತ್ರ. ಹೀಗಾಗಿ ಇಂಥ ಅಧ್ಯಯನಗಳು ಬಂದು ಹಂತದಲ್ಲಿ ನಿಲುಗಡೆಗೆ ಬಂದು ಬಿಡುತ್ತವೆ.

ಈ ಎಲ್ಲ ಅಂಶಗಳನ್ನು ಗಮನಸಿದಾಗ ನುಡಿಕಸುವನ್ನು ಅದರ ಬಳಕೆಯ ಮೂಲಕ ಅರಿಯುವ ದಾರಿಯನ್ನು ಮಾತ್ರ ಅನುಸರಿಸುವುದು ಸರಿಯಲ್ಲ ಎಂಬುದು ತಿಳಿಯುತ್ತದೆ. ಚಾಮ್‌ಸ್ಕಿ ಈ ಕಾರಣದಿಂದಲೇ ನುಡಿಯ ಅಧ್ಯಯನವನ್ನು ಬೇರೆ ದಿಕ್ಕಿನಿಂದ ಆರಂಭಿಸಬೇಕೆಂದು ಸೂಚಿಸಿದ್ದು. ಮನುಷ್ಯರ ಜೈವಿಕ ರಚನೆಯ ಒಂದು ಭಾಗವೆಂದು ನುಡಿ ಕಸುವನ್ನು ಗುರುತಿಸಿದ್ದು ಈ ಬಗೆಯ ಅಧ್ಯಯನಗಳ ಒಂದು ದಿಟ್ಟ ಹೆಜ್ಜೆಯಾಗಿದೆ.

ಸಂವಹನವೇ ನುಡಿಯ ಮುಖ್ಯ ಗುರಿ ಎಂದು ತಿಳಿಯುವ ಅಧ್ಯಯನ ವಿಧಾನಗಳನ್ನು ನೋಡೋಣ. ಒಂದೇ ಸಾಮಾನ್ಯ ನುಡಿಯನ್ನು ಬಲ್ಲವರ ನಡುವೆ ಸಂವಹನ ಸಾಧ್ಯವೆಂದು ಒಪ್ಪಲಾಗಿದೆ. ಕನ್ನಡವನ್ನು ಬಲ್ಲ ಇಬ್ಬರು ಇದಾರೆಂದುಕೊಳ್ಳಿ ಸಹಜವಾಗಿಯೇ ಅವರಿಬ್ಬರ ನಡುವೆ ಮಾತುಕತೆ ಸಾಧ್ಯ. ಒಬ್ಬರು ಹೇಳಿದ್ದೇ ಇನ್ನೊಬ್ಬರಿಗೆ ತಿಳಿಯುತ್ತದೆ ಎಂದು ನಂಬಿದ್ದೇವೆ. ಇದು ಸರಿ. ನಿಜ ಜೀವನದಲ್ಲಿ ಜನರು ನಾವು ಹೇಳಿದ್ದು ಸಾಕಿದ ಪ್ರಾಣಿಗಳಿಗೂ ಗೊತ್ತಾಗುತ್ತದೆ ಎಂದು ತಿಳಿದಿದ್ದಾರೆ. ಒಂದು ಅನುಭವದಿಂದ ಹತ್ತಾರು ಉದಾ.ಗಳನ್ನೂ ಕೊಡುತ್ತಾರೆ. ಅವರ ಮಾತನ್ನು ನಂಬದಿರಲು ಕಾರಣಗಳಿಲ್ಲ. ಹಾಗಿದ್ದರೆ ಒಂದೇ ನುಡಿಯನ್ನಾಡುವ ಇಬ್ಬರು ವ್ಯಕ್ತಿಗಳ ನಡುವೆ, ಮತ್ತು ಮನುಷ್ಯ ಪ್ರಾಣಿಯ ನಡುವೆ ನಡೆಯುವ ಸಂವಹನ ಎಂಬುದು ಒಂದೇ ಬಗೆಯದೇ? ಅಥವಾ ಮನುಷ್ಯರ ನಡುವಣ ಸಂವಹನಕ್ಕೆ ಹೆಚ್ಚು ವ್ಯಾಪಕತೆ ಇದೆ. ಪ್ರಾಣಿಗಳ ಜೊತೆ ನಡೆಸುವ ಸಂವಹನಕ್ಕೆ ಸೀಮಿತತೆ ಇದೆ ಎನ್ನಬಹುದೇ? ಅಂದರೆ ಎರಡೂ ಬಗೆಯ ಸಂವಹನಗಳ ನಡುವೆ ಪರಿಮಾಣದಲ್ಲಷ್ಟೇ ವ್ಯತ್ಯಾಸವಿದೆಯೇ ಇಲ್ಲವೇ ಎರಡೂ ಗುಣಾತ್ಮಕವಾಗಿ ವ್ಯತ್ಯಾಸವಿರುವ ಸಂವಹನ ಮಾದರಿಗಳೋ?

ಅಧ್ಯಯನಗಳು ಕೋರಿಸಿರುವಂತೆ ಇವೆರಡೂ ಗುಣಾತ್ಮಕವಾಗಿ ವ್ಯತ್ಯಾಸವುಳ್ಳ ಸಂವಹನ ಮಾದರಿಗಳು. ಕನ್ನಡ ಬಲ್ಲ ಇಬ್ಬರು ಪರಸ್ಪರ ಮಾತಾಡುವಾಗ ನಡೆಯುವ ಸಂವಹನಕ್ಕೆ ಅವರಿಬ್ಬರೂ ಕನ್ನಡವನ್ನು ಬಲ್ಲರು ಎಂಬುದಷ್ಟೇ ಕಾರಣವಲ್ಲ. ಅವರಿಬ್ಬರೂ ಮನುಷ್ಯರಾಗಿದ್ದು ಎಲ್ಲ ಮನುಷ್ಯರಿಗೂ ಸಹಜವಾದ ಪರಿಕಲ್ಪನೆಗಳ ರಚನೆ ಇಬ್ಬರಲ್ಲೂ ಇದೆ ಎಂಬುದೇ ಮುಖ್ಯವಾದ ಕಾರಣ. ಆದ್ದರಿಂದಲೇ ಎರಡು ಬೇರೆಬೇರೆ ನುಡಿಗಳನ್ನು

ಆಡುವವರೂ ಸನ್ನೆ ನುಡಿಗಳನ್ನಾಡುವವರೂ ಒಬ್ಬರಿಗೊಬ್ಬರು ಮಾತಾಡಿಕೊಳ್ಳಬಲ್ಲರು. ಮಾನವ ಪರಿಕಲ್ಪನೆಗಳನ್ನು ಪಡೆದಿಲ್ಲದ ಪ್ರಾಣಿಗಳ ಜೊತೆ ಮನುಷ್ಯರು ನಡೆಸುವ ಸಂವಹನ ಅಭ್ಯಾಸದಿಂದ ರೂಪುಗೊಂಡದ್ದು. ಅಲ್ಲಿ ಕಲಿಕೆ ಇರುತ್ತದೆ. ನಿಜ ಜಗತ್ತಿನ ಹಲವು ಪ್ರಚೋದನೆಗಳು ಪ್ರವೃತ್ತವಾಗಿರುತ್ತವೆ. ಇಬ್ಬರು ಅಪರಿಚಿತ ವ್ಯಕ್ತಿಗಳು ಕೂಡಾ ಕನಿಷ್ಠ ಪ್ರಮಾಣದಲ್ಲಿ ಸಂವಹನ ನಡೆಸಬಲ್ಲರು. ಆದರೆ ಅಭ್ಯಾಸ ಮತ್ತು ಕಲಿಕೆ ಇಲ್ಲದಿದ್ದಲ್ಲಿ ಪ್ರಾಣಿಗಳೊಡನೆ ಮನುಷ್ಯರು ಸಂವಹನ ಮಾಡಲಾರರು.

ಆದ್ದರಿಂದ ಸಂವಹನವೇ ನುಡಿಯ ಗುರಿ ಎಂದು ತಿಳಿಯುವ ಅಧ್ಯಯನಗಳೂ ಕೂಡಾ ಒಂದು ಮಿತಿಗೆ ಬಳಸಲಾಗಿದೆ. ಸಂವಹನವೆಂಬುದು ಮನುಷ್ಯರಲ್ಲಿ ಹುಟ್ಟನಿಂದಲೇ ನೆಲೆಗೊಂಡಿರುವ ನುಡಿಕಸುವಿನ ನೆಲೆಯದ್ದೇ ಹೊರತು ಬೇರೆ ನೆಲೆಯಲ್ಲಿ ಅಲ್ಲ. ಹಾಗಾಗಿ ನುಡಿಯ ಅಧ್ಯಯನ ಎಂದರೆ ಅದು ನುಡಿಕಸುವಿನ ಅಧ್ಯಯನವೇ ಆಗಬೇಕಾಗುತ್ತದೆ.

ಚಾಮ್‌ಸ್ಕಿಯವರ ಚಿಂತನೆಗಳ ಪ್ರಕಾರ ನುಡಿ ಕಸುವಿನಲ್ಲಿ ನಿರ್ದಿಷ್ಟ ಭಾಷೆಗೆ ಮಾತ್ರ ಸಂಬಂಧಿಸಿದ್ದಲ್ಲದ ಎರಡು ಸಂಗತಿಗಳಿರುತ್ತವೆ. ಅವುಗಳಲ್ಲಿ ಒಂದು ಉಚ್ಚರಿಸುವ ಮತ್ತು ಕೇಳಿಸಿಕೊಳ್ಳುವ ಅಂಗಗಳ ರಚನೆ ಮತ್ತು ಸಂವೇದನೆಗಳಿಗೆ ಸಂಬಂಧಿಸಿದ್ದು. ಎರಡನೆಯದು ಚಿಂತನೆ ಮತ್ತು ಕ್ರಿಯೆಗಳನ್ನು ನಿರ್ದೇಶಿಸುವ ಪರಿಕಲ್ಪನೆಗಳ ವ್ಯವಸ್ಥೆಗೆ ಸಂಬಂಧಿಸಿದ್ದು. ಪ್ರತಿಯೊಬ್ಬ ಮಾನವರಲ್ಲೂ ಸಹಜವಾಗಿ ಎರಡೂ ಇರುತ್ತವೆ (ನ್ಯೂನತೆಯುಳ್ಳ ವ್ಯಕ್ತಿಗಳನ್ನು ಹೊರತುಪಡಿಸಿ) ಈ ಎರಡೂ ವ್ಯವಸ್ಥೆಗಳು ಯಾವುದೇ ನುಡಿಗೆ ಕಟ್ಟು ಬಿದ್ದಿರುವುದಿಲ್ಲ. ನುಡಿಯ ಅಧ್ಯಯನಕಾರರು ಈ ಎರಡೂ ವ್ಯವಸ್ಥೆಗಳನ್ನು ಮಾತ್ರ ಅವೆರಡರ ನಡುವೆ ಸಂಪರ್ಕ ಕಲ್ಪಿಸುವ ನೆಲೆಯಲ್ಲಿ ಅಧ್ಯಯನ ಮಾಡುತ್ತಾರೆ. ಅವರಲ್ಲಿ ಕೆಲವರು ಕೇವಲ ಈ ಎರಡು ವ್ಯವಸ್ಥೆಗಳ ನಡುವಣ ಸಂಪರ್ಕದ ನೆಲೆಯನ್ನು ಮಾತ್ರ ತಮ್ಮ ಅಧ್ಯಯನದ ಗುರಿಯನ್ನಾಗಿ ಇರಿಸಿಕೊಳ್ಳುತ್ತಾರೆ.

ಈ ಎರಡೂ ವ್ಯವಸ್ಥೆಗಳು ಒಗ್ಗೂಡುವ ನೆಲೆಯೆಂದರೆ ವಾಕ್ಯರಚನೆ. ಧ್ವನಿರಚನೆ ಪದ ರಚನೆ, ಅರ್ಥ ರಚನೆ ಇವೂ ಕೂಡ ಈ ಸಂಪರ್ಕದ ನೆಲೆಯಲ್ಲಿ ಮಾತ್ರ ವಿವರಣೆಗೆ ಒಳಗಾಗುತ್ತದೆ. ಉಚ್ಚಾರಣೆ ಮತ್ತು ಕೇಳಿಸಿಕೊಳ್ಳುವ ಸಂವೇದನಾ ವ್ಯವಸ್ಥೆಯನ್ನು ಸಾಕಷ್ಟು ನಿಖರವಾಗಿ ಅಧ್ಯಯನ ಮಾಡಲಾಗಿದೆ. ಆದರೆ ಪರಿಕಲ್ಪನೆಗಳ ವ್ಯವಸ್ಥೆಯನ್ನು ಇನ್ನೂ ಖಚಿತವಾಗಿ ಅರಿಯಲು ಸಾಧ್ಯವಾಗಿಲ್ಲ. ಈ ನೆಲೆಯ ಅಧ್ಯಯನಕ್ಕೆ ಒಂದು ದೊಡ್ಡ ಕೊರತೆ ಇದೆ. ಪರಿಕಲ್ಪನೆಗಳ ಜಗತ್ತು ಸ್ವತಂತ್ರವಾದುದು ಮತ್ತು ನುಡಿಮುಕ್ತವಾದುದು ಎಂದು ಒಪ್ಪಿ ಅಧ್ಯಯನ ಮಾಡ ಹೊರಟರೂ ಯಾವುದೋ ಒಂದು ಹಂತದಲ್ಲಿ ಪರಿಕಲ್ಪನೆಗಳ ಲೋಕ ಸಂವಾದಿ ನೆಲೆಗೆ ದಾಟಿಬಿಡುವ ಅಪಾಯವಿದೆ. ಅಂದರೆ ಪರಿಕಲ್ಪನೆಗಳನ್ನು ಒಂದಿಲ್ಲ ಒಂದು ಬಗೆಯಲ್ಲಿ ಅವು ಲೋಕದ ಬಿಂಬಗಳೇ ಆಗಿರುತ್ತವೆ ಎಂದು ನಂಬುವುದೇ ಅಧ್ಯಯನದ ಒಂದು ಮುಖ್ಯ ದೊಡ್ಡ ಕೊರತೆಯಾಗುತ್ತದೆ.

ಮಾನವರಲ್ಲಿ ಈ ಪರಿಕಲ್ಪನೆಗಳು ಹೇಗೆ ರೂಪುಗೊಂಡವು ಎಂಬುದನ್ನು ವಿವರಿಸಲು ಅಧ್ಯಯನಕಾರರು ಯತ್ನಿಸುತ್ತಿದ್ದಾರೆ. ಬಹುಮಟ್ಟಿಗೆ ಈ ಹಿಂದೆ ವಿವರಿಸಲಾದ ಸೇರ್ಪಡೆ ಎಂಬ ಪ್ರಕ್ರಿಯೆಯೇ ಈ ಜಗತ್ತನ್ನು ಕಟ್ಟಿರಬೇಕು. ಇದು ನಮ್ಮ ತರ್ಕದ

ಒಂದು ಹಾದಿಯನ್ನು ನೆಮ್ಮಿ ನಿಂತಿದೆ. ಅದೆಂದರೆ ಬಿಡಿಬಿಡಿಗಳನ್ನು ಸೇರಿಸಿ ಇಡಿಯನ್ನು ಕಟ್ಟುವ ವಿಧಾನ ಸರಳವಾದುದರಿಂದ ಸಂಕೀರ್ಣವಾದುದು ರಚನೆಯಾಗುತ್ತವೆ ಎಂದು ತರ್ಕದ ಈ ನೆಲೆ ಒಪ್ಪುತ್ತದೆ. ಈ ತೀರ್ಮಾನವನ್ನು ಒಪ್ಪಿ ಪರಿಕಲ್ಪನೆಗಳ ಜಗತ್ತನ್ನು ಅಧ್ಯಯನ ಮಾಡುತ್ತಿರುವ ಬಗೆ ಸರಿಯೋ ತಪ್ಪೋ ಎಂಬುದು ಇನ್ನೂ ಖಚಿತವಾಗಿಲ್ಲ. ಈ ಬಗೆಯ ತಿಳುವಳಿಕೆಗೆ ಒಂದೆರಡು ಸವಾಲುಗಳಿವೆ ಅವನ್ನೀಗ ಗಮನಿಸೋಣ.

ಜಗತ್ತಿನ ನುಡಿಗಳಿಗೆಲ್ಲ ಕೆಲವು ಸಾಮಾನ್ಯ ಚಹರೆಗಳಿವೆ. ಉದಾ.ಗೆ ಮಾತನಾಡುವಾಗ ಬಳಸುವ ದನಿಯ ಏರಿಳಿತ ಮತ್ತು ವಿನ್ಯಾಸ. (ಲಯಗಾರಿಕೆ) ಇದು ಒಂದು ಸಾಮಾನ್ಯ ಚಹರೆ ಎಂದೇ ತಿಳಿಯಲಾಗಿದೆ. ಪ್ರಶ್ನೆಯೊಂದನ್ನು ಕೇಳುತ್ತಿದ್ದರೆ ಆ ವಾಕ್ಯದ ದನಿಯ ವಿನ್ಯಾಸವು ಅವರಲ್ಲಿ ಬಳಸಲಾದ ಪ್ರಶ್ನಾರ್ಥಕ ಪದದಿಂದ ನಿರ್ದೇಶಿತವಾಗುತ್ತದೆ. ಇದು ಎಲ್ಲ ನುಡಿಗಳಲ್ಲೂ ಕಂಡು ಬರುವ ಚಹರೆ. ಸಮಸ್ಯೆ ಎಲ್ಲಿದೆಯೆಂದರೆ ಈ ಸಾಮಾನ್ಯ ಚಹರೆಗಳನ್ನು ನುಡಿಕಸುವಿನ ಭಾಗವಾಗಿ ಪರಿಗಣಿಸಬೇಕೇ ಅಥವಾ ಆಯಾ ನುಡಿಗಳ ವಿಶಿಷ್ಟ ಚಹರೆಗಳಲ್ಲಿ ಪರಿಗಣಿಸಬೇಕೋ ಎಂಬುದು. ಮೊದಲ ನಿಲುವನ್ನು ಒಪ್ಪಿದರೆ ನುಡಿಕಲಿಕೆಯ ಹಂತದಲ್ಲಿ ಈ ಸಾಮಾನ್ಯ ಚಹರೆಯನ್ನು ಕಲಿಯಬೇಕಾಗಿಲ್ಲ ಎಂದು ಒಪ್ಪಬೇಕಾಗುತ್ತದೆ. ಇದು ಹೌದೋ ಅಲ್ಲವೋ ಎಂಬುದು ಇನ್ನೂ ಹೆಚ್ಚಿನ ಸಂಶೋಧನೆಗಳಿಂದ ಮಾತ್ರವೇ ಗೊತ್ತಾಗಬೇಕಾಗಿದೆ.

ವಿಕಲ್ಪಗಳು ಹುಟ್ಟುಗುಣ ಮತ್ತು ವೈಶ್ವಿಕ ವ್ಯಾಕರಣ

1986ರ ಸುಮಾರಿಗೆ ಮಂಡಿತವಾದ **ನಿಯಮಗಳು ಮತ್ತು ವಿಕಲ್ಪಗಳು** ಎಂಬ ಸಿದ್ಧಾಂತವನ್ನು ಈಗಾಗಲೇ ಗಮನಿಸಿದ್ದೇವೆ. ನುಡಿಕಸುವಿನಲ್ಲಿ ನಿಯಮಗಳು ಎಂಬ ಎಲ್ಲ ನುಡಿಗಳ ಸಾಮಾನ್ಯ ಚಹರೆಗಳು ಮತ್ತು ಜಗತ್ತಿನ ನುಡಿಗಳಲ್ಲಿರುವ ವಿಶಿಷ್ಟತೆಗಳನ್ನು ವರ್ಗೀಕರಿಸಿದ ವಿಕಲ್ಪಗಳು ಇರುತ್ತವೆಂದು ಕಲ್ಪಿಸಿಕೊಳ್ಳಲಾಗಿದೆ. ಈ ಹಿಂದೆಯೇ ಹೇಳಿದಂತೆ ಇದು ಅಷ್ಟು ಸರಳವಾದುದಲ್ಲ. ನಿಯಮಗಳು ಯಾವುವು ಮತ್ತು ವಿಕಲ್ಪಗಳು ಯಾವುವು ಎಂಬುದನ್ನು ಕಂಡುಕೊಳ್ಳಬೇಕಾಗಿದೆ. ಅಲ್ಲದೆ ವಿಕಲ್ಪಗಳು ಎಷ್ಟು ಸಂಖ್ಯೆಯಲ್ಲಿವೆ ಎಂಬುದನ್ನು ಕಂಡುಕೊಳ್ಳಬೇಕು. ನಿಯಮಗಳು ಮತ್ತು ವಿಕಲ್ಪಗಳಿಂದ ವೈಶ್ವಿಕ ವ್ಯಾಕರಣವು ರಚನೆಯಾಗಿರುತ್ತದೆ. ಇದು ಮನುಷ್ಯರ ಒಂದು ಹುಟ್ಟುಗುಣವಾಗಿರುತ್ತದೆ.

ಇದೆಲ್ಲ ಸರಿ ಆದರೆ ಮಾನವರ ನುಡಿಗಳಲ್ಲಿ ವಿಕಲ್ಪಗಳು ಏಕೆ ಉಂಟಾಗಿವೆ ಎಂಬುದು ಒಂದು ಪ್ರಶ್ನೆ. ಸರಳವಾಗಿ ಕೇಳುವುದಾದರೆ ಮನುಷ್ಯರಿಗೆಲ್ಲ ಒಂದೇ ಭಾಷೆ ಏಕೆ ಇಲ್ಲ ಎಂಬ ಪ್ರಶ್ನೆಗೆ ಬಂದು ನಿಲ್ಲುತ್ತೇವೆ. ಮಾನವ ಜನಾಂಗ ಹರಿದು ಹಂಚಿ ಹೋಗಿರುವುದರಿಂದ ಮತ್ತು ಇನ್ನಿತರ ಪರಿಸರದ ಕಾರಣಗಳಿಂದ ನೂರಾರು ಭಾಷೆಗಳು ಹುಟ್ಟಿಕೊಂಡವು ಎಂದು ತಿಳಿಯಲಾಗಿದೆ. ಇದು ಒಂದು ವಿವರಣೆ ಮಾತ್ರವೇ ಆಯಿತು. ಅರವತ್ತು ಎಪ್ಪತ್ತು ಸಾವಿರ ವರ್ಷಗಳ ಹಿಂದೆ ಒಬ್ಬ ವ್ಯಕ್ತಿಯಲ್ಲಿ ಉಂಟಾದ ವಂಶವಾಹಿಗಳ ವಿಕಲ್ಪದಿಂದ ನುಡಿಕಸುವಿನ ಹುಟ್ಟು ಮೊದಲಾಯಿತು ಎನ್ನುವುದಾದರೆ ಆ ಹೊತ್ತಿನಲ್ಲಿ ಉಂಟಾದ ಮೆದುಳಿನ ನರವ್ಯವಸ್ಥೆಯ ಮರುರಚನೆ

ಒಂದೇ ಒಂದು ನುಡಿಯನ್ನು ಮಾತ್ರವೇ ರೂಪಿಸಬೇಕಿತ್ತಲ್ಲವೇ? ಆದರೆ ಹಾಗಾಗಿಲ್ಲ ಏಕೆ?

ಒಂದು ವೇಳೆ ಇಡೀ ಜಗತ್ತಿನಲ್ಲಿ ಒಂದೇ ಭಾಷೆ ಇರುತ್ತಿತ್ತೆಂದು ತಿಳಿಯೋಣ. ಆಗ ಇಂದು 'ಮನುಷ್ಯರು ಆಡುತ್ತಿರುವ ನುಡಿಗಳ ಎಲ್ಲ ಲಕ್ಷಣಗಳೂ ಆ ಭಾಷೆಯಲ್ಲಿ ಇರಬೇಕಾಗುತ್ತಿತ್ತು.' ಆಗ ಅಂಥದೊಂದು ನುಡಿಯನ್ನು ಎಳವೆಯಲ್ಲಿ ಪಡೆದುಕೊಳ್ಳುವುದೇ ಅತ್ಯಂತ ಶ್ರಮದಾಯಕವಾದ ಕೆಲಸವಾಗಿರುತ್ತಿತ್ತು. ಅಂದರೆ ಮೇಲೆ ಹೇಳಿದ ನುಡಿಕಸುವಿನ ಬೀಜಾರೋಹಣ ಸಂದರ್ಭದಲ್ಲಿಯೇ ಅದರಲ್ಲಿರುವ ಹಲವು ವೈವಿಧ್ಯಗಳ ಸಾಧ್ಯತೆಯೂ ಅಡಕವಾಗಿರಬೇಕಾಗುತ್ತಿತ್ತು. ಈ ಕಾರಣದಿಂದಾಗಿಯೇ ಜಗತ್ತಿನ ನುಡಿಗಳಲ್ಲಿ ವಿಕಲ್ಪಗಳು ಕಾಣಸಿಗುತ್ತವೆ.

ವೈಶ್ವಿಕ ವ್ಯಾಕರಣ ಮತ್ತು ಅದರ ಸರಳತೆ

ನುಡಿಕಸುವು ಕಲಿಕೆಯಿಂದ ದೊರಕುವುದಲ್ಲ ಮತ್ತು ಅದು ಶೂನ್ಯದಿಂದ ಹಂತಹಂತವಾಗಿ ಪೂರ್ಣಾವಸ್ಥೆಗೆ ವಿಕಾಸಹೊಂದುವ ವಾದದರಿಯನ್ನು ಅನುಸರಿಸುವುದಿಲ್ಲ. ಈ ಎರಡೂ ಮಾತುಗಳು ನಿಜವಿದ್ದರೆ ನುಡಿಕಸುವು ಎಂಬುದು ಒಂದು ಜೈವಿಕ ನೆಲೆ ಮತ್ತು ಮಗು ಹುಟ್ಟಿದಾಗಲೇ ಈ ಪೂರ್ಣ ಪ್ರಮಾಣದಲ್ಲಿ ಮಗುವಿನಲ್ಲಿ ನೆಲೆಗೊಂಡಿರುತ್ತದೆ ಎಂಬ ವಾದವನ್ನು ಒಪ್ಪಬೇಕಾಗುತ್ತದೆ. ಮಗುವಿನ ಮೆದುಳಿನಲ್ಲಿ ನುಡಿಕಸುವು ಎಲ್ಲಿ ಮತ್ತು ಹೇಗೆ ನೆಲೆಯಾಗಿರುತ್ತದೆ ಎಂಬುದನ್ನು ಈಗಿರುವಂತೆ ಯಾವುದೇ ಪ್ರಯೋಗದಿಂದ ಸಿದ್ಧಪಡಿಸಲು ಬರುವುದಿಲ್ಲ. ಆದ್ದರಿಂದಾಗಿ ಕೆಲವು ಊಹಾಕಲ್ಪನೆಗಳಿಗೆ ಮೊರೆ ಹೋಗಬೇಕಾಗುತ್ತದೆ ಮತ್ತು ಆ ಊಹಾ ಕಲ್ಪನೆಗಳು ಪ್ರತಿಪಾದಿಸುವ ಪ್ರಮೇಯಗಳು ಸರಿ ಎಂದು ತೋರಿಸುವ ಪರಿಣಾಮಗಳನ್ನು ಹುಡುಕಿ ತೆಗೆಯಬೇಕಾಗುತ್ತದೆ. ನುಡಿಕಸುವನ್ನು ಕುರಿತ ಚಾಮ್‌ಸ್ಕಿಯವರ ತಾತ್ತ್ವಿಕ ನೆಲೆಗಟ್ಟು ಈ ಹಾದಿಯನ್ನು ಹಿಡಿದಿದೆ.

ಈ ನಿಟ್ಟಿನಲ್ಲಿ ಮಾಡಿದ ಮುಖ್ಯ ಊಹಾ ಕಲ್ಪನೆಯು ವೈಶ್ವಿಕ ವ್ಯಾಕರಣಕ್ಕೆ ಸಂಬಂಧಿಸಿದೆ. ಮಗುವಿನ ಮೆದುಳಿನಲ್ಲಿ ಹುಟ್ಟಿನಿಂದಲೇ ವೈಶ್ವಿಕ ವ್ಯಾಕರಣವೊಂದು ರಾಚನಿಕವಾಗಿ ಬೇರೂರಿರುತ್ತದೆ ಇಲ್ಲಿಂದ ಮುಂದೆ ಕೆಲವು ಪ್ರಶ್ನೆಗಳು ಎದುರಾಗುತ್ತವೆ. 1) ವೈಶ್ವಿಕ ವ್ಯಾಕರಣದ ರಾಚನಿಕ ಸ್ವರೂಪ ಹೇಗಿರುತ್ತದೆ. 2) ಈ ವೈಶ್ವಿಕ ವ್ಯಾಕರಣವು ಯಾವ ಯಾವ ಸ್ಥಿತ್ಯಂತರಗಳನ್ನು ಹೊಂದುತ್ತದೆ 3) ಪ್ರತಿಯೊಬ್ಬ ವ್ಯಕ್ತಿಯಲ್ಲಿ ಈ ವೈಶ್ವಿಕ ವ್ಯಾಕರಣವು ಒಂದು ನಿರ್ದಿಷ್ಟ ನುಡಿಯ ಗಳಿಕೆಯಲ್ಲಿ ಪಾಲ್ಗೊಳ್ಳುತ್ತದೆ. ಈ ಮೂರು ಪ್ರಶ್ನೆಗಳನ್ನು ಬಿಡಿಸುವುದೇ ನುಡಿಯರಿಮೆಯ ಬಹುಮುಖ್ಯ ಸವಾಲಾಗಿದೆ.

ಚಾಮ್‌ಸ್ಕಿ ವೈಶ್ವಿಕ ವ್ಯಾಕರಣದ ರಚನೆಯನ್ನು ಕುರಿತು ನಡೆಸಿದ ಸಂಶೋಧನೆಗಳು ಮತ್ತು ಮಂಡಿಸಿದ ಪರಿಕಲ್ಪನೆಗಳು ಒಂದು ಅಂಶವನ್ನು ಸ್ಪಷ್ಟಪಡಿಸುತ್ತವೆ. ಅದೇಂದರೆ ಈ ವೈಶ್ವಿಕ ವ್ಯಾಕರಣವು ಅತ್ಯಂತ ಸರಳವಾಗಿರುತ್ತದೆ. ಮಾನವ ಜನಾಂಗದ ಎಲ್ಲ ಸದಸ್ಯರ ಮೆದುಳುಗಳೂ ಹುಟ್ಟಿನಿಂದಲೇ ಹೊಂದಿರುವುದು ಈ ಸರಳ ರಚನೆಯನ್ನು ಮಾತ್ರವೇ.

ಈ ಸರಳ ರಚನೆಯು ಹೇಗೆ ಪ್ರತಿಯೊಬ್ಬರ ಮೆದುಳಿನಲ್ಲೂ ಬೆಳವಣಿಗೆಗೆ ಹೊಂದುತ್ತದೆ ಮತ್ತು ಕ್ರಿಯಾಶೀಲವಾಗುತ್ತದೆ ಎಂಬ ಪ್ರಶ್ನೆ ಎದುರಾಗುತ್ತದೆ. ಮಗುವಿನಲ್ಲಿ ಮೆದುಳು ಕ್ರಿಯಾಶೀಲವಾಗುವ ಬಗೆಯನ್ನು ಕುರಿತಂತೆ ಕಳೆದ ಶತಮಾನದ ಉತ್ತರಾರ್ಧದಲ್ಲಿ ನಡೆದ ಅಧ್ಯಯನಗಳನ್ನು ಗಮನಿಸಿದರೆ ಒಂದು ಸಂಗತಿ ತಿಳಿಯುತ್ತದೆ. ಅದನ್ನು ಸಂಗ್ರಹ ರೂಪದಲ್ಲಿ ಹೀಗೆ ಹೇಳಬಹುದು. ಬೆಳೆದ ಮನುಷ್ಯರ ಎಲ್ಲ ದೈಹಿಕ ಮತ್ತು ನರಸಂಬಂಧಿ ಚಟುವಟಿಕೆಗಳನ್ನು ಮೆದುಳಿನ ಗೊತ್ತಾದ ಭಾಗಗಳು ನಿರ್ದೇಶಿಸುತ್ತವೆ ಮತ್ತು ನಿಯಂತ್ರಿಸುತ್ತವೆ. ಕಣ್ಣುಗಳು, ಕಿವಿಗಳು, ಕಾಲುಗಳು, ಕೈಗಳು ಯಾವ ಯಾವ ಭಾಗಗಳ ನಯಂತ್ರಣಕ್ಕೆ ಒಳಗಾಗಿರುತ್ತವೆ ಎಂಬುದನ್ನು ಈಗ ಬಹುಮಟ್ಟಿಗೆ ಖಚಿತವಾಗಿ ಹೇಳಬಹುದಾಗಿದೆ. ಇದು ಎಲ್ಲ ಮನುಷ್ಯರಿಗೂ ಸಮಾನವಾದ ಲಕ್ಷಣ. ಆದರೆ ಮಗು ಹುಟ್ಟಿದಾಗ ಅದರ ಮೆದುಳಿನಲ್ಲಿ ಹೀಗೆ ಕಾರ್ಯ ವಿಭಜನೆ ನಡೆದಿರುವುದಿಲ್ಲ. ಮೆದುಳು ಒಂದು ಇಡೀ ಭಾಗವಾಗಿ ಎಲ್ಲ ಕೆಲಸಗಳನ್ನು ತಾನೇ ನಿರ್ದೇಶಿಸಿ ನಿಯಂತ್ರಿಸುತ್ತಿರುತ್ತದೆ. ಎಡ ಮೆದುಳು ಬಲ ಮೆದುಳುಗಳೆರಡೂ ಕೂಡಾ ಹುಟ್ಟುವಾಗಲೇ ಇದ್ದರೂ ಅವುಗಳಲ್ಲಿ ಯಾವ ಕಾರ್ಯ ವಿಭಜನೆಯೂ ನಡೆದಿರುವುದಿಲ್ಲ.

ಮಗುವಿನ ದೈಹಿಕ ಬೆಳವಣಿಗೆ ಆಗುತ್ತಿರುವಂತೆ ಅದರ ಮೆದುಳಿನಲ್ಲಿ ಬದಲಾವಣೆಗಳು ಸಾಗುತ್ತಿರುತ್ತವೆ. ಯಾವ ಯಾವ ಕೆಲಸಗಳನ್ನು ಮೆದುಳಿನ ಯಾವ ಯಾವ ಭಾಗಗಳು ನಡೆಸಬೇಕು ಎಂಬುದು ನಿರ್ಣಯಗೊಳ್ಳುತ್ತಿರುತ್ತದೆ. ಇದೂ ಕೂಡಾ ಜಗತ್ತಿನ ಎಲ್ಲ ಮಕ್ಕಳಲ್ಲೂ ಏಕ ಪ್ರಕಾರವಾಗಿ ನಡೆಯುವ ಪ್ರಕ್ರಿಯೆಯಾಗಿದೆ. ವಾಂಶಿಕವಾಗಿ ಮತ್ತು ಪೋಷಕಾಂಶಗಳ ಏರುಪೇರಿನಿಂದಾಗಿ ಈ ಪ್ರಕ್ರಿಯೆಯು ನಡೆಯುವ ವೇಗದಲ್ಲಿ ವ್ಯತ್ಯಾಸವಾಗಬಹುದು. ಆದರೆ ಅದರ ಸ್ವರೂಪ ಮಾತ್ರ ಎಲ್ಲರಲ್ಲೂ ಒಂದೇ ರೀತಿಯಲ್ಲಿರುತ್ತದೆ. ಈ ಪ್ರಕ್ರಿಯೆಯನ್ನು ವಿಜ್ಞಾನಿಗಳು **ಸ್ಥಳೀಕರಣ** ಎಂದು ಕರೆದಿದ್ದಾರೆ. ಹಾಗೆಯೇ ಮೆದುಳಿನ ಎಡಬಲ ಭಾಗಗಳಲ್ಲಿ ನಡೆಯುವ ಕಾರ್ಯವಿಭಜನೆಯನ್ನು **ಪಾರ್ಶ್ವೀಕರಣ** ಎಂದು ಕರೆದಿದ್ದಾರೆ. (ಮೆದುಳು ಏಕ ಘಟಕವಾಗಿ ಕಾರ್ಯ ನಿರ್ವಹಿಸುತ್ತಿದ್ದು ಬಳಿಕ ಸ್ಥಳೀಕರಣ ಮತ್ತು ಪಾರ್ಶ್ವೀಕರಣ ಪ್ರಕ್ರಿಯೆಗಳಿಗೆ ಒಳಗಾದರೂ ತನ್ನ ಮೂಲ ಚಹರೆಯನ್ನು ಪೂರ್ಣವಾಗಿ ಬಿಟ್ಟುಕೊಟ್ಟಿರುವುದಿಲ್ಲ. ಆದ್ದರಿಂದಲೇ ಮೆದುಳಿನ ಯಾವುದಾದರೂ ಒಂದು ಭಾಗ ನಿಷ್ಕ್ರಿಯವಾದರೆ ಆ ಭಾಗದ ಕಾರ್ಯಭಾರದ ನಿರ್ವಹಣೆಯನ್ನು ಮೆದುಳು ಇನ್ನೊಂದು ಕ್ರಿಯಾಶೀಲ ಭಾಗಕ್ಕೆ ರವಾನಿಸಲು ಸಿದ್ಧವಿರುತ್ತದೆ).

ಹಾಗಿದ್ದಲ್ಲಿ ವೈಶ್ವಿಕ ವ್ಯಾಕರಣವು ಮೆದುಳಿನ ಆರಂಭಿಕ ಅವಸ್ಥೆಯಲ್ಲಿ ಇಡಿಯಾಗಿ ಇಡೀ ಮೆದುಳಿನಲ್ಲಿ ಹರಡಿರುತ್ತದೆಯೋ ಇಲ್ಲವೋ ಸ್ಥಳೀಕರಣ ಪ್ರಕ್ರಿಯೆಯಿಂದಾಗ ಮಾತ್ರ ಜಾಗ್ರತಗೊಳ್ಳುವುದೋ ಎಂಬುದು ಮುಂದಿನ ಪ್ರಶ್ನೆ.

ಈ ಮೇಲಿನ ವಿವರಣೆಯು ಮಗುವಿನಲ್ಲಿ ಮೆದುಳು ದೈಹಿಕ ಬೆಳವಣಿಗೆಯೊಡನೆ ಮತ್ತು ಪರಿಸರದ ಪೋಷಕಾಂಶಗಳ ಹೋಲಿಕೆಯೊಂದಿಗೆ ಒಂದು ನಿರ್ದಿಷ್ಟ ಪ್ರಕ್ರಿಯೆಗೆ ಒಳಗಾಗುತ್ತದೆ ಎಂಬುದನ್ನು ತಿಳಿಸುತ್ತದೆ. ನುಡಿಕಸುವು ಹೀಗಾಗಿ ಹುಟ್ಟಿನಿಂದ ಇಡೀ ಮೆದುಳಿನಲ್ಲಿ ಹರಡಿಕೊಂಡಿದ್ದು ನಿರ್ದಿಷ್ಟ ಅವಧಿಯಲ್ಲಿ ಮೆದುಳಿನ ಒಂದು ಭಾಗದ

ನಿಯಂತ್ರಣಕ್ಕೆ ಮತ್ತು ನಿರ್ದೇಶನಕ್ಕೆ ಒಳಗಾಗುತ್ತದೆ. ಇದೊಂದು ಗಮನಾರ್ಹ ತಿಳುವಳಿಕೆ ಎಂಬುದೇನೋ ನಿಜ. ಆದರೆ ಇದರಿಂದ ನುಡಿಕಸುವಿನ ರಚನೆ ಮತ್ತು ವಿಕಾಸಗಳ ಬಗೆಗೆ ಹೆಚ್ಚಿನ ತಿಳುವಳಿಕೆ ದೊರೆಯುವುದಿಲ್ಲ.

ನುಡಿಕಸುವಿನ ಚಹರೆಗಳನ್ನು ಅರಿಯಲು ಈಗ ಇರುವ ದಾರಿ ಒಂದೇ ಒಂದು. ಮಗುವಿನಲ್ಲಿ ನುಡಿಯ ಗಳಿಕೆ ಹೇಗೆ ನಡೆಯುತ್ತದೆ ಎಂಬುದನ್ನು ಅಧ್ಯಯನ ಮಾಡುವುದು. ಕಳೆದ ಶತಮಾನದ ನಡುಭಾಗದವರೆಗೂ ಪ್ರಬಲವಾಗಿ ಬೆಳೆದಿದ್ದ ವರ್ತನಾತ್ಮಕ ಮನೋಶಾಸ್ತ್ರವೂ ಈ ನಿಟ್ಟಿನಲ್ಲಿ ಒಂದು ವಾದವನ್ನು ಮಂಡಿಸಿತ್ತು. ಅದರಂತೆ ಮಗುವು ನುಡಿಯನ್ನು ಕಲಿಯುತ್ತದೆ. ಈ ಕಲಿಕೆಯಲ್ಲಿ ಪರಿಸರದ ಪಾತ್ರ ಹೆಚ್ಚಿನದು. ನುಡಿಯೂ ಕೂಡ ಒಂದು ವರ್ತನೆಯೇ ಆಗಿದೆ. ನಡೆಯುವುದು ಓಡುವುದು ಈಜುವುದು ಮುಂತಾದ ವರ್ತನೆಗಳನ್ನು ಕಲಿಯುವ ಬಗೆಯಲ್ಲೇ ಮಗುವೂ ಕೂಡಾ ನುಡಿಯನ್ನು ಕಲಿಯುತ್ತದೆ. ಎಲ್ಲ ಕಲಿಕೆಗಳಲ್ಲಿರುವಂತೆ ಇಲ್ಲಿಯೂ ಕೂಡಾ ಸರಳತೆಯಿಂದ ಸಂಕೀರ್ಣತೆಯ ಕಡೆಗೆ ಬೆಳವಣಿಗೆ ಇರುತ್ತದೆ. ಮತ್ತು ತಪ್ಪುಗಳನ್ನು ಮಾಡುತ್ತಾ ತಿದ್ದುಪಡಿಗಳನ್ನು ಹೊರ ಜಗತ್ತಿನಿಂದ ಪಡೆದುಕೊಳ್ಳುತ್ತಾ ನುಡಿಯ ಸಾಮರ್ಥ್ಯವನ್ನು ಮಗುವು ನೆಲೆಗೊಳಿಸಿಕೊಳ್ಳುತ್ತದೆ.

ವರ್ತನಾತ್ಮಕ ಮನೋಶಾಸ್ತ್ರದ ಈ ಸಿದ್ಧಾಂತವು ನಿಡುಗಾಲದವರೆಗೆ ಕಲಿಕೆಯ ನೆಲೆಗಳನ್ನು ನಿರ್ದೇಶಿಸುತ್ತು. ಚಾಮ್‌ಸ್ಕಿ ಈ ಸಿದ್ಧಾಂತವನ್ನು ಒಪ್ಪಲು ಇರುವ ಅಡೆತಡೆಗಳನ್ನು ಎತ್ತಿ ತೋರಿಸುತ್ತಾರೆ. ಅಂತಹ ಅಡೆತಡೆಗಳಲ್ಲಿ ಕೆಲವನ್ನು ನೋಡೋಣ. ಮೊದಲನೆಯದಾಗಿ ಮಗುವಿಗೆ ತಾನು ಕಲಿಯಬೇಕಾದ ನುಡಿಯ ಸಾಮಗ್ರಿಗೆ ಪರಿಸರದಿಂದ ದೊರಕುವ ಪ್ರಮಾಣ ತುಂಬಾ ಕಡಿಮೆ ಇರುತ್ತದೆ. ಅಲ್ಲದೆ ಅದು ವ್ಯವಸ್ಥಿತವಾಗಿರುವುದಿಲ್ಲ. ಸರಳವಾದುದು ಮತ್ತು ಸಂಕೀರ್ಣವಾದುದು ಎಂಬ ವಿಭಜನೆಯನ್ನು ಮಗುವು ಪಡೆಯುವ ನುಡಿಸಾಮಗ್ರಿಯಲ್ಲಿ ಗುರುತಿಸಲು ಬರುವುದಿಲ್ಲ. ಹಾಗೆ ಗುರುತಿಸಿದರೂ ಆ ಸಾಮಗ್ರಿಗಳು ದೊರಕುವ ಕ್ರಮದಲ್ಲಿ ಸರಳತೆಯಿಂದ ಸಂಕೀರ್ಣತೆಯ ಕಡೆಗೆ ಎಂಬ ಕಟ್ಟುಪಾಡು ಇರುವುದಿಲ್ಲ. ಅಲ್ಲದೆ ಎಲ್ಲ ಇತರ ಕಲಿಕೆಗಳಲ್ಲಿ ಇರುವಂತೆ ನುಡಿಕಲಿಕೆ ಎಂಬುದು ಮಗುವಿನ ದಿನಚರಿಯಲ್ಲಿ ಗುರುತಿಸಬಹದಾದಂತೆ ಗೊತ್ತಾದ ಕಾಲಾವಧಿಯನ್ನು ಹೊಂದಿರುವುದಿಲ್ಲ. ಎರಡನೆಯದಾಗಿ ಮಗುವು ತನ್ನ ದೈಹಿಕ ಬೆಳವಣಿಗೆಯ ಒಂದು ಹಂತವನ್ನು ದಾಟಿದ ಮೇಲೆ ಅದರಲ್ಲಿ ನುಡಿಕಲಿಕೆ ಎಂಬುದು ಕಷ್ಟಸಾಧ್ಯವಾದ ಸಂಗತಿಯಾಗಿರುತ್ತದೆ. ಅಂದರೆ ಆ ವಯೋಮಾನದಲ್ಲಿ ನುಡಿಯನ್ನು ಕಲಿತರೂ ಅದು ಎಳವೆಯಲ್ಲಿ ಪಡೆದ ನುಡಿಯಂತೆ ಸಮರ್ಥವಾಗಿರುವುದಿಲ್ಲ.

ಈ ಅಂಶಗಳನ್ನು ಗಮನಿಸಿದರೆ ಪ್ರಚಲಿತಪಿದ್ದ ವರ್ತನಾತ್ಮಕ ಮನೋಶಾಸ್ತ್ರ ಪ್ರಣೀತ ನುಡಿಕಲಿಕೆಯ ಮಾದರಿಯನ್ನು ಒಪ್ಪುವುದು ಕಷ್ಟವೆಂದು ತಿಳಿಯುತ್ತದೆ. ಈ ಕಾರಣದಿಂದ ಚಾಮ್‌ಸ್ಕಿ ನುಡಿಕಲಿಕೆಯ ಬದಲು **ನುಡಿಗಳಿಕೆ** ಎಂಬ ಪರಿಕಲ್ಪನೆಯನ್ನು ಮುಂದಿಡುತ್ತಾರೆ. ಈಗಾಗಲೇ ವಿವರಿಸಿರುವಂತೆ ಮಗುವು ಹುಟ್ಟುವಾಗಲೇ ತನ್ನ ಜೈವಿಕ ರಚನೆಯ ಭಾಗವಾಗಿ ನುಡಿಕಸುವಿನ ಅಂತಸ್ಥ ರೂಪವನ್ನು ಪಡೆದುಕೊಂಡಿರುತ್ತದೆ.

ಇದು ಪ್ರತಿ ವ್ಯಕ್ತಿಯಲ್ಲಿ ಹೇಗೆ ಚಲನಶೀಲವಾಗುತ್ತದೆ ಎಂಬುದನ್ನು ವಿವರಿಸಲು ಚಾಮ್‌ಸ್ಕಿ ಮೂರು ಸಂಗತಿಗಳನ್ನು ಮುಂದಿಡುತ್ತಾರೆ. ಮಗುವಿನಲ್ಲಿ ನುಡಿಗಳಿಕೆ ಎಂಬುದು ನಡೆಯಬೇಕಾದರೆ ಈ ಮೂರು ಅಂಶಗಳು ಇರಬೇಕು. ಅವುಗಳಲ್ಲಿ ಮೊದಲನೆಯದು ವೈಶ್ವಿಕ ವ್ಯಾಕರಣ ಮತ್ತು ವಿಕಲ್ಪಗಳು. ವ್ಯಕ್ತಿಯಲ್ಲಿ ನುಡಿಗಳಿಕೆಗೆ ನೆರವಾಗುವ ನುಡಿ ಸಂಬಂಧಿಯಾದ ಮತ್ತು ಯಾವುದೇ ಜೈವಿಕ ನೆಲೆಗೂ ಸಂಬಂಧಿಸಿರದ ಅಂಶ. ಈ ಮೂರನೆಯ ಅಂಶವು ಇದ್ದಿರಲೇಬೇಕೆಂಬ ಅನಿಸಿಕೆ ಕೆಲವು ದಶಕಗಳಿಂದ ರೂಪ ಪಡೆಯುತ್ತಿತ್ತು. ಆದರೆ 2005ರ ತಮ್ಮ ಒಂದು ಅಧ್ಯಯನ ಪ್ರಬಂಧದಲ್ಲಿ ಚಾಮ್‌ಸ್ಕಿ ಅದನ್ನು ಖಚಿತವಾಗಿ ಪ್ರತಿಪಾದಿಸುತ್ತಾರೆ. ಈ ಮೂರನೆಯ ಅಂಶದ ಸ್ವರೂಪ ಮತ್ತು ಅಗತ್ಯಗಳು ಈಗ ಬಹುಚರ್ಚಿತವಾಗುತ್ತಿವೆ ಮತ್ತು ಹೊಸ ಅಧ್ಯಯನಗಳಿಗೆ ದಾರಿ ಮಾಡಿಕೊಟ್ಟಿವೆ.

ವೈಶ್ವಿಕ ವ್ಯಾಕರಣ ಎಂಬ ಪದ ಕೊಂಚ ತಪ್ಪುಗ್ರಹಿಕೆಗೆ ಅವಕಾಶ ಮಾಡಿಕೊಟ್ಟಿದೆ. ಇದು ವಿಶ್ವದ ಎಲ್ಲ ನುಡಿಗಳಿಗೂ ಅನ್ವಯವಾಗುವ ನುಡಿಕಟ್ಟಲೆಗಳ ಮೊತ್ತ ಎಂದು ಸಾಮಾನ್ಯವಾಗಿ ತಿಳಿಯಲಾಗುತ್ತದೆ. ಆದರೆ ವಾಸ್ತವವಾಗಿ ಅದು ಹಾಗಿರುವುದಿಲ್ಲ. ಏಕೆಂದರೆ ನುಡಿಯನ್ನು ಅಧ್ಯಯನವನ್ನು ಮಾಡುವವರಲ್ಲಿ ಜಗತ್ತಿನ ಎಲ್ಲ ನುಡಿಗಳಲ್ಲಿರುವ ಸಾಮಾನ್ಯ ಅಂಶಗಳನ್ನು ಗುರುತಿಸುವ, ಪಟ್ಟಿ ಮಾಡುವ ವಿಧಾನವೊಂದಿದೆ. ಮಾನವ ಶಾಸ್ತ್ರಜ್ಞರು ಆದಿಮ ಸಂಸ್ಕೃತಿಗಳಲ್ಲಿ ಇರುವ ಸಾಮಾನ್ಯ ಅಂಶಗಳನ್ನು ಗುರುತಿಸುವ ಕ್ರಮವನ್ನು ರೂಪಿಸಿಕೊಂಡಿದ್ದಾರಷ್ಟೆ. ಇದೇ ಮಾದರಿಯನ್ನು ನುಡಿಯ ಅಧ್ಯಯನಕಾರರೂ ಅನುಸರಿಸುತ್ತಾರೆ. ಆದರೆ ಈ ಅಧ್ಯಯನ ಮಾದರಿಯು ನುಡಿಗಳ ಬಳಕೆಯನ್ನು ಅಧ್ಯಯನ ಸಾಮಗ್ರಿಯನ್ನಾಗಿ ಇರಿಸಿಕೊಳ್ಳುತ್ತದೆ. ನುಡಿ ಬಳಕೆಗಳಲ್ಲಿ ಇರುವ ಸಾಮಾನ್ಯ ಅಂಶಗಳು ನುಡಿಕಸುವಿನಲ್ಲಿರುವ ಸಾಮಾನ್ಯ ಅಂಶಗಳನ್ನು ಬಿಂಬಿಸಲಾರವು. ಆದ್ದರಿಂದ ವೈಶ್ವಿಕ ವ್ಯಾಕರಣ ಎನ್ನುವುದನ್ನು ನುಡಿಬಳಕೆಗಳಲ್ಲಿ ಕಂಡು ಬರುವ ಸಾಮಾನ್ಯ ಚೌಕಟ್ಟು ಎಂದು ತಿಳಿಯುವುದು ತಪ್ಪಾಗುತ್ತದೆ. ಸರಳವಾಗಿ ವೈಶ್ವಿಕ ವ್ಯಾಕರಣವನ್ನು ಹೀಗೆ ವಿವರಿಸಬಹುದು. ಜಗತ್ತಿನ ಯಾವುದೇ ನುಡಿ ಪರಿಸರದಲ್ಲಿ ಬೆಳೆಯುತ್ತಿರುವ ಮಗುವಾಗಿರಲಿ ಅದರ ಬೆಳವಣಿಗೆಯ ಹಂತದಲ್ಲಿ ನುಡಿ ಗಳಿಕೆಯನ್ನು ಪಡೆದುಕೊಳ್ಳುವಾಗ ನುಡಿಯ ಯಾವ ನೆಲೆಗಳನ್ನು ಪರಿಸರದ ನುಡಿ ಸಾಮಗ್ರಿಯಿಂದ ಪಡೆದುಕೊಳ್ಳಬೇಕಾದ ಅಗತ್ಯ ಇರುವುದಿಲ್ಲವೋ ಅದು ವೈಶ್ವಿಕ ವ್ಯಾಕರಣ ಎಂದೆನಿಸಿಕೊಳ್ಳುತ್ತದೆ.

ವೈಶ್ವಿಕ ವ್ಯಾಕರಣವು ನುಡಿಗಳಿಕೆಗೆ ಅಗತ್ಯವಾದ ಮೊದಲ ಅಂಶ ಎಂದು ಒಪ್ಪಿದ ಮೇಲೆ ಪ್ರತಿ ವ್ಯಕ್ತಿಯಲ್ಲೂ ನುಡಿಗಳಿಕೆಗೆ ಪರಿಸರದಿಂದ ದೊರಕುವ ಸಾಮಗ್ರಿಯು ಹೇಗೆ ನೆರವಾಗಬಲ್ಲುದು ಎಂಬುದು ಮುಂದಿನ ಪ್ರಶ್ನೆ. ಇಲ್ಲಿಯೇ ಚಾಮ್‌ಸ್ಕಿಯವರು ಹೇಳುತ್ತಿರುವ ಎರಡನೆಯ ಅಂಶದ ಪಾತ್ರವಿದೆ. ಇದನ್ನೇ ವಿಕಲ್ಪಗಳ ನೆಲೆ ಎಂದು ಹೇಳಲಾಗಿದೆ. ವಿಕಲ್ಪಗಳು ಎಂಬುದು ಒಂದು ಸಾಧ್ಯತೆ. ಒಂದು ಊಹಾ ಕಲ್ಪನೆ ಜಗತ್ತಿನ ಎಲ್ಲ ನುಡಿಗಳೂ ತಮ್ಮ ಆಂತರಿಕ ರಚನೆಯಲ್ಲಿ ಒಂದರಿಂದ ಇನ್ನೊಂದು ಬೇರೆಯಾಗಿರುತ್ತದೆ. ಈ ಬೇರೆತನವನ್ನು ಪಟ್ಟಿಮಾಡಿದರೆ ವಿಕಲ್ಪಗಳು ದೊರೆಯುತ್ತವೆ.

ಇಲ್ಲೊಂದು ಸಮಸ್ಯೆ ಇದೆ. ನುಡಿಗಳ ನಡುವಣ ಬೇರೆತನವನ್ನು ಗುರುತಿಸಿ ಪಟ್ಟಿ ಮಾಡುತ್ತಾ ಹೋದರೆ ಅದೊಂದು ದೊಡ್ಡ ಮಾಹಿತಿ ಕಣಜವೇ ಆಗಿಬಿಡುತ್ತದೆ. ಇಷ್ಟು ದೊಡ್ಡ ಮಾಹಿತಿ ಕಣಜವನ್ನು ಮಗುವಿನ ಮೆದುಳನ್ನು ಹುಟ್ಟಿನಿಂದಲೇ ತನ್ನೊಳಗೆ ಅಡಗಿಸಿಕೊಂಡಿರುತ್ತದೆ ಎಂದು ತಿಳಿಯುವುದು ಕಷ್ಟ. ಆದರೆ ಬೇರೆತನಗಳ ಪಟ್ಟಿಯನ್ನು ಪರಿಶೀಲಿಸಿದರೆ ಅವುಗಳಲ್ಲಿ ಒಂದು ವರ್ಗೀಕರಣ ಸಾಧ್ಯವೆಂದು ತೋರುತ್ತದೆ. ಹೀಗೆ ವರ್ಗೀಕರಣಗೊಂಡಾಗ ಪ್ರತಿಗುಂಪಿನಲ್ಲೂ ಬರುವ ಬೇರೆತನಗಳಲ್ಲಿ ಒಂದು ಒಳಸಂಬಂಧ ಇರುವುದನ್ನು ಅಧ್ಯಯನಕಾರರು ಗುರುತಿಸುತ್ತಾರೆ. ಅಂದರೆ ಒಂದು ನುಡಿಯಲ್ಲಿ ಈ ಬೇರೆತನದ ಒಂದು ಚಹರೆ ಕಂಡುಬರುತ್ತದೆ ಎಂದರೆ ಆ ಬೇರೆತನವಿರುವ ಗುಂಪಿನ ಚಹರೆಗಳೆಲ್ಲವೂ ಆ ನುಡಿಯಲ್ಲಿರುತ್ತದೆ ಎಂದು ತೋರಿಸಬಹುದು. ಒಂದು ಲೆಕ್ಕ ಮಾಡಿ ತೋರಿಸುವುದಾದರೆ ಅದನ್ನು ಹೀಗೆ ಹೇಳಬಹುದು.

ಜಗತ್ತಿನ ಎಲ್ಲ ನುಡಿಗಳಲ್ಲಿರುವ ಬೇರೆತನಗಳ ಸಂಖ್ಯೆ ಒಂದು ನೂರು ಎಂದು ಊಹಿಸೋಣ. ಈ ಎಲ್ಲ ವಿಕಲ್ಪಗಳೂ ಮಗುವಿನ ಮೆದುಳಿನಲ್ಲಿ ಹುಟ್ಟಿನಿಂದಲೇ ಇರುತ್ತದೆಂದೂ ಮತ್ತು ಅವುಗಳಲ್ಲಿ ಕೆಲವನ್ನು ಆಯ್ಕೆಮಾಡಿ ಹೊಂದಿಸಿಕೊಂಡಾಗ ಮಗುವಿನಲ್ಲಿ ನುಡಿಗಳಿಕೆ ಆಗುತ್ತದೆ ಎಂದು ತಿಳಿದರೆ ತಪ್ಪಾಗುತ್ತದೆ. ಏಕೆಂದರೆ ಮಗುವಿನಲ್ಲಿ ನುಡಿಗಳಿಕೆಯಲ್ಲಿರುವ ವೇಗ ಮತ್ತು ಸರಳತೆಗಳನ್ನು ಗಮನಿಸಿದರೆ ಹಾಗೂ ಆಯ್ಕೆ ಮಾಡಿಕೊಳ್ಳಲು ಬೇಕಾದ ಪೂರ್ವಸಿದ್ಧತೆ ಮಗುವಿನಲ್ಲಿ ಇರುವುದು ಅಸಾಧ್ಯವಾಗಿರುವುದರಿಂದ ಈ ಬಗೆಯ ಪ್ರತಿಪಾದನೆ ತಪ್ಪಾಗುತ್ತದೆ.

ವಾಸ್ತವವಾಗಿ ನೂರು ಬೇರೆತನದ ಚಹರೆಗಳು A,B,C ಮತ್ತು D ಎಂಬ ಗುಂಪುಗಳಲ್ಲಿ ಹಂಚಿಹೋಗಿವೆ ಎಂದುಕೊಳ್ಳೋಣ. ಪ್ರತಿಯೊಂದು ಗುಂಪಿನಲ್ಲೂ ಹೆಚ್ಚುಕಡಿಮೆ ಇಪ್ಪತ್ತೈದು ಬೇರೆತನದ ಚಹರೆಗಳು ಸೇರುತ್ತವೆ. ಈ ಒಳಗುಂಪಿನ ರಚನೆ ಹೇಗಿರುತ್ತದೆಂದರೆ ಇವುಗಳಲ್ಲಿ ಯಾವುದಾದರೊಂದು ಚಹರೆಯನ್ನು ಆಯ್ಕೆ ಮಾಡಿದರೂ ಆ ಗುಂಪಿನ ಉಳಿದ ಇಪ್ಪತ್ನಾಲ್ಕು ಚಹರೆಗಳೂ ಕೂಡಾ ತಮ್ಮಿಂದ ತಾವೇ ಆಯ್ಕೆಯಾಗಿ ಬಿಡುತ್ತವೆ. ಅಂದರೆ ನುಡಿಗಳಿಕೆಯ ಪ್ರಕ್ರಿಯೆಯಲ್ಲಿ ನೂರು ಬೇರೆ ತನದ ಚಹರೆಗಳಲ್ಲಿ ಆಯ್ಕೆ ಮಾಡಿಕೊಳ್ಳಬೇಕಾದ ಪ್ರಸಕ್ತಿ ಬರುವುದಿಲ್ಲ. ಕೇವಲ ಇಂಥ ನಾಲ್ಕು ಚಹರೆಗಳ ನಡುವೆ ಆಯ್ಕೆ ಮಾಡಿದರೆ ಸಾಕಾಗುತ್ತದೆ. ಈ ನಿಟ್ಟಿನಲ್ಲಿ ವಿಕಲ್ಪಗಳ ರಚನೆಯಾಗಲೀ ಮತ್ತು ನುಡಿಗಳಿಕೆಯ ಪ್ರಕ್ರಿಯೆಯ ಸರಳತನವಾಗಲೀ ಸ್ಪಷ್ಟಗೊಳ್ಳುತ್ತದೆ.

ಈ ವಿಕಲ್ಪಗಳು ಯಾವುವು, ಅವುಗಳ ಒಳ ಗುಂಪುಗಳು ಯಾವುವು ನಿರ್ಧಾರಕ ನೆಲೆಯ ಪ್ರಧಾನ ವಿಕಲ್ಪಗಳು ಯಾವುವು ಈ ಪ್ರಧಾನ ವಿಕಲ್ಪಗಳಿಗೆ ಅಧೀನವಾಗಿರುವ ಅನುಷಂಗಿಕ ವಿಕಲ್ಪಗಳಿಗೆ ಅಧೀನವಾಗಿರುವ ಅನುಷಂಗಿಕ ವಿಕಲ್ಪಗಳು ಯಾವುವು ಈ ಎಲ್ಲ ಶೋಧಗಳೂ ಕೂಡಾ ಈಗ ನುಡಿಯ ಅಧ್ಯಯನಗಳಲ್ಲಿ ನಡೆಯುತ್ತಿವೆ.

ನುಡಿಗಳಿಕೆಗೆ ಬೇಕಾದ ವೈಶ್ವಿಕ ವ್ಯಾಕರಣ ಮತ್ತು ವಿಕಲ್ಪಗಳು ಎಂಬ ಎರಡು ಅಂಶಗಳನ್ನು ನಾವು ಈಗ ಗಮನಸಿದ್ದೇವೆ. ಈ ಎರಡೂ ಕೂಡಾ ನುಡಿಕಸುವಿಗೆ ಸಂಬಂಧಿಸಿದ್ದಾಗಿದ್ದು ಮಗುವಿನ ಮೆದುಳಿನಲ್ಲಿ ಹುಟ್ಟಿನಿಂದಲೇ ನೆಲೆಗೊಂಡಿರುತ್ತದೆ.

ಹಾಗಾಗಿ ಇದೊಂದು ಜೈವಿಕ ನೆಲೆಯ ಸಂಗತಿಯಾಗಿದೆ. ಚಾಮ್‌ಸ್ಕಿ ನುಡಿಗಳಿಕೆಗೆ ಮೆದುಳಿನಲ್ಲಿ ಈ ಎರಡು ಅಂಶಗಳು ಇದ್ದರಷ್ಟೇ ಸಾಲದು. ಅವುಗಳ ಜೊತೆಗೆ ಮತ್ತೊಂದು ಅಂಶವೂ ಅಗತ್ಯವೆಂದು ವಿವರಿಸುತ್ತಾರೆ. ಇದೇ ಮೂರನೆಯ ಅಂಶ. ಇದು ಮೆದುಳಿನಲ್ಲಿರುವ ಮೊದಲ ಎರಡು ಅಂಶಗಳು ಕ್ರಿಯಾಶೀಲವಾಗುವಂತೆ ಮತ್ತು ಸರಿ ದಿಕ್ಕಿನಲ್ಲಿ ನೆಲೆಗೊಳ್ಳುವಂತೆ ಮಾಡಲು ನೆರವಾಗುತ್ತದೆ. ಈ ಅಂಶವು ಮೆದುಳಿನಲ್ಲಿರುವ ಒಂದು ವಿಶೇಷ ಸಾಮರ್ಥ್ಯವಾಗಿದ್ದು ಅದು ಕೇವಲ ನುಡಿಗಳಿಕೆಗೆ ಮಾತ್ರ ಬಳಕೆಯಾಗುವಂಥದ್ದಲ್ಲ. ಅಲ್ಲದೆ ಈ ಸಾಮರ್ಥ್ಯವು ಜೈವಿಕ ನೆಲೆಯನ್ನು ಪಡೆದಿರಬೇಕಾದ ಅಗತ್ಯವೂ ಇಲ್ಲ. ಚಾಮ್‌ಸ್ಕಿ ಪ್ರತಿಪಾದಿಸುವ ಈ ಮೂರನೆಯ ಅಂಶವೂ ಕೂಡಾ ಒಂದು ಊಹಾತ್ಮಕ ನೆಲೆಯೇ. ಅದು ಇದೆಯೋ ಇಲ್ಲವೋ ಎಂದು ಪ್ರಯೋಗಗಳಿಂದ ಸಿದ್ಧಪಡಿಸಲು ಆಗುವುದಿಲ್ಲ. ಆದರೆ ಮೊದಲ ಎರಡು ಅಂಶಗಳು ಕ್ರಿಯಾಶೀಲವಾಗಲು ತಂತಾನೇ ಯಾವುದೇ ಅಂಶವೂ ನೆರವಾಗುತ್ತದೆ ಎಂದು ತೋರಿಸಿಕೊಡಲು ಸಾಧ್ಯವಾಗಿಲ್ಲ. ಹಾಗೆ ತೋರಿಸಿಕೊಡುವುದು ಸಾಧ್ಯವಾಗುವವರೆಗೆ ಚಾಮ್‌ಸ್ಕಿಯವರು ಪ್ರತಿಪಾದಿಸುವ ಈ ಮೂರನೆಯ ನೆಲೆಯು ಇದೆ ಎಂದು ಒಪ್ಪುವುದು ಅನಿವಾರ್ಯವಾಗಿದೆ.

ಈ ಮೂರನೆಯ ನೆಲೆ ಯಾವುದು? ನುಡಿಕಸುವು ನುಡಿಗಳಿಕೆಯಲ್ಲಿ ಆಕಾರ ಪಡೆಯಲು ಅಗತ್ಯವಾದ ಈ ಮೂರನೆಯ ನೆಲೆಯು ನೇರವಾಗಿ ನುಡಿಗಾಗಲೀ ಜೈವಿಕ ಅಂಗಾಂಗಗಳಿಗಾಗಲೀ ಸಂಬಂಧ ಪಟ್ಟಿದ್ದಲ್ಲವೆಂದು ಸ್ಪಷ್ಟಪಡಿಸಲಾಗಿದೆ. ಇದು ಮುಖ್ಯವಾಗಿ ಮೆದುಳಿನಲ್ಲಿ ಅಂತಸ್ಥವಾಗಿರುವ ಒಂದು ಸಾಮರ್ಥ್ಯ. ವಿವಿಧ ಬಗೆಯ ಮಾಹಿತಿಗಳನ್ನು ಪಡೆಯುವ ಹಾಗೆ ಪಡೆದ ಮಾಹಿತಿಗಳನ್ನು ನಿರ್ದಿಷ್ಟ ರೀತಿಯಲ್ಲಿ ಸಂಸ್ಕರಿಸಿ ಅಳವಡಿಸುವ ಸಾಮರ್ಥ್ಯ ಮೂರನೆಯ ಅಂಶದಲ್ಲಿ ಹುದುಗಿರುತ್ತದೆ. ಇದು ಗಣಕ ಯಂತ್ರಗಳಲ್ಲಿ ಇರುವ ಕೇಂದ್ರ ಸಂಸ್ಕರಣ ಭಾಗದ (CPU) ರೀತಿಯಲ್ಲಿ ಕೆಲಸ ಮಾಡುತ್ತದೆ. ಇದು ಮನುಷ್ಯನ ಗ್ರಹಿಕೆಯ ಜಗತ್ತನ್ನು ರೂಪಿಸುವ ಹೊಣೆಯನ್ನು ಹೊತ್ತಿರುತ್ತದೆ. ಹಾಗಾಗಿ ಕಣ್ಣು ಕಿವಿ, ನಾಲಿಗೆ, ಮೂಗು ಚರ್ಮಗಳ ಮೂಲಕ ದೊರೆಯುವ ಸಂವೇದನೆಗಳನ್ನು ಪರಿಷ್ಕರಿಸಿ, ಸಂಸ್ಕರಿಸಿ, ಅನುಭವವನ್ನಾಗಿ ರೂಪಿಸುತ್ತದೆ. ಇಷ್ಟೆಲ್ಲ ಹೊಣೆ ಇರುವ ಈ ಸಾಮರ್ಥ್ಯವು ನುಡಿಗಳಿಕೆಯಲ್ಲೂ ತನ್ನ ಪಾತ್ರವನ್ನು ನಿರ್ವಹಿಸುತ್ತದೆ. ವೈಶ್ವಿಕ ವ್ಯಾಕರಣ ಮತ್ತು ವಿಕಲ್ಪಗಳ ನೆಲೆಗಳನ್ನು ಹಾಗೂ ಪರಿಸರದಿಂದ ದೊರೆಯುವ ಅಲ್ಪ ಸ್ವಲ್ಪ ನುಡಿಸಾಮಗ್ರಿಯನ್ನು ಬಳಸಿಕೊಂಡು ಪ್ರತಿವ್ಯಕ್ತಿಯಲ್ಲೂ ನುಡಿಗಳಿಕೆ ಎಂಬ ಪ್ರಕ್ರಿಯೆಯು ಪೂರ್ಣಗೊಳ್ಳಲು ನೆರವಾಗುತ್ತಿರುತ್ತದೆ.

ಚಾಮ್‌ಸ್ಕಿ ಇಂಥ ಚಿಂತನೆಗಳನ್ನು ಪ್ರತಿಪಾದಿಸುವ ಕಾಲದಲ್ಲೇ ಹಲವು ನುಡಿ ಅಧ್ಯಯನಕಾರರು ಇಂಥದೊಂದು ಸಾಮರ್ಥ್ಯ ಇದೆ ಎಂಬುದನ್ನು ಗುರುತಿಸಿದ್ದರೆಂದು ಕೆಲವು ವಾದಿಸುತ್ತಾರೆ. ನುಡಿಯ ಅಧ್ಯಯನದಲ್ಲಿ ಜರ್ಮನಿಯ ಹಂಬೋಲ್ಟ್ ಎಂಬ ಚಿಂತಕ ಮಂಡಿಸಿದ ವಿಚಾರಗಳನ್ನು ಇದಕ್ಕೆ ನಿದರ್ಶನವನ್ನಾಗಿ ಕೊಡುವುದುಂಟು. ನುಡಿಯ ಸಾಮಗ್ರಿಗಳು ಪ್ರತಿ ವ್ಯಕ್ತಿಯಲ್ಲೂ ಸೀಮಿತವಾಗಿದ್ದು ಆ ಸಾಮರ್ಥ್ಯ ಸಂಯೋಜನೆಯಿಂದ ಅನಂತ ಪ್ರಮಾಣದ ವೈವಿಧ್ಯವುಳ್ಳ ವಾಕ್ಯಗಳನ್ನು ಪ್ರತಿ ವ್ಯಕ್ತಿಯೂ

ಉತ್ಪಾದಿಸುವುದನ್ನು ನಾವು ಕಂಡಿದ್ದೇವೆ. ಈ ಸಾಮರ್ಥ್ಯವನ್ನು ಆವರ್ತನ ಸಾಮರ್ಥ್ಯ ಎಂದು ಗುರುತಿಸೋಣ. ಅಂದರೆ ಬಿಡಿಬಿಡಿಯಾದ ಸಾಮಗ್ರಿಗಳು ಬೇರೆಬೇರೆ ಬಗೆಯ ಸಂಯೋಜನೆಗಳಿಂದ ಎಣಿಸಲಾಗದಷ್ಟು ರಚನೆಗಳನ್ನು ರೂಪಿಸಲು ಅನುವು ಮಾಡಿಕೊಡುವುದೇ ಈ ಆವರ್ತನ ಸಾಮರ್ಥ್ಯ. ಮೂಲ ಬಣ್ಣಗಳು ಮೂರೇ ಇದ್ದರೂ ಅವುಗಳ ಬಗೆಬಗೆಯ ಮತ್ತು ವಿವಿಧ ಪ್ರಮಾಣದ ಮಿಶ್ರಣಗಳು ಸಾವಿರಾರು ಬಗೆಯ ವರ್ಣಚ್ಛಾಯೆಗಳನ್ನು ನೀಡಬಲ್ಲವು. ನುಡಿಸಾಮಗ್ರಿಯನ್ನು ಈ ಆವರ್ತನ ಸಾಮರ್ಥ್ಯದ ಬಳಕೆಯಿಂದ ಮಿತಿ ಇಲ್ಲದಷ್ಟು ಪ್ರಮಾಣದ ರಚನೆಗಳನ್ನು ಕಟ್ಟಬಹುದಾಗಿದೆ. ಹಂಬೋಲ್ಟ್ ಗುರುತಿಸಿದ್ದು ಈ ಬಗೆಯ ನುಡಿಬಳಕೆಯ ಸಾಧ್ಯತೆಯನ್ನು ಎಂದು ನೆನಪಿನಲ್ಲಿಡಬೇಕು. ಇದು ವ್ಯಕ್ತಿಯಲ್ಲಿ ನುಡಿಗಳಿಕೆ ಪೂರ್ಣಗೊಂಡ ಮೇಲೆ ಲೋಕ ವ್ಯವಹಾರದಲ್ಲಿ ತನ್ನಲ್ಲಿರುವ ನುಡಿಯ ಸಾಮಗ್ರಿಗಳನ್ನು ವ್ಯಕ್ತಿಯು ಎಷ್ಟು ಸೃಜನಶೀಲವಾಗಿ ಬಳಸಬಹುದು ಎಂಬುದನ್ನು ಹಂಬೋಲ್ಟ್ ಗುರುತಿಸಿದ್ದಾರೆ.

ಆದರೆ ಚಾಮ್‌ಸ್ಕಿ ಹೇಳುತ್ತಿರುವ ಮೂರನೆಯ ಅಂಶವು ಇದಕ್ಕಿಂತ ಭಿನ್ನವಾದುದು. ಈ ಭಿನ್ನತೆಯು ಎರಡು ನೆಲೆಗಳಲ್ಲಿ ಕಂಡು ಬರುತ್ತದೆ. (1) ಹಂಬೋಲ್ಟ್ ಗುರುತಿಸುವ ಆವರ್ತನ ಸಾಮರ್ಥ್ಯವು ಲೋಕ ವ್ಯವಹಾರದಲ್ಲಿ ಮಾತ್ರ ಪ್ರವೃತ್ತವಾಗಿರುತ್ತದೆ. ಆದರೆ ಚಾಮ್‌ಸ್ಕಿ ಹೇಳುವ ಮೂರನೆಯ ನೆಲೆಗೂ ಲೋಕ ವ್ಯವಹಾರಕ್ಕೂ ನೇರವಾದ ನಂಟು ಇಲ್ಲ. (2) ಹಂಬೋಲ್ಟ್ ಹೇಳುವ ನುಡಿಯ ಸೃಜನಶೀಲತೆಯು ವ್ಯಕ್ತಿಯಲ್ಲಿ ನುಡಿಗಳಿಕೆಯು ಪೂರ್ಣಗೊಂಡ ಮೇಲೆ ಕಾರ್ಯಪ್ರವೃತ್ತವಾಗುತ್ತದೆ. ಆದರೆ ಚಾಮ್‌ಸ್ಕಿ ಹೇಳುವ ಮೂರನೆಯ ನೆಲೆಯು ನುಡಿಗಳಿಕೆಯ ಪೂರ್ವದಲ್ಲೇ ಕ್ರಿಯಾಶೀಲವಾಗಿರುತ್ತದೆ. ಹಾಗೆ ನೋಡಿದರೆ ನುಡಿಗಳಿಕೆ ಎಂಬ ಪ್ರಕ್ರಿಯೆಯು ಪೂರ್ಣಗೊಳ್ಳಲು ಈ ಸಾಮರ್ಥ್ಯವೇ ನೆರವಾಗುವುದು.ಆದ್ದರಿಂದ ಚಾಮ್‌ಸ್ಕಿ ಹೇಳುತ್ತಿರುವ ಮೂರನೆಯ ನೆಲೆಯ ವಿಚಾರವು ಬೇರೆಯವರಿಂದಲೂ ಮೊದಲೇ ಮಂಡಿತವಾಗಿತ್ತು ಎಂದು ಹೇಳುವುದು ಸರಿಯಾಗಲಾರದು. ಒಂದು ವೇಳೆ ಅದು ನಿಜವಿದ್ದುದೇ ಆದರೂ ಅದರಿಂದ ಚಾಮ್‌ಸ್ಕಿಯವರ ವಾದ ಮತ್ತಷ್ಟು ಪುಷ್ಟಗೊಳ್ಳುತ್ತದೆ.

ನುಡಿಗಳಿಕೆಗೆ ನೆರವಾಗುವ ಮೂರು ಅಂಶಗಳ ಪ್ರತಿಪಾದನೆಯ ಹಿಂದೆ ಒಂದು ಊಹಾ ಕಲ್ಪನೆ ಇದೆ ಎಂದು ಈಗಾಗಲೇ ಮಂಡಿಸಲಾಗಿದೆ. ವೈಜ್ಞಾನಿಕ ಚಿಂತನೆಗಳು ಮುಂದುವರೆಯ ಬೇಕಾದರೆ ಈ ಬಗೆಯ ಊಹಾ ಕಲ್ಪನೆಗಳು ಅಗತ್ಯವಾಗುತ್ತದೆ. ಒಂದು ಪ್ರಕ್ರಿಯೆ ನಡೆಯುವುದನ್ನು ಗುರುತಿಸಿದ್ದೇವೆ ಎಂದುಕೊಳ್ಳಿ. ಆ ಪ್ರಕ್ರಿಯೆ ಹೇಗೆ ನಡೆಯಿತು ಮತ್ತು ಏಕೆ ನಡೆಯಿತು ಎಂಬುದನ್ನು ವರ್ಣಿಸಿದರೆ ಸಾಲದು. ಅದರ ಕಾರಣ ಮೀಮಾಂಸೆಯನ್ನು ಮಾಡಬೇಕಾಗುತ್ತದೆ ಇಂಥ ಕಾರಣ ಮೀಮಾಂಸೆಗೆ ಎಷ್ಟೋ ವೇಳೆ ಪ್ರಾಯೋಗಿಕವಾದ ಬೆಂಬಲಗಳಿರುವುದಿಲ್ಲ. ಅಂಥ ವೇಳೆಯಲ್ಲಿ ಚಿಂತನೆಯನ್ನು ಸ್ಥಗಿತಗೊಳಿಸಲು ಬರುವುದಿಲ್ಲ. ಆಗ ಊಹಾ ಕಲ್ಪನೆಗೆ ಮೊರೆ ಹೋಗುತ್ತೇವೆ. ಅಂದರೆ ನಾವು ಕಂಡ ಪ್ರಕ್ರಿಯೆಯು ನಡೆದಿರಬೇಕಾದರೆ ಅದಕ್ಕೆ ಒಂದು ಪೂರ್ವಸಂದರ್ಭ ಇದ್ದಿರಲೇಬೇಕು. ಮತ್ತು ಆ ಪೂರ್ವಸಂದರ್ಭದ ಚಹರೆಗಳು ಹೀಗಿದ್ದಿರಬಹುದು ಎಂದು ಊಹಿಸಬೇಕಾಗುತ್ತದೆ. ಈ ಊಹೆಯು ತಪ್ಪು ಎಂದು ಸಾಬೀತಾಗುವವರೆಗೆ ಅದನ್ನು ಒಪ್ಪಿಯೇ ಮುಂದುವರೆಯಬೇಕು.

ಚಾಮ್‌ಸ್ಕಿ ಹೇಳಿದ ಈ ಮೂರು ನೆಲೆಗಳ ಅಸ್ತಿತ್ವ ಮತ್ತು ಸ್ವರೂಪಗಳನ್ನು ಕಂಡು ಹಿಡಿಯುವುದು ನುಡಿಯ ಅಧ್ಯಯನಕಾರರಿಗೆ ಒಂದು ಸವಾಲಾಗಿದೆ. ಒಂದೋ ಈ ಮೂರೂ ನೆಲೆಗಳು ಇಲ್ಲದೆಯೂ ನುಡಿಗಳಿಕೆ ಸಾಧ್ಯವೆಂದು ನೆಲೆಗಳು ತೋರಿಸಿಕೊಡಬೇಕು ಇಲ್ಲವೇ ನುಡಿಗಳಿಕೆಗೆ ಈ ಮೂರು ನೆಲೆಗಳಿಗಿಂತ ಬೇರೆಯದೇ ಆದ ನೆಲೆಗಳಿವೆ ಎಂದು ಗೊತ್ತು ಮಾಡಬೇಕು. ಈ ಎರಡು ದಾರಿಗಳಲ್ಲದೆ ನುಡಿ ಅಧ್ಯಯನಕಾರರಿಗೆ ಬೇರೆ ಆಯ್ಕೆಗಳು ಈಗ ಇಲ್ಲ.

ನುಡಿಯ ಅಧ್ಯಯನದ ವೈಜ್ಞಾನಿಕತೆ

ವಿಜ್ಞಾನಿಗಳ ಅಧ್ಯಯನ ವಿಧಾನಗಳಲ್ಲಿ ಎರಡು ಮುಖ್ಯ ಬಗೆಗಳಿವೆ. ಅವುಗಳಲ್ಲಿ ಒಂದು ಯಾವುದೇ ಬಗೆಯ ಸಿದ್ಧಾಂತವನ್ನೂ ರೂಪಿಸುವ ಮೊದಲು ಆ ಸಿದ್ಧಾಂತವು ನಿಜವೆಂದು ಸಾಬೀತು ಮಾಡಲು ನೆರವಾಗುವ ಮಾಹಿತಿಗಳನ್ನು ಕೂಡಿಹಾಕುತ್ತದೆ. ಇಂಥ ಮಾಹಿತಿಗಳು ಇಲ್ಲದಿದ್ದಲ್ಲಿ ಯಾವ ಸಿದ್ಧಾಂತವನ್ನೂ ರೂಪಿಸುವುದಿಲ್ಲ. ಇಲ್ಲವೇ ಸಾಕಷ್ಟು ದೃಢವಾದ ಮಾಹಿತಿಗಳು ದೊರಕುವವರೆಗೂ ಸಿದ್ಧಾಂತವನ್ನು ರೂಪಿಸುವುದನ್ನೇ ಮುಂದೂಡುತ್ತಿರುತ್ತದೆ. ಇಂತಹ ಅಧ್ಯಯನ ವಿಧಾನಗಳು ನಂಬುವ ನೆಲೆಯನ್ನು ಒಂದು ವಾಕ್ಯದಲ್ಲಿ ಸಂಗ್ರಹಿಸುವುದಾದರೆ ಅದನ್ನು ಹೀಗೆ ಹೇಳಬಹುದು. ಯಾವುದೇ ಸಂಗತಿಯು ನಮಗೆ ಕಾಣಿಸುತ್ತಿಲ್ಲವೆಂದರೆ ಅದು ಇಲ್ಲವೆಂದೇ ಅರ್ಥ. ಎರಡನೆಯ ಬಗೆಯು ಮಾಹಿತಿಗಳಿಗಾಗಿ ಕಾಯುತ್ತ ಕೂರುವುದಿಲ್ಲ. ಸಿದ್ಧಾಂತ ರೂಪಿಸುವುದನ್ನು ಮುಂದೂಡುವುದೂ ಇಲ್ಲ. ತಾತ್ತ್ವಿಕ ನೆಲೆಯೊಂದನ್ನು ಗಣಿತಾತ್ಮಕವಾಗಿ ಸೂತ್ರ ರೂಪದಲ್ಲಿ ನಿರೂಪಿಸುವುದೇ ಈ ಬಗೆಯ ಮುಖ್ಯ ಗುರಿ. ಹೀಗೆ ರೂಪಿಸಿದ ಸಿದ್ಧಾಂತವನ್ನು ಸರಿ ಎಂದು ಸಾಬೀತು ಮಾಡುವ ಪ್ರಯೋಗ ಮಾದರಿಗಳನ್ನು ಆ ಬಳಿಕ ಕಂಡು ಕೊಳ್ಳಲಾಗುತ್ತದೆ.

ಈ ಎರಡೂ ಮಾದರಿಗಳಲ್ಲಿ ಮೊದಲಿನದನ್ನು ಹೆಚ್ಚು ವೈಜ್ಞಾನಿಕವೆಂದು ನಂಬುವ ಬಗೆ ಕಳೆದ ಶತಮಾನದ ಮೊದಲ ಕೆಲವು ದಶಕಗಳವರೆಗೂ ಮುಂದುವರೆದಿತ್ತು. ಭೌತವಿಜ್ಞಾನದ ಕೆಲವು ಮುಖ್ಯ ಚಿಂತಕರು ಅಣು ಮತ್ತು ಪರಮಾಣುವಿನ ರಚನೆಯನ್ನು ಕುರಿತ ಸಿದ್ಧಾಂತವನ್ನು ಒಪ್ಪಲು ಸಿದ್ಧವೇನಿರಲಿಲ್ಲ. ಏಕೆಂದರೆ ಅವರ ಪ್ರಕಾರ ಪರಮಾಣುವಿನ ರಚನೆ ಹೀಗೆಯೇ ಇದೆ ಎಂದು ತೋರಿಸಿಕೊಡುವ ಪ್ರಯೋಗಗಳು ಇರಲಿಲ್ಲ. ಕೆಲವು ಚಿಂತಕರು ಗ್ರಹಿಸುವಂತೆ ವಿಜ್ಞಾನಿಗಳ ಈ ಬಗೆಯ ಹಟಮಾರಿತನದಿಂದಾಗಿ ವೈಜ್ಞಾನಿಕ ಪ್ರಗತಿ ನಿರೀಕ್ಷಿತ ವೇಗದಲ್ಲಿ ಸಾಗಲು ಅಡೆತಡೆಗಳುಂಟಾದವು.

ಈ ಹಿನ್ನೆಲೆಯುಲ್ಲಿ ನುಡಿಯು ಅಧ್ಯಯುನಕಾರರು ಅನುಸರಿಸಿದ್ದ ದಾರಿ ಯಾವುದೆಂಬುದನ್ನು ನೋಡೋಣ. ನುಡಿಬಳಕೆಯನ್ನೇ ನುಡಿಯ ಸ್ವರೂಪವೆಂದು ತಿಳಿಯಲಾಗಿತ್ತು. ಆದ್ದರಿಂದ ಸಹಜವಾಗಿಯೇ ಮಾಹಿತಿಗಳನ್ನು ಆಧರಿಸಿ ಸೂತ್ರಗಳನ್ನು ರೂಪಿಸುವ ಮೊದಲ ಮಾದರಿಯೇ ನುಡಿಯ ಅಧ್ಯಯನಕಾರರಿಗೂ ಒಪ್ಪಿತವಾದಂತೆ ಕಾಣುತ್ತದೆ. ಜಗತ್ತಿನ ಯಾವುದೇ ನುಡಿಯನ್ನಾಗಲೀ ಅಧ್ಯಯನ ಮಾಡಲು ಆ ನುಡಿಯ ಬಳಕೆದಾರರಿಂದ ಸಾಮಗ್ರಿಗಳನ್ನು ಕಲೆಹಾಕುವ ವಿಧಾನವೇ ಹೆಚ್ಚು ದೃಢವಾಗಿ ನೆಲೆಗೊಂಡಿತ್ತು. ಸಂಗ್ರಹಿಸಿದ ನುಡಿ ಸಾಮಗ್ರಿಗಳಿಂದ ತಾತ್ಪೂರ್ತಿಕ ಸೂತ್ರಗಳನ್ನು

ರೂಪಿಸುವುದು. ಬಳಿಕ ದೊರೆತ ಹೆಚ್ಚಿನ ಸಾಮಗ್ರಿಯಿಂದ ಆ ಸೂತ್ರವನ್ನು ಪರಿಷ್ಕರಿಸುವುದು ಇದು ಒಪ್ಪಿತವಾದ ಅಧ್ಯಯನ ವಿಧಾನವಾಗಿತ್ತು. ಹಲವು ನುಡಿಗಳ ನಡುವೆ ಹೋಲಿಕೆ ಇಲ್ಲವೇ ವ್ಯತ್ಯಾಸಗಳನ್ನು ಗುರುತಿಸುವಾಗಲೂ ಆಯಾ ನುಡಿಗಳ ಬಗೆಗೆ ದೊರೆತಿರುವ ಮಾಹಿತಿಯಿಂದ ಸಿದ್ಧಗೊಂಡ ಸೂತ್ರಗಳು ಹೆಚ್ಚು ಪರಿಷ್ಕೃತಗೊಂಡಿರುವಂತೆ ನೋಡಿಕೊಳ್ಳುವ ಹೊಣೆ ಅಧ್ಯಯನಕಾರರ ಮೇಲಿತ್ತು.

ಈ ಬಗೆಯ ಅಧ್ಯಯನ ಮಾದರಿಯನ್ನು ಅನುಸರಿಸಿದ್ದರಿಂದ ಆದ ಪರಿಣಾಮಗಳೇನು ಎಂಬುದನ್ನು ನೋಡೋಣ. ನುಡಿಸಾಮಗ್ರಿಯನ್ನು ಸಂಗ್ರಹಿಸುವ ಕಡೆಗೆ ಹೆಚ್ಚು ಒತ್ತು ಬಿತ್ತು. ಆ ಸಾಮಗ್ರಿಗಳಿಂದ ರೂಪಿಸಿದ ಸೂತ್ರಗಳನ್ನು ಆಯಾ ನುಡಿಯ ಸಾಮಗ್ರಿಗಳಿಂದಲೇ ಪರಿಷ್ಕರಿಸಬೇಕೆಂಬ ಚೌಕಟ್ಟಿಗೆ ಕಟ್ಟು ಬಿದ್ದಿದ್ದರು. ಇದರಿಂದಾಗಿ ಮಾನವರ ನುಡಿಯ ಸಾಮಾನ್ಯ ಲಕ್ಷಣಗಳನ್ನು ಗ್ರಹಿಸುವುದು ಅಸಾಧ್ಯವಾಯಿತು.

ಇಂತಹ ಹಿನ್ನೆಲೆಯಲ್ಲಿ ಚಾಮ್‌ಸ್ಕಿ ಮಂಡಿಸಿದ ನುಡಿ ಸಿದ್ಧಾಂತಗಳು ಸುಲಭವಾಗಿ ಒಪ್ಪಿಗೆಯನ್ನು ಪಡೆಯಲಿಲ್ಲ. ಮುಖ್ಯವಾಗಿ ಚಾಮ್‌ಸ್ಕಿಯವರ ನುಡಿತತ್ವಗಳು ಪ್ರಚಲಿತ ಅಧ್ಯಯನ ವಿಧಾನಗಳಿಂದ ರೂಪಿತವಾಗಿಲ್ಲ ಎಂಬ ತಕರಾರೇ ಮೊದಲನೆಯದಾಗಿತ್ತು. ಒಂದು ವೇಳೆ ಚಾಮ್‌ಸ್ಕಿಯವರ ನುಡಿತತ್ವಗಳ ನಿರೂಪಣೆಯನ್ನು ಒಪ್ಪಿದರೂ ಅವು ಸರಿ ಎಂದು ಸಾಧಿಸಿ ತೋರಿಸಲು ಬೇಕಾದ ಸಾಮಗ್ರಿಗಳು, ಮಾಹಿತಿಗಳು ಇಲ್ಲವೆಂಬುದು ಎರಡನೆಯ ತಕರಾರು.

ನುಡಿಕಸುವಿಗೆ ಜೈವಿಕವಾದ ಬೇರುಗಳಿವೆ ಎಂದು ಚಾಮ್‌ಸ್ಕಿ ಹೇಳಿದ್ದು ಅಲ್ಲಿಯವರೆಗೆ ಬಲವಾಗಿ ಬೇರೂರಿದ್ದ ನುಡಿ ಸಿದ್ಧಾಂತಗಳಿಗೆ ಸವಾಲಾಗಿ ಕಂಡಿತ್ತು. ನುಡಿಬಳಕೆಯನ್ನು ಮತ್ತು ನುಡಿಕಸುವನ್ನೂ ಕಾರ್ಯ ಕಾರಣ ನೆಲೆಯಿಂದ ಇಲ್ಲವೇ ಜನ್ಯಜನಕ ನೆಲೆಯಿಂದ ಇಲ್ಲವೇ ಗಮ್ಯಗಮಕ ನೆಲೆಯಿಂದ ಇಲ್ಲವೇ ಜ್ಞಾಪ್ಯ ಜ್ಞಾಪಕ ನೆಲೆಯಿಂದ ನೋಡುವುದೇ ಹೆಚ್ಚು ಒಪ್ಪಿತವಾದ ವಿಧಾನವಾಗಿತ್ತು. ನುಡಿಬಳಕೆ ಇರುವುದೆ ನುಡಿ ಕಸುವಿಗೆ ಪುರಾವೆ ಎಂದು ಒಪ್ಪಲಾಗಿತ್ತು. ಹಾಗಾಗಿ ನುಡಿಬಳಕೆಯನ್ನು ಅರಿಯುವದರಿಂದಷ್ಟೇ ನುಡಿಕಸುವನ್ನು ಅರಿಯುವುದು ಸಾಧ್ಯ ಎಂಬ ನಂಬಿಕೆ ಪ್ರಬಲವಾಗಿತ್ತು. ನುಡಿಕಸುವು ಮತ್ತು ನುಡಿಬಳಕೆ ಇವೆರಡೂ ಬೇರೆಯವೇ ನೆಲೆಗಳಾಗಿದ್ದು ಅವು ಒಂದು ಇನ್ನೊಂದರೊಡನೆ ನಂಟನ್ನು ಹೊಂದಿದ್ದರೂ ಅವುಗಳ ಸಂಬಂಧ ಮಾತ್ರ ನಾವು ತಿಳಿದಿದ್ದ ಮಾದರಿಯಲ್ಲಿ ಇಲ್ಲ ಮತ್ತು ನುಡಿಕಸುವಿಗೆ ಲೋಕಸಂವಾದಿಯಾದ ನೆಲೆಗಳು ಇಲ್ಲ ಎಂದು ಹೇಳಿದ ಚಾಮ್‌ಸ್ಕಿಯವರ ಚಿಂತನೆಗಳು ಸಹಜವಾಗಿಯೇ ವಿರೋಧವನ್ನು ಮತ್ತು ಅಸಮ್ಮತಿಯನ್ನು ಪಡೆದುಕೊಂಡಿವೆ.

ಚಾಮ್‌ಸ್ಕಿಯವರು ಪ್ರಸ್ತಾಪಿಸಿದ ಅಧ್ಯಯನ ವಿಧಾನದ ನೆಲೆಗಳನ್ನು ಅರಿಯ ಬೇಕಾದರೆ ಇನ್ನೊಂದು ಪರಿಕಲ್ಪನೆಯ ಚರ್ಚೆಯನ್ನು ಮೊದಲು ಗ್ರಹಿಸಬೇಕಾಗುತ್ತದೆ. ಪ್ರತಿ ಮಾನವರಲ್ಲೂ ಇರುವ ವಿಶಿಷ್ಟ ಅಂಶಗಳ ಜೊತೆಗೆ ಅವರೆಲ್ಲರಲ್ಲೂ ಸಮಾನವಾದ ಮಾನವ ಪ್ರಕೃತಿ (ಹ್ಯೂಮನ್ ನೇಚರ್) ಎಂಬುದೊಂದು ಇರುವುದೇ ಎಂಬ

ಪ್ರಶ್ನೆಯನ್ನು ಬಿಡಿಸುವ ಅಗತ್ಯವಿದೆ. ಇಲ್ಲಿಂದ ಮುಂದೆ ಆ ಕುರಿತಂತೆ ಚಾಮ್‌ಸ್ಕಿಯವರ ಚಿಂತನೆಗಳನ್ನು ಅರಿಯೋಣ

ಮಾನವ ಪ್ರಕೃತಿಯ ಸ್ವರೂಪ

1971ರಲ್ಲಿ ಡೆನ್ಮಾರ್ಕ್‌ನ ಟಿವಿ ಚಾನಲೊಂದು ಆ ಕಾಲದಲ್ಲಿ ಯೂರೋಪ್ ಮತ್ತು ಅಮೆರಿಕದಲ್ಲಿ ಬಹು ಖ್ಯಾತರಾಗಿದ್ದ ಚಿಂತಕರ ನಡುವೆ ಚರ್ಚೆಯ ಸರಣಿಯನ್ನು ಏರ್ಪಡಿಸಿತ್ತು. ಈ ಸರಣಿಯಲ್ಲಿ ಅಮೆರಿಕದ ಖ್ಯಾತ ಭಾಷಾಶಾಸ್ತ್ರಜ್ಞ ನೋಂ ಚಾಮ್‌ಸ್ಕಿ ಮತ್ತು ಫ್ರಾನ್ಸ್ ದೇಶದ ಚಿಂತಕ ಮಿಷೆಲ್ ಫುಕೊ ಇವರಿಬ್ಬರನ್ನೂ ಮುಖಾಮುಖಿಯಾಗಿಸಿ ಚರ್ಚೆಯೊಂದನ್ನು ನಡೆಸಲಾಯಿತು. ಆ ಚರ್ಚೆಯ ವಿಡಿಯೋ ರೂಪ ಇಂಗ್ಲಿಷ್ ಉಪಶೀರ್ಷಿಕೆಗಳೊಂದಿಗೆ ಯೂಟ್ಯೂಬ್‌ನಲ್ಲಿ ಈಗ ಲಭ್ಯವಿದೆ ಈ ಚರ್ಚೆಯಲ್ಲಿ ನಿರ್ವಾಹಕರಾಗಿ ಚಾನಲ್‌ನ ಪರವಾಗಿ ಫ್ರಾನ್ಸ್ ಎಲ್ಡರ್ಸ್ ಕಾರ್ಯ ನಿರ್ವಹಿಸಿದ್ದಾರೆ. ಡೇನಿಶ್ ಭಾಷೆಯ ಪ್ರಸ್ತಾವನೆಯೊಂದಿಗೆ ಆರಂಭವಾಗುವ ಈ ಚರ್ಚೆಯಲ್ಲಿ ಚಾಮ್‌ಸ್ಕಿ ಉದ್ದಕ್ಕೂ ಇಂಗ್ಲಿಶಿನಲ್ಲಿ, ಫುಕೋ ಫ್ರೆಂಚ್ ನುಡಿಯಲ್ಲಿ ಮಾತನಾಡಿದ್ದಾರೆ.

ಈ ಚರ್ಚೆಯ ಕೇಂದ್ರ ವಿಷಯವನ್ನು ಎಲ್ಡರ್ಸ್ ಪ್ರಸ್ತಾಪಿಸುತ್ತಾ ಹೀಗೆ ಹೇಳುತ್ತಾರೆ. ಈ ಪ್ರಸ್ತಾವನೆಯಲ್ಲಿ ಚಾಮ್‌ಸ್ಕಿಯವರ ಮುಂದೆ ಇರಿಸಿದ ಮೊದಲ ಪ್ರಶ್ನೆಯೂ ಆಗಿದೆ. ಚರಿತ್ರೆಯಿಂದ ಮೊದಲಾಗಿ ಭಾಷಾಶಾಸ್ತ್ರ, ಮನಶಾಸ್ತ್ರ, ತತ್ವಶಾಸ್ತ್ರ ಮುಂತಾದ ಎಲ್ಲ ತಿಳಿವಿನ ವಲಯಗಳೂ ಕೂಡಾ ಒಂದು ಪ್ರಶ್ನೆಯನ್ನು ಬಿಡಿಸಲು ಯತ್ನಿಸುತ್ತಿವೆ. ನಾವು ಮನುಷ್ಯರೆಂದು ಗುರುತಿಸುವ ಜೀವಿಗಳೆಲ್ಲ ತಂತಮ್ಮ ಪರಿಸರದ ಒತ್ತಡಗಳಿಂದ ರೂಪುಗೊಂಡಿದ್ದಾರೋ ಅಥವಾ ಅವರೆಲ್ಲರಿಗೂ ಸಮಾನವಾದ ಒಂದು ಮೂಲ ಪ್ರಕೃತಿ ಎಂಬುದು ಇದೆಯೋ? ಮನುಷ್ಯರು ತಂತಮ್ಮ ಪರಿಸರದ ಮೂಲಕವೇ ರೂಪುಗೊಳ್ಳುತ್ತಾರೆ ಎಂದು ತಿಳಿಯುವುದಾದರೆ ಆಗ ಅವರಲ್ಲಿ ಒಬ್ಬೊಬ್ಬರಿಗೂ ಇರುವ ವ್ಯತ್ಯಾಸಗಳಿಗೆ ಕಾರಣಗಳನ್ನು ಗುರುತಿಸಬಹುದು. ಹಾಗಿಲ್ಲದೆ ಎಲ್ಲ ಮನುಷ್ಯರಿಗೂ ಸಮಾನವಾದ ಪ್ರಕೃತಿಯೊಂದು ಇದೆ ಎನ್ನುವುದಾದರೆ ಆಗ ಇಷ್ಟೆಲ್ಲ ವ್ಯತ್ಯಾಸಗಳಿದ್ದರೂ ಎಲ್ಲ ಮನುಷ್ಯರಲ್ಲೂ ಆ ಜೀವಿವರ್ಗದ ಚಹರೆ ಎನ್ನಬಹುದಾದ ಒಂದು ಸಮಾನ ಅಂಶ ಇದೆ ಎನ್ನಬೇಕಾಗುತ್ತದೆ.

ಎಲ್ಡರ್ಸ್ ಈ ಪ್ರಸ್ತಾವನೆಯನ್ನು ಮುಂದಿರಿಸಿ, ಚಾಮ್‌ಸ್ಕಿಯವರಿಗೆಒಂದು ಪ್ರಶ್ನೆಯನ್ನು ಕೇಳುತ್ತಾರೆ. ನೀವು ಈವರೆಗಿನ ನಿಮ್ಮ ಚಿಂತನೆಗಳಲ್ಲಿ ಅದರಲ್ಲೂ ನುಡಿಯನ್ನು ಕುರಿತ ಶೋಧಗಳಲ್ಲಿ, ಮನುಷ್ಯರಲ್ಲಿ ಅಂತಸ್ಥವಾದ ಮತ್ತು ಹುಟ್ಟಿನಿಂದಲೇ ಬಂದ ಕೆಲವು ಮೂಲ ರಚನೆಗಳು ಇರುತ್ತವೆ ಎಂದು ಹೇಳುತ್ತಾ ಬಂದಿದ್ದೀರಿ. ಹಾಗಿದ್ದಲ್ಲಿ ನಿಮ್ಮ ಈ ವಿಚಾರದ ಹಿನ್ನೆಲೆಯಲ್ಲಿ ಮಾನವ ಪ್ರಕೃತಿ ಎಂಬುದೊಂದು ಇದೆಯೇ ಎಂಬ ಪ್ರಶ್ನೆಗೆ ಯಾವ ಉತ್ತರವನ್ನು ನೀಡುತ್ತೀರಿ?

ಚಾಮ್‌ಸ್ಕಿ ಈ ಪ್ರಶ್ನೆಗೆ ನೀಡಿದ ಉತ್ತರವನ್ನು ಹೀಗೆ ಸಂಗ್ರಹಿಸಬಹುದು. ಎಲ್ಲ ಮನುಷ್ಯರಿಗೂ ಸಮಾನವಾದ ಪ್ರಕೃತಿಯೊಂದು ಇದೆಯೇ ಎಂಬ ಪ್ರಶ್ನೆಯನ್ನು ನುಡಿಶೋಧಗಳ ಹಿನ್ನೆಲೆಯಲ್ಲಿ ಅರಿತುಕೊಳ್ಳಲು ಯತ್ನಿಸೋಣ. ನಮ್ಮೆದುರು ಸಾಕಷ್ಟು

ಬೆಳೆದ, ಲೋಕಾನುಭವವುಳ್ಳ ಮನುಷ್ಯರ ಗುಂಪೊಂದು ಇದೆ ಎಂದು ಕೊಳ್ಳೋಣ. ಅವರೆಲ್ಲರಿಗೂ ಒಂದು ಸಮಾನ ಸಾಮರ್ಥ್ಯವಿದೆ ಎಂದು ನಾವು ಗುರುತಿಸುತ್ತೇವೆ. ತಮಗೆ ಅನಿಸಿದ್ದನ್ನು ಇನ್ನೊಬ್ಬರಿಗೆ ತಿಳಿಸುವ ಮತ್ತು ಇನ್ನೊಬ್ಬರ ಅನಿಸಿಕೆಯನ್ನು ಅರಿತುಕೊಳ್ಳುವ ಸಾಮರ್ಥ್ಯ ಎಲ್ಲರಲ್ಲೂ ಇರುತ್ತದಷ್ಟೆ. ನುಡಿಯ ನೆರವಿನಿಂದಲೇ ಈ ಸಾಮರ್ಥ್ಯ ಅವರಲ್ಲಿ ಕ್ರಿಯಾಶೀಲವಾಗುವುದು ಸಾಧ್ಯವಾಗುತ್ತದೆ. ಇದನ್ನು ನಾವು ಒಪ್ಪುತ್ತೇವೆ. ಪರಸ್ಪರ ನುಡಿಬಳಕೆಯ ಹಲವು ಸನ್ನಿವೇಶಗಳನ್ನು ಒಟ್ಟಾಗಿ ಇರಿಸಿ ನೋಡಿದರೆ ಪ್ರತಿಯೊಬ್ಬರೂ ಒಂದೊಂದು ಸಂದರ್ಭದಲ್ಲೂ ಆವರೆಗೂ ತಾವು ಎಂದೂ ಬಳಸಿರದ ವಾಕ್ಯಗಳನ್ನು ರಚಿಸಿರುವುದನ್ನು ಕಾಣುತ್ತೇವೆ. ಹಾಗೆಯೇ ತಾವು ಎಂದೂ ಕೇಳಿರದ ವಾಕ್ಯಗಳನ್ನು ಕೇಳಿಸಿಕೊಂಡು ಜನರು ಅರ್ಥ ಮಾಡಿಕೊಳ್ಳುತ್ತಿರುತ್ತಾರೆ. ಅಂದರೆ ಒಂದು ಸಾಮಾನ್ಯ ನುಡಿಬಳಕೆಯ ಸಂದರ್ಭವೂ ಕೂಡ ಒಂದು ಸೃಜನಶೀಲ ಚಟುವಟಿಕೆಯಂತೆ ತೋರುತ್ತದೆ. ಇಲ್ಲಿ ಸೃಜನಶೀಲವೆಂದರೆ ಆವರೆಗೂ ಇಲ್ಲದ್ದನ್ನು ಹುಟ್ಟುಹಾಕುವ ಮತ್ತು ಅರಿಯುವ ಕ್ರಿಯೆ ಎಂದಷ್ಟೇ ತಿಳಿಯೋಣ.

ಈ ಸೃಜನಶೀಲ ಕ್ರಿಯೆಗೆ ನುಡಿಯು ನೆರವಾಯಿತೆಂದು ಹೇಳುವುದಾದರೆ ನುಡಿ ಎಂಬ ವ್ಯವಸ್ಥೆ ಎಲ್ಲ ಮನುಷ್ಯರಿಗೂ ದೊರೆತದ್ದಾದರೂ ಹೇಗೆ ಎಂಬ ಪ್ರಶ್ನೆ ಎದುರಾಗುತ್ತದೆ. ನಮ್ಮೆಲ್ಲರ ಅನುಭವದಂತೆ ಎಳವೆಯಲ್ಲಿ ಮಕ್ಕಳು ಈ ನುಡಿ ವ್ಯವಸ್ಥೆಯನ್ನು ತಮ್ಮದನ್ನಾಗಿ ಮಾಡಿಕೊಳ್ಳುತ್ತಾರೆ. ಹೀಗೆ ನುಡಿವ್ಯವಸ್ಥೆಯನ್ನು ಪಡೆದುಕೊಳ್ಳಲು ಇಲ್ಲವೇ ಅದು ಅವರಲ್ಲಿ ರೂಪುಗೊಳ್ಳಲು ಹೊರಜಗತ್ತಿನಿಂದ ಅಂದರೆ ಮಗುವಿನ ಪರಿಸರದಿಂದ ದೊರೆಯುವ ಸಾಮಗ್ರಿಯಾದರೂ ಹೇಗಿರುತ್ತದೆ? ಒಂದು ಮಗು ಕನ್ನಡವನ್ನು ತನ್ನ ನುಡಿವ್ಯವಸ್ಥೆಯನ್ನಾಗಿ ರೂಪಿಸಿಕೊಳ್ಳುತ್ತಿದ್ದರೆ ಅದು ಕೇಳಿಸಿಕೊಳ್ಳುವ ಕನ್ನಡ ತುಂಡುತುಂಡಾದ ವಾಕ್ಯಗಳು ಮಾತ್ರ ಅದೂ ಒಂದಕ್ಕೊಂದು ಸಂಬಂಧವಿಲ್ಲದ ಸಂದರ್ಭಗಳಲ್ಲಿ ಕಿವಿಯ ಮೇಲೆ ಬಿದ್ದಿರುತ್ತದೆ. ಲೋಕದ ಹಲವು ಸದ್ದುಗಳ ಜೊತೆಯಲ್ಲಿ ಗೋಜಲು ಗೋಜಲಾಗಿ ಈ ನುಡಿಸಾಮಗ್ರಿಯು ಮಗುವಿಗೆ ದೊರಕಿರುತ್ತದೆ. ಹೀಗಿದ್ದರೂ ಮಗು ಅತ್ಯಂತ ಸುವ್ಯವಸ್ಥಿತವಾದ ನುಡಿವ್ಯವಸ್ಥೆಯನ್ನು ಕಟ್ಟಿಕೊಳ್ಳಲು ಹೇಗೆ ಸಾಧ್ಯವಾಯಿತು.

ಇನ್ನೂ ಒಂದು ಸಂಗತಿಯನ್ನು ಗಮನಿಸೋಣ. ಒಂದೇ ಹೊತ್ತಿನಲ್ಲಿ ನೂರಾರು ಮಕ್ಕಳು ಬೇರೆಬೇರೆ ಕಡೆಗಳಲ್ಲಿ ಕನ್ನಡದ ಪರಿಸರದಲ್ಲಿ ಬೆಳೆಯುತ್ತಿದ್ದಾರೆ ಎಂದುಕೊಳ್ಳಿ. ಈ ಎಲ್ಲ ಮಕ್ಕಳಿಗೂ ಅವರವರ ಪರಿಸರದಲ್ಲಿ ದೊರಕುವ ಕನ್ನಡ ಮಾತುಗಳ ಸಾಮಗ್ರಿಯಲ್ಲಿ ಸಮಾನ ನೆಲೆ ಇರುವುದಿಲ್ಲ. ಒಂದು ಮಗು ಕೇಳಿಸಿಕೊಳ್ಳುವ ಕನ್ನಡದ ನುಡಿ ಸಾಮಗ್ರಿ ಇನ್ನೊಂದು ಮಗುವಿಗೆ ದೊರಕುವ ಕನ್ನಡದ ನುಡಿಸಾಮಗ್ರಿಗಿಂತ ಸ್ವರೂಪ ಮತ್ತು ಪ್ರಮಾಣಗಳಲ್ಲಿ ಬೇರೆ ಬೇರೆಯೇ ಆಗಿರುತ್ತದೆ. ಹಾಗಿದ್ದರೂ ಈ ಎಲ್ಲ ಮಕ್ಕಳೂ ಪಡೆದುಕೊಳ್ಳುವ ಕನ್ನಡ ಎಂಬ ನುಡಿ ವ್ಯವಸ್ಥೆಯು ಬಹುಮಟ್ಟಿಗೆ ಸಮಾನವಾಗಿರುತ್ತದೆ. ಅಂದರೆ ಪರಿಸರದಿಂದ ದೊರೆಯುವ ಕನ್ನಡದ ಸಾಮಗ್ರಿಗಳ ವ್ಯತ್ಯಾಸವು ಮಗುವಿನಲ್ಲಿ ರೂಪುಗೊಳ್ಳುವ ನುಡಿ ರಚನೆಯಲ್ಲಿ ವ್ಯತ್ಯಾಸಗಳನ್ನೇನೂ ಉಂಟುಮಾಡುತ್ತಿಲ್ಲ. ಇದು ಸಾಧ್ಯವಾಗುವುದು ಹೇಗೆ?

ಇನ್ನೂ ಒಂದು ಸಂಗತಿಯನ್ನು ಗಮನಸೋಣ. ಬೇರೆಬೇರೆ ನುಡಿ ಪರಿಸರಗಳಲ್ಲಿ ಬೆಳೆಯುವ ಮಕ್ಕಳು ತಂತಮ್ಮ ಪರಿಸರದ ನುಡಿಗಳನ್ನಷ್ಟೇ ಕಲಿಯುತ್ತಾರೆ ಎಂಬುದನ್ನು ಒಪ್ಪುತ್ತೇವೆ. ಹೀಗೆ ಮಕ್ಕಳು ಪಡೆದುಕೊಳ್ಳುವ ನುಡಿವ್ಯವಸ್ಥೆಗಳನ್ನು ಅಧ್ಯಯನ ಮಾಡಿದಾಗ ಅವೆಲ್ಲ ವ್ಯವಸ್ಥೆಗಳ ನಡುವೆ ಒಂದು ಗುರುತಿಸಬಹುದಾದ ಸಮಾನ ಅಂಶಗಳಿರುವುದನ್ನು ಕಾಣುತ್ತೇವೆ. ಅಂದರೆ ಕನ್ನಡ ಮತ್ತು ಜರ್ಮನ್ ಪರಸ್ಪರ ಸಂಬಂಧವಿಲ್ಲದ ನುಡಿಗಳಾದರೂ ರಾಚನಿಕವಾಗಿ ಅವುಗಳಲ್ಲಿ ಎಲ್ಲ ಮಾನವ ಸಹಜ ನುಡಿಗಳಲ್ಲಿ ಕಾಣುವ ಸಮಾನ ಅಂಶಗಳನ್ನು ಗುರುತಿಸಬಹುದು. ಅಲ್ಲದೆ ಮಾನವ ಸಹಜ ನುಡಿಗಳ ರಚನೆಯನ್ನು ಅಧ್ಯಯನ ಮಾಡಿದವರು ಎಲ್ಲ ನುಡಿಗಳಲ್ಲೂ ಇರುವ ಪರಸ್ಪರ ವ್ಯತ್ಯಾಸಗಳು ಕೂಡಾ ಗೊತ್ತಾದ ವ್ಯಾಪಕತೆಯನ್ನು ಹೊಂದಿದೆ ಎಂಬುದನ್ನು ಗುರುತಿಸಿದ್ದಾರೆ.

ನಿರರ್ಥಕವಾದ ಉದ್ದೇಶವಿಲ್ಲದ ತುಂಡುತುಂಡಾದ ನುಡಿಸಾಮಗ್ರಿಗಳೂ ಕೂಡಾ ವ್ಯವಸ್ಥಿತ ನುಡಿರಚನೆಯನ್ನು ಉದ್ದೀಪಿಸುತ್ತವೆ. ಬೇರೆ ಬೇರೆ ಮಕ್ಕಳಿಗೆ ನುಡಿಯ ಬೇರೆ ಬೇರೆ ಬಗೆಯ ಸಾಮಗ್ರಿಗಳು ಒದಗಿದರೂ ಅವರೆಲ್ಲರಲ್ಲೂ ಒಂದೇ ನುಡಿವ್ಯವಸ್ಥೆ ಮೈದಳೆಯುತ್ತದೆ. ಬೇರೆ ಬೇರೆ ನುಡಿ ಪರಿಸರಗಳಲ್ಲಿ ಬೇರೆ ಬೇರೆ ನುಡಿ ವ್ಯವಸ್ಥೆಗಳು ಮಕ್ಕಳಲ್ಲಿ ಮೈದಳೆದರೆ ಆ ನುಡಿಗಳಲ್ಲಿ ಇರುವ ವ್ಯತ್ಯಾಸಗಳು ಕೂಡಾ ಗುರುತಿಸಬಹುದಾದಷ್ಟು ವ್ಯಾಪ್ತಿಯನ್ನು ಪಡೆದಿರುತ್ತವೆ. ಇವೆಲ್ಲವೂ ಹೇಗೆ ಸಾಧ್ಯವಾಗುತ್ತದೆ? ಪರಿಸರವೇ ಮನುಷ್ಯನನ್ನು ರೂಪಿಸುತ್ತದೆ ಎಂದು ವಾದಿಸಿದರೆ ಮೇಲೆ ಹೇಳಿದ ಸಂಗತಿಗಳನ್ನು ವಿವರಿಸಿಕೊಳ್ಳುವುದು ಸಾಧ್ಯವಾಗುವುದಿಲ್ಲ. ಹಾಗಾಗಿ ನಾವು ಮಾನವ ಪ್ರಕೃತಿಯೊಂದು ಇರಬೇಕೆಂಬ ನೆಲೆಗೆ ದಾಟುವುದು ಅನಿವಾರ್ಯವಾಗುತ್ತದೆ.

ನಾವೀಗ ಮಾನವ ಪ್ರಕೃತಿ ಎಂದು ಗುರುತಿಸುತ್ತಿರುವ ದತ್ತಾಂಶವನ್ನು ಮಕ್ಕಳು ಹುಟ್ಟುವಾಗಲೇ ಹೊಂದಿರುತ್ತವೆ. ಈ ಸಾಮರ್ಥ್ಯವು ನುಡಿಯ ಕೌಶಲಗಳನ್ನು ಅದರ ರಚನೆಯನ್ನು ಪಡೆದುಕೊಳ್ಳಲು ಮಕ್ಕಳಿಗೆ ನೆರವಾಗುತ್ತದೆ. ಮಾನವ ಸಹಜ ನುಡಿಗಳಲ್ಲಿ ಯಾವ ನುಡಿಯ ಮಾಹಿತಿಯು ಪರಿಸರದಿಂದ ದೊರಕುತ್ತಿರುತ್ತದೋ ಆ ನುಡಿಯ ರಚನೆಯನ್ನು ಮಕ್ಕಳು ತಮ್ಮಲ್ಲಿ ನೆಲೆಗೊಳಿಸಿಕೊಳ್ಳುತ್ತಾರೆ. ಒಂದು ಮಗು ಪರಿಸರದಲ್ಲಿ ಕನ್ನಡ ನುಡಿಯ ಮಾಹಿತಿಯನ್ನು ಪಡೆಯುತ್ತಿದ್ದರೆ ತನ್ನೊಳಗಿರುವ ಅಂತಃ ಸಾಮರ್ಥ್ಯದಿಂದ ಕನ್ನಡದ ರಚನೆಯನ್ನು ಗುರುತಿಸಿಕೊಳ್ಳುತ್ತದೆ. ಅದೇ ಮಗು ಜಪಾನಿ ನುಡಿ ಮಾಹಿತಿಯನ್ನು ತನ್ನ ಪರಿಸರದಿಂದ ಪಡೆಯುತ್ತಿದ್ದರೆ ಆ ಮಗುವಿನಲ್ಲಿ ಜಪಾನಿ ನುಡಿ ನೆಲೆಗೊಳ್ಳುತ್ತದೆ. ಸಾಮಾನ್ಯವಾಗಿ ವರ್ತನಾತ್ಮಕ ಮನೋವಿಜ್ಞಾನದ ನೆಲೆಯಿಂದ ನುಡಿಕಲಿಕೆಯನ್ನು ವಿವರಿಸುವವರು ಈ ಎರಡೂ ಪ್ರಸಂಗಗಳನ್ನು ಅನುಕರಣೆಯ ಚೌಕಟ್ಟಿನಲ್ಲಿ ಗ್ರಹಿಸುತ್ತಾರೆ. ಅಂದರೆ ತಾನು ಕೇಳಿದ ನುಡಿ ಸಾಮಗ್ರಿಯನ್ನು ಅನುಕರಿಸಿ ಆಯಾ ನುಡಿಯನ್ನು ತನ್ನಲ್ಲಿ ನೆಲೆಗೊಳಿಸಿಕೊಳ್ಳುತ್ತದೆ ಎನ್ನುತ್ತಾರೆ. ಆದರೆ ಈ ವಿವರಣೆ ಸರಿಯಾದುದಲ್ಲ. ಏಕೆಂದರೆ ಅನುಕರಣೆ ಮಾಡಲು ಮೂಲರಚನೆ ದೃಢವಾಗಿ ದೊರಕುವಂತಿರಬೇಕು. ಆದರೆ ಈಗಾಗಲೇ ಹೇಳಿರುವಂತೆ ಮಕ್ಕಳಿಗೆ ದೊರಕುವುದು ತುಂಡು ತುಂಡಾದ ಮತ್ತು ನಿರರ್ಥಕವಾದ ನುಡಿಸಾಮಗ್ರಿ ಮಾತ್ರ ಅದನ್ನು ಅನುಕರಿಸಿ ವ್ಯವಸ್ಥಿತ ನುಡಿರಚನೆಯನ್ನು ನೆಲೆಗೊಳಿಸಿಕೊಳ್ಳುವುದು ಅಸಾಧ್ಯ.

ಅಲ್ಲದೆ ಅನುಕರಣೆಯಿಂದ ತದ್ವತ್ತಾದ ಬಿಂಬಗಳು ಮಾತ್ರ ಮೂಡಬಲ್ಲವು. ದೊರೆತ ಸಾಮಗ್ರಿಯನ್ನು ಬಳಸಿ ಹೊಸರೂಪಗಳನ್ನು ಕಟ್ಟುವ ಸಾಮರ್ಥ್ಯವನ್ನು ಅನುಕರಣೆಯು ಒದಗಿಸುವುದಿಲ್ಲ. ಆದರೆ ಮಕ್ಕಳು ತಾವು ಪಡೆದುಕೊಂಡ ನುಡಿಯ ಹೊಚ್ಚಹೊಸ ರಚನೆಗಳನ್ನು ಕಟ್ಟುತ್ತಲೇ ಹೋಗುವುದನ್ನು ನೋಡುತ್ತೇವೆ. ಆದ್ದರಿಂದ ನುಡಿಯನ್ನು ನೆಲೆಗೊಳಿಸಿಕೊಳ್ಳಲು ಹಂತದಲ್ಲಿ ಅನುಕರಣೆಯು ಮುಖ್ಯ ಪಾತ್ರ ವಹಿಸುತ್ತದೆ ಎಂಬುದನ್ನು ಒಪ್ಪಲಾಗದು.

ಚಾಮ್‌ಸ್ಕಿ ನುಡಿಯನ್ನು ಪಡೆದುಕೊಳ್ಳುವ ಕ್ರಿಯೆಯನ್ನು ವಿವರಿಸಲು ಎಲ್ಲ ಮಕ್ಕಳಿಗೂ ಮಾನವ ಪ್ರಕೃತಿ ಎಂಬ ಸಮಾನಾಂಶವು ಹುಟ್ಟಿನಿಂದಲೇ ಒದಗಿ ಬಂದಿರಬೇಕೆಂದು ಕಲ್ಪಿಸುವುದು ಅಗತ್ಯವೆಂದು ಹೇಳುತ್ತಾರೆ. ಅಲ್ಲದೆ ಈ ಮಾನವ ಪ್ರಕೃತಿ ಎಂಬ ಸಾಮರ್ಥ್ಯವು ಮಗುವಿಗೆ ದೊರಕಿಸಿಕೊಡುವ ನುಡಿಕೌಶಲಗಳು ಕೇವಲ ಸಂವಹನಕ್ಕಾಗಿ ಮಾತ್ರ ಮೀಸಲಾಗಿರುವುದಿಲ್ಲ. ಮನುಷ್ಯರಲ್ಲಿ ಕಂಡು ಬರುವ ಎಲ್ಲ ಬಗೆಯ ಬೌದ್ಧಿಕ ಚಟುವಟಿಕೆಗಳಿಗೂ ಕಾರಣವಾಗುತ್ತದೆ. ಹಾಗೆ ನೋಡಿದರೆ ಮನುಷ್ಯ ಎಂಬ ಜೀವಿಯನ್ನು ಇತರ ಜೀವಿವರ್ಗದಿಂದ ಬೇರ್ಪಡಿಸಿ ಗುರುತಿಸಲು ನಾವು ಬಳಸುವ ಚಹರೆಯೇ ಈ ನುಡಿ ಸಾಮರ್ಥ್ಯವಾಗಿದೆ. ಹಾಗಾಗಿ ಎಲ್ಲ ಮನುಷ್ಯರಲ್ಲೂ ಈ ಮಾನವ ಪ್ರಕೃತಿಯು ಸಮಾನಾಂಶವಾಗಿ ಇರುವುದೆಂಬ ತಿಳುವಳಿಕೆ ಸಾಧುವೇ ಆಗಿದೆ. ಇದು ವ್ಯಕ್ತಿಗತವಾಗಿ ಕಂಡು ಬಂದರೂ ಕಾಲದೇಶಗಳ ಮೇರೆಯನ್ನು ಮೀರಿದ ಮಾನವ ಪರಿಕಲ್ಪನೆಯಾಗಿದೆ.

ಚಾಮ್‌ಸ್ಕಿಯವರು ಮಾನವ ಪ್ರಕೃತಿಯೊಂದು ಇದೆ ಮತ್ತು ಅದು ಮನುಷ್ಯರ ವಿಶಿಷ್ಟ ಚಹರೆ ಎಂದು ವಾದಿಸಿದರೆ ಮಿಶಲ್ ಫುಕೊ ತಮ್ಮ ವಾದವನ್ನು ಬೇರೆ ನೆಲೆಯಲ್ಲಿ ಮಂಡಿಸುತ್ತಾರೆ.

ಫುಕೊ ಅವರು ಮಾನವ ಪ್ರಕೃತಿಯೊಂದು ಇದೆಯೋ ಇಲ್ಲವೋ ಎಂಬ ಪ್ರಶ್ನೆಯೇ ಮೂಲಭೂತವಾಗಿ ನಿರರ್ಥಕ ಎಂದು ಹೇಳುತ್ತಾರೆ. ಏಕೆಂದರೆ ಮಾನವ ಪ್ರಕೃತಿಯೊಂದು ಇದೆ ಎಂದು ನಂಬುವವರು ಅದರ ಸ್ವರೂಪವನ್ನು ವಿವರಿಸುವಾಗ ಕಾಲದೇಶ ಬದ್ಧ ವಿವರಣೆಯನ್ನೇ ನೀಡುತ್ತಿದ್ದಾರೆ. ಅವರ ವಿವರಣೆಗಳಲ್ಲಿ ಹೊಂದಾಣಿಕೆ ಇಲ್ಲ. ಹೋಗಲಿ. ಆ ವಿವರಣೆಗಳ ನಡುವೆ ಚಾರಿತ್ರಿಕವಾದ ಬೆಳವಣಿಗೆಯೂ ಕಾಣದು. ವೈಜ್ಞಾನಿಕ ಶೋಧಗಳೂ ಕೂಡ ಇದೇ ಬಿಕ್ಕಟ್ಟಿಗೆ ಗುರಿಯಾಗಿದೆ. ಉದಾ.ಗೆ ನಿಸರ್ಗದಲ್ಲಿ ಇರುವ ಸಾಮಗ್ರಿಗಳನ್ನು ವರ್ಗೀಕರಿಸಲು ಹೊರಟ ಜೀವಶಾಸ್ತ್ರಜ್ಞರು ಒಂದು ಜೀವಸರಣಿಯ ಚಹರೆಗಳನ್ನು ಮುಂದಿರಿಸುತ್ತಾರೆಯೇ ಹೊರತು ಆ ಸರಣಿಯಲ್ಲಿ ಕಂಡುಬರುವ ಜೀವಿಗಳು ಒಂದರಿಂದ ಇನ್ನೊಂದು ಹೇಗೆ ಬೇರೆ ಎಂಬುದನ್ನು ಗುರುತಿಸಲು ಸಾಧ್ಯವಾಗಲಿಲ್ಲ. ಜೀವವುಳ್ಳ ವರ್ಗ ಮತ್ತು ನಿರ್ಜೀವಿ ವರ್ಗಗಳ ನಡುವೆ ಗಟ್ಟಿ ಗೆರೆಯೊಂದನ್ನು ಎಳೆಯಲಾಗಲಿಲ್ಲ. ಅಂದರೆ ಎಲ್ಲ ವಿವರಣೆಗಳೂ ಆಯಾ ಸಂದರ್ಭದ ಅಗತ್ಯಗಳನ್ನು ಇಲ್ಲವೇ ಚಿಂತನೆಯ ಚೌಕಟ್ಟುಗಳನ್ನು ಅವಲಂಬಿಸಿಕೊಂಡು ಮಂಡಿತವಾಗಿದೆ. ಹಾಗಾಗಿ ಕಾಲದೇಶಗಳ ವ್ಯಾಪ್ತಿಯನ್ನು ಮೀರಿದ ಮಾನವ ಪ್ರಕೃತಿ ಎಂಬುದೊಂದು ಇದೆ ಎಂದು ಗ್ರಹಿಸುವುದನ್ನೇ ಫುಕೊ ಅಪನಂಬಿಕೆಯಿಂದ ನೋಡುತ್ತಾರೆ.

ಚಾಮ್‌ಸ್ಕಿ ಮತ್ತು ಫುಕೋ ಇವರಿಬ್ಬರ ವಾದಗಳ ನಡುವೆ ಇರುವ ವ್ಯತ್ಯಾಸವನ್ನು ನಾವು ಬೇರೆಯದೇ ಆದ ಚೌಕಟ್ಟಿನಲ್ಲಿ ನೋಡಬೇಕಾಗಿದೆ. ಇವರಿಬ್ಬರ ನಡುವಣ ಚರ್ಚೆ ನಡೆದದ್ದು 1971ರಲ್ಲಿ ಎಂದು ಹೇಳಿದ್ದೇವೆ. ಆ ಹೊತ್ತಿಗೆ ವಿಯಟ್ನಾಂ ಯುದ್ಧದಲ್ಲಿ ತೊಡಗಿದ್ದ ಅಮೆರಿಕ ದೇಶವು ಜಾಗತಿಕವಾದ ಒತ್ತಾಯಗಳಿಂದ ಮತ್ತು ದೇಶದೊಳಗೇ ಕುದಿಯುತ್ತಿದ್ದ ಅಸಹನೆಯಿಂದ ಪ್ರೇರಿತವಾಗಿ ಯುದ್ಧರಂಗದಿಂದ ತನ್ನ ಸೈನ್ಯವನ್ನು ಮರಳಿ ಕರೆಸಿಕೊಂಡಿತು. ಆಗ ಅಧಿಕಾರ ಮತ್ತು ನ್ಯಾಯ ಇವೆರಡರ ಸಂಬಂಧವನ್ನು ಕುರಿತ ಚರ್ಚೆ ಮುಂಚೂಣಿಗೆ ಬಂತು. ಈ ಇಬ್ಬರೂ ಚಿಂತಕರು ನ್ಯಾಯ ಮತ್ತು ಅಧಿಕಾರಗಳ ಸಂಬಂಧವನ್ನೂ ಕುರಿತು ಚಿಂತಿಸಿದವರೇ ಆಗಿದ್ದಾರೆ. ಚಾಮ್‌ಸ್ಕಿ ಒಂದರ್ಥದಲ್ಲಿ ಕಾರಣ ಮೀಮಾಂಸಕರು. ಫುಕೋ ಪರಿಣಾಮ ಮೀಮಾಂಸಕರು. ಹಾಗಾಗಿಯೇ ಅವರ ಗ್ರಹಿಕೆಗಳ ಸ್ವರೂಪವು ಬೇರೆ ಬೇರೆ ಆಗಿರುವಂತೆ ತೋರುತ್ತದೆ.

ಚಾಮ್‌ಸ್ಕಿ ಈ ಚರ್ಚೆಯಲ್ಲಿ ತಾವು ಮಂಡಿಸಿದ ವೈಚಾರಿಕ ಚೌಕಟ್ಟನ್ನು ಮತ್ತಷ್ಟು ವಿಸ್ತರಿಸುತ್ತಲೇ ಹೋಗುತ್ತಿದ್ದಾರೆ. ಅದರಲ್ಲಿ ಮೂಲಭೂತ ಬದಲಾವಣೆಗಳನ್ನು ಮಾಡಿಕೊಳ್ಳಬೇಕೆಂದು ಅವರಿಗೆ ಅನ್ನಿಸಿಲ್ಲ. ಅವರ ವಾದವನ್ನು ಚಿಂತನೆಯನ್ನು ಕುರಿತು ಎಷ್ಟೇ ಟೀಕೆಗಳು ಬಂದರೂ ತಾವು ಪ್ರತಿಪಾದಿಸುತ್ತಿರುವ ಚೌಕಟ್ಟನ್ನು ಬಲಪಡಿಸುತ್ತಲೇ ನಡೆದಿದ್ದಾರೆ. ಈ ಚರ್ಚೆ ನಡೆದ ಸುಮಾರು ಒಂದು ದಶಕದ ಹೊತ್ತಿಗೆ ಫುಕೊ ಸಾವನಪ್ಪಿದರು. ಅವರ ಚಿಂತನಾಕ್ರಮ ಹೇಗೆ ಬೆಳೆಯಬಹುದಿತ್ತು ಎಂಬುದನ್ನು ಈಗ ಊಹಿಸುವುದು ಸಾಧ್ಯವಿಲ್ಲ.

ಚಾಮ್‌ಸ್ಕಿ ಅವರನ್ನು ಕಾರಣ ಮೀಮಾಂಸರೆಂದು ಗುರುತಿಸಲು ಬೇಕಾದ ಪುರಾವೆಗಳು ಅವರ ಚಿಂತನೆಗಳಲ್ಲಿವೆ. ಅವರು ಎತ್ತಿಕೊಳ್ಳುವ ಮೂಲಪ್ರಶ್ನೆಯು ಮನುಷ್ಯರಲ್ಲಿ ಕಂಡುಬರುವ ಅಪಾರವಾದ ವೈವಿಧ್ಯಗಳಲ್ಲೂ ಅವರೆಲ್ಲರನ್ನು ಮನುಷ್ಯರೆಂದೇ ಗುರುತಿಸಲು ಇರುವ ಅಂಶ ಯಾವುದೆಂಬುದನ್ನು ಹುಡುಕಬೇಕಿದೆ. ಭೌತಿಕವಾದ ದೇಹರಚನೆಯ ಆಚೆಗೂ ಕಾಲದೇಶ ಬದ್ಧವಲ್ಲದ ಒಂದು ಸಮಾನಾಂಶ ಇರಲೇಬೇಕೆಂಬ ಅವರ ನಂಬುಗೆಯ ಹಿಂದೆ ಒಂದು ಬಗೆಯ ಕಾರ್ಯಕಾರಣ ಸಂಬಂಧದ ಮಾದರಿ ಇದೆ.

ಚಾಮ್‌ಸ್ಕಿ ಮತ್ತು ಫುಕೊ ಇವರಿಬ್ಬರೂ ಮಾನವ ಪ್ರಕೃತಿಯನ್ನು ವಿವರಿಸುವ ಬಗೆಯಲ್ಲಿ ಪರಸ್ಪರ ಎದುರುಬದುರು ನಿಂತಂತೆ ತೋರುತ್ತದೆ. ಮನುಷ್ಯರ ಚರಿತ್ರೆಯಲ್ಲಿ ಸೃಜನಶೀಲತೆ ಎಂಬುದು ಹೊಸ ಚಿಂತನೆ ಎಂಬುದೂ ಎಲ್ಲಕಾಲದಲ್ಲೂ ಒಂದೇ ಪ್ರಮಾಣದಲ್ಲಿ ಕಂಡು ಬರುತ್ತಿಲ್ಲ; ಮಾನವ ಪ್ರಕೃತಿ ಎಂಬುದು ಇರುವುದೇ ಆಗಿದ್ದರೆ ಈ ಏರುಪೇರು ಉಂಟಾಗುವುದನ್ನು ವಿವರಿಸುವುದು ಸಾಧ್ಯವಿಲ್ಲವೆಂಬುದು ಫುಕೊ ನಿಲುವು. ಎಲ್ಲ ಮನುಷ್ಯರಿಗೂ ಒದಗಿಬರುವ ಸಂದರ್ಭಗಳನ್ನು ಸಮಾನತೆ ಇದ್ದರೂ ಎಲ್ಲೋ ಕೆಲವರಲ್ಲಿ ಮತ್ತು ಯಾವುದೋ ಕೆಲವು ಕಾಲದಲ್ಲಿ ಮಾತ್ರವೇ ಸೃಜನಶೀಲತೆಯು ಕ್ರಿಯಾಶೀಲವಾಗುತ್ತದೆ; ಆಗ ಮಾತ್ರ ಹೊಸ ಚಿಂತನೆಗಳು ಮೂಡಿಬಂದಿವೆ; ಹಾಗಾಗಿ ಮಾನವ ಪ್ರಕೃತಿ ಎಂಬ ಸರ್ವಸಮಾನವಾದ ಪರಿಕಲ್ಪನೆಯೊಂದನ್ನು ಒಪ್ಪುವುದು ಅಸಾಧ್ಯ. ಕಾಲದೇಶ ಮತ್ತ ವ್ಯಕ್ತಿಗತ ನೆಲೆಗಳು ಮನುಷ್ಯರಲ್ಲಿ ಸೃಜನಶೀಲತೆಯ ಮುಖ್ಯ ಕಾರಣಗಳಾಗುತ್ತವೆ ಎಂದು ಫುಕೋ ವಾದಿಸುತ್ತಾರೆ.

ಚಾಮ್‌ಸ್ಕಿ ನುಡಿಯ ಚಹರೆಯನ್ನು ವಿವರಿಸುವಾಗ ಮನುಷ್ಯರು ಉಚ್ಚರಿಸುವ ಪ್ರತಿ ವಾಕ್ಯವೂ ಹೊಚ್ಚಹೊಸದಾಗಿರುತ್ತದೆ. ಹಾಗಾಗಿ ಅದೊಂದು ಸೃಜನಶೀಲ ಚಟುವಟಿಕೆ ಎಂದು ಹೇಳಿದರಷ್ಟೆ. ಫುಕೋ ಈ ನಿಲುವನ್ನು ನಿರಾಕರಿಸುತ್ತಲೇ ತಮ್ಮ ವಾದವನ್ನು ಬೆಳೆಸುತ್ತಾರೆ. ಚಾಮ್‌ಸ್ಕಿ ತಾವು ಸೃಜನಶೀಲ ಎಂಬುದನ್ನು ವಿವರಿಸುವ ಬಗೆಯನ್ನು ಮತ್ತಷ್ಟು ವಿಶದೀಕರಿಸುವ ಅಗತ್ಯವಿದೆ ಎಂದು ತಿಳಿಯುತ್ತಾರೆ. ಕಲಾಜಗತ್ತಿನಲ್ಲಿ ಮತ್ತು ವೈಜ್ಞಾನಿಕ ಚಿಂತನೆಗಳ ಜಗತ್ತಿನಲ್ಲಿ ಸೃಜನಶೀಲತೆ ಎಂಬುದನ್ನು ವಿವರಿಸುವ ಕ್ರಮವೇ ಬೇರೆ. ಆವರೆಗೂ ಮನುಷ್ಯ ಜಗತ್ತಿನಲ್ಲಿ ಕಂಡಿರದ ವಸ್ತುವನ್ನು ವಿಚಾರವನ್ನು ರೂಪಿಸುವುದನ್ನು ಸೃಜನಶೀಲವೆಂದು ಅಲ್ಲಿ ವ್ಯಾಖ್ಯಾನಿಸಲಾಗುವುದು. ಕೆಲವೊಮ್ಮೆ ಅದೊಂದು ವ್ಯಕ್ತಿನಿಷ್ಠಸಾಧನೆ ಎಂದೂ ಬಿಂಬಿಸಲಾಗುತ್ತದೆ. ಆದರೆ ಚಾಮ್‌ಸ್ಕಿ ನುಡಿ ಬಳಕೆಯನ್ನು ಸೃಜನಶೀಲವೆಂದು ತೀರಾ ಸಾಮಾನ್ಯ ಅರ್ಥದಲ್ಲಿ ಗೊತ್ತಾದ ನಿಯಮಗಳನ್ನು ಬಳಸಿ ಹೊಸ ವಾಕ್ಯಗಳನ್ನು ಕಟ್ಟುವಾಗ ಆ ವಾಕ್ಯ ಆ ಸಂದರ್ಭಕ್ಕೆ ಹೊಸತು. ಆದರೆ ಯಾರೂ ಎಂದೆಂದೂ ರಚಿಸಲಾಗದ ವಾಕ್ಯ ಎಂಬ ಅರ್ಥ ಅಲ್ಲಿಲ್ಲ. ಆವರೆಗೆ ಅದನ್ನು ರಚಿಸಿರಲಿಲ್ಲ ಎನ್ನುವುದಷ್ಟೆ ನಿಜ. ಅದನ್ನು ಆ ನುಡಿಯನ್ನಾಡುವ ಯಾರಾದರೂ ಯಾವಾಗಲಾದರೂ ರಚಿಸಬಹುದಾಗಿರುತ್ತದೆ. ಹಾಗಾಗಿ ಇಲ್ಲಿ ಹೊಸತನ ಎಂಬುದು ಸಾಮಾನ್ಯ ಅರ್ಥದಲ್ಲಿ ಮಾತ್ರ ನಿಜ. ಖಾದ್ಯವೊಂದನ್ನು ಗೊತ್ತಾದ ರೆಸಿಪಿ ಬಳಸಿ ತಯಾರಿಸಿದಾಗ ಅದು ಆ ಹೊತ್ತಿಗೆ ಆವರೆಗೆ ಇಲ್ಲದಿದ್ದ ವಸ್ತುವಾಗಿರುತ್ತದೆ. ಆದರೆ ರೆಸಿಪಿವುಳ್ಳವರು ಅಂಥದೇ ಖಾದ್ಯವನ್ನು ಯಾವಾಗ ಬೇಕಾದರೂ ತಯಾರಿಸಬಹುದಾಗಿರುತ್ತದೆ. ಈ ನಿಟ್ಟಿನಲ್ಲಿ ಚಾಮ್‌ಸ್ಕಿ ಹೇಳುವ ಸೃಜನಶೀಲತೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ.

ಮಾನವ ಪ್ರಕೃತಿಯು ಇದೇ ಎಂದು ಒಪ್ಪಲಾಗದಿದ್ದಲ್ಲಿ ನುಡಿಯು ಮಗುವಿನಲ್ಲಿ ನೆಲೆಗೊಳ್ಳುವುದಾಗಲೀ, ಮುಂದೆ ನಿರಂತರವಾಗಿ ಬಳಕೆಯಾಗುವುದನ್ನಾಗಲೀ ವಿವರಿಸುವುದೇ ಅಸಾಧ್ಯವೆಂದೇ ಚಾಮ್‌ಸ್ಕಿ ತಿಳಿಯುತ್ತಾರೆ ಬೇರೊಂದು ಸಂದರ್ಭದಲ್ಲಿ ಒಂದು ಪ್ರಶ್ನೆಯನ್ನು ಚಾಮ್‌ಸ್ಕಿಯವರ ಎದುರಿಗೆ ಇಡಲಾಗಿದೆ. ಮನುಷ್ಯರ ಹಲವು ಕೌಶಲಗಳು ಕಾಲ ಕಳೆದಂತೆ ಪರಿಷ್ಕಾರಗೊಳ್ಳುತ್ತಾ ಹೋಗುವುದನ್ನು ನೋಡುತ್ತೇವೆ. ಒಂದು ಕಾಲಘಟ್ಟದಲ್ಲಿ ಆ ಕೌಶಲವನ್ನು ಬಳಸಿ ಮಾಡಿದ ಸಾಧನೆಗೂ ಇನ್ನೊಂದು ಕಾಲ ಘಟ್ಟದಲ್ಲಿ ಅದೇ ಕೌಶಲವನ್ನು ಬಳಸಿ ಮಾಡುವ ಸಾಧನೆಗೂ ಪರಿಮಾಣ ಮತ್ತು ಗುಣ ಎರಡರಲ್ಲೂ ವ್ಯತ್ಯಾಸವಿರುವುದನ್ನು ಕಾಣಬಹುದು. ಹೀಗಿರುವಾಗ ಸಾವಿರಾರು ವರ್ಷಗಳಿಂದ ಮಾನವ ಪ್ರಕೃತಿಯೂ ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಬಂದಿದೆಯೇ ಎಂಬುದೇ ಈ ಪ್ರಶ್ನೆ.

ಚಾಮ್‌ಸ್ಕಿ ಹಲವು ಸಂದರ್ಭಗಳಲ್ಲಿ ಈ ಪ್ರಶ್ನೆಗೆ ಉತ್ತರ ನೀಡಿದ್ದಾರೆ. ನುಡಿ ಎಂಬ ಕೌಶಲಕ್ಕೆ ಕಾರಣವಾಗುವ ಮತ್ತು ಜೈವಿಕವಾಗಿ ನೆಲೆಗೊಂಡಿರುವ ಮಾನವ ಪ್ರಕೃತಿಯು ಬದಲಾಗಿಲ್ಲ. ಸುಮಾರು ಅರವತ್ತು ಎಪ್ಪತ್ತು ಸಾವಿರ ವರ್ಷಗಳ ಹಿಂದೆ ವಂಶವಾಹಿಯ ವಿಕಲ್ಪವೊಂದರಿಂದ ರೂಪುಗೊಂಡ ಈ ಸಾಮರ್ಥ್ಯವು ಮೊದಲು ಇದ್ದ ಸ್ವರೂಪದಲ್ಲೇ ಈಗಲೂ ಉಳಿದುಕೊಂಡಿದೆ. ತನ್ನ ಈ ನಿಲುವನ್ನು ಸಮರ್ಥಿಸಲು

ಚಾಮ್‌ಸ್ಕಿ ಹಲವು ಉದಾ.ಗಳನ್ನು ನೀಡುತ್ತಾರೆ. ಒಂದು: ಎಲ್ಲ ಮನುಷ್ಯರಲ್ಲೂ ಬೇರೆ ಬೇರೆ ಕಾಲ ದೇಶಗಳಲ್ಲಿದ್ದರೂ ನುಡಿ ಎಂಬ ಕೌಶಲವು ನೆಲೆಗೊಳ್ಳುವಲ್ಲಿ ಯಾವ ವ್ಯತ್ಯಾಸಗಳೂ ಉಂಟಾಗುವುದಿಲ್ಲ. ಒಂದು ಕಾಲಘಟ್ಟದಲ್ಲಿ ಕನ್ನಡ ಪರಿಸರದ ಸಾವಿರಾರು ಮಕ್ಕಳು ಪಡೆದುಕೊಳ್ಳುವ ಕನ್ನಡ ಎಂಬ ಅಂತಸ್ಥ ಸಾಮರ್ಥ್ಯ ಒಂದೇ ಆಗಿರುತ್ತದೆ. ಆ ಮಕ್ಕಳಲ್ಲಿ ಇರುವ ಸಾಮಾಜಿಕ ಮತ್ತು ಜೈವಿಕ ವ್ಯತ್ಯಾಸಗಳು ಅವರು ಪಡೆದುಕೊಳ್ಳುವ ಕನ್ನಡ ಎಂಬ ಅಂತಃಸಾಮರ್ಥ್ಯದಲ್ಲಿ ವ್ಯತ್ಯಾಸವನ್ನೇನೂ ಉಂಟು ಮಾಡುವುದಿಲ್ಲ. ಎರಡು: ನಾಗರಿಕತೆಯ ವಿವಿಧ ಸ್ಥರಗಳಲ್ಲಿರುವ ಜನಾಂಗಗಳಿಂದ ಬಂದ ಎರಡು ಮಕ್ಕಳನ್ನು ಅವು ಹುಟ್ಟಿದ ಪರಿಸರವನ್ನು ಬದಲಿಸಿ ಬೆಳೆಸಿದರೆ ಆಯಾ ಮಕ್ಕಳು ತಾವು ಬೆಳೆಯುತ್ತಿರುವ ಪರಿಸರದ ನುಡಿಯನ್ನು ಅಂತಃ ಸಾಮರ್ಥ್ಯವನ್ನಾಗಿ ಪಡೆದೇ ಪಡೆಯುತ್ತಾರೆ. ಮೂರು: ಚಾಮ್‌ಸ್ಕಿ ಮುಂದುವರೆದು ಹೇಳುವುದೇನೆಂದರೆ ಅರವತ್ತು ಸಾವಿರ ವರ್ಷದ ಹಿಂದಿನ ಮಗುವಿನಲ್ಲಿ ಇದ್ದ ಮಾನವ ಪ್ರಕೃತಿಯ ಅಂಶವೇ ಇಂದಿನ ಮಕ್ಕಳಲ್ಲೂ ಇರುತ್ತದೆ. ಹಾಗಾಗಿ ಆ ಹಳೆಯ ಕಾಲದ ಮಗುವೊಂದನ್ನು ಇಂದಿನ ಪರಿಸರದಲ್ಲಿ ಬೆಳೆಸಿದರೆ ಅದು ಈ ಕಾಲದ ಮಗುವಿನಂತೆಯೇ ತನ್ನಲ್ಲಿ ನುಡಿ ಸಾಮರ್ಥ್ಯವನ್ನು ನೆಲೆಗೊಳ್ಳಿಸಿಕೊಳ್ಳುತ್ತದೆ.

ತಮ್ಮ ಈ ವೇದವನ್ನು ವಿಶದೀಕರಿಸುತ್ತಾ ಮತ್ತೊಂದು ಉದಾಯನ್ನು ಚಾಮ್‌ಸ್ಕಿ ನೀಡುತ್ತಾರೆ. ಮಂಗಳಗ್ರಹದಿಂದ ಜೀವಿಯೊಂದು ಭೂಮಿಗೆ ಬಂದಿತೆಂದುಕೊಳ್ಳೋಣ. ಆ ಜೀವಿಯಲ್ಲಿ ತನಗೆ ದೊರೆತ ಸಾಮಗ್ರಿಗಳನ್ನು ವಿಶ್ಲೇಷಿಸಿ ಇಲ್ಲವೇ ಸಂಶ್ಲೇಷಿಸಿ ನಿಯಮಗಳನ್ನು ರೂಪಿಸುವ ಸಾಮರ್ಥ್ಯವಿದೆ ಎಂದು ತಿಳಿಯೋಣ. ಆ ಜೀವಿಗೆ ಮಾನವ ಸಹಜ ನುಡಿಯ ಸಾಮಗ್ರಿಗಳನ್ನು ಒದಗಿಸಿದರೆ ಏನಾಗುತ್ತದೆ? ತನಗೆ ದೊರೆತ ಸಾಮಗ್ರಿಯ ವಿಶ್ಲೇಷಣೆ ಇಲ್ಲವೇ ಸಂಶ್ಲೇಷಣೆಯಿಂದ ನುಡಿರಚನೆಯ ನಿಯಮಗಳನ್ನು ಅತ್ಯಂತ ಸರಳ ರೂಪದಲ್ಲಿ ಗ್ರಹಿಸುವುದಕ್ಕೂ ಕೂಡಾ ಸಾಕಷ್ಟು ಸಮಯವೇ ಹಿಡಿದೀತು. ಇನ್ನು ಆ ನಿಯಮಗಳನ್ನು ಬಳಸಿ ಅನಂತ ಸಂಖ್ಯೆಯ ಹೊಸ ಹೊಸ ರಚನೆಗಳನ್ನು ಕಟ್ಟುವುದಂತೂ ದೂರದ ಮಾತು. ಹೀಗಾಗಲು ಕಾರಣವೇನು? ಯಾವುದು ಮಾನವ ಮಕ್ಕಳಲ್ಲಿ ಹುಟ್ಟಿನಿಂದಲೇ ಜೈವಿಕವಾಗಿ ಒಂದು ಸಾಮರ್ಥ್ಯವಾಗಿ ಲಭಿಸಿರುತ್ತದೋ ಅದು ಮಂಗಳಗ್ರಹದ ಆ ಜೀವಿಗೆ ಲಭ್ಯವಿರುವುದಿಲ್ಲ.

ಇಲ್ಲಿ ಗಮನಿಸಬೇಕಾದ ಮತ್ತೊಂದು ಮಾತಿದೆ ಮಂಗಳಗ್ರಹದ ಜೀವಿಗೆ ಲಭ್ಯವಿದ್ದ ವಿಶ್ಲೇಷಣೆ ಮತ್ತು ಸಂಶ್ಲೇಷಣೆ ಮಾಡುವ ಸಾಮರ್ಥ್ಯವು ಮನುಷ್ಯರ ಮಕ್ಕಳಿಗೆ ಎಳವೆಯಲ್ಲಿ ಲಭ್ಯವಿರುವುದಿಲ್ಲ. ಹಾಗಾಗಿ ಅವರು ನಿದರ್ಶನಗಳಿಂದ ನಿಯಮಗಳನ್ನು ಕಟ್ಟುವ ಬೌದ್ಧಿಕ ಚಟುವಟಿಕೆಯಲ್ಲಿ ತೊಡಗುವುದು ಅಸಾಧ್ಯ. ಇದು ಇಂದಿನ ಮಕ್ಕಳಿಗೆ ಎಷ್ಟು ನಿಜವೋ ಸಾವಿರಾರು ವರ್ಷದ ಹಿಂದಿನ ಮಕ್ಕಳಿಗೂ ಅಷ್ಟೇ ನಿಜ. ಈ ಎಲ್ಲ ಅಂಶಗಳನ್ನು ಗಮನಿಸಿದರೆ ಮಾನವ ಪ್ರಕೃತಿ ಎಂಬುದು ನಮ್ಮ ಗ್ರಹಿಕೆಯ ಕಾಲಾವಧಿಯಲ್ಲಿ ಯಾವುದೇ ಬದಲಾವಣೆಯನ್ನು ಹೊಂದಿಲ್ಲವೆಂದು ತಿಳಿಯುವುದೇ ಸರಿಯಾದ ಮಾರ್ಗ.

ಮಾನವ ಪ್ರಕೃತಿಯ ಇರುವಿಕೆಯನ್ನು ಚಾಮ್‌ಸ್ಕಿ ಸಮರ್ಥಿಸಿದರೂ ಆಧುನಿಕೋತ್ತರವಾದಿಗಳು ಅದನ್ನು ನಿರಾಕರಿಸುತ್ತಲೇ ಇದ್ದಾರೆ. ಅವರ ಪ್ರಕಾರ ಮಾನವ ಪ್ರಕೃತಿಯ ಪರಿಕಲ್ಪನೆಯೇ ಹುಸಿಯಾದುದು. ಇದು ವೈಜ್ಞಾನಿಕ ಚಿಂತನೆಯ ನೆಪದಲ್ಲಿ ಹುಟ್ಟುಹಾಕಿದ ಭ್ರಮೆ. ವಿಜ್ಞಾನವನ್ನು ಮತ್ತು ಅದರ ಸಂಕಥನವನ್ನು ಆಧುನಿಕೋತ್ತರವಾದಿಗಳು ಸಂದೇಹಿಸುತ್ತಾರೆ. ಅಧಿಕಾರವನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಪಶ್ಚಿಮದ ಜಗತ್ತು ವೈಜ್ಞಾನಿಕ ಚಿಂತನೆಯ ಸಂಕಥನವನ್ನು ರೂಪಿಸಿದೆ ಮತ್ತು ವಿಜ್ಞಾನದ ಸಾಧನೆಗಳು ಅಧಿಕಾರ ಕೇಂದ್ರದ ಸಮರ್ಥನೆಗಾಗಿಯೇ ಕಟಿಬದ್ಧವಾಗಿವೆ ಎಂಬುದು ಇವರ ವಾದ.

ಆಧುನಿಕೋತ್ತರವಾದಿಗಳ ಮಾನವ ಪ್ರಕೃತಿ ನಿರಾಕರಣೆಯ ವಿಚಾರವನ್ನು ಚಾಮ್‌ಸ್ಕಿಯವರ ಮುಂದೆ ಮಂಡಿಸಿದಾಗ ಅವರು ನೀಡುವ ಪ್ರತಿಕ್ರಿಯೆ ಹೀಗಿದೆ ಆಧುನಕೋತ್ತರ ವಾದಿಗಳ ಚಿಂತನಾಕ್ರಮ ಏನೇ ಇದ್ದರೂ ಅವರು ಜೈವಿಕ ನೆಲೆಯಲ್ಲಿ ಮಾನವ ಪ್ರಕೃತಿಯ ಅಸ್ತಿತ್ವವನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಏಕೆಂದರೆ ಮಾನವ ಭ್ರೂಣವೊಂದು ಸಂದರ್ಭಾನುಸಾರವಾಗಿ ಒಂದು ಏಡಿಯಾಗಿಯೋ ನಾಯಿ ಮರಿಯಾಗಿಯೋ ಬದಲಾಗಬಲ್ಲದೆಂದು ಆಧುನಿಕೋತ್ತರವಾದಿಗಳೂ ವಾದಿಸಲಾರರು. ಅಂದರೆ ಮಾನವ ಭ್ರೂಣವು ಮಾನವ ಶಿಶುವಾಗಿಯೇ ಮೈದಳೆಯಬೇಕೆಂದು ನಿರ್ದೇಶಿಸುವ ನೆಲೆಯು ಜೈವಿಕವಾಗಿ ಇರಲೇಬೇಕಷ್ಟೆ. ಇಷ್ಟು ಕನಿಷ್ಟ ನೆಲೆಯಲ್ಲಾದರೂ ಆಧುನಿಕೋತ್ತರ ವಾದಿಗಳು ಮಾನವ ಪ್ರಕೃತಿಯ ಇರುವಿಕೆಯನ್ನು ಒಪ್ಪಲೇಬೇಕಾಗುತ್ತದೆ. ಅವರ ವಾದದ ಬೇರೆ ಬೇರೆ ನೆಲೆಗಳು ಮಾನವ ಪ್ರಕೃತಿ ಎಂಬುದು ಆವಿಷ್ಕಾರಗೊಳ್ಳುವ ಬಗೆಯನ್ನು ಕುರಿತು ಇದೆಯೇ ಹೊರತು ಅದರ ಮೂಲಭೂತ ಅಸ್ತಿತ್ವದ ನಿರಾಕರಣೆಯಲ್ಲ.

ಚಾಮ್‌ಸ್ಕಿಯವರು ಮಾನವ ಪ್ರಕೃತಿಯನ್ನು ವಿವರಿಸುವ ಬಗೆಯನ್ನು ಸರಿಯಾದ ಚೌಕಟ್ಟಿನಲ್ಲಿ ಗ್ರಹಿಸದಿದ್ದರೆ ಅವರ ನಿಲುವನ್ನು ನಿರಾಕರಿಸುವ ನೆಲೆಗಳು ಹುಟ್ಟುತ್ತವೆ. ಚಾಮ್‌ಸ್ಕಿ ಎತ್ತಿದ ಪ್ರಶ್ನೆಗಳು ಸ್ಥೂಲವಾಗಿ ಈ ಕೆಳಗಿನಂತಿವೆ; ಒಂದು: ಮಾನವ ಮಗುವು ನುಡಿಕೌಶಲವನ್ನು ಪಡೆದುಕೊಳ್ಳುವ ಪ್ರಕ್ರಿಯೆಯನ್ನು ಹೇಗೆ ಅರ್ಥ ಮಾಡಿಕೊಳ್ಳುವುದು? ಎರಡು: ಮಾನವ ಶಿಶುಗಳು ಬೇರೆ ಬೇರೆ ಕಾಲದೇಶಗಳಲ್ಲಿ ಪಡೆದುಕೊಳ್ಳುವ ನುಡಿಕೌಶಲಗಳ ರಾಚನಿಕ ವಿನ್ಯಾಸವನ್ನು ಹೇಗೆ ವಿವರಿಸುವುದು? ಈಗಾಗಲೇ ಗುರುತಿಸಿದಂತೆ ಚಾಮ್‌ಸ್ಕಿ ತಮ್ಮ ಚಿಂತನೆಗಳನ್ನು ಮಂಡಿಸುತ್ತಿದ್ದ ಹೊತ್ತಿನಲ್ಲಿದ್ದ ನುಡಿಯನ್ನು ಕುರಿತ ಚಿಂತನೆಗಳು ಈ ಎರಡೂ ಪ್ರಶ್ನೆಗಳನ್ನು ಉತ್ತರಿಸಲು ಶಕ್ತವಾಗಿರಲಿಲ್ಲ. ಅಥವಾ ಆ ಚಿಂತನೆಗಳು ನೀಡುತ್ತಿದ್ದ ವಿವರಗಳು ಅಪರಿಪೂರ್ಣವಾಗಿರುತ್ತಿದ್ದು ಕೊರತೆಗಳಿಂದ ಕೂಡಿದ್ದವು. ಚಾಮ್‌ಸ್ಕಿ ಈ ಪ್ರಶ್ನೆಗಳಿಗೆ ಉತ್ತರಿಸಲು ಒಂದು ಆಧಾರ ಕಲ್ಪನೆಯನ್ನು ಮಾಡಿಕೊಳ್ಳುತ್ತಾರೆ. ಮಾನವ ಶಿಶುಗಳಲ್ಲಿ ಹುಟ್ಟುವಾಗಲೇ ಜೈವಿಕ ನೆಲೆಯ ಸಾಮರ್ಥ್ಯವೊಂದು ನೆಲೆಗೊಂಡಿರುತ್ತದೆ. ಈ ಸಾಮರ್ಥ್ಯವೇ ಎಲ್ಲ ಮಾನವ ಶಿಶುಗಳಲ್ಲೂ ನುಡಿ ನೆಲೆಗೊಳ್ಳುವಿಕೆಗೆ ಕಾರಣವಾಗುತ್ತದೆ. ಮತ್ತು ಕಾಲದೇಶಗಳ ಚೌಕಟ್ಟಿನಾಚೆಗೆ ಎಲ್ಲ ಮಾನವ ಶಿಶುಗಳಲ್ಲಿ ನೆಲೆಗೊಳ್ಳುವ ಬೇರೆಬೇರೆ ನುಡಿಗಳ

ನಡುವಣ ರಾಚನಿಕ ನಂಟನ್ನು ನಿರ್ದೇಶಿಸುತ್ತದೆ. ಎಲ್ಲ ಮಾನವ ಶಿಶುಗಳಿಗೂ ಸಮಾನವಾಗಿ ದೊರೆಯುವ ಈ ಸಾಮರ್ಥ್ಯವನ್ನು ಚಾಮ್‌ಸ್ಕಿ ಮಾನವ ಪ್ರಕೃತಿ ಎಂದು ಕರೆದಿದ್ದಾರೆ. ಇತರ ಜೀವಿಗಳಿಗೂ ಮನುಷ್ಯರಿಗೂ ಇರುವ ವ್ಯತ್ಯಾಸಗಳನ್ನು ಗುರುತಿಸುವಲ್ಲಿ ಈ ಸಾಮರ್ಥ್ಯಕ್ಕೆ ಹೆಚ್ಚಿನ ಮನ್ನಣೆ ಇದೆ. ಹಾಗಾಗಿ ಇದನ್ನು ಮಾನವ ಪ್ರಕೃತಿ ಎಂದು ಗುರುತಿಸುವುದರಲ್ಲಿ ತಪ್ಪಿಲ್ಲ. ಚಾಮ್‌ಸ್ಕಿಯವರ ವಿವರಣೆ ಅವರ ಮುಂದಿದ್ದ ಪ್ರಶ್ನೆಗಳನ್ನು ಬಿಡಿಸಲು ನೆರವಿಗೆ ಬಂದಿವೆ. ಅದನ್ನು ಬಿಟ್ಟರೆ ಸದ್ಯ ಆ ಪ್ರಶ್ನೆಗಳಿಗೆ ಸಮರ್ಪಕ ಉತ್ತರಗಳನ್ನು ನೀಡಲು ತಕ್ಕ ಸೈದ್ಧಾಂತಿಕ ಚೌಕಟ್ಟುಗಳು ಇಲ್ಲ. ಅಂತಹ ಸಿದ್ಧಾಂತಗಳು ರೂಪುಗೊಳ್ಳುವವರೆಗೆ ಚಾಮ್‌ಸ್ಕಿಯವರ ವಿವರಣೆಯನ್ನು ನಿರಾಕರಿಸಲು ಆಗುವುದಿಲ್ಲ.

ಮಾನವ ಪ್ರಕೃತಿಯು ಮನುಷ್ಯರ ಒಂದು ಚಹರೆ ಎಂದು ಚಾಮ್‌ಸ್ಕಿ ಗುರುತಿಸಿದರೇ ಹೊರತು ಅದನ್ನು ಮೌಲ್ಯಾತ್ಮಕ ನೆಲೆಯಲ್ಲಿ ವಿವರಿಸಲು ಹೋಗಿಲ್ಲ. ಅಂದರೆ ಮನುಷ್ಯರಿಗೂ ಆನೆಗೂ ಏನು ವ್ಯತ್ಯಾಸ ಎಂದು ಕೇಳಿದರೆ ಆಗ ನೀಡುವ ಉತ್ತರಗಳಲ್ಲಿ ಇರುವ ವ್ಯತ್ಯಾಸಗಳ ಪಟ್ಟಿಯಲ್ಲಿ ಮೇಲೆ ಹೇಳಿದ ಸಾಮರ್ಥ್ಯವು ಸ್ಥಾನ ಪಡೆಯುತ್ತದೆ. ಆದರೆ ಈ ಸಾಮರ್ಥ್ಯ ಇರುವುದರಿಂದಾಗಿ ಮನುಷ್ಯರು ಆನೆಗಿಂತ ಶ್ರೇಷ್ಠ ಎಂದಾಗಲೀ ಈ ಸಾಮರ್ಥ್ಯದಿಂದಾಗಿ ಮನುಷ್ಯ ಆನೆಗಿರುವ ಎಷ್ಟೋ ಅವಕಾಶಗಳನ್ನು ಕಳೆದುಕೊಂಡಿದ್ದಾರೆ ಎಂದಾಗಲೀ ತಿಳಿಯಬೇಕಿಲ್ಲ. ಹೀಗಾಗಿ ಮಾನವ ಪ್ರಕೃತಿ ಎಂಬುದು ಒಂದು ವಿವರಣಾತ್ಮಕ ನೆಲೆಯ ಪರಿಕಲ್ಪನೆಯೇ ಹೊರತು ಗುಣಾತ್ಮಕ ನೆಲೆಯ ವಿಶ್ಲೇಷಣೆಗೆ ಒದಗಿ ಬರುವಂಥದಲ್ಲ.

ಮೆದುಳು ಮತ್ತು ನುಡಿ

ಚಾಮ್‌ಸ್ಕಿಯವರ ನುಡಿಕುರಿತ ಚಿಂತನೆಗಳು ನುಡಿಯು ಮನುಷ್ಯರ ಅಂತಸ್ಥ ಸಾಮರ್ಥ್ಯವೆಂದು ಪ್ರತಿಪಾದಿಸುತ್ತಲೇ ಬಂದಿವೆ. ಅಂತಸ್ಥ ಸಾಮರ್ಥ್ಯವೆಂದರೇನು? 1) ಅದು ಹುಟ್ಟಿನಂದಲೇ ಬಂದಿರುವುದು. 2) ಪರಿಸರ ಇಲ್ಲವೇ ಕಲಿಕೆ ಈ ಸಾಮರ್ಥ್ಯ ನೆಲೆಗೊಳ್ಳಲು ನೇರ ಕಾರಣಗಳಲ್ಲ. 3) ಇದು ಕಾಲದೇಶಗಳನ್ನು ಮೀರಿ ಎಲ್ಲ ಮನುಷ್ಯರಿಗೂ ಸಮ ಪ್ರಮಾಣದಲ್ಲಿ ಒದಗುವಂಥದು. ಈ ಮೂರರಲ್ಲಿ ಮೊದಲನೆಯದರ ಬಗ್ಗೆ ಕೊಂಚ ವಿವರಣೆ ಅಗತ್ಯ. ನುಡಿ ಎಂಬುದು ಹುಟ್ಟಿನಿಂದಲೇ ಇರುವಂಥದು ಎಂಬ ಮಾತನ್ನು ಯಾವುದೋ ಒಂದು ಗೊತ್ತಾದ ನುಡಿಗೆ ಅನ್ವಯಿಸಿಕೊಂಡು ಅರ್ಥ ಮಾಡಿಕೊಳ್ಳಲಾಗದು. ಮಾನವ ಸಹಜ ಭಾಷೆಗಳ ಎಲ್ಲ ಸಾಧ್ಯತೆಗಳ ಚೌಕಟ್ಟು ಎಂದು ಮಾತ್ರ ಅದನ್ನು ತಿಳಿಯಬೇಕು.

ಈ ವಿಚಾರ ಧಾರೆಯನ್ನು ಒಪ್ಪದ ನುಡಿ ಚಿಂತಕರು ಮನುಷ್ಯರನ್ನು ಹೊರತು ಪಡಿಸಿ ಇತರ ಜೀವಿಗಳಲ್ಲೂ ನುಡಿ ಮಾದರಿಯ ವ್ಯವಸ್ಥೆಗಳು ಇವೆ ಎಂದು ವಾದಿಸುತ್ತಾರೆ. ಇರುವೆ, ಜೇನುಹುಳು ಮುಂತಾದ ಜೀವಿಗಳಲ್ಲಿ ಇರುವ ಸಂವಹನ ವ್ಯವಸ್ಥೆಯನ್ನು ಉದಾಹರಣೆಯನ್ನಾಗಿ ನೀಡುತ್ತಾರೆ. ಅಲ್ಲದೆ ಇತರ ಪ್ರಾಣಿಗಳಿಗೂ ಮನುಷ್ಯರ ನುಡಿಯನ್ನು ಕಲಿಸಬಹುದೆಂದು ಹೇಳುತ್ತಾರೆ. ಕಳೆದ ಶತಮಾನದ ಕೊನೆಯ ದಶಕಗಳಲ್ಲಿ

ಚಿಂಪಾಂಜಿಗಳಿಗೆ ಮನುಷ್ಯರ ಭಾಷೆಯನ್ನು ಕಲಿಸುವ ಪ್ರಯೋಗಗಳು ತುಂಬಾ ಕಡೆ ನಡೆದವು. ನೋಂ ಚಾಮ್‌ಸ್ಕಿಯವರ ಹೆಸರನ್ನು ಹೋಲುವ ನಿಮ್ ಚಿಂಪ್‌ಸ್ಕಿ (Nim Chimpsky) ಎಂಬ ಹೆಸರನ್ನು ಒಂದು ಚಿಂಪಾಂಜಿಗೆ ಇರಿಸಿ ಅದಕ್ಕೆ ಮನುಷ್ಯರ ನುಡಿಯನ್ನು ಕಲಿಸಲು ಯತ್ನಗಳು ನಡೆದವು. ಇಂತಹ ಚಿಂಪಾಂಜಿಗಳು ಹತ್ತಿಪ್ಪತ್ತು ಪದಗಳನ್ನು, ಐದಾರು ವಾಕ್ಯಗಳನ್ನು ಅರ್ಥ ಮಾಡಿಕೊಳ್ಳುವ ಮತ್ತು ಮರಳಿ ಆ ಪದ, ವಾಕ್ಯಗಳನ್ನು ಬಳಸುವ ಹಂತವನ್ನು ತಲುಪಿದವು ನಿಜ. ಇಷ್ಟರಿಂದಲೇ ನುಡಿ ಎಂಬುದು ಮಾನವ ವಿಶಿಷ್ಟ ಸಂಗತಿಯಲ್ಲ ಎಂದೂ ಅದು ಕಲಿಕೆಯ ಮೂಲಕವೇ ಲಭಿಸುತ್ತದೆಂದೂ ಸಾಧಿಸಲು ಮುಂದಾದವರೂ ಇದ್ದಾರೆ. ಆದರೆ ಚಾಮ್‌ಸ್ಕಿಯವರ ಪ್ರತಿಪಾದನೆಗಳನ್ನು ಈ ಪ್ರಯೋಗಗಳು ಮತ್ತು ಅವುಗಳ ಯಶಸ್ಸುಗಳು ನಿರಾಕರಿಸುವಷ್ಟು ಶಕ್ತವಾಗಿಲ್ಲ. ಏಕೆಂಬುದನ್ನು ನೋಡೋಣ.

ಚಾಮ್‌ಸ್ಕಿ ನುಡಿಯು ಅಂತಃಸಾಮರ್ಥ್ಯವೆಂದಾಗ ಆ ಸಾಮರ್ಥ್ಯವು ಮನುಷ್ಯರ ಮೆದುಳಿನಲ್ಲಿ ನೆಲೆಗೊಂಡಿದೆಯೆಂದೂ ಹೇಳಿದರು. ಅಂದರೆ ಆ ಮೂಲಕ ಮನುಷ್ಯರ ಮೆದುಳಿನ ರಚನೆಯು ನೇರವಾಗಿ ಅವರ ನುಡಿಸಾಮರ್ಥ್ಯವನ್ನು ನಿಯಂತ್ರಿಸುತ್ತದೆ ಎಂದು ಹೇಳಿದಂತಾಯಿತು. ಮನುಷ್ಯರ ಮೆದುಳಿನ ರಚನೆಯನ್ನು ಹೊಂದಿರದ ಇನ್ನಾವುದೇ ಪ್ರಾಣಿಯಲ್ಲಾಗಲೀ ನುಡಿಯು ಒಂದು ಸಾಮರ್ಥ್ಯವಾಗಿ ನೆಲೆಗೊಳ್ಳಲು ಸಾಧ್ಯವೇ ಇಲ್ಲ ಎಂದೂ ಹೇಳಿದಂತಾಯಿತು. ಹಾಗಿದ್ದರೆ ನಿಮ್ ಚಿಂಪ್‌ಸ್ಕಿ ಕಲಿತದ್ದೇನು? ಚಿಂಪಾಂಜಿಗಳಿಗೆ ನುಡಿಯನ್ನು ಕಲಿಸುವ ನೂರಾರು ಪ್ರಯೋಗಗಳ ಫಲಿತಾಂಶಗಳನ್ನು ಹೋಲಿಸಿದರೆ ಕೆಲವು ಸಂಗತಿಗಳು ಸ್ಪಷ್ಟವಾಗಿ ತಿಳಿಯುತ್ತವೆ. 1) ಚಿಂಪಾಂಜಿಗಳು ಕಲಿತ ಪದಗಳ ಸಂಖ್ಯೆ ಬಹು ಸೀಮಿತವಾದದ್ದು. ಮನುಷ್ಯರ ಮಕ್ಕಳು ಕಲಿಯುವ ಪದಗಳ ಸಂಖ್ಯೆಗೆ ಹೋಲಿಸಿದರೆ ಚಿಂಪಾಂಜಿಗಳ ಪದಕೋಶ ತೀರ ರಿಕ್ತವಾದುದು. 2) ಚಿಪಾಂಜಿಗಳು ಗ್ರಹಿಸುವ ವಾಕ್ಯಗಳು ಗರಿಷ್ಠ ಎರಡು ಪದಗಳನ್ನಷ್ಟೇ ಹೊಂದಿರಬಲ್ಲವೆಂದು ಪ್ರಯೋಗಗಳು ತೋರಿಸುತ್ತವೆ. ಮಾನವ ಶಿಶುಗಳು ಹತ್ತಾರು ಪದಗಳಿರುವ ವಾಕ್ಯಗಳನ್ನು ಸುಲಲಿತವಾಗಿ ಉತ್ಪಾದಿಸಬಲ್ಲವು. ಆದ್ದರಿಂದ ಚಿಂಪಾಂಜಿಗಳ ನುಡಿ ಕಲಿಕೆಯನ್ನು ಮಾನವ ಶಿಶುಗಳಲ್ಲಿ ಜರುಗುವ ನುಡಿ ನೆಲೆಗೊಳ್ಳುವಿಕೆಯ ಪ್ರಕ್ರಿಯೆಗೆ ಹೋಲಿಸುವುದು ಅಸಾಧ್ಯ.

ಇನ್ನೂ ಒಂದು ಸಂಗತಿ ಗಮನಾರ್ಹವಾಗಿದೆ. ಚಿಂಪಾಂಜಿಗಳು ಕಲಿಯುವ ಪದಗಳ ಸ್ವರೂಪಕ್ಕೆ, ಒಂದು ಮಿತಿ ಇದೆ. ಅವು "ಕಿತ್ತಳೆ" ಮತ್ತು "ಬಾಳೆ" ಎಂಬ ಪದಗಳನ್ನು ಕಲಿತಾವು. ಆದರೆ 'ಹಣ್ಣು' ಎಂಬ ಪದವನ್ನು ಕಲಿಯಲಾರವು. ಅಂದರೆ ಅವು ಕಲಿಯುವ ಪದಗಳಿಗೆ ನಿಜ ಜಗತ್ತಿನಲ್ಲಿ ಒಂದು ಬಿಂಬ ಇರಲೇಬೇಕು ಮತ್ತು ಆ ಬಿಂಬ ಚಿಂಪಾಂಜಿಯ ಅನುಭವದ ಭಾಗವಾಗಿರಬೇಕು. ಈ ಮಿತಿಯನ್ನು ಮಾನವ ಶಿಶುಗಳ ನುಡಿಗಳಿಗೆ ಹೇಳಲಾಗುವುದಿಲ್ಲ. ನಿರ್ದಿಷ್ಟ ಲಕ್ಷಣಗಳುಳ್ಳ ವಸ್ತುಗಳ ಸಾಮಾನ್ಯ ಅಂಶಗಳನ್ನು ಬಳಸಿ ಅಮೂರ್ತಪದಗಳನ್ನು ಮಕ್ಕಳು ಕಟ್ಟಿಕೊಳ್ಳಬಲ್ಲರು. ಕಿತ್ತಳೆ ಮತ್ತು ಬಾಳೆ (ಮಾವು, ಸೇಬು, ದ್ರಾಕ್ಷಿ ಇತ್ಯಾದಿ) ಗಳ ಅನುಭವದ ಮೂಲಕ ಹಣ್ಣು ಎಂಬ ಪದವನ್ನು ರೂಪಿಸಿಕೊಳ್ಳುವುದು ಚಿಂಪಾಂಜಿಗೆ ಅಸಾಧ್ಯವಾದರೂ

ಮಾನವ ಶಿಶುವಿಗೆ ಸಾಧ್ಯವಾಗುತ್ತದೆ. ಹಣ್ಣು ಎಂಬುದನ್ನು ಬಾಳೆ, ಕಿತ್ತಳೆ, ದ್ರಾಕ್ಷಿ ಇತ್ಯಾದಿ ನಿರ್ದಿಷ್ಟ ಹಣ್ಣುಗಳ ಸಂದರ್ಭದಲ್ಲಿ ಮೊತ್ತವಲ್ಲದೆ ಬಿಡಿಯಾಗಿಯೂ ಮಾನವ ಶಿಶು ಬಳಸಬಲ್ಲದು ಮತ್ತು ಹಾಗೆ ಬಳಸಿದರೆ ಗ್ರಹಿಸಬಲ್ಲದು. ಹಣ್ಣು ಎಂಬ ಪದವನ್ನೇ ಪ್ರತಿನಿಧಿಸುವ ಬಿಂಬ ನಿಜ ಜಗತ್ತಿನಲ್ಲಿ ಇರುವುದಿಲ್ಲ. ಮತ್ತು ಅದು ಇರಲೇಬೇಕೆಂಬ ಷರತ್ತು ಕೂಡಾ ಇಲ್ಲ.

ಚಿಂಪಾಂಜಿಗಳ ಒಂದು ಪದವನ್ನು ಕಲಿಯಲು ಆ ಪದದ ಮೂಲ ಬಿಂಬವು ಹೇಗಾದರೂ ಅದರ ಅನುಭವದ ಭಾಗವಾಗಿರಬೇಕೆಂದು ಹೇಳಿದೆವಷ್ಟೆ. ಆದರೆ ಮಾನವ ಶಿಶುಗಳಿಗೆ ಇದರ ಅಗತ್ಯವಿದ್ದಂತೆ ತೋರುವುದಿಲ್ಲ. ಎಂದೂ ತಮ್ಮ ಅನುಭವಕ್ಕೆ ಬಾರದಿರುವ ಸಂಗತಿಗಳನ್ನು ಬಿಂಬಿಸುವ ಪದಗಳನ್ನು ಮಕ್ಕಳು ತಮ್ಮ ನುಡಿ ಬಳಕೆಯಲ್ಲಿ ಸೇರಿಸಬಲ್ಲರು. ಇದಕ್ಕೆ ಹೆಚ್ಚಿನ ನಿದರ್ಶನಗಳ ಅಗತ್ಯವೇನೂ ಇಲ್ಲ.

ಈ ಮೇಲಿನ ವಿವರಣೆಯಿಂದ ಮಾನವರ ಮೆದುಳಿನ ರಚನೆಗೂ ಅದರಲ್ಲಿ ನೆಲೆಗೊಳ್ಳುವ ನುಡಿಗೂ ನೇರ ನಂಟು ಇದೆ ಎಂದು ಸ್ಥೂಲವಾಗಿ ಗೊತ್ತಾಗುತ್ತದೆ. ಚಾಮ್‌ಸ್ಕಿ ಮೆದುಳಿನಲ್ಲಿ ನುಡಿ ನೆಲೆಗೊಳಿಸಿಕೊಳ್ಳಲು ಬೇಕಾದ ವಿಶಿಷ್ಟ ವ್ಯವಸ್ಥೆಯೊಂದು ಇದೆ ಎಂದು ಪ್ರತಿಪಾದಿಸಿದರು. ಆ ವ್ಯವಸ್ಥೆಗೆ ಲ್ಯಾಂಗೇಜ್ ಅಕ್ವೈರಿಂಗ್ ಡಿವೈಸ್ (LAD) ಎಂಬುದು ಇದರ ಸಂಕ್ಷಿಪ್ತ ರೂಪ. ಎಂದು ಹೆಸರಿಟ್ಟಿದ್ದಾರೆ. LAD ಮೆದುಳಿನಲ್ಲಿದ್ದುಕೊಂಡು ನುಡಿ ನೆಲೆಗೊಳ್ಳಲು ಹೇಗೆ ಕಾರಣವಾಗುತ್ತದೆ? ಈ ಪ್ರಶ್ನೆಯನ್ನು ಬಿಡಿಸುವುದು ಅಷ್ಟು ಸುಲಭವಲ್ಲ. ಮತ್ತೆ ಚಿಂಪಾಂಜಿಯ ನುಡಿಕಲಿಕೆಯ ನಿದರ್ಶನಕ್ಕೆ ಬರೋಣ. ಚಿಂಪಾಂಜಿಗಳು ಕೇಳಿಸಿಕೊಳ್ಳಬಲ್ಲವು. ಆದರೆ, ನುಡಿಯಲಾರವು, ಅವುಗಳ ಧ್ವನ್ಯಂಗಗಳು ಕೆಲವು ಸೀಮಿತ ಸಂಖ್ಯೆಯ ಕೂಗುಗಳನ್ನು ಉಂಟು ಮಾಡಲು ಮಾತ್ರವೇ ಶಕ್ತವಾಗಿವೆ. ಮನುಷ್ಯರು ಉಂಟು ಮಾಡಬಹುದಾದಷ್ಟು ಉಲಿಗಳನ್ನು ಚಿಂಪಾಂಜಿಗಳು ಉಚ್ಚರಿಸಲಾರವು. ಹಾಗಿದ್ದರೆ ಅವುಗಳ ನುಡಿಕಲಿಕೆಯ ಸ್ವರೂಪ ಮಕ್ಕಳಲ್ಲಿ ನುಡಿ ನೆಲೆಗೊಳ್ಳುವ ಬಗೆಗಿಂತ ಬೇರೆಯೇ ಆಗಿರುತ್ತದೆ. ಚಿಂಪಾಂಜಿಗೆ ನುಡಿ ಕಲಿಸುವವರು ಮಾತಾಡುತ್ತಲೇ ಕೆಲವು ದೈಹಿಕ ಸನ್ನೆಗಳನ್ನು ಮಾಡುತ್ತಿರುತ್ತಾರೆ. ಆ ಮೂಲಕವೇ ತಾವು ಹೇಳುತ್ತಿರುವುದನ್ನು ಚಿಂಪಾಂಜಿ ನೋಡುವ ಮತ್ತು ಕೇಳುವ ಕೆಲಸದಲ್ಲಿ ತೊಡಗಿರುವಂತೆ ನೋಡಿಕೊಳ್ಳುತ್ತಾರೆ ಈ ಕಲಿಸುವ ಕೆಲಸದ ಕೊನೆಗೆ ಚಿಂಪಾಂಜಿಯು ತಾನು ಕಲಿತ ಪದಗಳ ಉಚ್ಚಾರಣೆಯನ್ನು ಗ್ರಹಿಸುವ ಮತ್ತು ಜೊತೆಯ ಸನ್ನೆಯನ್ನು ತಿಳಿದುಕೊಳ್ಳುವ ಕೆಲಸದಲ್ಲಿ ತೊಡಗಿರುತ್ತದೆ. ಇನ್ನು ಚಿಂಪಾಂಜಿ ನುಡಿಯಲಾರದಷ್ಟೆ. ಅದು ಏನನ್ನಾದರೂ ಹೇಳಬೇಕಾದರೆ ದೈಹಿಕ ಸನ್ನೆಗಳನ್ನು ಮಾತ್ರ ಬಳಸಬಲ್ಲದು. ಹಾಗೆ ಬಳಸುವಾಗಲೂ ಕೂಡಾ ತಾನು ಕಲಿತ ಪದದ ಯಥಾವತ್ ಬಿಂಬವನ್ನು ಬಳಸುತ್ತದೆ. ಆ ಪದವನ್ನು ಬಳಸಿ ಬೇರೆ ಪದಗಳನ್ನು ಕಟ್ಟಲಾರದು. ಉದಾ.ಗೆ ಅದು ಸೇಬು ಪದವನ್ನು ಕಲಿಯಬಹುದು. ಆದರೆ ಸೇಬುಗಳು ಎಂಬ ರೂಪವನ್ನು ಕಟ್ಟಲಾರದು. ಈಗಾಗಲೇ ಹೇಳಿದಂತೆ ಅದು ಮಾತಾಡುವಾಗ ಸನ್ನೆಗಳನ್ನು ಮಾತ್ರ ಬಳಸುತ್ತದೆ. ತಾನು ಕಲಿತ ಪದಗಳನ್ನು ಹಲವು ಉದ್ದೇಶಗಳಿಗೆ ಅದು ಬಳಸಿಕೊಳ್ಳುತ್ತದೆ. ಉದಾ.ಗೆ ಅದಕ್ಕೆ ನೀಡುವ ಸೇಬು ಒಂದು ಬುಟ್ಟಿಯಲ್ಲಿ

ಇರುತ್ತದೆಂದುಕೊಳ್ಳಿ. ಚಿಂಪಾಂಜಿಯು ಸೇಬು ಬೇಕಾದಾಗ ಬುಟ್ಟಿಯನ್ನು ತೋರಿಸುತ್ತಾ ಸೇಬು ಪದದ ಸನ್ನೆಯನ್ನು ಮಾಡುತ್ತದೆ. ಮಾನವ ನುಡಿಯ ಚಹರೆಗಳಲ್ಲಿ ಈ ಯಾವ ಮಿತಿಗಳೂ ಇರುವುದಿಲ್ಲವೆಂಬುದನ್ನು ಗಮನಿಸಬೇಕು.

ಚಿಂಪಾಂಜಿಯ ನುಡಿಕಲಿಕೆಯಲ್ಲಿ ಇರುವ ಉಲಿ ಮತ್ತು ಸನ್ನೆಗಳ ಬೆರಕೆಯು ಹಲವಾರು ಚಿಂತನೆಗಳಿಗೆ ಕಾರಣವಾಗಿವೆ. ಸಾಮಾನ್ಯವಾಗಿ ಮಗುವಿನಲ್ಲಿ ನುಡಿ ನೆಲೆಗೊಳ್ಳುವಿಕೆಯ ಆರಂಭವನ್ನು ಅದು ಉಲಿಗಳಲ್ಲಿ ಉಂಟುಮಾಡುವುದನ್ನು ಆರಂಭಿಸುವ ಹಂತದಿಂದ ಗುರುತಿಸುವುದುಂಟು ಈ ಉಲಿಗಳ ಉತ್ಪಾದನೆಯ ನಿಯಂತ್ರಣವು ಮೆದುಳು ಮತ್ತು ಸ್ನಾಯುಗಳ ಸಂಬಂಧವನ್ನು ಅವಲಂಬಿಸಿದೆ. ಉಲಿ ಉಂಟು ಮಾಡಲು ಇರುವ ಅಂಗಗಳ ಚಲನವಲನಗಳನ್ನು ಮೆದುಳಿನ ಗೊತ್ತಾದ ಭಾಗವೊಂದು ನಿರ್ದೇಶಿಸುತ್ತದೆ. ಈ ಹಂತವನ್ನು ಮೆದುಳಿನ ಬೆಳವಣಿಗೆಯು ತಲುಪಿದ ಮೇಲೆಯೇ LAD ಜಾಗ್ರತವಾಗುತ್ತದೆಂದು ತಿಳಿಯಲಾಗುತ್ತಿತ್ತು.

ಚಾಮ್‌ಸ್ಕಿ ಮಾನವರ ನುಡಿಗಳಿಕೆಯ ನೆಲೆಯನ್ನು ವಿವರಿಸಲು ಹುಟ್ಟಿನಿಂದಲೇ ಮೆದುಳಿನಲ್ಲಿ LAD ಎಂಬ ವ್ಯವಸ್ಥೆ ಇರಲೇಬೇಕೆಂಬ ಆಧಾರ ಕಲ್ಪನೆಯನ್ನು ಮಾಡಿದ್ದರೂ ಎರಡು ಪ್ರಶ್ನೆಗಳು ಪರಿಹಾರವಾಗದೆ ಉಳಿದಿದ್ದವು. ಒಂದು LAD ಎಂಬುದು ಮೆದುಳಿನಲ್ಲಿ ಕ್ರಿಯಾಶೀಲವಾಗುವುದಕ್ಕೂ ಮಗುವು ದನಿಗಳನ್ನು ಕೇಳುವ ಮತ್ತು ನುಡಿಯುವ ಕಸುವನ್ನು ನಿಯಂತ್ರಿಸುವ ಮೆದುಳಿನ ಭಾಗವು ಕ್ರಿಯಾಶೀಲವಾಗುವುದಕ್ಕೂ ನೇರವಾದ ನಂಟು ಇದೆಯೇ? ಎರಡು, LAD ಎಂಬ ವ್ಯವಸ್ಥೆಯ ಸ್ವರೂಪ ಎಂಥದು? ಕಳೆದ ಮೂರು ದಶಕಗಳಲ್ಲಿ ನಡೆದಿರುವ ಅಧ್ಯಯನಗಳು ಮತ್ತು ಪ್ರಯೋಗಗಳು ಈ ಪ್ರಶ್ನೆಗಳನ್ನು ಬಿಡಿಸುವಲ್ಲಿ ಸಾಕಷ್ಟು ಯಶಸ್ಸನ್ನು ಪಡೆದಿವೆ.

ನಿಮ್ ಚಿಂಪ್‌ಸ್ಕಿ ಎಂಬ ಚಿಂಪಾಂಜಿಯು ನುಡಿ ಕಸುವನ್ನು ಪಡೆದ ಬಗೆಯನ್ನು ಗಮನಿಸುವಾಗ ಒಂದು ಸಂಗತಿ ಸ್ಪಷ್ಟವಾಗಿದೆ. ಚಿಂಪಾಂಜಿಯು ನುಡಿ ಕಲಿಸುವವರ ದನಿಗಳನ್ನು ಗಮನಿಸುತ್ತಿತ್ತೋ ಅಥವಾ ಸಂವಾದಿಯಾದ ದೈಹಿಕ ಚಿಹ್ನೆಗಳನ್ನು ಗಮನಿಸುತ್ತಿತ್ತೋ? ಅಥವಾ ಎರಡೂ ಪೂರಕವಾಗಿ ಪ್ರಭಾವ ಬೀರುತ್ತಿದ್ದವೋ? ಇದೇ ನಿಟ್ಟಿನಲ್ಲಿ ನೋಡುವುದಾದರೆ ಚಿಂಪಾಂಜಿಯು ಮಾತನಾಡುವಾಗ ಈಗಾಗಲೇ ಗಮನಿಸಿದಂತೆ ಕೆಲವು ಉಲಿಗಳನ್ನು ಹೊರಡಿಸುವುದರ ಜತೆಗೆ ದೈಹಿಕ ಚಿಹ್ನೆಗಳನ್ನು ಬಳಸುತ್ತಿತ್ತು. ನಿಮ್‌ಚಿಂಪ್‌ಸ್ಕಿಯ ಈ 'ಕಲಿಕೆ'ಯ ಚಹರೆಗಳನ್ನು ಆಧರಿಸಿಯೇ ಮುಂದೆ ಹಲವು ಪ್ರಯೋಗಗಳನ್ನು ರೂಪಿಸಲಾಯಿತು.

ಮಾನವರಲ್ಲಿ ಉಲಿಗಳನ್ನು ಬಳಸುವ ನುಡಿ ಇರುವಂತೆ ಸನ್ನೆಗಳನ್ನು ಬಳಸುವ ನುಡಿಯೂ ಇದೆಯಷ್ಟೆ. ಹುಟ್ಟಿನಿಂದಲೇ ಕಿವುಡರು, ಮೂಕರು ಆಗಿರುವವರು ಪರಸ್ಪರ ಈ ಸನ್ನೆ ನುಡಿಯನ್ನು ಬಳಸುತ್ತಾರೆ. ಉಲಿಗಳನ್ನು ಬಳಸುವ ನುಡಿಯನ್ನು ಆಡಬಲ್ಲವರು ಕೂಡಾ ಇಂಥವರೊಡನೆ ಸನ್ನೆ ನುಡಿಯನ್ನೇ ಬಳಸುವುದುಂಟಷ್ಟೇ. ಸಾಮಾನ್ಯ ಗ್ರಹಿಕೆಗೆ ಸನ್ನೆನುಡಿಯು ಸಂವಹನಕ್ಕಾಗಿ ಮಾಡಿಕೊಂಡ ಒಂದು ತಾತ್ಪೂರ್ತಿಕ ವ್ಯವಸ್ಥೆಯೆಂದು ತೋರುತ್ತದೆ ಅಲ್ಲದೆ ಅದಕ್ಕೊಂದು ಸುವ್ಯವಸ್ಥಿತವಾದ ಚೌಕಟ್ಟು ಇದೆ ಎಂಬುದನ್ನು

ಬಹಳಷ್ಟು ಜನ ತಿಳಿದಿಲ್ಲ. ಆದರೆ ಸನ್ನೆನುಡಿಯೂ ಕೂಡ ನಾವು ಬಳಸುವ ನುಡಿಯಂತೆಯೇ ಒಂದು ರಾಚನಿಕ ವ್ಯವಸ್ಥೆಯನ್ನು ಹೊಂದಿರುತ್ತದೆ. ಅದಕ್ಕೆ ವ್ಯಾಕರಣವೂ ಕೂಡಾ ಇರುತ್ತದೆ. ಮಾನವರಲ್ಲಿ ಹಲವು ಬಗೆಯ ಆಡುನುಡಿಗಳಿರುವಂತೆ ಸನ್ನೆನುಡಿಗಳಲ್ಲೂ ಹಲವು ಬಗೆಗಳಿವೆ. ಆಡುನುಡಿಗಳಷ್ಟು ಹೆಚ್ಚಿನ ಸಂಖ್ಯೆಯಲ್ಲಿಲ್ಲದಿದ್ದರೂ ಜಗತ್ತಿನಾದ್ಯಂತ ಹಲವಾರು ಸನ್ನೆನುಡಿ ವ್ಯವಸ್ಥೆಗಳು ಬಳಕೆಯಲ್ಲಿವೆ.

ಆಡುನುಡಿಗೂ ಸನ್ನೆನುಡಿಗೂ ಇರುವ ನಂಟನ್ನು ಆಧರಿಸಿಯೇ ಹಲವು ಪ್ರಯೋಗಗಳನ್ನು ರೂಪಿಸಲಾಯಿತು. ಒಂದೇ ನುಡಿಯ ಪರಿಸರದಲ್ಲಿ ಮಗುವೊಂದು ಬೆಳೆಯುತ್ತಿದೆ ಎಂದುಕೊಳ್ಳಿ. ಇನ್ನೊಂದು ಕಡೆ ಹುಟ್ಟಿನಿಂದಲೇ ಕಿವುಡು ಮತ್ತು ಮೂಕವಾಗಿರುವ ಮಗುವೊಂದು ಇನ್ನೊಂದು ಆಡುನುಡಿಯಿರುವ ಪರಿಸರದಲ್ಲಿ ಬೆಳೆಯುತ್ತಿದೆ ಎಂದುಕೊಳ್ಳಿ. ನಮ್ಮ ಸಾಮಾನ್ಯ ಗ್ರಹಿಕೆಗೆ ಮಾತಿನ ಕಸುವುಳ್ಳ ಮಗುವು ಬೇಗ ನುಡಿಕಸುವನ್ನು ಪಡೆಯುತ್ತದೆಂದೂ ಮಾತಿನ ಕಸುವು ಇರದ ಮಗುವು ಸನ್ನೆ ನುಡಿಕಸುವನ್ನು ಪಡೆಯಲು ತಡವಾಗುತ್ತದೆಂದೂ ಅನ್ನಿಸಬಹುದು. ಆದರೆ ಪ್ರಯೋಗಗಳು ಇದಕ್ಕೆ ವಿರುದ್ಧವಾಗಿ ಫಲಿತಾಂಶಗಳನ್ನು ನೀಡಿದವು. ಎರಡೂ ಮಕ್ಕಳಲ್ಲಿ ತಂತಮ್ಮ (ಆಡುನುಡಿ ಮತ್ತು ಸನ್ನೆನುಡಿ) ನುಡಿ ಕೌಶಲಗಳು ಸಮಾನಾಂತರವಾಗಿಯೇ ಬೆಳೆಯುತ್ತಿದ್ದುದು ಗೊತ್ತಾಯಿತು. ಅಂದರೆ ಮೆದುಳಿನ ಬೆಳವಣಿಗೆಯ ನಿರ್ದಿಷ್ಟ ಹಂತಗಳಲ್ಲಿ ಇಬ್ಬರೂ ಮಕ್ಕಳು ನುಡಿಗಳಿಕೆಯ ಗೊತ್ತಾದ ಹಂತಗಳನ್ನು ತಲುಪುತ್ತಿದ್ದರು.

ಈ ಪ್ರಯೋಗವನ್ನು ಇನ್ನೂ ಸಂಕೀರ್ಣ ನೆಲೆಗೆ ಒಯ್ಯಲಾಯಿತು. ಒಂದು ಮಗು ಏಕಕಾಲಕ್ಕೆ ಎರಡು ಆಡುನುಡಿಗಳ ಪರಿಸರದಲ್ಲಿ ಬೆಳೆಯುತ್ತಿದೆ ಎಂದುಕೊಳ್ಳಿ. ಆ ಮಗುವಿನಲ್ಲಿ ಆ ಎರಡೂ ನುಡಿಗಳು ನೆಲೆಗೊಳ್ಳುತ್ತವೆ. ಆ ಎರಡೂ ನುಡಿಗಳ ಗಳಿಕೆ ಮತ್ತು ಪಡೆದ ಕಸುವುಗಳಲ್ಲಿ ಏರುಪೇರುಗಳು ಇರುವುದಿಲ್ಲ. ಅಂದರೆ ಒಂದು ಮಗು ಕನ್ನಡ ಮಾತಾಡುವ ತಂದೆ ಮತ್ತು ತೆಲುಗು ಮಾತಾಡುವ ತಾಯಿ ಇವರಿಬ್ಬರ ಜೊತೆಯಲ್ಲಿ ಬೆಳೆಯುತ್ತಿದೆ ಎಂದುಕೊಳ್ಳಿ. ಪರಿಸರದ ನಂಟರು ಈ ಎರಡೂ ನುಡಿಗಳನ್ನು ಬಳಸುತ್ತಿರುತ್ತಾರೆ ಎಂದುಕೊಳ್ಳೋಣ. ಮಗುವು ಯಾವ ಗೊಂದಲವೂ ಇಲ್ಲದೆ ಈ ಎರಡೂ ನುಡಿಗಳ ಕಸುವನ್ನು ಪಡೆದುಕೊಳ್ಳುತ್ತದೆ. ಒಂದೇ ಒಂದು ನುಡಿ ಪರಿಸರದಲ್ಲಿ ಬೆಳೆಯುತ್ತಿರುವ ಮಗುವಿನ ನುಡಿಗಳಿಕೆಯ ಹಂತಗಳಿಗೂ ಎರಡು ಆಡುನುಡಿಗಳ ಪರಿಸರದಲ್ಲಿ ಬೆಳೆದ ಮಗುವಿನ ನುಡಿಗಳಿಕೆಯ ಹಂತಗಳಿಗೂ ಯಾವ ವ್ಯತ್ಯಾಸಗಳೂ ಇರುವುದಿಲ್ಲ.

ಇದೇ ಮಾದರಿಯನ್ನು ಸನ್ನೆನುಡಿಗಳ ಸಂದರ್ಭದಲ್ಲೂ ಬಳಸಲಾಯಿತು. ಎರಡು ಬೇರೆ ಬೇರೆ ಸನ್ನೆ ನುಡಿಗಳನ್ನು ಬಳಸುವ ತಂದೆತಾಯಂದಿರ ಮಗುವು ಆ ಎರಡೂ ಸನ್ನೆನುಡಿಗಳ ಕಸುವನ್ನು ಸಮ ಪ್ರಮಾಣದಲ್ಲಿ ಪಡೆದದ್ದನ್ನು ಪ್ರಯೋಗಗಳು ತೋರಿಸಿಕೊಟ್ಟಿವೆ. ಈ ಪ್ರಯೋಗದಲ್ಲಿ ಎರಡು ಅಂಶಗಳು ಸ್ಪಷ್ಟಗೊಂಡವು. 1) ಒಂದೇ ಸನ್ನೆನುಡಿಯ ಪರಿಸರದಲ್ಲಿ ಬೆಳೆಯುತ್ತಿರುವ ಮಗುವಿನ ನುಡಿಗಳಿಕೆಯ ಹಂತಗಳು ಮತ್ತು ಎರಡು ಬೇರೆ ಬೇರೆ ಸನ್ನೆ ನುಡಿಗಳು ಬಳಕೆಯಲ್ಲಿರುವ ಪರಿಸರದಲ್ಲಿ ಬೆಳೆದ ಮಗುವಿನ ನುಡಿಗಳಿಕೆಯ ಹಂತಗಳಿಗೂ ಯಾವ ವ್ಯತ್ಯಾಸವೂ ಕಂಡುಬರಲಿಲ್ಲ.

2) ಬೇರೆ ಬೇರೆ ಎರಡು ಆಡುನುಡಿಗಳ ಪರಿಸರದಲ್ಲಿ ಬೆಳೆದ ಮಗುವಿನ ನುಡಿಗಳಿಕೆಯ ಹಂತಗಳಿಗೂ ಬೇರೆಬೇರೆ ಎರಡು ಸನ್ನೆನುಡಿಗಳ ಪರಿಸರದಲ್ಲಿ ಬೆಳೆದ ಮಗುವಿನ ನುಡಿಗಳಿಕೆಯ ಹಂತಗಳಿಗೂ ಯಾವ ವ್ಯತ್ಯಾಸವೂ ಕಂಡುಬರಲಿಲ್ಲ.

ಇದೇ ಪ್ರಯೋಗವನ್ನು ಇನ್ನೂ ಬೇರೆಯ ಸನ್ನಿವೇಶಗಳಲ್ಲಿ ಮಾಡಲಾಯಿತು. ಸನ್ನೆನುಡಿಯನ್ನು ಮಾತ್ರವಷ್ಟೇ ಬಳಸಬಲ್ಲ ತಂದೆ ತಾಯಿಗಳ ಮಗುವೊಂದಕ್ಕೆ ದನಿಗಳನ್ನು ಕೇಳಿಸಿಕೊಳ್ಳುವ ಮತ್ತು ಉಚ್ಚರಿಸುವ ಸಾಮರ್ಥ್ಯವಿದೆ ಎಂದುಕೊಳ್ಳಿ. ಅಂದರೆ ಅದು ಹುಟ್ಟಿನಿಂದಲೇ ಕಿವುಡು ಇಲ್ಲವೇ ಮೂಕ ಮಗುವಲ್ಲ. ಇಂಥ ಮಗುವು ಆಡುನುಡಿ ಮತ್ತು ಸನ್ನೆನುಡಿಗಳ ಕಸುವನ್ನು ಏಕಕಾಲಕ್ಕೆ ಪಡೆದದ್ದು ಕಂಡುಬಂತು. ಅಲ್ಲದೆ ಆ ಎರಡೂ ನುಡಿಗಳನ್ನು ಪಡೆಯುವ ಹಂತಗಳಲ್ಲಿ ಏರುಪೇರುಗಳು ಕಂಡುಬರಲಿಲ್ಲ.

ಆಡುನುಡಿ ಮತ್ತು ಸನ್ನೆನುಡಿಗಳ ಪರಿಸರಗಳಲ್ಲಿ ಬೆಳೆಯುವ ಮಕ್ಕಳ ನುಡಿಗಳಿಕೆಯನ್ನು ಅಧ್ಯಯನ ಮಾಡಿದ ಈ ಪ್ರಯೋಗಗಳು ಇನ್ನೂ ಹಲವು ಸಂಕೀರ್ಣ ಸನ್ನಿವೇಶಗಳನ್ನು ರೂಪಿಸಿಕೊಂಡಿರುವುದುಂಟು. ಒಂದೇ ಆಡುನುಡಿ ಮತ್ತು ಸನ್ನೆನುಡಿಯ ಕಸುವುಗಳನ್ನು ಪಡೆದುಕೊಳ್ಳುವಲ್ಲಿ ಮಕ್ಕಳ ಮೆದುಳು ಯಾವುದಾದರೂ ಆಯ್ಕೆಯನ್ನು ಮಾಡುವುದೇ ಎಂಬುದನ್ನು ಗೊತ್ತು ಮಾಡುವುದು ಈ ಎಲ್ಲ ಪ್ರಯೋಗಗಳ ಗುರಿ. ಅಲ್ಲದೆ, ಆಡುನುಡಿ ಮತ್ತು ಸನ್ನೆನುಡಿಗಳನ್ನು ಗಳಿಸುವ ಹಂತಗಳಿಗೂ ಮೆದುಳಿನ ಬೆಳವಣಿಗೆಯ ವಿವಿಧ ಹಂತಗಳಿಗೂ ಇರುವ ಸಂಬಂಧದ ಸ್ವರೂಪವನ್ನು ಗೊತ್ತು ಮಾಡಬೇಕಿತ್ತು. ಆದರೆ ಈ ಎಲ್ಲ ಅಧ್ಯಯನಗಳೂ ಒಂದು ಸಂಗತಿಯನ್ನು ಸ್ಪಷ್ಟವಾಗಿ ದೃಢಪಡಿಸಿದೆ. ಮಗುವಿನ ಮೆದುಳಿನ ಬೆಳವಣಿಗೆಯ ವಿವಿಧ ಹಂತಗಳಿಗೂ ನುಡಿ ಕಸುವು ನೆಲೆಗೊಳ್ಳುವ ವಿವಿಧ ಹಂತಗಳಿಗೂ ಇರುವ ನಂಟು ಆಡುನುಡಿ ಮತ್ತು ಸನ್ನೆನುಡಿಗಳ ಸಂದರ್ಭದಲ್ಲಿ ಬೇರೆಬೇರೆ ಆಗಿರುವುದಿಲ್ಲ. ಈ ಪ್ರಯೋಗಗಳು ಮಾನವ ಮೆದುಳು ಆಡುನುಡಿ ಕಸುವನ್ನು ಉದ್ದೀಪಿಸುವ ಮೂಲ ಉದ್ದೇಶವನ್ನು ಹೊಂದಿರಬಹುದು ಎಂಬ ಊಹೆಯನ್ನು ಸುಳ್ಳಾಗಿಸುತ್ತದೆ. ಅಂದರೆ ಉಲಿಗಳನ್ನು ಉತ್ಪಾದಿಸುವ ಅಂಗಾಂಗಗಳು ಮತ್ತು ಅವುಗಳ ನಿಯಂತ್ರಣ ಮಾಡುವ ಮೆದುಳಿನ ಭಾಗದ ಬೆಳವಣಿಗೆಗೂ ನುಡಿ ಕಸುವನ್ನು ನೆಲೆಗೊಳಿಸುವ LAD ಜಾಗ್ರತಗೊಳ್ಳುವ ಹಂತಕ್ಕೂ ನೇರವಾದ ಸಂಬಂಧವಿಲ್ಲ ಎಂಬುದು ಇದರಿಂದ ಗೊತ್ತಾಗುತ್ತದೆ.

ನುಡಿಕಸುವು ಎಂಬುದು ಉಲಿಸಂಬಂಧವನ್ನು ಹೊಂದಿರುವುದು ಒಂದು ಆಕಸ್ಮಿಕ. ವಾಸ್ತವವಾಗಿ ನುಡಿಕಸುವು ಎಂಬುದು ಮೆದುಳಿನ ಒಂದು ಅಂತಃಸಾಮರ್ಥ್ಯವಾಗಿದೆ. ಅದು ಸ್ವತಂತ್ರವಾಗಿ ಪರಿಕಲ್ಪನೆಗಳ ಜಗತ್ತನ್ನು ರೂಪಿಸಿಕೊಳ್ಳಲು ಶಕ್ತವಾಗಿದೆ. (ಆಲೋಚನೆಗೂ ಉಲಿಗಳಲ್ಲಿ ಮೈದಳೆಯುವ ನುಡಿಗೂ ಬಿಡಿಸಲಾಗದ ನಂಟು ಇದೆ ಎಂಬ ಸಾಮಾನ್ಯ ಗ್ರಹಿಕೆಯನ್ನು ಈ ಅಧ್ಯಯನಗಳು ತಳ್ಳಿಹಾಕುತ್ತದೆ.

ನಿಮ್ ಚಿಂಪ್ಸ್‌ಕಿಗೆ ನುಡಿಕಸುವನ್ನು ಕಲಿಸಲು ಹೊರಟವರು ಗೆದ್ದರೋ ಸೋತರೋ ಎಂಬುದೀಗ ಮುಖ್ಯವಲ್ಲ. ಆ ಚಿಂಪಾಂಜಿಯು 'ಗಳಿಸಿದ' ನುಡಿ ಕಸುವಿನ ಮಿತಿಯನ್ನು ಕಂಡುಕೊಳ್ಳುತ್ತಲೇ ಮೆದುಳಿನಲ್ಲಿ ಅಂತಸ್ಥವಾಗಿರುವ ನುಡಿಸಾಮರ್ಥ್ಯದ ಸ್ವರೂಪವನ್ನು

ಅರಿತುಕೊಳ್ಳಲು ಚಿಂಪಾಂಜಿಯ ನುಡಿಕಲಿಕೆಯ ಪ್ರಯೋಗ ಪ್ರಚೋದನೆಯಾಗಿದ್ದಂತೂ ನಿಜ. ಅಲ್ಲದೆ ಆಡುನುಡಿಯ ಉಲಿಜಗತ್ತಿಗೂ ಮಾನವರ ನುಡಿ ಸಾಮರ್ಥ್ಯಕ್ಕೂ ಬಿಡಿಸಲಾಗದ ನಂಟು ಇದೆ ಎಂಬ ಸಾಮಾನ್ಯ ಗ್ರಹಿಕೆಯ ತಿಳುವಳಿಕೆಯ ಮಿತಿಗಳು ಇದರಿಂದ ಗೊತ್ತಾಗುವಂತಾಯಿತು.

ಪ್ಲೇಟೋ ಸಮಸ್ಯೆ

ನೋಂ ಚಾಮ್‌ಸ್ಕಿ ಒಂದು ಸಂದರ್ಭದಲ್ಲಿ ಮಾನವ ಸಮಾಜವನ್ನು ವಿವರಿಸುವಾಗ ಎದುರಾಗುವ ಸಮಸ್ಯೆಗಳನ್ನು ಎರಡು ಬಗೆಗಳಲ್ಲಿ ವಿಂಗಡಿಸುತ್ತಾರೆ ಒಂದು ಪ್ಲೇಟೋ ಸಮಸ್ಯೆ. ಇನ್ನೊಂದು ಆರ್ವೆಲ್ ಸಮಸ್ಯೆ. ಕನಿಷ್ಟ ಪ್ರಮಾಣದ ಮಾಹಿತಿ ದೊರೆತರೂ ಅದರಿಂದ ಅಗಾಧ ಪ್ರಮಾಣದ ತಿಳಿವನ್ನು ಪಡೆಯಬಲ್ಲ ಮನುಷ್ಯರ ಸಾಮರ್ಥ್ಯವನ್ನು ಚಾಮ್‌ಸ್ಕಿ ಪ್ಲೇಟೋ ಸಮಸ್ಯೆ ಎನ್ನುತ್ತಾರೆ. ಅಗಾಧ ಪ್ರಮಾಣದ ಮಾಹಿತಿ ಸಾಮಗ್ರಿ ಎದುರಿಗಿದ್ದಾಗಲೂ ಅದರಿಂದ ಕನಿಷ್ಟ ತಿಳಿವನ್ನು ಪಡೆಯಲಾಗದೆ ಹೋಗುವ ಮನುಷ್ಯರ ಸ್ಥಿತಿಯನ್ನು ವಿವರಿಸುವಾಗ ಅರ್ವೆಲ್ ಸಮಸ್ಯೆ ಎಂದು ಗುರುತಿಸುತ್ತಾರೆ. ಜಾಜ್ ಅರ್ವೆಲ್ ಎಂಬ ಇಂಗ್ಲಿಷ್ ಚಿಂತಕನ ಬರಹಗಳಿಂದ ಚಾಮ್‌ಸ್ಕಿ ಈ ಸಮಸ್ಯೆಯ ಸ್ವರೂಪವನ್ನು ಗ್ರಹಿಸುತ್ತಾರೆ. ನಮ್ಮ ಸದಸ್ಯದ ಚರ್ಚೆಗೆ ಈ ಕುರಿತ ಹೆಚ್ಚಿನ ವಿವರಗಳು ಬೇಕಿಲ್ಲ.

ಈ ಪ್ಲೇಟೋ ಸಮಸ್ಯೆಗೆ ಬರೋಣ. ಪ್ಲೇಟೋ ನಾವು ಬಲ್ಲಂತೆ ಗ್ರೀಸ್ ದೇಶದ ಮಹಾನ್ ಚಿಂತಕ. ಆತ ಮನುಷ್ಯನ ಇರವನ್ನು ಬಣ್ಣಿಸಲು ಒಂದು ರೂಪಕವನ್ನು ಬಳಸುತ್ತಾನೆ. ಒಂದು ಗುಹೆ ಇದೆ ಎಂದುಕೊಳ್ಳಿ. ಗುಹೆಯ ಬಾಗಿಲಿನಿಂದ ಮಾತ್ರ ಬೆಳಕು ಒಳಬರಬಲ್ಲದು. ಬಾಗಿಲಿಗೆ ಬೆನ್ನು ಮಾಡಿ ಮನುಷ್ಯ ಕುಳಿತಿದ್ದಾನೆ. ಆತನಿಗೆ ಗುಹೆಯ ಒಳಬಾಗದ ಮತ್ತು ಬಾಗಿಲಿಗೆ ಎದುರಾಗಿರುವ ಗೋಡೆ ಮಾತ್ರ ಕಾಣುತ್ತದೆ. ಗುಹೆಯ ಹೊರಗೆ ಆದರ್ಶ ಜಗತ್ತು ಇದೆ ಅದರ ಬಿಂಬಗಳು ಗುಹೆಯ ಗೋಡೆಯ ಮೇಲೆ ನೆರಳಾಗಿ ಮಸುಕು ಮಸುಕಾಗಿ ಅಲ್ಲಿ ಕುಳಿತ ಮನುಷ್ಯನಿಗೆ ಕಾಣುತ್ತದೆ. ಈ ಸನ್ನಿವೇಶವನ್ನು ಕಲ್ಪಿಸಿಕೊಂಡು ಪ್ಲೇಟೋ ಒಂದು ಪ್ರಶ್ನೆಯನ್ನು ನಮ್ಮೆದುರು ಇಡುತ್ತಾನೆ. ಗುಹೆಯ ಗೋಡೆಯ ಮೇಲೆ ಕಂಡ ಮಸುಕಾದ ನೆರಳಿನ ಬಿಂಬಗಳನ್ನಷ್ಟೇ ನೋಡಿ ತಾನು ಕಾಣದ ಮತ್ತು ಕಾಣಲಾಗದ ಆದರ್ಶ ಜಗತ್ತಿನ ಚಿತ್ರಣವನ್ನು ಮನುಷ್ಯ ಕಲ್ಪಿಸಿಕೊಳ್ಳಲು ಸಾಧ್ಯವಾಗುವುದಾದರೂ ಹೇಗೆ? ಪ್ಲೇಟೋ ಈ ಪ್ರಶ್ನೆಗೆ ಕೊಟ್ಟ ಉತ್ತರ ಸದ್ಯ ನಮಗೆ ಮುಖ್ಯವಲ್ಲ. ಆತ ಎತ್ತಿದ ಪ್ರಶ್ನೆಯನ್ನು ಚಾಮ್‌ಸ್ಕಿ ಮಾನವರ ನುಡಿಗಳಿಕೆಯ ಸಮಸ್ಯೆಯನ್ನು ಬಿಡಿಸಲು ಬಳಸಿಕೊಳ್ಳುತ್ತಾರೆ.

ಮಾನವರು ನುಡಿ ಕಸುವನ್ನು ಗಳಿಸಿಕೊಳ್ಳುವುದು ಹೇಗೆ? ಸಾಮಾನ್ಯ ಗ್ರಹಿಕೆಯಂತೆ ಮಕ್ಕಳು ನುಡಿಕಸುವನ್ನು ಕಲಿಕೆಯ ಮೂಲಕ ಪಡೆಯುತ್ತಾರೆ. ಆದರೆ ದಿಟವಾಗಿ, ಮಕ್ಕಳು ನುಡಿಗಳಿಕೆಯ ಹಂತದಲ್ಲಿ ಹೊರಜಗತ್ತಿನಿಂದ ಅಂದರೆ ಪರಿಸರದಿಂದ ಪಡೆದುಕೊಳ್ಳುವ ನುಡಿಸಾಮಗ್ರಿಯು ತುಂಬಾ ಕಡಿಮೆ. ಅಲ್ಲದೆ, ಅದು ಅವ್ಯವಸ್ಥಿತವಾಗಿರುತ್ತದೆ. ಪ್ಲೇಟೋ ಕಲ್ಪಿಸುವ ಗುಹೆಯ ಒಳ ಗೋಡೆಯ ಮೇಲೆ ಬಿದ್ದ ಮಸುಕಾದ ಬಿಂಬಗಳು ತರುತ್ತದೆ. ಆದರೂ ಅಷ್ಟು ಕನಿಷ್ಟ ಸಾಮಗ್ರಿಯಿಂದಲೇ

ಮಕ್ಕಳು ಅತ್ಯಂತ ಸುವ್ಯವಸ್ಥಿತವಾದ ನುಡಿ ವ್ಯವಸ್ಥಿತೆಯನ್ನು ಪಡೆದುಕೊಳ್ಳಲು ಹೇಗೆ ಸಾಧ್ಯವಾಗುತ್ತದೆ? ಇದನ್ನು ಕಲಿಕೆ ಎನ್ನಲು ಆಗುವುದಿಲ್ಲ.

ಒಂದು ಉದಾಹರಣೆಯನ್ನು ನೋಡೋಣ.

1. ಅವನು ಮರವನ್ನು ಕಡಿದ

2. ಅವನು ಮರ ಕಡಿದ

ಈ ಎರಡೂ ವಾಕ್ಯಗಳು ಕನ್ನಡದಲ್ಲಿ ಸರಿಯಾದ ವಾಕ್ಯಗಳೇ ಆಗಿವೆ. ಶಾಲಾ ವ್ಯಾಕರಣಗಳು ಈ ಎರಡೂ ವಾಕ್ಯಗಳ ನಡುವೆ ಇರುವ ವ್ಯತ್ಯಾಸವನ್ನು ಹೀಗೆ ವಿವರಿಸುತ್ತದೆ. ಅವನು ಮರವನ್ನು ಕಡಿದ ಎಂಬ ವಾಕ್ಯದಲ್ಲಿ ಮರ ಎಂಬ ಅನುಭೋಗಿ ಪದಕ್ಕೆ ದ್ವಿತಿಯಾ ವಿಭಕ್ತಿ ಪ್ರತ್ಯಯ **ಅನ್ನು** ಎಂಬುದು ಸೇರುತ್ತದೆ. **ಅವನು ಹಣ್ಣನ್ನು ತಿಂದನು, ಅವಳು ತಲೆಯನ್ನು ಬಾಚಿದಳು, ಅದು ಹಿಟ್ಟನ್ನು ತಿಂದಿತು** ಮುಂತಾದವು ಇದೇ ಮಾದರಿಯ ವಾಕ್ಯಗಳು. ಆದರೆ ಅನುಭೋಗಿ ಪದವು ನಪುಂಸಕ ಲಿಂಗವಾಗಿದ್ದರೆ **ಅನ್ನು** ಎಂಬ ಪ್ರತ್ಯಯವನ್ನು ಹತ್ತಿಸದಿದ್ದರೂ ನಡೆಯುತ್ತದೆ. ಹಾಗಾಗಿ **ಅವನು ಮರ ಕಡಿದ** ಎಂಬ ವಾಕ್ಯ ಸರಿಯಾದುದು. **ಅವನು ಮಗಳನ್ನು ಎತ್ತಿಕೊಂಡನು** ಎಂಬ ವಾಕ್ಯದಲ್ಲಿ **ಅನ್ನು** ಎಂಬ ಪ್ರತ್ಯಯವನ್ನು ಬಿಟ್ಟು ಬಿಡಲು ಆಗುವುದಿಲ್ಲ. ಏಕೆಂದರೆ ಆ ವಾಕ್ಯದಲ್ಲಿರುವ ಅನುಭೋಗಿ ಪದವು ನಪುಂಸಕ ಲಿಂಗವಾಗಿಲ್ಲ. ಶಾಲಾವ್ಯಾಕರಣದ ಈ ವಿವರಣೆಯನ್ನು ಒಪ್ಪೋಣ. ಆದರೆ ಕನ್ನಡ ನುಡಿಯನ್ನು ತನ್ನದನ್ನಾಗಿಸಿಕೊಳ್ಳುತ್ತಿರುವ ಮಗುವಿಗೆ ಇದು ಗೊತ್ತಾಗುವುದಾದರೂ ಹೇಗೆ? ಯಾರೂ ಮೇಲೆ ವಿವರಿಸಿದ ರೀತಿಯಲ್ಲಿ ಮಗುವಿಗೆ ತಿಳಿಹೇಳಿರಲಾರರಷ್ಟೆ.

ಇನ್ನೂ ಮುಂದುವರೆದು ಅನುಭೋಗಿ ಪದವನ್ನು ಕ್ರಿಯಾಪದದ ಬಳಿಕ ಇರಿಸಿ ಈ ವಾಕ್ಯವನ್ನು ಬದಲಿಸೋಣ. ಆಗ ಏನಾಗುತ್ತದೆ ನೋಡೋಣ.

ಅವನು ಕಡಿದ ಮರ

ಅವನು ಕಡಿದ ಮರವನ್ನು

ಇವುಗಳಲ್ಲಿ ಮೊದಲನೆಯ ರಚನೆ ಒಪ್ಪಿಗೆಯಾಗುವುದಿಲ್ಲ. ಎರಡನೆಯ ರಚನೆಯನ್ನು ಕನ್ನಡಿಗರು ಉಚ್ಚರಿಸುವಾಗ ಅನುಭೋಗಿ ಪದವನ್ನು **ಮರಾನ** ಇಲ್ಲವೇ **ಮರಾವ** ಎಂದು ನುಡಿಯುತ್ತಾರೆ. ಇದರಿಂದ ಗೊತ್ತಾಗುವುದೇನು? ಅನುಭೋಗಿ ಪದದ ಜೊತೆಗೆ ಸೇರಬೇಕಾದ ಅನ್ನು ಎಂಬ ಪ್ರತ್ಯಯ **ನಾ** ಇಲ್ಲವೇ **ವಾ** ಎಂಬ ಪಳೆಯುಳಿಕೆಯಾಗಿ ಕಾಣಿಸಿಕೊಳ್ಳುತ್ತದೆ.

ಕ್ರಿಯಾಪದಕ್ಕಿಂತ ಮೊದಲು ಬರುವಾಗ **ಅನ್ನು** ಪ್ರತ್ಯಯವನ್ನು ಬಿಡಬಹುದೆಂದೂ ಕ್ರಿಯಾಪದದ ಬಳಿಕ ಇರಿಸುವಾಗ ಅನುಭೋಗಿ ಪದಕ್ಕೆ ಅನ್ನು ಪ್ರತ್ಯಯದ ಪಳೆಯುಳಿಕೆಯನ್ನು ಉಳಿಸಿಕೊಳ್ಳಬೇಕೆಂಬ ನಿಯಮ ಮಗುವಿಗೆ ಗೊತ್ತಾಗುವುದಾದರೂ ಹೇಗೆ?

ಚಾಮ್‌ಸ್ಕಿ ಮಗುವು ನುಡಿಗಳಿಕೆಯನ್ನು ಮಾಡಿಕೊಳ್ಳುವಾಗ ಎದುರಿಸುವ ಸಮಸ್ಯೆಯನ್ನು **ವಿಭಾವಗಳ ರಿಕ್ತತೆ** ಎಂದು ಕರೆಯುತ್ತಾರೆ. [ವಿಭಾವ ಎಂದರೆ ನಮ್ಮಲ್ಲಿ ಒಂದು ಪ್ರತಿಕ್ರಿಯೆಯನ್ನು ಉಂಟು ಮಾಡಲು ಹೊರಜಗತ್ತಿನಿಂದ ದೊರಕುವ ಪ್ರಚೋದನೆ. ಭಯ ಎಂಬ ಪ್ರತಿಕ್ರಿಯೆಗೆ ಹಾವು ವಿಭಾವ ಅಗಿರಬಹುದು] ನುಡಿಗಳಿಕೆಯ ಸಂದರ್ಭದಲ್ಲಿ ಪರಿಸರದಿಂದ ದೊರಕುವ ವಿಭಾವಗಳು ವ್ಯವಸ್ಥಿತವಾಗಿ ಇರುವುದಿಲ್ಲ. ಕಲಿಕೆಗೆ ಅನುಕೂಲವಾಗುವಂತೆ ಜೋಡಣೆಗೊಂಡಿರುವುದಿಲ್ಲ. ಹಾಗಿದ್ದರೂ ಮಗುವು ಅತ್ಯಂತ ಸಂಕೀರ್ಣವಾದ ನಿಯಮಾವಳಿಗಳನ್ನು ತನ್ನದನ್ನಾಗಿ ಮಾಡಿಕೊಂಡಿರುತ್ತದೆ.

ಈ ಸಾಧ್ಯತೆಯನ್ನು ಕೆಲವರು ಎರಡು ರೀತಿಯಲ್ಲಿ ವಿವರಿಸುತ್ತಾರೆ. ಮಕ್ಕಳು ಅನುಕರಣ ಶೀಲರು. ತಾವು ಕೇಳಿದಷ್ಟನ್ನು ಮತ್ತು ಕೇಳಿದ್ದನ್ನು ಮಾತ್ರವೇ ಅನುಕರಿಸುತ್ತಾರೆ. ಹಾಗಾಗಿ ನುಡಿ ರಚನೆಯಲ್ಲಿರುವ ಸಂಕೀರ್ಣ ನಿಯಮಾವಳಿಗಳು ಅವರಿಗೆ ದೊರಕುತ್ತದೆ. ಈ ವಿವರಣೆ ಮೇಲುನೋಟಕ್ಕೆ ಸಾಧುವಲ್ಲವೆಂದು ತಿಳಿಯುವಂತಿದೆ. ಯಾವ ಬಗೆಯ ರಚನೆಗಳು ಸರಿಯಾದವು ಎಂಬುದಕ್ಕೆ ಮಾದರಿಗಳು ಪರಿಸರದಲ್ಲಿ ದೊರಕುತ್ತವೆ ಎಂಬುದನ್ನು ಸದ್ಯಕ್ಕೆ ಒಪ್ಪೋಣ. ಆದರೆ ತಪ್ಪು ರಚನೆಗಳು ಯಾವುವು ಎಂಬುದಕ್ಕೆ ಮಾದರಿಗಳು ದೊರಕುವುದಿಲ್ಲವಷ್ಟೆ. ಹಾಗಿದ್ದಲ್ಲಿ ಸರಿ ತಪ್ಪುಗಳ ನಡುವಣ ವ್ಯತ್ಯಾಸ ಮಗುವಿಗೆ ತಿಳಿಯುವುದು ಹೇಗೆ? ಮೇಲಿನ ವಿವರಣೆಯನ್ನು ನೀಡುವವರು ಮುಂದುವರೆದು ಹೀಗೆ ಹೇಳುತ್ತಾರೆ. ಮಕ್ಕಳು ತಪ್ಪು ವಾಕ್ಯಗಳನ್ನು ಕೇಳುವುದೇ ಇಲ್ಲವಾದ್ದರಿಂದ ಅಂಥ ವಾಕ್ಯಗಳನ್ನು ಅನುಕರಿಸುವ ಪ್ರಸಕ್ತಿಯೇ ಬರುವುದಿಲ್ಲ.

ಅನುಕರಣೆ ಮಾಡುವ ಜೊತೆಗೆ ದೊರೆತ ವಾಕ್ಯಗಳ ಹೋಲಿಕೆಯ ಮೇಲೆ ಹೊಸ ವಾಕ್ಯಗಳನ್ನು ಕಟ್ಟುತ್ತಾರೆಂದು ವಿವರಿಸುವುದುಂಟು. ಈ ಹೋಲಿಕೆ ಮಾಡಬೇಕೆಂಬ ತಿಳುವಳಿಕೆ ಮಕ್ಕಳಿಗೆ ಎಲ್ಲಿಂದ ಬರುತ್ತದೆ? ಅಲ್ಲದೆ ಕೆಲವು ಬಗೆಯ ವಾಕ್ಯಗಳನ್ನು ಹೋಲಿಕೆಯ ಮೇಲೆ ಕಟ್ಟುವುದು ದಿಟವಾದರೆ ಅದು ಎಲ್ಲ ಬಗೆಯ ವಾಕ್ಯಗಳಿಗೂ ಅನ್ವಯಿಸುವುದಿಲ್ಲವೇಕೆ?

ಈ ವಿವರಣೆ ನೀಡುವವರು ಮಕ್ಕಳು ನಿದರ್ಶನಗಳ ಮೂಲಕ ನಿಯಮಗಳನ್ನು ರೂಪಿಸಿ ಕೊಳ್ಳಬಲ್ಲರು ಎಂದು ನಂಬುವಂತೆ ತೋರುತ್ತದೆ. ಈ ಪ್ರಕ್ರಿಯೆ ಅಷ್ಟು ಸರಳವಾದುದಲ್ಲ. ಕಲಿಕೆಯ ಬೇರೆಬೇರೆ ಬಗೆಗಳಲ್ಲಿ ಈ ನಿಯಮ ರೂಪಣೆಯ ಸಾಮರ್ಥ್ಯವನ್ನು ಮಕ್ಕಳಿಗೆ ನಾವು ಹೊರಗಿನಿಂದ ಒದಗಿಸುತ್ತೇವೆ. ಮಕ್ಕಳು ಈ ಕಸುವನ್ನು ಪಡೆಯಲು ಸಾಕಷ್ಟು ಸಮಯವನ್ನು ಕಳೆಯುತ್ತಾರೆ ಎಂಬುದು ಕಲಿಕೆಯ ತಜ್ಞರಿಗೆ ತಿಳಿದ ವಿಷಯ. ಆದರೆ ಹದಿನೆಂಟರಿಂದ ಮುವತ್ತಾರು ತಿಂಗಳಿನ ಅವಧಿಯಲ್ಲಿ ನಿಯಮ ರೂಪಣೆಯ ಕಸುವನ್ನು ಮಕ್ಕಳು ಬಳಸುತ್ತಾರೆ ಎಂದು ಹೇಳುವುದು ಒಪ್ಪುವ ಮಾತ್ರಲ್ಲ.

ಸಾಮಾನ್ಯ ಗ್ರಹಿಕೆಯ ನೆಲೆಯಲ್ಲಿ ಈ ಸಮಸ್ಯೆಗೆ ಪರಿಹಾರ ಹೇಳುವವರು ಇನ್ನೂ ಒಂದು ಉತ್ತರವನ್ನು ಮಂಡಿಸುತ್ತಾರೆ. ಅವರ ಪ್ರಕಾರ ಮಕ್ಕಳು ತಪ್ಪು ರಚನೆಗಳನ್ನು ಬಳಸಿದಾಗ ದೊಡ್ಡವರು ತಿದ್ದುತ್ತಾರೆ. ಹಾಗಾಗಿ ಮಕ್ಕಳು ಸರಿಯಾದ

ರಚನೆಗಳನ್ನು ಮಾತ್ರ ಬಳಸಲು ಕಲಿಯುತ್ತಾರೆ. ಈ ವಿವರಣೆಯು ಸಮಸ್ಯೆಗೆ ಉತ್ತರವಾಗಿ ಕಾಣುವುದಿಲ್ಲ. ಹಾಗೆ ನೋಡಿದರೆ ವ್ಯಾಕರಣದ ನಿಯಮಗಳನ್ನು ಶಾಲೆಗಳಲ್ಲಿ ಕಲಿಸುತ್ತಾರೆಂಬುದು ನಿಜ. ಆದರೆ ಶಾಲೆಗೆ ಹೋಗಿಯೇ ನುಡಿ ರಚನೆಯನ್ನು ತಮ್ಮದನ್ನಾಗಿಸಿಕೊಳ್ಳುವವರು ಎಷ್ಟು ಜನ? ಮಕ್ಕಳು ನುಡಿಕಸುವನ್ನು ಗಳಿಸುವ ಎಳವೆಯ ಹಂತದಲ್ಲಿ ಇನ್ನೊಂದು ಲಕ್ಷಣ ಕಂಡು ಬರುತ್ತದೆ. ಅವರು ನುಡಿ ಬಳಕೆಯಲ್ಲಿ ತಪ್ಪು ರಚನೆಗಳು ಕಂಡುಬಂದಾಗ ಯಾರಾದರೂ ಅದನ್ನು ಕಂಡು ಹಿಡಿದು ಅದು ತಪ್ಪೆಂದು ಸರಿ ರಚನೆಯು ಹೀಗಿರುತ್ತದೆ ಎಂದು ತಿದ್ದುತ್ತಾರೆ ಎಂದುಕೊಳ್ಳಿ. ಆ ತಿದ್ದುವಿಕೆಯನ್ನು ಮಕ್ಕಳು ಗಮನಕ್ಕೆ ತೆಗೆದು ಕೊಳ್ಳುವುದೇ ಇಲ್ಲ ಎಂಬುದನ್ನು ಅಧ್ಯಯನಗಳು ತೋರಿಸಿಕೊಟ್ಟಿವೆ. ಅಲ್ಲದೆ ಮಕ್ಕಳ ನುಡಿರಚನೆಯಲ್ಲಿ ಇರುವ ತಪ್ಪುಗಳನ್ನು ಎಚ್ಚರದಿಂದ ಗಮನಿಸಿ ತಿದ್ದಲು ಹಿರಿಯರಿಗೆ ಬೇಕಾದ ಸಿದ್ಧತೆಗಳೂ ಇರುವುದಿಲ್ಲ. ವ್ಯವಧಾನವೂ ಇರುವುದಿಲ್ಲ, ಹಾಗಾಗಿ ತಿದ್ದುವಿಕೆಯಿಂದ ಮಕ್ಕಳು ಸರಿ ನುಡಿ ರಚನೆಯನ್ನು ಗಳಿಸುತ್ತಾರೆಂಬುದು ಒಪ್ಪುವ ಮಾತಲ್ಲ.

ಈ ಎಲ್ಲ ವಿವರಣೆಯೂ **ವಿಭಾವಗಳ ರಿಕ್ತತೆ** ಎಂಬ ಸಮಸ್ಯೆ ಇರುವುದನ್ನೇ ಒಪ್ಪುವುದಿಲ್ಲ. ಮಕ್ಕಳಿಗೆ ನುಡಿಗಳಿಕೆಗೆ ಸಾಕಾಗುವಷ್ಟು ಸಾಮಗ್ರಿ ಪರಿಸರದಲ್ಲೇ ದೊರೆಯುತ್ತದೆ ಎಂದು ವಾದಿಸಲಾಗುತ್ತದೆ. ಇನ್ನೂ ಮುಂದುವರೆದು ಮಕ್ಕಳು ಯಾವ ಪರಿಸರದಲ್ಲಿ ಬೆಳೆಯುತ್ತಾರೋ ಆ ಪರಿಸರದ ನುಡಿಯನ್ನೇ ಗಳಿಸುತ್ತಾರಾದ್ದರಿಂದ ಆ ನುಡಿಗೆ ಸಂಬಂಧಿಸಿದ ಸಾಮಗ್ರಿ ಪರಿಸರದಲ್ಲಿ ದೊರೆಯುತ್ತಿರುವುದೇ ಇದಕ್ಕೆ ಕಾರಣವೆಂದು ಹೇಳುತ್ತಾರೆ. ಕನ್ನಡ ಕೇಳಿಸಿಕೊಳ್ಳುವ ಮಗು ಕನ್ನಡವನ್ನಷ್ಟೇ ಕಲಿಯುವುದು ಈ ಕಾರಣದಿಂದಾಗಿಯೇ ಎಂದು ನಂಬುತ್ತಾರೆ.

ವಿಭಾವಗಳ ರಿಕ್ತತೆಯ ಸಮಸ್ಯೆ ಇದೆ ಎಂಬುದನ್ನು ಅಲ್ಲಗಳೆಯುವ ಇನ್ನೊಂದು ವಾದವಿದೆ. ಇದೊಂದು ಜನಪ್ರಿಯ ವಾದ. ಮಕ್ಕಳು ಹುಟ್ಟುವಾಗಲೇ ಅಥವಾ ತಾಯಿಯ ಹಾಲು ಕುಡಿಯುವಾಗಲೇ ತಮ್ಮ ಪರಿಸರದ ನುಡಿಯನ್ನು ಪಡೆದಿರುತ್ತಾರೆ. ಹಾಗೂ ಬೆಳೆಯುತ್ತಾ ಅದನ್ನು ವಿವಿಧ ಬಗೆಯಲ್ಲಿ ಬಳಸುವುದನ್ನು ಕಲಿಯುತ್ತಾರೆ. ಈ ವಾದ ಸಮಸ್ಯೆಯನ್ನು ಸರಳಗೊಳಿಸುತ್ತದೆ.

ಈ ಎರಡೂ ವಿವರಣೆಗಳು ನುಡಿಗಳಿಕೆಗೆ ಒತ್ತಾಸೆಗಳು ಒಂದೋ ಪರಿಸರದಲ್ಲಿವೆಯೆಂದೂ, ಇಲ್ಲವೇ ಅದು ಮೊದಲೇ ವಾಂಶಿಕವಾಗಿ ಪೂರ್ಣ ಪ್ರಮಾಣದಲ್ಲಿ ದತ್ತವಾಗಿರುತ್ತವೆಂದು ತಿಳಿಯುತ್ತವೆ. ನುಡಿಗಳಿಕೆಯ ಸ್ವರೂಪವನ್ನು ಕುರಿತ ಅಧ್ಯಯನಗಳು ಹೊರಹಾಕುವ ಮಾಹಿತಿಯು ಈ ಮೇಲಿನ ವಿವರಣೆಗಳನ್ನು ಅಲ್ಲಗಳೆಯುತ್ತವೆ. ಪೂರ್ಣ ಪ್ರಮಾಣದ ನುಡಿರಚನೆ ಮಗುವಿಗೆ ಹುಟ್ಟಿನಿಂದಲೇ ದೊರೆತಿರುತ್ತದೆ ಎಂಬುದನ್ನು ಸಾಬೀತು ಮಾಡುವ ಯಾವ ಪುರಾವೆಗಳೂ ಮೆದುಳನ್ನು ಕುರಿತ ಅಧ್ಯಯನಗಳಿಂದ ಹೊರ ಬಿದ್ದಿಲ್ಲ. ವ್ಯಕ್ತಿ ತನ್ನ ಜೀವಾವಧಿಯಲ್ಲಿ ರಚಿಸುವ ಅಸಂಖ್ಯಾತ ವಾಕ್ಯಗಳು ಮತ್ತು ಅವುಗಳ ವೈವಿಧ್ಯಗಳು ಮೆದುಳಿನಲ್ಲೇ ಅಡಕವಾಗಿರುತ್ತದೆ ಎಂದು ಹೇಳಿದರೆ ಅದನ್ನು ಪ್ರಯೋಗಗಳ ಮೂಲಕ ತೋರಿಸುವುದು ಅಸಾಧ್ಯ. ನುಡಿ ಬಳಕೆಯಲ್ಲಿ ಅಡಕವಾಗಿರುವ

ಸೃಜನಶೀಲತೆಯ ಚಹರೆಯನ್ನೇ ಈ ವಿವರಣೆ ಅಲ್ಲಗಳೆಯುತ್ತದೆ.

ಹಾಗಿದ್ದಲ್ಲಿ **ವಿಭಾವಗಳ ರಿಕ್ತತೆಯ** ಸಮಸ್ಯೆಗೆ ಉತ್ತರವಾದರೂ ಏನು? ಪ್ಲೇಟೋನನ್ನು ಈ ಸಮಸ್ಯೆ ಕಾಡಿಸಿತ್ತಾದರೂ ಅದಕ್ಕೆ ಅವನು ತನ್ನ ಕಾಲದಲ್ಲಿ ಕಂಡುಕೊಂಡ ಉತ್ತರವನ್ನು ಈಗಲೂ ಒಪ್ಪುವುದು ಆಗದ್ದು. ಜನ್ಮಾಂತರದ ನೆನಪುಗಳಿಂದ ಈ ರಿಕ್ತತೆಯ ಸಮಸ್ಯೆಯನ್ನು ಮಾನವರು ಪರಿಹರಿಸಿಕೊಳ್ಳುತ್ತಾರೆಂದು ಪ್ಲೇಟೋ ಹೇಳಿದ್ದು ಯಥಾವತ್ತಾಗಿ ದಿಟವಲ್ಲ. ಇಪ್ಪತ್ತನೇ ಶತಮಾನದ ನಡುಭಾಗದಿಂದಿಚೆಗೆ ನಡೆದ ಅಧ್ಯಯನಗಳು ಈ ಸಮಸ್ಯೆಗೆ ಉತ್ತರವನ್ನು ಮಾನವರು ವಂಶವಾಹಿಗಳ ರಚನೆಯಲ್ಲಿ ಹುಡುಕಬೇಕೆಂದು ಹೇಳುತ್ತವೆ. ಹತ್ತೊಂಬತ್ತನೆ ಶತಮಾನದಲ್ಲಿ ಗ್ರೈಗೊರಿ ಮೆಂಡಲ್ ಸಸ್ಯಗಳ ಅಧ್ಯಯನಗಳನ್ನು ಮಾಡುತ್ತಾ ವಂಶವಾಹಿಗಳ ಪರಿಕಲ್ಪನೆಯನ್ನು ಮುಂದಿರಿಸಿದನಷ್ಟೆ. ತಲೆಮಾರಿನಿಂದ ತಲೆಮಾರಿಗೆ ದಾಟುವ ಮತ್ತು ಒಂದು ಜೀವಿವರ್ಗದಲ್ಲಿ ಕಂಡುಬರುವ ಸಾಮಾನ್ಯ ಚಹರೆಗಳಿಗೆ ಈ ವಂಶವಾಹಿಗಳು ಕಾರಣವೆಂಬುದು ಈಗ ಸ್ಪಷ್ಟಗೊಂಡಿದೆ. ನುಡಿಗಳಿಕೆಯ ಸ್ವರೂಪವನ್ನು ಜೈವಿಕ ನೆಲೆಯಲ್ಲಿ ಹುಡುಕಬೇಕೆಂದು ಹೊರಟು ಎರಿಕ್ ಲೆನ್ನೆಬರ್ಗ್‌ನಂತಹ ಚಿಂತಕರಿಗೆ ತಮ್ಮ ಸಮಸ್ಯೆಗೆ ಉತ್ತರಗಳು ವಂಶವಾಹಿಗಳನ್ನು ಕುರಿತ ಚಿಂತನೆಗಳಲ್ಲಿ ಅಡಕವಾಗಿದೆ ಎಂದು ತೋರಿತ್ತು. ಆ ಮುಂದಿನ ಅಧ್ಯಯನಗಳು ಎಲ್ಲ ಮಾನವರ ಮೆದುಳುಗಳು ನುಡಿಕಸುವಿಗೆ ಸಂಬಂಧಿಸಿದ ವಂಶವಾಹಿ ಮೂಲವೊಂದು ಹುಟ್ಟಿನಿಂದಲೇ ನೆಲೆಗೊಂಡಿರುತ್ತದೆ ಎಂಬ ಆಧಾರಕಲ್ಪನೆಯನ್ನು ಇರಿಸಿಕೊಂಡಿವೆ.

ಕಳೆದ ಶತಮಾನದ ಕೊನೆಕೊನೆಯವರೆಗೂ ಮಾನವರ ಮೆದುಳು ಹೊಸ ಸಂಗತಿಗಳನ್ನು ಕಲಿಯಲೆಂದು ಒಂದು ಸಾಮಾನ್ಯ ತತ್ವವನ್ನು ಹೊಂದಿದೆ ಎಂದು ನಂಬಲಾಗಿತ್ತು. ಕುದುರೆ ಸವಾರಿ, ಈಜು, ಗಣಿತ, ಕಸೂತಿ ಹೀಗೆ ಯಾವುದೇ ಕಲಿಕೆ ಇರಲಿ ಇವೆಲ್ಲವನ್ನೂ ಸಾಧ್ಯವಾಗಿಸುವ ಒಂದು ಸಾಮಾನ್ಯ ಸಾಮರ್ಥ್ಯ ಮೆದುಳಿನಲ್ಲಿ ಅಡಗಿದೆ ಎಂದು ತಿಳಿದಿದ್ದರು. ನುಡಿ ಕಲಿಕೆಯು ಅನುಕರಣೆಯಿಂದ ಒದಗಿ ಬರುವುದೆಂದು ವಾದಿಸುತ್ತಿದ್ದವರು ಈ ಸಾಮಾನ್ಯ ಸಾಮರ್ಥ್ಯ ತತ್ವವನ್ನು ಆಧರಿಸಿ ತಮ್ಮ ನಿಲುವನ್ನು ಸಮರ್ಥಿಸಿಕೊಳ್ಳುತ್ತಿದ್ದರು. ಆದರೆ ಮೆದುಳಿನಲ್ಲಿ ನುಡಿಗಳಿಕೆಗೆ ಮೀಸಲಾದ ಬೇರೊಂದು ವ್ಯವಸ್ಥೆ ಇದ್ದು ಅದು ಅಲ್ಲಿಯವರೆಗೆ ನಂಬಿದ್ದ ಸಾಮಾನ್ಯ ಸಾಮರ್ಥ್ಯಕ್ಕಿಂತ ಬೇರೆಯಾಗಿಯೇ ಕಾರ್ಯ ನಿರ್ವಹಿಸುವುದೆಂಬ ತಿಳುವಳಿಕೆ ಹೊಸದಾಗಿತ್ತು.

ನುಡಿಗಳಿಕೆಗೇ ಮೀಸಲಾದ ಮೆದುಳಿನ ಈ ವಿಶಿಷ್ಟ ಸಾಮರ್ಥ್ಯವು ಒಂದು ವ್ಯವಸ್ಥೆಯಾಗಿದ್ದು ಅದರೊಳಗೆ ಹಲವು ಉಪವ್ಯವಸ್ಥೆಗಳು ಅಡಕಗೊಂಡಿರುತ್ತವೆ. ಈ ಉಪವ್ಯವಸ್ಥೆಗಳು ನುಡಿಸಾಮರ್ಥ್ಯದ ಬೇರೆ ಬೇರೆ ಸ್ತರಗಳಿಗೆ ಮೀಸಲಾಗಿರುತ್ತದೆ. ಪ್ರತಿಯೊಂದು ಉಪವ್ಯವಸ್ಥೆಯು ತನ್ನೊಳಗೇ ಹಲವು ಲಕ್ಷಣಗಳನ್ನು ಹೊಂದಿದ್ದರೂ ಆ ಎಲ್ಲ ಲಕ್ಷಣಗಳ ಕ್ರಿಯಾಶೀಲ ಬೆಳವಣಿಗೆಯು ಮೂಲ ವ್ಯವಸ್ಥೆಗೆ ಪೂರಕವಾಗಿರುವಂತೆ ಅಳವಟ್ಟಿರುತ್ತದೆ. ಧ್ವನಿ ರಚನೆಯ ಗಳಿಕೆಗೆ ಇಲ್ಲವೇ ಪದರಚನೆಯ ಗಳಿಕೆಗೆ ಮೀಸಲಾದ ಬೇರೆಬೇರೆ ಉಪವ್ಯವಸ್ಥೆಗಳು ಇದ್ದರೂ ಮತ್ತು ಅವು ತಮಗೆ ತಾವೇ ಸ್ವತಂತ್ರವೆಂಬಂತೆ ತೋರಿದರೂ ಆಯಾ ಉಪವ್ಯವಸ್ಥೆಯು ಅಂತಿಮವಾಗಿ ಒಂದೇ ನುಡಿ ರಚನೆಯ

ಗಳಿಕೆಗೆ ಪೂರಕವಾಗಿ ಕಾರ್ಯ ನಿರ್ವಹಿಸುತ್ತದೆ. ಉದಾ.ಗೆ ಮಗುವು ತಮಿಳು ನುಡಿ ರಚನೆಯನ್ನು ಗಳಿಸಿಕೊಳ್ಳುತ್ತಿದೆ ಎಂದುಕೊಳ್ಳಿ. ಅದರ ಮೆದುಳಿನಲ್ಲಿ ನುಡಿರಚನೆಯ ಗಳಿಕೆಗಾಗಿ ಇರುವ ವ್ಯವಸ್ಥೆಯ ಉಪವ್ಯವಸ್ಥೆಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತವೆ. ಹೀಗಿದ್ದರೂ ಧ್ವನಿರಚನೆಯ ಗಳಿಕೆಗಾಗಿ ಇರುವ ಉಪವ್ಯವಸ್ಥೆ ಮತ್ತು ಪದರಚನೆಯ ಗಳಿಕೆಗಾಗಿ ಇರುವ ಉಪವ್ಯವಸ್ಥೆಗಳು ಬೇರೆಬೇರೆ ನುಡಿಗಳ ಗಳಿಕೆಯತ್ತ ಮುಖ ಮಾಡುವುದಿಲ್ಲ. ಎರಡೂ (ಉಳಿದ ಉಪವ್ಯವಸ್ಥೆಗಳು ಸೇರಿದಂತೆ) ಮಗುವಿನಲ್ಲಿ ತಮಿಳು ನುಡಿ ಸಾಮರ್ಥ್ಯವು ನೆಲೆಗೊಳ್ಳಲು ಪೂರಕವಾಗಿ ಕೆಲಸ ಮಾಡುತ್ತವೆ.

ನುಡಿಗಳಿಕೆಗಾಗಿ ಮೀಸಲಾಗಿರುವ ಮೆದುಳಿನ ಅಂಗವು ಮಗುವಿನಲ್ಲಿ ನುಡಿಯ ವ್ಯಾಕರಣವು ನೆಲೆಯೂರುವಂತೆ ಮಾಡುತ್ತದೆ. ಹೀಗಂದರೇನು? ಸಾಂಪ್ರದಾಯಿಕ ಚಿಂತನೆಗಳು ವ್ಯಾಕರಣವನ್ನು ಹಲವು ನಿಯಮಗಳ ಸಮುಚ್ಚಯವೆಂದು ತಿಳಿಯುತ್ತವೆ. ಇದು ಒಂದರ್ಥದಲ್ಲಿ ಸರಿ. ಆದರೆ ಈ ನಿಯಮಗಳು ಬಿಡಿ ಬಿಡಿಯಾಗಿ ಕಂಡರೂ ಅವೆಲ್ಲವೂ ಗೊತ್ತಾದ ಒಳರಚನೆಯೊಂದನ್ನು ಹೊಂದಿರುತ್ತವೆ. ಒಂದು ನುಡಿಯ ವ್ಯಾಕರಣವನ್ನು ಬರೆಯಲು ಹೊರಟರೆ ಸಾವಿರಾರು ನಿಯಮಗಳನ್ನು ಪಟ್ಟಿ ಮಾಡಬೇಕಾಗುತ್ತದೆ. ನುಡಿ ಗಳಿಸುವ ಮಗುವಿನಲ್ಲಿ ಈ ಎಲ್ಲ ಸಾವಿರಾರು ನಿಯಮಗಳೂ ಬಿಡಿಬಿಡಿಯಾಗಿಯೇ ಮೊಳಕೆಯೊಡೆಯುತ್ತವೆ ಎಂದು ತಿಳಿದರೆ ಆಗ ನುಡಿಗಳಿಕೆಯು ಅತ್ಯಂತ ತ್ರಾಸದಾಯಕವಾದ ಮತ್ತು ದೀರ್ಘಾವಧಿಯ ಪ್ರಕ್ರಿಯೆಯಾಗಿರಬೇಕಾಗುತ್ತದೆ. ಆದರೆ ಮಕ್ಕಳಲ್ಲಿ ಹೀಗಾಗುವುದಿಲ್ಲವೆಂಬುದು ಸಾಮಾನ್ಯ ತಿಳುವಳಿಕೆಗೂ ನಿಲುಕುವ ಸಂಗತಿಯೇ. ಅಂದರೆ ಸಾವಿರಾರು ಬಿಡಿಬಿಡಿ ನಿಯಮಗಳನ್ನು ಒಂದಾದ ಮೇಲೊಂದರಂತೆ ಮಕ್ಕಳು ಪಡೆದುಕೊಳ್ಳುತ್ತಾರೆ ಎಂದು ತಿಳಿಯುವುದು ಸರಿಯಲ್ಲ. ಈ ನಿಯಮಗಳ ಹಿಂದಿರುವ ಕೆಲವು ಸಾಮಾನ್ಯ ತತ್ವಗಳು ಮಗುವಿನ ಮೆದುಳಿನಲ್ಲಿ ಒಂದು ಸಾಧ್ಯತೆಯಾಗಿ ಅಡಕಗೊಂಡಿದ್ದು ಆ ಸಾಧ್ಯತೆಯೇ ಒಟ್ಟು ನಿಯಮಾವಳಿಗಳನ್ನು ನೆಲೆಗೊಳಿಸಲು ನೆರವಾಗುತ್ತದೆ. ಅಂಥ ಒಂದು ಸಾಧ್ಯತೆಯನ್ನು **ಸಂಯೋಜಕತೆ** ಎಂದು ಕರೆಯಲಾಗಿದೆ.

ಸಂಯೋಜಕತೆ ಎಂದರೇನು? ನುಡಿರಚನೆಯಲ್ಲಿ ಕೆಲವು ಅಮೂರ್ತ ವರ್ಗಗಳಿರುತ್ತವೆ. ಸದ್ಯಕ್ಕೆ ನಾಮಪದ ಮತ್ತು ಕ್ರಿಯಾಪದಗಳಿಂದ ವರ್ಗಗಳನ್ನು ಉದಾ.ಯಾಗಿ ತೆಗೆದುಕೊಳ್ಳೋಣ. ಯಾವುದು ನಾಮಪದ, ಯಾವುದು ಕ್ರಿಯಾಪದ ಎಂಬ ಪ್ರಶ್ನೆ ಈಗ ಪಕ್ಕಕ್ಕಿರಲಿ. ಈ **ಸಂಯೋಜಕತೆ**ಯು ಈ ಎರಡು ಬೇರೆಬೇರೆ ವರ್ಗಕ್ಕೆ ಸೇರಿದ ಪದಗಳ ಜೋಡಣೆಯಾದಾಗ ಏನಾಗುವುದೆಂಬ ಬಗೆಗೆ ಕೆಲವು ನಿಯಮಗಳನ್ನು ಹೊಂದಿರುತ್ತವೆ. ಈ ನಿಯಮಗಳು ಆಯಾ ನುಡಿಗೆ ಸಲ್ಲುವಂಥವು. ನಾಮಪದ ವರ್ಗದ ಒಂದು ಪದ ಕ್ರಿಯಾಪದ ವರ್ಗದ ಒಂದು ಪದ ಜೊತೆಗೂಡಿದರೆ ಸಿಗುವ ಪದವು ಬೇರೊಂದು ಹೊಸವರ್ಗದ ಪದವಾಗಿರುವುದಿಲ್ಲ. ಈ ಎರಡೂ ವರ್ಗಗಳಲ್ಲಿ ಯಾವುದಾದರೊಂದು ವರ್ಗದ ಲಕ್ಷಣವನ್ನು ತಾನೂ ಕಾಯ್ದು ಕೊಂಡಿರುತ್ತದೆ. ಕನ್ನಡ ನುಡಿಯಿಂದ ಸಂಯೋಜಕತೆಯ ತತ್ವವನ್ನು ಅರಿಯಲು ಒಂದು ಉದಾ.ಯನ್ನು ತೆಗೆದುಕೊಳ್ಳೋಣ. **ತಲೆ, ಕಾಲು ಮರ, ನಾಯಿ, ಹಣ್ಣು**

ಇವೆಲ್ಲವೂ ನಾಮಪದ ವರ್ಗದ ಪದಗಳು. ಚಿಕ್ಕ ಪುಟ್ಟ ದೊಡ್ಡ ಇವೆಲ್ಲವೂ ವಿಶೇಷಣ ವರ್ಗದ ಪದಗಳು. **ದೊಡ್ಡ ಮನೆ, ಪುಟ್ಟನಾಯಿ, ಚಿಕ್ಕ ಹುಡುಗಿ** ಎಂಬ ರಚನೆಗಳನ್ನು ನೋಡೋಣ. ಪ್ರತಿ ರಚನೆಯಲ್ಲೂ ಒಂದು ನಾಮಪದ ಮತ್ತು ಒಂದು ವಿಶೇಷಣ ಇದೆ. ಕನ್ನಡಕ್ಕೆ ಸಂಬಂಧಿಸಿದ್ದ ಸಂಯೋಜಕತೆಯ ತತ್ವವು ಇಂಥ ರಚನೆಗಳ ಬಗೆಗೆ ಎರಡು ನಿಯಮಗಳನ್ನು ಹೇಳುತ್ತದೆ. ಒಂದು ಈ ಪದಗಳ ಅನುಕ್ರಮಣಿಕೆಯನ್ನು ಕುರಿತದ್ದು. ಅದರಂತೆ ನಾಮಪದ ಮತ್ತು ವಿಶೇಷಣ ವರ್ಗದ ಎರಡು ಪದಗಳು ಜೊತೆಗೂಡಿದಾಗ ಮೊದಲು ವಿಶೇಷಣ ವರ್ಗದ ಪದ ಬಂದು, ಬಳಿಕ ನಾಮಪದ ಬರಬೇಕೆಂಬುದು ಆ ನಿಯಮ. ಹೀಗಾಗಿ **ಮರ ಚಿಕ್ಕ, ಹಣ್ಣು ಪುಟ್ಟ** ಎಂಬಂಥ ರಚನೆಗಳು ಕನ್ನಡದಲ್ಲಿ ಸಾಧ್ಯವಿಲ್ಲ. ಎರಡನೆಯ ನಿಯಮ ಹೀಗಿದೆ. ಈ ಎರಡೂ ಬೇರೆಬೇರೆ ವರ್ಗದ ಪದಗಳು ಜೋಡಣೆಯಾದಾಗ ಸಿಗುವ ಹೊಸರಚನೆಯು ನಾಮಪದದ ಚಹರೆಯನ್ನೇ ಹೊಂದಿರುತ್ತದೆ. **ಮರ** ಮತ್ತು **ದೊಡ್ಡ ಮರ** ಎಂಬ ರಚನೆಗಳೆರಡೂ ನಾಮಪದಗಳೇ. ದೊಡ್ಡ ಎಂಬ ವಿಶೇಷಣದ ಸ್ವತಂತ್ರ ಚಹರೆಯು ಹೊಸರಚನೆಯಲ್ಲಿ ಕಾಣೆಯಾಗಿರುತ್ತದೆ.

ಸಂಯೋಜಕತೆಯ ಈ ನೆಲೆಯು ಹೆಚ್ಚು ವ್ಯಾಪಕವಾಗಿರುತ್ತದೆ. ಎರಡು ಬೇರೆ ಬೇರೆ ವರ್ಗದ ಪದಭಾಗಗಳು ಒಟ್ಟು ಗೂಡಿದಾಗ ಹೊಸ ರಚನೆಯ ಚಹರೆಯು ಯಾವುದಾಗಿರಬೇಕೆಂಬುದು ಕೇವಲ ಮೇಲೆ ಉದಾಹರಿಸಿದ ನಾಮಪದ ಮತ್ತು ವಿಶೇಷಣಗಳಿಗೆ ಮಾತ್ರ ಸಂಬಂಧಿಸಿದ್ದಲ್ಲ. ಪದವರ್ಗ ಯಾವುದೇ ಇರಲಿ ಹೊಸರಚನೆಯ ಕೊನೆಯಲ್ಲಿ ಬರುವ ಪದ ಚಹರೆಯನ್ನೇ ಹೊಂದಿರುತ್ತದೆ ಎಂಬುದು ಸಾಮಾನ್ಯ ನಿಯಮ. ಸಂಯೋಜಕತೆಯ ಈ ಸಾಧ್ಯತೆಯಿಂದಾಗಿಯೇ ಸಾವಿರಾರು ಬಿಡಿಬಿಡಿ ನಿಯಮಗಳ ಬದಲಿಗೆ ಕನಿಷ್ಠ ಸಂಖ್ಯೆಯ ನಿಯಮಗಳ ಮೂಲಕವೇ ನುಡಿಸಾಮರ್ಥ್ಯವು ನೆಲೆಗೊಳ್ಳಲು ನೆರವಾಗುತ್ತದೆ.

ನುಡಿಗಳಿಕೆಗೆ ನೆರವಾಗುವ ಮೆದುಳಿನ ವಿಶೇಷ ಸಾಮರ್ಥ್ಯವು ಉಳಿದ ಕಲಿಕೆಗಳಿಗೆ ಕಾರಣವಾಗುವ ಸಾಮಾನ್ಯ ಸಾಮರ್ಥ್ಯಕ್ಕಿಂತ ಬೇರೆ ರೀತಿಯಲ್ಲಿ ರಚನೆಗೊಂಡಿರುತ್ತದೆ. ಇದನ್ನು ಮೇಲೆ ಹೇಳಿದ ಉದಾಹರಣೆಯು ಸಮರ್ಥಿಸುತ್ತದೆ. ಬೇರೆ ಬೇರೆ ಅಮೂರ್ತ ವರ್ಗಗಳಿಗೆ ಸೇರಿದ ಪದಗಳು ಸಂಯೋಜನೆಗೊಂಡಾಗ ಸಿದ್ಧಗೊಳ್ಳುವ ಹೊಸ ರಚನೆಯ ಲಕ್ಷಣ ಮತ್ತು ಗುಣಗಳು ನಿರ್ಧಾರಗೊಳ್ಳುವ ನಿಯಮವು ಪ್ರತಿ ನುಡಿಗೂ ವಿಶಿಷ್ಟವಾದುದು. ಹೀಗೆ ಹೇಳಿದಾಗ ಸಾವಿರಾರು ಸಾಧ್ಯತೆಗಳನ್ನು ಮೆದುಳು ಅಂತಸ್ಥವಾಗಿ ಇರಿಸಿಕೊಂಡಿರುತ್ತದೆ ಎಂದು ತಿಳಿಯಬೇಕಾಗಿದೆ. ಏಕೆಂದರೆ ಈ ಸಾಧ್ಯತೆಗಳೂ ಕೂಡಾ ಸೀಮಿತ ಆಯ್ಕೆಯನ್ನೇ ಹೊಂದಿರುತ್ತದೆ. ಮತ್ತೆ ಮೇಲೆ ಹೇಳಿದ ಉದಾ.ಗೆ ಬರೋಣ. ಕನ್ನಡ ವ್ಯಾಕರಣವು ನಾಮಪದ ಮತ್ತು ವಿಶೇಷಣ ಎಂಬ ಪದ ವರ್ಗಗಳಿಗೆ ಸೇರಿದ ಪದಗಳು ಸಂಯೋಜನೆಗೊಂಡಾಗ ಮೊದಲು ವಿಶೇಷಣ ಬಳಿಕ ನಾಮಪದ ಬರಬೇಕೆಂಬ ಆಯ್ಕೆಯನ್ನು ಹೊಂದಿದ ಬೇರೊಂದು ನುಡಿಯಲ್ಲಿ ಈ ಸಾಧ್ಯತೆಯು ಇಲ್ಲವೆಂದು ತಿಳಿಯೋಣ. ಆಗ ಯಾವ ಸಾಧ್ಯತೆ ಉಳಿಯುತ್ತದೆ? ವಿಶೇಷಣವು ನಾಮಪದದ ಬಳಿಕ ಬರಹುದಾದ ಸಾಧ್ಯತೆಯಷ್ಟೇ ಉಳಿಯುತ್ತದೆ. ಅಂದರೆ ಜಗತ್ತಿನ ಯಾವುದೇ ನುಡಿಯನ್ನು ತೆಗೆದುಕೊಂಡರೂ ಈ ಎರಡು ಸಾಧ್ಯತೆಗಳನ್ನಷ್ಟೇ ಹೊಂದಿರಬೇಕಾಗುತ್ತದೆ.

ಅಲ್ಲದೆ, ಯಾವುದೇ ನುಡಿಯಾದರೂ ಈ ಎರಡು ಸಾಧ್ಯತೆಗಳಲ್ಲಿ ಯಾವುದನ್ನು ತನ್ನ ಚಹರೆಯನ್ನಾಗಿ ಹೊಂದಿರುತ್ತದೋ ಅದನ್ನೇ ನಿಯತವಾಗಿ ಪಾಲಿಸುತ್ತದೆ. ಎರಡೂ ಸಾಧ್ಯತೆಗಳನ್ನು ಒಂದೇ ನುಡಿ ಹೊಂದಿರುವ ಸಂದರ್ಭಗಳು ಇರುವುದೂ ಇಲ್ಲ.

ಸಂಯೋಜಕತೆಯೆಂಬ ಮೇಲೆ ಹೇಳಿದ ಲಕ್ಷಣವು ನುಡಿಗಳಿಕೆಗೆ ಕಾರಣವಾಗುವ ಮೆದುಳಿನ ಸಾಮರ್ಥ್ಯದ ರಚನೆ ತುಂಬಾ ಸಂಕೀರ್ಣಗೊಳ್ಳದಂತೆ ಮಾಡುತ್ತದೆ. ಅಂದರೆ ಅತಿ ಕನಿಷ್ಟ ಮಾಹಿತಿ ದೊರೆತಾಗಲೂ ಒಂದು ನಿರ್ದಿಷ್ಟ ನುಡಿಯು ನೆಲೆಗೊಳ್ಳಲು ನೆರವಾಗುವಷ್ಟು ಸರಳ ಆಯ್ಕೆಗಳನ್ನಷ್ಟೇ ಹೊಂದಿರುತ್ತದೆ. (ಇದನ್ನೇ ಚಾಮ್‌ಸ್ಕಿ ನಿಯಮಗಳು ಮತ್ತು ವಿಕಲ್ಪಗಳು ಎಂಬ ಸಿದ್ಧಾಂತವನ್ನಾಗಿ ನಿರೂಪಿಸಿರುವುದುಂಟು). ಸೀಮಿತ ಆಯ್ಕೆಗಳಿಗೆ ಅವಕಾಶವಿರುವ LAD ಅನಂತರಾಚನಿಕ ಅವಕಾಶಗಳಿರುವ ನುಡಿ ಸಾಮರ್ಥ್ಯವು ಮಗುವಿನಲ್ಲಿ ನೆಲೆಗೊಳ್ಳಲು ಕಾರಣವಾಗುತ್ತದೆ. ಇದು ಪ್ಲೇಟೋ ಸಮಸ್ಯೆಗೆ ಚಾಮ್‌ಸ್ಕಿ ಚಿಂತನೆಗಳು ಸೂಚಿಸುತ್ತಿರುವ ಪರಿಹಾರ. ಇದಕ್ಕಿಂತ ಉತ್ತಮವಾದ ಪರಿಹಾರವನ್ನು ಬೇರೊಂದು ಚಿಂತನೆಯು ಮಂಡಿಸುವವರೆಗೂ ಚಾಮ್‌ಸ್ಕಿ ಚಿಂತನೆಗಳನ್ನು ಅಲ್ಲಗಳೆಯಲು ಬರುವುದಿಲ್ಲ.

ಸಂಯೋಜಕತೆಯ ತತ್ವವನ್ನು ವಿವರಿಸುವಾಗ ಒಂದು ಸಂಗತಿಯನ್ನು ಸೂಚಿಸಲಾಯಿತು. ಅದೆಂದರೆ ನುಡಿಯ ಬೇರೆಬೇರೆ ಪದಗಳನ್ನು ನಿಯಂತ್ರಿಸಲು LADನಲ್ಲಿ ಬೇರೆ ಬೇರೆ ಉಪವ್ಯವಸ್ಥೆಗಳು ಇರುತ್ತವೆಯಾದರೂ ಅವೆಲ್ಲವೂ ಸಂಯೋಜಕತೆಯ ತತ್ವವನ್ನು ಅನುಸರಿಸುವಾಗ ಪರಸ್ಪರ ಪೂರಕವಾಗಿ ಕಾರ್ಯ ನಿರ್ವಹಿಸುತ್ತವೆ ಎಂದು ತಿಳಿಯಬೇಕು. ಅಂದರೆ ಪದರಚನೆ ಮತ್ತು ವಾಕ್ಯರಚನೆ ಎಂಬ ನುಡಿಯ ಎರಡು ಸ್ತರಗಳನ್ನು ತೆಗೆದುಕೊಂಡರೆ ಅವೆರಡೂ ಸಂಯೋಜಕತೆಯ ನೆಲೆಯಲ್ಲಿ ಒಂದೇ ಆಯ್ಕೆಯನ್ನು ಮಾಡಿಕೊಳ್ಳುತ್ತಿರುತ್ತವೆ.

ಇದನ್ನು ಇನ್ನಷ್ಟು ವಿವರವಾಗಿ ಪರಿಶೀಲಿಸೋಣ. ನಾಮಪದ ಮತ್ತು ವಿಶೇಷಣಗಳು ಸಂಯೋಜನೆಗೊಂಡಾಗ ಕನ್ನಡವು ಮಾಡಿಕೊಂಡಿರುವ ಎರಡು ಆಯ್ಕೆಗಳನ್ನು ನೋಡಿದ್ದೇವೆ. ಒಂದು: ಅನುಕ್ರಮಣಿಕೆ. ಅದರಂತೆ ನಾಮಪದವು ಹೊಸ ರಚನೆಯ ಕೊನೆಗೆ ಬರಬೇಕು (ಚಿಕ್ಕ ಮನೆ, ದೊಡ್ಡ ಮರ, ಕೆಟ್ಟ ಹುಡುಗ) ಎರಡು: ಹೊಸ ರಚನೆಯು ನಾಮಪದ ವರ್ಗದ ಚಹರೆಯನ್ನಷ್ಟೇ ಉಳಿಸಿಕೊಂಡಿರುತ್ತದೆ. ಇವೆರಡೂ ಆಯ್ಕೆಗಳನ್ನು ಒಟ್ಟಾಗಿ ಗಮನಿಸಿದಾಗ ಇನ್ನೊಂದು ಸರಳ ನಿಯಮ ಗೊತ್ತಾಗುತ್ತದೆ. ಅದರಂತೆ ಕನ್ನಡ ನುಡಿಯಲ್ಲಿ ಬೇರೆ ಬೇರೆ ಪದವರ್ಗಕ್ಕೆ ಸೇರಿದ ಪದಗಳು ಸಂಯೋಜನೆಗೊಂಡಾಗ ಹೊಸರಚನೆಯು ಕೊನೆಯಲ್ಲಿ ಬರುವ ಪದವು ಯಾವ ಪದವರ್ಗಕ್ಕೆ ಸೇರಿರುತ್ತದೋ ಅದರ ಚಹರೆಯನ್ನೇ ಹೊಂದಿರುತ್ತದೆ. ಪದರಚನೆಯ ನೆಲೆಯಲ್ಲಿ ಕಂಡುಬರುವ ಈ ನಿಯಮವು ನುಡಿಯ ಇನ್ನೊಂದು ಸ್ತರವಾದ ವಾಕ್ಯರಚನೆಯಲ್ಲೂ ಕಂಡು ಬರಬೇಕು ಅಂದರೆ, ಕನ್ನಡದ ಒಂದು ವಾಕ್ಯದಲ್ಲಿ ಬೇರೆ ಬೇರೆ ಚಹರೆಯುಳ್ಳ ಪದಕಂತೆಗಳು ಬಂದಾಗ ಯಾವ ಪದಕಂತೆ ಕೊನೆಗೆ ಬರುತ್ತದೋ ಅದೇ ವಾಕ್ಯದ ಚಹರೆಯನ್ನು ನಿಯಂತ್ರಿಸುತ್ತದೆ. ನಾಮಪದ ಕಂತೆ ಮತ್ತು ಕ್ರಿಯಾಪದ ಕಂತೆಗಳು ಸೇರಿದಾಗ ಕ್ರಿಯಾಪದ ಕಂತೆಯೇ ಕೊನೆಯಲ್ಲಿ ಬರಬೇಕು ಮತ್ತು ಅದೇ

ಇಡೀ ವಾಕ್ಯದ ಚಹರೆಯನ್ನು ನಿಯಂತ್ರಿಸಬೇಕು.

ನುಡಿಯ ಎರಡು ಸ್ತರಗಳು ಬೇರೆಬೇರೆ ನಿಯಂತ್ರಣಗಳಿಗೆ ಒಳಗಾಗಿ ಕಾರ್ಯ ನಿರ್ವಹಿಸುತ್ತಿದ್ದರೂ ನುಡಿಗಳಿಕೆಯ ಸಂದರ್ಭದಲ್ಲಿ ಪರಸ್ಪರ ಪೂರಕವಾಗಿಯೇ ಕೆಲಸ ಮಾಡುತ್ತಿರುತ್ತವೆ. ಒಂದು ಸ್ತರದಲ್ಲಿ ಯಾವ ಆಯ್ಕೆಯು ನಡೆದಿರುತ್ತದೋ ಅದಕ್ಕಿಂತ ಭಿನ್ನವಾದ ಆಯ್ಕೆಯನ್ನು ಬೇರೊಂದು ಸ್ತರದಲ್ಲಿ ಮಾಡಿಕೊಳ್ಳುವ ಸಾಧ್ಯತೆಗಳು ಇಲ್ಲವೇ ಇಲ್ಲ.

LADನಲ್ಲಿರುವ ಉಪಘಟಕಗಳ ಪೂರಕತೆಯು ನುಡಿಗಳಿಕೆಯ ಪ್ರಕ್ರಿಯೆಯನ್ನು ಇನ್ನಷ್ಟು ಖಚಿತವಾಗಿ ವಿವರಿಸಲು ನೆರವಾಗುತ್ತದೆ. ಪ್ಲೇಟೊ ಸಮಸ್ಯೆಯು ಎತ್ತಿರುವ ಕನಿಷ್ಠ ಮಾಹಿತಿ ಪೂರೈಕೆಯಿಂದ ಅತ್ಯಂತ ವ್ಯಾಪಕವಾದ ವ್ಯಾಕರಣ ವ್ಯವಸ್ಥೆಯೊಂದು ಹೇಗೆ ನೆಲೆಗೊಳ್ಳುತ್ತದೆ ಎಂಬ ಪ್ರಶ್ನೆಗೆ ಇದು ಸೂಕ್ತ ಉತ್ತರವೆಂದು ತೋರುತ್ತದೆ.

ನುಡಿಗಳಿಕೆಯು ಮೆದುಳಿನಲ್ಲಿ ಹುಟ್ಟಿನಿಂದಲೇ ಜೈವಿಕವಾಗಿ ನೆಲೆಗೊಂಡಿರುವ ವ್ಯವಸ್ಥೆಯೊಂದರಿಂದ ಸಾಧ್ಯವಾಗುತ್ತದೆ ಎಂದು ಹೇಳುವ ಮೂಲಕ ನುಡಿಗಳಿಕೆಗೂ ಜೈವಿಕ ಬೆಳವಣಿಗೆಗೂ ನಂಟು ಇದೆ ಎಂದು ಹೇಳಿದಂತಾಯಿತು. ವಂಶವಾಹಿಗಳಲ್ಲಿ ಅಡಕಗೊಂಡಿರುವ ಸಾಧ್ಯತೆಗಳು ದೇಹದ ಬೆಳವಣಿಗೆಯ ಹಂತಗಳಲ್ಲಿ ಪ್ರಕಟಗೊಳ್ಳುತ್ತವಷ್ಟೆ. ನುಡಿಗಳಿಕೆಗೂ ಈ ಮಾತು ನಿಜವೆಂಬುದು ಸ್ಪಷ್ಟ. ಬೇರೊಂದು ಸಂದರ್ಭದ ಉದಾಹರಣೆಯನ್ನು ತೆಗೆದುಕೊಳ್ಳೋಣ. ಪಾರಿವಾಳದ ಮರಿಯೊಂದು ಮೊಟ್ಟೆಯೊಳಗಿಂದ ಹೊರಬಂದ ಮೇಲೆ ಹಾರುವುದನ್ನು ಹೇಗೆ ಕಲಿಯುತ್ತದೆ ಮತ್ತು ಯಾವಾಗ ಕಲಿಯುತ್ತದೆ? ತಾಯಿ ಹಕ್ಕಿಯು ಹಾರುವುದನ್ನು ಕಲಿಸುತ್ತದೆ ಮತ್ತು ತಾಯಿ ಹಕ್ಕಿ ಹಾರುವುದನ್ನು ನೋಡಿ ಮರಿಹಕ್ಕಿ ಅನುಕರಿಸಿ ತಾನೂ ಹಾರಲು ಕಲಿಯುತ್ತದೆ ಎಂದು ಸಾಮಾನ್ಯವಾಗಿ ತಿಳಿಯಲಾಗುತ್ತದೆ. ಹೊರಗಿನಿಂದ ನೋಡುವ ನಮಗೆ ಇದೇ ಸರಿಯಾದ ವಿವರಣೆ ಎಂದು ತೋರುತ್ತದೆ. ಆದರೆ ವಾಸ್ತವವಾಗಿ ಏನಾಗುತ್ತದೆ ನೋಡೋಣ. ಮರಿಹಕ್ಕಿಗೆ ಹಾರಲು ನೆರವಾಗುವ ರೆಕ್ಕೆಗಳು ಮೂಡುವುದಕ್ಕೂ ಅದು ಹಾರಲು ಯತ್ನಿಸುವುದಕ್ಕೂ ತಾಳೆಯಾಗಬೇಕು. ಮರಿಹಕ್ಕಿಯ ಜೈವಿಕ ಬೆಳವಣಿಗೆಯು ಇವೆರಡೂ ಒಂದೇ ಕಾಲದಲ್ಲಿ ಸಂಭವಿಸಬೇಕು. ಒಂದು ವೇಳೆ ಮರಿಹಕ್ಕಿಯ ರೆಕ್ಕೆಗಳು ಮೂಡುವ ಸಂದರ್ಭದಲ್ಲಿ ಅದಕ್ಕೆ ಹಾರಲು ಅವಕಾಶ ಇಲ್ಲದೆ ಹೋದಲ್ಲಿ ಜೈವಿಕವಾಗಿ ಹಾರುವ ಸಾಧ್ಯತೆಯು ತಲೆದೋರಿದರೂ ಅದು ಹಾರಲಾರದು. ಮುಂದೆ ಆ ಹಕ್ಕಿಗೆ ಹಾರುವ ಅವಕಾಶಗಳನ್ನು ಒದಗಿಸಿಕೊಟ್ಟರೂ ಬೆಳೆದ ಹಕ್ಕಿಯು ರೆಕ್ಕೆಗಳಿದ್ದರೂ ಹಾರುವುದನ್ನು ಕಲಿಯಲಾರದು. ಇದರಿಂದ ಗೊತ್ತಾಗುವುದಿಷ್ಟು. ದೈಹಿಕ ಬೆಳವಣಿಗೆಯ ಹಂತಕ್ಕೂ ವಂಶವಾಹಿಗಳು ಸಾಧ್ಯತೆಯು ಪ್ರಕಟವಾಗುವುದ್ಕೂ ನೇರವಾದ ನಂಟಿದೆ.

ಇದು ನುಡಿಗಳಿಕೆಗೂ ಸಂಬಂಧಿಸಿದಂತೆ ನಿಜ ಹೊರಜಗತ್ತಿನಿಂದ ದೊರಕುವ ಕನಿಷ್ಠ ಸಾಮಗ್ರಿಯು ಮೆದುಳಿನ ಬೆಳವಣಿಗೆಯ ನಿರ್ದಿಷ್ಟ ಹಂತದಲ್ಲಿ ಮಾತ್ರ LAD ಅನ್ನು ಚೋದಿಸಬಲ್ಲದು. ಆಗ ಮಾತ್ರ ಗೊತ್ತಾದ ನುಡಿಯೊಂದು ಮಗುವಿನಲ್ಲಿ

ನೆಲೆಗೊಳ್ಳುತ್ತದೆ. ಇವೆರಡೂ ಸಂಭವಗಳು ಏಕಕಾಲಕ್ಕೆ ನಡೆಯದಿದ್ದಲ್ಲಿ LAD ಕ್ರಿಯಾಶೀಲವಾಗದು ಮತ್ತು ಮಗುವಿನಲ್ಲಿ ನುಡಿಗಳಿಕೆ ಸಾಧ್ಯವಾಗದು. ಇದು ನುಡಿಗಳಿಕೆಗೂ ಜೈವಿಕ ಬೆಳವಣಿಗೆಗೂ ನೇರವಾದ ನಂಟು ಇದೆ ಎಂಬುದನ್ನು ದೃಢಪಡಿಸುತ್ತದೆ. ಹಲವು ಪ್ರಯೋಗಗಳು ಈ ಅಂಶವನ್ನು ಸ್ಪಷ್ಟ ಪಡಿಸಿವೆ. ನುಡಿಯ ಸಾಮರ್ಥ್ಯದ ಬೇರೆಬೇರೆ ನೆಲೆಗಳು ಆವಿಷ್ಕಾರಗೊಳುವುದಕ್ಕೂ ಮೆದುಳಿನ ಬೆಳವಣಿಗೆಯಿಂದಾಗಿ ದೈಹಿಕವಾದ ಬೇರೆಬೇರೆ ಚಟುವಟಿಕೆಗಳು ನೆಲೆಗೊಳ್ಳುವುದಕ್ಕೂ (ಎದ್ದು ಕೂರುವುದು, ನಿಲ್ಲುವುದು, ಓಡುವುದು, ಕುಣಿಯುವುದು, ಮೆಟ್ಟಿಲು ಹತ್ತುವುದು ಮುಂತಾದವು) ನಂಟಿರುವುದನ್ನು ಕಂಡುಕೊಳ್ಳಲಾಗಿದೆ.

ಪ್ಲೇಟೋ ಸಮಸ್ಯೆಗೆ ಪ್ಲೇಟೋ ಇಲ್ಲವೇ ಅವನ ಅನುಯಾಯಿಗಳು ಕಂಡುಕೊಂಡ ಉತ್ತರವೇನೇ ಇರಲಿ ನುಡಿಗಳಿಕೆಗೆ ಸಂಬಂಧಿಸಿದ ಅಧ್ಯಯನಗಳು ಮತ್ತು ಚಾಮ್‌ಸ್ಕಿ ಮಂಡಿಸಿರುವ ಚಿಂತನೆಗಳು ಈ ಸಮಸ್ಯೆಗೆ ಒಪ್ಪಬಹುದಾದ ಪರಿಹಾರವನ್ನು ಸೂಚಿಸಿವೆ. ಆಗಲೇ ಹೇಳಿದಂತೆ ಈ ಚಿಂತನೆಗಳು ಈವರೆಗೆ ಒಪ್ಪಲಾಗಿದ್ದ ಸಾಧ್ಯತೆಗಳನ್ನು ಅಲ್ಲಗಳೆದಿವೆ. ಇದಕ್ಕೆ ಪರ್ಯಾಯವಾದ ವಿವರಣೆ ದೊರೆಯುವವರೆಗಂತೂ ಈ ಚಿಂತನೆಗಳನ್ನು ಒಪ್ಪಬೇಕಾಗುತ್ತದೆ.

ಭಾಷೆಯ ಅಧ್ಯಯನವೆಂಬ ವಿಜ್ಞಾನ

ಎಲ್ಲ ನಾಡುಗಳಲ್ಲೂ ನುಡಿಯ ಅಧ್ಯಯನವು ಆಸಕ್ತಿಯ ವಿಷಯವೇ ಆಗಿದೆ. ನುಡಿಯ ರಚನೆಯನ್ನು ವಿವರಿಸುವ ಅಧ್ಯಯನಗಳು ಕಳೆದ ಶತಮಾನದಲ್ಲಿ ದೊಡ್ಡ ಪ್ರಮಾಣದಲ್ಲಿ ನಡೆದಿವೆ. ಆದರೆ ನುಡಿಗೂ ಮತ್ತು ಅದನ್ನು ಒಂದು ಸಾಮರ್ಥ್ಯವನ್ನಾಗಿ ಹೊಂದಿರುವ ಮಾನವ ಜೀವಿಗೂ ಇರುವ ನಂಟನ್ನು ಕುರಿತಂತೆ ವ್ಯವಸ್ಥಿತವಾಗಿ ಅಧ್ಯಯನ ಮಾಡಲು ಆರಂಭಿಸಿದ್ದು ಕಳೆದ ಆರೇಳು ದಶಕಗಳಿಂದ ಮಾತ್ರ. ನುಡಿಯು ಮಾನವರನ್ನು ಇತರ ಪ್ರಾಣಿಗಳಿಂದ ಬೇರೆ ಮಾಡಿ ನೋಡಲು ನೆರವಾಗುವ ಮುಖ್ಯ ಚಹರೆಯಾಗಿದೆ. ಹಾಗೆಯೇ ಪ್ರತಿಯೊಂದು ನುಡಿಗೂ ಅದನ್ನು ಬಳಸುವ ಸಮುದಾಯವೊಂದು ಇದ್ದೇ ಇರುತ್ತದೆ. ಹೀಗಾಗಿ ನುಡಿಯು ವ್ಯಕ್ತಿಯ ವಿಶಿಷ್ಟವಾದ ಚಹರೆಯಾಗಿರುವಂತೆ ಸಮುದಾಯದ ಲಕ್ಷಣಗಳನ್ನು ನಿರೂಪಿಸುವಲ್ಲಿ ನೆರವಾಗುವ ಸಂಗತಿಯೂ ಆಗಿದೆ. ಆದ್ದರಿಂದ ನುಡಿಯನ್ನು ವ್ಯಕ್ತಿಯ ನೆಲೆಯಲ್ಲಿ ಅಧ್ಯಯನ ಮಾಡಬೇಕೋ ಇಲ್ಲವೇ ಸಮುದಾಯದ ನೆಲೆಯಲ್ಲಿ ಅಧ್ಯಯನ ಮಾಡಬೇಕೋ ಎಂಬ ಬಿಕ್ಕಟ್ಟು ಇದ್ದೇ ಇದೆ. ಸಮುದಾಯ ಮತ್ತು ನುಡಿಯ ಸಂಬಂಧದ ಅಧ್ಯಯನಗಳ ಉದ್ದೇಶ, ಸ್ವರೂಪಗಳ ಚರ್ಚೆಯನ್ನು ಬದಿಗಿರಿಸೋಣ. ಸದ್ಯ ವ್ಯಕ್ತಿಗೂ ನುಡಿಗೂ ಇರುವ ನಂಟಿನ ಸ್ವರೂಪವನ್ನು ಅಧ್ಯಯನ ಮಾಡುವ ನೆಲೆಗಳನ್ನಷ್ಟೇ ನಾವಿಲ್ಲಿ ಪರಿಶೀಲಿಸಬೇಕಾಗಿದೆ.

ಜಗತ್ತಿನಾದ್ಯಂತ ಹಲವಾರು ನುಡಿಗಳಿವೆ. ಅವುಗಳನ್ನು ಆಡುವ ಜನರೂ ಇದ್ದಾರೆ. ಒಂದೊಂದು ನುಡಿಯ ಚಹರೆಗೂ ಇನ್ನೊಂದು ನುಡಿಯ ಚಹರೆಗೂ ಹಲವು ವ್ಯತ್ಯಾಸಗಳಿರುತ್ತವೆ. ಈ ವ್ಯತ್ಯಾಸಗಳ ಪರಿಣಾಮವಾಗಿ ಬೇರೆಬೇರೆ ನುಡಿಗಳನ್ನಾಡುವ ವ್ಯಕ್ತಿಗಳ ನಡುವೆ ಮಾತುಕತೆ ಕಷ್ಟಸಾಧ್ಯ. ಇದರಿಂದಷ್ಟೇ ಒಂದೊಂದು ನುಡಿಗೂ

ಅದನ್ನಾಡುವ ವ್ಯಕ್ತಿಗೂ ಇರುವ ನಂಟು ತೀರಾ ವಿಶಿಷ್ಟವಾದುದು ಎಂಬ ನಿರ್ಣಯಕ್ಕೆ ಬರುವಂತಿಲ್ಲ. ಬೇರೆ ಬೇರೆ ನುಡಿಗಳಾಡುವ ಇಬ್ಬರಿಗೆ ಒಂದು ಸಮಾನ ಲಕ್ಷಣವಿರುತ್ತದೆ. ಅದೇಂದರೆ ಅವರಿಬ್ಬರೂ ಒಂದಲ್ಲ ಒಂದು ಮಾನವ ಸಹಜ ನುಡಿಯನ್ನು ಆಡುತ್ತಿರುತ್ತಾರೆ. ಆದ್ದರಿಂದ ನಾವು ಮಾನವ ಸಹಜ ನುಡಿಗೂ ಮಾನವ ಜೀವಿಗೂ ಇರುವ ನಂಟನ್ನು ಅಧ್ಯಯನ ಮಾಡುವುದು ಅಗತ್ಯವಾಗಿದೆ. ಮಾನವರ ಸಹಜ ನುಡಿ ಎಂಬುದು ಬೇರೆಬೇರೆ ನುಡಿಗಳಾಗಿ ಆವಿಷ್ಕಾರಗೊಂಡರೂ ಅವೆಲ್ಲದರ ಹಿಂದೆ ಇರುವ ಸಾಮಾನ್ಯ ಚೌಕಟ್ಟು ಮಾತ್ರ ಒಂದೇ ಆಗಿರುತ್ತದೆ. ಈ ತಿಳುವಳಿಕೆಯಿಂದ ಹೊರಟಾಗ ಮಾತ್ರ ನುಡಿಯ ಅಧ್ಯಯನವು ಒಂದು ವಿಜ್ಞಾನದ ನೆಲೆಯನ್ನು ಪಡೆಯಬಲ್ಲದು.

ಬೇರೆಬೇರೆ ವಿಜ್ಞಾನದ ಕವಲುಗಳು ಅಧ್ಯಯನಕ್ಕಾಗಿ ಆರಿಸಿಕೊಳ್ಳುವ ವಸ್ತು ಜಗತ್ತಾಗಲೀ, ಸಸ್ಯ ಜಗತ್ತಾಗಲೀ, ಪ್ರಾಣಿ ಜಗತ್ತಾಗಲೀ, ತಂತಮ್ಮ ವಲಯಗಳಲ್ಲಿ ಇರುವ ಸಾಮಾನ್ಯ ತತ್ವವನ್ನು ಹುಡುಕುತ್ತಿರುತ್ತವೆ. ನುಡಿಯ ಅಧ್ಯಯನವೂ ಕೂಡಾ ಮಾನವ ನುಡಿಗಳ ಹಿಂದಿರುವ ಸಾಮಾನ್ಯ ತತ್ವವನ್ನು ಹುಡುಕುತ್ತಿರುತ್ತದೆ. ಜೊತೆಗೆ ಆ ಸಾಮಾನ್ಯ ತತ್ವವು ಹೇಗೆ ಮನುಷ್ಯರ ಮೆದುಳಿನ ಒಂದು ಚಹರೆಯಾಗಿದೆ ಎಂಬುದನ್ನು ತೋರಿಸಲು ಯತ್ನಿಸುತ್ತಿರುತ್ತದೆ.

ಬೇರೆ ಬೇರೆ ವಿಜ್ಞಾನದ ಕವಲುಗಳು ಸಾಮಾನ್ಯವಾಗಿ ಒಂದು ಆಧಾರ ಕಲ್ಪನೆಯನ್ನು ರೂಪಿಸಿಕೊಳ್ಳುತ್ತವೆ ಬಳಿಕ ಆ ಆಧಾರ ಕಲ್ಪನೆಯು ಸರಿಯೋ ತಪ್ಪೋ ಎಂಬುದನ್ನು ಕಂಡು ಹಿಡಿಯಲು ಪ್ರಯೋಗಗಳನ್ನು ರೂಪಿಸುತ್ತವೆ. ಈ ಪ್ರಯೋಗಗಳಿಗಾಗಿ ವಿಜ್ಞಾನದ ಕವಲುಗಳು ತಾವು ಅಧ್ಯಯನ ಮಾಡುತ್ತಿರುವ ವಲಯದ ಸಹಜ ಲಕ್ಷಣಗಳನ್ನು ಪರಿವರ್ತಿಸಿಕೊಳ್ಳುತ್ತಿರುತ್ತವೆ. ಸಸ್ಯ ವಿಜ್ಞಾನಿ ಬೇರೆ ಬೇರೆ ಗಿಡಗಳನ್ನು ಕಸಿ ಮಾಡುವುದು ಗಮನಿಸಿ. ಹೀಗೆ ಕಸಿ ಮಾಡುವುದೇಕೆ? ತಾನು ರೂಪಿಸಿಕೊಂಡ ಯಾವುದೋ ಆಧಾರ ಕಲ್ಪನೆಯು ಸರಿಯೋ ತಪ್ಪೋ ಎಂದು ಕಂಡುಕೊಳ್ಳುವುದು ಈ ಕಸಿ ಪ್ರಯೋಗದ ಗುರಿಯಾಗಿರುತ್ತದೆ. ಆ ನುಡಿಯ ಅಧ್ಯಯನ ಮಾಡುವವರೂ ಕೂಡಾ ತಮ್ಮ ಆಧಾರ ಕಲ್ಪನೆಯನ್ನು ಪರೀಕ್ಷಿಸಲು ನುಡಿಬಳಕೆಯ ಸಂದರ್ಭಗಳನ್ನು ತಮಗೆ ಬೇಕಾದಂತೆ ಪರಿವರ್ತಿಸಿಕೊಳ್ಳುತ್ತಾರೆ. ಅಂದರೆ ನುಡಿಯ ಅಧ್ಯಯನದ ದಾರಿಯು ವಿಜ್ಞಾನದ ಕವಲುಗಳ ದಾರಿಯನ್ನೇ ಅನುಕರಿಸುತ್ತದೆ ಎಂದಾಯಿತು.

ನುಡಿಯ ಅಧ್ಯಯನವು ಒಂದು ವಿಜ್ಞಾನ ಎಂದು ಹೇಳಿದಾಕ್ಷಣ ಅದೊಂದು ಮೌಲ್ಯಾತ್ಮಕ ನಿರ್ಣಯ ಎಂದು ತಿಳಿಯಬಾರದು. ಅಂದರೆ ವಿಜ್ಞಾನದ ದಾರಿ ಉಳಿದ ಅಧ್ಯಯನಗಳ ದಾರಿಗಿಂತ ಉತ್ತಮ ಎಂಬ ನಿಲುವು ಇಲ್ಲಿಲ್ಲ. ವಿಜ್ಞಾನದ ದಾರಿಯನ್ನು ಹಿಡಿಯದೆಯೂ ಎಷ್ಟೋ ತಿಳುವಳಿಕೆಗಳು ನಮಗೆ ದೊರೆಯುತ್ತವೆ. ಆ ತಿಳುವಳಿಕೆಗಳು ಅನನ್ಯವಾದುದೋ ಆಗಿರುತ್ತವೆ. ಬೇರೊಂದು ಸಂದರ್ಭದಲ್ಲಿ ಚಾಮ್ಸ್ಕಿ ಹೇಳಿದ ಮಾತನ್ನು ಇಲ್ಲಿ ಉಲ್ಲೇಖಿಸಬಹುದು. ದಾಸ್ತೋವ್‌ಸ್ಕಿ ತನ್ನ ಕಾದಂಬರಿಗಳಲ್ಲಿ ಚಿತ್ರಿಸುವ ಪಾತ್ರಗಳಿಂದ ನಮಗೆ ಮಾನವ ಸಂದರ್ಭದ ಆಳವಾದ ತಿಳಿವು ದೊರೆಯುತ್ತದೆ. ವಿಜ್ಞಾನದ ದಾರಿ ಹಿಡಿದು ಡಾರ್ವಿನ್ ಒದಗಿಸಿಕೊಟ್ಟ ತಿಳುವಳಿಕೆಗಿಂತ ದಾಸ್ತೊವ್‌ಸ್ಕಿಯ ಕಾದಂಬರಿಗಳಿಂದ ದೊರೆಯುವ ತಿಳುವಳಿಕೆ ಕಡಿಮೆ ದರ್ಜೆಯದ್ದೇನೂ ಅಲ್ಲ.

ಮನಃಶಾಸ್ತ್ರವು ವಿವರಿಸದಿರುವ ಎಷ್ಟೋ ಸಂಗತಿಗಳು ಆ ಕಾದಂಬರಿಗಳಿಂದ ನಮಗೆ ದೊರೆಯುತ್ತವೆ. ಹಾಗಾಗಿ ವಿಜ್ಞಾನದ ದಾರಿಯಿರಲಿ ಇತರ ದಾರಿಗಳಿರಲಿ ಒಂದಕ್ಕೊಂದು ಎದುರಾಳಿಗಳಲ್ಲ. ಒಂದು ಇನ್ನೊಂದರೊಡನೆ ಪೈಪೋಟಿ ನಡೆಸುತ್ತಿಲ್ಲ. ಎರಡೂ ಮಾನವ ಶೋಧಗಳ ನೆಲೆಯಲ್ಲಿ ಪೂರಕವೇ ಆಗಿವೆ. ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ ವಿಜ್ಞಾನದ ದಾರಿಯನ್ನು ಹಿಡಿದು ಅಧ್ಯಯನ ಮಾಡಬೇಕಾದ ವಲಯಗಳು ಮತ್ತು ಆ ದಾರಿಯನ್ನು ಹಿಡಿದು ಅಧ್ಯಯನ ಮಾಡಲಾಗದ ವಲಯಗಳು ಬೇರೆ ಬೇರೆಯಾಗಿರುತ್ತವೆ. ಉದಾ.ಗೆ ಮನುಷ್ಯರ ಉಸಿರಾಟದ ವ್ಯವಸ್ಥೆ, ಸಸ್ಯಗಳ ಬೆಳವಣಿಗೆ, ಆಕಾಶಕಾಯಗಳ ಚಲನೆ- ಮುಂತಾದವು ಒಂದಿಲ್ಲೊಂದು ಬಗೆಯಲ್ಲಿ ವಿಜ್ಞಾನದ ದಾರಿಯನ್ನು ಹಿಡಿದು ಅಧ್ಯಯನ ಮಾಡಬಹುದಾದ ವಲಯಗಳಾಗಿವೆ. ಆದರೆ ದೇವರು, ಪ್ರಜ್ಞೆ, ಮುಂತಾದ ಮಾನವ ಬದುಕಿನ ಎಷ್ಟೋ ಮಹತ್ವದ ಸಂಗತಿಗಳನ್ನು ವಿಜ್ಞಾನದ ದಾರಿಯಿಂದ ಅಧ್ಯಯನ ಮಾಡಲಾಗುವುದಿಲ್ಲ. ನುಡಿಯು ವಿಜ್ಞಾನದ ಹಾದಿಯನ್ನು ಹಿಡಿದು ಅಧ್ಯಯನ ಮಾಡಬಹುದಾದ ವಲಯಕ್ಕೆ ಸೇರಿದ್ದು ಎಂಬುದು ಗಮನಾರ್ಹ. ಆದ್ದರಿಂದ ನುಡಿಯ ಅಧ್ಯಯನವು ಒಂದು ವಿಜ್ಞಾನ ಎಂದು ಹೇಳುವುದು ಒಂದು ವಿವರಣೆ ಮಾತ್ರ.

ಮಾನವ ನುಡಿಗಳೆಲ್ಲವೂ ಹೇಗೆ ರಚನೆಗೊಂಡಿವೆ ಎಂಬುದನ್ನು ಹುಡುಕ ಹೊರಟರೆ ಅತ್ಯಂತ ಸಂಕೀರ್ಣವಾದ ಸಂಗತಿಗಳು ಹೊರ ಬೀಳುತ್ತವೆ. ಒಬ್ಬ ವ್ಯಕ್ತಿ ಕನ್ನಡ ಮಾತಾಡುತ್ತಾರೆ ಎಂದು ಕೊಳ್ಳಿ. ಈ ಕನ್ನಡ ಎಂಬುದು ಏನು? ಅದು ಆ ವ್ಯಕ್ತಿಯ ಯಾವ ಅಂಗದ ಸಾಮರ್ಥ್ಯವಾಗಿದೆ? ಸಾಮಾನ್ಯ ತಿಳುವಳಿಕೆಯು ನುಡಿಯುವ ಅಂಗಗಳು ಮತ್ತು ಕೇಳುವ ಅಂಗಗಳಲ್ಲಿ ಈ ಸಾಮರ್ಥ್ಯ ಅಡಗಿದೆ ಎಂದು ನಂಬುತ್ತದೆ. ಕನ್ನಡದ ಹತ್ತಾರು ನುಡಿಗಟ್ಟುಗಳು ಗಾದೆ ಮಾತುಗಳು ಈ ತಿಳುವಳಿಕೆಯನ್ನೇ ಆಧರಿಸಿವೆ. ಆದರೆ ಕೊಂಚ ಯೋಚಿಸಿದರೂ ಆ ವ್ಯಕ್ತಿಯಲ್ಲಿ ಕನ್ನಡ ಎಂಬ ಸಾಮರ್ಥ್ಯ ಇರುವುದಕ್ಕೂ ನುಡಿಯುವ ಮತ್ತು ಕೇಳುವ ಅಂಗಗಳಿಗೂ ನೇರವಾದ ನಂಟು ಇಲ್ಲ ಎಂಬುದು ಗೊತ್ತಾಗುತ್ತದೆ. ನುಡಿಯದೆಯೂ, ಕೇಳಿಸಿಕೊಳ್ಳದೆಯೂ ಕನ್ನಡವೆಂಬ ಸಾಮರ್ಥ್ಯವನ್ನು ಒಬ್ಬ ವ್ಯಕ್ತಿ ಹೊಂದಿರುವುದು ಸಾಧ್ಯ. ಆದ್ದರಿಂದ ಸಾಮಾನ್ಯ ತಿಳುವಳಿಕೆಯ ನೆಲೆಗಳು ಸಾಲದಾಗುತ್ತವೆ. ನುಡಿಯ ಸಾಮರ್ಥ್ಯಕ್ಕೂ ವ್ಯಕ್ತಿಯ ಮೆದುಳಿಗೂ ನೇರವಾದ ನಂಟಿದೆ ಎಂದು ತಿಳಿಯುವುದು ಸರಿಯಾದುದು. ಏಕೆಂದರೆ ಮೆದುಳಿಗೆ, ಅದರಲ್ಲೂ ಅದರ ಗೊತ್ತಾದ ಭಾಗಕ್ಕೆ ಆಘಾತವಾದಾಗ ನುಡಿಯ ಸಾಮರ್ಥ್ಯ ಕಳೆದು ಹೋಗುವುದನ್ನು ಬಲ್ಲೆವು. ಆದ್ದರಿಂದ ನುಡಿಯ ಸಾಮರ್ಥ್ಯವು ಮೆದುಳಿನ ಸೊತ್ತು ಎಂಬ ತಿಳುವಳಿಕೆಯು ಸಾಕಷ್ಟು ಬಲವಾದ ಪುರಾವೆಗಳನ್ನು ಹೊಂದಿವೆ.

ಮೆದುಳನ್ನು ಅಧ್ಯಯನ ಮಾಡುವವರು ಅದನ್ನು ಬೇರೆಬೇರೆ ಭಾಗಗಳನ್ನಾಗಿ ಮಾಡಿಕೊಳ್ಳುತ್ತಾರೆ. ಮುಮ್ಮೆದುಳು ಹಾಗೂ ಹಿಮ್ಮೆದುಳು ಎಂಬ ಎರಡು ಭಾಗಗಳಿವೆ. ಮುಮ್ಮೆದುಳನ್ನು ಎಡ ಮತ್ತು ಬಲ ಎಂದು ವಿಭಜಿಸಿಕೊಳ್ಳಲಾಗಿದೆ. ಮೆದುಳಿನ ಮೇಲ್‌ರಚನೆಯಲ್ಲೇ ಈ ಭಾಗಗಳು ಗೊತ್ತಾಗುವಂತಿವೆ. ಇದು ಮೆದುಳಿನ ರಚನೆಯನ್ನು

ಅಧ್ಯಯನಕಾರರು ವಿಭಜಿಸಿಕೊಂಡಿರುವುದಕ್ಕೆ ಸರಳವಾದ ಸಮರ್ಥನೆ. ಆದರೆ ಇನ್ನೂ ಬಿಡಿಸಿ ನೋಡುವಾಗ ಮನುಷ್ಯರ ದೇಹದ ಮತ್ತು ಮನಸ್ಸಿನ ಬೇರೆಬೇರೆ ಚಟುವಟಿಕೆಗಳನ್ನು ನಿರ್ದೇಶಿಸುವ ಮತ್ತು ನಿಯಂತ್ರಿಸುವ ಭಾಗಗಳು ಮೆದುಳಿನಲ್ಲಿ ಬೇರೆಬೇರೆಯಾಗಿ ನೆಲೆಗೊಂಡಿವೆ ಎಂಬುದು ಸ್ಪಷ್ಟವಾಗಿದೆ. ದೃಷ್ಟಿ, ಶ್ರವಣ ಸಾಮರ್ಥ್ಯ, ವಾಸನ ಗುರುತಿಸುವಿಕೆ, ರುಚಿ ಗುರುತಿಸುವಿಕೆ, ಸ್ಪರ್ಶಜ್ಞಾನ, ಇವೇ ಮುಂತಾದ ವಲಯಗಳನ್ನು ನೋಡೋಣ ನಾವು ಕಣ್ಣಿನಿಂದ ನೋಡುತ್ತೇವೆ ಕಿವಿಯಿಂದ ಕೇಳುತ್ತೇವೆ. ಮೂಗಿನಿಂದ ವಾಸನೆ ಗುರುತಿಸುತ್ತೇವೆ. ನಾಲಿಗೆಯಿಂದ ರುಚಿ ಪತ್ತೆ ಮಾಡುತ್ತೇವೆ, ಸ್ಪರ್ಶಜ್ಞಾನಕ್ಕೆ ಚರ್ಮ ನೆರವಾಗುತ್ತದೆ. ಈ ಅಂಗಗಳು ದೇಹರಚನೆಯಲ್ಲಿ ತಮ್ಮಷ್ಟಕ್ಕೆ ತಾವೇ ಸ್ವತಂತ್ರವಾಗಿ ಕಾರ್ಯ ನಿರ್ವಹಿಸುತ್ತವೆ. ಈ ಅಂಗಗಳಿಂದ ಬರುವ ತಿಳುವಳಿಕೆಯನ್ನು ನಿರ್ದೇಶಿಸುವ ಮೆದುಳಿನ ಭಾಗಗಳು ಬೇರೆಬೇರೆಯಾಗಿವೆ. ಈ ಅಂಗಗಳ ಮೂಲಭೂತ (ದೇಹ ರಚನೆಯ ಭಾಗವಾಗಿ) ಕೆಲಸಗಳಿಗೂ ಅವುಗಳಿಂದ ದೊರೆಯುವ ತಿಳುವಳಿಕೆಗೂ ನೇರ ನಂಟು ಇಲ್ಲ. ಉಸಿರಾಟಕ್ಕಾಗಿ ಇರುವ ಮೂಗಿನ ಕೆಲಸ ಮತ್ತು ಅದರಿಂದ ದೊರೆಯುವ ವಾಸನೆಯ ತಿಳಿವು ಬೇರೆಬೇರೆ. ಈ ಅಂಶ ಮೆದುಳನ್ನು ಅಧ್ಯಯನ ಮಾಡುವವರಿಗೆ ಮುಖ್ಯ. ಚಾಮ್‌ಸ್ಕಿ ನುಡಿಯು ಮೆದುಳಿನಲ್ಲಿ ನೆಲೆಗೊಂಡಿದೆ ಎಂಬ ಪ್ರಮೇಯವನ್ನು ವಿವರಿಸುವಾಗ ಮೆದುಳಿನ ಕಾರ್ಯ ನಿರ್ವಹಣೆಯ ಈ ಮಾದರಿಯನ್ನು ಆಶ್ರಯಿಸಿದ್ದಾರೆ ಮೆದುಳು ಕೆಲಸ ಮಾಡುವ ಈ ಮಾದರಿಯನ್ನು ಅಂಗಾಂಗ ಸಂಬಂಧ (ಸಮನಾಯ ಸಂಬಂಧ) ಎನ್ನಲಾಗಿದೆ. ಅಂದರೆ. ಪ್ರತಿಯೊಂದು ಭಾಗವೂ ಸ್ವತಂತ್ರ ಎನಿಸಿದರೂ ಎಲ್ಲ ಅಂಗಗಳೂ ಒಟ್ಟಾರೆಯಾಗಿ ಒಂದೇ ಗುರಿಯತ್ತ ಮುಖ ಮಾಡಿರುತ್ತವೆ. ನುಡಿಯೂ ಕೂಡಾ ಹೀಗೆ ಮೆದುಳಿನ ಮೂಲ ಕಾರ್ಯಗಳಲ್ಲಿ ಒಂದಾಗಿದೆ.

ಅಂಗಾಂಗ ಸಂಬಂಧವನ್ನು ಎರಡು ರೀತಿಗಳಲ್ಲಿ ವಿವರಿಸಬಹುದು. ಒಂದು: ನುಡಿಯ ಸಾಮರ್ಥ್ಯವು ಮೆದುಳಿನ ವಿಶಿಷ್ಟ ನೆಲೆಯಾಗಿದ್ದು ಅದು ಇತರ ಸಾಮರ್ಥ್ಯಗಳಿಗಿಂತ (ಸಂಗೀತ, ಗಣಿತ, ನೈತಿಕತೆ ಇತ್ಯಾದಿ) ಬೇರೆಯಾದುದು ಮತ್ತು ಸ್ವತಂತ್ರವಾದುದು. ಎರಡು: ನುಡಿಯ ಸಾಮರ್ಥ್ಯವೇ ಹಲವು ಉಪ ರಚನೆಗಳನ್ನು ಹೊಂದಿದ್ದು ಆ ಉಪರಚನೆಗಳು ತಮಗೆ ತಾವೇ ಸ್ವತಂತ್ರ ನಿರ್ದೇಶನ ಕೇಂದ್ರಗಳನ್ನು ಹೊಂದಿರುತ್ತವೆ; ಆ ನಿರ್ದೇಶನ ಕೇಂದ್ರಗಳ ನಡುವೆ ಅಂಗಾಂಗ ಸಂಬಂಧವಿರುತ್ತದೆ. ಉದಾ.ಗೆ ಉಲಿಗಳನ್ನು ಕೇಳಿಸಿಕೊಂಡು ಗುರುತಿಸುವ ಮೆದುಳಿನ ಭಾಗ ಮತ್ತು ಅಂಥದೇ ಉಲಿಗಳನ್ನು ಉಚ್ಚರಿಸಲು ನೆರವಾಗುವ ಮೆದುಳಿನ ಭಾಗ ಬೇರೆಬೇರೆ. ಆದರೂ ಮೆದುಳಿನ ಸಹಜ ಸ್ಥಿತಿಯಲ್ಲಿ ಆ ಎರಡೂ ಭಾಗಗಳ ನಡುವೆ ಹೊಂದಾಣಿಕೆ ಇರುತ್ತದೆ.

ಈ ಲಕ್ಷಣವನ್ನು ಮತ್ತಷ್ಟು ವಿವರಿಸಿಕೊಳ್ಳುವ ಅಗತ್ಯವಿದೆ. ಕುರುಡು ವ್ಯಕ್ತಿಗೆ ಕಿವುಡುತನ ಇರಬೇಕೆಂದಿಲ್ಲ. ಹಾಗೆಯೇ ಕಿವುಡರು, ಕುರುಡರಾಗಿರಬೇಕಾಗಿಲ್ಲ. ಕಣ್ಣುಗಳು ಮತ್ತು ಕಿವಿಗಳು ಅಂಗಗಳಾಗಿ ದೇಹದಲ್ಲಿ ಇದ್ದಾಗಲೂ ಕುರುಡುತನ ಮತ್ತು ಕಿವುಡುತನಗಳು ಉಂಟಾಗುವುದಕ್ಕೆ ಬೇರೇನೂ ಕಾರಣವಿರಬಹುದು. ಮೆದುಳಿನ ಗೊತ್ತಾದ ಭಾಗದಲ್ಲಿ ಉಂಟಾಗಿರುವ ನ್ಯೂನತೆ ಇದಕ್ಕೆ ಕಾರಣವಾಗಿರಬಹುದು.

ಮೆದುಳು ಎಷ್ಟು ಸಂಕೀರ್ಣವಾದ ರಚನೆಯನ್ನು ಹೊಂದಿದೆ ಎಂದರೆ ಬೇರೆ ಬೇರೆ ಅಂಗಗಳಲ್ಲಿ ಉಂಟಾಗಿರುವ ನ್ಯೂನತೆಗಳಿಗೂ ಮೆದುಳಿನ ಕೇಂದ್ರ ಕಾರ್ಯ ನಿರ್ವಹಣಾ ವ್ಯವಸ್ಥೆಗೂ ಸಂಬಂಧವಿಲ್ಲ. ಅಂದರೆ ಲೋಕಗ್ರಹಿಕೆ ಎಂಬುದು ಮೆದುಳಿನ ಕಾರ್ಯಗಳಲ್ಲಿ ಒಂದು ಎಂದು ನಾವು ತಿಳಿಯುವುದಾದರೆ ಈ ಲೋಕಗ್ರಹಿಕೆಗೆ ನೆರವಾಗುವ ಒಂದು ಅಂಗದ ನ್ಯೂನತೆಯಿಂದಾಗಿ ಮೆದುಳು ಕುಂದುವುದಿಲ್ಲ. ಹೀಗಾಗಿ ಕುರುಡರೂ ಕಿವುಡರೂ ಕಡಿಮೆ ಬುದ್ಧಿಮಟ್ಟದವರು ಎಂದು ತೀರ್ಮಾನಿಸಲು ಬರುವುದಿಲ್ಲ.

ಮೆದುಳಿನ ಈ ಸಾಮರ್ಥ್ಯವು ನುಡಿ ಸಾಮರ್ಥ್ಯದ ನೆಲೆಯಲ್ಲೂ ದಿಟವೇ ಆಗಿದೆ. ಕ್ರಿಸ್ಟೋಫರ್ ಟೈಲರ್ ಎಂಬ ವ್ಯಕ್ತಿಯನ್ನು ಅಧ್ಯಯನ ಮಾಡಿದ ತಜ್ಞರು ನೀಡಿದ ಫಲಿತಾಂಶವೊಂದು ಇದಕ್ಕೆ ನದರ್ಶನ. (ಈತನನ್ನು ಕುರಿತ ದೃಶ್ಯಾವಳಿಗಳು, ಮಾಹಿತಿ ಯೂ ಟ್ಯೂಬ್‌ನಲ್ಲಿ ದೊರೆಯುತ್ತವೆ. Christoper Taylor ಎಂದು ಹುಡುಕಿದರೆ ಹಲವು ದಾಖಲೆಗಳು ಕಾಣಿಸುತ್ತವೆ) ಈತ ತನ್ನ ಸ್ವಂತದ ಯಾವ ಕೆಲಸಗಳನ್ನೂ ತಾನೇ ಮಾಡಿಕೊಳ್ಳಲು ಅಸಮರ್ಥನಾಗಿದ್ದ. ಚಿಕ್ಕಮಟ್ಟ ಸಮಸ್ಯೆಗಳನ್ನು ಬಿಡಿಸಲು ಅವನಿಗೆ ಆಗುತ್ತಿರಲಿಲ್ಲ. ಉದಾ.ಗೆ ಚುಕ್ಕೆಗಳನ್ನಿರಿಸಿ ಅವುಗಳ ನಡುವೆ ಗೆರೆ ಎಳೆದು ಕೂಡಿಸುವ ಆಟ ಕೂಡಾ ಅವನಿಗೆ ಗೊತ್ತಾಗುತ್ತಿರಲಿಲ್ಲ. ಆದರೆ ಇಪ್ಪತ್ತಕ್ಕೂ ಹೆಚ್ಚು ಭಾಷೆಗಳನ್ನು ಅರಿತಿದ್ದ, ಬಳಸುತ್ತಿದ್ದ ಮತ್ತು ಬರೆಯುತ್ತಿದ್ದ ಕೂಡಾ ಇಂಥದೇ ನಿದರ್ಶನವನ್ನು ನಾವು ನುಡಿ ಸಾಮರ್ಥ್ಯದ ಉಪರಚನೆಗಳ ನಡುವಣ ಅಂಗಾಂಗ ಸಂಬಂಧದಲ್ಲಿ ನೋಡಬಹುದು. ಉಲಿಗಳನ್ನು ಕೇಳಿ ಗ್ರಹಿಸಬಲ್ಲ ಮೆದುಳಿನ ಭಾಗ ಕೆಲಸ ಮಾಡುತ್ತಿದ್ದು ಅಂಥದೇ ಉಲಿಗಳನ್ನು ಉಚ್ಚರಿಸಲು ನೆರವಾಗುವ ಮೆದುಳಿನ ಭಾಗ ನ್ಯೂನತೆಯನ್ನು ಹೊಂದಿರಬಹುದು. ಅಂದರೆ ಅಂಥ ವ್ಯಕ್ತಿಗಳಲ್ಲಿ ನುಡಿಯ ಸಾಮರ್ಥ್ಯ ಸಂಪೂರ್ಣವಾಗಿ ಕುಂದಿದೆ ಎಂದು ಹೇಳಲಾಗುವುದಿಲ್ಲ.

ಈ ಮೇಲಿನ ವಿವರಣೆಗಳಿಂದ ನುಡಿ ಸಾಮರ್ಥ್ಯವು ವ್ಯಕ್ತಿಯ ಮೆದುಳಿನಲ್ಲಿ ನೆಲೆಗೊಂಡಿರುತ್ತದೆ ಎಂಬುದು ಸ್ಪಷ್ಟಗೊಳ್ಳುತ್ತದೆ. ಆದರೆ ತನ್ನ ಮೆದುಳಿನ ಈ ಸಾಮರ್ಥ್ಯವು ಆ ವ್ಯಕ್ತಿಯ ಅರಿವಿನ ಭಾಗವಾಗಿರುತ್ತದೆಯೇ ಎಂಬುದು ಮುಂದಿನ ಪ್ರಶ್ನೆ ಅಥವಾ ಮೆದುಳಿನ ಸಾಮರ್ಥ್ಯವು ಆ ವ್ಯಕ್ತಿಯ ಅರಿವಿನ ಭಾಗವಾಗಿರುವುದನ್ನು ಪರೀಕ್ಷಿಸಲು ಸಾಧ್ಯವೇ ಎಂದೂ ಈ ಪ್ರಶ್ನೆಯನ್ನು ಕೇಳಬಹುದು. ನುಡಿಯ ಅಧ್ಯಯನಕಾರರು ಒಂದು ಸರಳ ನಯಮವನ್ನು ನಿರೂಪಿಸುತ್ತಾರೆ. ಅದರಂತೆ ಮಾತಾಡುವಾಗ ಉಚ್ಚರಿಸುವ ವಾಕ್ಯಗಳು ಆಯಾ ನುಡಿಯ ವ್ಯಾಕರಣದ ನಿಯಮಗಳನ್ನು ತಪ್ಪದೇ ಪಾಲಿಸುವಂತಿರುತ್ತವೆ. ಕನ್ನಡ ಬಲ್ಲವರು **ನಾನು ನಿನ್ನೆ ಊರಿಗೆ ಬರುತ್ತೇನೆ** ಅಥವಾ **ಜನರು ಗುಂಪು ಗುಂಪಾಗಿ ಬಂದನು** ಎಂಬಂಥ ವಾಕ್ಯಗಳನ್ನು ಉತ್ಪಾದಿಸುವುದಿಲ್ಲ. ಒಂದು ವೇಳೆ ಇಂಥ ವಾಕ್ಯಗಳನ್ನು ಕೇಳಿಸಿಕೊಂಡರೆ ಅವು ಒಪ್ಪಿತ ವಾಕ್ಯಗಳಲ್ಲ ಎಂದು ಗುರುತಿಸಬಲ್ಲರು. ಹಾಗಾಗಿ ನುಡಿ ಸಾಮರ್ಥ್ಯವು ಅದನ್ನು ಬಳಸುವವರ ಅರಿವಿನ ಭಾಗವೇ ಆಗಿರುತ್ತದೆ ಎಂದು ತಿಳಿಯಲು ಅಡ್ಡಿಯಿಲ್ಲ. ಇದನ್ನು ಇನ್ನೂ ಸ್ಪಷ್ಟಪಡಿಸುವ ಅಗತ್ಯವಿದೆ. ಕನ್ನಡದ ಈ ಎರಡು ವಾಕ್ಯಗಳನ್ನು ನೋಡೋಣ.

1) ಕಿಟಕಿ ಬಾಗಿಲುಗಳು ಗಾಳಿಗೆ ಬಡಿದುಕೊಳ್ಳುತ್ತಾರೆ.

2) ಲಂಡನ್ ನಗರವು ಯಮುನಾ ನದಿಯ ದಡದಲ್ಲಿದೆ.

ಮೇಲಿನ ಎರಡು ವಾಕ್ಯಗಳನ್ನು ಕೇಳಿಸಿಕೊಂಡ ಕನ್ನಡಿಗರು (ಅವರಿಗೆ ಸ್ವಲ್ಪ ಮಟ್ಟಿನ ಲೋಕ ವ್ಯವಹಾರದ ತಿಳುವಳಿಕೆ ಇದೆ ಎನ್ನೋಣ) ಮೊದಲನೆಯದು ತಪ್ಪು ವಾಕ್ಯ ಎಂದೂ ಎರಡನೆಯದು ಸುಳ್ಳು ವಾಕ್ಯವೆಂದೂ ಹೇಳಬಲ್ಲರು. ತಪ್ಪು ವಾಕ್ಯ ಎಂಬ ನಿರ್ಣಯಕ್ಕೆ ಬರಲು ನುಡಿ ಸಾಮರ್ಥ್ಯದ ಅರಿವು ಕಾರಣವಾಗಿರುತ್ತದೆ. ಸುಳ್ಳು ವಾಕ್ಯಗಳನ್ನು ಗುರುತಿಸಲು ಈ ಅರಿವು ಅಗತ್ಯವಿಲ್ಲ. ಹಾಗೆ ನೋಡಿದರೆ ನುಡಿ ಸಾಮರ್ಥ್ಯದ ನಿಟ್ಟಿನಲ್ಲಿ ಸುಳ್ಳು ವಾಕ್ಯಗಳು ಬಹುಮಟ್ಟಿಗೆ ಸರಿಯಾದ ವಾಕ್ಯಗಳೇ ಆಗಿರುತ್ತವೆ. ಅಂದರೆ ವ್ಯಾಕರಣದ ನಿಯಮಗಳಿಗೆ ಬದ್ಧವಾದ ವಾಕ್ಯಗಳಾಗಿರುತ್ತದೆ.

ನುಡಿ ಸಾಮರ್ಥ್ಯವು ಅದನ್ನು ಬಳಸುವವರ ಅರಿವಿನ ಭಾಗವಾಗಿರುತ್ತದೆಯೇ ಎಂಬ ಪ್ರಶ್ನೆಗೆ ನೇರ ಇಲ್ಲವೇ ಸರಳ ಉತ್ತರ ಸಾಧ್ಯವಿಲ್ಲ. ನಾವು ದಿನವೂ ಆಡುವ ವಾಕ್ಯಗಳು ನಮ್ಮಲ್ಲಿ ಅಂತಸ್ಥವಾಗಿರುವ ನುಡಿ ಸಾಮರ್ಥ್ಯದ ಆವಿಷ್ಕಾರಗಳೇ ಆಗಿರುತ್ತವೆ. ಎಚ್ಚರಿಕೆಯಿಂದ ರೂಪಿಸಿದ ನಿರೂಪಣೆಗಳಲ್ಲೂ ವ್ಯಾಕರಣ ನಿಯಮಗಳಿಗೆ ಊನ ಬರದ ವಾಕ್ಯಗಳನ್ನು ರಚಿಸಬಹುದು. ಆದರೆ ದಿನದಿನದ ಹತ್ತಾರು ಸಂದರ್ಭಗಳಲ್ಲಿ ಅರೆಬರೆಯಾದ ತುಂಡು ತುಂಡಾದ ವಾಕ್ಯಗಳನ್ನು ಬಳಸುವುದನ್ನು ಕಾಣುತ್ತೇವೆ. ಮತ್ತೆ ಕೆಲವೊಮ್ಮೆ ಬಹು ಎಚ್ಚರಿಕೆಯಿಂದ ವಾಕ್ಯಗಳನ್ನು ಕಟ್ಟಲು ಹೊರಡುವವರು ಎಷ್ಟೋ ವೇಳೆ ವ್ಯಾಕರಣ ನಿಯಮಗಳಿಗೆ ಹೊರತಾದ ವಾಕ್ಯಗಳನ್ನು ಕಟ್ಟುತ್ತಿರುತ್ತಾರೆ. ಇದನ್ನು ಹೇಗೆ ವಿವರಿಸುವುದು? ನುಡಿ ಸಾಮರ್ಥ್ಯವು ಆವಿಷ್ಕಾರಗೊಂಡು ಹೊರ ಜಗತ್ತಿನಲ್ಲಿ ಮೈದಳೆಯುವಾಗ ರೂಪಗಳನ್ನು ಆಧರಿಸಿ ನುಡಿಯ ಅಧ್ಯಯನ ಮಾಡುವವರು ಇದನ್ನು ವಿವರಿಸಲು ತಮ್ಮದೇ ಆದ ವಿಧಾನಗಳನ್ನು ಹೊಂದಿದ್ದಾರೆ. ಆದರೆ ಚಾಮ್ಸ್ಕಿ ನಿರೂಪಿಸಿದ ನುಡಿ ಸಾಮರ್ಥ್ಯದ ವಿವರಣೆಯು ಬಿಡಿಬಿಡಿಯಾದ ಆವಿಷ್ಕಾರಗಳಿಂದ ಕಟ್ಟಿದ ನಿಯಮಾವಳಿಗಳಲ್ಲ. ಬಿಡಿಬಿಡಿ ನಿದರ್ಶನಗಳಿಂದ ಸೂತ್ರವನ್ನು ರೂಪಿಸುವ ಅನುಗಮನ ತರ್ಕ ವಿಧಾನವನ್ನು ಇಲ್ಲಿ ಬಳಸಲಾಗದು. ಬದಲಿಗೆ ನಮ್ಮ ದಿನ ದಿನದ ಬಳಕೆಗಳಿಗೆ ಮೂಲವೆನಿಸುವ ರೂಪವೊಂದು ಮೆದುಳಿನಲ್ಲಿ ಅಂತಸ್ಥವಾಗಿರುತ್ತದೆ. ಈ ಆದರ್ಶ ರೂಪವೇ ಅಧ್ಯಯನಕ್ಕೆ ತಕ್ಕುದಾದುದು.

ಒಂದು ನಿದರ್ಶನದ ಮೂಲಕ ಈ ಸಂಗತಿಯನ್ನು ಸ್ಪಷ್ಟಪಡಿಸಿಕೊಳ್ಳಬಹುದು. ಕನ್ನಡದಲ್ಲಿ **ಕ್** ಎಂಬ ಉಲಿ ಇದೆ. ಅಂದರೆ ನಾವು ಮಾತಾಡುವಾಗ ಈ ಉಲಿಯನ್ನು ಉಚ್ಚರಿಸುತ್ತೇವೆ ಮತ್ತು ನಾವು ಕೇಳಿಸಿಕೊಳ್ಳುವ ಕನ್ನಡದಲ್ಲಿ ಈ ಉಲಿಯನ್ನು ಗ್ರಹಿಸಬಲ್ಲೆವು. **ಕ್** ಉಲಿಯನ್ನು ನೂರಾರು ಜನ ಹಲವಾರು ಸಂದರ್ಭಗಳಲ್ಲಿ ಉಚ್ಚರಿಸುವುದನ್ನು ದಾಖಲೆ ಮಾಡಿಕೊಳ್ಳೋಣ. ಅವೆಲ್ಲವನ್ನೂ ಲಭ್ಯವಿರುವ ವೈಜ್ಞಾನಿಕ ಉಪಕರಣಗಳ ನೆರವಿನಿಂದ ವಿಶ್ಲೇಷಿಸಿದರೆ ಅವೆಲ್ಲವೂ ಒಂದೇ ರೀತಿಯಲ್ಲಿ ಇರುವುದಿಲ್ಲ. ಎಂಬುದು ಗೊತ್ತಾಗುತ್ತದೆ. ಆದರೆ ಆ ಎಲ್ಲ **ಕ್** ಉಲಿಗಳನ್ನು ಉಚ್ಚರಿಸಿದವರಾಗಲೀ ಅವುಗಳನ್ನು ಕೇಳಿಸಿಕೊಂಡವರಾಗಲೀ ಈ ವ್ಯತ್ಯಾಸಗಳನ್ನು ಗುರುತಿಸಲಾರರು. **ಕ್** ಎಂಬ ಉಲಿಯ ಆದರ್ಶ ರೂಪವು ಉಚ್ಚರಿಸುವವರ ಮತ್ತು ಕೇಳಿಸಿಕೊಳ್ಳುವವರ ನುಡಿ ಸಾಮರ್ಥ್ಯದ ಭಾಗವಾಗಿರುವುದೇ ಇದಕ್ಕೆ ಕಾರಣ. ಆದ್ದರಿಂದ **ಕ್** ಉಲಿಯ ಹತ್ತಾರು ಬಗೆಯ

ಆವಿಷ್ಕಾರಗಳು ಅಧ್ಯಯನಕಾರರಿಗೆ ಮುಖ್ಯವಲ್ಲ. (ಈ ಸಂಗತಿಯನ್ನು ಸುಲಭವಾಗಿ ಗ್ರಹಿಸಲು ಇನ್ನೂ ಒಂದು ದಾರಿ ಇದೆ. **ಕ್** ಉಲಿಯು ಬಳಕೆಯಾಗುವ ಎರಡು ಪದಗಳ ಉಚ್ಚಾರವನ್ನು ಗಮನಿಸಿ **ಕುರಿ** ಮತ್ತು **ಕಿವಿ** ಎಂಬವು ಈ ಪದಗಳನ್ನೋಡಿ ಈ ಎರಡೂ ಪದಗಳಲ್ಲಿ ಬಳಕೆಯಾಗುವ **ಕ್** ಉಲಿ ಬೇರೆ ಬೇರೆ ಆಗಿರುತ್ತವೆ. **ಕುರಿ** ಪದದಲ್ಲಿ **ಕ್** ಉಚ್ಚರಿಸುವಾಗ ನಾಲಿಗೆಯ ಹಿಂಬದಿಯು ಅಂಗಳದ ಯಾವ ಭಾಗದಲ್ಲಿ ಇರುತ್ತದೆ ಎಂಬುದನ್ನು ಗಮನಿಸಿ. ಬಳಿಕ **ಕಿವಿ** ಪದದಲ್ಲಿ **ಕ್** ಉಲಿಯನ್ನು ಉಚ್ಚರಿಸುವಾಗ ನಾಲಿಗೆಯ ಹಿಂಬದಿಯು ಅಂಗಳದ ಯಾವ ಭಾಗವನ್ನು ಮುಟ್ಟುತ್ತದೆ ಎಂದು ನೋಡಿ. ಎರಡೂ ಬೇರೆ ಜಾಗಗಳೆಂಬುದು ಕನ್ನಡ ಮಾತಾಡುವ ಯಾರಿಗಾದರೂ ಗೊತ್ತಾಗುತ್ತದೆ. ಆದರೆ ಮಾತಾಡುವವರಿಗಾಗಲೀ ಕೇಳಿಸಿಕೊಳ್ಳುವವರಿಗಾಗಲೀ ಈ ಉಲಿ ವ್ಯತ್ಯಾಸಗಳು ಗಮನಕ್ಕೆ ಬರುವುದೇ ಇಲ್ಲ).

ನುಡಿ ಸಾಮರ್ಥ್ಯವು ಅಂತಸ್ತಗೊಳಿಸಿಕೊಂಡಿರುವ ನುಡಿಯ ಆದರ್ಶ ರೂಪವು ಬಳಸುವವರ ತಿಳುವಳಿಕೆಗೆ ಬರುವುದಿಲ್ಲ. ಆದರೆ ಅವರ ಬಳಕೆಯನ್ನು ನಿರ್ದೇಶಿಸುತ್ತಿರುತ್ತದೆ. ಮುಂದೆ ನೀಡಿರುವ ವಾಕ್ಯಗಳನ್ನು ನೋಡೋಣ.

(1) ನಾಳೆ ಎಲ್ಲರೂ ನಮ್ಮ ಮನೆಗೆ ಬನ್ನಿ.

(2) ಅಲ್ಲಿಗೆ ಯಾರೂ ಹೋಗುವಂತಿಲ್ಲ.

(3) ನಾಳೆ ಯಾರೂ ನಮ್ಮ ಮನೆಗೆ ಬನ್ನಿ.

(4) ಅಲ್ಲಿಗೆ ಎಲ್ಲರೂ ಹೋಗುವಂತಿಲ್ಲ.

ಈ ನಾಲ್ಕು ವಾಕ್ಯಗಳಲ್ಲಿ ಮೊದಲೆರಡು ವ್ಯಾಕರಣ ಬದ್ಧವಾಗಿದೆ ಅವುಗಳನ್ನು ಯಾರೂ ತಪ್ಪು ಎನ್ನಲಾರರು. ಮೂರನೆಯ ವಾಕ್ಯವನ್ನು ಒಪ್ಪುವುದು ಕಷ್ಟ. ನಾಲ್ಕನೆಯ ವಾಕ್ಯ ನಿಷೇಧವನ್ನು ಹೇಳುತ್ತಿದ್ದರೂ ವಾಸ್ತವದಲ್ಲಿ ಯಾರಾದರೂ ಹೋಗಬಹುದು ಎಂಬ ಅರ್ಥವನ್ನು ಹೊಂದಿದೆ. **ಯಾರೂ** ಮತ್ತು **ಎಲ್ಲರೂ** ಎಂಬ ಎರಡು ರೂಪಗಳನ್ನು ಹೇಗೆ ಬಳಸಬೇಕು ಎಂಬುದಕ್ಕೆ ಗೊತ್ತಾದ ನಿಯಮಗಳಿವೆ. ಕನ್ನಡ ಬಲ್ಲವರು ಆ ನಿಯಮಗಳನ್ನು ಪಾಲಿಸುತ್ತಿರುತ್ತಾರೆ. ಈ ನಿಯಮಗಳು ಆಯಾ ನುಡಿಗೆ ವಿಶಿಷ್ಟವಾದವು. ಬೇರೊಂದು ನುಡಿಯಲ್ಲಿ ಆ ನಿಯಮ ಇಲ್ಲದಿರಬಹುದು. ಉದಾ.ಗೆ ಗುಣವಾಚಕ ಇಲ್ಲವೇ ಕ್ರಿಯಾವಾಚಕವು ಕ್ರಮವಾಗಿ ನಾಮಪದ ಇಲ್ಲವೇ ಕ್ರಿಯಾಪದಕ್ಕಿಂತ ಮೊದಲು ಬರಬೇಕು ಎಂಬುದು ಕನ್ನಡದ ಒಂದು ನಿಯಮ. **ದೊಡ್ಡ ಮನೆ, ಹಳೆಯ ಮರ, ಜೋರಾಗಿ ಓದು, ಬೇಗ ಬಾ** ಇವೆಲ್ಲವೂ ನದರ್ಶನಗಳು. ವಾಕ್ಯದಲ್ಲಿ ಈ ಕ್ರಮವನ್ನು ಬದಲಿಸಲು ಬರುವುದಿಲ್ಲ. ಈ ಕೆಳಗಿನ ಎರಡು ವಾಕ್ಯಗಳನ್ನು ನೋಡೋಣ.

(1) ಇದು ದೊಡ್ಡ ಮನೆ

(2) ಈ ಮನೆ ದೊಡ್ಡ

(3) ಈ ಮನೆ ದೊಡ್ಡದು

ಎರಡನೇ ವಾಕ್ಯವನ್ನು ಒಪ್ಪಲಾಗದು. ಅಲ್ಲಿ ಅನುಕ್ರಮದ ಉಲ್ಲಂಘನೆಯಾಗಿದೆ. ಒಂದು ಮತ್ತು ಮೂರು ಸರಿಯಾದ ವಾಕ್ಯಗಳು. ಮೂರನೆಯ ವಾಕ್ಯದಲ್ಲಿ ನಾಮಪದದ ಬಳಿಕ ಬಂದಿರುವ **ದೊಡ್ಡದು** ಎಂಬುದು ವಿಶೇಷಣವಾಗಿ ಉಳಿದಿಲ್ಲ. ಅದೀಗ ಒಂದು ನಾಮಪದವೇ ಆಗಿದೆ.

ಈ ಮೇಲಿನ ಎಲ್ಲ ವಿವರಣೆಗಳು ನುಡಿ ಸಾಮರ್ಥ್ಯವು ಬಳಸುವವರ ಅರಿವಿನ ಭಾಗವಾಗಿರುತ್ತದೆಯೇ ಎಂಬ ಪ್ರಶ್ನೆಯನ್ನು ಬಿಡಿಸಲು ಯತ್ನಿಸಿವೆ. ಮಕ್ಕಳು ನುಡಿ ಸಾಮರ್ಥ್ಯವನ್ನು ಗಳಿಸಿಕೊಳ್ಳುವ ಹಂತದಲ್ಲಿ ಮಾಡುವ ತಪ್ಪುಗಳು ಮತ್ತು ವಯಸ್ಕರು ನುಡಿ ಬಳಕೆಯಲ್ಲಿ ಮಾಡುವ ನುಡಿ ಜಾರಿಕೆಗಳು ಹಾಗೂ ನುಡಿಯ ರಚನೆಯನ್ನು ಆಧರಿಸಿದ ಆಟಗಳನ್ನು ಗಮನಿಸಿದರೆ ಈ ಸಂಗತಿ ಇನ್ನಷ್ಟು ಸ್ಪಷ್ಟವಾಗುತ್ತದೆ.

ನುಡಿ ಕಸುವಿನ ಪ್ರತಿನಿಧೀಕರಣ

ಈ ಹಿಂದೆ ನುಡಿ ಕಸುವು ಮೆದುಳಿನ ಒಂದು ಸಾಮರ್ಥ್ಯವಾಗಿರುತ್ತದೆ ಎನ್ನುವುದನ್ನು ವಿವರಿಸುವಾಗ **ಸಂಯೋಜಕತೆ** ಎಂಬ ಪರಿಕಲ್ಪನೆಯನ್ನು ಬಳಸಲಾಗಿತ್ತು. ಇದನ್ನು ನುಡಿ ಕಸುವಿಗೆ ಸಂಬಂಧಿಸಿದಂತೆ ಎರಡು ನೆಲೆಗಳಲ್ಲಿ ನೋಡಿದ್ದೇವೆ. ಮೆದುಳಿನ ಇತರ ಕಸುವುಗಳಿಗೂ ನುಡಿ ಕಸುವಿಗೂ ಇರುವ ಸಂಯೋಜಕ ಸಂಬಂಧ ಒಂದು ನೆಲೆಯಾದರೆ ನುಡಿಕಸುವಿನ ಒಳಗೇ ಇರುವ ಬೇರೆಬೇರೆ ಪದರಗಳ ನಡುವೆ ಇರುವ ಸಂಯೋಜಕ ಸಂಬಂಧ ಇನ್ನೊಂದು ನೆಲೆ. ಈಗಾಗಲೇ ವಿವರಿಸಿದಂತೆ ಸಂಯೋಜಕತೆಯ ಪರಿಕಲ್ಪನೆಯು ಒಂದು ರಚನೆಯ ವಿವಿಧ ಅಂಗಗಳ ಸ್ವಾಯತ್ತತೆ ಮತ್ತು ಅವುಗಳ ನಡುವೆ ಇರುವ ಸಾವಯವ ಸಂಬಂಧವನ್ನು ವಿವರಿಸುತ್ತದೆ. ನಾವೀಗ ನುಡಿಕಸುವಿನ ಒಳಗೇ ಇರುವ ವಿವಿಧ ಪದರಗಳ ಸಂಯೋಜಕ ಸಂಬಂಧವನ್ನು ಪರಿಶೀಲಿಸಬೇಕಿದೆ.

ನುಡಿಕಸುವಿನಲ್ಲಿ ಇರುವ ಪದರಗಳು ಯಾವುವು? ಸಾಂಪ್ರದಾಯಿಕ ಶಾಲಾ ವ್ಯಾಕರಣಗಳು ಶಬ್ದ ಮತ್ತು ಅರ್ಥ ಎಂಬ ಎರಡೂ ನೆಲೆಗಳನ್ನು ನುಡಿಕಸುವಿನ ಪದರಗಳನ್ನಾಗಿ ಗುರುತಿಸುತ್ತವೆ. ಈ ವಿಭಜನೆಯು ಸರಿಯೇ ಆದರೆ ಆ ಪದರಗಳ ಸ್ವರೂಪವನ್ನೂ ಗ್ರಹಿಸುವ ಬಗೆಯಲ್ಲಿ ಚಾಮ್‌ಸ್ಕಿಯ ವಿಚಾರಗಳು ಕ್ರಾಂತಿಕಾರಕ ಬದಲಾವಣೆಗಳನ್ನು ತಂದಿವೆ.

ಮೊದಲನೆಯದಾಗಿ ನುಡಿಯನ್ನು ಒಳರಚನೆ ಮತ್ತು ಹೊರರಚನೆ ಎಂಬ ನೆಲೆಯಲ್ಲಿ ನೋಡಬೇಕೆಂದು ತಿಳಿದದ್ದು ಈ ಬದಲಾವಣೆಗಳ ಮುಖ್ಯ ಲಕ್ಷಣ. ನಾವು ಆಡುವ ಪ್ರತಿಯೊಂದು ವಾಕ್ಯವೂ ಹೊರ ರಚನೆಯಲ್ಲಿ ಸಿದ್ಧ ವಸ್ತುವಿನಂತೆ ತೋರುತ್ತದೆ. ಆದರೆ ಆ ವಾಕ್ಯ ರೂಪುಗೊಂಡದ್ದು ಹೇಗೆ? ಅದರ ಉಲಿ ಪದರ ಮತ್ತು ತಿರುಳು ಪದರಗಳು ಬೆಸೆದುಕೊಂಡದ್ದು ಹೇಗೆ? ವಾಕ್ಯವೊಂದರ ಉಲಿಪದರವು ಹಲವು ಉಲಿಗಳ ಸರಣಿಯಂತೆ ಕಂಡರೂ ಅದರೊಳಗೇ ಏರ್ಪಟ್ಟಿರುವ ರಾಚನಿಕ ನೆಲೆಗಳು ಯಾವುವು? ಅವೆಲ್ಲ ಪ್ರಶ್ನೆಗಳನ್ನೂ ಬಿಡಿಸಬೇಕಾದ ಅಗತ್ಯವಿದೆ. ಮೊದಲಿಗೆ ಉಲಿರಚನೆಗಳನ್ನು ಗಮನಿಸೋಣ. ಉಲಿಗಳು ಹೇಗೆ ಉಂಟಾಗುತ್ತವೆ ಎಂಬುದಕ್ಕೆ

ಸಾಂಪ್ರದಾಯಿಕ ಚಿಂತನೆಗಳು ತಮ್ಮದೇ ಆದ ವಿವರಣೆಯನ್ನು ನೀಡಿವೆ. ಉಲಿಯ ಉತ್ಪಾದನೆಯು ಧ್ವನ್ಯಂಗಗಳು, ಉಸಿರಾಟದ ವ್ಯವಸ್ಥೆ ಇವೆಲ್ಲವೂ ನೆರವಾಗುವ ಬಗೆಯನ್ನು ಅಚ್ಚುಕಟ್ಟಾಗಿ ವಿವರಿಸಲಾಗಿದೆ. ಈ ವಿವರಣೆಗಳು ಹೊರನೋಟಕ್ಕೆ ಸರಿಯಾಗಿಯೇ ತೋರುತ್ತವೆ. ಉದಾಹರಣೆಗೆ, **ಕ್, ಪ್** ಎಂಬ ಉಲಿಯ ಸ್ವರೂಪವನ್ನು ವಿವರಿಸುವಾಗ ಅದೊಂದು ದ್ವಯೋಷ್ಠ ಸ್ಪರ್ಶ ಅಘೋಷ ಎಂದು ಬಣ್ಣಿಸಲಾಗಿದೆ. ಎರಡು ತುಟಿಗಳು ಒಂದನ್ನೊಂದು ಕ್ಷಣಕಾಲ ಸ್ಪರ್ಶಿಸುವಂತೆ ಮಾಡಿ ಹೊರಹೊಗುತ್ತಿರುವ ಉಸಿರಿನ ಚಲನೆಗೆ ತಾತ್ಕಾಲಿಕವಾಗಿ ಅಡ್ಡಿಯನ್ನು ಉಂಟು ಮಾಡುವುದು; ಅದೇ ವೇಳೆಯಲ್ಲಿ ಗಂಟಲಿನಲ್ಲಿರುವ ಉಲಿ ತಂತುಗಳು ಉಸಿರಿನ ಓಟಕ್ಕೆ ಕಂಪಿಸದಂತೆ ಮಾಡುವುದು. ಹೀಗಾದಾಗ **ಪ್** ಎಂಬ ಉಲಿ ಉಂಟಾಗುತ್ತದೆ. ಆದರೆ ಈ ವಿವರಣೆಯನ್ನು ನೀಡುವಾಗ ಈ ಎಲ್ಲ ದೈಹಿಕ ಕ್ರಿಯೆಗಳಿಗೆ ಬೇಕಾದ ನರಸಂಬಂಧಿ ನಿರ್ದೇಶನಗಳು ಎಲ್ಲಿಂದ ಬರುತ್ತವೆ ಮತ್ತು ಈ ನರಸಂಬಂಧಿಯಾದ ನಿರ್ದೇಶನಗಳು ಸ್ನಾಯುಗಳ ಚಲನೆಯನ್ನು ನಿಯಂತ್ರಿಸುವ ಬಗೆ ಹೇಗೆ ಎಂಬ ಪ್ರಶ್ನೆಗಳು ಹುಟ್ಟುತ್ತವೆ. ಇನ್ನೂ ಸಂಕೀರ್ಣವಾದ ಪ್ರಶ್ನೆಯೊಂದಿದೆ. ನರಸಂಬಂಧಿ ನಿರ್ದೇಶನಗಳು ಮತ್ತು ಅವುಗಳಿಂದಾದ ಸ್ನಾಯುಗಳ ಚಲನೆಗಳು **ಪ್** ಎಂಬ ಉಲಿಯನ್ನು ಉಂಟು ಮಾಡುವ ಗುರಿಯನ್ನು ಹೊಂದಿರುವುದು ದಿಟವಾದರೆ **ಪ್** ಉಲಿಯ ಮೂಲ ಆಕೃತಿ ಎಲ್ಲಿರುತ್ತದೆ ಎಂಬುದನ್ನು ವಿವರಿಸಬೇಕಾಗಿದೆ. ಇದನ್ನು ಪ್ರಕ್ರಿಯೆ ಮತ್ತು ಪರಿಣಾಮಗಳ ಸಂಬಂಧದಲ್ಲಿ ನೋಡಿದರೆ ಸಾಂಪ್ರದಾಯಿಕ ಚಿಂತನೆಗಳು ಪರಿಣಾಮವನ್ನು ಆಧರಿಸಿ ವಿಶ್ಲೇಷಣೆಗೆ ತೊಡಗುತ್ತವೆಯಾದರೆ ಚಾಮ್‌ಸ್ಕಿ ವಿಚಾರ ಧಾರೆಗಳು ಪ್ರಕ್ರಿಯೆಯನ್ನು ಆಧರಿಸಿ ವಿವರಣೆಗೆ ತೊಡಗಿರುವುದು ಗೊತ್ತಾಗುತ್ತದೆ. ಅಂದರೆ **ಪ್** ಉಲಿಯ ಮೂಲ ರೂಪ ನುಡಿಕಸುವಿಗೆ ಸಂಬಂಧಿಸಿದ ಮೆದುಳಿನ ಭಾಗದಲ್ಲಿ ಅಂತಸ್ಥವಾಗಿದ್ದು ನಾವು ಮಾತಾಡುವಾಗ ಆ ಮೂಲರೂಪದ ಒಂದು ಆವಿಷ್ಕಾರವನ್ನು ರೂಪಿಸುತ್ತೇವೆ. ಅಂದರೆ ಒಳರಚನೆಯಲ್ಲಿ ಮೂಲ ಆಕೃತಿಗಳಿದ್ದು ಹೊರರಚನೆಯು ಆ ಮೂಲ ಆಕೃತಿಯ ಒಂದು ಆವಿಷ್ಕಾರ ಮಾತ್ರವಾಗಿರುತ್ತದೆ. ಹಾಗಾಗಿ ನುಡಿಕಸುವಿನ ಅಧ್ಯಯನಕಾರರು ಒಳರಚನೆಯ ಚಹರೆಗಳನ್ನು ಅರಿಯುವ ಗುರಿಯನ್ನು ಹೊಂದಬೇಕಾಗುತ್ತದೆ.

ನುಡಿಯ ವಿವಿಧ ಪದರಗಳು ಯಾವುವು? ಉಲಿ, ಪದ, ವಾಕ್ಯ ಮತ್ತು ತಿರುಳು ಎಂಬ ಪದರಗಳನ್ನು ಗುರುತಿಸಲಾಗಿದೆ. ಇದರಲ್ಲಿ ಪದ ಎಂಬುದನ್ನು ಪದಕೋಶ ಎಂಬ ಅರ್ಥದಲ್ಲಿ ಸಾಂಪ್ರದಾಯಿಕ ವ್ಯಾಕರಣಗಳು ಗುರುತಿಸುತ್ತವೆ. ಕನ್ನಡ ಬಲ್ಲವರು ತಮ್ಮ ಮಾತಿನಲ್ಲಿ ಬಳಸುವ ಇಲ್ಲವೇ ತಾವು ಕೇಳುವ ಕನ್ನಡದಲ್ಲಿ ಗ್ರಹಿಸಬಲ್ಲ ಪದಗಳ ಪಟ್ಟಿಯೊಂದನ್ನು ಮೆದುಳಿನಲ್ಲಿ ಸಂಗ್ರಹಿಸಿಟ್ಟುಕೊಂಡಿರುತ್ತಾರೆ ಎಂದು ತಿಳಿಯಲಾಗಿದೆ. ಇದು ದಿಟವಿದ್ದರೆ ಮೆದುಳಿನ ಯಾವ ಭಾಗ ಈ ಪದಕೋಶವನ್ನು ಸಂಗ್ರಹಿಸಿ ಇಟ್ಟುಕೊಂಡಿರುತ್ತದೆ ಮತ್ತು ಪದದ ವಿವಿಧ ರೂಪಗಳನ್ನು ಬಿಡಿಬಿಡಿಯಾಗಿ ಇರಿಸಿಕೊಂಡಿರುತ್ತದೆ ಅಥವಾ ಅವುಗಳ ಜೋಡಣೆಯಲ್ಲಿ ಬೇರೊಂದು ಕ್ರಮ ವಿರುತ್ತದೋ ಎಂಬ ಪ್ರಶ್ನೆಗಳು ಉಂಟಾಗುತ್ತದೆ ಒಂದೆರಡು ಸರಳ ಉದಾಹರಣೆಗಳನ್ನು ನೋಡೋಣ.

ಕನ್ನಡಿಗರು **ತೆರೆ** ಎಂಬ ಪದವನ್ನು ತಮ್ಮ ಮೆದುಳಿನ ಪದಕೋಶದಲ್ಲಿ ಇರಿಸಿಕೊಂಡಿದ್ದಾರೆ ಎಂದುಕೊಳ್ಳಿ. ಈಗ ಈ ಕೆಳಗಿನ ಎರಡು ವಾಕ್ಯಗಳನ್ನು ನೋಡೋಣ.

(1) ಕಿಟಕಿಗಳಿಗೆ ಬಣ್ಣದ ತೆರೆ ಹಾಕಿದ್ದಾರೆ.

(2) ಕಿಟಕಿಗಳನ್ನು ತೆರೆದಾಗ ಗಾಳಿ ಬರುತ್ತದೆ.

ಈ ಎರಡೂ ವಾಕ್ಯಗಳಲ್ಲಿ ಬಳಕೆಯಾಗಿರುವ ತೆರೆ ಎಂಬ ಪದವು ಆಯಾ ವಾಕ್ಯಗಳಲ್ಲಿ ನಿರ್ವಹಿಸುವ ಕೆಲಸಗಳು ಬೇರೆಬೇರೆಯೇ ಆಗಿವೆ. ಮೊದಲ ವಾಕ್ಯದಲ್ಲಿ ಅದು ಒಂದು ನಾಮಪದವಾಗಿ ಬಂದಿದೆ. ಎರಡನೆಯ ವಾಕ್ಯದಲ್ಲಿ ಅದು ಒಂದು ಕ್ರಿಯಾಪದವಾಗಿದೆ. ಹಾಗಿದ್ದಲ್ಲಿ ಕನ್ನಡಿಗಳ ಮೆದುಳಿನ ಪದಕೋಶದಲ್ಲಿ **ತೆರೆ** ಎಂಬ ಎರಡು ಬೇರೆ ಬೇರೆ ನಮೂದುಗಳು ಇರುತ್ತವೆಯೋ ಅಥವಾ **ತೆರೆ** ಎಂಬ ಒಂದೇ ನಮೂದು ಇದ್ದು ವಾಕ್ಯದಲ್ಲಿ ಅದರ ಬಳಕೆಯಾಗುವಾಗ ಅದು ನಾಮಪದವೋ ಅಥವಾ ಕ್ರಿಯಾಪದವೋ ಎಂಬ ನಿಯೋಗವನ್ನು ನಿಗದಿಪಡಿಸುವ ನಿಯಮಗಳು ಇವೆಯೋ?

ಈ ಪ್ರಶ್ನೆಗೆ ಇನ್ನೂ ಒಂದು ಮುಖವಿದೆ. ಅದನ್ನು ತಿಳಿಯಲು ಈ ಕೆಳಗಿನ ಮೂರು ವಾಕ್ಯಗಳನ್ನು ಗಮನಿಸೋಣ.

(1) ಸಮುದ್ರದಲ್ಲಿ ಭಾರಿ ಅಲೆಗಳು ಎದ್ದವು.

(2) ಸಮುದ್ರದಲ್ಲಿ ಭಾರಿ ತೆರೆಗಳು ಎದ್ದವು.

(3) ನಾನು ದಿಕ್ಕು ತಪ್ಪಿ ಅಲೆದಾಡಿದೆ.

ಮೊದಲ ಎರಡು ವಾಕ್ಯಗಳಲ್ಲಿ **ತೆರೆ** ಪದದ ತಿರುಳನ್ನೇ ಹೊಂದಿರುವ **ಅಲೆ** ಎಂದ ಪದ ಬಳಕೆಯಾಗಿದೆ. ಹಾಗಿದ್ದಲ್ಲಿ ಈ ಎರಡೂ ಪದಗಳು ಮೆದುಳಿನ ಪದಕೋಶದಲ್ಲಿ ಬೇರೆಬೇರೆಯಾಗಿ ಇರುತ್ತವೆಯೋ (ಸಾಮಾನ್ಯವಾಗಿ ಮುದ್ರಿತ ಪದಕೋಶಗಳು ಈ **ಅಲೆ** ಮತ್ತು **ತೆರೆ** ಎಂಬ ಎರಡು ಪದಗಳನ್ನು ಬೇರೆ ಬೇರೆ ನಮೂದುಗಳನ್ನಾಗಿ ಇರಿಸುತ್ತವೆ). ಇಲ್ಲವೇ ಅವುಗಳನ್ನು ಸಂಗ್ರಹಿಸಿ ಕೊಳ್ಳುವ ಬಗೆಯಲ್ಲಿ ಬೇರೆ ವ್ಯವಸ್ಥೆ ಇದೆಯೇ? ವಾಕ್ಯಗಳಲ್ಲಿ ಬಳಸುವಾಗ ಇವೆರಡರಲ್ಲಿ ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬುದು ಹೇಗೆ ನಿರ್ಧಾರವಾಗುತ್ತದೆ? ಈ ಪ್ರಶ್ನೆಗಳನ್ನು ಬಿಡಿಸಬೇಕಾಗಿದೆ.

ನಾವು ನೀಡಿದ ಉದಾ.ಗಳಲ್ಲಿ ಒಂದು ಮತ್ತು ಮೂರನೆಯ ವಾಕ್ಯಗಳಲ್ಲಿ **ಅಲೆ** ಎಂಬ ಪದವೇ ಬಳಕೆಯಾಗಿದ್ದು ಅದು ಬೇರೆ ಬೇರೆ ಕೆಲಸಗಳನ್ನು ನಿರ್ವಹಿಸುತ್ತಿರುವುದು ಸ್ಪಷ್ಟವಾಗಿದೆ. ಮೊದಲ ವಾಕ್ಯದಲ್ಲಿ ನಾಮಪದವಾಗಿದ್ದರೆ ಮೂರನೆಯ ವಾಕ್ಯದಲ್ಲಿ ಅದೊಂದು ಕ್ರಿಯಾಪದವಾಗಿದೆ. ಈಗ ನಮ್ಮ ಮೂಲ ಪ್ರಶ್ನೆಗೆ ಬರೋಣ. **ತೆರೆ** ಮತ್ತು **ಅಲೆ** ಎಂಬ ಎರಡು ಪದಗಳ ಬಳಕೆಯ ವಿವಿಧ ಸಾಧ್ಯತೆಗಳು ಮೆದುಳಿನ ಪದಕೋಶದಲ್ಲಿ ಹೇಗೆ ನಮೂದಿತವಾಗುತ್ತದೆ? ಸರಳ ಗ್ರಹಿಕೆಗೆ ಐದು ಬೇರೆ ಬೇರೆ ನಮೂದುಗಳು [1.ತೆರೆ ನಾಮಪದ (= ಮರೆಮಾಡುವ ಸಾಧನ) 2. ತೆರೆ ನಾಮ ಪದ (=ನೀರಿನ

ಏರಿಳಿತ) 3. ತೆರೆ ಕ್ರಿಯಾಪದ(= ಮುಚ್ಚಿರುವುದನ್ನು ತೆರೆಯುವುದು), 4. ಅಲೆ ನಾಮಪದ(=ನೀರಿನ ಏರಿಳಿತ) ಮತ್ತು 5. ಅಲೆ ಕ್ರಿಯಾಪದ] ಇವೆ ಎಂದು ತೋರುತ್ತದೆ. ಇದು ನಿಜವಿದ್ದರೆ ನಮ್ಮ ಮೆದುಳು ಅಗಾಧ ಪ್ರಮಾಣದ ಸಂಗ್ರಹ ಶಕ್ತಿಯುಳ್ಳ ಗಣಕದಂತೆ ಕೆಲಸ ಮಾಡಬೇಕಾಗುತ್ತದೆ. ಆದರೆ ವಾಸ್ತವವಾಗಿ ಹೀಗಿರಲು ಸಾಧ್ಯವಿಲ್ಲ. ಕನಿಷ್ಠ ಪ್ರಮಾಣದ ನೆನಪಿನಿಂದ ಅಗಾಧ ಪ್ರಮಾಣದ ಉತ್ಪಾದನೆಯನ್ನು ನುಡಿಕಸುವು ಸಾಧ್ಯವಾಗಿಸಿಕೊಳ್ಳುತ್ತದೆ. ಈ ಬಗೆಯ ಜೋಡಣೆಯ ಸ್ವರೂಪವನ್ನು ಮತ್ತು ಅದರ ಹಿಂದಿನ ಕರ್ತವನ್ನು ಅರಿಯಲು ನಾವು ಹಿಂದೆ ಹೇಳಿದ ಸಂಯೋಜಕತೆಯ ಪರಿಕಲ್ಪನೆಯನ್ನು ಮೊರೆ ಹೋಗಬೇಕಾಗುತ್ತದೆ.

ವಾಸ್ತವದಲ್ಲಿ ಮೆದುಳು ನುಡಿಕಸುವಿನ ಪದರಗಳನ್ನು ಅಡಕವಾಗಿರಿಸಿಕೊಳ್ಳುವ ಬಗೆ ಬೇರೆಯೇ ಆಗಿರುತ್ತದೆ. ಈಗಾಗಲೇ ಹೇಳಿದಂತೆ ಕನಿಷ್ಟ ಮಾಹಿತಿಯಿಂದ ಗರಿಷ್ಠ ಉತ್ಪಾದನೆಯನ್ನು ಮಾಡುವ ನೆಲೆಯಲ್ಲಿ ನುಡಿಕಸುವು ರಚನೆಯಾಗಿರುತ್ತದೆ. ಪದಕೋಶವನ್ನು ಮೆದುಳಿನಲ್ಲಿ ನುಡಿಕಸುವು ಶಬ್ದ, ಅರ್ಥ ಮತ್ತು ವ್ಯಾಕರಣಾತ್ಮಕ ನಿಯೋಗಗಳೂ ಸೇರಿದಂತೆ ಎಲ್ಲವನ್ನೂ ಒಟ್ಟುಗೂಡಿಸಿ ಇರಿಸಿಕೊಂಡಿರುತ್ತದೆ ಎಂದು ತಿಳಿದರೆ ಆಗ ಅಗಾಧ ಪ್ರಮಾಣದ ಮಾಹಿತಿ ಸಂಗ್ರಹಣ ಅಗತ್ಯವಾಗುತ್ತದೆ. ನುಡಿಕಸುವಿನ ರಚನೆಯೇ ಅದರ ಒಳ ಪದರಗಳ ಸಂಯೋಜಕತೆಯ ನೆಲೆಯಲ್ಲಿ ರೂಪುಗೊಂಡಿರುತ್ತದೆ ಎಂದು ನಂಬುವುದಾದರೆ ಆಗ ಶಬ್ದ, ಅರ್ಥ ಮತ್ತು ನಿಯೋಗಗಳು ಬೇರೆಬೇರೆ ವಲಯಗಳಲ್ಲಿ ನಿಯಂತ್ರಣಕ್ಕೆ ಒಳಪಟ್ಟಿರಬೇಕು. ಇವೆಲ್ಲವೂ ಸಂಯೋಜನೆಗೊಳ್ಳುವ ನಿಯಮವೊಂದು ಪ್ರವೃತ್ತವಾಗುವ ಮೂಲಕ ಹೊರರಚನೆಯು ಸಿದ್ಧಗೊಳ್ಳುತ್ತದೆ. ಅಂದರೆ ಪದದ ಶಾಬ್ದಿಕ ರಚನೆ, ಅದರ ತಿರುಳು, ಮತ್ತು ಅದರ ವ್ಯಾಕರಣಾತ್ಮಕ ನಿಯೋಗಗಳು ಮೊದಲೇ ಸಂಯೋಜಿತವಾಗಿರುತ್ತದೆ ಎಂದು ತಿಳಿಯುವ ಬದಲು ಪದಗಳ ಬಳಕೆ ಅಗತ್ಯವಾದಾಗ ಈ ಮೂರು ಎಳೆಗಳನ್ನು ಒಗ್ಗೂಡಿಸುವ ವ್ಯವಸ್ಥೆಯೊಂದು ಇದೆ ಎಂದು ಒಪ್ಪಬೇಕಾಗುತ್ತದೆ.

ಈ ಪ್ರಮೇಯ ಸರಿಯೇ ಇಲ್ಲವೋ ಎಂದು ನೋಡಲು ಸಾಧ್ಯವಿದೆ. ನಾವು ದಿನವೂ ಮಾತಾಡುವಾಗ ಕೆಲವೊಮ್ಮೆ ವಾಕ್ಯವೊಂದರಲ್ಲಿ ಪದದ ಶಾಬ್ದಿಕ ರೂಪವನ್ನು (ನಮಗೇ ಗೊತ್ತಿಲ್ಲದಂತೆ) ತಪ್ಪಾಗಿ ಉಚ್ಚರಿಸುತ್ತೇವೆ ಎಂದು ಕೊಳ್ಳೋಣ. ಈ ವಾಕ್ಯವನ್ನು ಉಚ್ಚರಿಸುವವರು ಮತ್ತು ಕೇಳಿಸಿಕೊಳ್ಳುವವರು ಆ ತಪ್ಪು ಉಚ್ಚಾರದ ಪದದ ತಿರುಳನ್ನು ಸರಿಯಾಗಿಯೇ ಅರಿಯುತ್ತಾರೆ. ಪೂರ್ವನಿರ್ಧಾರಿತ ಸಂಯೋಜನೆ ಇದ್ದುದಾದರೆ ಆಗ ಇಂಥ 'ತಪ್ಪುಗಳು' ನಡೆಯಲು ಸಾಧ್ಯವಿಲ್ಲ. ಇದಕ್ಕೆ ಪೂರಕವಾಗಿ ಇನ್ನೂ ಒಂದು ಉದಾ. ಗಮನಿಸಬಹುದು. ಕೆಲವೊಮ್ಮೆ ವಾಕ್ಯವೊಂದರಲ್ಲಿ ಯಾವ ಪದ ಬಳಸಬೇಕೋ ಅದರ ತಿರುಳನ್ನು ಹೊಂದಿರದ ಪದವನ್ನು ಬಳಸುವುದುಂಟು. ಆಗಲೂ ವಾಕ್ಯದ ಒಟ್ಟು ತಿರುಳನ್ನು ಗ್ರಹಿಸುವಲ್ಲಿ ವಾಕ್ಯದ ರಾಚನಿಕ ವ್ಯವಸ್ಥೆಯೇ ನೆರವಾಗಿ ಬಿಡುತ್ತದೆ. ಇದೆಲ್ಲವೂ ನಾವು ಹೇಳುತ್ತಿರುವ ಪ್ರಮೇಯಕ್ಕೆ ಪೂರಕವಾಗಿಯೇ ಕೆಲಸ ಮಾಡುತ್ತದೆ.

ಹದಿಹರೆಯದ ಮಕ್ಕಳು ತಮ್ಮ ಸಮ ವಯಸ್ಸಿನವರೊಡನೆ ಕೆಲವು ನುಡಿ ಆಟಗಳನ್ನು ಆಡುತ್ತಾರೆ. ವಾಕ್ಯವನ್ನು ಉಚ್ಚರಿಸುವಾಗ ವಾಕ್ಯದ ಗೊತ್ತಾದ ಭಾಗದಲ್ಲಿ ಒಂದು ಉಲಿಯನ್ನು ಹೆಚ್ಚಾಗಿ ಸೇರಿಸುವ ಆಟವನ್ನೇ ನೋಡೋಣ. ಕನ್ನಡ ಮಾತಾಡುವ ಮಕ್ಕಳು **ಕ್** ಇಲ್ಲವೇ **ಪ್** ಉಲಿಯನ್ನು ಸೇರಿಸಿ ಆ ಆಟ ಆಡುವುದುಂಟು. ಈ ಆಟದಲ್ಲಿ ಸಿದ್ಧಗೊಳ್ಳುವ ಒಂದು ವಾಕ್ಯ ಹೀಗಿರಬಹುದು.

ಕನಾಕನು ಕಮಕನೆಕಗೆಕ ಕಹೊಗ್‌ಕತೀಕನಿ ಈ ವಾಕ್ಯವನ್ನು ಗುಂಪಿನಿಂದ ಹೊರಗಿನಿಂದ ಕೇಳಿಸಿಕೊಂಡರೆ ಅದಕ್ಕೆ ತಿರುಳಿದೆ ಎಂದು ಗೊತ್ತಾಗುವುದಿಲ್ಲ. ಆದರೆ ಗುಂಪಿನ ಒಳಗಿನವರಿಗೆ ಈ ಗೊಂದಲವಿಲ್ಲ. ಹೇಳುವವರಿಗೆ ಮತ್ತು ಕೇಳಿಸಿ ಕೊಳ್ಳುವವರಿಗೆ ಈ ವಾಕ್ಯದ ದಿಟವಾದ ರೂಪ ಹೀಗಿರುತ್ತದೆ.

ನಾನು ಮನೆಗೆ ಹೋಗ್ತೀನಿ.

ಈ ವಾಕ್ಯದಲ್ಲಿ ಎಲ್ಲಿ ಹೆಚ್ಚುವರಿ ಉಲಿಯಾಗಿ **ಕ್** ಅನ್ನು ಸೇರಿಸಬೇಕು ಎಂಬುದಕ್ಕೆ ನಿಯಮವಿದೆ. ಆ ನಿಯಮ ಈಗ ನಮಗೆ ಮುಖ್ಯವಲ್ಲ. ಆದರೆ ಇಂತಹ ಪಲ್ಲಟಗಳನ್ನು ಸಿದ್ಧಗೊಳಿಸುವುದು ಮತ್ತು ಹೀಗೆ ಸಿದ್ಧಗೊಂಡ ಪಲ್ಲಟದ ದಿಟವಾದ ರೂಪವನ್ನು ಗ್ರಹಿಸುವುದು ಸಾಧ್ಯವಾಗಬೇಕಾದರೆ ಮೇಲೆ ನಾವು ನಿರೂಪಿಸಿದ ಚೌಕಟ್ಟಿನ ಮೊರೆ ಹೋಗಬೇಕಾಗುತ್ತದೆ.

ಪದಕೋಶವನ್ನು ಮೆದುಳು ನಿರ್ವಹಿಸಲು ಅನುಸರಿಸಿರುವ ಈ ಮಾದರಿಯೇ ನುಡಿಯ ಬೇರೆ ಬೇರೆ ಪದರಗಳನ್ನು ನುಡಿ ಕಸುವು ನಿರ್ವಹಿಸುವ ನೆಲೆಯೂ ಆಗಿರುತ್ತದೆ. ಇದಕ್ಕೆ ಮೆದುಳಿನ ಜೈವಿಕ ರಚನೆಯಲ್ಲಿ ಹಲವು ಪುರಾವೆಗಳಿವೆ. ಅವುಗಳನ್ನು ಸ್ಥೂಲವಾಗಿ ನೋಡೋಣ. ಫ್ರಾನ್ಸ್ ದೇಶದ ಮನಃಶಾಸ್ತ್ರಜ್ಞ ಪಾಲ್ ಬ್ರೋಕಾ 19ನೆಯ ಶತಮಾನದ ಉತ್ತರಾರ್ಧದಲ್ಲಿ ತನ್ನ ಕೆಲವು ರೋಗಿಗಳನ್ನು ಅಧ್ಯಯನ ಮಾಡುತ್ತಿದ್ದನು. ಆ ರೋಗಿಗಳೆಲ್ಲರೂ ದೈಹಿಕವಾಗಿ ಸುಸ್ಥಿರವಾಗಿದ್ದು. ಮಾತಾಡುವ ಕಸುವನ್ನೇ ಕಳೆದುಕೊಂಡ ವಯಸ್ಕರಾಗಿದ್ದರು. ಅಪಘಾತದಲ್ಲಿ ಮೆದುಳಿಗೆ ಪೆಟ್ಟುಬಿದ್ದು ತಾವು ಆವರೆಗೆ ಬಳಸುತ್ತಿದ್ದ ನುಡಿಯ ಕಸುವನ್ನು ಭಾಗಶಃ ಕಳೆದುಕೊಂಡಿದ್ದರು. ಈ ರೋಗಿಗಳ ಇತರ ಜೈವಿಕ ಕ್ರಿಯೆಗಳಲ್ಲಿ ಯಾವ ಏರುಪೇರೂ ಇರಲಿಲ್ಲ. ಆದ್ದರಿಂದ ಅಪಘಾತದಲ್ಲಿ ಮೆದುಳಿಗೆ ಆದ ಪೆಟ್ಟು ನುಡಿಕಸುವು ನೆಲೆಗೊಂಡ ಭಾಗಕ್ಕೆ ಧಕ್ಕೆಯನ್ನು ಉಂಟು ಮಾಡಿರಬೇಕು ಎಂದು ಊಹಿಸುವುದು ಅನಿವಾರ್ಯವಾಯಿತು. ಇಲ್ಲಿ ಮತ್ತೊಂದು ಸಂಗತಿ ಗಮನಕ್ಕೆ ಬರುವಂತಿದೆ. ಈ ತೊಂದರೆಗೆ ಒಳಗಾದವರು ತಾವೇ ಮಾತಾಡಲು ಅಸಮರ್ಥರಾಗಿದ್ದರೂ ಬೇರೆಯವರು ಮಾತಾಡಿದ್ದನ್ನು (ತೊಂದರೆಗೆ ಒಳಗಾಗಿದ್ದವರು ಬಳಸುತ್ತಿದ್ದ ನುಡಿಯನ್ನೇ ಬಳಸಿದಾಗ) ಗ್ರಹಿಸಬಲ್ಲವರಾಗಿದ್ದರು. ಅಂದರೆ ಇವರಲ್ಲಿ ನುಡಿಕಸುವು ಇಡಿಯಾಗಿ ನಿಷ್ಕ್ರಿಯವಾಗಿರಲಿಲ್ಲ. ಮಾತಾಡುವ ಕಸುವು ತೊಂದರೆಗೆ ಒಳಗಾಗಿದ್ದರೂ ಕೇಳಿ ಅರಿತುಕೊಳ್ಳುವ ನುಡಿಕಸುವು ಜಾಗ್ರತವಾಗಿಯೇ ಇತ್ತು. ಇದು ಸಾಧ್ಯವಾಗಬೇಕಾದರೆ ಇವರಲ್ಲಿ ಮೆದುಳಿನ ಯಾವ ಭಾಗಕ್ಕೆ ಧಕ್ಕೆಯಾಗಿತ್ತೋ

ಆ ಭಾಗ ನುಡಿಕಸುವಿನ ನುಡಿಯುವ ನೆಲೆಯನ್ನು ಮಾತ್ರ ನಿಯಂತ್ರಿಸುತ್ತಿದ್ದಿರಬೇಕು. ಅಲ್ಲದೆ ನುಡಿಕಸುವಿನ ಕೇಳಿ ಅರಿಯುವ ಮೆದುಳಿನ ಬೇರೊಂದು ಭಾಗ ಯಾವ ಧಕ್ಕೆಗೂ ಒಳಗಾಗಿಲ್ಲ ಎಂದು ತಿಳಿಯುವುದು ಅನಿವಾರ್ಯವಾಯಿತು. ಅಂದರೆ ನುಡಿ ಕಸುವಿನಲ್ಲಿ ನುಡಿಯುವ ಮತ್ತು ಕೇಳಿಸಿಕೊಳ್ಳುವ ನೆಲೆಗಳಿದ್ದು ಅವೆರಡೂ ಮೆದುಳಿನ ಬೇರೆಬೇರೆ ಭಾಗಗಳ ನಿಯಂತ್ರಣಕ್ಕೆ ಒಳಪಟ್ಟಿವೆ ಎಂದೂ, ಅವೆರಡರ ನಡುವೆ ಸಂಯೋಜಕ ಸಂಬಂಧ ಇದ್ದಿರಬೇಕೆಂದು ತೀರ್ಮಾನಿಸಬೇಕಾಯಿತು.

ಈ ತೀರ್ಮಾನವನ್ನು ಪುಷ್ಟೀಕರಿಸುವ ಮತ್ತೊಂದು ಶೋಧ 19ನೇ ಶತಮಾನದ ಕೊನೆಯ ದಶಕಗಳಲ್ಲಿ ಹೊರಬಂದಿತು. ಜರ್ಮನ್ ದೇಶದ ಮನೋವಿಜ್ಞಾನಿ ಕಾರ್ಲ್ ವರ್ನಿಕ್ ಎಂಬಾತ ನುಡಿ ಕಸುವಿನ ಬಳಕೆಯಲ್ಲಿ ತೊಂದರೆಗೆ ಒಳಗಾದ ಬೇರೊಂದು ಬಗೆಯ ಜನರನ್ನು ಅಧ್ಯಯನ ಮಾಡಿದ ಇವರೂ ಕೂಡಾ ಅಪಘಾತದಿಂದಾಗಿ ಮೆದುಳಿಗೆ ಪೆಟ್ಟನ್ನು ತಿಂದವರಾಗಿದ್ದರು. ನುಡಿ ಕಸುವಿನ ಬಳಕೆಯಲ್ಲಿ ಏರುಪೇರು ಆಗಿರುವುದನ್ನು ಬಿಟ್ಟರೆ ಇವರ ಇತರ ದೈಹಿಕ ಮತ್ತು ಮಾನಸಿಕ ಕ್ರಿಯೆಗಳಿಗೆ ಯಾವ ತೊಂದರೆಯೂ ಆಗಿರಲಿಲ್ಲ. ಪಾಲ್ ಬ್ರಾಕಾ, ಅಧ್ಯಯನ ಮಾಡಿದವರಿಗಿಂತ ಈ ಗುಂಪಿನ ಜನರು ಎದುರಿಸುತ್ತಿದ್ದ ತೊಂದರೆ ಬೇರೆಯೇ ಆಗಿತ್ತು. ಇವರು ಮಾತಾಡುವ ಕಸುವನ್ನು ಹೊಂದಿದ್ದರು. ಆದರೆ ಇತರರು ಆಡಿದ ಮಾತನ್ನು ಕೇಳಿಸಿಕೊಂಡರೂ ಅದರ ತಿರುಳನ್ನು ಗ್ರಹಿಸಲು ಅಸಮರ್ಥರಾಗಿದ್ದರು. ಇದು ಬ್ರಾಕಾ ಎದುರಿಸಿದ ಸಮಸ್ಯೆಗೆ ತದ್ವಿರುದ್ಧವಾಗಿದೆ. ವರ್ನಿಕ್ ಗಮನಿಸುತ್ತಿದ್ದ ಈ ಜನರು ಮಾತನಾಡಬಲ್ಲವ ರಾಗಿದ್ದರೂ ಹಾಗೂ ಅವರ ಮಾತಿನಲ್ಲಿ ವ್ಯಾಕರಣ ನಿಯಮಗಳು ಪಾಲನೆಯಾಗಿದ್ದರೂ ಅವರು ನುಡಿಯುತ್ತಿದ್ದ ವಾಕ್ಯಗಳಿಗೆ ಇತರರು ಗ್ರಹಿಸಬಹುದಾದ ತಿರುಳೇ ಇರುತ್ತಿರಲಿಲ್ಲ. ಅವು ನಿರರ್ಥಕ ವಾಕ್ಯಗಳಂತಿದ್ದವು. ವರ್ನಿಕ್ ಈ ಮಾದರಿಯ ಜನರನ್ನು ಅಧ್ಯಯನಕ್ಕೆ ಗುರಿಪಡಿಸಿ ಒಂದು ತೀರ್ಮಾನಕ್ಕೆ ಬಂದನು. ಅದರಂತೆ ಇವರ ಮೆದುಳಿನಲ್ಲಿ ನುಡಿಯ ಶಾಬ್ದಿಕ ನೆಲೆಯ ನಿಯಂತ್ರಣವನ್ನು ಮಾಡುವ ಮೆದುಳಿನ ಭಾಗಕ್ಕೆ ಯಾವ ತೊಂದರೆಯೂ ಆಗಿರಲಿಲ್ಲ. ಬದಲಿಗೆ ಪದದ ತಿರುಳನ್ನು ಯೋಜಿಸುವ ಮೆದುಳಿನ ಭಾಗಕ್ಕೆ ಧಕ್ಕೆಯೊದಗಿದ್ದಿರಬೇಕು.

ಬ್ರಾಕಾ ಮತ್ತು ವರ್ನಿಕ್ ಅವರ ಶೋಧಗಳಿಂದ ಮೆದುಳಿನ ಬೇರೆ ಬೇರೆ ಭಾಗಗಳು ಶಬ್ದ ಮತ್ತು ತಿರುಳನ್ನು ನಿಯಂತ್ರಿಸುತ್ತವೆ ಎಂಬುದು ಗೊತ್ತಾಯಿತು. ನಾವು ಈವರೆಗೆ ಮಂಡಿಸುತ್ತಿರುವ ವಿಚಾರಗಳಿಗೆ ಈ ಶೋಧಗಳು ಸಮರ್ಥನೆಯನ್ನು ಒದಗಿಸುತ್ತವೆ. ಅಂದರೆ ಮೆದುಳು ಸಂಗ್ರಹಿಸಿಕೊಂಡಿರುವ ಪದಕೋಶದಲ್ಲಿ ಶಬ್ದ, ತಿರುಳು ಮತ್ತು ನಿಯೋಗಗಳು ಮೊದಲೇ ಸಂಯೋಜಿತವಾಗಿ ಇರಲು ಸಾಧ್ಯವೇ ಇಲ್ಲ. ಅವು ಮೆದುಳಿನ ಬೇರೆಬೇರೆ ಭಾಗಗಳ ನಿಯಂತ್ರಣಕ್ಕೆ ಒಳಗಾಗಿರುವುದು ಸ್ಪಷ್ಟವೇ ಆಗಿದೆ.

ನುಡಿಕಸುವಿನ ಪದರಗಳು ಹೀಗೆ ಬೇರೆ ಬೇರೆ ವಲಯಗಳ ನಿಯಂತ್ರಣಕ್ಕೆ ಒಳಗಾಗಿದ್ದು ಆ ವಲಯಗಳ ನಡುವೆ ಉಂಟಾಗುವ ನಂಟಿನಿಂದ ವಾಕ್ಯಗಳು ಸಿದ್ಧಗೊಳ್ಳುತ್ತವೆ ಎಂಬ ಮೇಲೆ ಹೇಳಿದ ಪ್ರಮೇಯವನ್ನು ಸಮರ್ಥಿಸುವ ಇನ್ನೂ

ಹಲವು ಉದಾಹರಣೆಗಳನ್ನು ಕೊಡಬಹುದು. ನಾವು ಮಾತಾಡುವಾಗ ಬೇಕೆಂತಲೋ ನಮ್ಮ ನುಡಿಯಲ್ಲಿ ಇಲ್ಲದ ಎರಡು ಪದಗಳನ್ನು ಬಳಸಿ ವಾಕ್ಯಗಳನ್ನು ಕಟ್ಟುವ ಪ್ರಯೋಗವನ್ನು ಮಾಡೋಣ. ಆ ವಾಕ್ಯಗಳು ಹೀಗಿವೆ.

(1) ಮರದ ಮೇಲೆ ಕುಳಿತಿದ್ದ **ಕಬಾಲ** ಹಾರಿಹೋಯಿತು.

(2) ಮರದ ಮೇಲೆ ಕುಳಿತಿದ್ದ **ಗ್ಸಾಸೀಲ** ಹಾರಿಹೋಯಿತು.

ಈ ವಾಕ್ಯಗಳನ್ನು ಕೇಳಿಸಿಕೊಂಡ ಕನ್ನಡ ಬಲ್ಲವರೆದುರು ಎರಡು ಪ್ರಶ್ನೆಗಳನ್ನು ಇರಿಸೋಣ.

(1) **ಕಬಾಲ** ಮತ್ತು **ಗ್ಸಾಸೀಲ** ಎಂದರೇನು?

(2) ಇವೆರಡೂ ಕನ್ನಡ ಪದಗಳೇ ಅಥವಾ ಅಲ್ಲವೇ?

ಈ ಪ್ರಶ್ನೆಗಳಿಗೆ ಕನ್ನಡ ಬಲ್ಲವರು ನೀಡುವ ಉತ್ತರ ಹೇಗಿರಬಹುದು? ಹೆಚ್ಚಿನ ಜನರು ಆ ಎರಡೂ ಪದಗಳೂ ಹಕ್ಕಿಗಳ ಹೆಸರುಗಳೆಂದು ಹೇಳುತ್ತಾರೆ. ಎರಡನೆಯ ಪ್ರಶ್ನೆಗೆ ದೊರಕುವ ಉತ್ತರಗಳಲ್ಲಿ ಈ ಬಗೆಯ ಸಹಮತ ಇಲ್ಲದಿರಬಹುದು. ಎರಡೂ ಕನ್ನಡ ಪದಗಳೆಂದು ಹೇಳುವವರು ಕಡಿಮೆ. **ಕಬಾಲ** ಕನ್ನಡದ ಪದವೆಂದೂ **ಗ್ಸಾಸೀಲ** ಕನ್ನಡದ್ದಲ್ಲವೆಂದೂ ಹೇಳುವವರು ಒಂದಷ್ಟು ಜನ ಇರುತ್ತಾರೆ. ಎರಡೂ ಪದಗಳು ಬೇರೆ ನುಡಿಯ ಪದಗಳು ಎಂದು ಹೇಳುವವರೂ ಇರುತ್ತಾರೆ.

ನಮ್ಮ ಈ ಪ್ರಯೋಗದಿಂದ ಗೊತ್ತಾಗುವುದೇನು? ನಾವು ಬಳಸಿದ ಎರಡು ಹೊಸ ಪದಗಳನ್ನು ಆವರೆಗೆ ಎಂದೂ ಕೇಳಿಸಿಕೊಳ್ಳದ ಕನ್ನಡಿಗರು ಅವು ಹಕ್ಕಿಗಳೇ ಇರಬೇಕೆಂದು ತಿಳಿದರು. ಅಂದರೆ ಆ ಪದಗಳು ಬಳಕೆಯಾಗಿರುವ ವಾಕ್ಯದ ಸಂದರ್ಭದಲ್ಲಿ ಅವು ಹಕ್ಕಿಗಳಾಗಿರಬೇಕೆಂದು ಊಹಿಸುವುದು ಸಾಧ್ಯ. ಇದು ಸಂಭವಿಸಬೇಕಾದರೆ ಪದದ ತಿರುಳು ಮತ್ತು ಶಾಬ್ದಿಕ ರೂಪಗಳು ಮೊದಲೇ ಸಂಯೋಜಿತವಾಗಿರುತ್ತವೆ ಎಂಬ ತೀರ್ಮಾನವನ್ನು ಕೈಬಿಡಲೇ ಬೇಕಾಗುತ್ತದೆ.

ಎರಡನೆಯ ಪ್ರಶ್ನೆಗೆ ಸಿಕ್ಕ ಉತ್ತರಗಳು ಏರುಪೇರಾಗಲು ಬೇರೆ ಕಾರಣಗಳಿವೆ. ಅವೆಲ್ಲವನ್ನೂ ಇಲ್ಲಿ ವಿಶ್ಲೇಷಿಸುವ ಅಗತ್ಯವಿಲ್ಲ. ಆದರೆ ಕನ್ನಡ ಪದಗಳ ಶಾಬ್ದಿಕ ರಚನೆಯ ಮೂಲ ನಿಯಮವನ್ನು ಈ ಎರಡೂ ಪದಗಳು ಪಾಲಿಸುತ್ತಿವೆಯೇ ಎಂಬುದು ಉತ್ತರಗಳನ್ನು ನಿರ್ದೇಶಿಸುತ್ತಿದೆ. **ಕಬಾಲ** ಎಂಬುದು ಕನ್ನಡ ಪದಗಳ ಶಾಬ್ದಿಕ ರಚನೆಯ ನಿಯಮಗಳಿಗೆ ಅನುಗುಣವಾಗಿದೆ. ಆದರೆ **ಗ್ಸಾಸೀಲ** ಎಂಬ ಪದ ಆ ನಿಯಮಗಳಿಗೆ ಅನುಗುಣವಾಗಿಲ್ಲ.

ಈ ಎಲ್ಲ ವಿವರಣೆಗಳಿಂದ ಸ್ಪಷ್ಟವಾಗುವುದಿಷ್ಟು. ನುಡಿಕಸುವಿನ ಬೇರೆ ಬೇರೆ ಪದರಗಳು ತಮ್ಮೊಳಗೇ ಹಲವು ಉಪಪದರಗಳನ್ನು ಹೊಂದಿರುತ್ತವೆ. ಈ ಉಪಪದರಗಳು ಬೇರೆಬೇರೆಯಾಗಿ ಕಾರ್ಯ ನಿರ್ವಹಿಸುತ್ತಿದ್ದು ಅವೆಲ್ಲದರ ನಡುವೆ ಸಾವಯುವ ಸಂಬಂಧವೊಂದು ಏರ್ಪಟ್ಟಿರುತ್ತದೆ.

ವ್ಯಾಕರಣ

ಸಾಂಪ್ರದಾಯಿಕವಾಗಿ ನುಡಿ ರಚನೆಯನ್ನು ಅಧ್ಯಯನ ಮಾಡುವವರು ಅದಕ್ಕೊಂದು ವ್ಯಾಕರಣವನ್ನು ರಚಿಸುತ್ತಾರೆ. ಈ ವ್ಯಾಕರಣದಲ್ಲಿ ಆಯಾ ನುಡಿಯ ಉಲಿರಚನೆ, ಪದರಚನೆ ಮತ್ತು ವಾಕ್ಯ ರಚನೆಗಳನ್ನು ವಿವರಿಸಲಾಗುತ್ತದೆ. ಉಲಿರಚನೆಯ ಭಾಗದಲ್ಲಿ ಆ ನುಡಿಯಲ್ಲಿ ಬಳಕೆಯಾಗುವ ಉಲಿಗಳ ಚಹರೆ, ಅವುಗಳ ಪ್ರಸಾರ, ಮತ್ತು ಅವುಗಳ ಜೋಡಣೆಯಲ್ಲಿ ಇರುವ ನಿಯಮಗಳನ್ನು ಚರ್ಚಿಸಲಾಗುತ್ತದೆ. ಉದಾಗೆ, ಕನ್ನಡ ವ್ಯಾಕರಣ ಉಲಿ ರಚನೆಯನ್ನು ವಿವರಿಸುವವರು ಕನ್ನಡದಲ್ಲಿ ಇರುವ ಉಲಿಗಳನ್ನು ಪಟ್ಟಿ ಮಾಡುತ್ತಾರೆ. ಅವುಗಳ ಚಹರೆಯನ್ನು ವಿವರಿಸುತ್ತಾರೆ. ಅವುಗಳಲ್ಲಿ ಒಳ ಗುಂಪುಗಳನ್ನು ಮಾಡಿ ತೋರಿಸುತ್ತಾರೆ. ತೆರೆದ ಉಲಿಗಳು, ಮುಚ್ಚಿದ ಉಲಿಗಳು, ಮೂಗುಲಿಗಳು, ಉಜ್ಜುಲಿಗಳು ಎಂಬ ಹಲವು ಒಳಗುಂಪುಗಳಲ್ಲಿ ಉಲಿಗಳನ್ನು ಹಂಚಿ ಇರಿಸುತ್ತಾರೆ. ಈ ಉಲಿಗಳು ಬಳಕೆಯಾಗುವಾಗ ಯಾವ ಯಾವ ಕಟ್ಟುಪಾಡುಗಳಿರುತ್ತವೆ ಎಂಬುದನ್ನು ಗುರುತಿಸುತ್ತಾರೆ. ಕನ್ನಡದ ಮಟ್ಟಿಗೆ ಇಂತಹ ಕೆಲವು ಕಟ್ಟಳೆಗಳು ಈ ಕೆಳಕಂಡಂತಿರುತ್ತವೆ.

(1) ಎರಡು ತೆರೆದ ಉಲಿಗಳು ಒಂದಾದ ಮೇಲೊಂದಂತೆ ಬಳಕೆಯಾಗಲಾರವು.

(2) ಮುಚ್ಚಿದ ಉಲಿಗಳಲ್ಲಿ **ಣ್, ಳ್** ಮುಂತಾದವು ಪದದ ಮೊದಲಲ್ಲಿ ಬರಲಾರವು.

(3) ಮುಚ್ಚಿದ ಉಲಿಗಳು ಒಂದಾದಮೇಲೊಂದರಂತೆ ಬರುತ್ತಿದ್ದರೆ ಅಲ್ಲಿಯೂ ಕೆಲವು ಬಗೆಯ ಜೋಡಣೆಗಳು ಬಳಕೆಯಾಗಲಾರವು. ಉದಾಹರಣೆಗೆ ಪದದ ಮೊದಲಲ್ಲಿ ಎರಡು ಮುಚ್ಚಿದ ಉಲಿಗಳು ಒಟ್ಟಿಗೆ ಬರುವುದಿಲ್ಲ.

ಈ ಉಲಿಗಳು ಒಂದಾದಮೇಲೊಂದರಂತೆ ಬರುವಾಗ ಉಂಟಾಗುವ ಉಲಿ ಬದಲಾವಣೆಗಳನ್ನು ನಿಯಮ ರೂಪದಲ್ಲಿ ನಿರೂಪಿಸಿರುತ್ತಾರೆ. ಶಾಲಾ ವ್ಯಾಕರಣಗಳು ಸಂಧಿ ಎಂಬ ಭಾಗದಲ್ಲಿ ಈ ವಿವರಣೆಗಳನ್ನು ನೀಡುವುದನ್ನು ನೋಡಿದ್ದೇವೆ.

ಪದರಚನೆಯ ಭಾಗದಲ್ಲಿ ಆಯಾ ನುಡಿಯಲ್ಲಿ ಉಲಿಗಳು ಜೋಡಣೆಗೊಂಡು ಅರ್ಥವುಳ್ಳ ದೊಡ್ಡ ಘಟಕಗಳಾಗಿ ಮೈದಳೆಯುವುದನ್ನು ವಿವರಿಸಲಾಗುತ್ತದೆ. ಆದರೆ 'ಅರ್ಥವುಳ್ಳ' ಎಂಬುದನ್ನು ವಿವರಿಸುವ ಅಗತ್ಯವಿದೆ. ಒಂದು ಉದಾಹರಣೆಯನ್ನು ನೋಡೋಣ. ಹುಲಿ ಎಂಬುದು ಕನ್ನಡದ ಒಂದು ಪದ. ಇದರಲ್ಲಿ ನಾಲ್ಕು ಉಲಿಗಳಿವೆ. **ಹ್,ಉ,ಲ್,ಇ** ಈ ನಾಲ್ಕು ಉಲಿಗಳು ಒಂದಾದ ಮೇಲೊಂದರಂತೆ ಸೇರಿ ಈ ಪದರಚನೆಯಾಗಿದೆ. ಇದಕ್ಕೊಂದು ಅರ್ಥವೂ ಇದೆ. ಲೋಕದಲ್ಲಿ ಕಾಣುವ ಒಂದು ಪ್ರಾಣಿಯನ್ನು ಈ ಪದ ಬಿಂಬಿಸುತ್ತದೆಂದು ವ್ಯವಹರಿಸುತ್ತೇವೆ. ಆದರೆ ನುಡಿಯ ಎಲ್ಲ ಪದಗಳಿಗೂ ಹೀಗೆ ಲೋಕಸಂವಾದಿಯಾದ ತಿರುಳು ಇರುವುದಿಲ್ಲ. **ಹುಲಿಗಳು** ಎಂಬ ರಚನೆಯಲ್ಲಿ **ಗಳು** ಎಂಬ ಪದಭಾಗವಿದೆ. ಇದೂ ಕೂಡಾ ಹಲವು ಉಲಿಗಳು ಸೇರಿ ಉಂಟಾಗಿರುವ ರಚನೆ ಆದರೆ ಅದಕ್ಕೆ ನುಡಿಯಲ್ಲಿ ಒಂದು ಕೆಲಸವಿದೆಯೇ ಹೊರತು ಲೋಕದಲ್ಲಿರುವ ಏನನ್ನೂ ಅದು ಬಿಂಬಿಸುವುದಿಲ್ಲ. ತಾನು ಯಾವ ಪದದೊಡನೆ

ಬಳಕೆಯಾಗುತ್ತದೋ ಆ ಪದದ ಲೋಕಬಿಂಬವು ಒಂದಕ್ಕಿಂತ ಹೆಚ್ಚು ಎಂದು ಸೂಚಿಸುವ ಕೆಲಸವನ್ನು **ಗಳು** ಎಂಬ ಪದಭಾಗವು ಮಾಡುತ್ತದೆ. ಹಾಗಾಗಿ ಅರ್ಥವುಳ್ಳ ಎಂಬ ಮಾತನ್ನು ವ್ಯಾಪಕ ನೆಲೆಯಲ್ಲಿ ಗ್ರಹಿಸಬೇಕು.

ಪದರಚನೆಯ ಭಾಗದಲ್ಲಿ ಪದಗಳ ಸ್ವರೂಪ ಅವುಗಳಲ್ಲಿರುವ ಒಳಗುಂಪುಗಳು, ಅವುಗಳು ಜೋಡಣೆಯಾಗುವ ಬಗೆ, ಜೋಡಣೆಯಾಗುವಾಗ ಕಂಡು ಬರುವ ಕಟ್ಟಳೆಗಳು ಇವೆಲ್ಲವನ್ನೂ ವಿವರಿಸಲಾಗುತ್ತದೆ. **ಉದಾಹರಣೆಗೆ ಹುಲಿಗಳನ್ನು** ಎಂಬ ರಚನೆಯನ್ನು ಗಮನಿಸೋಣ. ಇದರಲ್ಲಿ **ಹುಲಿ,ಗಳು** ಮತ್ತು **ಅನ್ನು** ಎಂಬ ಪದಭಾಗಗಳಿವೆ. ಈ ಮೂರು ಜೋಡಣೆಯಾಗುವಾಗ ಯಾವ ಅನುಕ್ರಮಣಿಕೆ ಇರಬೇಕೆಂಬ ಕಟ್ಟಳೆ ಇದೆ. ಅದರಂತೆ **ಹುಲಿ** ಎಂಬುದು ಮೊದಲು ಬರಬೇಕು. **ಗಳು** ಮತ್ತು **ಅನ್ನು** ಬಳಿಕವೇ ಬರಬೇಕು ಅಲ್ಲಿಯೂ ಕೂಡಾ **ಗಳು** ಮತ್ತು **ಅನ್ನು** ಎಂಬ ಪದಭಾಗಗಳು ತಮ್ಮ ಅನುಕ್ರಮವನ್ನು ಹಿಂದೆ ಮುಂದೆ ಮಾಡುವಂತಿಲ್ಲ. ಅಂದರೆ **ಹುಲಿಯನ್ನುಗಳು** ಎಂಬ ರಚನೆ ಕನ್ನಡಕ್ಕೆ ಸಲ್ಲುವುದಿಲ್ಲ. ಇಂತಹ ಕಟ್ಟಳೆಗಳನ್ನು ಪಟ್ಟಿ ಮಾಡುವುದು ಪದರಚನೆಯ ಭಾಗದ ಗುರಿಯಾಗಿರುತ್ತದೆ.

ಮೂರನೆಯ ಭಾಗವೇ ವಾಕ್ಯರಚನೆ ನುಡಿಯಲ್ಲಿ ಪದಗಳು ಒಗ್ಗೂಡಿ ದೊಡ್ಡಘಟಕವಾಗುವುದನ್ನು ವಾಕ್ಯವೆಂದು ಸಾಮಾನ್ಯವಾಗಿ ವಿವರಿಸಲಾಗುತ್ತದೆ. ಯಾವುದು ಪದ ಯಾವುದು ವಾಕ್ಯ ಎಂಬುದನ್ನು ಗುರುತಿಸುವ ಕೆಲಸ ಸುಲಭವಲ್ಲ. ಶಾಲಾ ವ್ಯಾಕರಣಗಳು ಬರಹದ ರೂಪದ ನುಡಿಯನ್ನು ವಿವರಿಸುವಾಗ ಪದಗಳ ನಡುವೆ ತೆರಪನ್ನು ಬಿಡುವ ವಾಕ್ಯರಚನೆಗೆ ಚುಕ್ಕಿ ಇರಿಸುವ ಕೆಲಸವನ್ನು ಮಾಡುತ್ತವೆ.

ನೆನ್ನೆ ರಾತ್ರಿ ಬಿದ್ದ ಮಳೆಗೆ ನೂರಾರು ಮರಗಳು ಉರುಳಿಬಿದ್ದವು.

ಇದೊಂದು ವಾಕ್ಯ ಇದರಲ್ಲಿ ಎಂಟು ಪದಗಳಿವೆ ಬರೆಯುವಾಗ ಅವುಗಳ ನಡುವೆ ತೆರಪು ಬಿಡಲಾಗಿದೆ. ವಾಕ್ಯರಚನೆಯಲ್ಲಿ ಪದಗಳು ಸುಮ್ಮನೆ ಒಂದಾದ ಮೇಲೊಂದರಂತೆ ಜೋಡಣೆಯಾಗಿರುವುದಿಲ್ಲ. ಆ ಜೋಡಣೆಯಲ್ಲಿ ಪದಗಳು ತಮ್ಮೊಳಗೇ ಒಳಗುಂಪುಗಳನ್ನು ಮಾಡಿಕೊಂಡಿರುತ್ತವೆ. ಈ ಒಳಗುಂಪುಗಳ ರಚನೆ, ಉದ್ದೇಶ ಅವುಗಳ ನಡುವಣ ಸಂಬಂಧ, ಇವೆಲ್ಲವನ್ನು ವಿವರಿಸುವುದನ್ನು ವಾಕ್ಯರಚನೆಯ ಭಾಗದಲ್ಲಿ ನಿರ್ವಹಿಸಬೇಕಾಗುತ್ತದೆ.

ಪದ ಮತ್ತು ವಾಕ್ಯಗಳ ಗಡಿಗೆರೆಯನ್ನು ಗುರುತಿಸುವುದು ಸುಲಭವಲ್ಲ ಎಂದು ಈಗಾಗಲೇ ಹೇಳಲಾಗಿದೆ. ಕೆಲವು ಉದಾಗಳನ್ನು ನೋಡೋಣ. ಈ ಕೆಳಗಿನ ರಚನೆಗಳನ್ನು ಗಮನಿಸಿ

(1) ಹುಲಿ

(2) ಹುಲಿ ಮರಿ

(3) ಮರಿ ಹುಲಿ

(4) ಆ ಹುಲಿ

(5) ಮುದಿ ಹುಲಿ

(6) ಹುಲಿ ಬಂತು.

ಸಾಮಾನ್ಯ ಗ್ರಹಿಕೆಗೆ **ಹುಲಿ** ಎಂಬುದು ಪದ, **ಹುಲಿ ಬಂತು** ಎಂಬುದು ವಾಕ್ಯ. ಹಾಗಿದ್ದಲ್ಲಿ ಉಳಿದವು ಏನು? **ಹುಲಿ ಮರಿ, ಮರಿ ಹುಲಿ**ಗಳ ನಡುವೆ ಇರುವ ವ್ಯತ್ಯಾಸ ಏನು? **ಮರಿ ಹುಲಿ** ಮತ್ತು **ಮುದಿಹುಲಿ** ಎಂಬ ರಚನೆಗಳು ಸಮಾನವೇ ಅಲ್ಲವೇ? **ಆ ಹುಲಿ** ಎಂಬುದು ಪದವೇ ವಾಕ್ಯವೇ? ಎಂಬ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳಬೇಕಾಗುತ್ತದೆ. **ಹುಲಿ, ಮರಿ ಹುಲಿ** ಮತ್ತು **ಮುದಿ ಹುಲಿ** ಈ ಮೂರು ಪದರಚನೆಯ ವ್ಯಾಪ್ತಿಗೆ ಸೇರುತ್ತವೆ. ಏಕೆಂದರೆ ಅವೆಲ್ಲವೂ ಒಂದು ಹುಲಿಯನ್ನೇ ಕುರಿತಿವೆ. **ಹುಲಿ ಮರಿ** ಕೂಡ ಪದವೇ. ಆದರೆ ಹಲವು ಬಗೆಯ ಮರಿಗಳು (**ಕುರಿ ಮರಿ, ನಾಯಿ ಮರಿ, ಇಲಿ ಮರಿ, ಕರಡಿ ಮರಿ** ಇತ್ಯಾದಿ) ಒಂದು ಬಗೆಯನ್ನು ಸೂಚಿಸುತ್ತದೆ. ಆದರೆ **ಆ ಹುಲಿ** ಎಂಬುದು ಪದವಲ್ಲ. ವಾಕ್ಯವೂ ಅಲ್ಲ. ಪದಕ್ಕಿಂತ ದೊಡ್ಡದಾದ ವಾಕ್ಯಕ್ಕಿಂತ ಚಿಕ್ಕದಾದ ರಚನೆ. ಇದು ಒಂದು ವಾಕ್ಯದ ಭಾಗವಾಗಿ ಕಾರ್ಯನಿರ್ವಹಿಸಬಲ್ಲದು. ಉದಾಗೆ **ಆ ಹುಲಿ** ಬೋನಿಗೆ ಬಿತ್ತು. ಈ ರಚನೆಗಳ ಪಟ್ಟಿಗೆ **ಅದು ಹುಲಿ** ಎಂಬ ರಚನೆಯನ್ನು ಸೇರಿಸೋಣ. **ಆ ಹುಲಿ** ವಾಕ್ಯಭಾಗವಾದರೆ **ಅದು ಹುಲಿ** ಒಂದು ಪೂರ್ಣವಾಕ್ಯವೇ ಆಗಿದೆ. **ಅದು ಹುಲಿ** ಎಂಬ ರಚನೆಯನ್ನು ಬಳಸಿ ಇನ್ನೊಂದು ವಾಕ್ಯವನ್ನು ಕಟ್ಟಲಾಗದು. ಹೀಗಾಗಿ ಪದ ಮತ್ತು ವಾಕ್ಯಗಳ ನಡುವೆ ಪದಕಂತೆಗಳೆಂಬ ಇನ್ನೊಂದು ಗುಂಪನ್ನು ಗುರುತಿಸುವ ಅಗತ್ಯವಿದೆ. ಈ ಪದಕಂತೆಗಳೆನ್ನಲಾದ ರಚನೆಗಳು ವಾಕ್ಯದ ಭಾಗಗಳೇ ಆಗಿರುತ್ತವೆ. ಅವುಗಳ ರಚನೆ, ಸ್ವರೂಪ ಇತ್ಯಾದಿಗಳನ್ನು ವಾಕ್ಯರಚನೆಯ ಭಾಗವಾಗಿಯೇ ಚರ್ಚಿಸಬೇಕಾಗುತ್ತದೆ.

ಪದ ಮತ್ತು ಪದಕಂತೆಗಳ ನಡುವೆ ಇರುವ ವ್ಯತ್ಯಾಸಗಳನ್ನು ತಿಳಿಯಲು ಕನ್ನಡದಿಂದ ಕೆಲವು ನಿದರ್ಶನಗಳನ್ನು ಆಯ್ದು ಗಮನಿಸೋಣ.

ದೊಡ್ಡಮ್ಮ ಮತ್ತು **ದೊಡ್ಡ ಹುಲಿ** ಎಂಬ ಎರಡು ರಚನೆಗಳನ್ನು ನೋಡೋಣ. ಇವೆರಡೂ ಪದಗಳೇ ಸರಿ. ಆದರೆ ಎರಡೂ ಪದಗಳಲ್ಲಿರುವ **ದೊಡ್ಡ** ಎಂಬುದು ನಿರ್ವಹಿಸುತ್ತಿರುವ ಕೆಲಸ ಮಾತ್ರ ಬೇರೆ ಬೇರೆ **ದೊಡ್ಡ ಹುಲಿ** ಎಂದಾಗ ಗಾತ್ರದಲ್ಲಿ ದೊಡ್ಡದಾಗಿರುವ ಹುಲಿಯನ್ನೋ ಇಲ್ಲವೇ ಎರಡು ಹುಲಿಗಳಲ್ಲಿ ವಯಸ್ಸಿನಲ್ಲಿ ದೊಡ್ಡದಾಗಿರುವ ಹುಲಿಯನ್ನೋ ಹೇಳುತ್ತಿರಬಹುದು.ಆದರೆ **ದೊಡ್ಡಮ್ಮ** ಎಂದಾಗ ದೊಡ್ಡದಾಗಿರುವ ಅಮ್ಮನನ್ನು ಕುರಿತು **ದೊಡ್ಡ** ಎಂಬ ಪದ ಹೇಳುತ್ತಿಲ್ಲ. ಅಷ್ಟೇ ಅಲ್ಲ ಅಲ್ಲಿರುವ **ಅಮ್ಮ** ಎಂಬ ಪದ ಕೂಡ ತಾಯಿ ಎನ್ನುವ ತಿರುಳನ್ನು ಹೊಂದಿಲ್ಲ. ಅದು ಒಬ್ಬ ಹೆಂಗಸನ್ನು ಕುರಿತು ಹೇಳುತ್ತಿದ್ದರೂ ಆ ರಚನೆಯಲ್ಲಿರುವ **ದೊಡ್ಡ** ಮತ್ತು **ಅಮ್ಮ** ತಂತಮ್ಮ ತಿರುಳುಗಳನ್ನು ಬಿಟ್ಟುಕೊಟ್ಟಿವೆ. ಆ **ದೊಡ್ಡಮ್ಮ** ಪದವು ತಾಯಿ ಎಂದಾಗಲಿ ಹೆಂಗಸಿನ ಗಾತ್ರವನ್ನು ಹೇಳುತ್ತಿದೆ ಎಂದಾಗಲೀ (ಕನ್ನಡಿಗರು ಸಾಮಾನ್ಯವಾಗಿ ತಾಯಿಯ ಅಕ್ಕ ಇಲ್ಲವೇ ತಂದೆಯ ಅಣ್ಣನ ಹೆಂಡತಿ ಎಂಬ ತಿರುಳುಗಳನ್ನು ಈ ಪದದಿಂದ ಪಡೆದುಕೊಳ್ಳುತ್ತಾರೆ.)

ಪದಗಳಲ್ಲಿರುವ ಈ ವ್ಯತ್ಯಾಸವನ್ನು ವಿವರಿಸಲು, ಬಣ್ಣಿಸುವ ಪದಗಳು ಮತ್ತು ಹೆಸರಿಸುವ ಪದಗಳು ಎಂಬ ಎರಡು ಒಳಗುಂಪುಗಳನ್ನು ಮಾಡಬೇಕಾಗುತ್ತದೆ. **ದೊಡ್ಡ ಹುಲಿ** ಎಂಬುದು ಹುಲಿಯನ್ನು ಬಣ್ಣಿಸುತ್ತಿದೆ. ಆದರೆ ದೊಡ್ಡಮ್ಮ ಎಂಬುದು ಬಣ್ಣಿಸುವ ಪದವಲ್ಲ. ಅದೊಂದು ಹೆಸರಿಸುವ ಪದ. ಹೆಸರಿಸುವ ಪದಗಳಲ್ಲಿ ಸೇರುವ ಪದ ಇಲ್ಲವೇ ಪದಭಾಗಗಳಿಗೆ ಅವುಗಳ ಸ್ವತಂತ್ರ ತಿರುಳನ್ನು ಬಳಸಲು ಆಗುವುದಿಲ್ಲ.

ಪದಕಂತೆಯು ಪದಕ್ಕಿಂತ ದೊಡ್ಡದಾದ **ರಚನೆ** ಇದು ಒಂದು ವಾಕ್ಯದಲ್ಲಿ ಬಳಕೆಯಾಗುವ ಪದಗಳು ತಮ್ಮೊಳಗೇ ರಚಿಸಿಕೊಳ್ಳುವ ಒಳಗುಂಪನ್ನು ಸೂಚಿಸುತ್ತವೆ. ಕೆಲವು ಉದಾಗಳನ್ನು ನೋಡೋಣ ಈ ಕೆಳಗಿನ ವಾಕ್ಯಗಳನ್ನು ಗಮನಿಸಿ.

(1) ಅವನು ಮನೆಗೆ ಹೋದನು.

(2) ಅವನು ತಂದೆಯ ಮನೆಗೆ ಹೋದನು

ಈ ಎರಡೂ ವಾಕ್ಯಗಳಲ್ಲಿ ಇರುವ ಪದಗಳು ಎಷ್ಟು ಎಂದು ಹೇಳುವುದು ಸುಲಭ. ಆದರೆ ಈ ಪದಗಳು ಸುಮ್ಮನೆ ಒಂದರ ಪಕ್ಕದಲ್ಲಿ ಒಂದು ಸೇರಿರುವುದರಿಂದ ವಾಕ್ಯ ರಚನೆಯಾಗಿಲ್ಲ. ಪ್ರತಿಯೊಂದು ವಾಕ್ಯದಲ್ಲಿ ಬರುವ ಪದಗಳು ತಮ್ಮೊಳಗೇ ಒಳಗುಂಪುಗಳನ್ನು ಮಾಡಿಕೊಳ್ಳುತ್ತವೆ. ಈ ಎರಡೂ ವಾಕ್ಯಗಳಿಗೆ ಮೂಲ ವಾಕ್ಯವೆಂದರೆ **ಅವನು ಹೋದನು** ಎಂಬುದು. ಈ ವಾಕ್ಯದಲ್ಲಿ **ಮನೆಗೆ** ಎಂಬ ಪದ ಸೇರಿದಾಗ **ಅವನು ಮನೆಗೆ ಹೋದನು** ಎಂಬ ವಾಕ್ಯ ರೂಪುಗೊಳ್ಳುತ್ತದೆ. ಈ ವಾಕ್ಯದಲ್ಲಿ ಒಳಗುಂಪುಗಳಿದ್ದರೆ ಅಂತಹ ಮೂರು ಗುಂಪುಗಳನ್ನು ಗುರುತಿಸಬಹುದು.

(1) (ಅವನು) (ಮನೆಗೆ ಹೋದನು)

(2) (ಅವನು ಮನೆಗೆ) (ಹೋದನು)

(3) (ಅವನು ಹೋದನು) (ಮನೆಗೆ)

ಈ ಮೂರರಲ್ಲಿ ಯಾವುದು ಸರಿಯಾದ ವಿಂಗಡಣೆ? ಮೂರನೆಯ ವಿಂಗಡಣೆಯು ತಂತಾನೇ ಬಿದ್ದು ಹೋಗುತ್ತದೆ. ಏಕೆಂದರೆ ಅದರ ಮೊದಲ ಗುಂಪಿನಲ್ಲಿ ಒಂದು ಪೂರ್ಣ ವಾಕ್ಯವೇ ಇದೆ. ಇನ್ನುಳಿದ ಎರಡು ವಿಂಗಡಣೆಗಳಲ್ಲಿ ಎರಡನೆಯ ವಿಂಗಡಣೆಯನ್ನು ನೋಡೋಣ. **ಅವನು ಹೋದನು** ಎಂಬ ವಾಕ್ಯದಲ್ಲಿ ಅವನು ಎಂಬುದು ನಾಮಪದ **ಹೋದನು** ಎಂಬುದು ಕ್ರಿಯಾಪದ, ಕನ್ನಡದ ಯಾವುದೇ ವಾಕ್ಯದ ರಚನೆಯ ಸೂತ್ರ ಹೀಗಿರುತ್ತದೆ.

ವಾಕ್ಯ – (ನಾಮಪದ) + (ಕ್ರಿಯಾಪದ)

ಈಗ **ಅವನು ಮನೆಗೆ** ಎಂಬ ಗುಂಪನ್ನು ನೋಡೋಣ ಇದು ನಾಮಪದದ ಚಹರೆಯನ್ನು ಹೊಂದಿಲ್ಲ. ಹಾಗಾಗಿ ವಾಕ್ಯದಲ್ಲಿ ನಾಮಪದದ ಜಾಗದಲ್ಲಿ ಬರಲಾರದು. ಆದ್ದರಿಂದ ಎರಡನೆಯ ವಿಂಗಡಣೆಯನ್ನು ಒಪ್ಪಲಾಗದು ಇದನ್ನು ಇನ್ನೂ ಸರಳವಾಗಿ ವಿವರಿಸಬಹುದು. **ಅವನು ಹೋದನು** ಎಂಬ ವಾಕ್ಯದಲ್ಲಿ **ಅವನು** ಎಂಬುದು ಯಾರು

ಹೋದರು ಎಂಬ ಪ್ರಶ್ನೆಗೆ ಉತ್ತರವಾಗಿದೆ. ಹಾಗೆಯೇ **ಹೋದನು** ಎಂಬುದು ನಾಮಪದವಾಗಿರುವ ಅವನು ಏನು ಮಾಡಿದನು ಎಂಬ ಪ್ರಶ್ನೆಗೆ ಉತ್ತರವಾಗಿದೆ. ಈ ವಿಶ್ಲೇಷಣೆಯನ್ನು ಎರಡನೆಯ ವಿಂಗಡಣೆಗೆ ಅನ್ವಯಿಸುವುದು ಆಗದು. ಏಕೆಂದರೆ **ಹೋದನು** ಎಂಬ ಕ್ರಿಯಾಪದವು ಸೂಚಿಸುವ ಕೆಲಸವನ್ನು ಯಾರು ಮಾಡಿದರು ಎಂದು ಕೇಳಿದರೆ **ಅವನು ಮನೆಗೆ** ಎಂಬ ಉತ್ತರ ಬರಲು ಸಾಧ್ಯವಿಲ್ಲ. ಹಾಗಾಗಿ ಈ ವಿಂಗಡಣೆಯು ಸಲ್ಲದು.

ಇನ್ನು ಮೊದಲನೆಯ ವಿಂಗಡಣೆಯನ್ನು ನೋಡೋಣ. **ಮನೆಗೆ ಹೋದನು** ಎಂಬ ಒಳಗುಂಪು ಎರಡು ಪದಗಳನ್ನು ಹೊಂದಿದೆ. ಆದರೆ ಅದು ಕ್ರಿಯಾಪದದ ಕೆಲಸವನ್ನು ಮಾಡುತ್ತಿದೆ. **ಅವನು** ಎಂಬ ನಾಮಪದ ಸೂಚಿಸುವ ವ್ಯಕ್ತಿ ಯಾವ ಕೆಲಸವನ್ನು ತೊಡಗಿದ್ದು ಎಂದು ಕೇಳಿದರೆ **ಮನೆಗೆ ಹೋದನು** ಎಂಬ ಉತ್ತರ ಸರಿಯಾಗಿಯೇ ಇರುತ್ತದೆ. ಹಾಗಾಗಿ ಈ ವಿಂಗಡಣೆ ಸರಿಯಾಗಿದೆ.

ಹೋದನು ಮತ್ತು **ಮನೆಗೆ ಹೋದನು** ಇವೆರಡೂ ಆಯಾ ವಾಕ್ಯಗಳಲ್ಲಿ ಕ್ರಿಯಾಪದದಂತೆ ಕೆಲಸ ಮಾಡುತ್ತಿದೆ. **ಮನೆಗೆ ಹೋದನು** ಎಂಬ ರಚನೆಯಲ್ಲಿ ಎರಡು ಪದಗಳಿದ್ದರೂ ಅದು ವ್ಯಾಕರಣದ ನಿಯೋಗದ ದೃಷ್ಟಿಯಿಂದ ಕ್ರಿಯಾಪದ ಕೆಲಸವನ್ನು ಮಾಡುತ್ತದೆ. ಆದ್ದರಿಂದ **ಮನೆಗೆ ಹೋದನು** ಎಂಬುದು ಪದಕಂತೆ ಎಂದು ವ್ಯವಹರಿಸುತ್ತೇವೆ. (ಈ ಮೇಲೆ ಉದಾಹರಿಸಿದ ವಾಕ್ಯದ ಮಟ್ಟಿಗೆ ಅದು ಒಂದು ಕ್ರಿಯಾಪದಕಂತೆ).

ಇನ್ನು ಮೂರನೆಯ ವಾಕ್ಯಕ್ಕೆ ಬರೋಣ. **ಅವನು ತಂದೆಯ ಮನೆಗೆ ಹೋದನು** ಎಂಬ ಈ ವಾಕ್ಯವನ್ನು ನಾವು ಬಳಸಿದ ವಿಶ್ಲೇಷಣೆಗೆ ಗುರಿಪಡಿಸಿದರೆ **ಅವನು** ಎಂಬುದು ನಾಮಪದದ ಜಾಗದಲ್ಲಿ **ತಂದೆಯ ಮನೆಗೆ ಹೋದನು** ಎಂಬುದು ಕ್ರಿಯಾಪದದ ಜಾಗದಲ್ಲಿ ಇರುವುದು ಗೊತ್ತಾಗುತ್ತದೆ. ಆದ್ದರಿಂದ **ತಂದೆಯ ಮನೆಗೆ ಹೋದನು** ಎಂಬುದು ಇಡಿಯಾಗಿ ಒಂದು ಕ್ರಿಯಾ ಪದಕಂತೆಯಾಗಿದೆ.

ಪದಗಳಿಂದ ಪದಕಂತೆಗಳು ರೂಪುಗೊಳ್ಳುತ್ತವೆ ಎಂದರಷ್ಟೇ ಸಾಲದು. ಅವು ನುಡಿಯ ವ್ಯಾಕರಣದ ನೆಲೆಯಲ್ಲಿ ಹೇಗೆ ವರ್ತಿಸುತ್ತವೆ ಎಂಬುದನ್ನು ಗಮನಿಸಬೇಕಾದ ಅಗತ್ಯವಿದೆ. ಮತ್ತೆ ನಮ್ಮ ಹಳೆಯ ನಿದರ್ಶನಗಳಿಗೆ ಮರಳೋಣ. **ದೊಡ್ಡ ಮನೆ** ಮತ್ತು **ದೊಡ್ಡಮ್ಮ** ಎಂಬ ಎರಡು ರಚನೆಗಳನ್ನು ನೋಡೋಣ. ಇವೆರಡೂ ನಾಮಪದಗಳ ಕೆಲಸವನ್ನು ಮಾಡುತ್ತಿವೆ. ಆದರೆ ಎರಡೂ ರಚನೆಗಳಲ್ಲಿ **ದೊಡ್ಡ** ಎಂಬ ಪದವನ್ನು ನಾವು ಅರ್ಥಮಾಡಿಕೊಳ್ಳುವ ಕ್ರಮ ಬೇರೆ ಬೇರೆ ದೊಡ್ಡ ಎಂಬ ಪದಕ್ಕಿಂತ ಗಾತ್ರ, ಎತ್ತರ, ತೂಕ ಇತ್ಯಾದಿ ಪರಿಮಾಣಗಳಲ್ಲಿ ಹೆಚ್ಚಾದುದು ಎಂಬ ಅರ್ಥ ಬಹುಮಟ್ಟಿಗೆ **ದೊಡ್ಡ ಮನೆ** ಎಂಬ ರಚನೆಯಲ್ಲಿ ಬಳಕೆಯಾಗಿದೆ. ಆದರೆ **ದೊಡ್ಡಮ್ಮ** ಎಂಬ ರಚನೆಯಲ್ಲಿ ಅದು ಬಳಕೆಯಾಗಿಲ್ಲ. ನಾವು ಈಗಾಗಲೇ ಹೇಳಿದಂತೆ ಇದೊಂದು ಹೆಸರಿಸುವ ರಚನೆಯಾಗಿದೆ. **ದೊಡ್ಡಮನೆ** ಎಂಬುದು ಬಣ್ಣಿಸುವ ರಚನೆ ಈ ವಿವರಣೆಯಿಂದ ಪದಗಳು ಸೇರಿ ಉಂಟಾಗುವ ಪದಕಂತೆಗಳು ಯಾವಾಗಲೂ ಬಣ್ಣಿಸುವ

ರಚನೆಗಳಾಗಿರುತ್ತವೆ ಎಂದು ತೀರ್ಮಾನಿಸಬಹುದು. ಮತ್ತೆ ಕೆಲವು ವಾಕ್ಯಗಳನ್ನು ನೋಡೋಣ.

(1) ಮರ ಬಿದ್ದುಹೋಯಿತು.

(2) ಮರ ಗಾಳಿಗೆ ಬಿದ್ದುಹೋಯಿತು.

(3) ಹಳೆಯ ಮರ ಗಾಳಿಗೆ ಬಿದ್ದುಹೋಯಿತು.

ಕನ್ನಡ ವಾಕ್ಯಗಳ ಮೂಲರಚನೆಯ ಮೇರೆಗೆ ನೋಡಿದರೆ ಈ ಕೆಳಗಿನವು ಮೇಲಿನ ವಾಕ್ಯಗಳಲ್ಲಿ ನಾಮಪದದ ಜಾಗದಲ್ಲಿವೆ.

(1) ಮರ

(2) ಹಳೆಯ ಮರ

ಈ ಕೆಳಗಿನವು ಕ್ರಿಯಾಪದದ ಜಾಗದಲ್ಲಿದೆ.

(1) ಬಿದ್ದು ಹೋಯಿತು

(2) ಗಾಳಿಗೆ ಬಿದ್ದುಹೋಯಿತು.

ಮೊದಲನೆಯ ಗುಂಪನ್ನು ನಾಮಪದ ಕಂತೆಗಳೆಂದು ಕರೆಯೋಣ. ನಾಮಪದ ಕಂತೆಯಲ್ಲಿ ಒಂದು ನಾಮಪದ ಇರಲೇಬೇಕು ಮತ್ತು ಕನ್ನಡ ನಾಮಪದಕಂತೆಗಳಲ್ಲಿ ಆ ನಾಮಪದವು ರಚನೆಯ ಕೊನೆಯಲ್ಲೇ ಬರಬೇಕು.

ಇಂಥದೇ ನಿಯಮವನ್ನು ಕ್ರಿಯಾಪದಕಂತೆಗಳಿಗೂ ಅನ್ವಯಿಸಬಹುದು. ಪ್ರತಿಯೊಂದು ಕ್ರಿಯಾಪದಕಂತೆಯಲ್ಲಿ ಒಂದು ಕ್ರಿಯಾಪದ ಇರಲೇಬೇಕು ಮತ್ತು ಅದು ಕೊನೆಯಲ್ಲೇ ಬರಬೇಕು. ನಾಮಪದ ಕಂತೆಯೊಂದರಲ್ಲಿ ಎಷ್ಟೇ ಪದಗಳು ಸೇರ್ಪಡೆಯಾದರೂ ಮೂಲ ನಾಮಪದವು ಮಾತ್ರ ರಚನೆಯ ಕೊನೆಯಲ್ಲೇ ಇರುತ್ತದೆ. ಉದಾಗೆ

(1) ಮರ

(2) ಹಳೆಯ ಮರ

(3) ಒಣಗಿದ್ದ ಹಳೆಯ ಮರ

(4) ಒಣಗಿ ಟೊಳ್ಳಾಗಿದ್ದ ಹಳೆಯ ಮರ... ಇತ್ಯಾದಿ

ಕ್ರಿಯಾಪದಕಂತೆಗಳ ನಿದರ್ಶನಗಳನ್ನು ನೋಡೋಣ.

(1) ಬಂದನು

(2) ನಿನ್ನೆ ಬಂದನು

(3) ನಿನ್ನೆ ಮನೆಗೆ ಬಂದನು

ಈ ಮೂರು ರಚನೆಗಳು ವಾಕ್ಯಗಳಲ್ಲಿ ಬಳಕೆಯಾದಾಗ ಆಯಾ ವಾಕ್ಯಗಳಲ್ಲಿ ಕ್ರಿಯಾಪದದ ಕೆಲಸವನ್ನೇ ಮಾಡುತ್ತದೆ. ನಾಮಪದಕಂತೆಯ ರಚನೆಯ ಬಗ್ಗೆ ಹೇಳಿದ ಕಟ್ಟಳೆಗಳು ಈ ರಚನೆಗಳಿಗೂ ಹೊಂದುತ್ತದೆ. ಅಂದರೆ ಪ್ರತಿಯೊಂದು ಕ್ರಿಯಾಪದ ಕಂತೆಯಲ್ಲೂ ಒಂದು ಕ್ರಿಯಾಪದ ಇರಲೇಬೇಕು. ಮತ್ತು ಅದು ಯಾವಾಗಲೂ ರಚನೆಯ ಕೊನೆಯಲ್ಲೇ ಬರಬೇಕು.

ಈ ವಿವರಣೆಯು ಪದ ಮತ್ತು ಪದಕಂತೆಗಳ ನಡುವೆ ಇರುವ ವ್ಯತ್ಯಾಸವನ್ನು ಸ್ಪಷ್ಟಪಡಿಸುತ್ತವೆ. ಯಾವುದೇ ಪದಕಂತೆಯಲ್ಲಿ ಅದರ ನಿಯಂತ್ರಕ ಪದವು ರಚನೆಯ ಮೊದಲಲ್ಲಿ ಬರಬೇಕೋ ಇಲ್ಲವೇ ಕೊನೆಯಲ್ಲಿ ಬರಬೇಕೋ ಎಂಬುದು ಪ್ರತಿಯೊಂದು ಭಾಷೆಗೂ ವಿಶಿಷ್ಟವಾದ ಕಟ್ಟಳೆಯಾಗಿರುತ್ತದೆ. ಕೆಲವು ನುಡಿಗಳಲ್ಲಿ ಅದು ರಚನೆಯ ಮೊದಲಲ್ಲಿ ಬಂದರೆ ಮತ್ತೆ ಕೆಲವು ನುಡಿಗಳಲ್ಲಿ ಅದು ರಚನೆಯ ಕೊನೆಯಲ್ಲಿ ಬರುತ್ತದೆ. ಆದರೆ ಒಂದೇ ನುಡಿಯಲ್ಲಿ ಈ ಎರಡೂ ಆಯ್ಕೆಗಳು ಸಾಧ್ಯವಿಲ್ಲ.

ವ್ಯಾಕರಣದ ಈ ಕಟ್ಟಳೆಗಳು ಆ ನುಡಿಯನ್ನು ಆಡುವವರಿಗೆ ಗೊತ್ತಿರುತ್ತದೆ ಎಂದೇನಲ್ಲ. ಆದರೆ ಗೊತ್ತಿರುವುದನ್ನು ನಾವು ಹೇಗೆ ವ್ಯಾಖ್ಯಾನಿಸಬೇಕು ಎಂಬುದನ್ನೂ ಚರ್ಚಿಸಿದ್ದೇವೆ. ನುಡಿಯನ್ನು ಬಳಸುವವರು ಸಾವಿರಾರು ವಾಕ್ಯಗಳನ್ನು ಉತ್ಪಾದಿಸುತ್ತಾರೆ. ಈ ಎಲ್ಲ ವಾಕ್ಯಗಳ ಹಿಂದಿನ ರಾಚನಿಕ ಕಟ್ಟಳೆಗಳು ಅವರ ಮೆದುಳಿನಲ್ಲಿ ಅಂತಸ್ಥವಾಗಿರುತ್ತದೆ. ಇದನ್ನೇ ನುಡಿಕಸುವು ಎಂದು ಕರೆದವು. ಈ ನುಡಿಕಸುವು ಮೆದುಳಿನಲ್ಲಿ ನೆಲೆಯೂರುವ ಪ್ರಕ್ರಿಯೆಯನ್ನು ನುಡಿಗಳಿಕೆ ಎಂದು ಕರೆಯಲಾಗಿದೆ.

ಸಾಂಪ್ರದಾಯಿಕ ಚಿಂತನೆಗಳು ನುಡಿಗಳಿಕೆ ಎಂಬ ಮಾತಿನ ಬದಲು ನುಡಿಕಲಿಕೆ ಎಂಬ ಮಾತನ್ನು ಬಳಸುತ್ತವೆ. ಆದರೆ ನುಡಿಕಸುವು ನೆಲೆಗೊಳ್ಳುವ ಬಗೆಯನ್ನು ಕಲಿಕೆ ಎಂದು ಕರೆಯಲು ಆಗುವುದಿಲ್ಲ. ಏಕೆಂದರೆ ಕಲಿಕೆ ಎಂಬ ಪ್ರಕ್ರಿಯೆಗೆ ಬೇಕಾದ ಯಾವ ಚಹರೆಗಳೂ ನುಡಿಕಸುವು ಮಗುವಿನಲ್ಲಿ ನೆಲೆಯೂರುವ ಹಂತದಲ್ಲಿ ಕಾಣುವುದಿಲ್ಲ.

ಕಲಿಕೆಯ ಚಹರೆಗಳನ್ನು ನೋಡೋಣ. ಕಲಿಕೆಯಲ್ಲಿ ಕಲಿಯುವವರು ಇದ್ದಹಾಗೆ ಕಲಿಸುವವರು ಇರುತ್ತಾರೆ. ಕಲಿಸುವವರು ಒದಗಿಸುವ ಆದರ್ಶ ಮಾದರಿಗಳನ್ನು ಹಂತಹಂತವಾಗಿ ಕಲಿಯುವವರು ತಮ್ಮದನ್ನಾಗಿಸಿಕೊಳ್ಳುತ್ತಾರೆ. ಕಲಿಕೆಯಲ್ಲಿ ಹಲವು ಹಂತಗಳಿರುತ್ತವೆ. ಸುಲಭವಾದ ಹಂತದಿಂದ ಸಂಕೀರ್ಣವಾದ ಹಂತಕ್ಕೆ ದಾಟುವುದು ಎಲ್ಲ ಕಲಿಕೆಗಳ ಸಾಮಾನ್ಯ ಲಕ್ಷಣ. ಅಲ್ಲದೆ, ಕಲಿಯುವವರು ತಪ್ಪುಗಳನ್ನು ಮಾಡುತ್ತಾರೆ. ಕಲಿಸುವವರು ಆ ತಪ್ಪುಗಳನ್ನು ತಿದ್ದುತ್ತಾರೆ. ಕಲಿಸುವವರಿಗೆ ಬಗೆಯ ತಪ್ಪುಗಳು ನಡೆಯುತ್ತವೆ ಎಂಬುದರ ಸ್ಥೂಲ ಅರಿವು ಇರುತ್ತದೆ. ಹಾಗಾಗಿ ಹೇಗೆ ತಿದ್ದಬೇಕು ಎಂಬುದನ್ನು ತಿಳಿದಿರುತ್ತಾರೆ. ಎಲ್ಲ ಕಲಿಕೆಗಳಿಗೂ ಆರಂಭ ಇರುವಂತೆ ಅಂತ್ಯವೆಂಬುದು

ಇರುವುದಿಲ್ಲ. ಇನ್ನೂ ಕಲಿಯಬೇಕಾದ್ದಿದೆ ಎಂಬ ಅರಕೆ ಇದ್ದೇ ಇರುತ್ತದೆ. ಕಲಿಸುವವರು ಮತ್ತು ಕಲಿಯುವವರು ತಾವು ನಿರಂತರವಾಗಿ ಕಲಿಯುತ್ತಲೇ ಇರುವವರು ಎಂದು ನಂಬುತ್ತಾರೆ. ಅಲ್ಲದೆ ಕಲಿತದ್ದು ನಿರಂತರವಾಗಿ ಬಳಕೆಯಾದಿದ್ದಲ್ಲಿ ಕಲಿಕೆಯ ಸಾಮರ್ಥ್ಯ ಕುಂದುತ್ತದೆ. ಕೆಲವೊಮ್ಮೆ ಅದು ಕಳೆದು ಹೋಗಲೂ ಬಹುದು. ಮನುಷ್ಯರು ತಮ್ಮ ಜೀವಿತಾವಧಿಯಲ್ಲಿ ಹತ್ತಾರು ಬಗೆಯ ಕಲಿಕೆಗಳಿಗೆ ತಮ್ಮನ್ನು ತಾವು ಒಡ್ಡಿಕೊಳ್ಳುತ್ತಾರೆ. ಈ ಎಲ್ಲ ಕಲಿಕೆಗಳಿಗೂ ಮೇಲೆ ಹೇಳಿದ ಲಕ್ಷಣಗಳು ಬೇರೆಬೇರೆ ಪ್ರಮಾಣದಲ್ಲಿ ಒಂದಿಲ್ಲೊಂದು ರೀತಿ ಅನ್ವಯಿಸುತ್ತದೆ.

ಈಗ ನುಡಿಕಸುವು ನೆಲೆಗೊಳ್ಳುವ ಬಗೆಗೆ ಬರೋಣ. ಇಲ್ಲಿ ಕಲಿಕೆಯ ಸಂದರ್ಭ ಇದೆಯೇ ಇಲ್ಲವೋ ಎಂಬುದನ್ನು ಪರಿಶೀಲಿಸೋಣ. ಮಗುವು ನುಡಿಕಸುವನ್ನು ಪಡೆದುಕೊಳ್ಳುವಾಗ ಯಾರು ಕಲಿಸುತ್ತಾರೆ ಎಂಬುದು ಖಚಿತವಲ್ಲ. ಹಾಗೆ ನೋಡಿದರೆ ಯಾರೂ ಕಲಿಸುತ್ತಿರುವುದೇ ಇಲ್ಲ. ಮಗುವಿಗೆ ನುಡಿಯ ಆದರ್ಶ ಮಾದರಿಗಳು ಎಂದೂ ದೊರೆಯುವುದೇ ಇಲ್ಲ. ಪ್ಲೇಟೋ ಸಮಸ್ಯೆಯನ್ನು ಕುರಿತು ಚರ್ಚಿಸುವಾಗ ಈ ಅಂಶವನ್ನು ಮನಗಂಡಿದ್ದೇವೆ. ಅಸ್ಪಷ್ಟ ಮತ್ತು ತುಂಡುತುಂಡಾದ ಮಾಹಿತಿಯಷ್ಟೇ ಮಗುವಿನ ಕಿವಿಯ ಮೇಲೆ ಬೀಳುತ್ತದೆ ಎಂಬುದು ಗೊತ್ತಿರುವ ಸಂಗತಿ.

ನುಡಿಕಸುವು ನೆಲೆಗೂಳ್ಳುವಾಗ ಮಗು ಸುಲಭ ರಚನೆಗಳಿಂದ ಸಂಕೀರ್ಣ ರಚನೆಗಳಿಗೆ ದಾಟುವುದನ್ನು ನಾವು ಕಾಣುವುದಿಲ್ಲ. ಹಂತಹಂತವಾಗಿ ಉಲಿ, ಪದ, ವಾಕ್ಯ ಎಂಬ ಘಟಕಗಳನ್ನು ಮಗು ಪಡೆದುಕೊಳ್ಳುವುದಿಲ್ಲ. ಮಕ್ಕಳು, ನುಡಿಕಸುವನ್ನು ಪಡೆದುಕೊಳ್ಳುವಾಗ 'ತಪ್ಪುಗಳನ್ನು' ಮಾಡುತ್ತಾರೆ. ಕೆಲವು ಉಲಿಗಳನ್ನು ಸರಿಯಾಗಿ ಪಲುಕದಿರಬಹುದು. ಪದರಚನೆಯ ಕೆಲವು ನಿಯಮಗಳನ್ನು ಅನ್ವಯಿಸುವಾಗ ಅತಿವ್ಯಾಪ್ತಿ ಇಲ್ಲವೇ ಅವ್ಯಾಪ್ತಿ ದೋಷವನ್ನು ಮಾಡುತ್ತಿದ್ದಾರೆ ಎಂದು ಹೇಳುವವರಿಗೆ ಅನ್ನಿಸಬಹುದು. ಆದರೆ ಯಾವುದೇ ಮಗು ಇಂಥದೇ ತಪ್ಪುಗಳನ್ನು ಮಾಡಬಹುದು ಎಂದು ಮೊದಲೇ ಗುರುತಿಸಲು ಬರುವುದಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಮಗು ತಾನು ಮಾಡುತ್ತಿರುವ ತಪ್ಪುಗಳನ್ನು ತಾನೇ ಸರಿಪಡಿಸಿಕೊಳ್ಳುವವರೆಗೆ ಕಾಯಬೇಕು. ಹೊರಗಿನಿಂದ ಒದಗಿಸುವ ಯಾವ ತಿದ್ದುಪಡಿಯೂ ಆ ತಪ್ಪುಗಳನ್ನು ಸರಿಪಡಿಸಲಾರವು. (ಪಾಲಕರು ತಿದ್ದುವ ಕೆಲಸವನ್ನು ಮಾಡುತ್ತಲೇ ಇರುತ್ತಾರೆ. ತಮ್ಮ ತಿದ್ದುಪಡಿಗಳನ್ನು ಮಗುವು ಅಳವಡಿಸಿಕೊಳ್ಳದೆ ಇರುವುದನ್ನು ಕಂಡಾಗ ಹತಾಶರಾಗುವುದೂ ಉಂಟು. ಕೊನೆಗೊಮ್ಮೆ ತಿದ್ದಿದ ರೂಪಗಳನ್ನು ಮಗು ಬಳಸಲು ಆರಂಭಿಸಿದಾಗ ತಮ್ಮ ಪ್ರಯತ್ನ ಗುರಿಮುಟ್ಟಿತೆಂದು ಸಂತಸ ಪಡಲೂ ಬಹುದು. ಆದರೆ ವಾಸ್ತವದಲ್ಲಿ ತಿದ್ದುವಿಕೆ ಮತ್ತು ಸರಿಯಾಗುವಿಕೆಗಳ ನಡುವೆ ಯಾವ ನೇರ ಸಂಬಂಧವೂ ಇರುವುದಿಲ್ಲ.)

ನುಡಿಕಸುವು ನೆಲೆಗೊಳ್ಳಲು ಮೊದಲಾದ ಮೇಲೆ ಕೆಲವು ತಿಂಗಳುಗಳಲ್ಲಿ ಇಡೀ ಪ್ರಕ್ರಿಯೆ ಪೂರ್ಣಗೊಳ್ಳುತ್ತದೆ. ಆ ಬಳಿಕ ಕಸುವಿನಲ್ಲಿ ಯಾವ ಹೆಚ್ಚಳವೂ ಸಾಧ್ಯವಿಲ್ಲ. ಬದುಕಿನುದ್ದಕ್ಕೂ ಅದನ್ನು ಹೆಚ್ಚಿಸಿಕೊಳ್ಳಬೇಕೆಂಬ ಮಾತಿಗೆ ನುಡಿಕಸುವಿನ ಸಂದರ್ಭದಲ್ಲಿ

ಹೆಚ್ಚಿನ ಮಹತ್ವವಿಲ್ಲ. ಒಮ್ಮೆ ನುಡಿಕಸುವು ನೆಲೆಗೊಂಡ ಮೇಲೆ ಪದಕೋಶವು ನಿರಂತರವಾಗಿ ಬೆಳೆಯುತ್ತಾ ಹೋಗಬಹುದೇ ಹೊರತು ನಾವು ವ್ಯಾಕರಣ ಎಂದು ವ್ಯವಹರಿಸುವ ಸ್ತರದಲ್ಲಿ ಯಾವ ಹೆಚ್ಚಳವೂ ಆಗುವುದಿಲ್ಲ.

ನುಡಿಕಸುವು ನೆಲೆಗೊಂಡ ಮೇಲೆ ಬಳಕೆಯ ಕೊರತೆಯಿಂದಾಗಿ ಅದು ಮಸುಕಾಗುವುದಿಲ್ಲ. ನಿಡುಗಾಲ ಮಾತಾಡದೆ ಇದ್ದರೂ ಅದು ಮಸುಕಾಗುವುದಿಲ್ಲ. ನಡುಗಾಲ ಮಾತಾಡದೆ ತಮ್ಮ ನುಡಿಯನ್ನು ಕೇಳಿಸಿ ಕೊಳ್ಳದೆ ಇರುವವರೂ ಕೂಡಾ ತಾವು ಎಳವೆಯಲ್ಲಿ ಪಡೆದ ನುಡಿಕಸುವನ್ನು ಕಳೆದುಕೊಂಡಿರುವುದಿಲ್ಲ.

ಈ ಎಲ್ಲ ಅಂಶಗಳನ್ನು ಗಮನಿಸಿದಾಗ ನುಡಿಕಸುವಿನ ಗಳಿಕೆ ಮತ್ತು ನುಡಿಕಲಿಕೆಗಳು ಬೇರೆ ಬೇರೆ ಎನ್ನುವುದು ಗೊತ್ತಾಗುತ್ತದೆ. ಇಷ್ಟಾದರೂ ಸಾಂಪ್ರದಾಯಿಕ ಚಿಂತನೆಗಳು ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಇಂದಿಗೂ ಬಲವಾಗಿ ನಿಯಂತ್ರಿಸುತ್ತಿರುವುದರಿಂದ ನುಡಿಕಸುವು ನೆಲೆಗೊಳ್ಳುವುದನ್ನು ಕಲಿಕೆಯ ಒಂದು ಬಗೆ ಎಂದು ತಿಳಿಯುವುದು ಮುಂದುವರಿದೇ ಇದೆ.

ಹಾಗಿದ್ದಲ್ಲಿ ನುಡಿಕಸುವಿನ ಭಾಗವಾಗಿರುವ ವ್ಯಾಕರಣವು ಮಗುವಿನಲ್ಲಿ ನೆಲೆಯೂರುವುದಾದರೂ ಹೇಗೆ? ಚಾಮ್‌ಸ್ಕಿ ಮಂಡಿಸಿದ ಚಿಂತನೆಗಳು ಈ ನೆಲೆಯನ್ನು ಬೇರೊಂದು ಬಗೆಯಲ್ಲಿ ವಿವರಿಸಲು ಮುಂದಾಗಿದೆ. ಈ ಚಿಂತನೆಗಳನ್ನು ಅರಿಯುವ ಮೊದಲು ಕೆಲವು ಸಂಗತಿಗಳನ್ನು ಒಪ್ಪಿಕೊಳ್ಳಬೇಕು. ಮಗುವಿನ ದೈಹಿಕ ಬೆಳವಣಿಗೆ ಮತ್ತು ಮಾನಸಿಕ ಬೆಳವಣಿಗೆಗಳ ನಡುವೆ ಸಹಜ ಸನ್ನಿವೇಶಗಳಲ್ಲಿ ತಾಳಮೇಳವಿರುತ್ತದೆ. ಅಂದರೆ ದೈಹಿಕ ಬೆಳವಣಿಗೆಯ ವಿವಿಧ ಹಂತಗಳಿಗೂ ಮಾನಸಿಕ ಬೆಳವಣಿಗೆಯ ಹಂತಗಳಿಗೂ ಸಂಬಂಧವಿರುತ್ತದೆ. ಲೋಕವನ್ನು ಮಗುವು ಗ್ರಹಿಸುವ ಮೂಲಗಳು ಅದರ ದೇಹರಚನೆಯ ಭಾಗವೇ ಆಗಿರುತ್ತದೆ. ಕಣ್ಣು, ಕಿವಿ, ಮೂಗು, ನಾಲಿಗೆ ಮತ್ತು ಚರ್ಮ ಇವು ಮಗುವಿಗೆ ಹೊರಜಗತ್ತನ್ನು ಒಳಗೆ ಮಾಡಿಕೊಳ್ಳಲು ಇರುವ ಬಾಗಿಲುಗಳು ಈ ಅನುಭವಗಳನ್ನು ವ್ಯವಸ್ಥಿತವಾಗಿ ಮಗುವು ಅಳವಡಿಸಿಕೊಳ್ಳಬೇಕಾದರೆ ಅದು ಮೆದುಳಿನ ನೆರವು ಅತ್ಯಗತ್ಯವಾಗಿರುತ್ತದೆ. ನಾವು ಮಾನಸಿಕ ಬೆಳವಣಿಗೆ ಎಂದು ವ್ಯಾವಹಾರಿಕವಾಗಿ ಹೇಳಿದರೂ ಅದು ವಾಸ್ತವದಲ್ಲಿ ಮೆದುಳಿನ ಬೆಳವಣಿಗೆಗೆ ಸಂಬಂಧಿಸಿದ ಸಂಗತಿಯಾಗಿದೆ.

ಮೆದುಳು ಬೆಳವಣಿಗೆ ಹೊಂದುವ ಹಂತಗಳನ್ನು ಅಧ್ಯಯನ ಮಾಡಿರುವವರು ಒಂದು ನಿರ್ದಿಷ್ಟ ಘಟ್ಟವನ್ನು ಮೆದುಳಿನ ಬೆಳವಣಿಗೆಯಲ್ಲಿ ಗುರುತಿಸುತ್ತಾರೆ. ಹಸುಗೂಸುಗಳಲ್ಲಿ ಮುಮ್ಮೆದುಳು ಇಡಿಯಾಗಿ ಒಂದೇ ಘಟಕವೆಂಬಂತೆ ಕೆಲಸ ಮಾಡುತ್ತಿರುತ್ತದೆ. ಕೆಲವು ತಿಂಗಳುಗಳ ಬಳಿಕ ಮುಮ್ಮೆದುಳಿನ ಎಡ ಮತ್ತು ಬಲಭಾಗಗಳು ತಂತಮ್ಮ ಕಾರ್ಯ ವ್ಯಾಪ್ತಿಯನ್ನು ಹಂಚಿಕೊಳ್ಳುತ್ತವೆ. ಈ ಹಂತವನ್ನು ಪಾರ್ಶ್ವೀಕರಣ ಇಲ್ಲವೇ ಮಗ್ಗುಲಾಗುವಿಕೆ ಎಂದು ಕರೆಯಲಾಗಿದೆ. ಮೆದುಳಿನ ಬೆಳವಣಿಗೆಯ ಈ ಹಂತದಲ್ಲೇ ಮಗುವಿನ ನುಡಿಕಸುವು ನೆಲೆಗೊಳ್ಳುವ ಪ್ರಕ್ರಿಯೆಯು ಮೊದಲಾಗುತ್ತದೆ ಎಂಬುದು ಗಮನಾರ್ಹ.

ಮೆದುಳಿನ ಬೆಳವಣಿಗೆಗೂ ಮಗುವಿನಲ್ಲಿ ನುಡಿಕಸುವು ನೆಲೆಗೊಳ್ಳಲು ಆರಂಭಗೊಳ್ಳುವುದಕ್ಕೂ ನೇರ ಸಂಬಂಧವಿದೆ. ಅಂದರೆ ಮೆದುಳಿನಲ್ಲಿ ಅಂತಸ್ಥವಾಗಿರುವ ಕಸುವು ಯಾವುದೋ ಒಂದು ಬೆಳವಣಿಗೆಯ ಗೊತ್ತಾದ ಹಂತದಲ್ಲಿ ಕ್ರಿಯಾಶೀಲವಾಗಲು ತೊಡಗುತ್ತದೆ. ಬೇರೊಂದು ಸಂದರ್ಭದಲ್ಲಿ ಚಾಮ್‌ಸ್ಕಿ ನೀಡಿದ ಉದಾಹರಣೆಯೊಂದನ್ನು ನಾವಿಲ್ಲಿ ಗಮನಿಸಬಹುದು. ಪಾರಿವಾಳದ ಮರಿ ಮೊಟ್ಟೆಯೊಡೆದು ಅದಕ್ಕೆ ರೆಕ್ಕೆಗಳು ಮೂಡಿದ ಒಂದು ಗೊತ್ತಾದ ಸಮಯದಲ್ಲಿ ಹಾರಲು ತೊಡಗಬೇಕು. ಆ ಮರಿ ಹಾರುವುದನ್ನು ಕಲಿಯುವುದೂ ಇಲ್ಲ, ಯಾರೂ (ತಾಯಿ ಹಕ್ಕಿಯೂ ಸೇರಿದಂತೆ) ಅದಕ್ಕೆ ಹಾರುವುದನ್ನು ಕಲಿಸುವುದೂ ಇಲ್ಲ. ಹೊರಗಿನಿಂದ ನೋಡುವ ನಮಗೆ ಮರಿ ರೆಕ್ಕೆ ಬಡಿದು ಹಾರಲು ಮುಂದಾಗಿ ಬೀಳುವುದು, ತಾಯಿ ಹಕ್ಕಿ ಅದಕ್ಕೆ ಒತ್ತಾಸೆ ಆದಂತೆ ತೋರುವುದು ಇವೆಲ್ಲವೂ ಕಲಿಕೆಯ ಮಾದರಿ ಎಂದು ಅನಿಸುತ್ತದೆ. ವಾಸ್ತವವಾಗಿ ಹಾರುವಿಕೆ ಎಂಬ ಕಸುವು ಪಾರಿವಾಳದ ಮರಿಯ ಒಂದು ಅಂತಸ್ಥ ಕಸುವಾಗಿದೆ. ಅದರ ದೈಹಿಕ ಬೆಳವಣಿಗೆಯ ಗೊತ್ತಾದ ಹಂತದಲ್ಲಿ ಅರಳ ತೊಡಗುತ್ತದೆ. ನುಡಿಕಸುವೂ ಕೂಡಾ ಮನುಷ್ಯರ ಮಕ್ಕಳ ಮೆದುಳಿನಲ್ಲಿ ಅಂತಸ್ಥ ಕಸುವಾಗಿದ್ದು, ಮೆದುಳು ಮತ್ತು ದೇಹದ ಬೆಳವಣಿಗೆಯ ಗೊತ್ತಾದ ಹಂತದಲ್ಲಿ ಆಕಾರ ಪಡೆಯಲು ಮೊದಲಾಗುತ್ತದೆ.

ನುಡಿಕಸುವು ನೆಲೆಗೊಳ್ಳುವುದನ್ನು ಇತರ ಕಲಿಕೆಗಳ ಮಾದರಿಗಳಂತಲ್ಲ ಎಂಬುದನ್ನು ಮೇಲೆ ನೋಡಿದ್ದೇವೆ. ಹಾಗಿದ್ದಲ್ಲಿ ನುಡಿರಚನೆಯು ನುಡಿಕಸುವಿನಲ್ಲಿ ಆಕಾರ ಪಡೆಯುವ ಬಗೆಯನ್ನು ವಿವರಿಸಬೇಕಾಗುತ್ತದೆ. ಇದು ಮೆದುಳಿನ ಒಳಗೆ ನಡೆಯುತ್ತಿರುವ ಬದಲಾವಣೆ ಹಾಗಾಗಿ ಯಾವುದೋ ಪ್ರಯೋಗದಿಂದ ಈ ಪ್ರಕ್ರಿಯೆಯ ಸ್ವರೂಪವನ್ನು ಅರಿಯಲು ಬರುವುದಿಲ್ಲ. (ಕೆಲವೊಮ್ಮೆ ಮೆದುಳಿನ ಇಲ್ಲವೇ/ಮತ್ತು ದೇಹದ ಬೆಳವಣಿಗೆಯ ನ್ಯೂನತೆಯುಳ್ಳ ಮಕ್ಕಳನ್ನು ಪರಿಶೀಲಿಸುವ ಮೂಲಕ ನುಡಿಕಸುವು ನೆಲೆಗೊಳ್ಳುವ ರೀತಿಯನ್ನು ಕಂಡುಕೊಳ್ಳಲು ಪ್ರಯತ್ನಿಸಬಹುದು ಇದೊಂದು ನೇತ್ಯಾತ್ಮಕ ನೆಲೆ. ಏಕೆ ನುಡಿಕಸುವು ನೆಲೆಗೊಳ್ಳುವುದಿಲ್ಲ ಎಂಬುದನ್ನು ಅರಿಯಲು ಕೊಂಚ ಮಟ್ಟಿಗೆ ಇಂಥ ಪರಿಶೀಲನೆಗಳಿಂದ ಮಾಹಿತಿದೊರಕಬಹುದು. ಆದರೆ ಈ ನೆಲೆಗೊಳ್ಳುವಿಕೆ ಹೇಗೆ ನಡೆಯುತ್ತದೆ ಎಂಬುದು ಇದರಿಂದ ಗೊತ್ತಾಗುವ ಸಾಧ್ಯತೆ ಕಡಿಮೆ) ಆದ್ದರಿಂದ ಕೆಲವು ಆಧಾರ ಕಲ್ಪನೆಗಳನ್ನು ರೂಪಿಸಿಕೊಳ್ಳುವುದು ಅನಿವಾರ್ಯವಾಗುತ್ತದೆ.

ಚಾಮ್‌ಸ್ಕಿ ಈ ನಿಟ್ಟಿನಲ್ಲಿ ನಿರೂಪಿಸಿದ ಆಧಾರಕಲ್ಪನೆಗಳು ಕಳೆದ ಆರು ದಶಕಗಳಿಂದ ನಿರಂತರವಾಗಿ ಪರಿಷ್ಕಾರಗೊಳ್ಳುತ್ತಲೇ ಬರುತ್ತಿವೆ. ಈ ಪರಿಷ್ಕಾರಗಳು ಮೂಲ ಪ್ರಮೇಯವನ್ನು ಪಲ್ಲಟಗೊಳಿಸಿಲ್ಲ. ಬದಲಿಗೆ ಆ ಪ್ರಮೇಯವನ್ನು ಬಿಡಿಸಲು ಬೇಕಾಗಿರುವ ಹಾದಿಗಳನ್ನು ಹೆಚ್ಚು ಹೆಚ್ಚು ಸ್ಪಷ್ಟಗೊಳಿಸುತ್ತಾ ಬಂದಿವೆ. ಈ ಹಂತಗಳನ್ನು ಸ್ಥೂಲವಾಗಿ ನಾವೀಗ ನೋಡೋಣ.

ಚಾಮ್‌ಸ್ಕಿ ತಮ್ಮ ಚಿಂತನೆಗಳನ್ನು ಮಂಡಿಸಲು ಮೊದಲು ಮೂಡಿದ ಹೊತ್ತಿನಲ್ಲಿ ಯೂರೋಪಿನಲ್ಲಿ ಅದರಲ್ಲೂ ಅಲ್ಲಿ ಪ್ರಚಲಿತವಿದ್ದ ಪ್ರಾಗ್ ಚಿಂತನಾ ಪ್ರಸ್ಥಾನದಲ್ಲಿ ಇದ್ದ ಮಾದರಿಗಳನ್ನು ಸ್ಥೂಲವಾಗಿ ಒಪ್ಪಿದಂತಿದೆ. ಮುಖ್ಯವಾಗಿ ನುಡಿಯ ಹೊರರಚನೆಗೆ

ಆಧಾರವಾಗಿ ಒಂದು ಒಳರಚನೆ ಇರುತ್ತದೆ ಎಂಬ ನೆಲೆ ಆಗ ಪ್ರಚಲಿತವಾಗಿತ್ತು. ಇದನ್ನು ಫ್ರಾನ್ಸ್‌ನ ಚಿಂತಕ ಫರ್ಡಿನಾಂಡ್ ಡಿ ಸಸೂರ್ ನಿರೂಪಿಸಿದ ಲಾಂಗ್ ಮತ್ತು ಪರೋಲ್ ಎಂಬ ಎರಡು ನುಡಿಪದರಗಳ ಮಾದರಿಗೆ ಹೋಲಿಸಬಹುದು. ಲಾಂಗ್ ಎಂಬುದು ಆವಿಷ್ಕಾರವಾಗಿಯೂ ಪರೋಲ್ ಎಂಬುದು ಅಂತಸ್ಥ ಸಾಮರ್ಥ್ಯವಾಗಿಯೂ ಬಿಂಬಿತವಾಗಿದೆ. ಅಲ್ಲದೆ ಲಾಂಗ್ ವ್ಯಕ್ತಿಗತವಾದುದು ಆದರೆ ಪರೋಲ್ ನುಡಿ ಸಮುದಾಯಕ್ಕೆ ಸಮಾನವಾದುದು. ಈ ಚಿಂತನೆಯು ಸಾಂಪ್ರದಾಯಿಕ ವೈಯಾಕರಣಿಗಳು ಮಂಡಿಸುತ್ತಿದ್ದ ಸೂತ್ರ ಮತ್ತು ಉದಾಹರಣೆಗಳ ಮಾದರಿಗಿಂತ ಭಿನ್ನವಾದುದು. ಸಾಂಪ್ರದಾಯಿಕ ಮಾದರಿಯು ಅಸಂಖ್ಯ ಉದಾಹರಣೆಗಳಿಂದ ಅವುಗಳ ಹಿಂದಿರುವ ಸಾಮಾನ್ಯ ಚೌಕಟ್ಟನ್ನು ಕಂಡುಹಿಡಿಯುವ ಗಣಿತದ ತರ್ಕವನ್ನು ಬಳಸುತ್ತದೆ. ಆದರೆ ನುಡಿಯ ವಿಶ್ಲೇಷಣೆಯಲ್ಲಿ ಈ ಮಾದರಿಯನ್ನು ಬಳಸಬಹುದೇ ಹೊರತು ನುಡಿಕಸುವನ್ನು ವಿವರಿಸಲು ಈ ಮಾದರಿಯಿಂದ ನೆರವು ದೊರೆಯುವುದಿಲ್ಲ.

ಪ್ರಾಗ್ ಪ್ರಸ್ಥಾನ ನಿರೂಪಿಸಿದ ನುಡಿಯ ಒಳರಚನೆ ಮತ್ತು ಹೊರರಚನೆ ಎಂಬ ಪರಿಕಲ್ಪನೆಗಳನ್ನು ಒಪ್ಪಿದಲ್ಲಿ ಕೆಲವು ಸಮಸ್ಯೆಗಳ ಪರಿಹಾರ ಕಾಣತೊಡಗುತ್ತದೆ. ನುಡಿಯನ್ನು ಬಳಸುವವರು ಅಸೀಮ ಸಂಖ್ಯೆಯ ರಚನೆಗಳನ್ನು ಉತ್ಪಾದಿಸಲು ನೆರವಾಗುವ ಒಳರಚನೆಯೊಂದು ಅವರಲ್ಲಿ ಅಂತಸ್ಥವಾಗಿರಬೇಕು ಎಂದು ತಿಳಿಯುವುದು ಸಾಧುವಾದುದು. ಚಾಮ್‌ಸ್ಕಿಯವರು ಮಾರಿಸ್ ಹಾಲ್ ಎಂಬುವವರೊಡನೆ ಜೊತೆಗೂಡಿ 1968ರಲ್ಲಿ ಇಂಗ್ಲಿಶ್ ನುಡಿಯ ಉಲಿಗಳ ಒಳ ರಚನೆಯನ್ನು ವಿವರಿಸಿದ್ದಾರೆ. ಅಲ್ಲಿ ಅನುಸರಿಸಿದ ಮಾದರಿಯನ್ನು ಕನ್ನಡದ ಸಂದರ್ಭದಲ್ಲಿ ಅರಿತುಕೊಳ್ಳಲು ಪ್ರಯತ್ನಿಸೋಣ.

ಕನ್ನಡದ ಸಾಂಪ್ರದಾಯಕ ವ್ಯಾಕರಣಗಳು ಚತುರ್ಥಿ ವಿಭಕ್ತಿಯಲ್ಲಿ ಮೂರು ಪ್ರತ್ಯಯಗಳಿವೆ ಎಂದು ವಿವರಿಸುತ್ತವೆ. **ಗೆ, ಇಗೆ** ಮತ್ತು **ಕ್ಕೆ** ಎಂಬ ಈ ಮೂರು ಪ್ರತ್ಯಯಗಳನ್ನು ನಮೂದಿಸಿವೆ. ನಡುಗನ್ನಡದಲ್ಲಿ **ಕೆ** ಮತ್ತು **ಗೆ** ಎಂಬ ಎರಡು ಪ್ರತ್ಯಯಗಳನ್ನು ಗುರುತಿಸುವುದುಂಟು ಈ ಕೆಳಗಿನ ಉದಾಹರಣೆಗಳನ್ನು ನೋಡೋಣ.

ಬರಹ ಕನ್ನಡ_

(1) ಮನೆಗೆ – ಮನೆ + ಗೆ

(2) ಕಾಡಿಗೆ – ಕಾಡು + ಇಗೆ

(3) ಗಿಡಕ್ಕೆ – ಗಿಡ + ಕ್ಕೆ

ನಡುಗನ್ನಡ_

(1) ಚಕೋರಂಗೆ – ಚಕೋರ + ಗೆ

(2) ಅಂಬುಜಕೆ – ಅಂಬುಜ + ಕೆ

ಮೊದಲು ಬರಹಗನ್ನಡದ ಉದಾಗಳನ್ನು ನೋಡೋಣ. ವ್ಯಾಕರಣಗಳು ಮೂರು ನಿಯಮಗಳನ್ನು ನಿರೂಪಿಸುತ್ತವೆ. (1) ನಾಮಪದವು ಎಕಾರಾಂತ ಇಲ್ಲವೆ

ಇಕಾರಂತವಾಗಿದ್ದರೆ **ಗೆ** ಪ್ರತ್ಯಯ ಸೇರುತ್ತದೆ. (2) ನಾಮಪದವು **ಉಕಾರಂತವಾಗಿದ್ದರೆ ಇಗೆ** ಪ್ರತ್ಯಯವು ಸೇರುತ್ತದೆ (3) ನಾಮಪದವು **ಅಕಾರಾಂತವಾಗಿದ್ದರೆ ಕ್ಕೆ** ಪ್ರತ್ಯಯವು ಸೇರುತ್ತದೆ. ಈ ವಿವರಣೆಯನ್ನು ಒಪ್ಪಿದರೆ ಈ ಮೂರು ನಿಯಮಗಳನ್ನು ಕನ್ನಡ ಮಾತಾಡುವವರು ತಿಳಿದಿರಬೇಕು. ಆದರೆ ನುಡಿಯಲ್ಲಿ ಒಳ ಮತ್ತು ಹೊರಪದರುಗಳು ಇರುತ್ತವೆಂದು ಒಪ್ಪುವುದಾದರೆ ಈ ವಿವರಣೆಯ ಅಗತ್ಯ ಕಂಡುಬರುವುದಿಲ್ಲ. ಏಕೆಂಬುದನ್ನು ನೋಡೋಣ. ಕನ್ನಡದಲ್ಲಿ **ಉಕಾರ**ದಿಂದ ಕೊನೆಗೊಳ್ಳುವ ನಾಮಪದದಲ್ಲಿ ಎರಡು ಬಗೆಗಳಿವೆ. ಒಂದು ಬಗೆಯ ನಾಮಪದದಲ್ಲಿ ಉಕಾರವು ನಾಮ ಪ್ರಕೃತಿಯ ಭಾಗವೇ ಆಗಿರುತ್ತದೆ. **ಹಸು, ಕರು ಮಗು** ಮುಂತಾದವು ಈ ಗುಂಪಿನ ನಾಮಪದಗಳು ಇನ್ನೊಂದು ಗುಂಪಿನ ನಾಮಪದಗಳಲ್ಲಿ **ಉಕಾರ**ವು ಅವುಗಳ ಭಾಗವಾಗಿರುವುದಿಲ್ಲ. ಬಿಡಿಯಾಗಿ ಹೇಳುವಾಗ ಕೊನೆಯಲ್ಲಿ **ಉಕಾರ**ವು ಬಂದು ಸೇರುತ್ತದೆ. ಅಂದರೆ ಆ ನಾಮಪದಗಳು ತಡೆ ಉಲಿಗಳಿಂದ ಕೊನೆಗೊಳ್ಳುತ್ತಿರುತ್ತವೆ. **ಕಾಲು, ಕಣ್ಣು, ಕೋಲು, ಸಾಲು** ಮುಂತಾದವು ಈ ಬಗೆಯವು. ಚತುರ್ಥಿ ವಿಭಕ್ತಿಗೆ ಸಂಬಂಧಿಸಿದಂತೆ ವ್ಯಾಕರಣಗಳು ಹೇಳುವ ಎರಡನೆಯ ನಿಯಮವು (ಅಂದರೆ **ಇಗೆ** ಪ್ರತ್ಯಯ ಸೇರುವ ನಿಯಮ) ನಾಮಪದಗಳ ಎರಡನೆಯ ಗುಂಪಿಗೆ ಮಾತ್ರ ಅನ್ವಯವಾಗುತ್ತದೆ. ನಾವು ಗುರುತಿಸಿದ ಮೊದಲ ಗುಂಪಿನ ನಾಮಪದಗಳಿಗೆ ಇಗೆ ಪ್ರತ್ಯಯವು ಬರಹಗನ್ನಡದಲ್ಲಿ ಸೇರಿದರೂ **ವ** ಕಾರ ಆದೇಶ ಆಗುತ್ತದೆ. **ಮಗುವಿಗೆ, ಹಸುವಿಗೆ ಕರುವಿಗೆ** ಆಗುತ್ತದೆಯೇ ಹೊರತು **ಉಕಾರ** ಲೋಪಗೊಂಡು **ಮಗಿಗೆ, ಹಸಿಗೆ, ಕರಿಗೆ** ಎಂದಾಗುವುದಿಲ್ಲ. ಈ ವ್ಯತ್ಯಾಸವನ್ನು ನಿಯಮಗಳಲ್ಲಿ ಅಳವಡಿಸಿದರೆ ಇನ್ನೊಂದು ಹೊಸ ನಿಯಮ ಅಗತ್ಯವಾಗುತ್ತದೆ. ಬದಲಿಗೆ ನುಡಿಯ ಒಳ ಪದರದಲ್ಲಿ **ಕಾಲ್, ಕಣ್, ಕೋಲೆ, ಮಣ್** ಮುಂತಾದವು ತಡೆಯುಲಿಗಳಿಂದ ಕೊನೆಗೊಳ್ಳುವ ರೂಪದಲ್ಲೇ ಇರುತ್ತವೆಂದು ಒಪ್ಪಿದರೆ ಆಗ **ಗೆ** ಎಂಬ ಒಂದೇ ಪ್ರತ್ಯಯ ಇಕಾರಾಂತ ಮತ್ತು **ಉಕಾರಂತ** ನಾಮಪದಗಳಿಗೆ ಮತ್ತು ತಡೆಯುಲಿಗಳಿಂದ ಕೊನೆಗೊಳ್ಳುವ ನಾಮಪದಗಳಿಗೆ ಸೇರುತ್ತವೆಂದು ಹೇಳಿದರೆ ಸಾಕಾಗುತ್ತದೆ. ಈಗಿರುವಂತೆ **ಕಾಡು, ಮಣ್ಣು, ಕಾಳು** ಮುಂತಾದ ನಾಮಪದಗಳಲ್ಲಿ **ಉಕಾರ**ವು ಲೋಪಗೊಳ್ಳುವ ಇನ್ನೊಂದು ನಿಯಮವನ್ನು ಹೇಳಬೇಕಾಗಿಲ್ಲ. ಹಾಗೆ ನೋಡಿದರೆ ಆಡುಗನ್ನಡದಲ್ಲಿ ಕೊನೆಯ ತಡೆಯುಲಿಗೆ ನೇರವಾಗಿ **ಗೆ** ಸೇರುವುದನ್ನು ಕಾಣುತ್ತೇವೆ.

ನಡುಗನ್ನಡದ ಉದಾಹರಣೆಗಳಿಗೆ ಬರೋಣ **ಚಕೋರ** ಮತ್ತು **ಅಂಬುಜ** ಎರಡೂ **ಆಕಾರಂತ** ಪದಗಳೇ **ಮರಕ್ಕೆ** ಎಂಬ ಇಂದಿನ ಬರಹಗನ್ನಡದ ರೂಪವನ್ನು ಗಮನಿಸಿದರೆ **ಅಂಬುಜಕ್ಕೆ** ಮತ್ತು **ಚಕೋರಕ್ಕೆ** ಎಂಬ ರೂಪಗಳನ್ನು ನಿರೀಕ್ಷಿಸುತ್ತೇವೆ. ಹಾಗಿದ್ದಲ್ಲಿ **ಚಕೋರಂಗೆ** ಮತ್ತು **ಅಂಬುಜಕೆ** ಎಂಬ ಎರಡು ಬೇರೆ ಬೇರೆ ರೂಪಗಳನ್ನು ಹೇಗೆ ವಿವರಿಸುವುದು? ನಡುಗನ್ನಡವು ಅಕಾರದಿಂದ ಕೊನೆಗೊಳ್ಳುವ ನಾಮಪದಗಳಲ್ಲಿ ಎರಡು ಬೇರೆ ಬೇರೆ ಗುಂಪುಗಳನ್ನು ಮಾಡಿಕೊಂಡಿದೆ ಎಂದು ಹೇಳಬೇಕಾಗುತ್ತದೆ. ಮಹತ್ ವರ್ಗದ ನಾಮಪದಗಳು ಮತ್ತು ಅಮಹತ್ ವರ್ಗದ ನಾಮಪದಗಳು ಎಂದು ಈ ಗುಂಪುಗಳನ್ನು ಗುರುತಿಸಬೇಕಾಗುತ್ತದೆ. ಮಹತ್ ವರ್ಗದ **ಅಕಾರಾಂತ** ನಾಮಪದಗಳ ಕೊನೆಯಲ್ಲಿ ಪುರುಷವಾಚಿಯಾದನ್ ಪ್ರತ್ಯಯವು ಸೇರ್ಪಡೆಯಾಗಿರುತ್ತದೆ.

ಈ ಕಾರಣದಿಂದಲೇ ಚತುರ್ಥಿ ವಿಭಕ್ತಿ ಪ್ರತ್ಯಯವಾದ **ಗೆ** ಸೇರ್ಪಡೆಯಾಗುವಾಗ ಅನುನಾಸಿಕ ಧ್ವನಿ ಹೆಚ್ಚುವರಿಯಾಗಿ ಕಾಣುತ್ತದೆ. **ಚಕೋರಂಗೆ** ಎಂಬ ರೂಪವನ್ನು ವ್ಯಾಕರಣಗಳು ವಿವರಿಸುವಾಗ ಆದೇಶ ಸಂಧಿಯ ಮೊರೆ ಹೋಗುತ್ತದೆ. ಆದರೆ ಆದೇಶಗೊಳ್ಳುವ ಉಲಿಯು ಅನುನಾಸಿಕವೇ ಏಕೆ ಆಗಿರಬೇಕು ಎಂಬುದನ್ನು ಈ ವ್ಯಾಕರಣಗಳು ವಿವರಿಸುವುದಿಲ್ಲ. ನುಡಿಯ ಒಳಪದರದಲ್ಲಿ **ಚಕೋರನ್** (ಪುರುಷ ವಾಚಿಯಾದ **ನ್** ಸೇರಿದ ರೂಪ) ಇರುವುದರಿಂದಲೇ ಸಹಜವಾಗಿಯೇ **ಚಕೋರಂಗೆ** ಎಂಬ ರೂಪ ದೊರೆಯುತ್ತದೆ. **ಅಂಬುಜ** ಎಂಬ ಅಮಹತ್ ವರ್ಗದ **ಆಕಾರಾಂತ** ನಾಮಪದದ ಕೊನೆಗೆ ಯಾವ ಪ್ರತ್ಯಯವೂ ಇಲ್ಲವಾದ್ದರಿಂದ **ಅಂಬುಜಕೆ** ಎಂಬ ರೂಪ ಸಿದ್ಧಗೊಳ್ಳುತ್ತದೆ.

ಈ ಮೇಲಿನ ವಿವರಣೆಯನ್ನು ಗಮನಿಸಿದರೆ ಹೊರ ಪದರದ ರೂಪಗಳ ನೆರವಿನಿಂದ ವಿವರಣೆ ನೀಡ ಹೊರಟರೆ ನಿಯಮಗಳ ಸಂಖ್ಯೆ ಹೆಚ್ಚಾಗುತ್ತದೆ. ಅಲ್ಲದೆ ನಿಯಮಗಳು ಕೇವಲ ಬಣ್ಣಿಸುತ್ತವೆಯೇ ಹೊರತು ಕಾರಣಗಳನ್ನು ವಿವರಿಸುವುದಿಲ್ಲ. ಅಂದರೆ **ಕಾಡಿಗೆ ಊರಿಗೆ** ಎಂಬ ರೂಪಗಳಲ್ಲಿ **ಉಕಾರವು** ಲೋಪ ಏಕಾಯಿತು, **ಮಗುವಿಗೆ, ಕರುವಿಗೆ** ಎಂಬ ರೂಪಗಳಲ್ಲಿ **ಉಕಾರವು** ಏಕೆ ಲೋಪಗೊಳ್ಳಲಿಲ್ಲ, ಮತ್ತು **ವ** ಕಾರವೇ ಏಕೆ ಆದೇಶವಾಯಿತು, ಹಾಗೂ **ಚಕೋರಂಗೆ** ಎಂಬ ರೂಪದಲ್ಲಿ ಅನುನಾಸಿಕ ಉಲಿಯ ಆದೇಶ ಆದುದೇಕೆ ಎಂಬಿತ್ಯಾದಿ ಸಂಗತಿಗಳನ್ನು ಬಿಡಿಸುವ ಗೋಜಿಗೆ ಹೋಗುವುದಿಲ್ಲ. ಬದಲಿಗೆ ನುಡಿಯ ಒಳಪದರವೊಂದನ್ನು ಒಪ್ಪಿದರೆ ನಿಯಮಗಳ ಸಂಖ್ಯೆ ಕಡಿಮೆಯಾಗುತ್ತದೆ. ಮತ್ತು ಉಲಿ ಬದಲಾವಣೆಗಳಿಗೆ ತಕ್ಕ ವಿವರಣೆ ರಚನೆಯಲ್ಲೇ ದೊರೆಯುತ್ತದೆ. ನುಡಿಕಸುವು ನೆಲೆಗೊಳ್ಳುವಾಗ ನಿಯಮಗಳ ಸಂಖ್ಯೆ ಅತಿ ಕಡಿಮೆ ಇರಬೇಕೆಂಬುದು ಒಂದು ಒಪ್ಪಿತ ಸಂಗತಿ. ಹಾಗಾಗಿ ಅದರ ಇರುವಿಕೆಯನ್ನು ಒಪ್ಪುವುದು ಅಗತ್ಯವಾಗುತ್ತದೆ.

ತಮಿಳು ನುಡಿಯಿಂದ ಒಂದು ಉದಾಹರಣೆಯನ್ನು ನೋಡೋಣ. ತಮಿಳಿನ ಉಲಿರಚನೆಯನ್ನು ವಿವರಿಸುವಾಗ ಆ ನುಡಿಯಲ್ಲಿ **ತ್** ಮತ್ತು **ದ್** ಎಂಬ ಎರಡು ಉಲಿಗಳು ಇವೆ ಎಂದು ಗುರುತಿಸುತ್ತಾರೆ. ಈ ಉಲಿಗಳು ಬಳಕೆಯಾಗುವ ಬಗೆಯನ್ನು ಈ ಕೆಳಗಿನ ನಿಯಮಗಳ ಮೂಲಕ ಬಣ್ಣಿಸಲಾಗುತ್ತದೆ.

(1) **ತ್** ಉಲಿಯು ಪದದ ಮೊದಲಲ್ಲಿ ಬರುತ್ತದೆ.

(2) **ದ್** ಉಲಿಯು ಎರಡು ತೆರೆದ ಉಲಿಗಳ ನಡುವೆ ಬರುತ್ತದೆ.

(3) **ತ್** ಉಲಿಯು ಪದದ ನಡುವೆ ಸಜಾತೀಯ ದ್ವಿತ್ವವಾಗಿ ಬಳಕೆಯಾಗುತ್ತದೆ.

(4) ಪದದ ನಡುವೆ ಅನುನಾಸಿಕ ಉಲಿಯ ಬಳಿಕ **ದ್** ಉಲಿ ಬರುತ್ತದೆ.

ತಲೈ, ಬದಲ್, ಅತ್ತೈ, ಕಂದನ್ – ಇವು ಮೇಲಿನ ನಾಲ್ಕು ನಿಯಮಗಳಿಗೆ ಉದಾಹರಣೆಗಳು ತಮಿಳಿನ ಹೊರ ಪದರವನ್ನು ಆಧರಿಸಿ ನಿರೂಪಿಸಿರುವ ಈ ನಿಯಮಗಳಲ್ಲಿ ಯಾವ ಕೊರೆಯೂ ಇಲ್ಲ. ಆದರೆ ಮಗುವಿನಲ್ಲಿ ತಮಿಳು ನುಡಿಕಸುವು ನೆಲೆಗೊಳ್ಳುವಾಗ ಈ ನಾಲ್ಕೂ ನಿಯಮಗಳನ್ನು ಅದು ಪಡೆದುಕೊಳ್ಳುತ್ತದೆಂದು

ಹೇಳುವುದು ಸರಿಯಾಗದು. ನುಡಿಗೆ ಒಳಪದರ ಇರುವುದೆಂದು ಹೇಳುವ ವಾದವನ್ನು ಒಪ್ಪಿದರೆ ಈ ನಿಯಮಗಳು ಸರಳಗೊಳ್ಳುತ್ತವೆ. ಒಳಪದರದಲ್ಲಿ ತಮಿಳು **ತ್** ಮತ್ತು **ದ್** ಎಂಬ ಎರಡು ಬೇರೆ ಬೇರೆ ಉಲಿಗಳು ಇರುವುದೇ ಇಲ್ಲ. ಈ ಮಾತನ್ನು ಅರಿತುಕೊಳ್ಳುವ ಮೊದಲು **ತ್** ಮತ್ತು **ದ್** ಉಲಿಗಳಿಗೆ ಇರುವ ವ್ಯತ್ಯಾಸವೇನೆಂಬುದನ್ನು ನೋಡೋಣ. **ತ್** ಎಂಬುದು ವರ್ತ್ಸ್ಯ ಸ್ಪರ್ಶ ಅಘೋಷ ಉಲಿ. **ದ್** ಎಂಬುದು ವರ್ತ್ಸ್ಯ ಸ್ಪರ್ಶ ಘೋಷ ಉಲಿ. ಅಂದರೆ ಈ ಎರಡೂ ಉಲಿಗಳಿಗೆ ಇರುವ ವ್ಯತ್ಯಾಸ ಕನಿಷ್ಠ ಪ್ರಮಾಣದ್ದು. ಘೋಷ / ಅಘೋಷ ಎಂಬ ವ್ಯತ್ಯಾಸವನ್ನು ಬಿಟ್ಟರೆ ಅವೆರಡರ ನಡುವೆ ಯಾವ ವ್ಯತ್ಯಾಸವೂ ಇರುವುದಿಲ್ಲ. ಒಳಪದರದ ಚಹರೆಯನ್ನು ಒಪ್ಪಿದರೆ ಆಗ ತಮಿಳು ನುಡಿಯಲ್ಲಿ ಒಂದೇ ಒಂದು ಉಲಿಯು ಈ ಎರಡೂ ಉಲಿಗಳ ಬದಲಿಗೆ ಇರುತ್ತದೆ. ಅದು **ತ್** ಇಲ್ಲವೇ **ದ್** ಅಲ್ಲ. ಇವೆರಡರ ಸಮಾನ ಲಕ್ಷಣಗಳು ಇರುವ ಆದರೆ ಘೋಷ ಇಲ್ಲವೇ ಅಘೋಷ ಎಂಬ ಲಕ್ಷಣ **ನಿರ್ಧಾರಗೊಳ್ಳದ** ಉಲಿ ಒಳಪದರದಲ್ಲಿ ಇರುತ್ತದೆ. ಹೊರಪದರಕ್ಕೆ ಬರುವಾಗ ಘೋಷತ್ವ ಇಲ್ಲವೇ ಅಘೋಷತ್ವ ಎಂಬ ಲಕ್ಷಣವನ್ನು ಖಚಿತ ಪಡಿಸಬೇಕಾದ ನಿಯಮವೊಂದು ಮಾತ್ರ ಅಗತ್ಯವಾಗುತ್ತದೆ. ಇದಕ್ಕನುಗುಣವಾಗಿ ಉಚ್ಚಾರವು **ತ್** ಇಲ್ಲವೇ **ದ್** ಎಂದು ನಿರ್ಧಾರಗೊಳ್ಳುತ್ತದೆ. ಈ ವಿವರಣೆಗೆ ಸಮ್ಮತವಾಗುವ ಮತ್ತೊಂದು ಪುರಾವೆಯನ್ನು ನೋಡಬಹುದು. ತಮಿಳು ನುಡಿಯಾಡುವವರು ಬೇರೊಂದು ನುಡಿಯನ್ನು ಕೇಳಿಸಿಕೊಳ್ಳುತ್ತಿದ್ದಾರೆ ಎಂದುಕೊಳ್ಳೋಣ. ಆ ನುಡಿಯಲ್ಲಿ **ತ್** ಮತ್ತು **ದ್** ಎಂಬ ಎರಡು ಉಲಿಗಳು ಬೇರೆ ಬೇರೆ ಆಗಿರುತ್ತದೆ ಎಂದುಕೊಳ್ಳಿ ಅಂದರೆ ತಮಿಳಿಗೆ ಹೊಂದುವ ಮೇಲೆ ಹೇಳಿದ ನಿಯಮ ಆ ನುಡಿಯಲ್ಲಿ ಇರುವುದಿಲ್ಲ. ಆ ನುಡಿಯನ್ನು ಕೇಳುವ ತಮಿಳು ನುಡಿ ಬಲ್ಲವರು **ತ್** ಮತ್ತು **ದ್** ಗಳನ್ನು ತಮ್ಮ ನುಡಿಯ ಒಳಪದರದ ನಿಯಮಕ್ಕೆ ಅನುಗುಣವಾಗಿಯೇ ಕೇಳಿಸಿಕೊಳ್ಳುತ್ತಾರೆ. ತಾವು ಕೇಳುತ್ತಿರುವ ನುಡಿಯಲ್ಲಿ ಪದದ ಮೊದಲಲ್ಲಿ **ದ್** ಉಲಿ ಇರುವ ಪದವೊಂದನ್ನು ಕೇಳಿಸಿಕೊಂಡರೆ ಅವರು ಅದು **ತ್** ಉಲಿಯಿಂದಲೇ ಮೊದಲಾಗುವ ಪದವೆಂದು ಗ್ರಹಿಸುತ್ತಾರೆ.

ಈ ಮೇಲಿನ ಉದಾಹರಣೆಗಳು ನುಡಿಯಲ್ಲಿ ಒಳಪದರವೊಂದು ಇರುತ್ತದೆಂಬುದನ್ನು ಸ್ಪಷ್ಟ ಪಡಿಸುತ್ತಾರೆ. ನಮ್ಮ ಮುಂದಿನ ಪ್ರಶ್ನೆ ಎಂದರೆ ಮಗುವಿನಲ್ಲಿ ಒಂದು ನುಡಿಯ ಒಳಪದರ ನೆಲೆಗೊಳ್ಳುವುದಾದರೂ ಹೇಗೆ ಎಂಬುದು. ಮೊದಲಿಗೆ ಈ ಹಿಂದೆ ಹೇಳಿದ ಸಂಗತಿಯನ್ನು ನೆನೆಯೋಣ. ಎಲ್ಲ ಮನುಷ್ಯರಿಗೂ ಸಮಾನವಾದ ಅಂಶಗಳನ್ನು ಗುರುತಿಸುವುದಾದರೆ ದೈಹಿಕ ರಚನೆಯ ಆಚೆಗೆ ಇರುವ ನುಡಿಕಸುವು ಎಂಬುದು ಕೂಡಾ ಆ ಸಮಾನ ಅಂಶಗಳಲ್ಲಿ ಒಂದು. ಈ ನುಡಿಕಸುವು ಎಲ್ಲ ಮಾನವರ ಸಹಜ ಅವಸ್ಥೆಯಲ್ಲಿ ಇದ್ದೇ ಇರುವ ಕಸುವಾಗಿದೆ. ಇದು ಮೆದುಳಿನಲ್ಲಿ ನೆಲೆಗೊಂಡಿರುತ್ತದೆ ಮತ್ತು ವಂಶವಾಹಿಗಳ ಮೂಲಕ ರಚನೆಗೊಂಡಿರುತ್ತದೆ ಎಂಬುದನ್ನು ಗಮನಿಸಿದ್ದೇವೆ. ಈ ನುಡಿಕಸುವು ಹುಟ್ಟಿನಿಂದಲೇ ಮೆದುಳಿನಲ್ಲಿ ಇರುತ್ತದೆಂದಾದರೆ ಅದು ಯಾವುದೋ ಒಂದು ಗೊತ್ತಾದ ಮಾನವ ಸಹಜ ನುಡಿಯಾಗಿ ನೆಲೆಗೊಳ್ಳುವ ಪ್ರಕ್ರಿಯೆಯನ್ನು ವಿವರಿಸಬೇಕಾಗಿದೆ.

ಮಗುವು ನುಡಿಯನ್ನು ಗಳಿಸಿಕೊಳ್ಳುವಾಗ ಹೊರಗಿನ ಜಗತ್ತಿನಿಂದ ದೊರೆಯುವ ಮಾಹಿತಿ ತೀರಾ ಕನಿಷ್ಠ ಪ್ರಮಾಣದಲ್ಲಿರುತ್ತದೆ ಎಂಬುದನ್ನು ಪ್ಲೇಟೋನ ಸಮಸ್ಯೆ ಅಧ್ಯಾಯದಲ್ಲಿ ನೋಡಿದ್ದೇವೆ. ಹಾಗಾಗಿ 'ಹೊರಜಗತ್ತಿನಿಂದ ದೊರಕುವ ಮಾಹಿತಿಯಿಂದಲೇ ಯಾವುದೇ ನುಡಿಯನ್ನು ಮಗುವು ಗಳಿಸಿಕೊಳ್ಳಬಹುದು ಎಂದು ವಾದಿಸುವುದು ಆಗದ ಮಾತು. ಹಾಗಿದ್ದಲ್ಲಿ ಚಾಮ್‌ಸ್ಕಿ ಮುಂದಿಡುತ್ತಿರುವ ಆಧಾರ ಕಲ್ಪನೆಯ ಭಾಗವಾಗಿರುವ ಅಂತಸ್ಥ ನುಡಿಕಸುವಿನಲ್ಲಿ ಯಾವುದೇ ಒಂದು ಇಲ್ಲವೇ ಎಲ್ಲ ಮಾನವ ಸಹಜ ನುಡಿಗಳ ಹಲವು ರಾಚನಿಕ ಅಂಶಗಳು ಮೊದಲೇ ಇದ್ದಿರಬೇಕು. ಈ ಪೂರ್ವ ನಿಶ್ಚಿತ ರಾಚನಿಕ ಅಂಶಗಳನ್ನು ವೈಶ್ವಿಕ ವ್ಯಾಕರಣ ಎಂದು ಕರೆಯಲಾಗಿದೆ. ವೈಶ್ವಿಕ ವ್ಯಾಕರಣವು ಜಗತ್ತಿನ ಎಲ್ಲ ಮಾನವ ನುಡಿಗಳು ರಾಚನಿಕವಾಗಿ ಹೊಂದಿರುವ ಸಮಾನ ನೆಲೆಗಳನ್ನು ತನ್ನಲ್ಲಿ ಅಂತರ್ಗತ ಮಾಡಿಕೊಂಡಿರುತ್ತದೆ. ಈ ಸಮಾನ ನೆಲೆಗಳನ್ನು ಮಗುವು ನುಡಿಯನ್ನು ಗಳಿಸಿಕೊಳ್ಳುವಾಗ ತಾನು ಮತ್ತೊಮ್ಮೆ 'ಕಲಿ'ಯ ಬೇಕಾಗಿರುವುದಿಲ್ಲ.

ವೈಶ್ವಿಕ ವ್ಯಾಕರಣವನ್ನು ಎಲ್ಲ ಮಾನವ ನುಡಿಗಳ ನಿಯಮಗಳ ಮೊತ್ತವೆಂದು ತಪ್ಪಾಗಿ ಗ್ರಹಿಸಬಾರದು. ಮಾನವ ನುಡಿಗಳು ಎಂಥ ರಚನೆಗಳನ್ನು ಹೊಂದಿರುತ್ತವೆ ಇಲ್ಲವೇ ಹೊಂದಿರಲಾರವು ಎಂಬುದನ್ನು ಸೂಚಿಸುವ ನಿಯಮಾವಳಿಗಳು ಮಾತ್ರ ಈ ವೈಶ್ವಿಕ ವ್ಯಾಕರಣದ ಭಾಗವಾಗಿರುತ್ತದೆ.

ಚಾಂಸ್ಕಿ ನಿರೂಪಿಸಿದ ವೈಶ್ವಿಕ ವ್ಯಾಕರಣ ತತ್ವದ ಮೊದಲ ನಿಯಮ ಹೀಗಿದೆ. ಜಗತ್ತಿನ ಯಾವುದೇ ಮಾನವ ನುಡಿಯ ವ್ಯಾಕರಣ ಪ್ರಕ್ರಿಯೆಯಾಗಿ ಅದು ರಾಚನಿಕ ನಿಯಮಗಳಿಗೆ ಬದ್ಧವಾಗಿರುತ್ತದೆ.

ಈ ನಿಯಮವನ್ನು ಈಗ ಅರಿಯಲು ಯತ್ನಿಸೋಣ. ಇಂಗ್ಲಿಷ್ ನುಡಿಯ ಈ ಕೆಳಗಿನ ವ್ಯಾಕರಣ ಪ್ರಕ್ರಿಯೆಯನ್ನು ಗಮನಿಸಿ. ಹೌದು ಅಥವಾ ಇಲ್ಲ ಎಂಬ ಉತ್ತರವನ್ನು ಬಯಸುವ ಪ್ರಶ್ನೆಗಳು ಇಂಗ್ಲಿಷ್ ನುಡಿಯಲ್ಲಿ ಹೇಗೆ ರೂಪುಗೊಳ್ಳುತ್ತದೆ?

(1) Memories will fade away.

(2) Will memories fade away?

ಎರಡನೆಯ ವಾಕ್ಯಕ್ಕೆ ಹೌದು ಅಥವಾ ಇಲ್ಲ ಎಂಬ ಉತ್ತರ ಸಾಧ್ಯ. ಈ ಎರಡನೆಯ ವಾಕ್ಯ ರೂಪುಗೊಂಡದ್ದು ಹೇಗೆ? ಇದಕ್ಕೊಂದು ನಿಯಮವನ್ನು ಹೇಳೋಣ.

ನಿಯಮ – ಮೂಲ ವಾಕ್ಯದ ಎರಡನೆಯ ಪದವನ್ನು ವಾಕ್ಯದ ಮೊದಲ ಪದವನ್ನಾಗಿ ಮಾಡಬೇಕು. ಆದರೆ ಈ ನಿಯಮ ಉಪಯುಕ್ತವಲ್ಲ. ಏಕೆಂದರೆ ಕೆಳಗಿನ ವಾಕ್ಯವನ್ನು ನೋಡಿ.

Memories of happiness will fade away.

ಮೇಲೆ ಹೇಳಿದ ನಿಯಮವನ್ನು ಬಳಸಿದರೆ ಕೆಳಗಿನ ವಾಕ್ಯ ದೊರೆಯುತ್ತದೆ.

Of memories happiness will fade away?

ಇದು ಇಂಗ್ಲಿಶ್‌ನ ಸರಿಯಾದ ವಾಕ್ಯವಲ್ಲ. ಹಾಗಾಗಿ ನಾವು ರೂಪಿಸಿದ ನಿಯಮವೇ ತಪ್ಪಿದೆ. ಆ ನಿಯಮದ ದೋಷವೆಂದರೆ ಅದು ವಾಕ್ಯವನ್ನು ಕೇವಲ ಪದಗಳ ಸರಣಿ ಎಂದು ತಿಳಿಯುತ್ತದೆ. ವಾಕ್ಯದ ಒಳಗೇ ಇರುವ ರಚನೆಯ ಸ್ತರಗಳನ್ನು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ. ಆದ್ದರಿಂದ ನಾವು ರೂಪಿಸುವ ನಿಯಮಗಳು ವಾಕ್ಯದ ರಚನೆಗೂ ಬದ್ಧವಾಗಿರಬೇಕು. ಈಗ ವಾಕ್ಯದ ಒಳರಚನೆ ಎಂದರೇನು ಎಂಬುದನ್ನು ತಿಳಿಯೋಣ. ವಾಕ್ಯದಲ್ಲಿ ಪದಗಳು ಇರುತ್ತವೆ. ಆದರೆ ಅವು ಕೇವಲ ಪದಗಳಾಗಿ ಮಾತ್ರ ಕಾರ್ಯ ನಿರ್ವಹಿಸುತ್ತಿರುವುದಿಲ್ಲ. ಅವು ಗೊತ್ತಾದ ವ್ಯಾಕರಣ ವರ್ಗಕ್ಕೆ ಸೇರಿದ್ದು ಆ ವರ್ಗದ ಚಹರೆಗಳನ್ನು ಪ್ರದರ್ಶಿಸುತ್ತಿರುತ್ತವೆ. ನಾಮಪದ, ಕ್ರಿಯಾಪದ, ವಿಶೇಷಣ ಇವೆಲ್ಲವೂ ಇಂತಹ ಕೆಲವು ವ್ಯಾಕರಣ ವರ್ಗಗಳು ವ್ಯಾಕರಣ ಪ್ರಕ್ರಿಯೆಗಳು ಪದಗಳ ವ್ಯಾಕರಣ ವರ್ಗಗಳನ್ನು ಅವಲಂಬಿಸಿ ನಿರೂಪಿತವಾಗುತ್ತವೆ.

ನಾವೀಗ ಹಿಂದೆ ಚರ್ಚಿಸಿದ ವಾಕ್ಯಗಳಿಗೆ ಹಿಂದಿರುಗೋಣ.

(1) Memories will fade away.

ಈ ವಾಕ್ಯದಲ್ಲಿ Memories ಎಂಬುದು ನಾಮಪದ fade ಎಂಬುದು ಕ್ರಿಯಾಪದ. away ಎಂಬುದು ಕ್ರಿಯಾವಿಶೇಷಣ. will ಒಂದು ಸಹಾಯಕ ಕ್ರಿಯಾಪದ. ಈ ವಾಕ್ಯವನ್ನು ಆಧರಿಸಿ ರೂಪಿಸಿದ ಪ್ರಶ್ನೆ ಹೀಗಿದೆ.

Will memories fade away?

ಅಂದರೆ ವಾಕ್ಯದಲ್ಲಿ ಇರುವ ನಾಮಪದ ಮತ್ತು ಸಹಾಯಕ ಕ್ರಿಯಾಪದಗಳು ಸ್ಥಾನ ಪಲ್ಲಟಗೊಂಡಿವೆ. ಸಹಾಯಕ ಕ್ರಿಯಾಪದವು ತಾನಿರುವ ಜಾಗ ಬದಲಿಸಿ ನಾಮಪದಕ್ಕಿಂತ ಮೊದಲು ಬಂದಿದೆ. ಈ ಪ್ರಕ್ರಿಯೆಯನ್ನು ವಿವರಿಸಲು ಕೆಳಗಿನ ನಿಯಮವನ್ನು ರೂಪಿಸೋಣ. ನಿಯಮ: ವಾಕ್ಯದಲ್ಲಿರುವ ಸಹಾಯಕ ಕ್ರಿಯಾಪದವನ್ನು ಅದಕ್ಕಿಂತ ಮೊದಲು ಬರುವ ನಾಮಪದದ ಹಿಂದಕ್ಕೆ ಸರಿಸುವುದು. ಈಗ ಇನ್ನೊಂದು ವಾಕ್ಯವನ್ನು ನೋಡೋಣ.

Memories of happiness will fade away.

ಈ ವಾಕ್ಯದಲ್ಲಿ ಹಿಂದಿನ ವಾಕ್ಯದ ಎಲ್ಲ ವ್ಯಾಕರಣ ವರ್ಗಗಳನ್ನು ಪ್ರತಿನಿಧಿಸುವ ಪದಗಳಿವೆ. will, fade ಮತ್ತು away ಎಂಬ ಪದಗಳು ಇದ್ದಂತೆಯೇ ಇವೆ. ಆದರೆ Memories ಎಂಬ ನಾಮಪದದ ಬದಲು Memories of happiness ಎಂಬ ಪದಕಂತೆ ಇದೆ. ವಾಸ್ತವವಾಗಿ ಈ ಪದಕಂತೆಯು ವಾಕ್ಯದಲ್ಲಿ ನಾಮಪದದ ಕೆಲಸವನ್ನೇ ಮಾಡುತ್ತಿದೆ. ಹಾಗಾಗಿ ಇದನ್ನು ನಾಮಪದಕಂತೆ ಎಂದು ಗುರುತಿಸುತ್ತೇವೆ. ಈ ವಾಕ್ಯವನ್ನು ನಾವು ರೂಪಿಸಿದ ನಿಯಮಕ್ಕೆ ತಕ್ಕಂತೆ ಮಾರ್ಪಾಟು ಮಾಡಿದರೆ ಈ ಮುಂದಿನ ವಾಕ್ಯ ದೊರಕುತ್ತದೆ.

Will memories of happiness fade away?

ಇದು ಇಂಗ್ಲಿಶ್‌ನಲ್ಲಿ ಸರಿ ರಚನೆಯ ವಾಕ್ಯ. ನಾವು ನಿರೂಪಿಸಿದ ನಿಯಮದಲ್ಲಿ ನಾಮಪದ ಎಂದಿರುವಲ್ಲಿ ನಾಮಪದ ಕಂತೆ ಎಂದು ಬದಲಿಸಿದರೆ ಸಾಕಾಗುತ್ತದೆ. ಇದರಿಂದ ವ್ಯಾಕರಣ ಪ್ರಕ್ರಿಯೆಗಳು ವಾಕ್ಯದಲ್ಲಿ ಯಾವ ಪದಗಳಿವೆ. ಅವುಗಳ ತಿರುಳೇನು ಎಂಬುದನ್ನು ಅವಲಂಬಿಸುವುದಿಲ್ಲ ಬದಲಿಗೆ ಆ ವಾಕ್ಯದ ರಾಚನಿಕ ನೆಲೆಯನ್ನು ಅವಲಂಬಿಸುತ್ತವೆ ಎನ್ನುವುದು ಸ್ಪಷ್ಟವಾಯಿತು. ಈಗ ಈ ನಿಯಮವು ಸರಿಯೋ ಇಲ್ಲವೋ ಎಂಬುದನ್ನು ಪರಿಕ್ಷಿಸೋಣ.

ಕೆಳಗಿನ ವಾಕ್ಯಗಳನ್ನು ನೋಡಿ.

(1a) Down will come taxes.

(1b) will down come taxes?

(2a) John raceives a prize.

(2b) Received John a prize?

1b ಮತ್ತು 2b ಗಳು ಇಂಗ್ಲಿಶ್‌ನಲ್ಲಿ ಒಪ್ಪಿತವಾಗುವ ವಾಕ್ಯಗಳಲ್ಲ ಏಕೆಂಬುದನ್ನು ನೋಡೋಣ. ನಾವು ನಿರೂಪಿಸಿದ ನಿಯಮದ ಪ್ರಕಾರ ಸಹಾಯಕ ಕ್ರಿಯಾಪದವು ನಾಮಪದ/ನಾಮಪದಕಂತೆಯೊಡನೆ ಜಾಗ ಬದಲಿಸಿಕೊಳ್ಳಬೇಕು. 1aನಲ್ಲಿ will ಎಂಬ ಸಹಾಯಕ ಕ್ರಿಯಾಪದ ಇದೆ. ಆದರೆ down ಎಂಬುದು ನಾಮದಪವಲ್ಲ. 2aನಲ್ಲಿ John ಎಂಬುದು ನಾಮಪದ ನಿಜ. ಆದರೆ received ಎಂಬುದು ಸಹಾಯಕ ಕ್ರಿಯಾಪದವಲ್ಲ. ಆದ್ದರಿಂದ ನಾವು ನಿರೂಪಿಸಿದ ನಿಯಮ ಇಲ್ಲಿ ಪರೋಕ್ಷವಾಗಿ ನಿಜವೆಂದು ಸಾಬೀತಾಗಿದೆ.

ಈ ಮೇಲಿನ ಉದಾಗಳನ್ನು ಚರ್ಚಿಸಿದ್ದು ನುಡಿಕಸುವಿನ ಅಂಗವಾಗಿರುವ ವೈಶ್ಚಿಕ ವ್ಯಾಕರಣದ ಸ್ವರೂಪವನ್ನು ತಿಳಿಯಬೇಕೆಂದು ತಾನೇ? ವೈಶ್ಚಿಕ ವ್ಯಾಕರಣವು ವಾಕ್ಯಗಳ ರಚನೆಯನ್ನು ಅವಲಂಬಿಸಿದ ನಯಮಗಳನ್ನು ಒಳಗೊಂಡಿರುತ್ತದೆ. ಇದು ಅದರ ಪ್ರಧಾನ ಲಕ್ಷಣ ಇಂತಹ ಹಲವು ನಿಯಮಗಳು ವೈಶ್ಚಿಕ ವ್ಯಾಕರಣದಲ್ಲಿ ಅಂತಸ್ಥವಾಗಿರುತ್ತದೆ. ಈ ನಿಯಮಗಳು ಯಾವುದೇ ಒಂದು ಮಾನವ ಸಹಜ ನುಡಿಗೆ ಮೀಸಲಾದುದಲ್ಲ. ಈ ಅಂಶವನ್ನು ನೆನಪಿಡಬೇಕು, ಈ ನಿಯಮಗಳು ಹುಟ್ಟುವಾಗಲೇ ಮಗುವಿನ ಮೆದುಳಿನಲ್ಲಿ ಬೇರೂರಿರುತ್ತವೆ. ಆದ್ದರಿಂದ ಅಷ್ಟರ ಮಟ್ಟಿಗೆ ಪ್ರತಿಯೊಂದು ನುಡಿಗೂ ಹೊಂದುವ ಈ ನಿಯಮಗಳನ್ನು ಮಗುವು ಹೊಸದಾಗಿ ಗಳಿಸಬೇಕಾಗಿರುವುದಿಲ್ಲ.

ನುಡಿಗಳಿಕೆಯನ್ನು ಸಾಂಪ್ರದಾಯಕವಾಗಿ ವಿವರಿಸುವವರು ಪದಕೋಶ ಕಲಿಕೆ ಮತ್ತು ರಚನೆಯ ಕಲಿಕೆ ಎಂಬ ಎರಡು ನೆಲೆಗಳನ್ನು ಗುರುತಿಸುತ್ತಾರೆ. ನಮ್ಮ ಸದ್ಯದ ಚರ್ಚೆಯಲ್ಲಿ ಪದಕೋಶ ಕಲಿಕೆಯ ಸ್ವರೂಪವನ್ನು ಗಮನಿಸುತ್ತಿಲ್ಲ. ರಚನೆಯ ಕಲಿಕೆಯ ಸ್ವರೂಪವನ್ನು ಮಾತ್ರ ಗಮನಿಸುತ್ತೇವೆ. ಮಗುವು ಒಂದು ನುಡಿಯನ್ನು ತನ್ನದನ್ನಾಗಿ

ನೆಲೆಗೊಳಿಸಿಕೊಳ್ಳುವಾಗ ಆ ನುಡಿಯಲ್ಲಿರುವ ವೈಶ್ವಿಕ ವ್ಯಾಕರಣದ ನಿಯಮಗಳನ್ನು ಹೊಸದಾಗಿ ಗಳಿಸಿಕೊಳ್ಳಬೇಕಾಗಿಲ್ಲ. ತನ್ನ ಪರಿಸರದ ನುಡಿಗೆ ವಿಶಿಷ್ಟವಾದ ರಾಚನಿಕ ನಿಯಮಗಳನ್ನು ಮಾತ್ರ ಅರಿತರೆ ಸಾಕಾಗುತ್ತದೆ. ಪ್ರತಿಯೊಂದು ನುಡಿಗೂ ವಿಶಿಷ್ಟವಾದ ನಿಯಮಗಳನ್ನು ವಿಕಲ್ಪಗಳು ಎಂದು ಗುರುತಿಸಿದ್ದಾರೆ. ಸಾವಿರಾರು ಮಾನವ ಸಹಜ ನುಡಿಗಳಿದ್ದರೂ ಅಷ್ಟೇ ಪ್ರಮಾಣದ ವಿಕಲ್ಪಗಳಿಲ್ಲ ಎನ್ನುವುದು ಗಮನಿಸಬೇಕಾದ ಸಂಗತಿ. ಮಾನವ ಸಹಜ ನುಡಿಗಳ ವಿಕಲ್ಪಗಳು ಕೆಲವು ನಿರ್ದಿಷ್ಟ ಮಾದರಿಗಳಲ್ಲಿ ಅಳವಡುತ್ತವೆ. ಪ್ರತಿಯೊಂದು ನುಡಿಗೂ ಹೊಂದುವ ಒಂದು ಮಾದರಿ (ಆಯ್ದ ವಿಕಲ್ಪಗಳು) ಇರುತ್ತದೆ. ನುಡಿಕಸುವನ್ನು ಗಳಿಸಿಕೊಳ್ಳುತ್ತಿರುವ ಮಗುವು ಈ ಮಾದರಿಗಳಲ್ಲಿ ತಕ್ಕುದಾದುದನ್ನು ಆಯ್ದುಕೊಳ್ಳುತ್ತಿರುತ್ತದೆ. ಇದರಿಂದ ನುಡಿಗಳಿಕೆಯ ಪ್ರಕ್ರಿಯೆಯು ಮತ್ತಷ್ಟು ಸುರಳೀತವಾಗುತ್ತದೆ.

ಕೆ.ವಿ.ಎನ್ ಅವರ ವಿಮರ್ಶಾ ಲೇಖನಗಳನ್ನು ಓದುವಾಗ ಸಂವಾದದ ಧಾಟಿ ಕಾಣಿಸುತ್ತದೆ. ಸಾಹಿತ್ಯ ವಿಮರ್ಶೆಯು ಸಾಂಸ್ಕೃತಿಕ ಅಭಿವ್ಯಕ್ತಿಯೆಂದು ಅವರು ನಂಬಿದ್ದಾರೆ. ಈ ಹೊತ್ತಿಗೆ ಲೇಖಕನ ಅಸ್ತಿತ್ವ ಬರಿಯ ಸಾಹಿತ್ಯಕವಾಗಿ ಉಳಿದಿಲ್ಲ. ಮತ್ತು ಯಾವುದೇ ಲೇಖಕರು ಸುರಕ್ಷಿತ ವಲಯದಲ್ಲಿ ಉಳಿದಿಲ್ಲ. ಈಗ ನಮ್ಮ ಎದುರು ಇರುವ ಪ್ರಶ್ನೆ ಇದು ಕಪ್ಪು-ಬಿಳಿ, ಗಂಡು-ಹೆಣ್ಣು ಎಂಬಂಥ ಅನನ್ಯತೆಯಲ್ಲಿಯೂ ಇಲ್ಲ. ಆದುದರಿಂದಲೇ ಕೆ.ವಿ.ಎನ್ ಎತ್ತುವ ಸಾಹಿತ್ಯ ಸಂಸ್ಕೃತಿಯ ಪ್ರಶ್ನೆಗಳಿಗೆ ಒಂದು ಮಾತಿನ ಉತ್ತರ ಕೊಡುವುದು ಕಷ್ಟವೆಂದು ತೋರುತ್ತದೆ. ಅವರ ಅನೇಕ ಲೇಖನಗಳು ಕೃತಿಗಳ ಮೌಲ್ಯ ಮಾಪನ ಮಾಡುವುದೇ ಇಲ್ಲ. ಕೃತಿಯ ತಿರುಳೇನು ಎಂಬುದನ್ನು ಮಾತ್ರ ಅವರು ಗ್ರಹಿಸುತ್ತಾರೆ. ನಾವು ಅನೇಕರು ತಿಳಿದಿರುವಂತೆ ಸಾಹಿತ್ಯ ವಿಮರ್ಶಕರೆಂದರೆ ಕೃತಿಯನ್ನು ಮೌಲ್ಯಮಾಪನ ಮಾಡುವ ನ್ಯಾಯಾಧೀಶರು ಎಂಬುದನ್ನು ಕೆ.ವಿ.ಎನ್‌ಗೆ ಅನ್ವಯಿಸುವಂತಿಲ್ಲ. ಹೀಗಾಗಿ ಕೆ.ವಿ.ಎನ್‌ಗೆ ಒಂದು ಲೇಬಲ್ ಹಚ್ಚಿ ಕೂರಿಸಲು ಬರುವುದಿಲ್ಲ.

ಡಾ. ಕೆ. ಕೇಶವಶರ್ಮ

184

ಪ್ರಗತಿ ಗ್ರಾಫಿಕ್ಸ್ ಬೆಂಗಳೂರು

PRAGATI GRAPHICS

ISBN 9381441960

Rs.300/-